ಮೈಸೂರು ವಿಧಾನಸಭೆಯ ನಡವಳಿಕೆಗಳು
MYSORE LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ನಾಲ್ಕನೆಯ ವಿಧಾನಸಭೆಯ ಏಳನೆಯ ಅಧಿವೇಶನ
SEVENTH SESSION OF THE FOURTH LEGISLATIVE ASSEMBLY

೩೦ನೇ ಶುಕ್ರವಾರ, ಜನವರಿ ೧೯೭೦ [ಮಾಘ ೧೦, ೧೮೯೧ (ಶಕ)]
FRIDAY, 30TH JANUARY 1970 [MAGHA 10, 1891 (SAKA)]

ಸಂಪುಟ ೨೩—ಕ್ರಮಾಂಕ ೧

Vol. XXIII—No. 1

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು
Mysore Legislature Secretariat, Bangalore

ಬೆಲೆ: ೨೫ ಪೈಸೆ
Price: 25 Paise

4877

CONTENTS

PAGES

1 (i) Starred Questions and Answers ... 1—26

(ii) Questions for Answers on the day (but not taken up) 26—28

2 Recognition of the Congress (R) as an Opposition Party in the Mysore Legislative Assembly ... 29—43

3 Notices of adjournment Motions

(i) *re*: Eviction of Cerain Families in Gangavati Post ... 43

(ii) *re*: Information of Arrest by the Magistrates to the Speaker—(Postponed) ... 43—44

(iii) *re*: Lathi Charge on Students in Bidar—(Consent withheld) ... 44—45

(iv) *re*: General Strike and Hartal in Belgaum—(Consent withheld) ... 45—46

4 Calling Attention to matters of Urgent Public Importance

(i) *re*: Police firing in Chickmagalur during December 1969 ... 46—47

(ii) *re*: the Fire accident at Udeva Village, Tarikere Taluk on 17th January 1970 .. 48

(iii) *re*: Collection of penal Interest on Loans from ryots 48—49

5 Mysore Excise (Amendment) Bill, 1970—(Passed as amended) ... 49—75

6 Mysore Land Reforms (Amendment) Bill, 1970—(Motion to Consider)—(Debate not concluded) ... 75—83

7 Half-an-hour Discussion arising out of replies to Starred Question No. 63 *re*: Fertilisers in State Marketing Society ... 84—96

Karnataka State [illegible]
[illegible] 4877
Date.......................................

ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Friday, 30th January 1970.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Allotment of Districts to Ministers to Supervise Relief Works

20. **SRI H. SIDDAVEERAPPA** (Harihar).—

Will the Chief Minister be pleased to state :—

(*a*) whether each of the Ministers (including Minister of State and Deputy Ministers) was allotted a District for the ostensible object of effectively supervising the distress relief work after the last session of the Assembly, if so, who are they and to what districts they were assigned ;

(*b*) the number of days each Minister has spent during the months of September, October and November 1968 and the amount each Minister has spent during these months in the areas to which he was assigned ;

(*c*) the total amount spent in each district for the purpose by way of T. A. and D.A ;

(*d*) the number of days Sri H. C. Boraiah, Deputy Minister camped in Chitraduga District in the months of September, October and November 1968, and the work that he attended to during this period ?

Sri VEERENDRA PATIL (Chief Minister).—

(*a*) Yes, excepting a few Ministers others were allotted certain areas to supervise the distress relief work after the last session of the Assembly in September 1968. The areas assigned are noted in Annexure I appended.

(*b*) Annexure II appended.

(*c*) Annexure III appended.

(*d*)

September 1968	...	6 days
October 1968	...	7 days
November 1968	...	2 days

He visited scarcity relief areas and inspected relief works in Chitradurga District.

ANNEXURE I

		Areas allotted
1	Minister for Finance ...	North Kanara District
2	Minister for Public Works ...	Hassan District
3	Minister for Development and Co-operation.	Bijapur District
4	Minister for Law, Labour and Parliamentary Affairs.	Mysore District
5	Minister for Education ...	Mandya District
6	Minister for Industries, Information and Publicity.	Chickmagalur District
7	Minister for Social Welfare ...	Belgaum District
8	Minister for Health ...	Bangalore Urban
9	Minister of State for Forests ...	Bangalore Rural
10	Minister of State for Fisheries and Ports...	Kolar District
11	Minister of State for Food and Civil Supplies.	South Kanara District
12	Deputy Minister for Transport ...	Chitradurga District
13	Deputy Minister for Industries ...	Coorg District
14	Deputy Minister for Agriculture ...	Belgaum District
15	Deputy Minister for Co-operation ...	Chitradurga District
16	Deputy Minister for Major Irrigation and Electricity.	Shimoga District
17	Deputy Minister for Social Welfare ...	Raichur District
18	Deputy Minister for Health ...	Shimoga District
19	Deputy Minister for Education ...	Bellary District
20	Deputy Minister for Public Works ...	Dharwar District
21	Deputy Minister for Sericulture ...	Tumkur District
22	Deputy Minister for Home ...	Gulbarga and Bidar Districts.

ANNEXURE II

		September 68 No. of days	October 68 No. of days	November 68 No. of days
1	Minister for Finance	...	10	...
2	Minister for Public Works	5	7	4
3	Minister for Development and Co-operation.	2	5	5
4	Minister for Law, Labour and Parliamentary Affairs.	1	5	3
5	Minister for Education	3 days in all		
6	Minister for Industries, Information	2	...	...
7	Minister for Social Welfare	9	12	6
8	Minister for Health	Information is not received		
9	Minister of State for Forests	4	3	...
10	Minister of State for Fisheries and Ports	10	6	6
11	Minister of State for Food and Civil Supplies.	... (No scarcity areas in South Kanara District)	...	...
12	Deputy Minister for Transport	6	7	2
13	Deputy Minister for Industries	Did not tour Coorg District during these months in connection with the supervision of relief work.		
14	Deputy Minister for Agriculture	5	12	7
15	Deputy Minister for Co-operation	5	10	2
16	Deputy Minister for Major Irrigation	3	3	7
17	Deputy Minister for Social Welfare	7	8	15
18	Deputy Minister for Health	...	11	7
19	Deputy Minister for Education	5	8	3
20	Deputy Minister for Public Works	11	15	17
21	Deputy Minister for Sericulture	5	7	2
22	Deputy Minister for Home 1 Bidar District	2	8	1
	2 Gulbarga District ...		4	3

(SRI VEERENDRA PATIL)

ANNEXURE III

		T.A.	D.A.
1	Minister for Finance ...	160-00	200-00
2	Minister for Public Works ...	1,168-80	360-00
3	Minister for Development & Co-operation ...	2,297-19	660-00
4	Minister for Law, Labour and P.A. ...	689-60	180-00
5	Minister for Education ...	Rs. 98 for T.A. & D.A.	
6	Minister for Industries ...	Rs. 240 for T.A. & D.A.	
7	Minister for Social Welfare ...	2,977-20	540-00
8	Minister for Health ...	Information not received	
9	Minister of State for Forests ...	368-80	60-00
10	Minister of State for Fisheries and Ports ...	Information not received	
11	Minister of State for Food and Civil Supplies	Nil	
12	Deputy Minister for Transport ...	624-88	300-00
13	Deputy Minister for Industries ...	Nil	
14	Deputy Minister for Agriculture ...	1,347-20	240-00
15	Deputy Minister for Co-operation ...	200-00	290-00
16	Deputy Minister for Major Irrigation and Electricity ...	877-20	260-00
17	Deputy Minister for Social Welfare ...	3,271-60	700-00
18	Deputy Minister for Health ...	1,857-00	540-00
19	Deputy Minister for Education ...	1,588-00	320-00
20	Deputy Minister for Public Works ...	3,832-40	860-00
21	Deputy Minister for Sericulture ...	842-40	280-00
22	Deputy Minister for Home (1) Bidar Dist. ...	316-00	140-00
	(2) Gulbarga Dist.	313-60	140-00

Sri H. SIDDAVEERAPPA.—May I know whether throughout the State the Taluk Board elections were held in the same period in which these Hon. Ministers are said to have toured the State ?

† **Sri VEERENDRA PATIL.**—I do not remember when the Taluk Board elections were held. I think such a question was put in the last session of the Assembly. I have stated then that the Ministers have toured in their private capacity and they have not claimed any T.A.

Sri H. SIDDAVEERAPPA.—Is it not a fact that on the ostensible plea of supervising the district relief works, these Ministers had scattered throughout the State during that period and that lakhs of rupees were spent for giving amani, and without doing anything they have spent under the guise of spending money for relief works ?

---

†Indicates that the remarks or speeches have not been revised by the member concerned.

Sri VEERENDRA PATIL.—Hon. Member is aware that so far as relief works are concerned, there are set procedures ; there are committees at Taluk level ; there are officers to supervise and whatever work was approved by the Taluk Committees was taken up. These accounts were audited and there is no scope for mis-appropriation.

ಶ್ರೀ ಎನ್. ಜಿ. ಹಾಲಪ್ಪ.—ಇರಿಗೇಷನ್ ಡೆಪ್ಯುಟಿ ಮಿನಿಸ್ಟರು ಮತ್ತು ಹೆಲ್ತ್ ಡೆಪ್ಯುಟಿ ಮಿನಿಸ್ಟರು ಶಿಕಾರಿಪುರದಲ್ಲಿ ಕೆಲಸ ಸೂಪರ್‌ವಿಜನ್ ಮಾಡುವುದಕ್ಕೆ ಬಂದಿದ್ದರು. ಅವರು ಅಲ್ಲಿ ಕೆರೆ ಕಟ್ಟಿಸುವುದಕ್ಕಾಗಿ ಮತ್ತು ರಸ್ತೆಗಳನ್ನು ಮಾಡಿಸುವುದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದಾರೆ. ಆದರೆ ಒಂದು ಕೆರೆಯೂ ಅಲ್ಲಿ ಕಟ್ಟಲಿಲ್ಲ, ರಸ್ತೆಗಳ ಕೆಲಸವೂ ಆಗಲಿಲ್ಲ. ಇದನ್ನು ರುಜುವಾತು ಮಾಡುವುದಕ್ಕೆ ತಯಾರಿದ್ದೇನೆ. ಈ ಮಂತ್ರಿಗಳು ಬಂದು ಅಲ್ಲಿ ಏನು ಸೂಪರ್‌ವಿಜನ್ ಮಾಡಿದಹಾಗೆ ಆಯಿತು? ಅವರು ಅಲ್ಲಿ ಚುನಾವಣೆಗಾಗಿ ಬಂದಿರುವುದನ್ನು ನಾವು ರುಜುವಾತು ಮಾಡಿದರೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ವೀರೇಂದ್ರ ಪಾಟೀಲ್.—ರಿಲೀಫ್ ವರ್ಕ್ಸ್ ಬೇರೆ ನಾರ್ಮಲ್ ಪಿ. ಡಬ್ಲ್ಯು. ಡಿ. ವರ್ಕ್ಸ್ ಬೇರೆ. ರಿಲೀಫ್ ವರ್ಕ್ಸ್ ಬಗ್ಗೆ ತಾಲ್ಲೂಕು ರಿಲೀಫ್ ಕಮಿಟಿ ಇರುತ್ತದೆ. ಇದರಲ್ಲಿ ಜನರ ಪ್ರತಿನಿಧಿಗಳು ಇರುತ್ತಾರೆ, ಅಧಿಕಾರಿಗಳೂ ಇರುತ್ತಾರೆ. ಅವರು ಕಾರ್ಯಕ್ರಮ ಹಾಕಿಕೊಂಡು ಅದರಂತೆ ಕೆಲಸ ಮಾಡುತ್ತಾರೆ. ಮಂತ್ರಿಗಳು ಅಲ್ಲಿಗೆ ಹೋದಾಗ ಅವರಿಗೆ ಯಾರಾದರೂ ರೆಪ್ರಸೆಂಟೇಷನ್ ಕೊಟ್ಟಿದ್ದರೆ ಅದನ್ನು ಅಧಿಕಾರಿಗಳಿಗೆ ತಿಳಿಸುತ್ತಾರೆ. ಆ ರೀತಿ ರಿಲೀಫ್ ವರ್ಕ್ಸ್ ಆಗುವುದು ಬೇರೆ. ಒಂದುವೇಳೆ ನಾರ್ಮಲ್ ಪಿ. ಡಬ್ಲ್ಯು. ಡಿ. ವರ್ಕ್ಸ್ ಮಾಡುವುದಕ್ಕೆ ಸಾಧ್ಯವಿದ್ದರೆ ಅದನ್ನು ಮಾಡಿರಬಹುದು.

ಶ್ರೀ ಜೆ. ಆರ್. ಹಾಲಸ್ವಾಮಿ.—ಮಂತ್ರಿಗಳು ಮತ್ತು ಉಪ ಮಂತ್ರಿಗಳು ವರ್ಕ್ಸ್ ಸೂಪರ್‌ವಿಜನ್ ಹೋಗಿದ್ದಾರೆ ಎಂದು ಹೇಳಿದಿರಿ. ಎಷ್ಟು ಕೆಲಸಕಾರ್ಯಗಳು ನಡೆದಿವೆ?

ಶ್ರೀ ವೀರೇಂದ್ರ ಪಾಟೀಲ್.—ಜಿಲ್ಲೆಯಲ್ಲಿ ಬಹಳಷ್ಟು ಪರಿಸ್ಥಿತಿ ಕೆಟ್ಟುಹೋಗಿರುವಾಗ ಒಂದು ಡಿಪಾರ್ಟ್‌ಮೆಂಟಿಗೂ ಇನ್ನೊಂದು ಡಿಪಾರ್ಟ್‌ಮೆಂಟಿಗೂ ಕೋ ಆರ್ಡಿನೇಷನ್ ಇರುವುದಿಲ್ಲ. ಅವರು ಒಂದು ಕೆಲಸ ಮಾಡುತ್ತಾರೆ. ಇವರೊಂದು ಕೆಲಸ ಮಾಡುತ್ತಾರೆ. ಎಲ್ಲಾ ಇಲಾಖೆಗಳಿಗೂ ಒಂದು ರೀತಿ ಕೋ ಆರ್ಡಿನೇಷನ್ ಬರಬೇಕು. ಸರಿಯಾಗಿ ಕೆಲಸಕಾರ್ಯಗಳು ಆಗಬೇಕು. ಎಲ್ಲೆಲ್ಲಿ ಜನರ ಕಷ್ಟ ಇದೆ ಎಂದು ತಿಳಿದುಕೊಂಡು ರಿಲೀಫ್ ವರ್ಕ್ಸ್ ಕೋ ಆರ್ಡಿನೇಟ್ ಮಾಡುವ ಉದ್ದೇಶದಿಂದ ಒಂದೊಂದು ಜಿಲ್ಲೆಗೆ ಒಬ್ಬೊಬ್ಬರು ಮಂತ್ರಿಗಳನ್ನು ಕಳುಹಿಸಿದ್ದೇವೆ.

Sri B. B. SAYANAK.—May I know during this period how many Ministers have paid surprise visits and what is the report ?

Sri VEERENDRA PATIL.—I have given details as to where the Ministers have toured and what T.A. and D.A. they have claimed.

ಶ್ರೀ ಎಸ್. ಎಸ್. ಅರಕೇರಿ.—ಬಿಜಾಪುರ ಜಿಲ್ಲೆಯಲ್ಲಿ ಪರಿಹಾರ ಕೆಲಸದ ಮೇಲ್ವಿಚಾರಣೆಯನ್ನು ಮಾಡಲು ಮಾನ್ಯ ನಾಡಗೌಡರನ್ನು ನೇಮಿಸಿದ್ದೀರಿ. ಇಂಡೀ ತಾಲ್ಲೂಕಿನಲ್ಲಿ ಕೆಲಸ ಅರ್ಧಂಬರ್ಧ ಉಳಿದಿದೆ. ಅಲ್ಲಿ ಮೇಲ್ವಿಚಾರಣೆ ಸರಿಯಾಗಿ ಮಾಡಿಲ್ಲ. ಅದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ವೀರೇಂದ್ರ ಪಾಟೀಲ್.—ಕೋ ಆರ್ಡಿನೇಟ್ ಮಾಡಬೇಕು, ಸೂಪರ್‌ವಿಜನ್ ಮಾಡಬೇಕು ಮತ್ತು ಎಲ್ಲೆಲ್ಲಿ ಏನೇನು ಕೆಲಸಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ ಎನ್ನುವುದನ್ನು ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡುವುದಕ್ಕಾಗಿ ಮಂತ್ರಿಗಳನ್ನು ಕಳುಹಿಸಲಾಯಿತು. ಒಂದು ವೇಳೆ ಕೆಲಸ ಅರ್ಧಂಬರ್ಧವಾಗಿ ಇನ್ನೂ ಉಳಿದಿದ್ದರೆ ಅದನ್ನು ಸೇಫ್ ಸ್ಟೇಜ್‌ನಲ್ಲಿ ತರುವುದಕ್ಕೆ ಏನು ಮಾಡಬೇಕು ಎಂಬುದನ್ನು ವಿಚಾರಮಾಡಬೇಕಾಗುತ್ತದೆ.

ಶ್ರೀ ಎಂ. ನಾಗಪ್ಪ.—ಮಾನ್ಯ ಸದಸ್ಯರು ಶಿಕಾರಿಪುರ ತಾಲ್ಲೂಕಿನ ಬಗ್ಗೆ ಪ್ರಶ್ನೆ ಕೇಳಿದರು ಅಲ್ಲಿ ಸುಣ್ಣದಕೊಪ್ಪ, ತಡಗಿನಹಳ್ಳಿ, ಹುಲಗಿನಕೊಪ್ಪ, ಮಾಯಿತಮ್ಮನ ಮುಳಡಿ, ಕೊರಟಗೆರೆ, ಜಂಬೂರು, ವಡ್ಡಿಗೆರೆ ಈ ಕೆರೆಗಳ ರಿಲೀಪ್ ವರ್ಕ್ಸ್ ತೆಗೆದುಕೊಂಡು ಕೆಲಸ ಆಗದೆ, ತಾಲ್ಲೂಕು ಬೋರ್ಡ್ ಅಧ್ಯಕ್ಷರು ಮತ್ತು ನಿಬರಣೆ ಮಾಡುವ ಮಾನ್ಯ ಮಂತ್ರಿಗಳು ಹಣವನ್ನು ಭಾಗ ಮಾಡಿಕೊಂಡಿದ್ದಾರೆ ಎಂದು ಲಿಖಿತ ಮೂಲಕ ನಿಮಗೆ ಬರೆದು ಕಳುಹಿಸಿದ್ದೇವೆ. ಅದರ ಬಗ್ಗೆ ಏನು

(ಶ್ರೀ ಎಂ. ನಾಗಪ್ಪ)

ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ಇಲ್ಲಿ ಕೊಟ್ಟಂಥ ಅಂಕಿ ಅಂಶಗಳ ಪ್ರಕಾರ ಡೆಪ್ಯುಟಿ ಮಿನಿಸ್ಟರ್ ಫಾರ್ ಪಬ್ಲಿಕ್ ವರ್ಕ್ಸ್ ಮತ್ತು ಡೆಪ್ಯುಟಿ ಮಿನಿಸ್ಟರ್ ಫಾರ್ ಸೋಷಿಯಲ್ ವೆಲ್‌ಫೇರ್ ಜಾಸ್ತಿ ಟಿ.ಎ. ಡಿ.ಎ. ತೆಗೆದುಕೊಂಡಿದ್ದಾರೆ. ಈ ಎರಡು ಜಿಲ್ಲೆಗೆ ಏನಾದರೂ ಹೆಚ್ಚು ಅಮೌಂಟ್ ಕೊಟ್ಟಿದ್ದೀರಾ ? ಹಾಗೆ ಹೆಚ್ಚು ಅಮೌಂಟ್ ಕೊಟ್ಟದ್ದಕ್ಕಾಗಿ ಜಾಸ್ತಿ ಸೂಪರ್‌ವಿಜನ್ ಬೇಕಾಯಿತೇ ಅಥವಾ ಅಮೌಂಟ್ ಕಡಿಮೆ ಇದ್ದರೆ ಸೂಪರ್‌ವಿಜನ್ ಜಾಸ್ತಿ ಬೇಕಾಯಿತೇ, ಏನು ಕಾರಣದಿಂದ ಈ ರೀತಿ ಮಾಡಿದರು ಎಂದು ದಯವಿಟ್ಟು ತಿಳಿಸಬೇಕು ?

ಶ್ರೀ ವೀರೇಂದ್ರ ಪಾಟೀಲ್.—ಶಿಕಾರಿಪುರ ತಾಲ್ಲೂಕಿನಲ್ಲಿ ಕೆಲಸಕಾರ್ಯಗಳಾಗಲೀ, ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಲಿ ಅಲ್ಲಿಯ ಪ್ರತಿನಿಧಿಗಳಾದ ಎಂ. ಎಲ್. ಎ. ಅವರು ಹಣ ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಹೇಳಿ ಸ್ಪೆಸಿಫಿಕ್ಕಾಗಿ ಏನಾದರೂ ಬರೆದು ನನ್ನ ಹತ್ತಿರ ಬಂದಿದ್ದರೆ ವಿಚಾರಿಸುತ್ತೇನೆ. ಈಗಾಗಲೇ ಈ ರೀತಿ ಕೆಲವು ಕಂಪ್ಲೇಂಟ್ಸ್ ಬಂದಾಗ ಅದನ್ನು ವಿಜಿಲೆನ್ಸ್ ಕಮಿಷನ್‌ಗೆ ಕಳುಹಿಸಿದ್ದೇವೆ. ಅವರು ಎನ್‌ಕ್ವೈರಿ ಮಾಡುತ್ತಾ ಇದ್ದಾರೆ. ದುರುಪಯೋಗವಾಗಿದೆ ಎಂದು ನನ್ನ ಕಡೆಗೆ ಕಳುಹಿಸಿಕೊಟ್ಟರೆ ಅದನ್ನು ಎನ್‌ಕ್ವೈರಿ ಮಾಡುತ್ತೇನೆ. ಎಲ್ಲೆಲ್ಲಿ ಸ್ಕೇರ್‌ಸಿಟಿ ಕೆಲಸಗಳು ಹೆಚ್ಚಾಗಿರುತ್ತದೆಯೋ ಅಲ್ಲಿ ಹಣ ಹೆಚ್ಚಿಗೆ ಖರ್ಚು ಆಗಬಹುದು. ಇನ್ನು ಕೆಲವು ಕಡೆ ಹಣ ಕಡಿಮೆ ಬೇಕಾಗಿರಬಹುದು. ಮಂತ್ರಿಗಳು ಪ್ರತಿನಿಧಿಗಳ ಜೊತೆಯಲ್ಲಿ ಹೋಗಬೇಕೆಂದು ನಿರ್ಣಯ ಮಾಡಿದ್ದಾರೆಯೇ ಹೊರತು ಒಬ್ಬರೇ ಸಚಿವರು ಅಥವಾ ಇಬ್ಬರೇ ಸಚಿವರು ಹೋಗಬೇಕೆಂದು ಕಟ್ಟಪ್ಪಣೆ ಮಾಡಿಲ್ಲ.

ಶ್ರೀ ಎ. ಮುನಿಯಪ್ಪ.—ಕ್ಷಾಮ ಪರಿಹಾರ ಕಮಿಟಿಯಲ್ಲಿ ಲೋಕಲ್ ಎಂ. ಎಲ್. ಎ. ಗಳು ಇರಬೇಕೆಂದು ಆರ್ಡರ್ ಮಾಡಿದ್ದೀರಿ ? ಅಂತಹ ಆಜ್ಞೆಯನ್ನು ಅನುಸರಿಸದೆ ಇದ್ದರೆ ಈ ಕಮಿಟಿಯಲ್ಲಿ ರೆಜಲ್ಯೂಷನ್ ಮಾಡಿ ಸರಕಾರದ ಗಮನಕ್ಕೆ ತರುವುದಕ್ಕೆ ಅವಕಾಶ ಇದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದ್ದು ಎಲ್ಲಿಯಾದರೂ ದುಡ್ಡಿನ ದುರುಪಯೋಗವಾಗಿದ್ದರೆ ತೀವ್ರ ಗಮನಕ್ಕೆ ತಂದರೆ ಅದನ್ನು ಎನ್‌ಕ್ವೈರಿ ಮಾಡುವ ಅವಶ್ಯಕತೆ ಕಂಡರೆ ವಿಜಿಲೆನ್ಸ್ ಕಮಿಷನ್‌ಗೆ ಕಳುಹಿಸುತ್ತೇವೆ. ಸ್ಕೇರ್‌ಸಿಟಿ ರಿಲೀಫ್ ವರ್ಕ್ಸ್ ದೊಡ್ಡ ಪ್ರಮಾಣದಲ್ಲಿ ಆಗುತ್ತಿರುವಾಗ ಹಣ ದುರುಪಯೋಗ ಆಗಬಹುದು. ಅದನ್ನು ಸರ್ಕಾರದ ಗಮನಕ್ಕೆ ತಂದರೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ವಿಚಾರವನ್ನು ಹೇಳಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತುಮಕೂರು ಡಿಸ್ಟ್ರಿಕ್ಟಿನಲ್ಲಿ ಈ ಕೆಲಸದ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಬಿ. ಡಿ. ಒ. ರವರ ಜೊತೆಯಲ್ಲಿ ವ್ಯವಹಾರ ಮಾಡಿ ಕ್ಷಾಮ ನಿವಾರಣಾ ಕಾರ್ಯ ನಡೆದಾಗ ಮಾನ್ಯ ಉಪಮಂತ್ರಿಗಳು ದುಡ್ಡನ್ನು ಸ್ವಂತಕ್ಕೆ ಉಪಯೋಗಿಸಿಕೊಂಡಿದ್ದಾರೆ, ಅವರಿಗೆ ಹಿಂದೆ ಇದ್ದ ಆಸ್ತಿಗೂ ಈಗಿರುವ ಆಸ್ತಿಗೂ ಅಜಗಜಾಂತರ ವ್ಯತ್ಯಾಸ ಇದೆ. ಇವರ ಬಗ್ಗೆ ದೂರು ಬಂದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಮತ್ತು ನಮ್ಮ ಆ ಭಾಗದ ಮಂತ್ರಿಗಳು, ಉಪಮಂತ್ರಿಗಳಲ್ಲಿ ಎಷ್ಟು ಉತ್ಸಾಹ ಇದೆ ಎಂಬುದು ನನಗೆ ಗೊತ್ತಿದೆ. ಬಿ ಡಿ ಓ ಜೊತೆಗೆ ಹೋಗಿ ಬಿ ಡಿ ಓ ಮತ್ತು ಅವರು ಕರೆತು ರಿಲೀಫ್ ಕಾಂಗಾರಿಯಲ್ಲಿ ದುಡ್ಡು ಹೊಡೆದು ಶ್ರೀಮಂತರಾಗಿದ್ದಾರೆ ಅಂತ ಅನ್ನುವ ಆಪಾದನೆ ಬರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಈ ಪರಿಹಾರ ಕಾರ್ಯಗಳ ಮೇಲ್ವಿಚಾರಣೆ ಮಾಡಿದಂತಹ ಮಂತ್ರಿಗಳು ಏನಾದರೂ ವರದಿಯನ್ನು ಒಪ್ಪಿಸಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ವರದಿ ಕೊಡಬೇಕೆಂಬ ಪ್ರಶ್ನೆ ಇರಲಿಲ್ಲ. ಸ್ಥಾನಿಕವಾಗಿ ಹೋಗಿ ಅಧಿಕಾರಿಗಳ ಜೊತೆಯಲ್ಲಿ ಕರೆತು ಹೋದರೆ ಕೆಲಸ ಕಾರ್ಯಗಳು ಆಗುತ್ತವೆ, ರೈತರ ಕಷ್ಟ ಏನಿದೆ ಎಂಬುದು ಸ್ಥಾನಿಕವಾಗಿ ಗೊತ್ತಾಗುತ್ತದೆ ಎಂಬ ದೃಷ್ಟಿಯಿಂದ ಈ ರೀತಿ ಕೆಲಸ ಮಾಡಿದ್ದಾರೆ.

ಶ್ರೀ ಸಂಗನಗೌಡ.—ಆಯಾಯಾ ಮಂತ್ರಿಗಳು ತಮ್ಮ ತಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡುವ ಕಾಲಕ್ಕೆ ಸ್ಥಳೀಕ ರಿಲೀಫ್ ಕಮಿಟಿ ಸದಸ್ಯರಾಗಲಿ ಅಥವಾ ಸ್ಥಳೀಕ ಬ್ಲಾಕ್ ಡೆವಲಪ್‌ಮೆಂಟ್ ಕಮಿಟಿ ಸದಸ್ಯರಾಗಲಿ ಅವರೊಂದಿಗೆ ಸಮ್ಮಿಳನವಾಗಿ ಎಷ್ಟು ಹಣ ಬೇಕು, ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ತಿಳಿಸಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲೂ ಇದೆಲ್ಲಾ ವಿಚಾರ ಮಾಡಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಕೆಲವು ಮಾನ್ಯ ಮಂತ್ರಿಗಳು ಹೋಗಿದ್ದಾಗ ಇಲ್ಲಿ ಕೆಲಸ ಹೆಚ್ಚಾಗಿ ತೆಗೆದುಕೊಳ್ಳಬೇಕು, ಇಲ್ಲಿ ಹೆಚ್ಚು ಹಣ ಒದಗಿಸಬೇಕೆಂದು ಹೇಳಿದ್ದಾರೆ. ನನಗೂ ಬರೆದಿದ್ದರು ಮತ್ತು ಪ್ರತ್ಯಕ್ಷವಾಗಿಯೂ ಹೇಳಿದ್ದಾರೆ. ಎಷ್ಟುಮಟ್ಟಿಗೆ ಸಾಧ್ಯವಾಗುತ್ತದೆ ಅಷ್ಟು ಮಾಡಿದ್ದೇವೆ.

ಶ್ರೀ ಲೋಕಯ್ಯ ನಾಯಕ್.—ನಮ್ಮ ಕೊಡಗು ಜಿಲ್ಲೆಗೆ ಅಪ್ಪಣ್ಣನವರನ್ನು ರಿಲೀಫ್ ಕಮಿಟಿ ಬಗ್ಗೆ ನೇಮಕ ಮಾಡಿದ್ದಿರಿ. ಅವರು ರಿಲೀಫ್ ವರ್ಕ್ಸ್ ಬಗ್ಗೆ ಟೂರ್ ಮಾಡಲಿಲ್ಲ. ರಿಲೀಫ್ ವರ್ಕ್ಸ್ ಬಗ್ಗೆ ನೇಮಕ ಮಾಡಿದ ಮೇಲೆ ಬೇರೆ ಕೆಲಸದ ಬಗ್ಗೆ ಟೂರ್ ಮಾಡಲು ಕಾರಣವೇನು?

ಶ್ರೀ ವೀರೇಂದ್ರ ಪಾಟೀಲ್.—ಇದೆಲ್ಲಾ ಹೇಳಿದ್ದೇನೆ. ಕೊಡಗು ಮತ್ತು ಸೌತ್ ಕೆನರಾದಲ್ಲಿ ಈ ಪ್ರಾಬ್ಲಂ ಇರಲಿಲ್ಲ, ಉಳಿಕೆ ಕಡೆ ಈ ಪ್ರಾಬ್ಲಂ ಇತ್ತು. ಈ ಕೆಲಸಕ್ಕಾಗಿ ಹೋಗಿದ್ದಾಗ ಮತ್ತೊಂದು ಯಾವುದಾದರೂ ಕೆಲಸಕ್ಕೆ ಹೋಗಿದ್ದರೂ ಹೋಗಿರಬಹುದು.

ಶ್ರೀ ಎಸ್. ಕೆ. ಅಮೀನ್.—ಕ್ಷಾಮ ಪೀಡಿತ ಪ್ರದೇಶಗಳಿಗೆ ಮಂತ್ರಿಗಳು ಪ್ರವಾಸ ಮಾಡಿದ್ದರಿಂದ ಜನರಿಗೆ ವಿಶ್ವಾಸ, ಭರವಸೆ ಹೆಚ್ಚು ಮಾಡಲಿಕ್ಕೆ ಅನುಕೂಲವಾದದ್ದು ಸರಿಯೇ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಪ್ರತಿಯೊಂದು ಕಡೆಯಲ್ಲೂ ತಾವು ಸಹಾಯ ಸಹಕಾರ ಕೊಟ್ಟಿರುವುದರಿಂದ ಬಹಳಮಟ್ಟಿಗೆ ಕೆಲಸ ಕಾರ್ಯಗಳು ಆಗಿವೆ ಅನ್ನುವಂತಹದು ಅಷ್ಟೇ ಅಲ್ಲ, ಕೇಂದ್ರ ಸರ್ಕಾರದವರಿಗೂ ಕೂಡ ಎಷ್ಟು ಹಣ ಬೇಕು, ಎಷ್ಟು ಹಣ ಖರ್ಚು ಮಾಡಿದ್ದೇವೆ ಎಂಬುದನ್ನು ತಿಳಿಸಿ, ಅವರಿಗೆ ಬಹಳ ಸಮಾಧಾನ ಬಂದಿರುವುದರಿಂದ ಹೆಚ್ಚಿನ ಮಟ್ಟಿಗೆ ಕೇಂದ್ರದಿಂದ ಸಹಾಯ ಪಡೆಯುವುದಕ್ಕೆ ಸಾಧ್ಯವಾಯಿತು.

(*Sri A. P. Appanna, Deputy Minister for Industries rose from his seat*)

Sri V. N. PATIL.—Sir, during Question Hour, can a Deputy Minister rise to put a question?

Mr. SPEAKER.—He is supplementing the reply given by the Chief Minister.

Sri A. P. APPANNA (Deputy Minister).—Sir, I want to make it clear that during that period I have not officially toured Coorg. But I have toured Coorg privately in connection with taluk board elections.

ಶ್ರೀ ಎಂ. ಮಲ್ಲಪ್ಪ.—ಚಿಕ್ಕಮಗಳೂರು ಜಿಲ್ಲೆಗೆ ಸರ್ಕಾರದವರು ಒದಗಿಸಿರತಕ್ಕ ಹಣದಲ್ಲಿ ಮಂಜೂರಾದ ಕೆಲಸಗಳಿಗೆ ಹಣ ಖರ್ಚಾಗದೆ ದುರುಪಯೋಗವಾಗಿರುವುದರ ಬಗ್ಗೆ ಸರ್ಕಾರದವರಿಗೆ ದೂರುಗಳನ್ನು ಕೊಟ್ಟಿದ್ದು, ಪರಿಶೀಲನೆಯಾಗಿ ತೀರ್ಪು ಆಗಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ದೂರುಗಳು ಎಲ್ಲಿಂದ ಬಂದಿವೆ ಅಂತ ಗೊತ್ತಿಲ್ಲ, ಕೆಲವು ಕಡೆಯಿಂದ ಬಂದಿವೆ, ಅವು ವಿಚಾರಣೆಯಾಗುತ್ತಾ ಇವೆ.

(*Sri G. Duggappa rose to put a question*)

Mr. SPEAKER.—Hon. Member Sri Duggappa cannot ask questions from another seat.

Sri G. DUGGAPPA.—No definite seat has been allotted to me although the requisition was submitted to the Chair eight days ago. The Chair has not come to a decision yet. No seat has been allotted to our party in spite of the fact that we have given our requisition 8 days ago.

Mr. SPEAKER.—Next question.

Mal-Maruthi Extension Scheme in Belgaum Municipality

55. **Sri B. B. SAYANAK** (Belgaum).—

Will the Minister of State for Municipal Administration be pleased to state :—

(*a*) whether it is a fact that there is a Mal-Maruthi Extension Scheme in Belgaum Municipality ;

(*b*) if so, the extent of the area and the number of plots formed under the above scheme ;

(*c*) when those plots were disposed off ;

(*d*) whether these plots were disposed off after the election and before the taking over of the charge of the Municipality by the elected local body ;

(*e*) whether those plots have been disposed off by the Administrator and the Advisory body ;

(*f*) the names of the members of the Advisory Body ;

(*g*) whether it is a fact that the Administrator has no right to dispose off the plots as the term of office of the Administrator was not extended ?

Sri B. M. PATIL (Minister of State for Municipal Administration).–

(*a*) Yes.

(*b*) Actual area covered by the Mal-Maruthi Extension is about 811 Acres 20 Guntas and the number of plots formed therein is 2,847.

(*c*) Between 17th September 1969 and 8th December 1969, 180 sites were disposed of (Handed over possesssion).

(*d*) No.

(*e*) No.

(*f*) Names of members of the Advisory Council constituted under Government Order No. HMA 4 MNC 67, dated 28th February 1968 are as follows :

1	The Deputy Commissioner Belgaum	*Chairman*
2	The Municipal Commissioner, City Municipal Council, Belgaum	*Member and Convenor*
3	The Superintending Engineer, Belgaum Circle, Belgaum	*Member*
4	The District Health Officer, Belgaum.	do
5	The Executive Engineer, P.H.E. Division, Dharwar	do
6	The Assistant Director of Town Planning, Belgaum	do

7	Sri B. B. Patil, Ghatge and Patil Transport, Belgaum	*Member*
8	Sri C. L. Pattanshetti, MLA, Belgaum	do
9	Sri A. M. Shaikh, Retired Deputy Commissioner, Belgaum	do

(*g*) No.

Sri B. B. SAYANAK.—Sir, out of nine members, three are non-official Members. Sri B. B. Patil of Ghatge and Patil Transport, Belgaum contested against B. B. Sayanak in the last General Elections on the Congress Party ticket and he was defeated. Sri Pattansetty is not a member of this House. Mr. Sheik is a retired Deputy Commissioner and he is a member of the Congress party. Why only Congress people are appointed on this Committee ?

† **Sri B. M. PATIL.**—It is not because they are members of the Congress Party that they are appointed. At the time of nomination, all recommendations from the various authorities of the district will be taken into consideration.

Sri B. B. SAYANAK.--May I know how many applications have been received for the plot and how many plots have been allotted to these persons ?

Sri B. M. PATIL.—In all 1440 applications were received and 1256 sites have been allotted.

ಶ್ರೀ ಎಸ್. ಎಸ್. ಅರಕೇರಿ.—ಬೆಳಗಾಂ ಸಿಟಿ ಷೆಡ್ಯೂಲ್ಡ್ ಕ್ಯಾಸ್ಟ್ ಜನರು ಇಲ್ಲಿ ಜಾಗ ಕೊಡಬೇಕೆಂದು—ಮನೆಗಳನ್ನು ಕಟ್ಟುವ ಸಲುವಾಗಿ ಎರಡು ಎಕರೆ ಕೊಡಬೇಕೆಂದು ಅರ್ಜಿ ಹಾಕಿದ್ದರು, ಅದರ ಸಲುವಾಗಿ ಏನು ನಿರ್ಧಾರ ಕೈಕೊಂಡಿದ್ದೀರಿ ಮತ್ತು ಎಷ್ಟು ಎಕರೆ ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೀರಾ ?

Sri B. M. PATIL.—To the Harijans 2 acres and 27 guntas of land has been allotted.

Sri P. THAMMIAH.—Sir, my question is last but one in today's list. If you go on at this rate, my question may not be reached Sir.

Mr. SPEAKER.—I will take note of it.

Digging of test wells near Gulaharive and round about Tumkur Town

114. **Sri B. P. GANGADHAR** (Tumkur).-

Will the Minister of State for Municipal Administration be pleased to state :—

(*a*) whether the Government has instructed the concerned authorities to dig up 'Test Wells' near Gulaharive and round about areas in Tumkur Town ;

(SRI B. P. GANGADHAR)

(*b*) whether it is a fact that the people of the said village have prevented the PWD authorities and labourers who were working there and used force and threat on the officials and labourers so as to stop the work;

(*c*) if so, whether the said work is now stopped;

(*d*) whether the Government intends to continue the work forthwith;

(*e*) when the work would be finished?

Sri B. M. PATIL (Minister of State for Municipal Administration).—

(*a*) No.

(*b*) Yes.

(*c*) Yes.

(*d*) Yes; the work will be resumed after the protest from the local ryots is withdrawn.

(*e*) As early as possible.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ತಮ್ಮ ಮೊದಲನೆ ಪ್ರಶ್ನೆಗೆ ಇಲ್ಲ ಅಂತ ಹೇಳಿದ್ದೀರಿ ಎರಡನೇ ಪ್ರಶ್ನೆಗೆ ನಿಜ ಅಂತ ಹೇಳಿದ್ದೀರಿ. ಇಲ್ಲ ಅಂತ ಹೇಳಿರುವುದು ಸರಿಯಲ್ಲ ಎಂದು ಹೇಳುತ್ತೇನೆ, ಏಕೆಂದರೆ ಎರಡನೇ ಉತ್ತರದಲ್ಲಿ ಟೆಸ್ಟ್ ವೆಲ್ಸ್ ತೋಡುತ್ತಾ ಇದ್ದಾರೆ ಎಂದು ಒಪ್ಪಿಕೊಂಡಿದ್ದೀರಿ. ಹಾಗಿರುವಾಗ ಇಲ್ಲ ಎಂದು ಹೇಗೆ ಉತ್ತರ ಕೊಟ್ಟಿದ್ದೀರಿ !

† ಶ್ರೀ ಬಿ. ಎಂ. ಪಾಟೀಲ್.— (ಎ) ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೇವೆ. ಅವರ ಪ್ರಶ್ನೆ ಸರ್ಕಾರದವರು ಏನಾದರೂ ಆದೇಶ, ಸೂಚನೆ ನೀಡಿದ್ದಾರೆಯೇ ಅಂತ ಅದಕ್ಕೆ ಇಲ್ಲ ಎಂದು ಹೇಳಿದ್ದೇವೆ. ಯಾವುದೇ ಒಂದು ಕುಡಿಯುವ ನೀರಿನ ಯೋಜನೆ ಕಾರ್ಯಗತ ಮಾಡುವಾಗ ಇಂಥಾ ಕಡೆಯಲ್ಲೇ ಟೆಸ್ಟ್ ವೆಲ್ ಮಾಡಬೇಕು ಅಂತ ಹೇಳಿ ಸೂಚನೆ ಕೊಡುವುದಿಲ್ಲ. ಎಲ್ಲಿ ವಾಟರ್ ಪೊಟೆನ್ಸಿಯಲ್ ಇದೆ ಅದನ್ನು ಅಸೆಸ್ ಮಾಡುವಾಗ ಸಲುವಾಗಿ ತಜ್ಞರು ಸೂಕ್ತವಾದ ಕಡೆಯಲ್ಲಿ ಪರೀಕ್ಷೆ ಮಾಡಬಹುದು. ಸರ್ಕಾರ ಆದೇಶ ಕೊಡುವುದಕ್ಕಾಗುವುದಿಲ್ಲ. ಯಾರಾದರೂ ಅಬ್ಜೆಕ್ಷನ್ ಕೊಟ್ಟಿದ್ದಾರೆಯೇ ಅಂತ ಕೇಳಿದ್ದಾರೆ ಅದಕ್ಕೆ ಹೌದು ಎಂದು ಹೇಳಿದ್ದೇವೆ.

ಶ್ರೀ ಸಿ. ಎಂ. ಎನ್. ಶಾಸ್ತ್ರಿ.—ಈಗ ಕೆಲಸ ಮಾಡುತ್ತಾ ಇರತಕ್ಕ ಜಾಗದಲ್ಲಿ ಕೆಲವು ಜನ ಗೂಂಡಾಗಳು ಆಯುಧಗಳನ್ನು ತೆಗೆದುಕೊಂಡು ಬಂದು ಏನು ಕೆಲಸ ಮಾಡುತ್ತಾ ಇದ್ದಾರೆ ಅದನ್ನು ನಿಲ್ಲಿಸಿ ಗಲಾಟೆ ಮಾಡಿರತಕ್ಕ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ತಾವು ಅಂಥವರ ಮೇಲೆ ಯಾವ ತರಹ ಕ್ರಮವನ್ನು ತೆಗೆದುಕೊಂಡಿದ್ದೀರಿ? ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ?

ಶ್ರೀ ಬಿ. ಎಂ. ಪಾಟೀಲ್.—ಅವರು ಹೇಗೆ ಬಂದಿದ್ದರೋ, ಆಯುಧ ತೆಗೆದುಕೊಂಡು ಬಂದಿದ್ದರೋ ಇಲ್ಲವೋ ಸರ್ಕಾರದವರ ಗಮನಕ್ಕೆ ಬಂದಿಲ್ಲ. ಆದರೆ ಕೆಲವು ಜನ ಬಂದು ಅಲ್ಲಿ ತಮಗೆ ಟೆಸ್ಟ್ ವೆಲ್ಸ್ ತೆಗೆಯುವುದರಿಂದ ಅನಾನುಕೂಲವಾಗುತ್ತದೆ ಎಂದು ಹೇಳಿ ಪ್ರತಿಭಟಿಸಿದ್ದರು, ಡೆಪ್ಯೂಟಿ ಕಮಿಷನರಿಗೂ ಸಹ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ.

Class of Land and Persons enjoying exemption from Ceiling Limit

125. **Sri L. SRIKANTAIAH** (Nanjangud).—

Will the Minister for Revenue be pleased to State :—

(*a*) the classes of land and persons that enjoy exemption from the limits of ceiling under the provisions of the Mysore Land Reforms Act;

(*b*) the total extent of wet, dry, bhagayat and plantation land that comes under this non-ceiling category (Districtwise figures may be given) ;

(*c*) the extent of land of this kind owned by :—

(i) Mutts and Religious Institutions,

(ii) Foreign companies,

(iii) Charitable or Educational institutions,

(iv) Private Individuals other than items (i), (ii) and (iii) (districtwise figures with the names of Mutts, Religious Institutions and Foreign companies may be given) ?

Sri H. V. KOUJALGI (Minister for Revenue).—

(*a*) Persons holding the following classes of lands :—

(i) Land used for orchard where it constitutes a reasonable compact area (other than cocoanut and arecanut).

(ii) Land used for specialised farms set apart for livestock breeding, dairying, wool-raising and such allied operations as may be notified by the Government and which satisfy such conditions as may be prescribed.

(iii) Land used by sugarcane farms operated by Sugar factories.

(iv) Land utilized by an efficiently managed farm which consists of a reasonable compact area on which heavy investment or permanent structural improvements have been made and whose break up in the opinion of the Tribunal is likely to lead to a fall in production.

The following classes of Lands are also exempt :—

(v) Regimental Farm Lands.

(vi) Plantations.

(vii) Lands held on lease by Industrial or Commercial undertakings or any Bodies or persons for the breeding of livestock or lands held or leased by such Co-operative Societies as are approved by Government.

(viii) Lands belonging to or held on lease from the Government or lands belonging to or held on lease from Religious or Charitable Institutions managed by or under the Control of State Government or

(SRI H. V. KOUJALAGI)

lands belonging to or held on lease from a public trust or a society for public educational purpose created or formed before the 18th November 1961 and in existence on the date of Commencement of the Mysore Land Reforms (Amendment) Act, 1965.

(ix) Lands taken under the management of Court of Wards or Guardians of Wards or Revenue or Criminal Courts temporarily.

(*b*) and (*c*) The information is not readily available and will have to be collected. The labour and time involved will be considerable.

ಶ್ರೀ ಎಲ್. ಶ್ರೀಕಂಠಯ್ಯ.—ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಭೂ ಹಿಡುವಳಿಯ ಮಿತಿಯನ್ನು ಮೀರಿದಂಥ ಜನರ ಕ್ಲಾಸಿಫಿಕೇನ್ ಕೊಟ್ಟಿದ್ದಾರೆ. (ಬಿ) ಮತ್ತು (ಸಿ) ಪ್ರತಿಯೊಂದು ಜಿಲ್ಲೆಯಲ್ಲಿರುವ ಮಠಗಳು ಮುಂತಾದುವು ಎಷ್ಟು, ಅವರು ಎಷ್ಟು ಭೂಮಿಯನ್ನು ಹೊಂದಿದ್ದಾರೆ ಎನ್ನುವುದಕ್ಕೆ ಉತ್ತರವಾಗಿ 'the information is not readily available and will have to be collected.' ಹೇಳಿದ್ದಾರೆ. ನನಗೆ ತಿಳಿದ ಹಾಗೆ ಭೂ ಸುಧಾರಣಾ ಶಾಸನ 1961ನೇ ಇಸವಿಯಲ್ಲಿ ಬಂತು. 8 ವರ್ಷವಾದರೂ ಕೂಡ ಮೈಸೂರು ಸಂಸ್ಥಾನದಲ್ಲಿ ಎಷ್ಟು ಮಠಗಳಿವೆ, ಆ ಮಠಗಳಿಗೆ ಎಷ್ಟೆಷ್ಟು ಆಸ್ತಿ ಇದೆ ಎನ್ನುವ ವಿವರವನ್ನು ತಿಳಿಯುವುದಕ್ಕೆ ಇಷ್ಟು ಅಧಿಕಾರವರ್ಗವಿದ್ದರೂ ಆಗಲಿಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ.—ಹಾಗೇನೂ ಇಲ್ಲ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರ ಕೊಡಲಿಕ್ಕೆ ವೇಳೆ ಬಹಳ ಹಿಡಿಯುತ್ತದೆ. ಈ ಪ್ರಶ್ನೆಗೆ ಉತ್ತರ ಕೊಡಲು ಸಾಕಷ್ಟು ವೇಳೆ ಇಲ್ಲದ್ದರಿಂದ ಹಾಗೆ ಕೇಳಿದೆ.

ಶ್ರೀ ಎಲ್. ಶ್ರೀಕಂಠಯ್ಯ.—ಮೈಸೂರು ಸಂಸ್ಥಾನದಲ್ಲಿ ಎಷ್ಟು ಮಠಗಳಿವೆ, ಆ ಮಠಗಳಿಗೆ ಇರತಕ್ಕ ಆಸ್ತಿ ಎಷ್ಟು, ಸೀಲಿಂಗಿಗೆ ಮೀರಿ ಇರತಕ್ಕದ್ದು ಎಷ್ಟು ಎನ್ನುವ ವಿವರಗಳನ್ನು 8 ವರ್ಷಗಳಿಂದ ಸಂಗ್ರಹಿಸುವುದಕ್ಕೆ ಆಗಲಿಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಬರೀ ಮಠದ್ದು ಕೇಳಿದ್ದರೆ ಹೇಳಬಹುದಾಗಿತ್ತು. ಅವರು ಬೇರೆ ಸಂಸ್ಥೆಗಳ ವಿವರಗಳನ್ನು ಕೇಳಿದ್ದಾರೆ.

ಶ್ರೀ ವಿ. ಎನ್. ಪಾಟೀಲ್.—(ಬಿ) ಭಾಗದ ಪ್ರಶ್ನೆಯಲ್ಲಿ ಕೇಳಿರುವ ವಿವರಗಳು ನಮಗೆ ಸರ್ಪ್ಲಸ್ ಲ್ಯಾಂಡ್ ಎಷ್ಟು ಸಿಕ್ಕುತ್ತದೆ, ಸೀಲಿಂಗ್‌ಗಿಂತ ಹೆಚ್ಚಾಗಿ ಇರುವುದು ಎಷ್ಟು ಎನ್ನುವ ವಿವರಗಳನ್ನು ತಿಳಿಯುವುದಕ್ಕೆ. ಈ ಸಮಾಚಾರವನ್ನು ಏಕೆ ಕೊಡಲಿಲ್ಲ, ಅದಕ್ಕೆ ಕಾರಣವೇನು ?

ಶ್ರೀ ಎಚ್. ವಿ. ಕೌಜಲಗಿ.—ಸರ್ಪ್ಲಸ್ ಲ್ಯಾಂಡ್ ಎಷ್ಟು ಎನ್ನುವುದು ಇದರ ಮೇಲಿನಿಂದ ಗೊತ್ತಾಗುವುದಿಲ್ಲ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಅನೇಕ ಧರ್ಮ ಸಂಸ್ಥೆಗಳಿಗೆ, ವಿದ್ಯಾ ಸಂಸ್ಥೆಗಳಿಗೆ ಕೊಟ್ಟಿರುವ ಜಮೀನು ಅವರ ಸಾಗುವಳಿ ಮಾಡಿಲ್ಲ ಯಾರು ಹಿತಾಸಕ್ತ ವ್ಯಕ್ತಿಗಳಿದ್ದಾರೆ ಅವರು ಅವುಗಳನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ಇದರ ಬಗ್ಗೆ ಕ್ರಮತೆಗೆದುಕೊಳ್ಳದೆ ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ವಿ. ಕೌಜಲಗಿ.—ದೇಶದಲ್ಲಿರುವ ದೇವಸ್ಥಾನಗಳು ಮತ್ತು ಇತರ ಕೆಲವು ಸಂಸ್ಥೆಗಳಿಗೆ ಸಂಬಂಧಪಟ್ಟ ಜಮೀನು ಸರ್ಕಾರದವರು ಕೊಟ್ಟದ್ದಲ್ಲ. ಹಿಂದೆ ಯಾವುದೋ ಕಾಲಕ್ಕೆ ಆಗಿನ ಸಮಾಜದವರು, ಅರಸರು ಕೊಟ್ಟಿದ್ದಾಗಿದೆ. ಕೆಲವು ಟೆನೆಂಟ್ಸ್ ಆ ಜಮೀನು ಮಾಡುತ್ತಿದ್ದಾರೆ. ಟೆನೆನ್ಸಿ ಕಾಯದೆಯಿಂದ ಅವರಿಗೆ ವಿನಾಯಿತಿಯನ್ನು ಕೊಡಲಾಗಿದೆ.

ಶ್ರೀ ಕೆ. ಎಚ್. ರಂಗನಾಥ್.—ಮೈಸೂರು ರಾಜ್ಯದಲ್ಲಿ ರಿಕಾರ್ಡ್ ಆಫ್ ರೈಟ್ಸ್ ಮತ್ತು ಇಂಡೆಕ್ಸ್ ಎಂದು ಏನು ಮಾಡಿದ್ದಾರೆ ಅದು ಕರಾರುವಾಕ್ಕಾಗಿ ಇದೆಯೇ ಇಲ್ಲವೇ ? ಹಾಗಾದರೆ ಈ ಅಂಕಿ ಅಂಶಗಳನ್ನು ಕೊಡಲಿಕ್ಕೆ ಸರ್ಕಾರಕ್ಕೆ ಇರತಕ್ಕ ತೊಂದರೆಯಾದರೂ ಏನು ?

ಶ್ರಿ ಎಚ್. ವಿ. ಕೌಜಲಗಿ.—ಕೊಡಲಿಕ್ಕೆ ತೊಂದರೆ ಇಲ್ಲ. ವೇಳೆ ಬಹಳ ಆಗುತ್ತದೆ ಅಷ್ಟೆ.

ಶ್ರೀ ಎನ್. ಎ. ಚನ್ನೇಗೌಡ.—ಕೆಲವು ಮಠಗಳಿಗೆ, ಧರ್ಮ ಸಂಸ್ಥೆಗಳಿಗೆ ವಿನಾಯಿತಿ ಕೊಡಬೇಕೆಂಬ ಉದ್ದೇಶದಿಂದಲೇ ಸರ್ಕಾರ ಈ ಮಾಹಿತಿಯನ್ನು ಸಭೆಗೆ ತಿಳಿಸುತ್ತಿಲ್ಲ ಎನ್ನುವುದು ನಿಜವೇ ?

ಶ್ರೀ ಎಚ್. ವಿ. ಕೌಜಲಗಿ.—ಹಾಗೇನೂ ಇಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಈ ಪ್ರಶ್ನೆ ನಾನು ಹೋದ ವರ್ಷ ಕಳುಹಿಸಿದ್ದು. ಹೋದ ವರ್ಷ ಲ್ಯಾಪ್ಸ್ ಆಯಿತು ಎಂದು ಪುನಃ ರಿಪೀಟ್ ಮಾಡಿದೆ. ನಾನು ಕೇಳತಕ್ಕ ಪ್ರಶ್ನೆ ಬೇರೆ ಇಂಡಿವಿಜುಯಲ್ಸ್‌ಗೆ ಅಲ್ಲ ಎಂದು ಹೇಳುತ್ತೇನೆ. ಮಠಗಳಿಗೆ ಇರತಕ್ಕ ಆಸ್ತಿಯ ಪಟ್ಟಿಯನ್ನು ಮಾಡಿ ಟೇಬಲ್ ಮೇಲೆ ಇಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಎಷ್ಟು ಮಠಗಳಿವೆ, ಎಷ್ಟು ದೇವಸ್ಥಾನಗಳಿವೆ, ಅದಕ್ಕೆ ಸಂಬಂಧ ಪಟ್ಟ ಜಮೀನು, ಅದರ ಲೆಕ್ಕ ಎಲ್ಲ ಇದೆ. ಅವಕಾಶ ಕೊಟ್ಟರೆ ಟೇಬಲ್ ಮೇಲೆ ಇಡುತ್ತೇನೆ.

Non-Posting of Village Panchayat Secretary in Basavapatna, Arkalgud Taluk

129. **Sri H. N. NANJE GOWDA** (Arkalgud).—

Will the Minister for Development be pleased to state :—

(*a*) whether it is a fact that there is no Village Panchayat Secretary in Basavapatna Group Panchayat in Arkalgud Taluk., Hassan District;

(*b*) if so, since how long the said Panchayat is functioning without a lawful Secretary ;

(*c*) whether it is a fact that the said Panchayat by a resolution requested the authorities to get a Secretary appointed to this Panchayat ; if so, the reasons for not complying with the request of the Panchayat ;

(*d*) whether it is not a fact that for the purpose of making payments towards the salaries of the employees working in the essential services of the panchayat, such as Water supply and Sewerage and also towards the bills of the light charges, the cheques are to be signed by both the Secretary and Chairman ;

(*e*) if so, whether it is not a fact that due to non-compliance with the request of the Panchayat by the concerned authority to appoint a Secretary to this Panchayat the normal working of the Panchayat have been jeopardised ;

(*f*) if so, the action they propose to take against the concerned officer who has failed to take action to appoint a Panchayat Secretary in the said Panchayat ?

Sri B. L. GOWDA (Deputy Minister for Co-operation).—

(*a*) Yes.

(*b*) Since 10th August 1968.

(Sri B. L. Gowda)

(c) No.
Does not arise.

(d) As per Rule 13 of the Budget and Accounts Rules of Panchayats, the cheque has to be signed both by the Secretary and the Chairman of the Village Panchayat. This rule has since been amended making provision for the Chief Executive Officer of the Taluk Development Board to sign the cheques in the absence of the Secretary.

(e) Even without a secretary being appointed, the Village Panchayat Chairman could have approached the Chief Extension Officer, Taluk Development Board, Arkalgud, and got the cheques signed by him and carried on the normal duties of the Village Panchayat without detriment to the interests of the tax payers and the staff of the Village Panchayat. Even now the Village Panchayat Chairman has been advised to take immediate action in the matter.

(f) Does not arise in view of the replies furnished to clause (c).

Sri H. N. NANJE GOWDA.—I want to know whether the Government has any amendments to the answers ?

† **Sri B. L. GOWDA.**—There are no amendments.

ಶ್ರೀ ಎಚ್. ಎನ್. ನಂಜೇಗೌಡ.— (ಸಿ) ಭಾಗದ ಪ್ರಶ್ನೆಗೆ ನಿಜವಲ್ಲ ಎಂದು ಹೇಳಿದ್ದಾರೆ. ಈಗಲೂ ಪುಷ್ಟೀಕರಿಸುತ್ತಾರೆಯೇ ಅಥವಾ ಅಮೆಂಡ್ ಮಾಡಿಕೊಳ್ಳುತ್ತಾರೆಯೇ ?

ಶ್ರೀ ಬಿ. ಎಲ್. ಗೌಡ.—ಇದು ಕ್ರಾಸ್ ಎಗ್ಸಾಮಿನೇಷನ್ ಅಲ್ಲ. ಉತ್ತರಕ್ಕೆ ಏನೂ ಅಮೆಂಡ್‌ಮೆಂಟ್ ಇಲ್ಲ. ಪಂಚಾಯಿತಿಯವರು 18-10-68ರಲ್ಲಿ ಒಂದು ರೆಸಲ್ಯೂಷನ್ ಪಾಸ್ ಮಾಡಿದ್ದಾರೆ. ಅದನ್ನು ಮಾನ್ಯ ಸದಸ್ಯರ ಅವಗಾಹನೆಗಾಗಿ ಓದುತ್ತೇನೆ.

> "ಪಂಚಾಯಿತಿಯಲ್ಲಿ ಹಾಲಿ ಸೆಕ್ರೆಟರಿ ಇಲ್ಲದೆ ಕೆಲಸಕಾರ್ಯಗಳಿಗೆ ತೊಂದರೆಯಾಗಿರುವುದರಿಂದ, ಈ ಕೆಲಸಕ್ಕೆ ಅರ್ಜಿಗಳು ಬಂದಿದ್ದು ಮೀಟಿಂಗಿನಲ್ಲಿ ಪರಿಶೀಲಿಸಲಾಯಿತು. ಅರ್ಜಿದಾರರುಗಳು ತಾತ್ಕಾಲಿಕವಾಗಿ ಕೆಲಸಮಾಡುವವರಿದ್ದು ಮುಂದೆ ಹೊರಗೆ ಸರ್ಕಾರಿ ಕೆಲಸಗಳಿಗೆ ಹೋಗುತ್ತಾರೆಂದು ತಿಳಿದು ಬಂದು ಇದರಿಂದ ಮಧ್ಯದಲ್ಲಿ ಪಂಚಾಯಿತಿ ಕೆಲಸಗಳಿಗೆ ತೊಂದರೆ ಆಗುವುದೆಂದು ಎಲ್ಲಾ ಸದಸ್ಯರೂ ಅಭಿಪ್ರಾಯ ತಿಳಿಸಿ ಮತ್ತು ಈ ಕಾರ್ಯಕ್ಕೆ ಹಾಲಿ ಊರಿನಲ್ಲೇ ಇರುವಂತಹ ಸ್ವಲ್ಪಮಟ್ಟಿಗೆ ಅನುಭವವಿರತಕ್ಕವರನ್ನು ಒಂದು ನೂರು ರೂಪಾಯಿಗಳ ಡಿಪಾಸಿಟ್ ಕಟ್ಟಿಸಿಕೊಂಡು ತಿಂಗಳು ಒಂದಕ್ಕೆ ಐವತ್ತು ರೂಪಾಯಿಗಳ ಸಂಬಳದ ಮೇಲೆ ಕೆಲಸಮಾಡುವಂತಹವರನ್ನು ಛೇರ್ಮನ್‌ರವರು ಡೆಪ್ಯುಟಿ ಕಮಿಷನರವರ ಒಪ್ಪಿಗೆ ಪಡೆದು ನೇಮಿಸಿಕೊಳ್ಳಬಹುದೆಂದು ತೀರ್ಮಾನಿಸಲಾಯಿತು. ಹಾಗೇನಾದರೂ ಊರಿನಲ್ಲೇ ಇದ್ದು ಕೆಲಸ ಮಾಡುವಂತಹವರು ಸಿಗಲಿಲ್ಲವಾದಲ್ಲಿ ಬಿ. ಡಿ. ಘಾರಾಕ್ಷರವರನ್ನೇ ನೇಮಿಸಿಕೊಳ್ಳುವುದೆಂದು ತೀರ್ಮಾನಿಸಲಾಯಿತು. ಹಾಗೂ ಈ ವಿಚಾರದಲ್ಲಿ ಛೇರ್ಮನ್‌ರವರಿಗೆ ಅಧಿಕಾರ ಕೊಡಲಾಯಿತು."

ಪಂಚಾಯಿತಿಯಿಂದ ಇಂಥವರನ್ನೇ ನೇಮಕ ಮಾಡಿ ಸರ್ಕಾರಕ್ಕೆ ಎಂದು ಮನವಿ ಬಂದಿಲ್ಲ.

Sri H. N. NANJE GOWDA.—Who is the authority to appoint the Secretary ? Is it not a fact that because the Panchayat is without a Secretary from 10th August 1968, the village is suffering without essential amenities like water and light. He cannot walk closing his eyes. What made him not appoint the Secretary ?

ಶ್ರೀ ಬಿ. ಎಲ್. ಗೌಡ.—ಪಂಚಾಯಿತಿ ಸೆಕ್ರೆಟರಿ ಕೆಲಸ ಪಾರ್ಟ್‌ಟೈಮ್ ಕೆಲಸವಾಗಿದ್ದು, ಆ ಸ್ಥಾನಕ್ಕೆ ಪಂಚಾಯಿತಿಯವರು ಇಂಥವರನ್ನೆ ನೇಮಕ ಮಾಡಿಕೊಳ್ಳಬೇಕೆಂದು ಸಿಫಾರಸು ಮಾಡಿದರು. ಆದರೆ ಪಂಚಾಯಿತಿಯವರು ಸಿಫಾರಸು ಮಾಡಿದಕ್ಕೆ ವಿರೋಧವಾಗಿ ಚೇರ್‌ಮನ್ ಅವರು ಬೇರೆ ಒಬ್ಬರನ್ನು ನೇಮಕ ಮಾಡಿದರು. ಅದನ್ನು ಡೆಪ್ಯುಟಿ ಕಮೀಷನರು ಒಪ್ಪುವುದಕ್ಕಾಗಲಿಲ್ಲ. ಪಂಚಾಯಿತಿ ಅಧ್ಯಕ್ಷರು ಪಂಚಾಯಿತಿ ರೆಸಲ್ಯೂಷನ್ನಿಗೆ ವಿರೋಧವಾಗಿ ನಡೆದುಕೊಂಡುದರಿಂದ ಪಂಚಾಯಿತಿ ಕಾರ್ಯದರ್ಶಿಯು ನೇಮಕವಾಗಿಲ್ಲ. ಸರ್ಕಾರದ ಜವಾಬ್ದಾರಿ ಇದರಲ್ಲಿ ಇರಲಿಲ್ಲ.

Sri H. N. NANJE GOWDA.—It is not a true statement. I am contradicting it.

Mr. SPEAKER.—Hon. Member is not expected to give any information. He can only put a supplementary.

Sri H. N. NANJE GOWDA.—Is it not a fact that because the Taluk Board President is a Congressman, he is intervening in the day-to-day affairs? ಆ ಗ್ರಾಮ ಕಾಂಗ್ರೆಸ್ಸಿಗೆ ವಿರೋಧವಾದ ಗ್ರಾಮವಾದುದರಿಂದ ಪಂಚಾಯಿತಿ ಸೆಕ್ರೆಟರಿಯನ್ನು ನೇಮಕ ಮಾಡಿಲ್ಲವಲ್ಲವೇ? The Government Officers are sabotaging the office.

ಶ್ರೀ ಬಿ. ಎಲ್. ಗೌಡ.—ಜೋರಾಗಿ ಹೇಳಿದರೆ ಉತ್ತರ ಬದಲಾಗುವುದಿಲ್ಲ. I refute the allegations.

Sri BAPU GOWDA.—Is it not a fact that the delay in the appointment of the Panchayat Secretary in this Village is due to the faction prevailing among the Panchayat members?

Sri B. L. GOWDA.—Yes. The Panchayat has resolved one thing and the Chairman wants to do something else. That is why, it has been delayed.

Sri H. N. NANJE GOWDA.—I will bring a Privilege Motion against the Minister. I will produce the documents. I know the Panchayat documents...

Mr. SPEAKER.—Hon. Member need not make any statement.

* * *

ಶ್ರೀ ಎಚ್. ಬಿ. ಜ್ವಾಲನಯ್ಯ.—ಅಲ್ಲಿ ಕಾರ್ಯದರ್ಶಿಗಳಿಲ್ಲದೆ ಇರುವುದರಿಂದ ಪಂಚಾಯಿತಿಯಲ್ಲಿ ಬಿಲ್ ವಗೈರೆಗಳಿಗೆ ಸೈನ್ ಹಾಕುವುದಕ್ಕೋಸ್ಕರ ತಾಲ್ಲೂಕು ಬೋರ್ಡ್ ಮುಖ್ಯರಾಗಿರತಕ್ಕವರು ಸೈನ್ ಹಾಕುವಂತ ಅಪ್ಪಣೆ ಮಾಡಿದ್ದೇವೆಂದು ಹೇಳಿದ್ದಾರೆ. ಇದಕ್ಕಿಂತ ಮುಂಚೆ ಈ ಪಂಚಾಯಿತಿಯಲ್ಲಿ ತಿಂಗಳಾನುಗಟ್ಟಲೆ ಇಂಥ ಅಧಿಕಾರಿ ಇಲ್ಲದೆ ಇದ್ದ ಸಂದರ್ಭದಲ್ಲಿ ಅದಕ್ಕೆ ವ್ಯವಸ್ಥೆ ಮಾಡಿ ಎಂದು ಕೇಳುವಂಥ ಕೋರಿಕೆಗೆ ಮನ್ನಣೆ ಕೊಟ್ಟಿಲ್ಲ. ಈ ಅಧಿಕಾರವನ್ನು ಯಾವಾಗ ಕೊಟ್ಟಿರಿ? ಪಂಚಾಯಿತಿ ಅಧ್ಯಕ್ಷರಿಗೆ ಈ ರೀತಿ ಸೈನ್ ತೆಗೆದುಕೊಳ್ಳಬೇಕೆಂದು ಗೊತ್ತಿಲ್ಲದೆ ಇರುವ ಸಂದರ್ಭದಲ್ಲಿ ತಾಲ್ಲೂಕು ಬೋರ್ಡ್ ಮುಖ್ಯಾಧಿಕಾರಿಗಳು ಹೋಗಿ ಏಕೆ ಕೆಲಸವನ್ನು ಮಾಡಲಿಲ್ಲ?'

1-30 P.M.

ಶ್ರೀ ಬಿ. ಎಲ್. ಗೌಡ.—ಈ ರೀತಿಯಾಗುವುದಕ್ಕೆ ಪಂಚಾಯಿತಿ ಅಧ್ಯಕ್ಷರ ಬೆಂಬಲ ಇದೆ ಎಂದು ಈ ತೊಂದರೆಯಾಗುತ್ತಾ ಇದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪಂಚಾಯಿತಿ ದಕ್ಷತೆಯಿಂದ ಕೆಲಸ ಮಾಡಬಾರದು ಎಂಬ ದುರುದ್ದೇಶದಿಂದ ಈ ನೇಮಕ ಮಾಡಲಿಲ್ಲ ಅಲ್ಲವೇ?

***Matter not recorded as directed by the Chair.

ಶ್ರೀ ಬಿ. ಎಲ್. ಗೌಡ.—ಈ ಪಂಚಾಯತಿ ಚೆನ್ನಾಗಿ ಕೆಲಸ ಮಾಡಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಬಿ.ಡಿ.ಓ. ಅವರು ಸೈನ್' ಹಾಕಿ ಹಣ ಡ್ರಾ ಮಾಡಿದ್ದು ನಿಜವಲ್ಲವೇ ?

ಶ್ರೀ ಬಿ. ಎಲ್. ಗೌಡ.—ಅದು ನನಗೆ ಗೊತಿಲ್ಲ.

Ayyanakere Tank in Sakrepatna Hobli, Kadur Taluk

150. **Sri M. MALLAPPA** (Birur).—

Will the Minister of State for Minor Irrigation be pleased to state :—

(*a*) whether it has come to the notice of the Government that Ayyanakere tank in Sakrepatna Hobli, Kadur Taluk, has been silted and has lost the original capacity ;

(*b*) if so, the number of units of water that is lost due to silt in the tank ;

(*c*) whether the achkatdars are urging to restore the tank to its original capacity by raising the waste-weir and the Department have prepared estimate for restoring the tank to its original capacity ;

(*d*) the action the Government intends to take for restoring the original capacity of the tank ?

Smt. BASAVARAJESWARI (Deputy Minister for Social Welfare) [On behalf of SRI A. J. DODDAMETI (Minister of State for Minor Irrigation)].—

(*a*) The information of the Government is that the tank has not lost its capacity.

(*b*) Does not arise in view of the reply to clause (*a*).

(*c*) Oral an written representation have been received from the atchkatdars. No estimate is prepared either for restoration or for increasing the capacity of this tank.

(*d*) Does not arise in view of the reply to clause (*a*).

ಶ್ರೀ ಎಂ. ಮಲ್ಲಪ್ಪ.—ಅಯ್ಯನಕೆರೆ ಕೆರೆಯಲ್ಲಿ ಹೂಳು ತುಂಬಿಕೊಂಡಿದ್ದರಿಂದ ನೀರು ಇರತಕ್ಕ ಕ್ಯಾಪಾಸಿಟಿ ಕಡಿಮೆಯಾಗಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿಲ್ಲವೇ ?

† ಶ್ರೀಮತಿ ಬಸವರಾಜೇಶ್ವರಿ.—ಸರ್ಕಾರಕೆ ಬಂದಿರುವ ಮಾಹಿತಿಯ ಪ್ರಕಾರ ಈ ಕೆರೆಯ ಕ್ಯಾಪಾಸಿಟಿ ಕಡಿಮೆಯಾಗಿಲ್ಲ.

ಶ್ರೀ ಎಂ. ಮಲ್ಲಪ್ಪ.—ಹೆಚ್ಚು ನೀರು ಹಿಡಿಯುವುದಕ್ಕೆ ಏನು ಮಾಡಬೇಕು ಎನ್ನುವುದಕ್ಕೆ ಸರ್ವೇ ಮಾಡಿದ ಮಾಹಿತಿ ಇದೆಯೇ ?

ಶ್ರೀಮತಿ ಬಸವರಾಜೇಶ್ವರಿ.—ಎರಡು ಇಂಚು ಕಟ್ಟೆ ಎತ್ತರ ಹೆಚ್ಚು ಮಾಡಿದರೆ ಏನಾಗುತ್ತದೆ ಎಂಬುದನ್ನು ಯೋಚಿಸಲಾಯಿತು. ಆದರೆ ಇನ್‌ವೆಸ್ಟಿಗೇಷನ್' ಮಾಡಿದ ಮೇಲೆ ಈಗ ಇರುತಕ್ಕಂಥಾದ್ದು ಹೆಚ್ಚಿಗೆ ಇದೆ. ಇದನ್ನು ಮಾಡುವುದು ಅವಶ್ಯಕತೆ ಇಲ್ಲ ಎಂದು ಕಂಡು ಬಂದಿದೆ. ಆದುದರಿಂದ ಅದನ್ನು ಕೈ ಬಿಡಲಾಯಿತು.

ಶ್ರೀ ಎಂ. ಮಲ್ಲಪ್ಪ.—ನೀರು ದೊರೆಯದೆ ಅಚ್ಚುಕಟ್ಟುದಾರರಿಗೆ ತೊಂದರೆಯಾಗಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀಮತಿ ಬಸವರಾಜೇಶ್ವರಿ.—ಆ ರೀತಿ ಆಗಿಲ್ಲ. ಅಲ್ಲಿ ಅನ್‌ಅಥರೈಜ್ಡ್ ಕಲ್ಟಿವೇಷನ್ ಇದೆ ಹಾಗು ಕ್ರಾಪ್ ಪ್ಯಾಟರ್ನ್ ಚೇಂಜ ಆಗಿದೆ ಎಂದು ಅಭಿಪ್ರಾಯ ಇದೆ.

ಶ್ರೀ ಜಿ. ದುಗ್ಗಪ್ಪ.—ಅಲ್ಲಿ ಅನ್‌ಅಥರೈಜ್ಡ್ ಕಲ್ಟಿವೇಷನ್ ಇದೆ ಎಂದು ಹೇಳಿಧಿರಿ. ಅದನ್ನು ತಪ್ಪಿಸಲು ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದೆ?

ಶ್ರೀಮತಿ ಬಸವರಾಜೇಶ್ವರಿ.—ಆದೇಶ ನೀಡಿದ್ದೇವೆ. ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಇದು ಪುರಾತನ ಕೆರೆ ಹೂಳು ತುಂಬಿ ಭರ್ತಿಯಾಗಿದೆ. ಹೂಳು ತೆಗೆಸಿ ಹಾಗು ಕೆರೆ ಏರಿ ಜಾಸ್ತಿ ಮಾಡಿ ಅನುಕೂಲ ಮಾಡಿಕೊಡುತ್ತೀರಾ?

ಶ್ರೀಮತಿ ಬಸವರಾಜೇಶ್ವರಿ.—ಅದನ್ನು ಮಾಡತಕ್ಕ ಅಗತ್ಯವಿಲ್ಲ.

Establishment of a Civil Judge's Court at Ranebennur

156. **Sri N. L. BELLAD** (Ranebennur).—

Will the Minister for Law, Labour and Parliamentary Affairs be pleased to state :—

(*a*) whether the Government has received representation from the public of Ranebennur, Hirekerur, Byadgi, Haveri Talukas for the establishment of a Civil Judge's Court in that area ;

(*b*) whether the Government is thinking of establishing a Civil Judge's Court at Ranebennur as there is a newly built court building worth Rs. 4 lakhs ;

(*c*) the total number of cases both original suit and also appeals filed from these four taluks in Civil Judge's Court, Hubli from 1956 to 1969 ;

(*d*) the total income by way of stamp duties from these cases to Government ;

(*e*) the probable expenditure for establishment in a Civil Judge's Court for a period of one year ;

(*f*) the criteria followed by Government for establishing a Civil Judge's Court ?

Sri K. PUTTASWAMY (Minister for Law, Labour and Parliamentary Affairs).—

(*a*) A representation has been received from the President, Bar Association, Ranebennur in the matter.

(*b*) No.

(*c*) *Vide* Statement appended.

(*d*) Rs. 53,973-40.

(*e*) Rs. 48,139-89 for one year.

(Sri K. Puttaswamy)

(*f*) The establishment of a Civil Judge's Court will be considered by Government on the recommendations of the High Court of Mysore on the quantum of work to be handled by a Civil Judge's Court.

STATEMENT

Showing the total number of cases both Original Suits and appeals field from Ranebennur, Hirekerur, Byadgi and Haveri talukas in Civil Judge's Court, Hubli from 1956 to 1969.

Year	Original Suits				Regular Appeals				Misc. Appeals			
	Ranebennur	Hirekerur	Byadagi	Haveri	Ranebennur	Hirekerur	Byadagi	Haveri	Ranebannur	Hirekerur	Byadagi	Haveri
1956	...	...	...	...	5	2	...	2	2	1	...	8
1957	1	...	...	1	18	6	...	42	2	...	...	6
1958	...	1	1	1	31	5	6	45	4	...	1	18
1959	1	...	...	2	26	2	6	58	1	1	2	9
1960	...	1	...	1	28	6	2	38	10	...	2	14
1961	...	...	...	...	24	6	4	32	2	9	...	13
1962	1	...	...	...	42	5	6	40	...	...	...	1
1963	...	...	...	2	17	7	5	40	2	1	1	8
1964	...	...	...	...	29	10	5	36	4	5	...	14
1965	...	...	...	...	14	8	4	24	4	2	1	12
1966	2	1	...	1	18	9	3	24	3	2	1	12
1967	...	...	...	1	12	8	5	18	4	2	2	12
1968	...	...	...	...	14	7	2	15	3	3	2	15
1969	...	...	...	1	10	6	3	6	4	2	1	14
	5	3	1	10	288	87	51	420	45	28	13	156

ಶ್ರೀ ಎನ್. ಎಲ್. ಬೆಲ್ಲದ್.—ಸ್ವಾಮಿ, 4 ತಾಲ್ಲೂಕುಗಳ ಮಧ್ಯವರ್ತಿ ಭಾಗದಲ್ಲಿರುವ ಹಾವೇರಿಗೆ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯವೊಂದನ್ನು ಸ್ಥಾಪನೆ ಆಗಬೇಕೆಂದು ಸರ್ಕಾರದವರಲ್ಲಿ ಏನಾದರೂ ವಿಚಾರ ಮಾಡಿದ್ದಾರೆಯೇ ಹೇಗೆ ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಇರುವ ಮೊಕದ್ದಮೆಗಳ ಸಂಖ್ಯೆಯನ್ನು ಪರಿಶೀಲನೆ ಮಾಡಿ ನೋಡಿದರೆ ರಾಣಿಬೆನ್ನೂರಿಗಿಂತ ಹಾವೇರಿಯಲ್ಲಿ ಸಿವಿಲ್ ಕೋರ್ಟ್ ಓಪನ್ ಮಾಡುವುದು ಅವಶ್ಯಕ ಇದೆ.

ಶ್ರೀ ಎನ್. ಎಲ್. ಬೆಲ್ಲದ್.—ಹಿಂದೆ ಹಾವೇರಿಯಲ್ಲಿ ಸಿವಿಲ್ ಕೋರ್ಟ್ ಸ್ಥಾಪನೆ ಮಾಡಬೇಕೆಂದು ಹೈಕೋರ್ಟಿನವರು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಹಿಂದೆ ಹಾವೇರೆಯಲ್ಲಿ ಸಿವಿಲ್ ಕೋರ್ಟ್ ಓಪನ್ ಮಾಡುವ ಅವಶ್ಯಕತೆ ಇದೆ. ಅದು ಸರ್ಕಾರದವರ ಪರಿಶೀಲನೆಯಲ್ಲಿದೆ. ಹೈಕೋರ್ಟ್‌ನವರು ಶಿಪಾರಸ್ಸು ಮಾಡಿ ಕಳುಹಿಸಿದ್ದಾರೋ ಇಲ್ಲವೋ ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಸಿದ್ದಯ್ಯ ಕಾಶಿಮಠ್.—ಸ್ವಾಮಿ, ರಾಣಿಬೆನ್ನೂರು, ಹಾವೇರಿ ಮತ್ತು ಗದಗ್ ಈ ಮೂರು ತಾಲ್ಲೂಕುಗಳಿಂದ ಮನವಿಗಳು ಏನಾದರೂ ಬಂದಿವೆಯೇ? ಇದನ್ನು ನಿರ್ಧಾರ ಮಾಡುವುದು ಯಾವಾಗ ?

ಶ್ರೀ ಕೆ. ಪುಟ್ಟಸ್ವಾಮಿ.—ಇದರಲ್ಲಿ ನಿರ್ಧಾರ ಏನೂ ಇಲ್ಲ. ಅಲ್ಲಿಂದು ಮನವಿಗಳು ಬಂದಿವೆ ಅದನ್ನು ಪರಿಶೀಲನೆಗೆ ಹೈಕೋರ್ಟ್‌ಗೆ ಕಳುಹಿಸಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಹಿಂದಿನ ಮುಖ್ಯಮಂತ್ರಿಗಳು ಗದಗ್‌ನಲ್ಲಿ ಸಿವಿಲ್ ಕೋರ್ಟ್ ಓಪನ್ ಮಾಡುತ್ತೇವೆ, ಎಂದು ಹೇಳಿ ಕೈಬಿಟ್ಟರು. ಅನಂತರ ಹಾವೇರಿಯವರು ಕಾಂಗ್ರೆಸ್‌ಗೆ ಬೆಂಬಲ ಕೊಡುತ್ತಾರೆಂದು ಹಾವೇರಿಯನ್ನು ಸೆಲೆಕ್ಟ್ ಮಾಡಿದಿರಿ. ಈಗ ಹಾವೇರಿಯನ್ನು ಬಿಟ್ಟು ರಾಣಿಬೆನ್ನೂರಿಗೆ ಕೋರ್ಟ್ ಕೊಡುವುದಕ್ಕೆ ಒಪ್ಪಿದ್ದು ನಿಜವೇ ?

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಕೊಟ್ಟಂಥ ಉತ್ತರವನ್ನು ಗಮನಿಸಿದ್ದರೆ ಅವರು ಈ ಪ್ರಶ್ನೆ ಹಾಕುತ್ತಿರಲಿಲ್ಲ. ಅವರು ಪೂರ್ವಭಾವಿಯಾಗಿಯೇ ಈ ಪ್ರಶ್ನೆ ಕೇಳಬೇಕೆಂದು ಮಾಡಿರುವುದರಿಂದ ಅದು ನಿಜವಲ್ಲ.

ಶ್ರೀ ಎನ್. ಎಲ್. ಬೆಲ್ಲದ್.—ಈ 4 ತಾಲ್ಲೂಕುಗಳ ಮಧ್ಯಾವರ್ತಿ ಇರುವ ಹಾವೇರಿಯಲ್ಲಿ ಸಿವಿಲ್ ಕೋರ್ಟ್ ಸ್ಥಾಪನೆ ಮಾಡುವುದಕ್ಕೆ ಪರಿಶೀಲನೆಯಲ್ಲಿದೆ ಎಂದು ಹೇಳಿದಿರಿ. ಆ ಬಗ್ಗೆ ಒಂದು ಅಶ್ವಾಸನೆ ಕೊಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಈಗ ರಾಣಿಬೆನ್ನೂರು, ಹಿರೇಕೆರೂರು, ಬ್ಯಾಡಗಿ ಈ ಮೂರು ತಾಲ್ಲೂಕುಗಳನ್ನು ಸೇರಿಸಿದರೆ ಒರಿಜಿನಲ್ ಸೂಟ್ಸ್, ರೆಗ್ಯುಲರ್ ಅಪೀಲ್ಸ್, ಮಿಸಿಲೇನಿಯಸ್ ಅಪೀಲ್ಸ್ ಈ ಮೊಕದ್ದಮ್ಮೆಗಳು ಏನು ಇವೆಯೋ ಅದಕ್ಕಿಂತ ಹೆಚ್ಚಾಗಿ ಹಾವೇರಿಯ ಒಂದು ತಾಲ್ಲೂಕಿನಲ್ಲೇ ಇವೆ. ಆದುದರಿಂದ ಹಾವೇರಿಯಲ್ಲಿ ಒಂದು ಸಿವಿಲ್ ಜಡ್ಜ್ ನ್ಯಾಯಾಲಯವೊಂದನ್ನು ಓಪನ್ ಮಾಡುವುದು ಅವಶ್ಯಕ ಇದೆ. ಅದನ್ನು ಹೈಕೋರ್ಟ್‌ನವರ ಜೊತೆಯಲ್ಲಿ ವ್ಯವಹರಿಸಬೇಕು. ಮತ್ತು ಸರ್ಕಾರದಲ್ಲಿ ಅದಕ್ಕೆ ಬೇಕಾದಂಥ ಹಣಕಾಸಿನ ಸೌಲಭ್ಯಗಳು ದೊರೆತರೆ ಹಾವೇರಿಯಲ್ಲಿ ಸ್ಥಾಪನೆ ಮಾಡುವುದಕ್ಕೆ ಸಾಧ್ಯ ಇದೆ.

Collection of Tax by Taluk Boards and Panchayats in South Kanara District

159. **Sri B. M. IDINABBA** (Mangalore).—

Will the Minster for Development be pleased to state :—

(*a*) the number of Taluk Boards and Panchayat Boards in South Kanara district which have not collected the tax due to South Kanara district without making efforts in collections talukwise figures may please be furnished) ;

(*b*) the total amount so outstanding ;

(*c*) whether any measures have been taken for collecting the same ;

(*d*) if so, the time within which the said collection of tax will be completed ?

Sri B. L. GOWDA (Deputy Minister for Co-operation).—

(*a*) There are no taluk boards which are in arrears of tax. Four hundred and forty panchayat boards have to collect the arrears. Details are given in the appendix.

(*b*) Rs. 7,76,896-79.

(*c*) In future, the work of collecting the tax will be entrusted to Village Accountants.

(*d*) Will be completed as early as possible.

APPENDIX

Name of the Taluk	No. of Panchayats which have to collect the arrears of tax dues in full
Udipi	74
Puttur	56
Kendapura	57
Bantwala	55
Belthangadi	37
Karkala	54
Sulia	35
Mangalore	72
Total	440

Since the Taluk Boards do not impose tax, no tax is due.

ಶ್ರೀ ಬಿ. ಎಂ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 440 ಪಂಚಾಯಿತಿಗಳಲ್ಲಿ 7,76,89679 ರೂಪಾಯಿಗಳು ವಸೂಲಾಗದೆ ಬಾಕಿ ಇಟ್ಟುಕೊಂಡಿದ್ದೀರಿ. ಅದರ ವಸೂಲಿ ಬಗ್ಗೆ ವಿಲೇಜ್ ಅಕೌಂಟೆಂಟ್‌ರುಗಳನ್ನು ನೇಮಕ ಮಾಡುತ್ತೇವೆ ಎಂದು ಹೇಳುತ್ತೀರಿ. ಈ ಪಂಚಾಯಿತಿಗಳಿಗೆ ಯಾವಾಗ ನೇಮಕ ಮಾಡುತ್ತೀರಿ?

†ಶ್ರೀ ಬಿ. ಎಲ್. ಗೌಡ.—10 ಸಾವಿರ ರೂಪಾಯಿ ಮತ್ತು ಅದಕ್ಕಿಂತ ಹೆಚ್ಚಿನ ವರಮಾನ ಇರುವ ಗ್ರಾಮ ಪಂಚಾಯಿತಿಗಳಿಗೆ ಪೂರ್ಣ ಕಾರ್ಯದರ್ಶಿಯನ್ನಾಗಿಯೂ ಮತ್ತು 10 ಸಾವಿರ ರೂಪಾಯಿಗಿಂತ ಕಡಿಮೆ ಇರುವ ಗ್ರಾಮಪಂಚಾಯಿತಿಗಳಿಗೆ ಗ್ರಾಮ ಲೆಖ್ಖಾಧಿಕಾರಿಗಳೇ ಇರಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಬಿ. ಎಂ. ಇದಿನಬ್ಬ.—ಈ ರೀತಿ ಅಪಾಯಿಂಟ್ ಮಾಡುವುದಕ್ಕೆ ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಬಿ. ಎಲ್ ಗೌಡ.--ಇಷ್ಟು ಸಮಯ ಎಂದು ಹೇಳುವುದಕ್ಕಾಗುವುದಿಲ್ಲ. ಡಿವಿಷನಲ್ ಕಮೀಷನರ್, ಡೆಪ್ಯೂಟಿ ಕಮೀಷನರ್ ಮತ್ತು ಬಿ.ಡಿ.ಒ. ಗಳಿಗೆ ಇದರ ಬಗ್ಗೆ ವಿಶೇಷ ಆಸಕ್ತಿ ವಹಿಸತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡು ಅವರನ್ನು ನೇಮಿಸಬೇಕೆಂದು ಹೇಳಿದ್ದೇವೆ. ಅದಷ್ಟು ಶೀಘ್ರವಾಗಿ ಮಾಡುತ್ತಾರೆ.

ಶ್ರೀ ಬಾಪೂಗೌಡ.—ಈ 2000 ಪಂಚಾಯಿತಿ ಸೆಕ್ರೆಟರಿಗಳನ್ನು ನೇಮಿಸುವುದಕ್ಕೆ ಎಷ್ಟು ಕಾಲ ಬೇಕಾಗುತ್ತದೆ?

ಶ್ರೀ ಬಿ. ಎಲ್. ಗೌಡ.—ಆಗಲೇ ಹೇಳಿದ್ದೇನೆ ಅದಷ್ಟು ಶೀಘ್ರವಾಗಿ ಮಾಡುತ್ತೇವೆ ಎಂದು.

ಶ್ರೀ ಎಂ. ಎನ್. ರಾಮಣ್ಣ.—ಈ ವಸೂಲಿ ಕ್ರಮವನ್ನು ಪಂಚಾಯಿತಿಯಿಂದ ತೆಗೆದು ಲ್ಯಾಂಡ್ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಕೊಡುವುದು ನಿಜವೇ ?

ಶ್ರೀ ಬಿ. ಎಲ್. ಗೌಡ.—ಅದು ನಿಜವಲ್ಲ. ಸೆಕ್ರೆಟರಿಯವರನ್ನು ನೇಮಕ ಮಾಡಿ ಆದಷ್ಟು ಶೀಘ್ರದಲ್ಲೇ ವಸೂಲ್ಮಾಡುತ್ತೇವೆ.

Smt. WINNIFRED F. FERNANDES.–You have stated that the total arrears in South Kanara District is Rs. 7 lakhs and odd. May I know the arrears talukwise ?

Sri B. L. GOWDA.—The break-up is as follows :

		Rs.
Udipi	...	1,71,034
Puttur	...	81,334
Coondapur	...	99,866
Belthangadi	...	75,632
Bantwal	...	88,447
Mangalore	...	1,10,105
Sulia	...	37,465
Karkal	...	1,72,000

ಶ್ರೀ ಎಸ್. ಕೆ. ಅಮೀನ್.—ತಾವು ನೇಮಕ ಮಾಡಲಿರುವ ವಿಲೇಜ್ ಅಕೌಂಟೆಂಟ್‌ಗಳು ಪಂಚಾಯಿತಿ ಮಿತಿಯಲ್ಲಿ ಕೆಲಸಮಾಡುತ್ತಾರೋ ಅಥವಾ ತಾಸೀಲ್ದಾರರ ಮಿತಿಯಲ್ಲಿ ಕೆಲಸ ಮಾಡುತ್ತಾರೋ ?

ಶ್ರೀ ಬಿ. ಎಲ್. ಗೌಡ.—ಈಗಾಗಲೇ ಅದಕ್ಕೆ ಉತ್ತರ ಹೇಳಿದ್ದೇನೆ. 10 ಸಾವಿರ ರೂಪಾಯಿ ಮತ್ತು ಅದಕ್ಕಿಂತ ಹೆಚ್ಚು ವರಮಾನವಿರುವ ಗ್ರಾಮ ಪಂಚಾಯಿತಿಗಳಲ್ಲಿ ಪೂರ್ಣ ಕಾಲದ ಕಾರ್ಯದರ್ಶಿಗಳ ವ್ಯಾಪ್ತಿಯಲ್ಲಿ ಒಳಪಡುತ್ತದೆ. 10 ಸಾವಿರ ರೂಪಾಯಿಗಿಂತ ಕಡಿಮೆ ವರಮಾನವಿರುವ ಪಂಚಾಯಿತಿಗಳು ಅಲ್ಲಿರುವ ಗ್ರಾಮ ವಿಲೇಜ್ ಅಕೌಂಟೆಂಟ್ಸ್‌ನವರ ಮಟ್ಟದಲ್ಲಿರುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.—ಸ್ವಾಮಿ, 440 ಪಂಚಾಯಿತಿಗಳಲ್ಲಿ ವಸೂಲಿ ಬಹಳ ಕಡಿಮೆಯಾಗಿದೆ. ಆದುದರಿಂದ ಈ ಅರಿಯರ್ಸ್‌ನ್ನು ಕರೆಕ್ಟ್ ಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ತಾಲ್ಲೂಕುಬೋರ್ಡುಗಳಿಗೆ ಆದೇಶ ಕೊಟ್ಟಿಲ್ಲವೇ ?

ಶ್ರೀ ಬಿ. ಎಲ್. ಗೌಡ.—ಈಗಾಗಲೇ ಅದರ ಬಗ್ಗೆ ಹೇಳಿದ್ದೇನೆ. ಡಿವಿಷನಲ್ ಕಮೀಷನರ್ ಡೆಪ್ಯೂಟಿ ಕಮಿಷನರ್, ಮತ್ತು ಬಿ.ಡಿ.ಓ. ಗಳಿಗೆ ಎಲ್ಲಾ ಪಂಚಾಯಿತಿಗಳಲ್ಲೂ ಅರಿಯರ್ಸನ್ನು ಕರೆಕ್ಟ್ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ.

Disposal of Lands of Hosapatna Becharak Belaganahalli, Kasaba Hobli

161. **Sri M. K. BOMME GOWDA** (K. R. Pet).—

Will the Minister for Revenue be pleased to state :—

(*a*) whether there is any porposal before Government to dispose of lands of Hosapatna Becharak, Belaganahalli, Kasaba Hobli, K.R.Pet Taluk in one of the following ways :

(i) through darkhast ;
(ii) handing it over to Forest department for growing medicinal plants ;
(iii) to give it to the Birds Sanctuary ;

(*b*) if so, whether any definite decision has been taken ?

Sri H. V. KOUJALGI (Minister for Revenue).—

(*a*) (i) The question can be considered only if this A. M. Kaval land is surrendered by the Animal Husbandry Department.

(ii) There is no such proposal at present.

(iii) This question is also under consideration.

(*b*) No definite decision has been taken as yet.

ಶ್ರೀ ಎಂ. ಕೆ. ಬೊಮ್ಮೇಗೌಡ.—ಕೃಷ್ಣರಾಜಪೇಟೆ ತಾಲ್ಲೂಕು ಕಸಬಾ ಹೋಬಳಿಯ ಹೊಸಪಟ್ಣ ಬೇಚಿರಾಕಿನಲ್ಲಿರುವ ಜಮೀನುಗಳನ್ನು ದರಖಾಸ್ತು ಮೂಲಕ ಕೊಡುವುದಕ್ಕೆ ಉತ್ತರ ಏನೂ ಹೇಳಿಲ್ಲ. ಏನು ಕಾರಣ ? ದರಖಾಸ್ತು ಮೂಲಕ ಕೊಡುತ್ತೀರಾ ಹೇಗೆ ?

ಶ್ರೀ ಹೆಚ್. ವಿ. ಕೌಜಲಗಿ.—ಕೆಲವು ಜಮೀನುಗಳನ್ನು ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಸರ್ಕಾರಕ್ಕೆ ಈಗ ಅದನ್ನು ಕೊಡುವ ವಿಚಾರವಿಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಸ್ವಾಮಿ, ಆ ಜಮೀನಿನಲ್ಲಿ ಭಾಗಶಃ ಕೊಡುವುದಕ್ಕಾದರೂ ಪರಿಶೀಲನೆ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಅದು ಹಾರ್ಟಿಕಲ್ಚರ್‌ಗೆ ಸಂಬಂಧಪಟ್ಟದ್ದು. ಅವರು ಬೇಡ ಎಂದರೆ ಅದನ್ನು ಕೊಡುವುದಕ್ಕೆ ವಿಚಾರ ಮಾಡುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—ಅದನ್ನು ಹಿಂದೇನೇ ಹರಿಜನರಿಗೆ ಕೊಡಬೇಕಾಗಿತ್ತು. ಇಲ್ಲಿಯವರೆಗೂ ಅದರ ಬಗ್ಗೆ ಏನೂ ಹೇಳಲಿಲ್ಲ. ಆದುದರಿಂದ ಆ ಜಮೀನುಗಳನ್ನು ಹರಿಜನರಿಗೆ ಕೊಡಬೇಕೆಂದು ಪಶುಸಂಗೋಪನಾ ಇಲಾಖೆಯವರಿಂದ ಬಿಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಅದು ಪಶುಸಂಗೋಪನಾ ಇಲಾಖೆಯವರಿಗೆ ಸಂಬಂಧಪಟ್ಟದ್ದು. ಅವರು ಬೇಡ ಎಂದು ಏನು ಹೇಳಲಿಲ್ಲವಲ್ಲಾ.

Sri N. A. CHANNEGOWDA.—What are the hurdles in the way of the Animal Husbandry Department to surrender the land ? What are the other questions under your consideration ?

ಶ್ರೀ ಹೆಚ್. ವಿ. ಕೌಜಲಗಿ.—ಅದಕ್ಕೆ ಅಡಚಣೆ ಇದೆ. ಆ ಸಂಸ್ಥೆ ಬೇಡ ಎಂದರೆ ಆಗ ಯಾವ ರೀತಿ ಕೊಡಬೇಕು ಎನ್ನುವ ವಿಷಯ ಬರುತ್ತದೆ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಪಶುಸಂಗೋಪನಾ ಇಲಾಖೆಯವರು ಅಮೃತ ಮಹಲ್ ಕಾವಲ್‌ನಲ್ಲಿ 15,000 ಎಕರೆಯನ್ನು ಐದು ಆರು ವರ್ಷಗಳ ಹಿಂದೆ ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ವಿಲೇವಾರಿ ಮಾಡುವುದಕ್ಕೆ ವಹಿಸಿಕೊಟ್ಟಿದ್ದಾರೆ. ಈ ಸಂಬಂಧದಲ್ಲಿ ಒಂದು ಸರಕಾರಿ ಹುಕುಂ ಆಗಿರುವುದು ತಮಗೆ ಗೊತ್ತಿಲ್ಲವೇ ?

Mr. SPEAKER.—It does not arise out of this question.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಅಮೃತಮಹಲ್‌ಗೆ ಸೇರಿದ ಜಮೀನಿನ ವಿಚಾರದಲ್ಲಿ ಅನ್ಯಾಯವಾಗಿದೆ. Hon'ble Speaker is purposely avoiding my question.

Mr. SPEAKER.—Hon. Member should withdraw the words "purposely avoiding".

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಅಧ್ಯಕ್ಷರ ಮನಸ್ಸಿಗೆ ಏನಾದರೂ ನೋವಾಗಿದ್ದರೆ ನಾನು ಆ ಪದಗಳನ್ನು ವಾಪಸ್ ತೆಗೆದುಕೊಳ್ಳುತ್ತೇನೆ.

Sri G. DUGGAPPA.—Did not Government take a decision previously to release some Amruth Mahal Kaval lands including this piece of land ?

Sri H. V. KOUJALGI.—So far as these lands are concerned, the Government had not taken any such decision.

Institute of Speech and Hearing, Mysore

163. **Sri K. M. THAMMIAH** (Kadur).—

Will the Minister for Social Welfare be pleased to state :—

(*a*) whether there is an Institute called the Indian Institute of Speech and Hearing located at Mysore City ;

(*b*) whether the State Government have given any assistance to the said institute ;

(*c*) if not, whether they intend to give any assistance to the institute, and provide necessary hostel facilities to the immates of the institute since such facilities are not available there ?

Sri V. L. PATIL (Minister for Social Welfare).—

(*a*) Yes. The correct name of the institution is "All India Institute of Speech and Hearing, Mysore."

(*b*) The following assistance has been given by the State Government to this Institute :—

1. It is agreed to upgrade the Associated Specialist Departments at the Mysore Medical College and permitting the Institute to utilise the services of some specialists on a moderate honorarium ;
2. Twenty beds have been sanctioned in the K.R. Hospital, Mysore, for the use of the cases from the Institute which require hospitalisation ;
3. The E. N. T. Department of Mysore Medical College has been upgraded and provisions are being made for microsurgery of the ear to attend to the referrals from this Institute.
4. Facilities have also been provided for establishing a Speech and Hearing Clinic at the K.R. Hospital Out-patients Department with the equipment and staff belonging to the Institute and the Clinic is functioning since February 1969.

(*c*) Does not arise in view of reply to clause (*b*) above.

ಶ್ರೀ ಕೆ. ಎಂ. ತಮ್ಮಯ್ಯ.—ಈ ಸಂಸ್ಥೆ ಮಹಾರಾಜಾಕಾಲೇಜಿನ ಡೈಮಂಡ್ ಜೂಬಿಲಿ ಕಟ್ಟಡದಲ್ಲಿ ಇತ್ತು. ಆ ಕಟ್ಟಡ ಸಾಲದೆ ಇರುವುದರಿಂದ ಬೇರೆ ಕಟ್ಟಡ ಕಟ್ಟಿಕೊಡುವುದಕ್ಕೆ ಸರಕಾರ ಏನಾದರೂ ಪ್ರಯತ್ನ ಮಾಡುತ್ತದೆಯೇ ?

† ಶ್ರೀ ವಿ. ಎಲ್. ಪಾಟೀಲ್.—ಇದು ಕೇಂದ್ರ ಸರಕಾರದ ಸಂಸ್ಥೆಯಾದುದರಿಂದ ಈ ಬಗ್ಗೆ ಸರಕಾರ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಂ. ತಮ್ಮಯ್ಯ.—ಈ ಸಂಸ್ಥೆಗೆ ನೆರೆಹೊರೆಯ ರಾಜ್ಯಗಳಿಂದ ಐದು ಹತ್ತು ವರ್ಷಗಳ ವರೆಗಿನ ಮಕ್ಕಳು ಬರುತ್ತಾರೆ. ಅವರಿಗೆ ವಸತಿ ಸೌಕರ್ಯ ಇಲ್ಲದೆ ಇರುವುದರಿಂದ ಬಡ ಜನರ ಮಕ್ಕಳಿಗೆ ಬಹಳ ಕಷ್ಟವಾಗುತ್ತಾ ಇದೆ. ಆದುದರಿಂದ ಅವರಿಗೆ ಹಾಸ್ಟಲ್ ಕಟ್ಟಿಸಿ ಉಚಿತ ವಸತಿ ಸೌಕರ್ಯ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ವಿ. ಎಲ್. ಪಾಟೀಲ್.—ಆ ಸೂಚನೆ ಪರಿಶೀಲನೆ ಮಾಡಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸರಕಾರದವರು ಫೈನಾನ್ಷಿಯಲ್ ಅಸಿಸ್ಟೆನ್ಸ್ ಮತ್ತು ಮ್ಯಾನೇಜ್‌ಮೆಂಟ್ ಪಾರ್ಟಿಸಿಪೇಷನ್ನಿನಲ್ಲಿ ಏನಾದರೂ ಸಹಾಯ ಮಾಡುತ್ತಿದ್ದಾರೆಯೇ ?

ಶ್ರೀ ವಿ. ಎಲ್. ಪಾಟೀಲ್.—ಫೈನಾನ್ಷಿಯಲ್ ಅಸಿಸ್ಟೆನ್ಸ್ ಸರಕಾರದವರು ಏನೂ ಕೊಡುತ್ತಿಲ್ಲ. ಇದು ಪೂರ್ತಿಯಾಗಿ ಕೇಂದ್ರಸರಕಾರದ ಸಹಾಯದಿಂದ ನಡೆಯುತ್ತಾ ಇದೆ.

ಶ್ರೀ ಎನ್.ಎ. ಚನ್ನೇಗೌಡ.—ಈ ಸಂಸ್ಥೆಗಳಲ್ಲಿ ಎಷ್ಟು ಬಾಲಕರು ಚಿಕಿತ್ಸೆ ಪಡೆಯುತ್ತಿದ್ದಾರೆ ? ಇಲ್ಲಿ ಮೈಸೂರು ರಾಜ್ಯದ ಮಕ್ಕಳಿಗೆ ಗಮನ ಕೊಡದೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವಿ. ಎಲ್. ಪಾಟೀಲ್.—ಅದು ಸರಕಾರದ ಗಮನಕ್ಕೆ ಬಂದಿಲ್ಲ. ಅದು ಕೇಂದ್ರಸರಕಾರದ ಯೋಜನೆ ಆದುದರಿಂದ ಅದನ್ನು ಕೇಂದ್ರಸರಕಾರದವರೇ ನಡೆಸುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಈ ಸಂಸ್ಥೆ ಕೇಂದ್ರಸರಕಾರದ್ದು ಆದರೂ ಪೋಸ್ಟ್ ಗ್ರಾಜುಯೇಟ್ ಕೋರ್ಸ್ ಇರುವುದರಿಂದ ನಮ್ಮ ಸಂಸ್ಥಾನದ ವಿದ್ಯಾರ್ಥಿಗಳಿಗೆ ಎರಡು ಮೂರು ಸೀಟುಗಳನ್ನಾದರೂ ಕೊಡಿಸಿ ಕೊಡುವುದಕ್ಕೆ ಸಾಧ್ಯವಿಲ್ಲವೇ ? ಅವರು ಒಪ್ಪಿದ್ದರೆ ಯಾರನ್ನಾದರೂ ಇದೇ ರೀತಿ ಕಳುಹಿಸಿದ್ದೀರಾ ?

ಶ್ರೀ ವಿ. ಎಲ್. ಪಾಟೀಲ್.—ಈ ಸೂಚನೆಯನ್ನು ಗಮನದಲ್ಲಿಟ್ಟು ಕೇಂದ್ರ ಸರಕಾರದವರ ಜೊತೆ ಪ್ರಯತ್ನ ಮಾಡಬಹುದು.

ಶ್ರೀ ಕೆ. ಎಸ್. ನಾಗರತ್ನಮ್ಮ.—ನಾನು ಮೊದಲು ಒಂದು ಸಾರಿ ಪ್ರಶ್ನೆ ಕಳುಹಿಸಿದಾಗ ಅದು ಕೇಂದ್ರಸರಕಾರದ ಸಂಸ್ಥೆ ಉತ್ತರ ಕೊಡುವುದಕ್ಕಾಗವುದಿಲ್ಲ ಎಂದು ಹೇಳಿದಿರಿ. ಈಗ ತಮ್ಮಯ್ಯನವರಿಗೆ ಉತ್ತರ ಕೊಟ್ಟಿದ್ದೀರಿ. ಅದರ ವಿಚಾರದಲ್ಲಿ ಕೇಳಬೇಕಾದದ್ದು ಬೇಕಾದಷ್ಟು ಇದೆ.

Mr. SPEAKER.—I cannot allow the Hon. Member a second time to put a supplementary. I am following this procedure in order that all members are accommodated in putting supplementaries and also all questions are reached during the question hour.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಸಮಾಜ ಕಲ್ಯಾಣ ಮಂತ್ರಿಗಳು ಸಂಬಂಧಪಟ್ಟ ಖರ್ಚುವೆಚ್ಚಗಳನ್ನು ಕೇಂದ್ರಸರಕಾರದವರು ವಹಿಸಿಕೊಳ್ಳುತ್ತಾರೆ ಎಂದು ಹೇಳಿದರು. ಈಗ ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮುಗಳನ್ನು ರದ್ದು ಮಾಡಿದ್ದಾರೆ. ಇದನ್ನು ಯಾರು ವಹಿಸಿಕೊಳ್ಳುತ್ತಾರೆ ?

ಶ್ರೀ ವಿ. ಎಲ್. ಪಾಟೀಲ್.—ಈ ಸಂಸ್ಥೆಗಳನ್ನು ಪೂರ್ತಿಯಾಗಿ ಕೇಂದ್ರ ಸರಕಾರದವರು ನಡೆಸುತ್ತಿದ್ದಾರೆ. ಎಲ್ಲಾ ಖರ್ಚುವೆಚ್ಚಗಳನ್ನು ಅವರೇ ನೋಡಿಕೊಳ್ಳುತ್ತಿದ್ದಾರೆ. ಅಲ್ಲಿರುವ ಅಸ್ಪತ್ರೆಗೆ ಕೆಲವು ಬೆಡ್ಸ್ ಮತ್ತು ಎಕ್ವಿಪ್‌ಮೆಂಟ್ಸ್ ಕೊಡುತ್ತಿದ್ದಾರೆ.

ಶ್ರೀ ಕೆ. ಎಂ. ತಮ್ಮಯ್ಯ.—ಈ ಸಂಸ್ಥೆಯಲ್ಲಿ ಟ್ರೈನಿಂಗ್ ಕಾಲೇಜು ನಡೆಯುತ್ತಾ ಇದೆ. ಅಲ್ಲಿ ಟ್ರೈನಿಂಗ್ ಆದವರಿಗೆ ಎಲ್ಲಾ ಆಸ್ಪತ್ರೆಗಳಲ್ಲಿ ಕೆಲಸ ಕೊಡಬೇಕೆಂದು ಕೇಂದ್ರಸರಕಾರದ ಆದೇಶ ಬಂದಿದ್ದರೂ ಅವರಿಗೆ ಅಲ್ಲಿ ಕೆಲಸ ಇಲ್ಲದೆ ಇರುವುದರಿಂದ ಗ್ರಾಮಾಂತರದಲ್ಲಿ ಅವರನ್ನು ನೇಮಿಸಿಕೊಳ್ಳಲು ಸರಕಾರ ಪ್ರಯತ್ನ ಮಾಡುತ್ತದೆಯೇ ?

ಶ್ರೀ ವಿ. ಎಲ್. ಪಾಟೀಲ್.—ಈ ತರಹ ಸರ್ಕಾರಕ್ಕೆ ತಿಳಿಸಿದ್ದರೆ ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತಾರೆ.

Posts of Motor Vehicle Inspectors

169. **Sri S. H. PUTTARANGANATH** (Belur).—

Will the Minister for Transport be pleased to state :—

(*a*) whether the full quota reserved for Scheduled Castes and Scheduled Tribes is maintained while filling up the posts of (I.M.V.) Inspector of Motor Vehicles, if not, the action taken so far in this direction ;

(*b*) whether there is a proposal before Government to amend the cadre and recruitement rules in respect of recruitment of Inspectors of Motor Vehiclcs so as to eliminate the selection of Ministerial staff having experience in automobile training for a period of one year ?

Sri MOHAMED ALI (Minister for Transport).—

(*a*) The full quota of posts reserved for Scheduled Castes and Scheduled Tribes has not been filled up. As qualified candidates from Scheduled Castes and Scheduled Tribes were not available, no action could be taken.

(*b*) There is a proposal before Government to amend the Cadre and Recruitment Rules to revise the qualifications prescribed for direct recruitment to the posts of Inspector of Motor Vehicles from the Ministerial cadres.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ್.— ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗಳವರೆಗೆ ಮೀಸಲು ಜಾತಿ ಹುದ್ದೆಗಳ ಪೂರ್ಣ ಕೋಟಾ ಪ್ರಮಾಣವನ್ನು ಭರ್ತಿಮಾಡಿರುವುದಿಲ್ಲ ಎಂದು ಹೇಳಿದಿರಿ. ಹಿಂದೆ 1963ರಲ್ಲಿ ನಿಮ್ಮ ಮೋಟಾರು ವೆಹಿಕಲ್ಸ್ ಡಿಪಾರ್ಟ್‌ಮೆಂಟಿನವರು ಒಂದು ಸರ್ಕುಲರ್ ಹೊರಡಿಸಿ ಕ್ಲಾರ್ಕ್ ಕ್ಯಾಟಗರಿಯಲ್ಲಿ ಇದ್ದವರು ಒಂದು ವರ್ಷದ ಡಿಪ್ಲಮೋ ಕೋರ್ಸ್ ಮಾಡಿದ್ದರೆ ಅಂಥವರಿಗೆ ವೆಹಿಕಲ್ ಇನ್‌ಸ್ಪೆಕ್ಟರ್ ಕೆಲಸ ಕೊಡಿ ಎಂದು ಹೇಳಿದ್ದಾರೆ; ಅಲ್ಲಿ ಸರ್ಟಿಫಿಕೇಟ್ ಕೋರ್ಸ್ ಮಾಡಿ ಪಾಸ್ ಮಾಡಿಕೊಂಡಿರತಕ್ಕ ಅನುಸೂಚಿತ ಜಾತಿಗಳಿರುವುದರಿಂದ ಅವರನ್ನು ಈಗಲಾದರೂ ಆ ಹುದ್ದೆಗಳಿಗೆ ನೇಮಕ ಮಾಡುವಂತೆ ಪರ್ಯಾಲೋಚಿಸುತ್ತೀರಾ ?

Sri MOHAMED ALI.—Yes. The present recruitment rules and the qualifications laid down for motor vehicle inspectors are applicable to all sections.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ್.— ಇತ್ತೀಚೆಗೆ ಇನ್‌ಸ್ಪೆಕ್ಟರ್ ಹುದ್ದೆಗಳಿಗೆ ನೇರವಾಗಿ ನೇಮಕ ಮಾಡುವುದಕ್ಕೆ ವಿಧೇಯಕ ಮಾಡಿದ್ದು ಅರ್ಹತೆಗಳನ್ನು ತಿದ್ದುಪಡಿ ಮಾಡಲಾಗುತ್ತಿದೆಯೆಂದು ಹೇಳಿದ್ದಾರೆ. ಅದನ್ನು ಯಾಕೆ ಪಿ. ಎಸ್. ಸಿ. ಗೆ ಒಳಪಡಿಸಿಲ್ಲ.? ನೀವೇ ಯಾಕೆ ಮಾಡುತ್ತಿದ್ದೀರಿ, ಅದರ ಔಚಿತ್ಯವೇನು ?

Sri MOHAMED ALI.—Sir, first recruitment was made by the P.S.C. in the year 1960 when no qualified persons from scheduled castes and scheduled tribes had applied. Secondly in 1964 the State level recruitment Committee made selections. Incidentally all those who were in ministerial staff and belonging to scheduled castes got appointment as motor vehicle inspectors. I would like to inform the House that only in Bangalore, we have got automobile engineering diploma course and therefore the question of amendment is before the Government. If

(SRI MOHAMED ALI)

further amendment to the Cadre and Recruitment rules is made to enable the mechanical diploma holders to apply, perhaps that will solve the problem and we will be able to provide opportunities to all applicants throughout the State.

ಶ್ರೀ ಎಸ್. ಎಸ್. ಅರಕೇರಿ.—(ಅ) ಪ್ರಶ್ನೆಗೆ ಉತ್ತರವಾಗಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗಳವರಲ್ಲಿ ವಿದ್ಯಾರ್ಹತೆ ಪಡೆದಿರುವ ಅಭ್ಯರ್ಥಿಗಳು ದೊರಕದಿದ್ದುದರಿಂದ ಯಾವ ಕ್ರಮವನ್ನೂ ಕೈಕೊಳ್ಳಲಾಗಲಲ್ಲವೆಂದು ಹೇಳಿದ್ದೀರಿ. ಮೋಟಾರು ವಾಹನಗಳ ಇನ್ಸ್‌ಪೆಕ್ಟರ್ ಹುದ್ದೆಗೆ ಬೇಕಾದ ವಿದ್ಯಾರ್ಹತೆಯನ್ನು ಪಡೆದ ಈ ಜಾತಿಯ ಅಭ್ಯರ್ಥಿಗಳು ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಇದ್ದಾರೆ. ತಾವೇನಾದರೂ ಮೋಟಾರು ವಾಹನಗಳ ಇನ್ಸ್‌ಪೆಕ್ಟರುಗಳ ಹುದ್ದೆಗಳನ್ನು ಭರ್ತಿ ಮಾಡುವ ಮುನ್ನ ಪ್ರತಿಯೊಂದು ಜಿಲ್ಲೆಯಲ್ಲಿರುವ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಆಫೀಸ್‌ಗೆ ಬರೆದು ವಿವರವನ್ನು ತರಿಸಿಕೊಂಡಿದ್ದೀರಾ ?

Sri MOHAMED ALI.—Sir, I have already stated that recruitments were made in the years 1960 and 1964 and after 1964 no recruitment has been made.

Sri G. DUGGAPPA.—Recently, the Corporation had advertised certain posts. May I know how many applications were received for the posts of Motor Vehicle Inspectors and how many of the applicants among them belong to Scheduled Castes and how many of the Scheduled Castes applicants were appointed ?

Sri MOHAMED ALI.—This question relates to the Motor Vehicles Department and not to the Corporation. So far as Corporation is concerned cent per cent reservation has been made, as far as I know. And it is subject to correction, because there were sufficient number of applications. So far as I know cent per cent quota of Scheduled Castes has been filled up.

Mr. SPEAKER.—Question Hour is over.

QUESTIONS FOR ANSWERS ON THE DAY

(but not taken up)

Construction of a Dam or pick up to Maddur Shimsha River

93. **Sri B. DODDABORE GOWDA** (Srirangapatna).—

Will the Minister of State for Minor Irrigation be pleased to state :—

(*a*) whether they are contemplating to construct a dam or pickup to Maddur Shimsha river in Mandya district near Bellur village ;

(*b*) whether by the said pickup all the villages of Halagur hobli also will be benefited ;

(*c*) the amount estimated for the construction of the said pick up ;

(*d*) the extent of land that comes under irrigation ;

(*e*) when the work of the said pick up will be started ;

(*f*) the reasons for the delay in starting the work of the said pickup ?

Sri A. J. DODDAMETI (Minister of State for Minor Irrigation).—

(*a*) No investigation has been made so far in respect of the said project.

(*b*), (*c*), (*d*), (*e*) and (*f*) These questions do not arise in view of the reply to clause (*a*).

Protection to the people from Integrated Areas

104. **Sri D. S. NADKARNI** (Ankola).—

Will the Chief Minister be pleased to state :—

(*a*) whether it is a fact that the Government of Mysore had promised at the time of the Reorganisation of States to the Kannadigas whether they come under official category or Public category that all the facilities they were getting from Bombay Government would be protected ;

(*b*) if so, whether all those facilities they were getting are protected after integration with Mysore State ;

(*c*) if not, the reasons for not protecting ?

Sri VEERENDRA PATIL (Chief Minister).—

(*a*) No.

(*b*) and (*c*) Do not arise in view of reply to clause (*a*).

Construction of General Hostel Building in Pavagada

133. **Sri P. ANJANAPPA** (Pavagada).—

Will the Minister for Education be pleased to state :—

the stage at which the work relating to construction of General Hostel building in Pavagada is pending ?

Sri K. V. SHANKARA GOWDA (Minister for Education).—

For the present there is no scheme regarding the construction of General hostel building in Pavagada before the Government.

Stoppage of new Loans to Primary Land Development Banks in Tumkur District

145. **Sri G. T. GOVINDA REDDY** (Madhugiri).—

Will the Minister for Development be pleased to state :—

(*a*) the percentage of arrears collected and remitted by Primary Land Development Banks in Tumkur District to Central Bank as on June 1969 (Bankwise information may please be given);

(*b*) the Primary Land Development Banks in Tumkur District to which payment of new loans has been stopped by the Central Land Development Bank;

(*c*) whether it is a fact that loans payable under special scheme to Primary Land Development Banks for growing coconut trees have been stopped in respect of some Primary Land Development Banks which have not collected the stipulated percentage of arrears?

Sri P. M. NADGOUDA (Minister for Development).—

(*a*) Statement appended.

(*b*) Except special "Coconut Development Scheme loans", no other types of loans are being given to any of the 10 Banks on account of unsatisfactory recovery position. The Coconut scheme is not in operation in Pavagada Taluk.

(*c*) No.

STATEMENT

Showing the Demand, Collection and Balance of Loan instalments for the year 1968–69 of Primary Land Development Banks in Tumkur District (from members to the P.L.D. Banks).

Sl. No.	Name of the P.L.D. Bank	Demand for the year 1968-69 including arrears	Collection	Balance	Percentage of collection
1	Chicknaikanahalli	6,25,400	3,20,700	3,04,700	51.27
2	Gubbi	5,99,900	2,38,100	3,61,800	39.68
3	Koratagere	3,70,200	1,75,100	1,95,100	47.29
4	Kunigal	6,55,600	1,04,800	5,50,900	15.98
5	Madhugiri	3,67,200	1,76,500	1,90,700	48.06
6	Pavagada	3,29,500	1,54,400	1,75,100	46.85
7	Sira	7,26,400	1,87,200	5,39,200	25.77
8	Tiptur	6,57,200	3,15,400	3,41,800	47.99
9	Tumkur	4,06,300	1,86,600	2,19,700	45.92
10	Turuvekere (as on 15-6-1969)	9,53,000	2,93,500	6,59,500	30.79

Recognition of the Congress (R) as an Opposition Party in the Mysore Legislative Assembly

Mr. SPEAKER.—I have an announcement to make before the Hon'ble House. I have already informed the Hon. House that a party called "Congress–R" has been formed by some of the Members of this House and have named hon. Member Sri H. Sid daveerappa as the Leader of that party and some others as other office-bearers. The strength of the party, according to the list of members duly signed and furnished to me, is 23 members. A common party programme as required under the rules governing this subject of recognition of parties has also been furnished. Therefore, I recognise this party for the time being as the largest single party in opposition and its Leader Sri Siddaveerappa as the Leader of the Opposition, for the time being. I am saying, for the time being, because another list containing about 37 or 38 names of members was also shown to me. But since there was some discrepancy in that list, I did not accept it. If that list is presented again to me along with the relevant information required, I will consider the question of recognising that party also. Now, I request the Secretary to take necessary steps to allot separate block of seats to the members of the Congress–R party and its Leader.

† **Sri VEERENDRA PATIL** (Chief Minister).—As the Chief Minister and the Leader of this House, I would only like to suggest that whatever the Hon. Speaker decides about the Leader of the Opposition, he should be there for some time. If to-day 'X' is the Leader of Opposition, tomorrow 'Y' is the Leader of Opposition and day-after-tomorrow 'Z' is the Leader of Opposition, I do not think it will bring any credit to this House. Since you have already announced your decision, I welcome your decision but at the same time, I hope you will permit me to say that if a permanent or a semi-permanent arrangement is made then it becomes very easy to transact the business of this House.

Mr. SPEAKER.—I may point out that these are very peculiar times and things go on changing from time to time. I had waited for a sufficiently long time to decide this matter. But I cannot wait indefinitely. Therefore I had to make this announcement. If any other party comes forward with sufficient number of members that will also be recognised. I also feel that hon. Members should try to have a stable and organised opposition in the interest of the working of this House. Now my announcement stands.

Sri VEERENDRA PATIL.—Sir, In view of the fact, that you have now announced your decision in the matter, courtesy demands that I, as the Leader of the House, should say something about the outgoing Leader of Opposition; also I have to welcome the new Leader of Opposition. May I have your permission to say something in this behalf ?

Mr. SPEAKER.—Yes.

† **ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).**—ಮಾನ್ಯ ಮುಖ್ಯ ಮಂತ್ರಿಗಳು ಹೇಳುವುದಕ್ಕಿಂತ ಮುಂಚೆ ನಾನು ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಈಗತಾನೇ ತಾವು ಈ ಸಭೆಗೆ ತಿಳಿಸಿದಂತೆ ಏನೊಂದು ಹೊಸಪಕ್ಷ ವಿರೋಧಪಕ್ಷದ ರೂಪದಲ್ಲಿ ಜನ್ಮ ತಾಳಿದೆ ಅದು ಕಾಂಗ್ರೆಸ್ (ಆರ್) ಎಂದು ಹೆಸರನ್ನು ಇಟ್ಟುಕೊಂಡು ಈ ದೇಶದಲ್ಲಿದೆ. ಈ ಒಂದು ದೃಷ್ಟಿಯಿಂದ ಇಂಡಿಕೇಟ್ ಪರವಾಗಿ 23 ಜನಗಳು ಇದ್ದೇವೆ, ನಮ್ಮನ್ನು ಈ ಸಭೆಯಲ್ಲಿ ವಿರೋಧ ಪಕ್ಷ ಎಂದು ಮಾನ್ಯ ಮಾಡಬೇಕು ಎಂದು ಅವರು ತಮಗೆ ಬರೆದಿದ್ದರು. ನಿಯಮದ ಪ್ರಕಾರ ಅವರು ನಾಯಕರು, ಉಪನಾಯಕರು, ವಿಪ್ ಮತ್ತು ಇತರ ಎಲ್ಲಾ ಪದಾಧಿಕಾರಿಗಳನ್ನು ಆರಿಸಿ ನಿಮಗೆ ಒಂದು ಲಿಸ್ಟನ್ನು ಕೊಟ್ಟಮೇಲೆ ಈ ಒಂದು ಪಕ್ಷವನ್ನು ಅಧಿಕೃತ ವಿರೋಧ ಪಕ್ಷ ಎಂದು ಪರಿಗಣಿಸುತ್ತೇವೆ ಎಂದು ತಾವು ಹೇಳಿದ್ದೀರಿ. ಈಗ ವಿರೋಧ ಪಕ್ಷದ ಸ್ಥಾನದಲ್ಲಿ ರೂಪತಾಳಿರತಕ್ಕ ಒಂದು ವಿರೋಧ ಪಕ್ಷ ಏನಿದೆ ಅದರ ಕಾರ್ಯಕ್ರಮ ಇತ್ಯಾದಿಗಳು ತಮಗೆ ಗೊತ್ತಿದೆ, ಆದ್ದರಿಂದ ತಾವು ಅದನ್ನು ಮಾನ್ಯ ಮಾಡಿದ್ದೀರಿ ಎಂದಮಾತ್ರಕ್ಕೇ ಇವೊತ್ತು ಶ್ರೀ ಶಿವಪ್ಪನವರನ್ನು ಈ ಸ್ಥಳದಿಂದ ಕಳುಹಿಸಿಬಿಟ್ಟಿದ್ದೇವೆ, ಆದ್ದರಿಂದ ಅವರನ್ನು ಅಭಿನಂದನೆ ಮಾಡಬೇಕು ಎಂದು ಹೇಳಿದರೆ ಅದು ಅವಸರದ ವಿಷಯವಾಗುತ್ತದೆ. ಅವರು ವಿರೋಧ ಪಕ್ಷದ ನಾಯಕರ ಸ್ಥಾನದಿಂದ ಹೋಗಿಲ್ಲ. ಸಂಯುಕ್ತ ವಿಧಾಯಕ ದಳ ಮತ್ತು ಶಿವಪ್ಪನವರು ಹೋಗಿಲ್ಲ. ಅಲ್ಲಿ ಇದ್ದ ಅಧ್ಯಕ್ಷರಿಗೆ ಉಪನಾಯಕರು ಮತ್ತು ಸಚೇತಕರು ರಾಜಿನಾಮೆಯನ್ನು ಕೊಟ್ಟಿರುವುದರಿಂದ ಹೊಸ ಪರಿಸ್ಥಿತಿ ಉಂಟಾಗಿದೆ. ಹೊಸ ಪರಿಸ್ಥಿತಿಯನ್ನು ಪರಿಶೀಲನೆ ಮಾಡಲು ನಾವು ವಿಧಾನಸಭೆ ಸೇರಿದ ಲಾಗಾಯಿತು ಅನೇಕ ಸಲ ಸೇರಿದ್ದೇವೆ. ಈಒಂದು ಹೊಸಪರಿಸ್ಥಿತಿಯಲ್ಲಿ ಸಂಯುಕ್ತ ವಿಧಾಯಕ ದಳವನ್ನು ಮುಂದುವರಿಸಬೇಕೇ ಅಥವಾ ಬೇಡವೇ ಎನ್ನುವ ಪ್ರಶ್ನೆ ಹುಟ್ಟಿತು.' ಈಗ 3 ವರ್ಷಗಳಿಂದ ತಾವು ಅದಕ್ಕೆ ಅಧಿಕೃತವಾದ ಮಾನ್ಯತೆಯನ್ನು ನೀಡಲಿಲ್ಲ, ಆದರೂ ಅವರನ್ನು ವಿರೋಧ ಪಕ್ಷದ ನಾಯಕರು ಎಂದು ತಾವು ಕರೆಯುತ್ತೀರಿ. ಆದರೆ ಅಧಿಕೃತವಾಗಿ ವಿರೋಧಪಕ್ಷದ ನಾಯಕರು ಎಂದು ರೆಕಾರ್ಡಿನಲ್ಲಿ ಇಲ್ಲ. ಇಂತಿಂಥವರು ನಾಯಕರು ಉಪನಾಯಕರು, ಮತ್ತು ವಿಪ್ ಎಂದು ಹೇಳಿ ಪಟ್ಟಿಯನ್ನು ಕೊಟ್ಟಿಲ್ಲ. ಕಾಂಗ್ರೆಸ್ ಒಡೆದ ಮೇಲೆ ಉಪನಿಯಮವನ್ನು ಹೊಂದಿಸಿಕೊಂಡಿದ್ದೀರಿ ಆ ನಿಯಮದ ಪ್ರಕಾರ ಈಗ ನಾವು ನಾಯಕರು ಉಪನಾಯಕರು ಮತ್ತು ವಿಪ್ ಇತ್ಯಾದಿ ಪದಾಧಿಕಾರಿಗಳನ್ನು ಅರಿಸಿ ಅದರ ಪಟ್ಟಿಯನ್ನು ತಮ್ಮ ಕಡೆಗೆ ಕೊಟ್ಟಮೇಲೆ ಎಸ್. ವಿ. ಡಿ. ಮಾನ್ಯತೆ ಕೊಡುವುದಕ್ಕೆ ಬರುತ್ತದೆ. ಆದ್ದರಿಂದ ನನ್ನ ಕಳಕಳಿಯ ವಿನಂತಿ ಏನೆಂದರೆ ಹೊಸದಾಗಿ ಹುಟ್ಟಿರತಕ್ಕ ವಿರೋಧ ಪಕ್ಷ ಎಂಬ ಹೆಸರಿನಲ್ಲಿ ಕೆಲಸ ಮಾಡತಕ್ಕ ಶ್ರೀಮಾನ್ ಸಿದ್ಧವೀರಪ್ಪನವರ ನಾಯಕತ್ವದಲ್ಲಿ ಇರುವ ಪಕ್ಷಕ್ಕೆ ತಾವು ರೆಕಗ್ನಿಷನ್ ಕೊಟ್ಟಿದ್ದೀರಿ, ನಾನು ಅದಕ್ಕೆ ನನ್ನ ಬೆಂಬಲವನ್ನು ಕೊಡುತ್ತೇನೆ. ಅವರು ವಿರೋಧಪಕ್ಷದಲ್ಲಿರುವುದರಿಂದ ಅವರು ನಮ್ಮ ಜೊತೆಯಲ್ಲಿ ಸಹಕರಿಸಿ ಕೆಲಸ ಮಾಡುತ್ತಾರೆ ಎಂದು ನಾನು ಸ್ಥೂಲವಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳುತ್ತೇನೆ.

ಎರಡನೆಯದು ಈಗ ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿದ ಪ್ರಕಾರ ಇದನ್ನು ಯೋಚನೆ ಮಾಡಿದರೆ ಇದು ಸ್ವಲ್ಪ ತಾಂತ್ರಿಕವಾದ ವಿಷಯ. ಈಗ ಹೊಸದಾಗಿ ಉದ್ಭವಿಸಿರತಕ್ಕ ವಿರೋಧ ಪಕ್ಷ ಎಂಬ ಸಿದ್ಧವೀರಪ್ಪನವರ ನಾಯಕತ್ವದ ಪಕ್ಷಕ್ಕೆ ನಿಯಮದ ಪ್ರಕಾರ ಅಧ್ಯಕ್ಷರು ಮಾನ್ಯತೆಯನ್ನು ಕೊಟ್ಟಿದ್ದಾರೆ. ಆದರೆ ಎಸ್. ವಿ. ಡಿ. ವಿಸರ್ಜನೆಯಾಗಿದೆ ಎಂದು ತಾವು ಹೇಳುವುದಕ್ಕಾಗುವುದಿಲ್ಲ. ಶ್ರೀಮಾನ್ ಶಿವಪ್ಪನವರ ನಾಯಕತ್ವ ಮುಗಿದುಹೋಯಿತು ಎಂದು ತೀರ್ಮಾನ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಎಸ್. ವಿ.ಡಿ. ವಿಚಾರವನ್ನು ನಾನು ಹೇಳಲಿಲ್ಲ. The hon. Member Sri Gopala Gowda is rather unfair to the Chair. I have never made reference to S.V.D. On the contrary I said that some members on behalf of the S. V. D. party showed me a list. But since all the requirements of the rules in this behalf have not been fulfiled I did not accept it. I told the hon. members to present the list together with the relevant information in proper form.

Sri VEERENDRA PATIL.—My impression is that since the Hon. Speaker has just now announced the name of the new Leader of Opposition and for the time being the new Leader of Opposition is

Sri H. Siddavarappa. From today Sri Sivappa is not the Leader of Opposition. As Leader of the House courtesy demands that I should say something.

Mr. SPEAKER.—My friend Sri Gopal Gowda said that S. V. D. list of Members was presented to me. But the signatures of members were not attached; Information regarding common programme, leadership and other requirements was not also supplied. It was true that a request was made for recognising it as an Opposition Party, but that could not be done for the reasons I have already explained. It was no doubt a *de facto* opposition party and Sri S. Sivappa was its *de facto* leader. But Sri S. Sivappa was not recognised as the Leader of the Opposition within the meaning of the rules that are in force.

Sri M. NAGAPPA.—May I know whether *de facto* position is recognised or *de jure* position is recognised ?

Mr. SPEAKER.—*de jure* is recognised and *de facto* is not recognised.

ಶ್ರೀ ಎಸ್. ಗೋಪಾಲಗೌಡ.—ತಾವು ಹೇಳಿದ ಸ್ಪಷ್ಟೀಕರಣವನಂತರ ನಾನು ಒಂದು ಮಾತನ್ನು ಹೇಳಲು ಇಷ್ಟಪಡುತ್ತೇನೆ. ಸಂಯುಕ್ತ ವಿಧಾಯಕ ದಳವನ್ನು ವಿಸರ್ಜನೆ ಮಾಡುವ ಅಧಿಕಾರ ಸಭಾಧ್ಯಕ್ಷರಿಗೆ ಇಲ್ಲ.

Mr. SPEAKER.—I have never said it is dissolved. I simply said it is not recognised.

ಶ್ರೀ ಎಸ್. ಗೋಪಾಲಗೌಡ.—ವಿಸರ್ಜನೆ ಮಾಡುವ ಅಧಿಕಾರ ಸಭಾಧ್ಯಕ್ಷರಿಗೆ ಇಲ್ಲ.

Mr. SPEAKER.—How does that come in when I say I have not done it ?

ಶ್ರೀ ಎಸ್. ಗೋಪಾಲಗೌಡ.—ಯಾರು ಸಂಯುಕ್ತ ವಿಧಾಯಕ ದಳವನ್ನು ಸೃಷ್ಟಿ ಮಾಡಿದರೋ, ರಚನೆ ಮಾಡಿದರೋ ಮತ್ತು ಅದನ್ನು ಒಪ್ಪಿಕೊಂಡಿದ್ದಾರೋ ಅವರೇ ಅದನ್ನು ವಿಸರ್ಜನೆ ಮಾಡಬೇಕೇ ಅಥವಾ ಇಟ್ಟುಕೊಳ್ಳಬೇಕೇ ಎನ್ನುವುದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಅದು ಜೀವಂತವಾಗಿದೆ ಎಂದು ಶ್ರೀಕಂಠಯ್ಯನವರು ಹೇಳಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಲೀಗಲ ಮತ್ತು ಟೆಕ್ನಿಕಲಿ ಯಾರಾದರೂ ಒಬ್ಬರು ಬಿಟ್ಟು ಹೋದರೆ ಅಥವಾ ಇಬ್ಬರು ಬಿಟ್ಟು ಹೋದರೆ ಅಥವಾ 10 ಜನ ಬಿಟ್ಟುಹೋದರೆ ಆ ಅಸೋಸಿಯೇಷನ್ ಡಿಫಂಕ್ಟ್ ಆಗುವುದಿಲ್ಲ; ಅದಕ್ಕೆ ಕ್ರಮ ಇದೆ. ಆ ಕ್ರಮದ ರೀತಿಯಲ್ಲಿ ವಿಸರ್ಜನೆ ಮಾಡಬೇಕಾಗುತ್ತದೆ. ಅಲ್ಲಿಯತನಕ ಅದು ಇದೆ ಎಂತಲೇ ಭಾವಿಸಿಕೊಳ್ಳಬೇಕಾಗುತ್ತದೆ. ಇದು ಕಾನೂನು ರೀತ್ಯ ಇರತಕ್ಕ ವಿಷಯ ಅಂದಮೇಲೆ ನಾನು ಕೂಡ ಒಪ್ಪಿಕೊಂಡಿದ್ದೇನೆ. ಇದನ್ನು ಪುನರುಜ್ಜೀವನ ಹೇಗೆ ಮಾಡಬೇಕು, ನಾಯಕರು ಯಾರು, ಉಪನಾಯಕರು ಮತ್ತು ಸಚೇತಕರು ಯಾರು ಆಗಿರಬೇಕು ಇತ್ಯಾದಿ ಇತ್ಯಾದಿ, ಪದಾಧಿಕಾರಿಗಳ ವಿಷಯದಲ್ಲಿ ವಿಚಾರ ಮಾಡುತ್ತಿದ್ದೇವೆ. ಅದು ತಮ್ಮ ಗಮನಕ್ಕೆ ಬಂದಿದೆ. ನಮಗೆ ಸ್ವಲ್ಪ ಸಮಯಬೇಕು, ನಮ್ಮ ನಾಯಕರು ಇಲ್ಲ, ಇತ್ಯಾದಿ ಇತ್ಯಾದಿ, ತಮ್ಮನ್ನು ಕೇಳಿಕೊಂಡಿದ್ದೇವೆ. ಆದುದರಿಂದ ಸಂಯುಕ್ತ ವಿಧಾಯಕ ದಳವನ್ನು ಇನ್ನೂ ವಿಸರ್ಜನೆ ಮಾಡಿಲ್ಲ. ಒಂದು ಸ್ಪಷ್ಟೀಕರಣ ಏನು ಎಂದರೆ ಮಾನ್ಯ ಸಿದ್ಧವೀರಪ್ಪನವರನ್ನು ತಾವು ಏನು ಹೆಸರಿನಲ್ಲಿ ರೆಕಾಗ್ನೈಸ್ ಮಾಡಿದ್ದರೋ ಗೊತ್ತಿಲ್ಲ. Indicate........

Mr. SPEAKER.—They have assumed the name of Congess (R).

ಶ್ರೀ ಎಸ್. ಗೋಪಾಲಗೌಡ.—ಕಾಂಗ್ರೆಸ್ (ಆರ್) ಪರವಾಗಿ ಅವರು ಮಾತನಾಡಬಹುದು. ಶ್ರೀ ಸಿದ್ಧವೀರಪ್ಪನವರನ್ನು ಕಾಂಗ್ರೆಸ್ಸ್ (ಆರ್) ನ ನಾಯಕರಾಗಿ ಆರಿಸಿದ್ದಾರೆ. ಅದರ ಪರವಾಗಿ ಮಾತನಾಡಲು ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ಇದೆ. ಅದಕ್ಕೆ ನಮ್ಮ ವಿರೋಧವಿಲ್ಲ. ನಮ್ಮಲ್ಲಿ ಅನೇಕ ಪಕ್ಷಗಳು ಇವೆ.

Mr. SPEAKER.—How much time does the hon. Member want ?

ಶ್ರೀ ಎಸ್. ಗೋಪಾಲಗೌಡ.—ನಾನು ಒಂದು ಮಾತು ಹೇಳಿ ಮುಗಿಸುತ್ತೇನೆ. ಕಾಂಗ್ರೆಸ್ (ಆರ್) ನಾಯಕರಾಗಿರುವ ಶ್ರೀ ಸಿದ್ಧವೀರಪ್ಪನವರು ನಮ್ಮಲ್ಲಿ ಇರತಕ್ಕಂಥ ಪಕ್ಷೇತರರ ಅನೇಕ ಪಕ್ಷಗಳ ಸದಸ್ಯರ ಪರವಾಗಿ ಅಥವಾ ಒಟ್ಟು ವಿರೋಧ ಪಕ್ಷದ ಪರವಾಗಿ ನಾಯಕರು ಅಲ್ಲವೆಂದು ಇಷ್ಟು ಹೇಳಿ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ನಾನು ಒಂದು ವಿಷಯ ಅರಿಕೆಮಾಡಿಕೊಳ್ಳಬೇಕೆಂದಿದ್ದೇನೆ. ತಮ್ಮನ್ನು 12–45 ಗಂಟೆಗೆ ನೋಡಿದೆ. ಈ ದಿವಸ ಸಂಯುಕ್ತ ವಿಧಾಯಕ ದಳದ ಜನರಲ್ ಬಾಡಿ ಸೇರಿತ್ತು. ಅದಕ್ಕೆ 38 ಜನರು ಬಂದಿದ್ದರು. ಅಲ್ಲಿ ಮಿನಿಮಮ್ ಪ್ರೋಗ್ರಾಂ ಮತ್ತು ದಳದ ಅಂಗರಚನೆ ಒಪ್ಪಿಕೊಳ್ಳಲಾಯಿತು. ಇದನ್ನು ನಾನು ಮತ್ತು ಶರಣಗೌಡರು ತಮಗೆ ವರದಿ ಮಾಡಿದ್ದೇವೆ. ಇನ್ನು ಪದಾಧಿಕಾರಿಗಳನ್ನು ಯಾರನ್ನೂ ನೇಮಕಮಾಡಲಿಲ್ಲ. ಕಾರಣ ಶ್ರೀ ಶಿವಪ್ಪನವರು ಬರೋಡಾಕ್ಕೆ ಪ್ರಯಾಣಮಾಡಿದ್ದಾರೆ. ಇನ್ನು ಈ ಸಂಬಂಧವಾಗಿ ವಿಷಯ ಹೆಚ್ಚು ಚರ್ಚೆ ಮಾಡುವುದಕ್ಕೆ 12-30 ಗಂಟೆ ಮೀರಿದ್ದರಿಂದ ಆಗಲಿಲ್ಲ. ಯಾವ ಪಕ್ಷದಲ್ಲಿ ಬಹುಮತ ಇದೆಯೋ ಮತ್ತು ಯಾರು ರುಜು ಮಾಡಿ ಕಾರ್ಯಕ್ರಮದ ಅಂಗರಚನೆ ಮತ್ತು ಪದಾಧಿಕಾರಿಗಳನ್ನು ಅರಿಸಿ ತಿಳಿಸುತ್ತಾರೋ ಅಂಥವರನ್ನು ರೆಕಾಗ್ನೈಸ್ ಮಾಡುತ್ತೇವೆ ಎನ್ನುವ ಸರ್ಕ್ಯುಲರ್‌ನ್ನು ಸಭಾಧ್ಯಕ್ಷರು ನಮ್ಮ ಗಮನಕ್ಕೆ ತಂದ ಮೇಲೆ ಈಪೊತ್ತು ಬೆಳಿಗ್ಗೆ ಅದನ್ನೆಲ್ಲಾ ವಿವರಿಸಿ ಹೇಳಿದ್ದೇವೆ. ತಮಗೆ ಈಗಾಗಲೇ ಕನಿಷ್ಟ ಕಾರ್ಯಕ್ರಮ ಮತ್ತು ಅಂಗರಚನೆ ತಿಳಿಸಿದ್ದೇವೆ. ಮೂರು ಗಂಟೆಗೆ ಸಂಯುಕ್ತ ವಿಧಾಯಕ ದಳದ ವಿಶೇಷ ಸಭೆಯನ್ನು ಕರೆದು ಪದಾಧಿಕಾರಿಗಳನ್ನು ಚುನಾಯಿಸುವವರೆಗೆ ತಾವು ಈಗಿರುವ ಪರಿಸ್ಥಿತಿಯನ್ನು ಮುಂದುವರಿಸಬೇಕೆಂದು ಹೇಳಿದರೂ ಕೂಡ ನಾವು ಹೇಳಿದ್ದನ್ನೆಲ್ಲಾ ಉಲ್ಲಂಘಿಸಿ ಈಗ ತಮ್ಮ ನಿರ್ಧಾರವನ್ನು ಅನೌನ್ಸ್ ಮಾಡಿದರೆ ಅದಕ್ಕೆ ನಾನು ಏನು ಹೇಳಲಿ?

2-30 P.M.

Mr. SPEAKER.—The facts as stated by Sri L. Srikantiah are true. I have no preferences personally in this matter. The rules are there and I have to apply them mechanically without using my discretion. Here is a largest single party of 23 persons, and therefore they constitute the main opposition. If Sri Srikantiah were to give a bigger list of members, then that party has got to be recognised under the rules and I have no discretion in the matter. If that party consisted of more than 23 members, then it shall become the main opposition party and all other consequences will follow. That is the position. When Mr. Srikantiah stated this to me, I told him that I have decided to make an announcement to this effect immediately after Question Hour. He requested me that it should be postponed till the evening, till about 3-30 or 4 P.M. But I said, I could not delay any further from making this announcement. However I gave him an assurance that if he were to come with a list complying with all the requirements in proper time before the day's sitting is adjourned, I shall also make another announcement. Therefore, there is no need for any one to be anxious. So far as I am concerned I have no preferences and predilictions. I am here to apply the rules mechanically with respect to all parties and groups in this House.

Mr. Arakeri has made a representation. Probably he is the only member representing the Republican Party. But under the existing rules he cannot be recognised as a party. or a group.

Sri S. S. ARAKERI.—I represent the All India Republican Party which is a democratic party, It is an all-India Party and it is an insult to my party if you say that.

Mr. SPEAKER.—The hon. Member should have some patience. He may be representing an all India Party like the Republican Party and it may be a democratic party. But I am concerned with the position of the party in the House and not outside. For being recognised as a Party, the rule is, there must be a minimum quorum strength; for recognising it as a group, three-fifths of quorum strength *i.e.*, about 13 members are necessary. Parties and groups which cannot muster a strength of 13, cannot function either as a group or a party in the House. Hon. Member may be the leader of a big party. He should cultivate some patience.

Sri M. NAGAPPA.—I could not follow the Speaker when he was pleased to say that Republican Party is not a party.

Mr. SPEAKER.—In the House.

Sri M. NAGAPPA.—I am stating within the House. May I know what is the criteria for constituting a Party? If tomorrow from out of the Congress party 100 members sit on the other side and say they are a party, can you recognise them as a party? I fail to understand the meaning of a Party, whether they have a different ideology, whether they have to have a different symbol or flag?

Mr. SPEAKER.—I am really surprised to hear this question from Sri M. Nagappa. I have given a copy of the rules to the hon. member. He must have studied the rules and followed them, an intelligent lawyer that he is. To state the history in short: Mr. Mavalankar in the year 1950 issued a regulation stating that any group or association of persons who have contested elections outside on the basis of a mani festo or a programme and having the same programme inside the House would be recognised as a Party if they had a quorum strength, for the purpose of proceedings of the House. But then, since 1967 elections, things have changed and various U. F. Government and U. F. Opposition parties have come into existence. The Presiding Officers considered this point and decided that we should not hereafter proceed on the basis of groups or parties who fight elections outside, but on the basis of the number of persons associating themselves in the House with a common programme, with a leadership and organisation and with a requisite quorum strength for a Party or three fifths the quorum strength for a group, and if a list of such members were submitted to the Speaker along with the signatures of Members constituting that party or group; then recognition may be given to such Party or group as the case may be. I am following this procedure. I am not concerned, whether they have a symbol or flag outside the House. I am also not concerned on what mani festo they have contested the election outside. All that is required is that the members should combine themselves into an association and have an organisation with a leader to function in the House.

Sri M. NAGAPPA.—What I want to know......

Mr. SPEAKER.—I have stated my case. That is my ruling. I am not prepared to hear anybody.

(*A number of Members stood up to speak*)

Sri S. S. ARAKERI.—On a point of order, ಅಧ್ಯಕ್ಷರು ಎರಡು ಗಂಟೆಗಳ ಹಿಂದೆ ರಿಪಬ್ಲಿಕನ್ ಪಾರ್ಟಿ ಒಂದು ಪಾರ್ಟಿಯಲ್ಲವೆಂದು ಹೇಳಿದ್ದಾರೆ. ಆ ಪಾರ್ಟಿ ಪೊಲಿಟಿಕಲ್ ಪಾರ್ಟಿ ಅಲ್ಲವೆಂದು ಹೇಳಿದ್ದಾರೆ. ಅದನ್ನು ಪ್ರೊಸೀಡಿಂಗ್ಸ್‌ನಿಂದ ಎಕ್ಸ್‌ಪಂಜ್ ಮಾಡಬೇಕೆಂದು ಹೇಳುತ್ತೇನೆ. ತಾವು ನನ್ನ ಪಾರ್ಟಿಗೆ ಅವಮಾನ ಮಾಡಿದ್ದೀರಿ ಎಂದು ನಾನು ಹೊರಟು ಹೋಗುತ್ತೇನೆ. ವಾಕ್ ಔಟ್ ಮಾಡುತ್ತೇನೆ.

Mr. SPEAKER.—There is no point of order.

(*Sri S. S. Arakeri withdrew*)

[MR. DEPUTY SPEAKER in the Chair)

ಶ್ರೀ ಮಹದೇವ್ ಜಿ. ಬಣಕಾರ್.—ತಾವು ಇಲ್ಲಿಯವರೆಗೂ ಹೇಳಿದ್ದರಲ್ಲಿ ಎರಡು ಮೂರು ಅರ್ಥಗಳು ಬಂತು. ಒಂದು ಕಡೆ ಸಿಂಗಲ್ ಪಾರ್ಟಿಯಾಗಿ 23 ಸದಸ್ಯರುಗಳುಳ್ಳ ಒಂದು ಪಟ್ಟಿ ಕೊಟ್ಟಿದ್ದಾರೆಂದು ಹೇಳಿದ್ದೀರಿ. ಇನ್ನೊಂದು ಕಡೆ ಯುನೈಟೆಡ್ ಫ್ರಂಟ್ ಇನ್ನೂ ರೆಕಗ್ನೈಜ್ ಆಗಲ್ಲವೆಂದು ಹೇಳಿದ್ದೀರಿ. ಮತ್ತೊಂದು ಕಡೆ ಯುನೈಟೆಡ್ ಫ್ರಂಟ್‌ನವರು 3[illegible]–38 ಹೆಸರುಗಳನ್ನು ಕೊಟ್ಟಿದ್ದಾರೆಂದು ಹೇಳಿದ್ದೀರಿ.

ಉಪಾಧ್ಯಕ್ಷರು.—ಅವರು ಹಾಗೆ ಹೇಳಲಿಲ್ಲ.

ಶ್ರೀ ಮಹದೇವ್ ಜಿ. ಬಣಕಾರ್.—ತಾವು ಯಾರನ್ನಾದರೂ ನಾಯಕರನ್ನಾಗಿ ಮಾಡಿ. ಎರಡೂವರೆ ಗಂಟೆಗೆ ಒಬ್ಬರನ್ನು ಡಿಕ್ಲೇರ್ ಮಾಡಿ, ಮೂರೂವರೆ ಘಂಟೆಗೆ ಇನ್ನೊಬ್ಬರನ್ನು ಡಿಕ್ಲೇರ್ ಮಾಡುವುದರಲ್ಲಿ ಅರ್ಥವಿಲ್ಲ. ಇನ್ನೊಂದು ಗಂಟೆಯಲ್ಲಿ ಇದು ತೀರ್ಮಾನವಾಗುವಾಗ ಈ ಸರ್ಕಾರಕ್ಕೆ ಈಗ ಬಂದಿರುವ ಆಪತ್ತಾದರೂ ಏನು ? ನಾಯಕರು ಮಾನ್ಯ ಶ್ರೀ ಶಿವಪ್ಪನವರಾದರೆಂದು ಹೇಳಿದರೇನು ಅಥವಾ ಮಾನ್ಯ ಶ್ರೀ ಸಿದ್ದವೀರಪ್ಪನವರಾದರೆಂದು ಹೇಳಿದರೇನು ? ಇನ್ನು ಒಂದು ಗಂಟೆಯಲ್ಲಿ ಇದು ತೀರ್ಮಾನವಾಗಲಿರುವಾಗ ಈಗ ವಿರೋಧ ಪಕ್ಷಕ್ಕೆ ಅವಮಾನ ಮಾಡುವ ವಿಧಾನವನ್ನು ತಾವು ಅನುಸರಿಸುತ್ತಿದ್ದೀರಿ. ಇದರಿಂದ ವಿರೋಧ ಪಕ್ಷಕ್ಕೆ ಬಹಳ ಅವಮಾನವಾಗುತ್ತದೆ. ನಾಯಕರನ್ನಾಗಿ ಮಾನ್ಯ ಶ್ರೀ ಸಿದ್ಧವೀರಪ್ಪನವರನ್ನೇ ಮಾಡಿ ಅಥವಾ ಯಾರನ್ನಾದರೂ ಮಾಡಿ. ತಾವು ಮೂರುವರೆ ಗಂಟೆಗೆ ಇಲ್ಲಿ ಆ ವಿಚಾರವನ್ನು ಡಿಕ್ಲೇರ್ ಮಾಡಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಮಾನ್ಯ ಉಪಸಭಾಪತಿಯವರೇ, ಅಧ್ಯಕ್ಷರು ತುರ್ತಾಗಿ ಎದ್ದುಕೊಂಡು ಹೋದರು. ನಾನು ಏನೋ ಹೇಳಬೇಕೆಂದಿದ್ದೆ. ಈಗ ಈ ನಮ್ಮ ಎಸ್. ವಿ. ಡಿ. ದಳವು ಮೂರು ವರ್ಷದಿಂದ ಮುಂದುವರಿಯುತ್ತಾ ಇತ್ತು. ಅದನ್ನು ನಡೆಸಿಕೊಂಡು ಬರುತ್ತಿದ್ದೆವು ಮತ್ತು ಅದಕ್ಕೆ ಮಾನ್ಯ ಶಿವಪ್ಪನವರು ನಾಯಕರಾಗಿದ್ದರು ಇವತ್ತು ಒಂದು ಕಡೆ ಇವರು ಸಂಯುಕ್ತ ದಳವನ್ನು ರೆಕಗ್ನೈಸ್ ಮಾಡುವುದಿಲ್ಲವೆಂದು ಹೇಳುತ್ತಾರೆ. ಅದರ ಬಗ್ಗೆ ಒಂದು ವಿಚಾರವನ್ನು ನಾನು ಹೇಳುತ್ತೇನೆ. ಮಾನ್ಯ ಬಣಕಾರರು ಹೇಳಿದ ಹಾಗೆ, ತಾವು ಕಾಂಗ್ರೆಸ್ ಆರ್‌ನ್ನು ಸಿಂಗಲ್ ಲಾರ್ಜೆಸ್ಟ್ ಪಾರ್ಟಿ ಎಂದು ತಿಳಿದುಕೊಂಡು ಒಂದು ತೀರ್ಮಾನಕ್ಕೆ ಬಂದು, ಲೀಡರ್ ಆಫ್ ದಿ ಆಪೋಸಿಶನ್ ಇಂಥವರು ಎಂದು ಹೇಳಿದ್ದೀರಿ. ನಾವು 1967ನೇ ಇಸವಿಯಲ್ಲಿ ಸಭಾಪತಿಯವರಿಗೆ ಒಂದು ಲಿಸ್ಟನ್ನು ಕಳಿಸಿದ್ದೇವೆ. ನಮ್ಮ ಪಾರ್ಟಿಯಲ್ಲಿ 24 ಜನ ಸದಸ್ಯರು ಇದ್ದಾರೆಂದು ಅದಕ್ಕೆ ರುಜು ಹಾಕಿ ಕೊಟ್ಟಿದ್ದೇವೆ. ಈಗ ಈ ಸಿಂಗಲ್ ಪಾರ್ಟಿಯನ್ನು ವಿರೋಧ ಪಾರ್ಟಿ ಎಂದು ಹೇಳುವಾಗ ನಿಮ್ಮ ಪಾರ್ಟಿಯಲ್ಲಿ ಎಷ್ಟು ಜನರಿದ್ದಾರೆ, ಆ ಪಾರ್ಟಿ ಏನಾಯಿತು ಎಂದು ಕೇಳಿಲ್ಲ. ಆ ಪಾರ್ಟಿಗೆ ಆವಾಗ ಏಕೆ ರೆಕಗ್ನಿಶನ್ ಕೊಟ್ಟಿಲ್ಲ? ಈಗ ಈ 23 ಜನರಿರುವ ಸಿಂಗಲ್ ಪಾರ್ಟಿಯನ್ನು ಏಕೆ ರೆಕೊಗ್ನೈಸ್ ಮಾಡಬೇಕಾಗಿತ್ತು? ಈಗ ಇದನ್ನು ತುರ್ತಾಗಿ ಮಾಡುವ ಕಾರ್ಯಕ್ರಮ ಏನು ಇತ್ತು? ಯಾರದೋ ಒತ್ತಡಕ್ಕೆ ಬಲಿಯಾಗಿ ಈ ರೀತಿ ವರ್ತಿಸುತ್ತಿದ್ದಾರೆಂದು ನಾನು ಬಹಳ ವೇದನೆಯಿಂದ ಹೇಳಬೇಕಾಗಿದೆ.

ಉಪಾಧ್ಯಕ್ಷರು.—ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಈಗಲೂ ಆ ಲಿಸ್ಟ್ ಏನಿದೆ, ಅದನ್ನು ಕೊಟ್ಟರೆ ಕನ್ಸಿಡರ್ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಮಹದೇವ್ ಜಿ. ಬಣಕಾರ್.—ತಾವು ಸಿಂಗಲ್ ಲಾರ್ಜೆಸ್ಟ್ ಪಾರ್ಟಿ ಎಂದು ಮಾಡುವುವುದಾದರೆ ನಮ್ಮ ಅಭ್ಯಂತರವಿಲ್ಲ. ಅದರೆ ಪಿ.ಎಸ್.ಪಿ. ಯವರು ಮೊದಲು 24 ಜನ ರುಜು ಹಾಕಿ ಕೊಟ್ಟಿದ್ದಾರೆ. ಅದು ಏನಾಯಿತು? ಎರಡೂವರೆ ಗಂಟೆಗೆ ಒಂದು ಡಿಕ್ಲೇರ್ ಮಾಡಿದಿರಿ ಮತ್ತೆ ನಾಲ್ಕೂವರೆ ಗಂಟೆಗೆ ಒಂದು ಡಿಕ್ಲೇರ್ ಮಾಡುತ್ತೀರಾ?

Sri K. H. PATIL.—A point of order, Sir. The Hon. Speaker has already given his decision. So, this House or any hon member has no right to challenge the decision once given. If they are praying for review; it is a different matter. A decision has been given by the Chair and the House has to respect it. Sri Gopal Gowda and others have elaborately explained their stand. By this representation, the Opposition will have no difficulty. We are all one; we are united whether Sri Siddaveerappa is the Opposition Leader or if even Sri Sivappa is continued as leader of the large party like P.S.P. Our harmony will never be affected; we will be one. We welcome the decision of the Chair and the hon. Members should not be allowed to question that decision.

ಶ್ರೀ ಎನ್. ಎ. ಚನ್ನೇಗೌಡ.—ಅಧ್ಯಕ್ಷರೇ. ಒಂದು ಪಕ್ಷಕ್ಕೆ ಮನ್ನಣೆ ಕೊಡಬೇಕಾದರೆ ಅದಕ್ಕೆ ಒಂದು ಕಾಮನ್ ಪ್ರೋಗ್ರಾಂ ಸಂಖ್ಯಾ ಬಲ ಇರಬೇಕೆಂದು ಹೇಳಿದ್ದಾರೆ. ಅದೇ ಪ್ರಕಾರ ಇಂಡಿಕೇಟ್ ಸಂಖ್ಯಾ ಬಲ ಇದೆಯೆಂದು ಹೇಳುತ್ತಾರೆ. ಕಾಂಗ್ರೆಸ್ (ಆರ್) ಮತ್ತು ಕಾಂಗ್ರೆಸ್ (ಒ) ಇವರೆಡರ ಕನಿಷ್ಟ ಕಾರ್ಯಕ್ರಮ ಒಂದೇ ಆಗಿರುವುದರಿಂದ ಏನು ವ್ಯತ್ಯಾಸ ಇದೆ? ಅದನ್ನು ಬೇರೆ ಪಕ್ಷವೆಂದು ಹೇಳುತ್ತೀರಾ?

ಶ್ರೀ ಬಿ. ಗಂಗಣ್ಣ.—ಈಗ ಅಧ್ಯಕ್ಷರು ಹೇಳಿದ ಪ್ರಕಾರ ಕಾಂಗ್ರೆಸ್ (ಆರ್) ಅಪೊಸಿಶನ್ ಎಂದು ಪರಿಗಣನೆ ಮಾಡಬೇಕು. ಇದು ತಾತ್ಕಾಲಿಕವಾಗಿ ಮಾಡಬೇಕೇ? ಇದನ್ನು ಯಾರು; ನಿರ್ಧಾರ ಮಾಡಬೇಕೆಂದು ಕೇಳುತ್ತೇನೆ?

Mr. DEPUTY SPEAKER.—There is no force in the point of order.

ಶ್ರೀ ಅಜೀಜ್ ಸೇಠ್.—ಈಗ ಕಷ್ಟ ಏನೆಂದರೆ ಕಾಂಗ್ರೆಸ್ (ಆರ್) ಅಂದರೆ ಇಲ್ಲಿನ ಅಪೊಸಿಷನ್ ಪಾರ್ಟಿ. ರೂಲಿಂಗ್ ಪಾರ್ಟಿ ಕಾಂಗ್ರೆಸ್ (ಒ) ನಾವು ಇವರನ್ನು ಕಾಂಗ್ರೆಸ್ ಆರ್) ಎಂದು ಅಡ್ರೆಸ್ ಮಾಡಬೇಕೇ, ಅಥವಾ ಕಾಂಗ್ರೆಸ್ (ಒ) ಎಂದು ಅಡ್ರೆಸ್ ಮಾಡಬೇಕೇ? ಇದರ ಬಗ್ಗೆ ಒಂದು ಕ್ಲಾರಿಫಿಕೇಶನ್ ಮಾಡಬೇಕು.

Sri D B. KALMANKAR.—Sir, there was no hurry for making an announcement. The only question involved is that Samyukta Vidhavak Dal wanted more time to submit its list with other particulars. When that time was being extended for the last 2 or 3 days, there was no necessity for making any hasty announcement. No doubt, Sri K. H. Patil has stated that we in the Opposition are one. We have got the same respect for Sri Siddaveerappa. There was no need to announce the decision because again a decision is going to be taken after one or two hours. By this decision, where was the need to complicate matters? In the interest of the proper functioning of the Opposition, the House may be adjourned for some time. Then only this matter can be settled. At least, one hour's time may be given to settle the things amicably.

Mr. DEPUTY SPEAKER.—The announcement is already made. Why cannot the hon. Member give the list now?

Sri D. B. KALMANKAR.—The P. S. P. has submitted in 1967 a list of 24 members.

Mr. DEPUTY SPEAKER.—Why should the hon. Member worry about the list submitted in 1967 ?

ಶ್ರೀ ಬಿ. ಭಾಸ್ಕರಶೆಟ್ಟಿ.—ಆವಾಗ ರೆಕಗ್ನೈಸ್ಡ್ ಪಾರ್ಟಿ ಎಂದು ಹೇಳಿಲ್ಲ. ಈಗ ಅಷ್ಟು ಆತುರವಾಗಿ ಮಾಡಬೇಕಾದ ಸಂದರ್ಭ ಏನಿತ್ತು ?

(*Interruptions*)

Mr. DEPUTY SPEAKER.—Order, order.

Sri M. RAMAPPA.—Sir, Though a decision is given by the Speaker, it may not be given effect to, for some time if the Opposition members have got a feeling that the decision should have been postponed for some time. With due respect to their feelings, it is better that giving effect to it, is postponed by one hour. If that is the general opinion of the Opposition Members, there is nothing wrong in the Deputy Speaker saying giving effect to the decision will be postponed by one hour.

†ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಹೇಳಿದ್ದನ್ನು ಕೇಳಿದೆ, ಅವರು ಬಹಳ ವಿಚಿತ್ರವಾದ ವಾದ ಹಿಡಿದಹಾಗೆ ಕಾಣುತ್ತದೆ. ಸರ್ಕಾರಗಳು ಒಂದೊಂದು ದಿವಸಕ್ಕೆ ರಚನೆಯಾಗಿರುವುದು 24 ಗಂಟೆ ಕಾಲದಲ್ಲಿ ಹೊಸ ಸರ್ಕಾರ ಬಂದಿರುವುದು ಇಂತಹ ನಿದರ್ಶನ 67ನೇ ಇಸವಿ ಚುನಾವಣೆಯಿಂದ ಈಚೆಗೆ ನಾವು ನೋಡುತ್ತಾ ಇದ್ದೇವೆ. ಅದರಲ್ಲೂ ಇಲ್ಲಿ ಸರ್ಕಾರ ನಡೆಸುತ್ತಾ ಇರತಕ್ಕಂಥ ಪಾರ್ಟಿಗೆ ಸೇರಿದಂತಹ ಸದಸ್ಯರು ಇದನ್ನು ಪೋಸ್ಟ್‌ಪೋನ್ ಮಾಡಿ ಅಂತ ಹೇಳುವ ಹವ್ಯಾಸಕ್ಕೆ ಏಕೆ ಕೈ ಹಾಕಿದರೋ ಅರ್ಥವಾಗುತ್ತಿಲ್ಲ.

Sri M. RAMAPPA.—Sri D. B. Kalmankar said that it may be postponed. I do not say that it should be postponed.

ಶ್ರೀ ಡಿ. ದೇವರಾಜ ಅರಸ್.—ಈಗಾಗಲೇ ಅಧ್ಯಕ್ಷರು ಒಂದು ರೂಲಿಂಗ್ ಕೊಟ್ಟಿದ್ದಾರೆ. ಇನ್ನೊಂದು ಗಂಟೆಗೆ ಬದಲಾವಣೆ ಆಗಬಹುದು. 3 ದಿನದಲ್ಲಿ ಬದಲಾವಣೆ ಆಗಬಹುದು. ಸರ್ಕಾರವೇ ನಾಳೆ ಬದಲಾವಣೆ ಆಗಬಹುದು. ಹೀಗಿದೆ ಹಾಗಿದೆ ಅಂತ ಹೇಳಿ ಇದೆಲ್ಲಾ ಬೇಡ. ರೂಲಿಂಗ್ ಕೊಟ್ಟದ್ದು ಆಗಿದೆ, ಅದನ್ನು ಸ್ವಾಗತ ಮಾಡಬೇಕಾದ್ದು ನಮ್ಮ ಕರ್ತವ್ಯ. ನಾಳೆ ದಿವಸ ಮತ್ತೊಂದು ಪಾರ್ಟಿ ಸೇರಿ ನಾವು ಒಂದು ಪಾರ್ಟಿ ಅಂತ ಹೇಳಿದಾಗ ಅದನ್ನು ಯಾವ ರೀತಿ ಪರಿಗಣನೆ ಮಾಡಬೇಕೋ ಆ ರೀತಿ ಮಾಡುತ್ತಾರೆ. ಈಗ ಅಧ್ಯಕ್ಷರು ಕಾನೂನಿನ ಚೌಕಟ್ಟಿನೊಳಗೆ ಅವರ ಕರ್ತವ್ಯವನ್ನು ನಡೆಸಿದ್ದಾರೆ, ಈ ವಿಚಾರದಲ್ಲಿ ವ್ಯಾಖ್ಯಾನ ಅಗತ್ಯವಿಲ್ಲ ಎಂದು ನನ್ನ ಭಾವನೆ. ಇದನ್ನು ಪೋಸ್ಟ್‌ಪೋನ್ ಮಾಡುವುದು ಅರ್ಥವಿಲ್ಲದ ಮಾತು ಆದೀತು. ಸಾಯಂಕಾಲ ಮಾಡಬೇಕು, ಇನ್ನೂ ಬೇರೆಯವರು ಸೇರಬಹುದು, 35 ಜನ ಆಗಬಹುದು ಎಂದರೆ 35 ಅಲ್ಲ 40 ಜನ ಆಗಲಿ. ನಾಳೆ ಬೇರೆ ಇನ್ನೊಂದು ಅನೌನ್ಸ್‌ಮೆಂಟ್ ಮಾಡಲಿ, ಕಾನೂನು ರೀತ್ಯ ನಡೆಯೋಣ. ಶ್ರೀಮಾನ್ ಗೋಪಾಲಗೌಡರು ನಮ್ಮ ಪಾರ್ಟಿ ಅಭಿಪ್ರಾಯಗಳಿಗೆ ಅವರು ಲೀಡರ್ ಆಗಿ ಹೇಳುವುದು ಸಾಧ್ಯವಿಲ್ಲ ಎಂದು ಹೇಳಿದರು. ಕಾಂಗ್ರೆಸ್ (ಆರ್) ಪರವಾಗಿ ಅವರು ವಿರೋಧ ಪಕ್ಷದ ನಾಯಕರು ಆಗಬೇಕೆಂದು ಹೇಳಿದ್ದಾರೆಯೇ ಹೊರತು ಎಲ್ಲರ ಪರವಾಗಿ ಮಾತನಾಡುತ್ತಾರೆ ಎಂಬ ಮಾತನ್ನು ಯಾರೂ ಹೇಳುವುದಕ್ಕೆ ಹೋಗಿಲ್ಲ. ಮತ್ತೆ ಕೆಲವು ಮಿತ್ರರು ಹೇಳುತ್ತಾರೆ, ಕಾಮನ್ ಸಿಂಬಲ್ ಇದೆಯೇ, ಪ್ರೋಗ್ರಾಂ ಇದೆಯೇ ಅಂತ. ಇದು ಒಂದು ದೊಡ್ಡ ವ್ಯಾಖ್ಯಾನವೇ ಆಗಬಹುದು. ಎಸ್. ವಿ. ಡಿ. ಅನ್ನುವುದಕ್ಕೆ ಪ್ರತಿಯೊಂದಕ್ಕೂ ಸಿಂಬಲ್ ಇದೆಯೇ, ಪ್ರತಿಯೊಂದಕ್ಕೂ ಪ್ರೋಗ್ರಾಂ ಇದೆಯೇ ಎಂಬುದನ್ನೂ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ ದಯಮಾಡಿ ಮುಂದಿನ ಕಾರ್ಯಗಳನ್ನು ನಡೆಸುವುದು ಸೂಕ್ತ ಎಂಬುದು ನನ್ನ ವಿನಂತಿ.

†ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಉಪಸಭಾಧ್ಯಕ್ಷರೇ, ಅಧ್ಯಕ್ಷರು ಇದೀಗ ಸ್ವಲ್ಪ ಸಮಯದ ಮುಂಚೆ ಈ ಮಾನ್ಯ ಸಭೆಯ ವಿರೋಧ ಪಕ್ಷದ ನಾಯಕರು ಈ ಗಳಿಗೆಯಿಂದ ಶ್ರೀಮಾನ್ ಸಿದ್ಧವೀರಪ್ಪನವರು ಆಗಿರುತ್ತಾರೆ ಅನ್ನುವಂತಹ ಒಂದು ನಿರ್ಣಯ ನೀಡಿದ್ದಾರೆ. ಮತ್ತು

ನಾನು ಕಳೆದ ಸುಮಾರು ಒಂದೂ ಕಾಲು ವರ್ಷದಿಂದ ಈ ಮಾನ್ಯ ಸಭೆಯ ನಾಯಕನಾಗಿ ಕೆಲಸ ಮಾಡುತ್ತಾ ಇದ್ದೇನೆ, ಈ ನಿರ್ಣಯದ ಪ್ರಕಾರ ಈ ಗಳಿಗೆಗೆ ಶ್ರೀಮಾನ್ ಶಿವಪ್ಪನವರು ವಿರೋಧ ಪಕ್ಷದ ನಾಯಕರು ಅಲ್ಲ. ಅವರಿಗೆ ಬದಲಾಗಿ ಅವರ ಸ್ಥಳದಲ್ಲಿ ಶ್ರೀಮಾನ್ ಸಿದ್ಧವೀರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದಾರೆ. ಈ ಸಭೆಯ ನಾಯಕನಾಗಿ ಶ್ರೀಮಾನ್ ಶಿವಪ್ಪನವರ ಬಗ್ಗೆ ಕೆಲವು ಮಾತುಗಳನ್ನು ಹೇಳುವುದು ಅವಶ್ಯಕ. ಇದೇ ರೀತಿಯಿಂದ ಹೊಸದಾಗಿ ವಿರೋಧ ಪಕ್ಷದ ನಾಯಕರಾದ ಸಿದ್ಧವೀರಪ್ಪನವರ ಬಗ್ಗೆ ಕೂಡ ಕೆಲವು ಮಾತುಗಳನ್ನು ಹೇಳುವುದು ನನ್ನ ಧರ್ಮ, ನನ್ನ ಕರ್ತವ್ಯ ಎಂದು ತಿಳಿದುಕೊಂಡು ಎದ್ದು ನಿಂತಿದ್ದೇನೆ.

ಮಾನ್ಯ ಉಪಾಧ್ಯಕ್ಷರೇ, ತಮಗೆ ಗೊತ್ತಿದೆ, ಕಳೆದ 8 ವರ್ಷಗಳಿಂದ ಈ ಮಾನ್ಯ ಸಭೆಯಲ್ಲಿ ಶ್ರೀಮಾನ್ ಶಿವಪ್ಪನವರು ವಿರೋಧ ಪಕ್ಷದ ನಾಯಕರಾಗಿ ಒಳ್ಳೆಯ ಕಾರ್ಯಗಳನ್ನು ಮಾಡುತ್ತಾ ಬಂದಿದ್ದಾರೆ. ಅವರು ಪ್ರಜಾಸೋಷಿಯಲಿಸ್ಟ್ ಪಕ್ಷದ ಅಧ್ಯಕ್ಷರು ಮತ್ತು ನಾಯಕರಾಗಿದ್ದರು, ವಿರೋಧ ಪಕ್ಷದ ನಾಯಕರು ಅಂತ ನಾವೆಲ್ಲರೂ ಒಪ್ಪಿಕೊಂಡು ಈ ಸಭೆಯಲ್ಲಿ, ಈ ಮನೆಯಲ್ಲಿ ಕೆಲಸಕಾರ್ಯಗಳನ್ನು ಮಾಡುತ್ತಾ ಇದ್ದೇವೆ. ಅವರು ಎಸ್. ವಿ. ಡಿ. ನಾಯಕರಾಗಿದ್ದಾರೆ. ಡಿಫ್ಯಾಕ್ಟೋ ನಾಯಕರಾಗಿದ್ದಾರೋ, ಡಿಜ್ಯೂರ್ ನಾಯಕರಾಗಿದ್ದಾರೋ ಅದು ಪ್ರಶ್ನೆಯಲ್ಲ. ನಾನು ಇವತ್ತು ಆ ಪ್ರಶ್ನೆಗೆ ಹೋಗುವುದು ಅಷ್ಟು ಸರಿಯಲ್ಲ ಎಂದು ನನಗನಿಸುತ್ತದೆ. ಕಳೆದ 8 ವರ್ಷಗಳಿಂದ ಅವರ ಜೊತೆಯಲ್ಲಿ ಅನೇಕ ಸಲ ಕಾರ್ಯಕಲಾಪಗಳನ್ನು ಮಾಡುವಂತಹ ಅವಕಾಶ ಸಿಕ್ಕಿದೆ. ಈಗಾಗಲೇ ಹೆಚ್ಚು ಸಮಯವಾಗಿರುವುದರಿಂದ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಬಹಳಷ್ಟು ಅಭಿಮಾನದಿಂದ, ಸಂತೋಷದಿಂದ ಈ ಮಾತು ಹೇಳಬಲ್ಲೆ, ಕಳೆದ 8 ವರ್ಷಗಳಿಂದ ಶ್ರೀಮಾನ್ ಶಿವಪ್ಪನವರು ವಿರೋಧಪಕ್ಷದ ನಾಯಕರಾಗಿ ಒಳ್ಳೆಯ ನಾಯಕರಾಗಿ, ಉತ್ಕೃಷ್ಟವಾದ ಸೇವೆ ಸಲ್ಲಿಸಿದ್ದಾರೆ. ಈ ಮನೆಯ ಕಾರ್ಯಕಲಾಪಗಳನ್ನು ನಡೆಸುವುದರಲ್ಲಿ ಬಹಳಮಟ್ಟಿಗೆ ಅವರು ಸಹಕರಿಸಿದ್ದಾರೆ. ಮತ್ತು ಈ ಮನೆಯ, ಸಭೆಯ ಘನತೆ, ಗೌರವ ಎತ್ತಿ ಹಿಡಿಯುವುದಕ್ಕೆ ತಮ್ಮ ವಿಶ್ವಪ್ರಯತ್ನ ಮಾಡಿದ್ದಾರೆ. ಅವರ ಬಗ್ಗೆ ಇವತ್ತು ಈ ವಿಚಾರಗಳನ್ನು ಹೇಳುತ್ತೇನೆ ಅಂತ ಅಲ್ಲ. ಹೊರಗಡೆಯೂ ಕೂಡ ನಾನು ಅನೇಕ ಸಲ ಇವತ್ತು, ನಮ್ಮ ರಾಜ್ಯದಲ್ಲಿ ಒಬ್ಬ ವಿರೋಧಪಕ್ಷದ ನಾಯಕರು ಇದ್ದಾರೆ ಅನ್ನುವಂತಹ ವಿಚಾರವನ್ನು ಹೇಳಿದ್ದೇನೆ. ಅವರು ವಿದೇಶ ಪ್ರವಾಸ ಮಾಡುವ ಮುಂದೆಯೂ ಕೂಡ ಅವರ ಗೌರವಾರ್ಥವಾಗಿ ಏರ್ಪಡಿಸಿದ ಔತಣ ಕೂಟದಲ್ಲೂ ಅವರಲ್ಲಿದ್ದ ಗುಣದ ಬಗ್ಗೆ, ಅವರಿಂದ ಏನು ನಮ್ಮ ರಾಜ್ಯಕ್ಕೆ ಆಶೋತ್ತರಗಳು ಇವೆ, ಇದೆಲ್ಲಾ ವಿಚಾರಗಳನ್ನು ಹೇಳಿದ್ದೇನೆ. ಅವರು ಬಹಳಮಟ್ಟಿಗೆ ನಮ್ಮ ಜೊತೆಯಲ್ಲಿ ಸಹಕಾರಮಾಡಿದ್ದಾರೆ. ಅನೇಕ ಸಲ ಇದೇ ಮನೆಯಲ್ಲಿ ಬಿಸಿ ಬಿಸಿ ಚರ್ಚೆಯಾಗಿದೆ. ಬಹಳಷ್ಟು ಜೋರಾಗಿ ಮಾತಾನಾಡಿದ್ದಾರೆ. ವಿರೋಧ ಪಕ್ಷದ ನಾಯಕರಾಗಿ ಏನು ಕರ್ತವ್ಯ ನಿರ್ವಹಣೆ ಮಾಡಬೇಕಾಗಿತ್ತೋ ಅದೆಲ್ಲಾ ಮಾಡಿದ್ದಾರೆ. ಅದರ ಜೊತೆಯಲ್ಲಿ ಈ ಮಾನ್ಯ ಸಭೆಯ ಘನತೆ, ಗೌರವಗಳನ್ನು ಮತ್ತು ಯಾವ ಪಕ್ಷವನ್ನು ಅವರು ಪ್ರತಿನಿಧಿಸುತ್ತಾ ಇದ್ದಾರೋ ಅದರ ಘನತೆ, ಗೌರವಗಳನ್ನು ಎತ್ತಿ ಹಿಡಿಯುವುದಕ್ಕೆ ಅವರು ಬಹಳಮಟ್ಟಿಗೆ ಪ್ರಯತ್ನ ಮಾಡಿದ್ದಾರೆ. ಅದಕ್ಕೆ ಇವತ್ತು ಈ ಸಭೆಯ ನಾಯಕನಾಗಿ ಅವರ ಬಗ್ಗೆ ಈ ಕೆಲವು ವಿಚಾರಗಳನ್ನು ಹೇಳಬೇಕಾದ್ದು ಅವಶ್ಯಕ ಅಂತ ತಿಳಿದುಕೊಂಡು ನಾನು ಹೇಳಿದ್ದೇನೆ.

ಇನ್ನು ಹೊಸದಾಗಿ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಸಿದ್ಧವೀರಪ್ಪನವರ ಬಗ್ಗೆ. ಅವರು ವಿರೋಧ ಪಕ್ಷದ ನಾಯಕರಾಗಿರುವಂಥದ್ದನ್ನು ನಾನು ಸಹೃದಯದಿಂದ ಸ್ವಾಗತಿಸುತ್ತೇನೆ. ನಾನು ಮೊನ್ನೆ ನನ್ನ ಉತ್ತರದಲ್ಲಿ ಹೇಳುತ್ತಾ ಇದ್ದೆ ಅವರು ಹಿರಿಯರು ಇದ್ದಾರೆ, ಅವರಿಗೆ ನನ್ನಷ್ಟೇ ವಯಸ್ಸಿನವರು ಮಕ್ಕಳು ಇದ್ದಾರೆ. ಅವರು ವಯಸ್ಸಿನಲ್ಲಿ ಹಿರಿಯರು ಅಷ್ಟೇ ಅಲ್ಲ, ಸಾಕಾದಷ್ಟು ಅನುಭವಿಕರೂ ಆಗಿದ್ದಾರೆ. ಸರ್ಕಾರದ ಕಾರ್ಯಗಳನ್ನು, ಕಾರ್ಯಭಾರಗಳನ್ನು ನಿರ್ವಹಿಸಿಕೊಂಡು ಕೆಲಸ ಮಾಡಿದಂತಹ ಸಾಕಾದಷ್ಟು ಅನುಭವ ಅವರಿಗೆ ಇದೆ. ಈ ಸರ್ಕಾರ ನಡೆಸಬೇಕಾದರೆ ಏನು ಕಷ್ಟಗಳು ಬರುತ್ತವೆ, ಸರ್ಕಾರದ ಮುಂದೆ ಇರತಕ್ಕ ಜವಾಬ್ದಾರಿ ಎಷ್ಟು ಕಟುತರವಾದದ್ದು ಎಂಬ ಅರಿವು ಅವರಿಗೆ ಸಂಪೂರ್ಣವಾಗಿದೆ. ಅವರು ವಿರೋಧ ಪಕ್ಷದ ನಾಯಕರಾಗಿ ನನಗೆ ಸಂಪೂರ್ಣ ಸಹಕಾರ ನೀಡುತ್ತಾರೆ ಎಂಬ ಭರವಸೆ ನನಗೆ ಇದೆ. ಮತ್ತು ಈ ಸಭೆಯ ನಾಯಕನಾಗಿ ಮತ್ತು ಮುಖ್ಯಮಂತ್ರಿಯಾಗಿ ಅವರಿಗೂ ಕೂಡ ಸಂಪೂರ್ಣ ಸಹಕಾರ ನೀಡುವಂತಹದು ನನ್ನ ಧರ್ಮ, ನನ್ನ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇವೆ. ನಾವೆಲ್ಲರೂ ಸೇರಿ ಈ ಮಾನ್ಯ ಸಭೆಯ ಕಾರ್ಯಕಲಾಪಗಳು ಸುಗಮವಾಗಿ ಸಾಗುವಂತೆ, ಈ ಮಾನ್ಯ ಸಭೆಯ ಗೌರವ, ಪ್ರತಿಷ್ಠೆ, ಉಳಿಸಿಕೊಳ್ಳುವುದು ಅಷ್ಟೆ ಅಲ್ಲ ಬೆಳೆಸಿಕೊಂಡು ಹೋಗುವಂತಹ ಪ್ರಯತ್ನ ಮಾಡಬೇಕೆಂದು ಹೇಳಿ ಇವತ್ತು ಮಾನ್ಯ ಸಿದ್ಧವೀರಪ್ಪನವರನ್ನು ತುಂಬಿದ ಹೃದಯದಿಂದ ಸ್ವಾಗತಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

3-00 P. M.

†ಶ್ರೀ ಎಚ್. ಸಿದ್ಧವೀರಪ್ಪ.—ಮಾನ್ಯ ಉಪಾಧ್ಯಕ್ಷರೇ, ಇರುವರೆಗೂ ನಡೆದಂಥ ಕಾರ್ಯಕಲಾಪಗಳನ್ನು ನೋಡಿ ಅನೇಕ ಭಾವನೆಗಳು ನನ್ನಲ್ಲಿ ಮೂಡಿವೆ. ಒಂದು ವಿಚಾರವನ್ನು ಹೇಳುತ್ತೇನೆ. ನಾನು ಯಾವತ್ತಿಗೂ ಯಾವ ಸ್ಥಾನವನ್ನಾಗಲಿ ಎಂದೂ ಅಪೇಕ್ಷೆ ಪಟ್ಟವನಲ್ಲ. ಅದಾಗಿ ಬಂದ ಕೆಲಸವನ್ನು ನನ್ನ ಶಕ್ತಿ ಮೀರಿ ಮಾಡಲಿಕ್ಕೆ ಪ್ರಯತ್ನ ಪಟ್ಟಿದ್ದೇನೆಂದು ಅಷ್ಟು ಹೇಳುತ್ತೇನೆ ಈ ಹೊತ್ತಿನ ದಿವಸ ನಾನೇನೂ ವಿರೋಧ ಪಕ್ಷದ ನಾಯಕನನ್ನಾಗಿ ಮಾಡಿ ಎಂದು ಯಾರನ್ನೂ ಕೇಳಲಿಲ್ಲ. ನಮ್ಮ ಪಕ್ಷದವರು ನನ್ನನ್ನು ನಾಯಕನನ್ನಾಗಿ ಆರಿಸಿದಾಗ ನಾನು ಅಧ್ಯಕ್ಷರಿಗೆ ಬರೆಯುವುದಕ್ಕೆ ಕಾರಣವಾಯಿತು. 19ನೇ ತಾರೀಖು ನಮ್ಮ ಸಭೆಯಲ್ಲಿ ತೀರ್ಮಾನವಾದ ಮೇರೆಗೆ 20ನೇ ತಾರೀಖು ನಾನು ಅಧ್ಯಕ್ಷರಿಗೆ ಒಂದು ಕಾಗದ ಬರೆದು, ಈ ರೀತಿ ನಮ್ಮದು ಒಂದು ಪಕ್ಷ ನನ್ನನ್ನು ನಾಯಕನನ್ನಾಗಿ ಆರಿಸಿದ, ಇಷ್ಟು ಜನ ಸದಸ್ಯರಿದ್ದಾರೆ ಎಂದು ತಿಳಿಸಿದ ಮೇಲೆ ಇನ್ನೂ ಕೆಲವು ಕಾರ್ಯಕ್ರಮ ಕೇಳಿದರು. ಅದನ್ನೆಲ್ಲ 21ನೇ ತಾರೀಖು ಕೊಟ್ಟೆ. ಆಮೇಲೆ ಇಲ್ಲಿಯವರೆಗೂ ನೀವು ಮಾಡಿ, ಈ ಹೊತ್ತೇ ಮಾಡಿ, ಈಗಲೇ ಮಾಡಿ ಎನ್ನತಕ್ಕ ಒತ್ತಡವನ್ನು ನಾವು ಯಾವತ್ತಿಗೂ ತರಲಿಲ್ಲ. ನನಗೆ ಗೊತ್ತಿತ್ತು ಏನು ನಡೆಯುತ್ತಿದೆ ಎಂದು ನನ್ನ ಕೆಲವು ಹಿರಿಯರು ಸ್ನೇಹಿತರಾದ ಗೋಪಾಲಗೌಡರು ಮತ್ತು ಇತರ ಸ್ನೇಹಿತರು ಸಂಯುಕ್ತ ವಿಧಾಯಕ ದಳವನ್ನು ಮಾಡಬೇಕೆಂಬ ಪ್ರಯತ್ನದಲ್ಲಿದ್ದಾರೆಂದು ತಿಳಿದು ನಾನು ಇದನ್ನು ಒತ್ತಾಯ ಮಾಡದೆ ಸುಮ್ಮನೆ ಇದ್ದೆ. ಕಾರಣವೇನೆಂದರೆ ನನ್ನನ್ನು ನಾಯಕನನ್ನಾಗಿ ಆರಿಸುವುದು ಒಂದು ಪಕ್ಷ. ಆ ಪಕ್ಷಕ್ಕೆ ನಾನು ನಾಯಕನೇ ಹೊರತು ಬಾಕಿಯವರಿಗೆ ನಾಯಕನಲ್ಲ, ಆ ರೀತಿಯಿಂದ ನಾನು ಹೇಳಿಕೊಳ್ಳಲೂ ಇಲ್ಲ. ಇದನ್ನು ಮಾನ್ಯ ದೇವರಾಜ ಅರಸ್ ಅವರು ಸ್ಪಷ್ಟೀಕರಿಸಿದ್ದಾರೆ. ಆ ಮೇಲೆ ಈ ಹೊತ್ತಿನ ದಿವಸ ಕೆಲವರು ತಿಳಿದುಕೊಂಡಿರಬಹುದು, ವಿರೋಧ ಪಕ್ಷದಲ್ಲಿ ಏನೂ ಸಾಧನೆ ಮಾಡಲಾರದೆ ನಾವು ಹೊಸ ಪಕ್ಷದವರು ಈ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಎಂದು. ಈಗ ನಡೆದಂಥ ಪ್ರತಿಕ್ರಿಯೆಯಿಂದ ನನ್ನ ಮನಸ್ಸಿಗೆ ನೋವಾಗಿರುವಷ್ಟು ಇನ್ನು ಯಾರ ಮನಸ್ಸಿಗೂ ಆಗಿರಲಾರದು. ಕಳೆದ ಮೂರು ವರ್ಷಗಳಿಂದ ವಿರೋಧ ಪಕ್ಷವನ್ನು ಸಂಘಟಿಸಿ ಅದನ್ನು ಡಿಜೂರ್ ಎಂದು ಕರೆಯಿರಿ, ಡೀಫ್ಯಾಕ್ಟೋ ಎಂದು ಕರೆಯಿರಿ, ಅದು ಒಂದು ವಿರೋಧ ಪಕ್ಷವಾಗಿ ಕೆಲಸ ಮಾಡಿಕೊಂಡು ಬಂತು ಶ್ರೀಮಾನ್ ಶಿವಪ್ಪನವರು ಅತ್ಯಂತ ಮಾನ್ಯ ಸ್ನೇಹಿತರು, ಬಹಳ ವರ್ಷಗಳಿಂದ ಅವರನ್ನು ಬಲ್ಲೆ. ನಾನು ಹಿಂದೆ ಒಂದು ಸಾರಿ ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದಂತೆ 'he is a perfect gentlemen' ಇದರಲ್ಲಿ ಅನುಮಾನವಿಲ್ಲ. ಯೂನಿವರ್ಸಿಟಿ ಸಿಂಡಿಕೇಟಿನಲ್ಲಿ ಅವರ ಜೊತೆಗೆ ಕೆಲಸ ಮಾಡಿದ್ದೇನೆ. ಕಳೆದ ಮೂರು ನಾಲ್ಕು ದಿವಸಗಳಿಂದಲೂ ಅವರಿಗೆ ಹೇಳಿದೆ, ಈಗ ಯಾರಾದರೂ ನಿಮ್ಮನ್ನು ನಾಯಕರನ್ನಾಗಿ ಆರಿಸಿದರೆ ನನಗೆ ಆಗತಕ್ಕ ಸಂತೋಷ ಇನ್ನು ಯಾರಿಗೂ ಆಗುವುದಿಲ್ಲ. ಒಂದುವೇಳೆ ಶ್ರೀಮಾನ್ ಗೋಪಾಲಗೌಡರು ಅಥವಾ ಶಿವಪ್ಪನವರು ನಾಯಕರು ಎಂದು ಹೇಳಿದ್ದರೆ ನಾನು ತುಂಬಿದ ಹೃದಯದಿಂದ ಸ್ವಾಗತಿಸುತ್ತಿದ್ದೆ. ಏತಕ್ಕೋಸ್ಕರ ಈ ಮಾತು ಹೇಳುತ್ತೇನೆಂದರೆ ವಿರೋಧ ಪಕ್ಷದವರಾದ ನಮ್ಮೆಲ್ಲರ ಮೇಲೂ ಒಂದು ಜವಾಬ್ದಾರಿ ಇದೆ. ಈ ಹೊತ್ತು ನಾವೆಲ್ಲರೂ ಒಗ್ಗಟ್ಟಾಗಿ ಒಂದು ಕೆಲಸವನ್ನು ಮಾಡುವುದಕ್ಕೆ ಕಷ್ಟವಿರಬೇಕಾದರೆ, ಅನೇಕ ಕಾರಣಗಳಿಂದ ಇಲ್ಲಿ ಬಹು ವಿಧವಾದ ರಾಜಕೀಯ ಪಕ್ಷಗಳು ಇವೆ. ಭಿನ್ನಭಾವನೆಗಳು ಇರುವಂಥ ಪಕ್ಷಗಳು ಇರುವ ಕಡೆಗಳಲ್ಲಿ ಪೋಲರೈಸೇಷನ್ ಆಫ್ ಪಾರ್ಟೀಸ್ ಎಂದು ಮಾಡಿಕೊಂಡು ಒಂದೇ ರೀತಿಯ ಕಾರ್ಯಕ್ರಮವನ್ನು ಹೊಂದಿರುವ ಜನ ಹೆಚ್ಚು ಹೆಚ್ಚಾಗಿ ಒಂದು ಗುಂಪಾಗಿ ಆಗುತ್ತ ಹೋಗುವುದು ಪ್ರಜಾಪ್ರಭುತ್ವಕ್ಕೆ ಒಳ್ಳೆಯದು ಎಂದು ಈ ದೇಶದಲ್ಲಿರುವ ರಾಜಕಾರಣಿಗಳೆಲ್ಲರೂ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದು ದೇಶದಲ್ಲಿ ಎಲ್ಲ ಕಡೆಯೂ ನಡೆಯುತ್ತಿದೆ ಇಡೀ ನಮ್ಮ ರಾಜ್ಯದಲ್ಲಿ, ಹಿಂದೂಸ್ಥಾನದಲ್ಲಿ ಎಲ್ಲ ಕಡೆಯಲ್ಲಿ ಇಂಥ ಪರಿಸ್ಥಿತಿಯನ್ನು ನಾನು ನೋಡುತ್ತಿದ್ದೇವೆ.

ಶ್ರೀಮಾನ್ ಗೋಪಾಲಗೌಡರು ಒಂದು ಮಾತು ಹೇಳಿದರು. ಅವರಿಗೆ ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಅದೇ ರೀತಿಯಿಂದ ಈ ಸಭೆಯ ನಾಯಕರಾದ ವೀರೇಂದ್ರ ಪಾಟೀಲರು ಹೇಳಿದರು. ನಮ್ಮ ಕರ್ತವ್ಯವನ್ನು, ನಾವು ಮಾಡಬೇಕಾದುದನ್ನು ಯಾವ ದೃಷ್ಟಿಯಿಂದ ಮಾಡಬೇಕೋ ಹಾಗೆ ಮಾಡುತ್ತೇವೆಯೇ ಹೊರತು ವೈಯಕ್ತಿಕವಾಗಿ ನಾವು ಕೆಲಸ ಮಾಡಬೇಕಾದುದಿಲ್ಲ. ವಿರೋಧಪಕ್ಷದವರ ಕರ್ತವ್ಯ ಯಾವರೀತಿ ಇದೆ, ಈ ಸರ್ಕಾರದ ವಿಚಾರದಲ್ಲಿ ಏನೇನು ಕಾರ್ಯಕ್ರಮಗಳನ್ನು ನಾವು ಸರ್ಕಾರವನ್ನು ಟೀಕೆ ಮಾಡುವುದರಲ್ಲಿ ತೆಗೆದುಕೊಳ್ಳಬೇಕು ಅದನ್ನು ಮಾಡುತ್ತೇವೆ ಮತ್ತು ರಾಜ್ಯಾಂಗದತ್ತವಾದ ನಮ್ಮ ಕರ್ತವ್ಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಾನು ಇನ್ನೊಂದು ಸಾರಿ ವಿಶದಪಡಿಸುತ್ತೇನೆ, ನಮ್ಮ ಪಕ್ಷವನ್ನು ಮಾತ್ರ ನಾನು ಈ ಸಭೆಯಲ್ಲಿ ಪ್ರತಿನಿಧಿಸುತ್ತೇನೆ, ಹಿಂದೆ ಒಂದು ಸಾರಿ ಹೇಳಿದೆ, ನ್ಯೂಜಿಲೆಂಡ್, ಆಸ್ಟ್ರೇಲಿಯಾ ಮತ್ತು ಬೇರೆ

ಕಡೆಗೆ ಇರುವ ರಾಷ್ಟ್ರಗಳಲ್ಲಿ ಮಲ್ಟಿಪಲ್ ಪಾರ್ಟೀಸ್ ಇವೆ. ಅಲ್ಲಿ ಕೆಲವು ತತ್ವಗಳ ಮೇಲೆ ಮಾಡಿಕೊಂಡಿದ್ದಾರೆ ಅವರ ಪ್ರಕಾರ ಶಿಸ್ತಾಗಿ ಕೆಲವು ತತ್ವಗಳ ಆಧಾರದ ಮೇಲೆ ಒಂದುಗೂಡತಕ್ಕ ಪಕ್ಷಗಳಿಗೂ ಕೂಡ ನಾವು ಇಲ್ಲಿ ಮನ್ನಣೆ ಕೊಡಬೇಕಾದ ಅವಶ್ಯಕತೆ ಬಂದರೂ ಬರಬಹುದು. ಅದನ್ನು ನಾನು ಸ್ಪಷ್ಟಪಡಿಸುತ್ತೇನೆ. ಅದನ್ನು ನಾನು ಹಿಂದೆ ಒಂದುಸಾರಿ ಹೇಳಿದ್ದೇನೆ. ವಿರೋಧ ಪಕ್ಷದ ನಾಯಕನನ್ನಾಗಿ ಮಾಡಿದ ಮಾತ್ರಕ್ಕೆ ನನಗೆ ಗರಿ ಕಟ್ಟಿಲ್ಲ, ಅಂಥ ಸ್ಥಾನವನ್ನು ಹೆಮ್ಮೆಯ ಸ್ಥಾನವೆಂದು ನಾನು ತಿಳಿದುಕೊಂಡಿಲ್ಲ. ಬಹುಶಃ ನನಗಿಂತ ಹೆಚ್ಚಿನ ದೃಷ್ಟಿಯಲ್ಲಿ ಶ್ರೀಮಾನ್ ಶಿವಪ್ಪನವರು ಎಲ್ಲರ ಪ್ರೀತಿ ಪಾತ್ರರಾಗಿ ಆ ಜಾಗದಲ್ಲಿ ಕುಳಿತುಕೊಂಡಿದ್ದರು. ಆದುದರಿಂದ ನಾನು ಈಗಲಾದರೂ ಹೇಳುವುದು ಇಷ್ಟೇ. ಇದು ಅನಿರೀಕ್ಷಿತ. ನಮ್ಮನ್ನು ರೆಕಗ್ನೈಸ್ ಮಾಡಿ ಎಂದು ನಾವು ಕೇಳಿದೆವು. ಅದಕ್ಕೆ ಕಾರಣವೇನೆಂದರೆ ಹೋದ ಸಲ ಆ ಕಡೆಗೆ ಇದ್ದ ಮಾನ್ಯ ಸದಸ್ಯರು ಕೆಲವರು ನಮ್ಮ ಪಕ್ಷದವರು ಕುಳಿತುಕೊಂಡು ವಿಚಾರದಲ್ಲಿ ವ್ಯಂಗವಾಗಿ ಹೇಳಿದ್ದರಿಂದ ನಮ್ಮ ಗುಂಪು ಬೇರೆ ಕುಳಿತುಕೊಳ್ಳಲು ಅವಕಾಶ ಮಾಡಿಕೊಡಿ ಎಂದು ಕೇಳಿದೆವು. ಇದರಲ್ಲಿ ಯಾರೂ ಏನೂ ತಪ್ಪು ತಿಳಿದುಕೊಳ್ಳಬೇಕಾಗಿಲ್ಲ. ತಮ್ಮೆಲ್ಲರ ಸಹಕಾರವನ್ನೂ ಕೋರುತ್ತೇನೆ ಎಂದು ಮಾತ್ರ ಹೇಳಿ ನನ್ನ ಮಾತನ್ನು ಪೂರೈಸುತ್ತೇನೆ.

† **ಶ್ರೀ ಎಸ್. ಗೋಪಾಲ ಗೌಡ.**—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಅಧ್ಯಕ್ಷರು ಒಂದು ಪ್ರಕಟನೆಯನ್ನು ಸಭೆಯ ಮುಂದೆ ಇಟ್ಟು ಸ್ವಲ್ಪಮಟ್ಟಿಗೆ ಕೆಲವು ಅನುಮಾನಗಳು ಮುಖ್ಯತಃ ಶ್ರೀಮಾನ್ ವೀರೇಂದ್ರ ಪಾಟೀಲರ ನಾಯಕತ್ವದಲ್ಲಿ ಈ ರಾಜ್ಯದಲ್ಲಿ ಯಾವ ಮಂತ್ರಿಮಂಡಲ ಕಾರ್ಯಕ್ರಮ ಮಾಡುತ್ತಿದೆ ಅದರ ವಿರುದ್ಧ ಯಾರು ಯಾರು ಈ ಮನೆಯ ಸದಸ್ಯರಿದ್ದಾರೆ, ಅವರೆಲ್ಲರನ್ನೂ ಮೊದಲನೆಯದಾಗಿ ವಿರೋಧ ಪಕ್ಷಗಳು ಎಂದು ಅರ್ಥ ಮಾಡಿಕೊಳ್ಳುವುದು, ಕರೆಯುವುದು ಸಹಜ ಮತ್ತು ಸ್ವಾಭಾವಿಕ. ಅವುಗಳಿಗೆ ಕಾನೂನು ಇತ್ಯಾದಿ ಇಲ್ಲದೆ ಇರಬಹುದು. ಈ ಹೊತ್ತು ವೀರೇಂದ್ರ ಪಾಟೀಲರ ಸರ್ಕಾರದ ಆಡಳಿತ, ಅದಕ್ಕೆ ವಿರೋಧವಾಗಿ ಕುಳಿತುಕೊಂಡಿರುವವರು ವಿರೋಧ ಪಕ್ಷದವರು. ಅದರಲ್ಲಿಯೂ ಈ ಹೊತ್ತಿನ ಪ್ರಚಲಿತ ರಾಜಕೀಯ ಪರಿಸ್ಥಿತಿಯಲ್ಲಿ 'ಮೇಸ್ ಪಾರ್ಲಿಮೆಂಟರಿ ಪ್ರಾಕ್ಟೀಸ್' ಪುಸ್ತಕ ಬರೆದ ಕಾಲದ ನಂತರ ರಾಜಕೀಯ ಪರಿಸ್ಥಿತಿ ಶ್ರೀ ಮಾವಲಂಕರ್ ಅವರು ಅಧ್ಯಕ್ಷರಾಗಿದ್ದುಕೊಂಡು ಕೊಟ್ಟ ತೀರ್ಪಿನ ನಂತರ ರಾಜಕೀಯ ಬೆಳವಣಿಗೆಗಳು, ಎಲ್ಲ ಏನಾಗಿವೆ ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಂಡು ನೋಡಿದರೆ ಅನೇಕ ಬದಲಾವಣೆಗಳಾಗಿವೆ. ಪಾರ್ಲಿಮೆಂಟಿನಲ್ಲಿ ಇತ್ತೀಚೆಗೆ ಆಳುವ ಪಕ್ಷವಾಗಿದ್ದ ಕಾಂಗ್ರೆಸ್ ಕಾರಣಾಂತರದಿಂದ, ಒಂದು ಕಡೆ ಪ್ರಧಾನಿ ಇನ್ನೊಂದು ಕಡೆ ಸಂಸ್ಥೆಯ ಅಧ್ಯಕ್ಷರು, ಎರಡು ಪಕ್ಷಗಳಾಗಿ ಒಡೆದು ಹೋಗಿ ನೊಗ ಹೇರಿದ ಜೋಡೆತ್ತು ಗುರ್ತಿನ ಮೇಲೆ ಆರಿಸಿಬಂದಂಥ ಲೋಕಸಭಾ ಸದಸ್ಯರಿಗೆ ಯಾವ ರೀತಿಯಲ್ಲಿ ಕಾಂಗ್ರೆಸ್ಸಿನ ಚಿಹ್ನೆಯನ್ನು ಹಂಚಬೇಕು ಎನ್ನುವ ಪ್ರಶ್ನೆ ಇತ್ಯರ್ಥವಾಗದೆ ಇರುವ ಸಂದರ್ಭದಲ್ಲಿ, ಪ್ರತಿ ಘಳಿಗೆಯಲ್ಲಿಯೂ ಬದಲಾವಣೆಗಳಾಗುತ್ತಿರುವ ಕಾಲದಲ್ಲಿ ಯಾವುದಕ್ಕೂ ರೂಲ್ಸ್ ಪ್ರಕಾರವೇ ಹೋಗುವುದಕ್ಕೆ ಈ ಹೊತ್ತು ಆಗುತ್ತಿಲ್ಲ. ಒಂದು ಸಲ ತಾವೂ ಹೇಳಿದ್ದೀರಿ. ಅದನ್ನು ಗಮನಿಸಿರಬಹುದು. ದಿವಂಗತ ಬಾಳಿಗಾ ಅವರು ಅಧ್ಯಕ್ಷರಾಗಿದ್ದಾಗ ಒಂದು ಮಾತು ಹೇಳಿದರು. ಒಮ್ಮೆ ಇಂಗ್ಲೆಂಡಿನಲ್ಲಿ ವಿರೋಧಿ ಪಕ್ಷ ಮತ್ತು ಆಳುವ ಪಕ್ಷ ಸೇರಿ ಸಂಯುಕ್ತ ಪಕ್ಷ ಮಾಡಿದಾಗ್ಗೆ ಸಭೆಯ ನಡವಳಿಕೆಯ ಹಿತ ದೃಷ್ಟಿಯಿಂದ ಆಳುವ ಪಕ್ಷದವರು ಅಲ್ಲಿ ಬಂದು ಕುಳಿತುಕೊಂಡು ವಿರೋಧ ಪಕ್ಷದ ಪಾತ್ರ ವಹಿಸಿದ ಒಂದು ಉದಾಹರಣೆ ಹೇಳಿದ್ದಾರೆ. ಇವತ್ತು ಪಾರ್ಲಿಮೆಂಟಿನಲ್ಲಿ ಏಕಾಏಕಿ ಕಾಂಗ್ರೆಸ್ ಪಕ್ಷ ಒಡೆದು ಇಬ್ಭಾಗವಾಗಿ ಪಾರ್ಲಿಮೆಂಟಿನಲ್ಲಿ ರಾಮಸುಭಾಗಸಿಂಗರನ್ನು ನಾಯಕರನ್ನಾಗಿ ಕೂಡಿಸಿದೆ. ಶ್ರೀ ರಂಗಾ ಅವರು ಸ್ವತಂತ್ರ ಪಾರ್ಟಿಯವರು ಮೊದಲನೇ ಸ್ಥಾನದಲ್ಲಿ ಕೂತಿದ್ದವರು ರಾಮಸುಭಾಗಸಿಂಗರವರಿಗೆ ಜಾಗ ಬಿಟ್ಟುಕೊಟ್ಟರು.

ಶ್ರೀ ಎಂ. ಎನ್. ರಾಮಣ್ಣ.—ಸ್ವಾಮಿ, ಸ್ಪೀಕರ್ ಅವರು ಡಿಸಿಷನ್ ಕೊಟ್ಟರು, ಅದರ ಮೇಲೆ ಸಭೆಯ ಸಂಪ್ರದಾಯದ ಪ್ರಕಾರ ಸಭಾ ನಾಯಕರು, ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಈಗ ಗೋಪಾಲಗೌಡರು ಮಾತನಾಡುತ್ತಿದ್ದಾರೆ. ನನಗೆ ಅರ್ಥವಾಗಲಿಲ್ಲ ಈ ಸಭೆಯೊಳಗೆ ನಡೆಯಬೇಕಾದ್ದು ಏನು ? ಅವರು ಹೇಳುವುದು ಯಾತರ ಮೇಲೆ ಪರಿಣಾಮವಾಗುತ್ತದೆ ? ಅದು ಕ್ರಮಬದ್ಧವಾಗಿದೆಯೇ ? ದಯವಿಟ್ಟು ಹೇಳಬೇಕು.

ಉಪಾಧ್ಯಕ್ಷರು.—ಗೋಪಾಲಗೌಡರು ಮಾತನಾಡಿ ತಮ್ಮ ಸೆಂಟಿಮೆಂಟ್ ಎಕ್ಸ್‌ಪ್ರೆಸ್ ಮಾಡುತ್ತಾರೋ ಏನೋ ಎಂದು ಆಲೋಚನೆ ಮಾಡಿದೆ. ದಯವಿಟ್ಟು ಮಾನ್ಯ ಸದಸ್ಯರು ಜಾಗ್ರತೆ ಮುಗಿಸಬೇಕು.

ಶ್ರೀ ಎಸ್. ಗೋಪಾಲಗೌಡ.—ಹೆಚ್ಚು ಕಠಿಣವಾದ ವಿಷಯ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದು ಪಾರ್ಲಿಮೆಂಟಿನಲ್ಲಿ ನಡೆದ ಘಟನೆ. ಇಂದು ವಿಶೇಷ ಪರಿಸ್ಥಿತಿ ಉಂಟಾಗಿದೆ. ಯಾರು ವಿರೋಧ ಪಕ್ಷದಲ್ಲಿದ್ದರು ಅವರು ಆಳುವ ಪಕ್ಷಕ್ಕೆ ಬೆಂಬಲ ಕೊಟ್ಟದ್ದು ಉಂಟು. ವಿರೋಧ ಪಕ್ಷದ ಬೆಂಚುಗಳಲ್ಲಿ ಕೂತುಕೊಂಡು ಪ್ರಧಾನಿ ಕಾಂಗ್ರೆಸ್ಸಿಗೆ ಬೆಂಬಲ ಕೊಟ್ಟ ಘಟನೆ 17ನೇ ತಾರೀಖು ನಡೆದಿದೆ. ಈ ಎಲ್ಲ ಘಟನೆಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇಂದು ಪರಿಸ್ಥಿತಿ ಬದಲಾವಣೆಯಾಗಿದೆ. ಹಳೇ ಪುಸ್ತಕದಲ್ಲಿ ಇರುವ ನಡವಳಿಕೆಯಂತೆ ನಡೆಸಲು ಆಗುವುದಿಲ್ಲ. ಇದನ್ನು ಸ್ವಲ್ಪ ವಿಚಾರ ಮಾಡಬೇಕು. ಅಧ್ಯಕ್ಷರಮೇಲೆ ನನ್ನ ಆರೋಪ ಏನೂ ಇಲ್ಲ. ಅಥವಾ ಅವರ ಪ್ರಕಟನೆಯ ಹಿಂದೆ ಒಂದು ಪಿತೂರಿ ಇದೆ ಎಂದು ಹೇಳಲು ಇಷ್ಟಪಡುವುದಿಲ್ಲ. ಅವರು ಜೇನುಗೂಡಿಗೆ ಕೈ ಹಾಕಿ ಈಗ ವಿಶ್ರಾಂತಿ ಪಡೆಯಲು ತಮ್ಮ ಚೇಂಬರಿಗೆ ಹೋಗಿರುವುದನ್ನು ವಿಷಾದಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಶ್ರೀಮಾನ್ ಶಿವಪ್ಪನವರ ಬಗ್ಗೆ ಒಳ್ಳೇ ಮಾತುಗಳನ್ನು ಆಡಿದ್ದಾರೆ. ನನಗೆ ಅದನ್ನು ಪೂರ್ತಿ ಕೇಳುವುದಕ್ಕೆ ಆಗಲಿಲ್ಲ ಯಾಕೆಂದರೆ ಆಗ್ಗೆ ನಾನು ಹೊರಗಡೆ ಹೋಗಿದ್ದೆ. ಶ್ರೀ ಶಿವಪ್ಪನವರ ಬಗ್ಗೆ ಒಳ್ಳೇ ಮಾತುಗಳನ್ನು ಆಡಿದ್ದಾರೆ, ಆ ಬಗ್ಗೆ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಮೊದಲೇ ವಿನಂತಿ ಮಾಡಿಕೊಂಡೆ ಶ್ರೀಮಾನ್ ಶಿವಪ್ಪನವರಿಗೆ ಇದು ಡೀ ಫ್ಯಾಕ್ಟೋ ಅಥವಾ ಡೀ ಜ್ಯುರೋ ಅದು ಕಾನೂನು ಪ್ರಕಾರ ಯಾವುದು ಎನ್ನುವುದು ನನಗೆ ಗೊತ್ತಿಲ್ಲ ಕಾನೂನಿನಲ್ಲಿ ಏನೇನೋ ಬರೆದಿದ್ದಾರೆ—ಈ ಗಳಿಗೆಯವರೆಗೆ ಅವರು ನಾಯಕರಾಗಿದ್ದರು. ಇವತ್ತು ಅವರು ಈಗ ಸಭೆಯಲ್ಲಿ ಇಲ್ಲ ಕೆಲಸದಮೇಲೆ ಬೇರೆ ಕಡೆ ಹೋಗಿದ್ದಾರೆ—ಅವರು ನಿವೃತ್ತಿಯಾಗಿದ್ದಾರೆ. ಅವರನ್ನು ಯಾರು ನಿವೃತ್ತಿ ಮಾಡಬೇಕು, ಅವರನ್ನು ಯಾರು ಆರಿಸಬೇಕು ಅದು ಬೇರೆಯವರಿಗೆ ಸಂಬಂಧಪಟ್ಟದ್ದು. ಅವರ ನಾಯಕತ್ವತಾನೆ ವಿಸರ್ಜನೆಯಾಗುವುದಿಲ್ಲ, ಈ ಪ್ರಶ್ನೆ ಇದೆ. ಮಾನ್ಯ ಸಿದ್ದವೀರಪ್ಪನವರ ಬಗ್ಗೆ ನನಗೆ ಮಾತ್ರವಲ್ಲ ವಿರೋಧಪಕ್ಷದಲ್ಲಿ ಈ ಕಡೆ ಕೂರತಕ್ಕಂಥವರೆಲ್ಲರಿಗೂ ವಿಶ್ವಾಸ ಇದೆ. ಗೌರವ ಇದೆ. ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ. ಇದರಲ್ಲಿ ನನಗೆ ಸಂದೇಹವಿಲ್ಲ. ಅವರೂ ಸಹ ಇದನ್ನು ಸ್ಪಷ್ಟಪಡಿಸಿದ್ದಾರೆ. ನಮ್ಮ ಪಕ್ಷದ ಪರವಾಗಿ ನಾಯಕರಾಗಿ ಕೆಲಸ ಮಾಡುತ್ತಾರೆ. ಅದು ಅವರ ದೊಡ್ಡ ಗುಣ ತೋರಿಸುತ್ತದೆ. ಈ ಸಂದರ್ಭದಲ್ಲಿ ಅವರಿಗೆ ಅಭಿನಂದನೆ ಮಾಡುವುದಕ್ಕೆ ಹೊಗಳುವುದಕ್ಕೆ ನಾನು ಹೋಗುವುದಿಲ್ಲ. ಈ ಸಭೆಯಲ್ಲಿ ಎಲ್ಲರೂ ಒಂದು ಮಾತನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಲೋಕ ಸಭೆಯಲ್ಲಿ ಏನೇನೋ ಪಕ್ಷಗಳಿವೆ ಯಾವ ಯಾವ ಪಾತ್ರ ವಹಿಸುತ್ತಾರೆ ಎನುವ ವಿಚಾರ ನಾನು ಮಾಡುವುದಿಲ್ಲ. ಇಲ್ಲಿ ಶ್ರೀಮಾನ್ ವಿರೇಂದ್ರ ಪಾಟೀಲರ ಸರಕಾರ ಈ ಕಾಂಗ್ರೆಸ್ 'ಒ'ಗೆ ಸಂಬಂಧಪಟ್ಟ ಸರಕಾರ ಕೂತರೂ ಕೂಡ, ಅವರಿಗಿಂದ ಒಂದು ಹೆಚ್ಚು ಸಂಖ್ಯೆ ವಿರೋಧ ಪಕ್ಷಕ್ಕೆ ಬಂದ ದಿವಸವೇ ಅವರ ಸರಕಾರವನ್ನು ವಿರೋಧ ಪಕ್ಷ ಉರುಳಿಸುತ್ತದೆ. ಮಂತ್ರಿ ಮಂಡಳ ಹೇಗೆ ರಚಿಸುತ್ತೇವೆ. ಯಾರು ಮುಖ್ಯ ಮಂತ್ರಿಗಳಾಗುತ್ತಾರೆ, ಯಾವ ಯಾವ ಪಕ್ಷ ಒಳಗೆ ಸೇರಿಸುತ್ತೇವೆ ಇದೆಲ್ಲಾ ಆ ಮೇಲಿನ ಮಾತು.

ಇನ್ನು ಎರಡನೆಯದು ಶ್ರೀಮಾನ್ ವೀರೇಂದ್ರ ಪಾಟೀಲರ ಕಾಂಗ್ರೆಸ್ 'ಒ' ಸರಕಾರಕ್ಕೆ ವಿರೋಧವಾಗಿ, ಇಲ್ಲಿ ಇರತಕ್ಕಂಥಾ ಎಲ್ಲಾ ವಿರೋಧ ಪಕ್ಷದ ಸದಸ್ಯರು ಯಾವುದೇ ನ್ಯಾಯವಾದ ವಿಷಯದಲ್ಲಿ ಜನತೆಯ ಹಿತ ದೃಷ್ಟಿಯಿಂದ, ರಾಷ್ಟ್ರದಹಿತ ದೃಷ್ಟಿಯಿಂದ ಸರಕಾರದ ತಪ್ಪುಗಳನ್ನು ಅಧಿಕಾರ ದುರುಪಯೋಗವನ್ನು ಲಂಚ ರುಷುವತ್ತು, ಸ್ವಜನ ಪಕ್ಷಪಾತ ಇಂಥಾದ್ದು ಏನೇನು ಬಯಲಿಗೆ ಎಳೆಯಬಹುದೋ ಅದನ್ನು ಯಾವ ದಾಕ್ಷಿಣ್ಯವಿಲ್ಲದೆ ಬಯಲಿಗೆ ಎಳೆಯುವುದಕ್ಕೆ ಸಮಯ ಬಂದರೆ ಸಿದ್ದವೀರಪ್ಪನವರ ನಾಯಕತ್ವದಲ್ಲಿ ಇರತಕ್ಕಂಥ ಪಾರ್ಟಿ ಈ ಗಳಿಗೆಯಲ್ಲಿ ಇಲ್ಲಿ ಇಂದು ಶಿವಪ್ಪನವರು ಇಲ್ಲ ಎಸ್ ವಿ ಡಿ ಜನ ಸರಕಾರ ಉರುಳಿಸಲು ಸಿದ್ಧರಾಗಿದ್ದಾರೆ.

ಅದು ಏನೇ ಇರಲಿ ಶ್ರೀಮಾನ್ ಸಿದ್ಧವೀರಪ್ಪನವರ ಪಕ್ಷದವರು, ಎಸ್. ವಿ. ಡಿ. ಅವರು ಪಿ.ಎಸ್.ಪಿ., ಎಸ್.ಎಸ್.ಪಿ. ಪಾರ್ಟಿಗಳಿವೆ. ಮತ್ತು ರಿಪಬ್ಲಿಕನ್ ಪಾರ್ಟಿಗೆ ನೀವು ರೆಕಗ್ನೈಸ್ ಮಾಡಲಿ ಮಾಡದೇ ಇರಲಿ ದೇಶ ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ ಎಂದು ರೆಕಗನೈಸ್ ಮಾಡಿದೆ. ಆ ಪಕ್ಷದ ಪರವಾಗಿ ಶ್ರೀಮಾನ್ ಅರಕೇರಿಯವರು ಆರಿಸಿ ಬಂದಿದ್ದಾರೆ. ನಾಳೆ ಅವರನ್ನು ಎಸ್.ವಿ.ಡಿ. ನಾಯಕರನ್ನಾಗಿ ಆರಿಸಿದರೆ ಆಗ ನೀವು ಏನು ಮಾಡುತ್ತೀರಿ ?

ಎರಡನೆದಾಗಿ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರ ಸರ್ಕಾರಕ್ಕೆ ವಿರೋಧವಾಗಿರತಕ್ಕಂಥ ಎಲ್ಲರೂ ಸಂದರ್ಭ ಬಂದಾಗ ಒಟ್ಟಿಗೆ ಸಭಾತ್ಯಾಗ ಮಾಡುತ್ತಾರೆ, ಒಟ್ಟಿಗೆ ನಿಲುವಳಿ ಸೂಚನೆ ಮಂಡಿಸುತ್ತಾರೆ. ಒಟ್ಟಿಗೆ ಅಧ್ಯಕ್ಷರನ್ನು ತೆಗೆಯಬೇಕು ಎಂದು ಸೂಚನೆ. ತರುತ್ತಾರೆ. ಆಗ ಎಲ್ಲರೂ ಎದ್ದು ನಿಲ್ಲುತ್ತಾರೆ. ಅಧ್ಯಕ್ಷರನ್ನು ತೆಗೆದು ಹಾಕಬೇಕು ಎಂದು ಅಪೇಕ್ಷೆ ಪಟ್ಟರೆ 40 ಜನ ಅಲ್ಲ, 80 ಜನ ಎದ್ದು ನಿಲ್ಲುತ್ತಾರೆ ಮತ್ತು ಸಾಧ್ಯವಾದಮಟ್ಟಿಗೂ ಎಲ್ಲರೂ ಆಳುವ ಪಕ್ಷವನ್ನು ವಿರೋಧಿಸತಕ್ಕಂಥ ಪ್ರಯತ್ನವನ್ನು ಮಾಡುತ್ತಾರೆ.

ಮೂರನೆಯದಾಗಿ ಎಸ್.ವಿ.ಡಿ. ಹೇಗಿರಬೇಕು, ಅವೆಲ್ಲಾ ನಮಗೆ ಸಂಬಂಧಪಟ್ಟದ್ದು. ಸಭಾಧ್ಯಕ್ಷರು ನಮ್ಮಿಂದ ಏನು ಅಗತ್ಯತೆಗಳನ್ನು ನಿರೀಕ್ಷಿಸುತ್ತಾರೋ ಅದನ್ನು ಪೂರೈಸುವುದಕ್ಕೆ ಸಾಧ್ಯವಿದ್ದರೆ ನಾವು ಸಂಯುಕ್ತದಳವನ್ನು ಇಟ್ಟುಕೊಳ್ಳುತ್ತೇವೆ. ಸಾಧ್ಯವಿಲ್ಲದಿದ್ದರೆ ಅದನ್ನು ವಿಸರ್ಜನೆ ಮಾಡುತ್ತೇವೆ. ಪ್ರತಿಯೊಬ್ಬ ಸದಸ್ಯನನ್ನೂ ಜನತೆ ಆರಿಸಿ ಕಳುಹಿಸಿದೆ. ರೂಲ್ಸ್ ಪ್ರಕಾರ ಪ್ರತಿಯೊಬ್ಬ ಸದಸ್ಯನಿಗೆ ಏನೇನು ಹಕ್ಕು ಇದೆಯೋ ಅದೆಲ್ಲವನ್ನೂ ಅವನು ಹೊಂದಿರುತ್ತಾನೆ. ಆ ಹಕ್ಕುಗಳನ್ನು ಪುನಃ ಯಾರೂ ಕರುಣಿಸಬೇಕಾಗಿಲ್ಲ. ಆದುದರಿಂದ ಎಸ್.ವಿ.ಡಿ. ಸಮರ್ಪಕವಾಗಿ ತನ್ನ ನಿಯಮಾವಳಿಗಳನ್ನು ಉಳಿಸಿಕೊಳ್ಳಲಾರದೇ ಹೋದರೆ ಆಗ ಪ್ರತಿಯೊಂದು ಪಕ್ಷವನ್ನೂ ಅಥವಾ ಗುಂಪಿನ ವ್ಯಕ್ತಿತ್ವವನ್ನು ಅಧಿಕೃತವಾಗಿ ಮಾನ್ಯ ಮಾಡತಕ್ಕಂಥದ್ದು. ಇಂತಹ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಕೊನೆಯದಾಗಿ ಮತ್ತೊಮ್ಮೆ ನಾನು ಎಲ್ಲ ವಿರೋಧ ಪಕ್ಷದವರ ಪರವಾಗಿ ಹೇಳಬೇಕಾದರೆ ಒಂದು ವಿಷಾದಪಾದ ಘಟನೆ ಏನೆಂದರೆ ಶ್ರೀಮಾನ್ ಶಿವಪ್ಪನವರು ಹಾಜರು ಇಲ್ಲದೇ ಇದ್ದಾಗ ಅಧ್ಯಕ್ಷರೊಂದಿಗೆ ಸಂಯುಕ್ತದಳದ ವಸ್ತ್ರಾರರು ಮಾತನಾಡಿ ಬಂದಿದ್ದರೂ ಕೂಡ ಈ ಒಂದು ಪ್ರಕಟಣೆಯನ್ನು ಪ್ರಕಟಿಸಿ ಇಡೀ ಮನೆಯನ್ನು ಅದರಲ್ಲೂ ವಿರೋಧ ಪಕ್ಷದ ಎಲ್ಲರನ್ನೂ ಗೊಂದಲಕ್ಕೆ ಈಡು ಮಾಡಿ, ಏನೋ ವಿರೋಧ ಪಕ್ಷವಿರೋಧಾಭಾಸದ ಕೆಲವು ಗುಂಪುಗಳಿಂದ ಕೂಡಿದೆ, ಅವರಲ್ಲಿ ಏನೂ ಧ್ಯೇಯೋ ಧೋರಣೆಗಳು ಇಲ್ಲ ಎನ್ನುವ ಅಭಿಪ್ರಾಯ ಬರುವಂತೆ ಮಾಡಿದ್ದೀರಿ. ಇದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ. ಶ್ರೀಮಾನ್ ವೀರೇಂದ್ರಪಾಟೀಲರು ಡೆಲ್ಲಿಗೆ ಹೋಗಿದ್ದಾರೆ ಎಂದು ಅವರ ಪೈಕಿ ಯಾರಾದರೂ ಒಬ್ಬರು ನನಗೆ ಜಾಸ್ತಿ ಬೆಂಬಲ ಇದೆ ಎಂದು ಗೌರ್ನರ್‌ರವರಿಗೆ ಚಾಡಿ ಹೇಳಿದ್ದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವೇ? ಜನರ ಜಾಸ್ತಿ ಬೆಂಬಲ ಯಾರಿಗೆ ಇದೆಯೆಂದು ನೋಡಬೇಕು. ಇಂತಹ ಅಚಾತುರ್ಯ ನಡೆಯಲು ಅವಕಾಶ ಕೊಡದೇ ಹೋದಾಗ ಮಾತ್ರ ಈ ಪ್ರಜಾಪ್ರಭುತ್ವ ಅನ್ನುವುದಕ್ಕೆ ಏನಾದರೂ ಸ್ವಲ್ಪ ಗೌರವ ಸಿಕ್ಕುತ್ತದೆ. ಆದುದರಿಂದ ಈ ಮನೆಯ ಉಪಾಧ್ಯಕ್ಷರ ಮೂಲಕ ವಿನಂತಿ ಮಾಡುತ್ತೇನೆ. ಇಂತಹ ಸಂದರ್ಭದಲ್ಲಿ ಕಾನೂನನ್ನು ಮಾತ್ರ ಹಿಡಿದುಕೊಂಡು ಅದರಂತೆ ನಾನು ವರ್ತಿಸುತ್ತೇನೆ ಎನ್ನುವುದು ಸರಿಯಲ್ಲ. ವಾಸ್ತವಿಕತೆಗೆ ದೂರವಾದ ಘಟನೆಗಳು ಸಂಭವಿಸಿದಾಗ, ವಿವೇಚನೆಯಿಂದ ಮುಂದುವರಿಯಬೇಕು. ವಾಸ್ತವಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ವಿವೇಚನೆಯಿಂದ ಮುಂದುವರಿಯುವುದು ಒಳ್ಳೆಯದೆಂದು ನಾನು ತಿಳಿಯುತ್ತೇನೆ. ವಿಶೇಷ ರೀತಿಯಿಂದ ಈ ಸಭೆಯ ನಡೆವಳಿಕೆಗಳನ್ನು ನಡೆಸುವುದರಲ್ಲಿ ತಮಗೆ ಎಲ್ಲರ ಸಹಕಾರ ಅಗತ್ಯ. ಒಳ್ಳೆಯ ವಿಚಕ್ಷಣೆಯಿಂದ ಸರ್ಕಾರ ನಡೆಸಿದರೆ, ಒಳ್ಳೆಯ ಕೆಲಸ ಮಾಡಿದರೆ, ಒಳ್ಳೆಯ ಕೆಲಸ ಮಾಡುತ್ತಾರೆ ಎಂದು ಬೆಂಬಲ ಕೊಡುತ್ತೇವೆ. ಆದರೆ ತಪ್ಪು ಮಾಡಿದಾಗ ಸರ್ಕಾರವನ್ನು ವಿರೋಧಿಸುತ್ತೇವೆ. ಆದುದರಿಂದ ಈ ಸಭೆಯಲ್ಲಿ ಎಲ್ಲರ ಸಹಕಾರ ದೊರೆಯಬೇಕಾದರೆ ಅಧ್ಯಕ್ಷರ ಈ ನಡವಳಿಕೆಗಳಿಂದ ನಾನು ನೊಂದ ಮನಸ್ಸಿನಿಂದ ಒಂದು ಮಾತನ್ನು ಹೇಳುತ್ತೇನೆ. ತಮ್ಮಲ್ಲಿ ಒಂದು ಮಾತನ್ನು ವಿನಂತಿಸಿಕೊಳ್ಳುತ್ತೇನೆ. ಅಧ್ಯಕ್ಷರು ಈ ರೀತಿ ಗೊಂದಲ ಎಬ್ಬಿಸಿ ತಮ್ಮನ್ನು ಪೀಠದಲ್ಲಿ ಕೂಡಿಸಿ ತಮ್ಮ ಆರಾಮ ಕಛೇರಿಗೆ ಹೋದುದು ಸರಿಯಾದ ರೀತಿಯಲ್ಲ. ಶ್ರೀಮಾನ್ ಕೊಠಾವಳೆಯವರ ವಿಚಾರ ನನಗೂ ಗೊತ್ತು. ಅವರು ತಾವು ಯಾರ ಮೇಲೂ ಬಲಪ್ರಯೋಗ ಮಾಡುವುದಿಲ್ಲ, ಅಹಿಂಸಾದೃಷ್ಟಿಯಿಂದ ಮನನೋಯಿಸದಂತೆ ಹೋಗಬೇಕು. ನಾವು ಹೆಚ್ಚು ಕಟುವಾಗಿ ಮಾತನಾಡಿದರೆ ತಮಗೆ ಕೂತುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ ನಾನು ವಿರಮಿಸುತ್ತೇನೆ ಇತ್ಯಾದಿ ಇತ್ಯಾದಿಯಾಗಿ ಕೆಲವರು ಮಾತನಾಡುತ್ತಾರೆ. ನನಗೆ ಸಿಟ್ಟು ಬಂದಾಗ ನಾನು ಏನು ಮಾಡುತ್ತೇನೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಅದರಂತೆ ಅಧ್ಯಕ್ಷರು ಕೂಡ ಆ ರೀತಿ ಮಾಡಿದರು ಎಂದು ತಿಳಿದುಕೊಳ್ಳುತ್ತೇನೆ. ನಾನು ಮತ್ತೊಮ್ಮೆ ಹೇಳುತ್ತೇನೆ, ಏನೆಂದರೆ ವಿರೋಧಪಕ್ಷದಲ್ಲಿರತಕ್ಕಂಥ ಎಲ್ಲಾ ಪಾರ್ಟಿಯವರು ಮತ್ತು ಪಕ್ಷೇತರರು ಒಂದಾಗಿ ಕೂಡಿಕೊಂಡು ವಿರೋಧಪಕ್ಷದ ಕೆಲಸಕಾರ್ಯಗಳನ್ನು ನಿರ್ವಹಿಸುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟು ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3-30 P.M.

†ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಮಾನ್ಯ ಅಧ್ಯಕ್ಷರು ಘೋಷಿಸಿರುವ ರೀತ್ಯಾ ಶ್ರೀಮಾನ್ ಸಿದ್ಧವೀರಪ್ಪನವರು ಅಧಿಕೃತ ವಿರೋಧಿ ಪಕ್ಷದ ನಾಯಕರು ಎಂದು ಪರಿಗಣಿಸಿದ್ದಾರೆ ಮತ್ತು ಕಾಂಗ್ರೆಸ್ (ಆರ್) ಪಾರ್ಟಿಯು ಅಧಿಕೃತ ವಿರೋಧಪಕ್ಷವಾಗಿ ಇರತಕ್ಕಂಥದ್ದು ಎಂಬುದಾಗಿ ಏನು ಅಧ್ಯಕ್ಷರು ಪ್ರಕಟಿಸಿದ್ದಾರೆ ಅದನ್ನು ನಾನು ಸಂತೋಷದಿಂದ

(ಶ್ರೀ ಡಿ. ದೇವರಾಜ ಅರಸ್)

ಸ್ವಾಗತಿಸುತ್ತೇನೆ. ಹಾಗೆ ಶ್ರೀಮಾನ್ ಗೋಪಾಲಗೌಡರು ಈಗತಾನೆ ಕೆಲವು ವಿಷಯಗಳನ್ನು ವಿರೋಧಪಕ್ಷದ ಪರವಾಗಿ ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಎರಡು ವಿಷಯಗಳನ್ನು ಹೇಳುವುದಕ್ಕೆ ಮುಂಚೆ ಈ ಸಭೆಯ ವಿರೋಧಪಕ್ಷದ ಅಧಿಕೃತ ನಾಯಕರು ಎಂದು ಈಗತಾನೆ ಶ್ರೀಮಾನ್ ಸಿದ್ಧವೀರಪ್ಪನವರ ಹೆಸರನ್ನು ಅಧ್ಯಕ್ಷರು ಹೇಳಿರುವುದಕ್ಕಾಗಿ ಸಂತೋಷಪಡುತ್ತೇನೆ. ಮತ್ತು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಶ್ರೀಮಾನ್ ಸಿದ್ಧವೀರಪ್ಪನವರು ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡುವುದಕ್ಕೆ ಎಲ್ಲಾ ವಿಧವಾದ ಅರ್ಹತೆ ಪಡೆದಿದ್ದಾರೆ. ದಕ್ಷರಿದ್ದಾರೆ. ಆಡಳಿತ ವಿಷಯಗಳನ್ನು ಅವರು ಚೆನ್ನಾಗಿ ಅಧ್ಯಯನ ಮಾಡಿದ್ದಾರೆ. ಅವರ ಕಾರ್ಯ ಇಲ್ಲಿ ಯಶಸ್ವಿಯಾಗಿ ನಡೆಯುವುದಕ್ಕೆ ವಿರೋಧಪಕ್ಷದಲ್ಲಿರುವ ಎಲ್ಲಾ ಪಕ್ಷಗಳ ನಾಯಕರೂ ಬೆಂಬಲ ಕೊಡುತ್ತಾರೆಂದು ನಾನು ನಂಬುತ್ತೇನೆ. ವಿರೋಧಪಕ್ಷದಲ್ಲಿರುವ ಎಲ್ಲಾ ಪಾರ್ಟಿಯವರು ಯಾವ ರೀತಿ ಒಗ್ಗಟ್ಟಿನಿಂದ ಕೆಲಸ ಮಾಡುತ್ತೇವೆ ಎಂಬ ಬಗ್ಗೆ ಈಗತಾನೆ ಶ್ರೀಮಾನ್ ಗೋಪಾಲಗೌಡರು ಹೇಳಿದರು. ಆ ಬಗ್ಗೆ ನಾನು ಮತ್ತೂ ದೀರ್ಘವಾಗಿ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಶ್ರೀಮಾನ್ ಗೋಪಾಲಗೌಡರು ಮಾತನಾಡುವಾಗ ಅವರು ವಿರೋಧಪಕ್ಷದಲ್ಲಿರುವ ಎಲ್ಲಾ ಪಾರ್ಟಿಗಳ ಮತ್ತು ಬಿಡಿ ಸದಸ್ಯರ ಪರವಾಗಿ ಎರಡು ಮೂರು ಆಶ್ವಾಸನೆಗಳನ್ನು ಕೊಟ್ಟರು. ಮೊದಲನೆಯ ಆಶ್ವಾಸನೆ ಎಂದರೆ ಶ್ರೀ ವೀರೇಂದ್ರ ಪಾಟೀಲರ ಮುಖಂಡತ್ವದಲ್ಲಿರುವ ಸರ್ಕಾರದ ವಿರುದ್ಧವಾಗಿ ಅವಿಶ್ವಾಸ ನಿರ್ಣಯ ಬಂದರೆ ನಾವೆಲ್ಲರೂ ಒಟ್ಟಾಗಿ ಸ್ವಾಗತಿಸುತ್ತೇವೆ ಮತ್ತು ಬೆಂಬಲ ಕೊಡುತ್ತೇವೆ ಎಂಬುದು. ಮತ್ತು ಆಳುವ ಪಕ್ಷದಲ್ಲಿರುವ ಸದಸ್ಯರಿಗಿಂತ ವಿರೋಧ ಪಕ್ಷದಲ್ಲಿ ಒಬ್ಬರು ಜಾಸ್ತಿಯಾದರೆ ಅಂದೇ ಈ ಸರ್ಕಾರವನ್ನು ಉರುಳಿಸುವುದಕ್ಕೆ ನಾವೆಲ್ಲಾ ಒಟ್ಟಾಗಿ ಬೆಂಬಲ ಕೊಡುತ್ತೇವೆಂದು ಹೇಳಿದರು. ಈ ಅಭಿಪ್ರಾಯವನ್ನು ಅವರು ಎಲ್ಲರ ಪರವಾಗಿ ಹೇಳಿದ್ದೇನೆಂದು ಅವರೇ ಹೇಳಿರಬೇಕಾದರೆ ಅದು ಉಂಟೋ ಇಲ್ಲವೋ ಎಂಬ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಅವರ ಮಾತು ಉಳಿಯುವ ಹಾಗೆ ಎಲ್ಲ ಸದಸ್ಯರೂ ಕೂಡ ಅದಕ್ಕೆ ಬೆಂಬಲ ಕೊಡುತ್ತಾರೆಂದು ನಾನು ಆಶಿಸುತ್ತೇನೆ. ವಿರೋಧಪಕ್ಷ ಯಾವ ರೀತಿ ಕೆಲಸ ಮಾಡಬೇಕು ಎನ್ನುವ ಬಗ್ಗೆ ಎರಡು ಮಾತುಗಳನ್ನು ಅವರು ಹೇಳಿದರು. ಕಾಂಗ್ರೆಸ್ (ಆರ್) ಎಂಬ ಪಕ್ಷ ಉದ್ಭವವಾಗಿದೆ, ಅದಕ್ಕೆ ಶ್ರೀಮಾನ್ ಸಿದ್ಧವೀರಪ್ಪನವರು ನಾಯಕರಾಗಿದ್ದಾರೆ. ಅವರು ಎಲ್ಲಾ ಪಕ್ಷಕ್ಕೂ ನಾಯಕರು ಅಲ್ಲದಿದ್ದರೂ ಕೂಡ, ಅವರು ಮಾಡತಕ್ಕಂಥ ಕೆಲಸ ನೋಡಿಕೊಂಡು ಕೆಲವು ವಿಚಾರಗಳಲ್ಲಿ ಬೆಂಬಲ ಕೊಡುತ್ತೇವೆ, ಸರ್ಕಾರದ ತಪ್ಪುಗಳನ್ನು ಎತ್ತಿ ತೋರಿಸುವಾಗ, ಲಂಚರುಷುವತ್ತುಗಳನ್ನು ತಪ್ಪಿಸುವ ಬಗ್ಗೆ ಕಾಂಗ್ರೆಸ್ (ಆರ್) ಪಕ್ಷದವರ ಜೊತೆಗೆ ನಾವುಗಳೂ ಸೇರಿಕೊಂಡು ಕೆಲಸ ಮಾಡುತ್ತೇವೆ ಎನ್ನುವ ಕೆಲವು ನಿದರ್ಶನಗಳನ್ನು ಶ್ರೀಮಾನ್ ಗೋಪಾಲಗೌಡರು ಕೊಟ್ಟು ಮಾತನಾಡಿದ್ದಾರೆ. ಅದು ಸ್ವಾಗತಾರ್ಹವಾದ ವಿಷಯವಾಗಿದೆ. ಕಾಂಗ್ರೆಸ್ (ಆರ್) ಪಕ್ಷ ವಿರೋಧ ಪಕ್ಷವಾಗಿದ್ದರೂ ಕೂಡ ಈ ಪಕ್ಷದ ನಾಯಕರಾದ ಶ್ರೀಮಾನ್ ಸಿದ್ಧವೀರಪ್ಪನವರು ಎಲ್ಲಾ ಪಕ್ಷದ ನಾಯಕರಾಗಿ ವರ್ತಿಸುತ್ತೇನೆ ಎಂದು ಏನು ಹೇಳಿದ್ದಾರೆ, ಅದರಂತೆ ಎಲ್ಲಾ ಪಕ್ಷಗಳ ಸದಸ್ಯರು ಮತ್ತು ಇತರೇ ಬಿಡಿ ಸದಸ್ಯರುಗಳು ಸಹ ಅವರಿಗೆ ಬೆಂಬಲ ಕೊಡುತ್ತಾರೆಂದು ನಾನು ಆಶಿಸುತ್ತೇನೆ. ಪಾರ್ಲಿಮೆಂಟ್‌ನಲ್ಲಿ ಕಾಂಗ್ರೆಸ್ (ಓ) ವಿರೋಧಪಕ್ಷವಾಗಿ ಕಾಂಗ್ರೆಸ್ (ಆರ್) ಆಡಳಿತ ಪಕ್ಷವಾಗಿ ಕೆಲಸ ಮಾಡುತ್ತಿದೆ. ಇಲ್ಲಿ ಕಾಂಗ್ರೆಸ್ (ಆರ್) ವಿರೋಧಪಕ್ಷವಾಗಿದೆ. ಈ ಒಂದು ಅವಕಾಶ ಸಿಕ್ಕಿರುವುದು ದೇಶದ ಹಿತದೃಷ್ಟಿಯಿಂದ ಇನ್ನೂ ಅನೇಕ ದೃಷ್ಟಿಯಿಂದ ಒಳ್ಳೆಯದೆಂದು ಭಾವಿಸುತ್ತೇನೆ. ಇದರಿಂದ ದೇಶಕ್ಕೆ ಒಳ್ಳೆಯದಾದೀತೆಂದು ಈ ಸಂದರ್ಭದಲ್ಲಿ ತಿಳಿಸಿ ಮತ್ತೊಮ್ಮೆ ಶ್ರೀಮಾನ್ ಸಿದ್ಧವೀರಪ್ಪನವರನ್ನು ವಿರೋಧಪಕ್ಷದ ನಾಯಕರನ್ನಾಗಿ ಘೋಷಿಸಿರುವುದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ಅಭಿನಂದಿಸುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ವಿರೋಧಪಕ್ಷದ ನಾಯಕರು ಯಾರು ಎಂದು ಮಾನ್ಯ ಅಧ್ಯಕ್ಷರು ಪ್ರಕಟ ಮಾಡಿದಾಗ ಆ ಸುದ್ದಿಯನ್ನು ಕೇಳಿ ನನಗೆ ಸಂತೋಷವಾಯಿತು. ನನಗೆ ಅಧ್ಯಕ್ಷರ ಬಗ್ಗೆ ಬಹಳ ಗೌರವವಿದೆ. ಆದರೆ ಅವರು ಆ ವಿಷಯವನ್ನು ಪ್ರಕಟ ಮಾಡಿದ ರೀತಿಯನ್ನು ನೋಡಿದರೆ ನನಗೆ ತುಂಬಾ ವಿಷಾದವಾಗುತ್ತದೆ. ಈ ವಿಷಯ ಪ್ರಕಟ ಮಾಡುವುದನ್ನು ಸ್ವಲ್ಪ ತಡೆಹಿಡಿಯಬೇಕೆಂದು ನಾವು ಕೇಳಿಕೊಂಡಿದ್ದೆವು. ಅವರೂ ಸಹ ಒಪ್ಪಿದ್ದರು. ಬಹುಶಃ ಹಾಗೆ ಹುಲಿ ಹಿಡಿದ ತಮಾಷೆ ನೋಡಬೇಕು ಎನ್ನುವ ರೀತಿಯಲ್ಲಿ ಅವರು ಪ್ರಕಟ ಮಾಡಿದರು. ಶ್ರೀಮಾನ್ ಸಿದ್ಧವೀರಪ್ಪನವರು ಈ ಮನೆಯ ವಿರೋಧಪಕ್ಷದ ನಾಯಕರು ಎಂದು ಪ್ರಕಟ ಮಾಡಿದರೆ ವಿರೋಧ ಪಕ್ಷದ ಇತರೇ ಪಾರ್ಟಿಯವರು ‘‘ಡೌನ್ ವಿತ್...’’ ಎಂದು ಹೇಳಿ ಹೊರಗೆ ಹೋಗುತ್ತಾರೆ ಎಂಬ ದೃಷ್ಟಿಯನ್ನು ಅವರು ಇಟ್ಟುಕೊಂಡಂತೆ ಕಾಣುತ್ತದೆ. ಈ ಒಂದು ಕಪಟನಾಟಕವನ್ನು ಮಾನ್ಯ

ಅಧ್ಯಕ್ಷರು ಆದದ್ದು ನನಗೆ ಬಹಳ ದುಃಖವಾಯಿತು. I want to expose the tactics played by the Syndicate Congress along with the collusion of the Speaker. We in Opposition will never get divided whether Sri Siddaveerappa is the Leader or Sri Sivappa is the leader or Sri Chennabasappa is the leader or Sri Devaraj Urs is the leader. We in Opposition are all one to fight this Government. I charge he Hon. Speaker on this issue.

Mr. DEPUTY SPEAKER.—The Hon. Member should not cast assersions on the Chair. The Hon. Speaker has done it according to rules.

†**ಶ್ರೀ ಎಲ್. ಶ್ರೀಕಂಠಯ್ಯ.**—ನನ್ನ ವಿಷಾದಕರ ಸಂಗತಿ ಎಂದರೆ ಮಾನ್ಯ ಅಧ್ಯಕ್ಷರು ಶ್ರೀಮಾನ್ ಸಿದ್ಧವೀರಪ್ಪನವರು ವಿರೋಧಪಕ್ಷದ ನಾಯಕರಾಗಿದ್ದಾರೆ ಎಂದು ಪ್ರಕಟ ಪಡಿಸಿದ್ದು ತಮಾಷೆ ನೋಡುವುದಕ್ಕಾಗಿ ಎಂಬ ಕಾರಣದಿಂದ. ಅವರ ಹೆಸರನ್ನು ಪ್ರಕಟ ಮಾಡಿದ್ದಾರೆ ಬೇರೆ ಪಾರ್ಟಿಯವರು ಏನು ಮಾಡುತ್ತಾರೋ ನೋಡೋಣ ಎಂಬ ಕಾರಣ ಅವರಲ್ಲಿ ಇತ್ತು ಎಂದು ಕಾಣುತ್ತದೆ. ಈ ಒಂದು ವಕ್ರ ರಾಜಕೀಯ ಚೇತ ಎಂದು ಹೇಳುತ್ತೇನೆ. ಈ ಸಂದರ್ಭದಲ್ಲಿಯೇ ವಿರೋಧಪಕ್ಷದಲ್ಲಿರುವ ಎಲ್ಲಾ ಪಕ್ಷದ ಮುಖಂಡನಾಗಿ ನಾನು ಇಲ್ಲಿ ವರ್ತಿಸುತ್ತೇನೆಂದು ಮಾನ್ಯ ಸಿದ್ಧವೀರಪ್ಪನವರು ಪ್ರಕಟಣೆ ಮಾಡಿದ್ದಾರೆ.

ವಿರೋಧಪಕ್ಷದ ಸದಸ್ಯರು ಎಸ್. ವಿ. ಡಿ. ಸಭೆ ಸೇರಿ, ನಮ್ಮ ನಾಯಕರು ಆಯ್ಕೆ ಆಗುವವರೆಗೆ, ಈಗ ಅಧ್ಯಕ್ಷರು ಏನ ಅಪ್ಪಣೆ ಕೊಡಿಸಿದ್ದಾರೆ, ಅದನ್ನು ಅಂಗೀಕರಿಸಿ, ನಾವು ಪರಸ್ಪರ ಸಹಕಾರ ನೀಡುವುದರಲ್ಲಿ ಯಾವ ದೋಷವೂ ಇಲ್ಲ. ಆದ್ದರಿಂದ ನಮ್ಮ ಪೂರ್ಣ ಸಹಕಾರವನ್ನು ರೂಲಿಂಗ್ ಕಾಂಗ್ರೆಸ್ಸಿಗೆ ಕೊಡುತ್ತೇವೆ ಎಂದು ನಮ್ಮ ಮಿತ್ರರ ಪರವಾಗಿ ಭರವಸೆ ಕೊಡುತ್ತೇನೆ.

Notices of Adjournment Motion.—

(i) *re*: Eviction of Certain Families in Gangavathi.

ಶ್ರೀ ಎಂ. ನಾಗಪ್ಪ.—ನಾನು ಗಂಗಾವತಿಯ ಬಗ್ಗೆ ಒಂದು ಮುಖ್ಯವಾದ ನಿಲುವಳಿ ಸೂಚನೆ ಕಳುಹಿಸಿದ್ದೇನೆ.

Mr. DEPUTY SPEAKER.—I have not looked into it. It will be taken up tomorrow.

Sri M. NAGAPPA.—It is a very important matter. About 50 families have been evicted.

Mr. DEPUTY SPEAKER.—It will be taken up tomorrow.

(ii) *re*: Intimation of arrest by the Magistrates to the Speaker.

Sri M. NAGAPPA.—What about my privilege motion against the Magistrate? I refer to the Rules of Procedure, rule No. 184 and 185. Rule 184 says:—

> "When a member is arrested on a criminal charge or for a criminal offence or is sentenced to imprisonment by a court or is detained under an executive order, the committing judge, magistrate or executive authority, as the case may be, shall

(Sri M. Nagappa)

> immediately intimate such fact to the Speaker indicating the reasons for the arrest, detention or conviction, as the case may be, as also the place of detention or imprisonment of the member in the appropriate form set out in Schedule II."

Rule 186 says :—

> "When a member is arrested and after conviction released on bail, pending an appeal or otherwise released, such fact shall also be intimated to the Speaker by the authority concerned in the appropriate form set out in Schedule II."

ನಿನ್ನೆ ಮಾನ್ಯ ಸಭಾಧ್ಯಕ್ಷರು ಒಂದು ಕಮ್ಯುನಿಕೇಷನ್ ಓದಿ ತೋರಿಸಿದ್ದಾರೆ. ಅದು ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಕಳುಹಿಸಿದ್ದುದು. ಮ್ಯಾಜಿಸ್ಟ್ರೇಟರ್ ಮುಂದೆ ಅವರನ್ನು ಪ್ರೊಡ್ಯೂಸು ಮಾಡಿದನಂತರ ಅವರು ಬೇಲ್ ಕೇಳಿದರೋ ಇಲ್ಲವೋ, ಅವರನ್ನು ಡಿಟೆನ್‌ಷನ್‌ನಲ್ಲಿಟ್ಟಿದ್ದಾರೆಯೇ, ಇಟ್ಟಿದ್ದರೆ, ಎಲ್ಲಿ ಇಟ್ಟಿದ್ದಾರೆ, ಆ ಸ್ಥಳ ಹೇಗಿದೆ ಎನ್ನುವ ಎಲ್ಲಾ ವಿಷಯಗಳನ್ನು ವಿಶದೀಕರಿಸಿ ಒಂದು ಕಮ್ಯೂನಿಕೇಷನ್ನನ್ನು ಮ್ಯಾಜಿಸ್ಟ್ರೇಟರು ಈ ಮಾನ್ಯ ಸಭೆಗೆ ಕೊಡಬೇಕಾಗಿತ್ತು. ರೂಲ್ಸ್ 184 ಮತ್ತು 185 ರ ಪ್ರಕಾರ ಅಂಥ ಯಾವ ಕಮ್ಯೂನಿಕೇಷನನ್ನೂ ಕಳುಹಿಸಿಲ್ಲ. ವಾಟಾಳ್ ನಾಗರಾಜರ ಬಗ್ಗೆ ಯಾವ ವಿಷಯವು ತಿಳಿಯದೇ ಇರತಕ್ಕ ಪರಿಸ್ಥಿತಿಯಲ್ಲಿದ್ದೇವೆ. ಅದು ಬಹಳ ಗಂಭೀರವಾದ ವಿಷಯವಾಗಿದೆ. ಅದಕ್ಕಾಗಿ ನಾನು ರೂಲ್ಸ್ 178 ಮತ್ತು 179ರ ಪ್ರಕಾರ ನಿನ್ನೆ ಒಂದು ನೋಟೀಸು ಕಳುಹಿಸಿದ್ದೆ. ಅದರ ಜೊತೆಗೆ ಈವೊತ್ತು ಕಳುಹಿಸಿಕೊಟ್ಟಿದ್ದೇನೆ ದಯವಿಟ್ಟು ಅದನ್ನು ಮೂವ್ ಮಾಡಲು ಕನ್‌ಸೆಂಟ್ ಕೊಡಬೇಕು. ಕನ್‌ಸೆಂಟ್ ಕೊಟ್ಟನಂತರ ಪ್ರಿವಿಲೇಜು ಕಮಿಟಿಗೆ ಕಳುಹಿಸಿ.

This is an accepted principle of all parliaments. Even in United Kingdom, the Magistrate who has remanded the accused to the judicial custody must inform the House. There were instances in which such magistrates were served with Notice.

ಗೋಪಿಚೆಟ್ಟಿಪಾಳ್ಯಂ ಮ್ಯಾಜಿಸ್ಟ್ರೇಟರು ನಮ್ಮ ರಾಜ್ಯದ ಮ್ಯಾಜಿಸ್ಟ್ರೇಟರಲ್ಲ ಎಂದು ಹೇಳಬಹುದು. ಫೆಡರಲ್ ಸಿಸ್ಟಂ ಆಫ್ ಗವರ್ನ್‌ಮೆಂಟು ನಮ್ಮ ದೇಶದಲ್ಲಿ ಇದೆ. ಒಂದೇ ಕಾನ್‌ಸ್ಟಿಟ್ಯೂಷನ್ನಿನಲ್ಲಿ ನಾವು ಕೆಲಸ ಮಾಡುತ್ತಾ ಇರುವುದರಿಂದ ಕ್ರಿಮಿನಲ್ ಪ್ರೊಸೀಜರು ಕೋಡು ಪ್ರಕಾರ ನೋಟೀಸು ಸರ್ವ್ ಮಾಡಲು ಅವಕಾಶವಿದೆ.

ಉಪಾಧ್ಯಕ್ಷರು.—ನನಗೆ ಗೊತ್ತಿರುವ ಪ್ರಕಾರ ಅಲ್ಲಿಯ ಮ್ಯಾಜಿಸ್ಟ್ರೇಟರು ಕನ್‌ವಿಕ್ಷನ್ ಕೊಟ್ಟರೆ, ನಮಗೆ ತಿಳಿಸಬೇಕು. It will be taken up tomorrow.

Sri V. N. PATIL.—I have also given notice of a privilege motion about the arrest and detention of Sri Vatal Nagaraj.

Mr. DEPUTY SPEAKER.—That will be taken up tomorrow, as I have already stated.

(iii) *re*: Lathi charge on students in Bidar.

Sri V. N. PATIL.—I have moved an adjournment motion regarding lathi-charge on students in Bidar who are on indefinite strike agitating for reduction of prices of food articles in hotels. The hotel managements have colluded with the Police and beaten the Student Action Council

General Secretary Revannasiddappa, Final B.A. student and he has sustained head injuries. We do not know what his condition is now. It is necessary that the Chair should direct the Home Minister to give in detail a statement about the arrest and detention and beating and other reckless illegalities committed by the Police. In the past such adjournment motions are disallowed. But the difficulty is if this is not checked in time and if the Police is allowed to behave in the fashion it has behaved in the past, the same Chintamani affair will be repeated and the Police will not hesitate to play with the lives of students. Therefore, it is necessary for this House to intervene in this matter and I request the Chair to allow the adjournment motion and discuss about the seriousness of the matter. Let this matter not be taken up in a light-hearted manner because students of today are the leaders of tomorrow. Therefore it becomes necessary that the adjournment motion must be considered in all its seriousness and it may therefore be allowed by the Chair.

Mr. DEPUTY SPEAKER.—I have just now looked into it. Strikes do not form the subject-matter of an adjournment motion. That s why I cannot give my consent. But anyway, I will ask the concerned Minister to make a statement tomorrow.

Sri V. N. PATIL.—If I am assured of a statement, that is all-right.

(iv) *re*: General strike and Hartal in Belgaum.

Sri B. B. SAYANAK.—I have given notice of an adjournment motion.

Mr. DEPUTY SPEAKER.—It will be taken up tomorrow.

Sri B. B. SAYANAK.—There is a general strike in Belgaum and Hartal in Belgaum. There is a tense situation and the Deputy Commissioner has promulgated an order under Section 35 of the Police Act. I remember the leader of the P.S.P. is the President of Union and he is undergoing a fast since 13 days. There is Bengal-Bihar Construction Company. More than 5,000 workers are working in that Company. The Labour Union is of the opinion that they want bonus and over-time wages etc., and there was an agreement between the Management and the Labour Union. But then the Management is not going to sign the agreement. From 18th of this month, the Labour Leader, President of the Union is undergoing fast. Today is the 13th day and his weight is reduced by 20 pounds. I have requested the Government to take initiative and intervene in the matter and force the Bengal-Bihar Company to sign the agreement. If that is not done, there will be tense situation and I think the Labour Leader will not servive. I therefore request you to allow my adjournment motion.

Mr. DEPUTY SPEAKER.—I have looked into the adjournment motion. Hunger-strikes do not form the subject matter of an adjournment motion. This is a continuing matter and therefore I cannot give my consent.

Calling Attention to matters of urgent Public Importance :

(i) *re:* Police firing in Chickmagalur during December 1969.

Sri C. M. S. SASTRY (Chickmagalur).—Sir, I rise to call the attention of the Chief Minister to a matter of urgent public importance namely the firing by the Police at Chickmagalur on 18th December 1 69 and also arson loot committed by anti-social elements and indiscriminate arrests and lathi charges made by the Police on many respectable persons, like, press reporters, Government officials, etc. on 19th December 1969 and 20th December 1969.

† **Sri VEERENDRA PATIL** (Chief Minister). Sir, it is reported that there was an agitation by the students of Chickmagalur for reduction in rates of eatables in the hotels. Attempts were made by the Deputy Commissioner to bring about a settlement in this regard. On 17th December, 1969 stones were pelted and damage caused to glass panes of a hotel. Further trouble was prevented by prompt action by the Police. On 18th December, 1969 a big crowd gathered and in spite of advice by the authorities, the mob refused to disperse. Thereafter the Deputy Commissioner promulgated orders under section 35 of the Mysore Police Act prohibiting assembly of 5 or more persons in the town for a period of 7 days with immediate affect and the order was given wide publicity. Despite the prohibitory order the mob did not disperse and resorted to riotous behaviour. Thereafter the Police had to fire warning shots in order to disperse the mob.

In this connection, 8 cases have been registered under sections 147, 149, 332, 457, 380, 435 IPC. After investigation 2 of these cases have been charge-sheeted in the court of the Munsiff Magistrate, Chickmagalur, one for offences under section 147, 427 IPC and another for offences under section 147, 149, 457, 380, 433 and 427 IPC and taken on file as CC No. 48/70 and CC No. 78/70. In view of the fact that 2 of the cases are now *sub judice* and the other cases under investigation are closely connected with these cases, it may not be desirable for me to make any statement bearing on the facts and circumstances leading to the action taken.

In this incident however, 2 Police Sub-Inspectors, 2 home-guards and 5 constables received injuries and 2 police vans besides some hotels were damaged. The total damage to the public and private property was of the order of Rs. 55,000.

ಶ್ರೀ ಕೆ. ಎಚ್. ರಂಗನಾಥ್.—ಈಗ ಮಾನ್ಯ ಮುಖ್ಯಮಂತ್ರಿಗಳು ಮಾಡಿದ ಸ್ಟೇಟ್‌ಮೆಂಟನ್ನು ನಾನು ಕೇಳಿದ್ದೇನೆ. ಅಲ್ದೂರ್ ಸಬ್ ಇನ್‌ಸ್ಪೆಕ್ಟರು ಆ ದಿವಸ ಚಿಕ್ಕಮಗಳೂರಿನಲ್ಲಿ ಮಾರೆಹೊಕ್ಕಂಥಾ ಕೆಲವು ಜನಗಳನ್ನೂ ಹಾಗೂ ಗೌರವಸ್ಥರಾದಂತಹ ಕೆಲವು ಜನಗಳನ್ನೂ ಸಂಯುಕ್ತ ಕರ್ನಾಟಕ ಪ್ರೆಸ್ ಕರ್ಸ್ಪಾಂಡೆಂಟ್ಸನ್ನೂ ಇನ್‌ಡಿಸ್‌ಕ್ರಿಮಿನೇಟ್ ಆಗಿ ಹೊಡೆದಿದ್ದಾರೆ. ಆ ಪ್ರೆಸ್ ಕರೆಸ್‌ಪಾಂಡೆಂಟ್ನ ಅವರ ಕ್ಯಾಮರಾವನ್ನು ಕಿತ್ತುಕೊಂಡು ಅವರನ್ನು ಹೊಡೆದು ಅನಾಹುತ ಮಾಡಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪಿಸಲಿಲ್ಲ. ಈ ವಿಚಾರವನ್ನು ಕೂಲಂಕುಷವಾಗಿ ಸಭೆಯ ಮುಂದೆ ಇಡಬೇಕು. ಚಿಕ್ಕಮಗಳೂರಿನಲ್ಲಿ 17-18 ಘಟನೆಗಳು ನಡೆದಾಗ್ಯೂ ಕೂಡ ಮುಂದೆ ಏನಾಗಬಹುದು ಎಂಬುದು ಪೋಲೀಸಿನವರಿಗೆ ಗೊತ್ತಿದ್ದರೂ ಕೂಡ ಯಾವ ಕ್ರಮವನ್ನೂ ತೆಗೆದುಕೊಳ್ಳದೆ 19ನೇ ತಾರೀಖು ಬೆಳಿಗ್ಗೆ ಅಲ್ಲಿ ಹಾದಿ ಬೀದಿಯಲ್ಲಿ ಹೋಗತಕ್ಕಂಥ ಜನಗಳನ್ನು ಮನಸ್ಸಿಗೆ ಬಂದ ಹಾಗೆ ಹೊಡೆದು ಅವರನ್ನು ಲಾಕಪ್‌ನಲ್ಲಿ ಹಾಕಿ ತೊಂದರಪಡಿಸಿರತಕ್ಕ ಪರಿಸ್ಥಿತಿ ಇದೆ. ಆದ್ದರಿಂದ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿಚಾರವನ್ನು ಸ್ವಲ್ಪ ವಿಸ್ತಾರವಾಗಿ ಹೇಳಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

4.00 P. M.

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದೆ, 8 ಕೇಸಸ್ ರಿಜಿಸ್ಟರ್ ಮಾಡಿದ್ದಾರೆ. ಎರಡು ಕೇಸಸ್ ಇನ್‌ವೆಸ್ಟಿಗೇಶನ್ ಮುಗಿಸಿ ಚಾರ್ಜ್ ಶೀಟ್ ಹಾಕಿದ್ದಾರೆ. ಅದು ಕೋರ್ಟಿನಲ್ಲಿ ಇರುವುದರಿಂದ ಸಬ್ ಜುಡೀಸ್ ಆಗಿರುತ್ತದೆ. ಈ ಎಲ್ಲಾ ವಿಚಾರಗಳೂ ಕೋರ್ಟಿನ ಮುಂದೆ ಬರುತ್ತವೆ. ಅದರ ಬಗ್ಗೆ ಈಗ ಪ್ರತ್ಯೇಕವಾದ ಸ್ಟೇಟ್‌ಮೆಂಟ್ ಕೊಡುವುದು ಅಷ್ಟು ಸೂಕ್ತವಲ್ಲವೆಂದು ಕಾಣುತ್ತದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈಗ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಒಂದು ಸ್ಟೇಟ್‌ಮೆಂಟಿನಲ್ಲಿ 17ನೇ ತಾರೀಕಿನಲ್ಲಿ ಏನು ನಡೆಯಿತು ಎನ್ನುವುದನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಅವತ್ತು ಅಲ್ಲಿ ಪೋಲೀಸರು ಮಾಡಿದ ಕೃತ್ಯ ಮತ್ತು ಹೋಟೇಲುಗಳಿಗೆ ಕಲ್ಲೆಸದ, ಗ್ಲಾಸ್ ಒಡೆದ ವಿಚಾರ ಹೆಚ್ಚಾಗಿ ಪ್ರಸ್ತಾಪ ಮಾಡಿಲ್ಲ. 18ನೇ ತಾರೀಕಿಗೆ ಗ್ಲಾಸ್ ಎಲ್ಲಾ ಒಡೆದುದರಿಂದ, ಹೋಟೇಲುಗಳು ಮುಚ್ಚಿದ್ದೂ ಪ್ರಸ್ತಾಪ ಮಾಡಿಲ್ಲ. ಅಲ್ಲಿ ಏನು ಗಲಾಟೆಯಾಯಿತು ಅದನ್ನು ಮಾತ್ರ ಪ್ರಸ್ತಾಪ ಮಾಡಿದ್ದಾರೆ. ಇದರ ಜೊತೆಗೆ 19ನೇ ತಾರೀಕಿನಂದು ಒಬ್ಬ ಪತ್ರಿಕಾಕರ್ತನನ್ನು ಒಬ್ಬ ಸಪ್ಪು ಎನ್ನತಕ್ಕ ಸಬ್ ಇನ್‌ಸ್ಪೆಕ್ಟರ್ ಎಳೆದುಕೊಂಡು ಹೋಗಿ ಅವನ ಕೈಯಲ್ಲಿದ್ದ 800 ರೂಪಾಯಿಯ ಕೆಮರಾವನ್ನು ಪುಡಿ ಮಾಡಿದ್ದಾರೆ. ಇದರ ಬಗ್ಗೆ ಚಿಕ್ಕಮಗಳೂರಿನ ಜರ್ನಲಿಸ್ಟ್ ಅಸೋಶಿಯೇಶನವರು ಒಂದು ತೀರ್ಮಾನವನ್ನು ತೆಗೆದುಕೊಂಡು ಮುಖ್ಯಮಂತ್ರಿಯವರಿಗೆ ಕಳಿಸಿದ್ದಾರೆ. ಇದಲ್ಲದೆ ಒಬ್ಬ ನಂಜುಂಡಸ್ವಾಮಿ ಎನ್ನತಕ್ಕ ಕಾನ್‌ಸ್ಟೇಬಲ್ ಬಹಳ ದೌರ್ಜನ್ಯದಿಂದ ವರ್ತಿಸಿದ್ದಾನೆ. ಅಲ್ಲಿರುವ ಗೌರವಸ್ಥರನ್ನು ಪೋಲೀಸ್ ಸ್ಟೇಶನಿಗೆ ಕರಕೊಂಡು ಹೋಗಿ ಥಳಿಸಿ, ಅನೇಕ ಜನರಿಗೆ ಕೈಕಾಲು ಮುರಿಯುವ ಹಾಗೆ ಹೊಡೆದಿದ್ದಾರೆ. ಹೀಗೆ ಪೋಲೀಸರು ಮಧುಗಿರಿಯಲ್ಲಿ ಏನು ದೌರ್ಜನ್ಯ ನಡೆಸಿದ್ದಾರೆ, ಅದಕ್ಕಿಂತ ಹೆಚ್ಚು ಚಿಕ್ಕಮಗಳೂರಿನಲ್ಲಿ ನಡೆಸಿ ಒಂದು ಪೋಲೀಸು ರಾಜ್ಯವಾಗಿದೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟವಾದ ಒಂದು ಹೇಳಿಕೆ ಕೊಡಬೇಕು. ಮತ್ತು ಆ ಪತ್ರಿಕಾಕರ್ತನಿಗೆ ಪರಿಹಾರ ಕೊಡುವಂತಹ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಇವರು ಇಷ್ಟೆಲ್ಲಾ ಹೇಳಿದ್ದಾರೆ. ಆ ಘಟನೆಯಾದ ವೇಳೆ ನಾನು ಚಿಕ್ಕಮಗಳೂರಿಗೆ ಹೋಗಿದ್ದೆ. ಅವರು ಹೇಳಿದಂತೆ ಒಂದು ದೂರು ಅಲ್ಲಿಯ ನಾಗರೀಕರು ಮಾಡಿದ್ದಾರೆ ಮತ್ತು ಜರ್ನಲಿಸ್ಟ್ಸ್ ಕೂಡ ದೂರು ಮಾಡಿದ್ದಾರೆ. ಅದರ ಮೇಲೆ ಅದನ್ನು ಸ್ಪೆಶಲ್ ಸಿ ಐ ಡಿಗೆ ಕಳಿಸಿದ್ದೇವೆ. ಸ್ಪೆಶಲ್ ಇನ್‌ವೆಸ್ಟಿಗೇಶನ್ ಮಾಡಿ ಇಷ್ಟರಲ್ಲೇ ಒಂದು ವರದಿಯನ್ನು ಸಲ್ಲಿಸಬಹುದು. ಅದು ಬಂದಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಳ್ಳುತ್ತೇವೆ. ಈಗ ಅದು ಸಬ್ ಜುಡಿಸ್ ಇರುತ್ತದೆ. ಅದರ ಬಗ್ಗೆ ಏನೂ ಹೇಳುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು.—ಮುಂದಿನ ವಿಚಾರ Calling attention by Sri Mallappa.

(ii) re: The fire accident at Udeva Village, Tarikere Taluk on 17th January 1970.

Sri M. MALLAPPA.—Sir, I call the attention of the Minister for Revenue to the fire accident at Udeva Village, Tarikere Taluk, on 17th January 1970.

† **Sri H. V. KOUJALGI** (Minister for Revenue).—An accidental fire broke out on 17th January 1970 at about 1 P.M. at Udeva village, Tarikere Taluk, Chickmagalur District in which 38 hutments were burnt. The fire was xtinguished at about 10 P.M. with the assistance of the local officers and non-officials of the said village. Two lorries of the Public Works Department and one private tractor were used for bringing water to extinguish the fire. The total loss is estimated at Rs. 32,685. Out of 38 huts burnt, 10 belonged to Kurbas, 8 to Valmiki people and 20 to lambanies. One person who received injuries in the fire has been admitted at the Government hospital at Birur and is under treatment. He is reported to be recovering. The affected persons who are about 210 in number are accommodated in the village Panchayat Hall, School building, Temple and private houses.

The Tahsildar, Tarikere has collected Rs. 1,000 in cash for purchase of bed sheets and sarees for free distribution among the sufferers. People have contributed grains and have also arranged free feeding for the victims for one week.

The District Development Assistant and the Deputy Superintendent of Police, Chickmagalur have also visited the spot.

The Deputy Commissioner has placed an additional allotment of Rs. 3,000 at the disposal of the Tahsildar, Tarikere, for affording immediate cash relief and has instructed the Tahsildar to grant building materials also to the sufferers of the fire accident.

Sri M. MALLAPPA.—Many thanks for the urgent relief given. More than 210 persons were affected by this accident. Will you give some more relief ?

Sri H. V. KOUJALGI.—The Tahsildar and the Deputy Commissioner are entitled to grant more relief taking into consideration the circumstances and the necessity.

(iii) *re*: Collection of penal Interest on loans from ryots

Sri B. GANGANNA.—I call the attention of the Minister for Revenue to the collection of penal interest from the ryots on suspended instalments of loans.

Sri H. V. KOUJALGI.—As per Note below Article 197 of the Mysore Finance Code, when the recovery of loan instalments in respect of (1) Loans under the Mysore Land Improvement Loans Act, 1963,

(2) Loans under the Mysore Agriculturists' Loans Act, 1963 (3) Loans under the Mysore Non-Agriculturists' Loans Act, 1958 (4) Loans for sinking of Irrigation Wells, and (5) Interest free loans to the sufferers of floods, rains, fire accidents and other natural calamities is suspended on account of unfavourable seasonal conditions, no penal interest should be levied on such suspended instalments. The ordinary interest, however, must be recovered on such suspended instalments and penal interest will be levied on overdue arrears of loans except during the suspended period. Government has also issued necessary instructions to the Divisional and Deputy Commissioners in Government letter No. RDF 69 TKV 67 dated 15th March 1 68. From the above provision in the M.F.C. and the instructions issued, it is evident that no penal interest can be charged on overdue instalments of loans during the suspended period. If specific instances wherein penal interest has been charged in contravention of the above provision in the M.F.C., is brought to the notice of Government, action will be taken to set matters right.

ಶ್ರೀ ಬಿ. ಗಂಗಣ್ಣ.—ಕೊನೆಯದಾಗಿ ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ಸ್ಪೆಸಿಫಿಕ್ಕಾಗಿ ಯಾವುದಾದರೂ ಒಂದು ಇನ್‌ಸ್ಟೆನ್ಸ್‌ನ್ನು ಸರ್ಕಾರದ ಗಮನಕ್ಕೆ ತಂದರೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಟಿ.ಡಿ.ಬಿ. ಮೀಟಿಂಗ್‌ನಲ್ಲಿ ರೈತರಿಂದ ಸಾಲಗಳ ಬಗ್ಗೆ ಪೀನಲ್ ಇಂಟರೆಸ್ಟ್ ಕಲೆಕ್ಟ್ ಮಾಡುವ ವಿಚಾರವಾಗಿ ಚರ್ಚೆ ಬಂದಾಗ, ಡಿ.ಸಿ. ಅವರು ಇಂತಹ ಪ್ರಾವಿಷನ್ ಇರುವುದು ನನ್ನ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಅದನ್ನು ಮಾನ್ಯ ಸದಸ್ಯರು ಗಮನಕ್ಕೆ ತರುತ್ತಿದ್ದಾರೆಂದು ಹೇಳಿದರು. ಆದ್ದರಿಂದ ಈ ವಿಚಾರವಾಗಿ ಇದುವರೆಗೂ ಕಲೆಕ್ಟ್ ಮಾಡಿರುವುದನ್ನು ಮುಂದೆ ಅಡ್ಜಸ್ಟ್ ಮಾಡಿಕೊಳ್ಳಬೇಕೆಂದು ಸೂಕ್ತ ಆದೇಶವನ್ನು ತುಮಕೂರು ಜಿಲ್ಲಾ ಡೆಪ್ಯುಟಿ ಕಮಿಷನರಿಗೆ ಸರ್ಕಾರದವರು ಸಲಹೆ ಕೊಡುತ್ತಾರೆಂದು ನಾನು ನಂಬಿದ್ದೇನೆ.

Sri H. V. KOUJALGI.—The matter will be enquired into and if the Deputy Commissioner, Tumkur District has acted against the rules the matters will be set right.

Mysore Excise (Amendment) Bill, 1970

(Debate Continued)

Mr. DEPUTY SPEAKER.—Now Legislative Business. Sri D. B. Kalmankar to continue his speech.

†**Sri D. B. KALMANKAR** (Aland).—Yesterday I said that there was no need for promulgation of the ordinance which is now to be replaced by a Bill. I have gone through the whole amending Bill and what I find is, the intention of the Government is to make the penal provisions rigorous. But, in its anxiety to make the penal provisions rigorous, the judicial powers of the court are being curtailed. If we just look into the various sections, section 32, in the orginal section there is a provision for imprisonment up to six months and fine of not less than Rs. 100. Now by this amendment it is tried to make the imprisonment more rigorous, *i.e.*, it must be not less than three months.

(SRI D. B. KALMANKAR)

That means, at any rate the imprisonment of three months has to be awarded. If there is a second offence or subsequent offence, no discretion is given at all to the court. There is a fixed imprisonment of six months. By this, what I say is that regard is not given to judicial discretion to be exercised by the courts. Generally what happens is, when an offence is investigated there comes the question of evidence. When evidence comes, the question of credibility of evidence comes in and there are so many circumstances that have to be taken into consideration by the courts. The court has to weigh each case on its merit and if the court comes to the conclusion that evidence is not convincing, though there may be some grains of truth to say that the offence was committed, the court may not be fully satisfied. In that case the court would award punishment of a lesser type. Here, such discretion usually exercrised by the courts is curtailed. Whatever the type of evidence that may be before the court, the court is compelled to award punishment of six months imprisonment and fine of not less than rupees one thousand. I submit that this type of legislation goes to curtail the judicial discretion of the court. I submit that the Government in its anxiety to make the penal provision more rigorous has failed to give its mind to this particular important part of the jurisdiction of the court and the judicial discretion that the court has to use.

Then I will come to section 33 which prescribed the penalty for rendering denatured spirit, fit for human consumption. By amending this section provision has been made for imposing rigorous imprisoment and fine. This is what clause 5 states:

> "In section 33 of the prinicipal Act, for the words 'be punished with imprisonment for a term which may extend to one year or with fine which may extend to one thousand rupees, or with both' the words 'be punished for each offence with rigorous imprisonment for a term which may extend to one year and with fine which may extend to one thousand rupees' shall be substituted and the following proviso shall be inserted before the Explanation, namely:
>
> 'Provided that the punishment—
>
> (i) for the first offence shall be not less than six months' rigorous imprisonment and fine of not less than five hundred rupees; and
>
> (ii) for the second and subsequent offences shall be rigorous imprisonment for one year and fine of rupees one thousand for each such offence'".

Here again the judicial function of the court is curtailed. As I have already submitted no discretion is left to the court to see the circumstances of each case and award punishment accordingly. This I think is not a good legislation.

Then I would come to the amendment of section 34. Here also in the proviso a similar provision is made.

Then coming to the amendment of section 37, for the second and subsequent offences the punishment is six months imprisonment and a fine of Rs. 500. Here also it is stated " not less than 6 months " and " not less than Rs. 500." So it may be six months or more, or Rs. 500 or more. This type of restriction is only to curtail the powers of the court. Under these circumstances I am afraid that there may not be justice. Circumstances vary from case to case and the court has to take into consideration the evidence and award punishment. My submission is that here there must be a change.

Then I come to the new sections inserted by clause 9. Here there is a lot of scope for mischief to be made at the time of the hearing of the cases. There are chances for that mostly in rural areas and in small towns where lodging and boarding are made in houses. This is what the new section 38A says :

> " Whoever in a hotel, boarding house or refreshment room not licensed under this Act to sell any intoxicant,–
>
> (i) supplies or consumes ; or
>
> (ii) allows any other person to supply or consume, any intoxicant, except in a place used for lodging of persons visiting such hotel, boarding house or refreshment room, shall, on conviction, be punished with imprisonment...."

In such cases even though a person has taken liquor in a hotal or boarding house, he can very well take the plea that he was not there but he was in a lodging house. So this provision allows a lot of scope for lawyers to twist the case and the very purpose of making this an offence punishable is defeated by making an exception. So my submission is that this exception must not be there and the exception should be removed.

I was also speaking about delegation of powers. Under section 7 the powers of the State Government are now being delegated to the Excise Commissioner or to any other Excise Officers who may also include officers who are mentioned in sections 5 and 6, may be Sub-Inspector or any other person. Secondly, by sub-section (2) what is tried to be done is that the powers of the Excise Commissioner or the Deputy Commissioner are going to be delegated to other officers. My submission is that sub-section (1) is not necessary. It is not good to delegate the powers which vest in the Government to the Excise Commissioner or Deputy Commissioner or any other Excise Officer.

With these words I oppose the way in which discretion of the court has been restricted and curtailed. I submit that this may be reconsidered. I would request Government not to be in a hurry. Let this be referred to a Select Committee and let the Select Committee decide all these points.

With these observations, I thank the Chair for the opportunity given to me.

† **ಶ್ರೀ ಹೆಚ್. ಎನ್. ನಂಜೇಗೌಡ (ಅರಕಲಗೂಡು).**—ಮಾನ್ಯ ಅಧ್ಯಕ್ಷರೇ, ಈ ಎಕ್ಸೈಜ್ ಅಮೆಂಡ್‌ಮೆಂಟ್ ಬಿಲ್ಲಿನಲ್ಲಿ ಅಬ್ಜೆಕ್ಟ್ಸ್ ಅಂಡ್ ರೀಸನ್ಸ್ ಏನು ಇದೆ ಅದನ್ನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಚೆನ್ನಾಗಿ ತಿಳಿಸಿದ್ದಾರೆ. ನಿಜವಾಗಿ ಇದೇ ಉದ್ದೇಶಕ್ಕೆ ತಂದಿದ್ದಾರೆಯೇ ಎನ್ನುವುದು ಅನುಮಾನವಾಗಿದೆ. ಈಗ ಇರತಕ್ಕಂಥ 7ನೇ ಸೆಕ್ಷನ್ ಪ್ರಕಾರ ಸರ್ಕಾರದವರು ಎಕ್ಸೈಜ್ ಕಮೀಷನರಿಗಾಗಲಿ, ಡೆಪ್ಯುಟಿ ಕಮೀಷನರಿಗಾಗಲಿ ಬೇರೆ ಯಾರಿಗಾದರೂ ಆಗಲಿ ನೋಟಿಫಿಕೇಷನ್ ಮುಖಾಂತರ ಅಧಿಕಾರಗಳನ್ನು ಡೆಲಿಗೇಟ್ ಮಾಡಬಹುದು ಎಂದು ಇದೆ. ಅವರು ನೋಟಿಫಿಕೇಷನ್ ಪ್ರಕಾರ any person or persons ಎಂದು ಹೇಳಿದ್ದಾರೆ. ಇದು ಎಕ್ಸೈಜ್ ಇನ್‌ಸ್ಪೆಕ್ಟರಿಗೂ ಅನ್ವಯವಾಗುತ್ತದೆ ಎಂದರೆ ಅವರು ಮೈಸೂರಿನಲ್ಲೇ ಇರಲಿ, ಹಾಸನದಲ್ಲೇ ಇರಲಿ ಅರಕಲಗೂಡಿನಲ್ಲೇ ಇರಲಿ, ಈ ಕ್ಲಾಸ್‌ಗೆ ಸೇರಿಕೊಳ್ಳುತ್ತಾರೆ. Class of persons ಅನ್ನುವುದು ಅಲ್ಲ. ಒಳಗಿನ ಅರ್ಥ ಏನು ಎನ್ನುವುದು ನನಗೆ ಗೊತ್ತಾಗುವುದಿಲ್ಲ. ಇದನ್ನು ಎಕ್ಸೈಜ್ ಕಮೀಷನರನ್ನೂ ಕೇಳದೆ ನೀವು ಈ ರೀತಿ ಡಿಲಿಗೇಟ್ ಮಾಡಬೇಕು ಎಂದರೆ ಅರಕಲಗೂಡಿನಲ್ಲಿ ಒಬ್ಬ ಎಕ್ಸೈಜ್ ಇನ್‌ಸ್ಪೆಕ್ಟರು ಇದ್ದರೆ ಅವನಿಗೆ ಅಧಿಕಾರ ಕೊಡುವುದು ಸಾಧ್ಯ. ಸೆಕ್ಷನ್ 7ರಲ್ಲಿ The State Government may by notification delegate to the Excise Commissioner or to any other Excise Officer ಎಂದು ಇದೆ. ಎಕ್ಸೈಜ್ ಆಫೀಸರ್ ಎಂದರೆ ಯಾರು ಒಬ್ಬರಿಗಾದರೂ ಈ ರೀತಿ ಡೆಲಿಗೇಷನ್ ಆಫ್ ಪವರ್ಸ್ ಕೊಡುವುದಕ್ಕೆ ಸಾಧ್ಯವೇ. ಇದರಿಂದ ನನಗೆ ಕೆಲವಾರು ಅನುಮಾನಗಳು ಇವೆ. ಈಹೊತ್ತು ಎಕ್ಸೈಜ್ ಇಲಾಖೆಯ ಅಧಿಕಾರಿಗಳನ್ನು ಯಾವರೀತಿ ಬಳಸಿಕೊಳ್ಳಲು ಸಾಧ್ಯ ಎನ್ನುವುದೂ ಗೊತ್ತಿದೆ. ಸ್ವಂತ ಕಾರ್ಯಗಳಿಗೆ ಪಕ್ಷದ ಅಭಿವೃದ್ಧಿಗೆ ಅಧಿಕಾರಿಗಳ ಮುಖಾಂತರ ಎಕ್ಸೈಜ್ ಕಂಟ್ರಾಕ್ಟರುಗಳನ್ನು ಬಳಸಿಕೊಳ್ಳಬಹುದು. ಅದೇ ರೀತಿ ಗಡಿನಾಡು ಗಾಂಧಿ ನಿಧಿಗೆ ಎಕ್ಸೈಜ್ ಕಂಟ್ರಾಕ್ಟರುಗಳಿಂದ ಹಣ ವಸೂಲು ಮಾಡಲಿಲ್ಲವೇ, ಅವರಿಗೆ ನಿಧಿಯನ್ನು ರಾಜ್ಯ ಸರ್ಕಾರಿಂದ ಕೊಟ್ಟರೇ ? ಅದೇ ರೀತಿ ಕನ್ನಡ ರಾಜ್ಯೋತ್ಸವಕ್ಕೂ ವಸೂಲ್ಮಾಡಿದ್ದೀರಿ. ಅವರು ನಿಮ್ಮ ಜೇಬಿನಲ್ಲಿ ಇರಬಹುದು, ನಿಮ್ಮ ಮನೆಯವರೇ ಇರಬಹುದು, ಏನು ಬೇಕಾದರೂ ಮಾಡಬಹುದು. ನೀವು ವಸೂಲು ಮಾಡಿದ ಹಣಕ್ಕೆ ರಶೀತಿ ಕೊಡದೇ ಇದ್ದರೂ ಪರವಾಯಿಲ್ಲ, ಅಧಿಕಾರಿಗಳೂ ಕೂಡ ನಿಮ್ಮವರೇ ಆಗಿದ್ದಾರೆ. ಈ ವಿಷಯವನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನೀವು ಈ ಬಿಲ್ಲು ತಂದಿರುವ ಉದ್ದೇಶ ಏನಾದರೂ ಸೌಕರ್ಯ ಆಗಬೇಕು ಎಂದು. ಆ ರೀತಿ ಏನಾದರೂ ಆಗಬೇಕಾದರೆ ಕೆಲವು ಅಧಿಕಾರಿಗಳನ್ನು ಫೋರ್ಸ್ ಮಾಡಿ ಅವರಿಂದ ಏನು ಬೇಕಾದರೂ ಕೆಲಸ ಮಾಡಿಸಿಕೊಳ್ಳಬಹುದು. ತಮ್ಮ ಈ ಒಂದು ಫೋರ್ಸ್‌ನಿಂದ ಅಧಿಕಾರಿಗಳು ಬೆಲೆ ಕೊಟ್ಟು ಕಂಟ್ರಾಕ್ಟರುಗಳಿಂದ ದುಡ್ಡು ವಸೂಲ್ಮಾಡಬಹುದು. ಆ ಉದ್ದೇಶಕ್ಕೆ ಈ ಬಿಲ್ಲನ್ನು ತಂದಿದ್ದೀರೋ ಈ ಒಂದು ಡಿಸ್ಕ್ರಿಷನ್ ಉಪಯೋಗಿಸಿ ಕಮಿಷನರನ್ನೇ ಅಲ್ಲ ಬೇರೆ ಯಾವ ಅಧಿಕಾರಿಯೇ ಆಗಲಿ ತಾಲ್ಲೂಕು ಮಟ್ಟದ ಅಧಿಕಾರಿಯೇ ಆಗಲಿ ರಾಜ್ಯ ಅವರಿಗೆ ನೇರವಾಗಿ ಡೆಲಿಗೇಟ್ ಮಾಡೋಕ್ಕೆ ಅಧಿಕಾರವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಪೋಲೀಸ್ ಬೆನಿಫಿಟ್ ಫಂಡ್‌ಗೆ, ಗಾಂಧಿ ಶತಮಾನೋತ್ಸವಕ್ಕೆ, ಗಡಿನಾಡು ಗಾಂಧಿ ನಿಧಿಗೆ ಮತ್ತು ಕನ್ನಡ ರಾಜ್ಯೋತ್ಸವಕ್ಕೆ ಇವಕ್ಕೆಲ್ಲಾ ಹೆಂಡದ ಕಂಟ್ರಾಕ್ಟರುಗಳಿಂದ ದುಡ್ಡು ವಸೂಲು ಮಾಡಿದ್ದೀರಿ. ರಾಜ್ಯ ಸರ್ಕಾರದ ಹತ್ತಿರ ದುಡ್ಡು ಇಲ್ಲವೇ ?

4-30 P.M.

ಬೇಕು ಬೇಕಾದಾಗ ಯಾವುದೇ ಅಧಿಕಾರಿಗಾದರೂ ತಾವು ಈ ಅಧಿಕಾರ ಕೊಡಬಹುದು. ಹೆದರಿಸುವುದಕ್ಕೆ ಒಂದು ಏರ್ಪಾಡು ಮಾಡುತ್ತಾ ಇದ್ದೀರಿ, ನಂಜೇಗೌಡನನ್ನು ಚುನಾವಣೆಯಲ್ಲಿ ಸೋಲಿಸಬೇಕಪ್ಪಾ ನೋಡಿ ಹಣ ಕೊಡಿ ಅಂತ ಹೇಳಿ ಕಂಟ್ರಾಕ್ಟರುಗಳನ್ನು ಒತ್ತಾಯ ಮಾಡಲಿಕ್ಕೆ ಅಥವಾ ಅವರಮೇಲೆ ಒತ್ತಾಯ ತರಲಿಕ್ಕೆ ಸಾಧ್ಯವಿದೆ. ಇಂತಹ ಸ್ವಂತ ಕಾರ್ಯಗಳಿಗೆ ಒತ್ತಡ ತರುವುದಕ್ಕೆ, ಪ್ರಭಾವ ಬೀರುವುದಕ್ಕೆ, ಪಕ್ಷದ ಬಲವನ್ನು ಬೆಳೆಸುವುದಕ್ಕೆ ಸಹಾಯ ಮಾಡಿಕೊಡುವ ರೀತಿಯಲ್ಲಿ ಯಾವುದಾದರೂ ಅಧಿಕಾರಿಗೆ ಅಧಿಕಾರ ಕೊಡಲು ಇಂತಹ ಒಂದು ಅಧಿಕಾರವನ್ನು ಪಡೆದುಕೊಳ್ಳುವುದಾದರೆ ಇದಕ್ಕಿಂತ ಅಪರಾಧ ಇನ್ನೊಂದು ಇಲ್ಲ ಎಂದು ಹೇಳಿ ನನಗೆ ಅನಿಸುತ್ತದೆ. ಈ ರೀತಿ ಮಾಡುವುದರಲ್ಲಿ ಒಂದು ಯೂನಿಫಾರ್ಮಿಟಿ ಇಲ್ಲದೇ ಇದ್ದರೆ ಇದು ಒಂದು ಒಳ್ಳೆಯ ಲೆಜಿಸ್ಲೇಷನ್ ಆಗುತ್ತದೆ ಎಂದು ಅನಿಸುವುದಿಲ್ಲ. ಇಂತಹ ಲೆಜಿಸ್ಲೇಷನ್ನನ್ನು ನಮ್ಮ ಈ ಸಭೆಯಲ್ಲಿ ಪಾಸ್ ಮಾಡುವುದು ನಮ್ಮ ಯೋಗ್ಯತೆಗೆ ಸರಿಯಾದ್ದಲ್ಲ ಎಂಬುದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಆದ್ದರಿಂದ ಈಗ ಡ್ರಾಫ್ಟ್ ಮಾಡಿರುವುದನ್ನು ವಾಪಸು ಪಡೆದುಕೊಂಡು, ಇಫೆಕ್ಟೀವ್ ಇಂಪ್ಲಿಮೆಂಟೇಷನ್‌ಗೆ ಬೇಕಾದ ಒಂದು ಕಾಯಿದೆಯನ್ನು ತರಬೇಕೇ ಹೊರತು,

ಇಷ್ಟಬಂದ ಹಾಗೆ ಅಧಿಕಾರ ಇಟ್ಟುಕೊಳ್ಳತಕ್ಕ ರೀತಿ ನೀತಿ ಪ್ರಜಾಪ್ರಭುತ್ವದಲ್ಲಿ ಬಹಳ ವಿಷಾದನೀಯ. ಇದನ್ನು ಕೈಬಿಟ್ಟು ಸರಿಯಾದ ರೀತಿಯಲ್ಲಿ ಒಂದು ಲೆಜಿಸ್ಲೇಷನ್ ತರಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri V. N. PATIL** (Humnabad).—Mr. Speaker Sir, I would like to make some points on this Mysore Excise Bill, 1970. This is not a progressive legislation as it ought to be. Whatever the reliefs thought of have not been given. After going through this Bill and after going through the provisions in detai , I feel the Government seems to think they can acquire more money in the name of fine. What is the relief you have given? Wherever the words Rupees Five Hundred are mentioned, the words Rupees One Thousand have been substituted. Whatever they are going to achieve or get by adding these words, they are not mentioned either in the statement of objects and reasons nor we can find anywhere in the Bill. We do not know what is the motive for that. What looks more surprising and equally strange is that the Government has sought sanction of this House for giving retrospective effect to the reduction in excise duty. I can tell with all sincerity at my disposal that it is meant only to favour a fortunate few and to shield a few. I do not understand what is the necessity to introduce this clause. Under Section 67 (A), the Government is trying to seek power from this House just to shield some persons whom it wants and to give them some extraordinary concessions with retrospective effect. We have heard Sri Nanje Gowda saying what sort of delegation of Power the Government had asked for previously just to help the excise contractors. They framed such rules and regulations in 1969 that the Government lost not one crore of rupees but 8 to 10 crores of rupees. The Government failed to demand the amount of deposit from the Excise Contractors. Now some sort of fissiparous tendency is being developed to shield somebody and to punish somebody.

As regards clause 9—Penalty for supply or consumption of any intoxicant in certain places, some new clause is sought to be introduced and according to this some will go scotfree. The person who brings and supply the bottles will be left free whereas the man who is appointed to serve under somebody to supply, will be caught and punished. I request the Hon. Minister for Finance to look into the problem and see that this law is enforced on the persons who actually help to drink but not on the persons who supply. I do not know how the Hotel Owners, restaurant owners, lodging owners have escaped the notice of the Hon. Minister. The clause says like this :

> "any intoxicant, except in a place used for lodging of persons visiting such hotel, boarding house or refreshment room, shall, on conviction be punished with imprisonment for a term which may extend to six months or with fine which may extend to rupees two hundred or with both."

The proviso is going to help the mischievous elements. Yesterday the Minister was pleased to say that there are thousands of people who without securing licence are doing this selling business and we have to

(SRI V. N. PATIL)

bring them under this clause. But on the contrary this clause provides exemption to those who never bother to secure licence and advise their customers who come to their boarding, lodging and refreshment rooms, to drink. Most of these Hotel owners and bar owners are left scot free. By this the Government is legalising the blackmarketing. The hotel owners are being exempted if liquor is used in their rooms but not outside the hotels. Therefore I request the Minister to bring further amendment on this point or to drop the present clause. If you bring an amendment just to stop this business in Hotels and such other things, it will be great boon to the public and there will be fear in the minds of the new hotel owners not to take up this business. This business is being done on a large scale in Bangalore City.

Further, I say there is no need for further delegation of powers and I need not repeat it. It is dangerous and it goes against the spirit of democracy. Bureaucrats should not be permitted to handle the policies of the Government. These matters are left to the discretion of this House. Whatever the discretion this House gives, the Government is bound to follow it and get the works done. Sri Nagappa was mentioning about the behaviour and the work of the officials of the Excise Department. If you go on giving them shelter, you will create complications with the result you will be opening flood gates for mischief and corruption among these officials. Whatever that this House has delegated so far is quite enough and with this the Government should run the administration not asking for any further delegation of powers. With these words, I conclude. Thank you, Sir.

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಮಳವಳ್ಳಿ).—ಸನ್ಮಾನ್ಯ ಸಭಾಪತಿಗಳೇ, ಇಂದಿನ ದಿವಸ ಮೈಸೂರು ಎಕ್ಸೈಸ್ ಅಮೆಂಡ್‌ಮೆಂಟ್ ಬಿಲ್ 1970 ಏನು ಸರ್ಕಾರದವರು ಸಭೆಯ ಮುಂದೆ ತಂದಿದ್ದಾರೆ ಅದನ್ನು ನಾನು ತೀವ್ರವಾಗಿ ವಿರೋಧಿಸುತ್ತಿದ್ದೇನೆ. 1965ರಲ್ಲಿ ಮೂಲ ಮಸೂದೆಯನ್ನು ಏನು ಮಾಡಿದರೋ ಅದು ಕೂಡ ರಾಜ್ಯಾಂಗದಲ್ಲಿರುವ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ ಪಾಲಿಸಿ ಎನ್ನುವುದಕ್ಕೆ ವಿರೋಧವಾಗಿದೆ. ರಾಜ್ಯಾಂಗದಲ್ಲಿ ಅಳವಡಿಸಿರುವ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ ಪಾಲಿಸಿ ಏನಿದೆ ಅದಕ್ಕೆ ಗೌರವವನ್ನು ಕೊಡದೆ, ಪಾನ ನಿರೋಧವನ್ನು ರಾಜ್ಯದಲ್ಲಿ ಆಗ ಇದ್ದಂಥ ಕಾಂಗ್ರೆಸ್ ಸರ್ಕಾರ ಯಾವ ಸಂದರ್ಭದಲ್ಲಿ ತೆಗೆದು ಹಾಕಿತು ಎನ್ನುವುದನ್ನು ನಾವು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬಹುದಾಗಿದೆ. 1965-66ರಲ್ಲಿ ಮೂಲ ಕಾನೂನು ಆದ ಸಂದರ್ಭದಲ್ಲಿ ಚುನಾವಣೆಗಳ ಕಾಲವಾಗಿತ್ತು. ಟಾಡಿ ಲೈಸೆನ್ಸಿಂದ ಚುನಾವಣೆಗಳನ್ನು ನಡೆಸುವುದಕ್ಕೆ, ಇಷ್ಟ ಬಂದವರಿಗೆ ಲಕ್ಷ ರೂಪಾಯಿಗಳಿಂದ ಹಿಡಿದು 5 ಸಾವಿರ, 10 ಸಾವಿರ ರೂಪಾಯಿ ಖರ್ಚು ಮಾಡಿ ಚುನಾವಣೆಗಳು ನಡೆಯುವ ಸಂದರ್ಭ ಬಂದಾಗ, ಅಂಥ ಪರಿಸ್ಥಿತಿಯಲ್ಲಿ, ಕ್ರೂಷಿಯಲ್ ಟೈಮ್ಸ್ ಆಫ್ ಕಾಂಗ್ರೆಸ್ ಎನ್ನುವ ಪರಿಸ್ಥಿತಿ ಬಂದಂಥ ಕಾಲದಲ್ಲಿ ಈ ಒಂದು ಕಾನೂನನ್ನು ಅವರು ತೆಗೆದುಕೊಂಡು ಬಂದರು. ಮಹಾತ್ಮ ಗಾಂಧಿಯವರ ಡೆತ್ ಅನಿವರ್ಸರಿಯನ್ನು ದೇಶಾದ್ಯಂತ ನಾವು ಈ ದಿವಸ ಆಚರಿಸುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ಮಹಾತ್ಮ ಗಾಂಧಿಯವರು ಜೀವಸಹಿತ ಇದ್ದಿದ್ದ ಪಕ್ಷದಲ್ಲಿ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಕಾಂಗ್ರೆಸ್ಸಿಗರು ಹೋಗುತ್ತಿಲ್ಲವಲ್ಲ ಎಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು ಎಂದು ನಾನಾದರೂ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕುರುಕ್ಷೇತ್ರದ ಯುದ್ಧದ ವಿಚಾರವಾಗಿ ಡಾಕ್ಟರ್ ಅಂಬೇಡ್ಕರ್ ಅವರು ಪಾರ್ಲಿಮೆಂಟ್‌ನಲ್ಲಿ ಒಂದು ಮಾತನ್ನು ಹೇಳಿದ್ದಾರೆ. ದೇಶದ ಬೊಕ್ಕಸಕ್ಕೆ ಎಕ್ಸೈಸ್ ಬರುವಂಥ ಸಂದರ್ಭದಲ್ಲಿ ಯಾವ ರೀತಿಯಲ್ಲಿ ದೊಡ್ಡ ದೊಡ್ಡ ಶ್ರೀಮಂತರಿಂದ ಇಂಟರ್‌ಫಿಯರೆನ್ಸ್ ಆಗುತ್ತಿದೆ, ಟೀ ಟ್ಯಾಪರ್ಸ್

ನಿಂದ ಹಣ ತೆಗೆದುಕೊಳ್ಳುತ್ತಿದ್ದಾರೆ, ಯಾವ ಒಂದು ರಾಜಕೀಯ ಪಕ್ಷವೇ ಆಗಲೀ, ಅದು ಕಾಂಗ್ರೆಸ್ ಪಕ್ಷವಾಗಲೀ, ಇನ್ನು ಯಾವುದೇ ಪಕ್ಷವಾಗಲೀ, ಯಾವ ಕಾನೂನನ್ನು ತರಬೇಕಾಗಲೀ, ಯಾವ ತಿದ್ದುಪಡಿಯನ್ನು ತರಬೇಕಾಗಲೀ, ಸಾಮಾನ್ಯವಾಗಿ ಯಾರಿಂದ ಸಹಾಯವನ್ನು ಪಡೆಯುತ್ತಾರೆ ಅಂಥವರ ಪ್ರಭಾವ ಇದ್ದೇ ಇರುತ್ತದೆ ಎನ್ನುವುದನ್ನು ಹೇಳುತ್ತಾರೆ. ಕೌರವರಿಗೂ ಮತ್ತು ಪಾಂಡವರಿಗೂ ಕುರುಕ್ಷೇತ್ರದಲ್ಲಿ ಯುದ್ಧ ನಡೆದಾಗ. ದ್ರೋಣಾಚಾರ್ಯರು ಕೌರವರ ಕಡೆ ಸೇರಿಕೊಂಡು ಯುದ್ಧ ಮಾಡುತ್ತಾರೆ. ಆಗ ಕೌರವರ ಕಡೆ ಏಕೆ ಸೇರಿದ್ದೀರಿ ಎನ್ನುವ ಪ್ರಶ್ನೆ ಬಂದಾಗ, ಕೌರವರ ಮನೆಯ ಉಪ್ಪನ್ನು ತಿಂದಿರುವುದರಿಂದ ಅವರ ಕಡೆ ವಹಿಸಿಕೊಂಡು ಯುದ್ಧ ಮಾಡಬೇಕಾಗಿವೆ ಎಂದು ದ್ರೋಣಾಚಾರ್ಯರಂಥವರೇ ಹೇಳಿದ್ದಾರೆ. ಡೈರೆಕ್ಟಿವ್ ಪ್ರಿನ್ಸಿಪಲ್ಸ್‌ಗೆ ಯಾವ ತರಹ ಮನ್ನಣೆಯನ್ನೂ ಕೊಡದೆ, ಹಣದ ದುರಾಸೆಯಿಂದ ಇಂಥ ಕಾನೂನುಗಳನ್ನು ತರುತ್ತಿದ್ದಾರೆ. ಹಿಂದುಳಿದ ವರ್ಗದವರು, ಹರಿಜನರು ಎಂದು ಮಹಾತ್ಮ ಗಾಂಧಿಯವರು ಯಾರನ್ನು ಕರೆದರೋ ಅಂಥವರ ಆರ್ಥಿಕ, ಸಾಮಾಜಿಕ, ನೈತಿಕ ಮುನ್ನಡೆ ಮಾಡಬೇಕೆಂದು ಏನು ಮಹಾತ್ಮ ಗಾಂಧಿಯವರು ಹೇಳಿದರೋ, ಯಾವ ಉದ್ದೇಶದಿಂದ ಪಾನನಿರೋಧವನ್ನು ತೆಗೆದುಕೊಂಡು ಬಂದರೋ, ಆ ಉದ್ದೇಶವನ್ನು ಸರ್ಕಾರ ಹಿಂದೂಡಿದೆ ಎಂದು ಹೇಳುತ್ತೇನೆ. ಮುಂದುವರಿದ ಜನರು ಹಿಂದುಳಿದ ಜನರು ಯಾವತ್ತಿಗೂ ಹಿಂದುಳಿದವರಾಗಿಯೇ ಇರಬೇಕು, ಯಾವತ್ತಿಗೂ ಸಮಾಜದಲ್ಲಿ ಮುಂದುವರಿದವರು ಮುಂದುವರಿಯುತ್ತಲೇ ಇರಬೇಕು ಎಂದು ಹೇಳತಕ್ಕದ್ದನ್ನು ನಾವು ನೋಡಿದ್ದೇವೆ. ಮಹಾತ್ಮ ಗಾಂಧಿಯವರ ಉಪ್ಪಿನ ಸತ್ಯಾಗ್ರಹ ನಡೆದ ಕಾಲದಲ್ಲಿ 16-17 ಕೋಟಿ ರೂಪಾಯಿ ಉಪ್ಪಿನ ತೆರಿಗೆ ಬರುತ್ತಿತ್ತು. ಮಹಾತ್ಮ ಗಾಂಧಿಯವರ ಜನ್ಮ ಶತಾಬ್ದಿಯನ್ನು ಆಚರಿಸುವ ಈ ವರ್ಷದಲ್ಲಿ ಉಪ್ಪಿನ ತೆರಿಗೆಯನ್ನೂ ಕೂಡ ತಗದ-ಹಾಕಬಹುದು. ಆದರೆ ಅದರಿಂದ 50 ಕೋಟಿ ರೂಪಾಯಿನಷ್ಟು ಗಳಿಸಲೇಬೇಕು ಎಂದು ಹೇಳುತ್ತಾರೆ. ನಮ್ಮ ಹಣಕಾಸಿನ ಸಚಿವರು ಗೋವ ಕಾಂಗ್ರೆಸ್ ಅಧಿವೇಶನದಲ್ಲಿ ಪಾನನಿರೋಧವನ್ನು ರದ್ದು ಮಾಡತಕ್ಕದಲ್ಲ, ಪಾನ ನಿರೋಧವನ್ನು ಮತ್ತೆ ಜಾರಿಗೆ ತರಬೇಕು ಎನ್ನುವಂಥ ಒಂದು ನಿರ್ಣಯಕ್ಕೆ ರುಜು ಹಾಕಿದ್ದಾರೆ. ಮೊನ್ನೆತಾನೇ ನಡೆದ ಅಹಮದಾಬಾದಿನ ಅಧಿವೇಶನದಲ್ಲಿ ಕೂಡ 10 ಪಾಯಿಂಟ್ ಪ್ರೋಗ್ರಾಂನಲ್ಲಿ ಕೂಡ ಪಾನ ನಿರೋಧವನ್ನು ಜಾರಿಗೆ ತರಬೇಕು ಎನ್ನುವುದನ್ನು ಹೇಳಿದ್ದಾರೆ. ಆದರೆ ಈ ಸಂದರ್ಭದಲ್ಲಿ ಕೆಲವರಿಗೆ ರಕ್ಷಣೆಯನ್ನು ಕೊಡತಕ್ಕದ್ದು, ಇನ್ನು ಕೆಲವರನ್ನು ತುಳಿಯತಕ್ಕದು ಏನು ನಡೆಯುತ್ತಿದೆ ಎಂದು ಹೇಳಬೇಕಾಗಿದೆ. ನಾವು ಷಾಪ್‌ವೈಸ್ ಹರಾಜು ಮಾಡಬೇಕು ಎಂದು ಹೇಳಿದೆವು ಹಾಗೆ ಇವರು ಮಾಡಲಿಲ್ಲ. ಮುಖ್ಯವಾಗಿ ಸಾರ್ವಜನಿಕಾಭಿಪ್ರಾಯಕ್ಕೆ ಬೆಲೆ ಕೊಡತಕ್ಕುದಾಗಲೀ, ಈಕ್ವಾಲಿಟಿ ಇನ್ ಲಾ ಅಂಡ್ ಅಡ್ಮಿನಿಸ್ಟ್ರೇಷನ್ ಎನ್ನುವುದನ್ನು ಆಚರಣೆಗೆ ತರುವುದರಲ್ಲಾಗಲೀ ಏನೂ ಪಾಲಿಸಿಲ್ಲ.

ಪ್ರಜಾಪ್ರಭುತ್ವ ದೇಶದಲ್ಲಿ ಶಾಶ್ವತವಾಗಿ ಉಳಿಯಬೇಕು ಎಂದರೆ ಅದಕ್ಕೆ ಮುಖ್ಯವಾಗಿ ಐದು ಕಂಡೀಷನ್‌ಗಳಿರಬೇಕು ಎಂದು ಹೇಳಿದರು.

1. Long-term veto of five years,
2. Immediate veto in Parliament,
3. Equality in law and administration,
4. Constitutional morality, and
5. Public consciousness.

ಆದರೆ ಈ ತತ್ವಗಳಿಗೆ ತಿಲಾಂಜಲಿ ಕೊಟ್ಟು 20 ವರ್ಷಗಳಿಂದ ಒಂದು ರೀತಿಯಲ್ಲಿ ಆಡಳಿತ ಮಾಡಿಕೊಂಡು ಬಂದಿದ್ದಾರೆ. ನಾನೂ ಕೂಡ ಕಾಂಗ್ರೆಸ್‌ನಲ್ಲಿದ್ದೆ. ಆದರೆ ಈಗ ವಿರೋಧ ಪಕ್ಷದಲ್ಲಿ ಕುಳಿತಿದ್ದೇನೆ. ನಾನು ಏನು ಹೇಳುತ್ತಿದ್ದೇನೆಂದರೆ ಈ ಹೊತ್ತಿನ ದಿವಸ ಇವರಿಗೆ ಅಧಿಕಾರದಲ್ಲಿರುವುದಕ್ಕೆ ಯಾವ ನೈತಿಕ ಹಕ್ಕೂ ಇಲ್ಲ. ಮೂಲ ಕಾನೂನೇ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ ಪಾಲಿಸಿಗೆ ವಿರೋಧವಾಗಿರುವುದರಿಂದ ಅದಕ್ಕೆ ತಂದಿರುವ ತಿದ್ದುಪಡಿ ಏನಿದೆ ಅದು ಕೂಡ ಸರಿಯಲ್ಲ. ಅಲ್ಲದೆ ತಿದ್ದುಪಡಿ ಮಸೂದೆಯಲ್ಲಿ ಜೀನರ್ ಕ್ಲಾಜ್ ಹಾಕಿರುವುದು ಇದನ್ನೆಲ್ಲ ನೋಡಿದರೆ ಅವರು ಹೆಚ್ಚು ಹಣವನ್ನು ಸ್ಕ್ವೀಜ್ ಮಾಡಿ ತಮ್ಮ ವೈಯಕ್ತಿಕ ಸ್ವಾರ್ಥತೆ, ತಮ್ಮ ಪ್ರಗತಿ ಹಾಗೂ ಪಕ್ಷದ ಪ್ರಗತಿಯನ್ನು ಸಾಧಿಸಲು ಮಾತ್ರ ಸರ್ಕಾರವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಕ್ರಾಂತಿಕಾರಕ ಬದಲಾವಣೆಗಳು ಸಂವಿಧಾನಕ್ಕೆ ಆಗತಕ್ಕ ಕಾಲ ಬರುತ್ತದೆ. ಈ ಮಾತನ್ನು 15 ವರ್ಷಗಳ ಕೆಳಗೆ ಮೊಟ್ಟಮೊದಲು ನನ್ನ ಭಾಷಣದಲ್ಲಿ ಇದೇ ಸಭೆಯಲ್ಲಿ ಹೇಳಿದ್ದೇನೆ.

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ಕೊನೆಯದಾಗಿ ಇನ್ನೊಂದು ವಿಷಯ ಹೇಳುತ್ತೇನೆ. ಅಹಮದಾಬಾದಿನಲ್ಲಿ ಸೇರಿದ ಕಾಂಗ್ರೆಸ್ಸಿನಲ್ಲಿ ಮುರಾರ್ಜಿ ದೇಸಾಯಿಯವರು ಪಾನ ನಿರೋಧ ಇರಬೇಕು ಎಂದು ಹೇಳಿದ್ದಾರೆ. ಆದರೆ ಇಲ್ಲಿ ನಮ್ಮ ರಾಜ್ಯದಲ್ಲಿ ಅದನ್ನು ರದ್ದು ಮಾಡಿದರು. ಇಂದು ಅಧಿಕಾರಿಗಳು ಛಾಡಿ ಕಂಟ್ರಾಕ್ಟರ್‌ಗಳ ಕೈ ಗೊಂಬೆಯಾಗಿದ್ದಾರೆ. ಇದರ ದುಷ್ಪರಿಣಾಮ ಕೂಡಲೇ ಕಂಡುಬರುತ್ತದೆ. ಅದನ್ನು ನೋಡುವ ದಿವಸ ಬರುತ್ತದೆ. ಇದರಿಂದ ಸಮಾಜಕ್ಕೆ ಒಳ್ಳೆಯದಾಗುವುದಿಲ್ಲ ಆದುದರಿಂದ ಈಗ ತಂದಿರತಕ್ಕಂಥ ಬಿಲ್ಲನ್ನು ತೀವ್ರವಾಗಿ ವಿರೋಧಿಸುತ್ತೇನೆ. ಒಟ್ಟಿನಲ್ಲಿ ಈ ತಿದ್ದುಪಡಿ ಮಸೂದೆಯಲ್ಲಿ ಇರತಕ್ಕಂಥ ಪೀನಲ್ ಕ್ಲಾಜನ್ನು ಒತ್ತಾಯಪೂರ್ವಕ ವಿರೋಧಿಸುತ್ತೇನೆ. ಈ ಸರಕಾರದವರು ಹಣದ ದುರಾಸೆಗೆ ಕಂಟ್ರಾಕ್ಟರ್ ಮತ್ತು ಅಧಿಕಾರಿಗಳ ವರ್ಗ ಸೃಷ್ಟಿ ಮಾಡಿ ಹೆಚ್ಚಿನ ರೀತಿಯಲ್ಲಿ ಹಣ ವಸೂಲ್ಮಾಡಬಹುದು ಎಂಬ ದೃಷ್ಟಿಯಿಂದ ಇದನ್ನು ತಂದಿದ್ದಾರೆ. ಆದುದರಿಂದ ಈ ಸಂದರ್ಭದಲ್ಲಿ ಈ ತಿದ್ದುಪಡಿಯನ್ನು ತೀವ್ರವಾಗಿ ವಿರೋಧಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಹಣಕಾಸು, ಯೋಜನಾ ಮತ್ತು ಯುವಜನ ಕಲ್ಯಾಣ ಶಾಖೆಗಳ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಮುಖ್ಯವಾಗಿ ಮೂರು ಕಲಮುಗಳ ಬಗ್ಗೆ ಟೀಕೆಯಾಗಿದೆ. ಮೊದಲನೆಯದಾಗಿ ಕಲಮು 7ಕ್ಕೆ ಸಂಬಂಧಪಟ್ಟಂತಿದೆ. ಕೆಲವು ಅಧಿಕಾರಿಗಳು ಸರಕಾರದ ಕೈಯಲ್ಲಿದ್ದರೂ ಅವುಗಳನ್ನು ಎಕ್ಸೈಜ ಕಮಿಷನರ್ ಅವರಿಗೆ ಡೆಲಿಗೇಟ್ ಮಾಡತಕ್ಕಂಥಾದ್ದು. ಇದರಲ್ಲಿ ಬೇರೆ ಉದ್ದೇಶ ಇದೆ ಎಂದು ನಂಜೇಗೌಡರು ಮಾತನಾಡುತ್ತಾ ಹೇಳಿದರು. ಈಗ ಇದರಲ್ಲಿ ಇರತಕ್ಕಂಥಾದ್ದು ಏನು ಅಂದರೆ ತಮ್ಮ ಕೈಯ್ಯಲ್ಲಿ ಇರತಕ್ಕಂಥ ಅಧಿಕಾರವನ್ನು ಎಕ್ಸೈಜ ಕಮಿಷನರರು ಕೆಳಗಿನ ಅಧಿಕಾರಿಗಳಿಗೆ ಡೆಲಿಗೇಟ್ ಮಾಡುವ ಪ್ರಾವಿಜನ್ ಇದೆ. ಕೆಲವೊಂದು ಅಧಿಕಾರಗಳು ರಾಜ್ಯ ಸರಕಾರದ ಕೈಯ್ಯಲ್ಲಿ ಇವೆ. ಕಳೆದ ವರ್ಷ ಅನುಭವಕ್ಕೆ ಬಂದಿರುವುದು ಏನೆಂದರೆ ಪ್ರತಿಯೊಂದು ಅಧಿಕಾರ ಚಲಾಯಿಸುವಾಗ ಎಕ್ಸೈಜ್ ಕಮಿಷನರರು ಸರಕಾರದ್ದು ಅಪ್ರೂವಲ್ ತೆಗೆದುಕೊಂಡು ಮಾಡಬೇಕಾಗುತ್ತದೆ. ಲೈಸನ್ಸ್ ಕೊಡಬೇಕಾದರೆ ಅಥವಾ ರದ್ದು ಮಾಡಬೇಕಾದರೆ, ಆಕ್ಷನ್ ಕನ್ಫರ್ಮ್ ಮಾಡಬೇಕಾದರೆ ಅಥವಾ ರೀ-ಆಕ್ಷನ್ ಮಾಡಬೇಕಾದರೆ ಪ್ರತಿಯೊಂದು ಸಲ ಸರಕಾರದವರಿಗೆ ಬಂದು ಮಂಜೂರಾಗಿ ಹೋಗಬೇಕು. ಈ ವರ್ಷ ಜುಲೈ ತಿಂಗಳ ಮೊದಲು ಎಕ್ಸೈಜ್ ಕಂಟ್ರಾಕ್ಟ್ಸ್ ಆಕ್ಷನ್ ಆಯಿತು. ಅದರಲ್ಲಿ ತುಂಬಾ ಪೈಪೋಟಿಯಾದರಿಂದ ಅನೇಕ ಜನರು ಹಿಂದೆ ಬಿದ್ದರು. ಕಂಟ್ರಾಕ್ಟ್ ತೆಗೆದುಕೊಂಡಮೇಲೆ ಅವರಿಗೆ ಲುಕ್ಸಾನು ಆಯಿತು. ಆದುದರಿಂದ ಕಂಟ್ರಾಕ್ಟ್ ಕೆಲಸ ಅವರು ಕೈ ಬಿಟ್ಟರು. ಇಂಥ ಸಂದರ್ಭದಲ್ಲಿ ಪ್ರತಿಯೊಂದು ಕೇಸಿನಲ್ಲೂ ಡೆಪ್ಯೂಟಿ ಕಮಿಷನವರು ಎಕ್ಸೈಜ್ ಕಮಿಷನರರಿಗೆ ಬರೆದು, ಎಕ್ಸೈಜ್ ಕಮಿಷನರರು ಸರಕಾರಕ್ಕೆ ಬರೆದು ಅಪ್ರೂವಲ್ ತೆಗೆದುಕೊಂಡು ರೀ-ಆಕ್ಷನ್ ಮಾಡುವುದಕ್ಕೆ ಹೋದರೆ ಮಧ್ಯ ಹದಿನೈದು ಇಪ್ಪತ್ತು ದಿವಸ ವಿಳಂಬವಾಗುವ ಸಂದರ್ಭ ಇದೆ. ಈ ಸಮಯದಲ್ಲಿ ಯಾರು ಕಂಟ್ರಾಕ್ಟ್ಸ್ ನಡೆಸಬೇಕು ? ಹಳೇ ಕಂಟ್ರಾಕ್ಟರ್ಸ್ ಸಿದ್ಧರಿಲ್ಲ. ಹಾನಿಯಾದ್ದರಿಂದ ಅಂಗಡಿ ಮುಚ್ಚಲು ತಯಾರಾಗಿದ್ದಾರೆ. ಹೊಸ ಕಂಟ್ರಾಕ್ಟರನಿಗೆ ಕೊಡಲು ಡಿ.ಸಿ.ಗೆ ಅಧಿಕಾರವಿಲ್ಲ. ಇದರಿಂದ ಸರಕಾರಕ್ಕೆ ಬರತಕ್ಕಂಥ ಆದಾಯ ತಪ್ಪುತ್ತದೆ. ಇದರಲ್ಲಿ ಯಾವುದೇ ಅಧಿಕಾರದ ದುರುಪಯೋಗದ ಪ್ರಶ್ನೆ ಇಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಗಡಿನಾಡ ಗಾಂಧಿ ಸತ್ಕಾರಕ್ಕಾಗಿ ಎಕ್ಸೈಜ್ ಕಂಟ್ರಾಕ್ಟರಿಂದ ವಂತಿಗೆ ವಸೂಲ್ಮಾಡಿದ್ದಕ್ಕೆ ಅಕೌಂಟ್ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಗಡಿನಾಡ ಗಾಂಧಿ ಸತ್ಕಾರಕ್ಕಾಗಿ ಹಣ ಎಲ್ಲರಿಂದ ತೆಗೆದುಕೊಂಡಿದೆ. ಅವರಿಗೆ ಈ ವಿಷಯಜ್ಞಾನ ಎಷ್ಟಿದೆ ನನಗೆ ಗೊತ್ತಿಲ್ಲ. ಯಾವುದೇ ರಾಜಕೀಯ ಉದ್ದೇಶಕ್ಕಾಗಿ ಆಗಲಿ, ಬೇರೆ ಉದ್ದೇಶಕ್ಕಾಗಿ ಆಗಲಿ ನಾವು ಎಕ್ಸೈಜ ಕಂಟ್ರಾಕ್ಟರರಿಂದ ವಂತಿಗೆ ಒತ್ತಾಯದಿಂದ ವಸೂಲ್ಮಾಡಿಲ್ಲ. ಯಾವುದೇ ಒಬ್ಬ ಕಂಟ್ರಾಕ್ಟರನಿಗೆ ಆಗಲಿ ಮುಖ್ಯ ಮಂತ್ರಿಗಳು ಹಾಗೆ ಪತ್ರ ಬರೆದಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ. ಗಡಿನಾಡ ಗಾಂಧಿಯವರು ಬಂದಾಗ್ಗೆ ಹಣ ಕೂಡಿಸಿದ್ದು ಕೇಂದ್ರ ಸರಕಾರದ ಆದೇಶ ಬಂದಿದ್ದರಿಂದ. ವ್ಯಾಪಾರಸ್ಥರಿಗೆ, ವರ್ತಕರಿಗೆ, ಸಂಘ ಸಂಸ್ಥೆಗಳಿಗೆ, ಜನರಿಗೆ ಒಂದು ಅಪೀಲು ಹೊರಡಿಸಿದೆ. ಅದನ್ನು ಅವರು ಚೀಫ್ ಮಿನಿಸ್ಟರ್ ಆಗಿ ಹೊರಡಿಸಿಲ್ಲ ಗಡಿನಾಡ ಗಾಂಧಿ ಸತ್ಕಾರ ಸಮಿತಿ ಅಧ್ಯಕ್ಷರಾಗಿ, ಕೇಂದ್ರ ಸಮಿತಿಯ ಆದೇಶದ ಮೇಲೆ ಜನರಿಗೆ ಅಪೀಲು ಹೊರಡಿಸಿದ್ದಾರೆ. ಜನರಿಗೆ ಅಪೀಲು ಕಳಿಸಿದೆ. ಅದರಲ್ಲಿ ಎಕ್ಸೈಜ್ ಕಂಟ್ರಾಕ್ಟರ್ ಇರಬಹುದು, ಪಿ.ಡಬ್ಲ್ಯೂ.ಡಿ ಕಂಟ್ರಾಕ್ಟರ್ ಇರಬಹುದು, ಸದಸ್ಯರಿಗೂ

ಕೂಡ ಅಪೀಲು ಬಂದಿರಬಹುದು, ವರ್ತಕರಿಗೂ ಹೋಗಿರಬಹುದು. ಒಂದು ವಿಶಿಷ್ಟ ಉದ್ದೇಶಕ್ಕಾಗಿ ಕಂಟ್ರಾಕ್ಟರರಿಗೆ ಮುಖ್ಯ ಮಂತ್ರಿಗಳೇ ಆಗಲಿ ಅಥವಾ ನಾನೇ ಆಗಲಿ ಪತ್ರ ಬರೆದಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ. ಆದುದರಿಂದ ಅದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ, ಆ ಆರೋಪ ಬೇರೆ ರೀತಿ ಮಾಡಿ. ಈ ತಿದ್ದುಪಡಿಯಿಂದ ಹೆಚ್ಚಿನ ಅಧಿಕಾರ ಸಿಕ್ಕುತ್ತದೆ, ಅದನ್ನು ನಿಷ್ಪಕ್ಷಪಾತವಾಗಿ ಉಪಯೋಗಿಸಿ ಹಣ ವಸೂಲ್ಮಾಡುತ್ತಾರೆ ಎಂದು ಹೇಳುತ್ತೇನೆ.

ಶ್ರೀ ಎಂ. ನಾಗಪ್ಪ.—ಟೆಲಫೋನ್ ಮಾಡಿದರು ಎಂಬ ನಿಲುವಳಿ ಸೂಚನೆ ಚರ್ಚೆ ಈ ಸಭೆಯಲ್ಲಿ ಮಾಡಿದ್ದೇವೆ. ಸರಕಾರದ ಮೇಲೆ ಆಪಾದನೆ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ನಿಲುವಳಿ ಸೂಚನೆ ಕೇಸು ಕೂಲಂಕಷವಾಗಿ ಚರ್ಚೆಯಾಗಿದೆ.

5-00 P.M.

ಇದನ್ನು ಪುನಃ ಎತ್ತುವುದರಿಂದ ಪ್ರಯೋಜನವಿಲ್ಲ. ಯಾವ ಪಾಯಿಂಟ್ ಎತ್ತಿದ್ದೀರೋ ಅದಕ್ಕೆಲ್ಲಾ ಉತ್ತರ ಕೊಟ್ಟಿದ್ದೇನೆ. ನಾವು ಆಡಳಿತ ಅನುಕೂಲ ಮತ್ತು ತ್ವರಿತಗತಿಯಿಂದ ನಿರ್ಣಯ ತೆಗೆದುಕೊಳ್ಳುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದೇವೆಯೇ ಹೊರತು ಬೇರೇ ಉದ್ದೇಶದಿಂದ ಅಲ್ಲ. 38 (ಎ) ಕಾಲಂ ಬಗ್ಗೆ ಕೆಲವು ಜನರು ಟೀಕೆ ಮಾಡಿದರು. ವಿ. ಎಚ್. ಪಾಟೀಲರು ಇದು ಜಾರಿಯಲ್ಲಿದ್ದರೆ ಕಷ್ಟ ಬರಬಹುದು ಎಂದು ಹೇಳಿದರು. ಆದುದರಿಂದ ಈ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ. ಅವರು ಹೇಳಿದ ಮಾತಿನಲ್ಲಿ ಸತ್ಯಾಂಶವಿದೆ. ಯಾವುದೇ ಹೋಟೆಲಿನಲ್ಲಿ ಆಗಲಿ, ಲಾಡ್ಜಿಂಗ್ ಹೌಸ್‌ನಲ್ಲಾಗಲಿ, ರೆಸ್ಟೋರೆಂಟ್‌ನಲ್ಲಿ ಆಗಲಿ ಇನ್‌ಟಾಕ್ಸಿಕೆಂಟ್ಸ್ ಮಾರಾಟಮಾಡಬೇಕಾದರೆ ಲೈಸೆನ್ಸ್ ಇಲ್ಲದೆ ಮಾರಾಟ ಮಾಡಲು ಸಾಧ್ಯವಿಲ್ಲ. ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೆ ಯಾವ ತರಹ ಅವ್ಯವಹಾರ ಇದ್ದರೂ ಅದನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡಬಹುದು. ಯಾವುದಾದರೂ ಲೈಸೆನ್ಸ್ ಇಲ್ಲದ ಹೋಟೆಲ್‌ನಲ್ಲಿ ಕುಡಿದರೆ ಅಥವಾ ಸಪ್ಲೈ ಮಾಡಿದರೆ ಅವರು ಶಿಕ್ಷೆಗೆ ಅರ್ಹರಾಗುತ್ತಾರೆ ಎಂದು ತಿದ್ದುಪಡಿ ತಂದಿದ್ದೇವೆ. ಆದರೆ ಪುನಃ ಯೋಚನೆ ಮಾಡಿ ನೋಡಿದರೆ ಈ ತಿದ್ದುಪಡಿಯನ್ನು ತಂದಿರುವುದರಿಂದ ವಿಶೇಷವಾಗಿ ಪ್ರಯೋಜನವಾಗಲಿಕ್ಕೆ ಇಲ್ಲ. ಜನರಿಗೆ ತೊಂದರೆ ಆಗುತ್ತದೆ. ಬಹುಶಃ ಪೋಲೀಸಿನವರಿಗೆ ಇದರಿಂದ ಉತ್ಪತ್ತಿ ಬರುವುದಕ್ಕೆ ಅವಕಾಶವಾಗುವುದು. ಆದುದರಿಂದ ಈ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಮೂರನೆಯದು ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರು ಹೇಳಿದಂಥ ಮಾತುಗಳ ಬಗ್ಗೆ ಎರಡು ಮಾತಿನಲ್ಲಿ ಉತ್ತರ ಕೊಡುವುದಕ್ಕೆ ಬಯಸುತ್ತೇನೆ. ಈ ಒಂದು ತಿದ್ದುಪಡಿಗೂ, ಪಾನನಿರೋಧಕ್ಕೂ ಯಾವ ಸಂಬಂಧವೂ ಇಲ್ಲ. ಪಾನನಿರೋಧವನ್ನು ಇಲ್ಲಿ ಎತ್ತತಕ್ಕಂಥದ್ದು ಪ್ರಸ್ತುತ ಅಲ್ಲ. ಅದರ ಬಗ್ಗೆ ಕೂಡ ಚರ್ಚೆಯಾಗಿದೆ. ಒಂದು ಮಾತು ಗೋವಾ ಕಾಂಗ್ರೆಸ್ ಗೊತ್ತುವಳಿಗೆ ನಾನು ಸಹಿ ಹಾಕಲಿಲ್ಲ. ಆಡುವುದು ಒಂದು ಮಾಡುವುದು ಒಂದು ನಾನು ಎಂದೂ ಮಾಡಿಲ್ಲ. ನನ್ನ ಅಭಿಪ್ರಾಯ ಸ್ಪಷ್ಟವಾಗಿದೆ. ಎಲ್ಲರೂ ಇದಕ್ಕೆ ಒಪ್ಪಿದರೆ ಸರಿ. ಇಲ್ಲದಿದ್ದರೆ ನನ್ನ ಅಭಿಪ್ರಾಯ ನನ್ನದು. ಅದಕ್ಕೆ ಬದ್ಧನಾಗಿದ್ದೇನೆ.

ಶ್ರೀ ಬೋಳಾ ರಘುರಾಮಶೆಟ್ಟಿ.—ಗೋವಾ ತೀರ್ಮಾನ ಆಳುವ ಕಾಂಗ್ರೆಸ್ಸಿಗೆ ಬೈಂಡಿಂಗ್ ಅಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.—ಆಳುವ ಕಾಂಗ್ರೆಸ್, ಸಂಸ್ಥಾ ಕಾಂಗ್ರೆಸ್ ಎಂದು ಹೇಳುವುದು ಎರಡು ಭಾಗ. ಗಾಂಧಿ ಶತಾಬ್ಧಿ ಸಮಾರಂಭದಲ್ಲಿ ಮೈಸೂರು ರಾಜ್ಯದಲ್ಲಿ ಪಾನನಿರೋಧವನ್ನು ಸಡಿಲಪಡಿಸುವುದಕ್ಕಾಗಿ ಯಾವ ಒಂದು ಕಾರ್ಯಕ್ರಮವೂ ತೆಗೆದುಕೊಂಡಿಲ್ಲ ಎಂದು ಮಲ್ಲಿಕಾರ್ಜುನ ಸ್ವಾಮಿಯವರಿಗೆ ಹೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಸ್ಯಾಚುಟರೇಟ್ ಪಾಯಿಂಟಿಗೆ ಬಂದಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಇನ್ನೂ ನಾಲ್ಕು ತಾಲ್ಲೂಕುಗಳಲ್ಲಿ ಪಾನನಿರೋಧ ಇದೆ.

ಈಗ ಮಹಾರಾಷ್ಟ್ರದಲ್ಲಿ ಮತ್ತು ಆಂಧ್ರ ರಾಜ್ಯದಲ್ಲಿ ಅಕ್ಟೋಬರ್ ಹೊತ್ತಿಗೆ ಗಾಂಧಿಶತಾಬ್ಧಿ ಸಮಾರಂಭಕ್ಕೆ ಪಾನನಿರೋಧವನ್ನು ರದ್ದುಮಾಡುತ್ತಾರೆ. ನಾನು ಅದರ ಬಗ್ಗೆ ಟೀಕೆ ಮಾಡುತ್ತಾ ಇಲ್ಲ. ಅವು ಆಯಾಯ ಸಂಸ್ಥಾನಗಳಿಗೆ ಸಂಬಂಧಪಟ್ಟ ಧೋರಣೆ ವಿಚಾರ. ಶ್ರೀಮಾನ್ ಮಲ್ಲಿಕಾರ್ಜುನ ಸ್ವಾಮಿಯವರಿಗೆ ಹೇಳುತ್ತೇನೆ, ನಾನು ಗೋವಾಕ್ಕೆ ಹೋಗಿ ಅಲ್ಲಿ ಪಾನನಿರೋಧ ಬರಬೇಕು ಎಂದು ಒಪ್ಪಿಕೊಂಡು ಗೊತ್ತುವಳಿಗೆ ಎಂದೂ ಸಹಿ ಹಾಕಿಲ್ಲ. ಯಾರು ತಂದರೂ ಅದಕ್ಕೆ ಸಹಿ ಹಾಕುವುದಿಲ್ಲ. ಕೆಲವೊಂದು ವಿಚಾರವನ್ನು ಸ್ಪಷ್ಟಪಡಿಸಿದ್ದೇನೆ. ನಾನು ಅದಕ್ಕೆ ವಿರೋಧವಾಗಿ ಹೋಗುವುದಿಲ್ಲ.

Sri T. R. SHAMANNA.—I want a clarification from the Minister. ನಮ್ಮಲ್ಲಿ ಪ್ರೊಹಿಬಿಷನ್ ಕಿತ್ತುಹಾಕಿ ಎಲ್ಲರೂ ಕುಡಿಯಿರಿ ಎಂದು ಹೇಳಿಕೊಟ್ಟಿರಿ, ಜೂಜು ಆಡಿ ಎಂದು ಲಾಟರಿ ಮಾಡಿದಿರಿ. ನಾಳೆ ಸೂಳೆ ಗೃಹ ಬೇಕಾದರೂ ಮಾಡುತ್ತೀರಿ. ಆದುದರಿಂದ ನಾನು ಹೇಳುವುದು ಬೆಂಗಳೂರಿನಲ್ಲಿ ಜನಗಳು ವಾಸಮಾಡತಕ್ಕಂಥ ಪ್ರತಿಯೊಂದು ಬಡಾವಣೆಯಲ್ಲಿಯೂ ಹೆಂಡದ ಅಂಗಡಿಗಳನ್ನು ತೆರೆಯುತ್ತಾ ಇದ್ದೀರಿ. ಬೇಕಾದರೆ ಮಿನಿಸ್ಟರ್ ಮನೆಯ ಬಾಗಿಲಿನಲ್ಲಿ ಓಪನ್ ಮಾಡಿ ಅದರ ಕಷ್ಟಸುಖ ಅರಿತುಕೊಂಡು ಬೇರೆ ಕಡೆ ಈ ಹೆಂಡದ ಅಂಗಡಿಗಳನ್ನು ತೆರೆಯಿರಿ. ರೆಸಿಡೆನ್ಷಿಯಲ್ ಲೊಕ್ಯಾಲಿಟಿಯಲ್ಲಿ ಹೆಂಡದ ಅಂಗಡಿ ಕೊಟ್ಟ ಪಕ್ಷದಲ್ಲಿ ಜನರಿಗೆ ಬಹಳ ತೊಂದರೆ ಆಗುತ್ತದೆ. ಆದುದರಿಂದ ಹೆಂಡದ ಅಂಗಡಿಯನ್ನು ಜನರು ವಾಸಮಾಡುತ್ತಾ ಇರತಕ್ಕ ಕಡೆ ಓಪನ್ ಮಾಡಬೇಡಿ. ಇಲ್ಲದಿದ್ದರೆ ವಿಷಕೊಟ್ಟು ಎಲ್ಲರಿಗೂ ಒಂದೇ ಸಾರಿ ಸಾಯಿಸಿಬಿಡಿ ಎಂದು ಹೇಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಮಂತ್ರಿಗಳವರು ಗೋವಾದಲ್ಲಿ ತೆಗೆದುಕೊಂಡ ನಿರ್ಣಯಕ್ಕೆ ಸಹಿ ಮಾಡಿಲ್ಲ ಎಂದು ಹೇಳಿದರು. ಸಹಿ ಹಾಕುವುದು ಬಿಡುವುದು ಪ್ರಧಾನವಾದ ವಿಚಾರವಲ್ಲ. ಆದರೆ ಠರಾವು ಏನಿದೆ ಅದಕ್ಕೆ ಮಾನ್ಯ ಮಂತ್ರಿಗಳು ಬೈಂಡಿಂಗ್ ಅಲ್ಲವೆ? ರೆಜಲ್ಯೂಷನ್ ಮಾಡಿರುವುದು ಇವರ ಪಾರ್ಟಿಯಲ್ಲವೇ? ಅವರು ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಇದ್ದುಕೊಂಡು ಕಾಂಗ್ರೆಸ್ ತೆಗೆದುಕೊಂಡ ನಿರ್ಣಯಕ್ಕೆ ಸಹಿ ಹಾಕಿಲ್ಲ ಎಂದರೆ ಅವರ ಜವಾಬ್ದಾರಿ ತಪ್ಪಿ ಹೋಗುತ್ತದೆಯೋ ಎನ್ನುವುದಕ್ಕೆ ಉತ್ತರ ಹೇಳಬೇಕು.

Mr. CHAIRMAN.—I am going to extend the time by two hours to compensate the loss of time.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಈ ಮನೆಗೆ ಒಂದು ಅಭಯಕೊಟ್ಟರು, ಹರಿಜನರ ಕೇರಿ ಮಧ್ಯೆ ಹೆಂಡದ ಅಂಗಡಿಗಳನ್ನು ತೆರೆಯುವುದಿಲ್ಲ ಎಂದು. ಈಗ ಆನೇಕಲ್ ದೊಡ್ಡಬಳ್ಳಾಪುರ ಹರಿಜನ ಕೇರಿಯಲ್ಲಿ, ಹೆಬ್ಬಾಳ ಹರಿಜನರ ಕೇರಿಯಲ್ಲಿ ಹೆಂಡದ ಅಂಗಡಿಗಳನ್ನು ತೆರೆದಿದ್ದಾರೆ. ಆದುದರಿಂದ ಮಾನ್ಯ ಮಂತ್ರಿಗಳು ಕೊಟ್ಟ ಭರವಸೆಯನ್ನು ಕಾರ್ಯಗತ ಮಾಡುತ್ತಾರೆಯೇ ಇಲ್ಲವೇ ಎಂದು ದಯವಿಟ್ಟು ಉತ್ತರ ಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಅದು ನಮ್ಮ ಸರಕಾರದ ನೀತಿ ಎಂದು ಹೇಳುತ್ತೇನೆ. ಎಲ್ಲೆಲ್ಲಿ ಮೈಸೂರು ರಾಜ್ಯದ 20 ಜಿಲ್ಲೆಗಳಲ್ಲಿ ಹರಿಜನರ ಕೇರಿಗಳು ಇವೆ ಎಂಬುದು ವೈಯಕ್ತಿಕವಾಗಿ ನನ್ನ ಗಮನಕ್ಕೆ ಬರುವುದಕ್ಕೆ ಸಾಧ್ಯವಿಲ್ಲ. ಕಂಟ್ರಾಕ್ಟರಿಗೆ ಕೊಟ್ಟಿದ್ದೇವೆ. ಅವರ ಅವಧಿ ಮುಗಿಯಬೇಕು. ಮುಗಿದಮೇಲೆ ನೋಡುತ್ತೇನೆ. ಶಾಮಣ್ಣನವರು ಕಟುವಾಗಿ ಮಾತನಾಡತಕ್ಕಂಥ ಕಾರಣ ಗೊತ್ತಾಗಲಿಲ್ಲ. ಅವರು ಮೊನ್ನೆ ತಾನೆ ನನ್ನನ್ನು ಭೇಟಿ ಆಗಿದ್ದರು. ಈ ಬಿಲ್ಲಿಗೂ ಅದಕ್ಕೂ ಯಾವ ತರಹದ ಸಂಬಂಧವೂ ಇಲ್ಲ. ರೆಸಿಡೆನ್ಷಿಯಲ್ ಲೊಕ್ಯಾಲಿಟಿಯಲ್ಲಿ ಕೊಡಬೇಕೆಂದು ಜನ ಕೇಳುತ್ತಾರೆ. ಅದಕ್ಕೆ ಏನು ಮಾಡಬೇಕು? ಶಾಮಣ್ಣನವರು, ಮತ್ತೊಬ್ಬರು ಆಕ್ಷೇಪಣೆ ಮಾಡಿದ್ದಾರೆಂದು ನಾವು ಕೊಡದೆ ನಿಲ್ಲಿಸುವುದಕ್ಕಾಗುವುದಿಲ್ಲ. ಎಲ್ಲಿ ರೆಸಿಡೆನ್ಷಿಯಲ್ ಲೊಕ್ಯಾಲಿಟಿಯೊಳಗೆ ಆಗಕೂಡದು ಎಂದು ಅಭಿಪ್ರಾಯ ಇದೆಯೋ ಅಂತಹ ಕಡೆಗಳಿಂದ ಅಂಗಡಿಗಳನ್ನು ಶಿಫ್ಟ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಒಂದು ಸಲ ಕಾಂಟ್ರಾಕ್ಟ್ ಕೊಟ್ಟ ಮೇಲೆ ಅವರು ಒಪ್ಪಿಕೊಂಡರೆ ಶಿಫ್ಟ್ ಮಾಡಬೇಕೇ ಹೊರತು ಅವರ ಒಪ್ಪಿಗೆ ಇಲ್ಲದೆ ಶಿಫ್ಟ್ ಮಾಡಿದರೆ ಕಾಂಪನ್‌ಶೇಷನ್ ಕೊಡಬೇಕಾಗುತ್ತದೆ. ಮುಂದಿನ ಸಲ ಹರಾಜು ಆಗುವ ಒಂದು ತಿಂಗಳು ಮೊದಲು, ಅಂದರೆ ಜುಲೈ ತಿಂಗಳಲ್ಲಿ ಕಂಟ್ರಾಕ್ಟು ಶುರು ಆಗುತ್ತದೆ. ಏಪ್ರಿಲ್ ತಿಂಗಳಲ್ಲಿ ಇಂತಿಂಥ ಲೊಕ್ಯಾಲಿಟಿಯಲ್ಲಿ ಅಂಗಡಿಗಳನ್ನು ಹಾಕಬೇಡಿ ಎಂದು ಬರೆದುಕೊಟ್ಟರೆ ಆಗ ಆ ರೀತಿ ಮಾಡುವುದಕ್ಕೆ ಆಗುತ್ತದೆ.

ಶ್ರೀ ಬೋಳಾ ರಘುರಾಮ ಶೆಟ್ಟಿ.—ದೇವಸ್ಥಾನ ಮಂದಿರಗಳ ಹತ್ತಿರ ಮಾಡಬಾರದು.

ಶ್ರೀ ರಾಮಕೃಷ್ಣ ಹೆಗಡೆ.—ಪ್ರಭಾಕರ್ ಅವರು ಹೇಳಿದ ಸಹಿಹಾಕುವ ವಿಚಾರಣೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ಮಲ್ಲಿಕಾರ್ಜುನ ಸ್ವಾಮಿಯವರು ಗೊತ್ತುವಳಿಗೆ ನಾನು ಸಹಿ ಹಾಕದಿದ್ದರೂ ಅದು ನನಗೆ ಅನ್ವಯಿಸುತ್ತದೋ, ಇಲ್ಲವೋ ಎಂದು ಕೇಳುತ್ತಾರೆ. ಅದು ನಮ್ಮ ಪಾರ್ಟಿ ವಿಚಾರ. ಕೇಂದ್ರಸರಕಾರದವರ ನಮಗೆ ಅದರಿಂದ ಎಷ್ಟು ಹಣ ಖರ್ಚಾಗುತ್ತದೆಯೋ ಅಷ್ಟು ಹಣವನ್ನು ಪೂರ್ಣವಾಗಿ ತುಂಬಿಕೊಡುವುದಕ್ಕೆ ತಯಾರಾಗಿದ್ದರೆ ಇವೊತ್ತು ಕೂಡ ಪಾನ ನಿರೋಧವನ್ನು ಜಾರಿಗೆ ತರುವುದಕ್ಕೆ ಒಪ್ಪಿಕೊಳ್ಳುತ್ತೇನೆ. ಅವರು ಕೊಡುವುದಿಲ್ಲ. ಆ ಕಡೆ ಸ್ವಾತಂತ್ರ್ಯವೂ ಇಲ್ಲ, ಈ ಕಡೆ ಸುಖವೂ ಇಲ್ಲ. ಈ ಪರಿಸ್ಥಿತಿಯಲ್ಲಿ ನಾವು ನಡೆಸಿಕೊಂಡು ಹೋಗುವುದು ಕಷ್ಟವಾಗುತ್ತದೆ. ವಾಸ್ತವಿಕ ದೃಷ್ಟಿಯಿಂದ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಅದು ನನ್ನ ಸ್ವಂತ ಅಭಿಪ್ರಾಯವಲ್ಲ. ನಾನು ಯಾವ ಪಾರ್ಟಿಯನ್ನು ಪ್ರತಿನಿಧಿಸುತ್ತೇನೋ ಆ ಪಾರ್ಟಿಯ ಅಭಿಪ್ರಾಯ ಮತ್ತು ಆ ಪಾರ್ಟಿಯ ಕಾರ್ಯಕ್ರಮ.

Mr. SPEAKER.—The question is:

"That the Mysore Excise (Amendment) Bill 1970, be taken into consideration."

The motion was adopted.

Mr. SPEAKER.—I shall now propose the various clauses to the House. There is no amendment of clause 2. I shall put it to the House. The question is:

"That clause 2 do stand part of the Bill."

The motion was adopted.

Clause 2 was added to the Bill.

CLAUSE 3

Mr. SPEAKER.—I propose Clause 3, the question is:

"That Clause 3 do stand part of the Bill."

There is an amendment given notice by Sri Nagappa and Kalmankar. Any one may move the amendments.

Sri M. NAGAPPA.—Sir, I beg to move:

"That at page 3 in the proposed section 7(1), line 3 after the words 'any other Excise Officer' the words 'not below the rank of Excise Inspector' shall be inserted."

Mr. SPEAKER.—The hon. Member has proposed an alternative amendment to his second amendment. He may move either of them.

Sri M. NAGAPPA.—I shall move an amendment which is better worded:

"That for the proposed sub-section (1) of section 7, the following shall be substituted:

'7(1) The State Government may by notification delegate to the Excise Officer not below the rank of Excise Inspector any of its powers under this Act except the powers under section 62, 67 and 71".'

And I beg to move:

"That at page 3 at the end of the proposed sub-section (2) of section 7 after the words 'to any Excise Officer' the words 'not below the rank of Excise inspector'," shall be added.

Mr. SPEAKER.—Amendments moved:

"That at page 3 in the proposed 7(1), line 3 after the words 'any other Excise Officer' the words 'not below the rank of Excise Inspector' shall be inserted."

(MR. SPEAKER)

"That for the proposed sub section (1) of section 7, the following shall be substituted :

"7(1) The State Government may by notification delegate to the Excise officer not below the rank of Excise Inspector any of its powers under this Act except the powers under section 62, 67, and 71."

And "That at page 3 at the end of the proposed sub-section (2) of section 7 after the words 'to any Excise officer' the words 'not below the rank of Excise Inspector,' shall be added."

Sri M. NAGAPPA.—In the original Act Excise Office is defined thus :

"'Excise Officer' means, Excise Commissioner, Deputy Commissioner or any officer or person lawfully appointed or invested with powers under sections 5 and 6'."

If the Hon. Minister says that except Excise Inspector, other officers cannot be appointed under section 6, then my amendment may not be useful. If any other officer is going to be appointed under the original sections 5 and 6, definitely it has to be clarified. saying that an officer not below the rank of excise inspector or other authorities who are going to be appointed by the Department should not be invested with powers, because the Government has to invest powers in authorities which are properly working in the best interests of the Department and bring a good name to the Government.

One more thing which I wanted to submit is that it has been said in the Bill that only the powers under section 67 and 71 should not be delegated. My contention is section 62 also should be added to it, because section 62 of the original Act relates to the power of the Government to hear revisions. I want that the revisional power should not be vested in any subordinate officer of the Government. These powers should also be retained with the Government. Therefore I submit that section 62 also should be included in this amendment. The Hon. Minister is also very well aware of the case of Niranjan, in which he has seen how certain situations had to be faced when the case was being heard by the Excise Commissioner against the order passed by the Divisional Commissioner and others, and several other cases are also there. Therefore, I submit that instead of investing power of revision in other authorities, it is better that this power also should be retained with the Government and Government should not under any authority delegate this power vested in them by virtue of section 62.

Sri RAMAKRISHNA HEGDE.—Sir, the amendment is not acceptable because this is only an enabling provision. That does not necessarily mean that the State Government will delegate all these powers.

Sri M. NAGAPPA.—I want to press my amendment Sir.

Mr. SPEAKER.—The question is :

"That the page 3 in the proposed section 7(1), line 3 after the words 'any other Excise Officer' the words 'not below the rank of Excise Inspector' shall be inserted."

That for the proposed sub-section (1) of section 7, the following shall be substituted :

"7(1) The State Government may by notification delegate to the Excise Officer not below the rank of the Excise Inspector any of its powers under this Act except the powers under section 62, 67 and 71."

And "That at page 3 at the end of the proposed sub-section (2) of section 7 after the words 'to any Excise Officer' the words 'not below the rank of Excise Inspector' shall be added."

The amendments were negatived.

Now I come to the next aspect. Here we come to a very important issue and I think I have to go rather slowly here. In section 2, item 34 tenant means an agriculturist, it means both contractual as well as deemed tenant. We come to section 4. That is an important section which deal with persons to be deemed tenants. Section 4 does not deal with contractual tenants. This distinction between contractual and deemed tenant came into being ever since the decision of the full bench of the Bombay High Court in 1957. The Supreme Court has held that deemed tenant is one who is the lawful owner of the property, whether contractual tenant or not. A case came up before our High Court while interpreting section 112—duties of tribunal came into consideration—to decide whether a person is a tenant or not, under section 4 and make declaration accordingly. What is attempted to be done is to delete section 112 (b). The definition clause and section 4 are to be retained. I want to know first, when section 112 (b) is deleted, Duties of Tribunal—whether it will be the duty of the tribunal to make a declaration, whether contractual or deemed tenancy. Where is any section in the Act empowering the court itself to declare that a person is tenant, either contractual or deemed tenant. That is a moot point in the Bill. To overcome one difficulty you are falling into another difficulty. Your difficulty was that the High Court held that section 112 (b) read with section 4, dealt with only deemed tenants and therefore they could not deal with contractual tenants. The legal Adviser probably thought that to overcome the difficulty section 112 (b) could be deleted. Your object is to see that the tenant of the person is protected and the person shall seek a declaration in a court of law. Section 4 deals with only deemed tenancy. I am dilating with a case of contractual tenant. Here comes the important distinction between contractual tenant and deemed tenant. A contractual tenant is one who takes land and leases it to another person either orally or by instrument. After the implentation of the Mysore Act, he is not a contractual tenant; he is only in lawful possession of the property. That is all; because that is the distinction made between the contractual tenant and the deemed tenant. I can give the Minister the whole citation of authorities to show how distinction is made by the Supreme Court between the deemed tenant and contractual tenant. I shall pass on the decisions tomorrow. If you say that section 112 b) should be removed, my straightaway question is where is another enabling section in the Act for a person who wants to seek declaration, *i.e.*, contractual tenant ? The amendment is silent about it. Section 4 deals with only deemed tenants. The word deemed tenant has a technical meaning in law. It cannot be a contractual tenant. What is the releif given to the contractual tenant ? I am unable to see any light in the amending Bill. You are forcing the people to go on writ petitions or revision petition before the High Court for redefining what is contractual and what is deemed tenant. That is my fundamental objection. Please re-examine these provisions because this is a delicate issue. Your object is to see protection is given to all tenants and not only to deemed tenants. Further, please reexamine the definition to sub-clause 34 of section 2, section 4 and 112 (b) and bring in suitable amendments so that there may not be conflict of decisions by the High Court.

Next is rent recevery. My friend was pleased to solve this difficulty. He said that the moment an order is passed by Tahsildar, it will be executed as the arrears of land revenue. I have pointed out that section 116 is amended and you have substituted a new section. A decree as per your own amendment, is a decree of a court and there is operative clause to say that it should be executed by the Tahsildar. Therefore, again there is doubt. If a rent-decree is passed by the court, according to your own statement that court has no power to execute and there being no provision in the Act as to how it should be executed, how are you going to execute it. That doubt is still there. You have not sald that the Tahsildar is empowered to execute the rent decree as if it is the arrears of land revenue. As I have already pointed out, there is absolutely no separation of judiciary and executive functions. I am prepared to agree with the hon. member Sri Amare Gowda when he said that if your object is that there should be clear separation of executive and judicial functions, it should be made clear in the Act. The function of a court is to give judgment and it is transferred to Revenue Department for execution.

Mr. DEPUTY SPEAKER.—Please conclude early.

Sri K. H. PATIL.—Sir, we cannot take the half-an-hour discussion today. I wanted you to fix up another day for it. You extended the time up to 7 P.M. and any proceedings after that will not be legal.

Mr. DEPUTY SPEAKER.—Please read rule 49.

7-00 P. M.

Half-an-hour Discussion arising out of Replies to Starred Question No. 63 *re*: Fertilisers in the State Marketing Society

Mr. DEPUTY SPEAKER.—Now we shall take up Half-an-Hour Discussion.

Sri K. H. PATIL.—You cannot take up the Half-an-Hour discussion now, because as per Rule 49 this has to be taken up 'at the conclusion of the business of the day'. The business set down in the agenda for the day has not been concluded and so you cannot take up the half-an hour discussion now.

Mr. DEPUTY SPEAKER.—The normal working hours of the House are from 1 to 6 P.M. At 6 O'clock the time was extended by 1 hour up to 7 O'clock. Now it is 7 O'clock and so now even as per the rule that you have now cited the half-an-hour discussion can be taken up,

Sri K. H. PATIL.—But the business has not been concluded and so it cannot be taken up.

Mr. DEPUTY SPEAKER.—It can be taken up now.

† ಶ್ರೀ ಐ. ಸೋಮಶೇಖರಪ್ಪ.—ಈಗ ಅರ್ಧಗಂಟೆಯ ಚರ್ಚೆಯಲ್ಲಿ ಭಾಗವಹಿಸಲು ಶ್ರೀಯುತರುಗಳಾದ ಎಚ್. ಸಿದ್ಧವೀರಪ್ಪ, ಎಸ್. ಗೋಪಾಲಗೌಡ, ಎಚ್. ಎಂ. ಚೆನ್ನಬಸಪ್ಪ ಮತ್ತು ಕೆ. ಎಚ್. ಪಾಟೀಲ್ ಅವರುಗಳು ತಮ್ಮ ಅನುಮತಿಯನ್ನು ಕೇಳಿದ್ದಾರೆ. ಅದಕ್ಕೆ ತಾವು ಒಪ್ಪಿದ್ದೀರಿ. ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಶ್ರೀ ಕೆ. ಎಚ್. ಪಾಟೀಲರಿಗೆ ಅವಕಾಶವಿಲ್ಲ. He is an interested party. ಏಕೆಂದರೆ ಅವರು ಗದಗ್‌ನಲ್ಲಿರುವ ಕಾಟನ್ ಸೇಲ್ಸ್ ಸೊಸೈಟಿಯ ಅಧ್ಯಕ್ಷರಾಗಿದ್ದಾರೆ. ಮತ್ತು ಆ ಸೊಸೈಟಿಯ ಮೂಲಕ ಸುಮಾರು 7 ಲಕ್ಷ ರೂಪಾಯಿಗಳ ಗೊಬ್ಬರವನ್ನು ಮಾರಾಟ ಮಾಡಲಾಗಿದ್ದು, ಆ ಹಣದ ಮಿಸ್‌ಅಪ್ರೋಪ್ರಿಯೇಷನ್ ಆಗಿದೆ. ಅಥವಾ ಮಿಸ್-ಅಪ್ಲಿಕೇಷನ್ ಆಗಿದೆ. ಈ ಬಗ್ಗೆ ಒಂದು ಕೇಸ್ ಹೈಕೋರ್ಟಿನ ಮುಂದೆ ಇದೆ. ಆದ್ದರಿಂದ ಮಾನ್ಯ ಪಾಟೀಲರು ಈ ಚರ್ಚೆಯಲ್ಲಿ ಭಾಗವಹಿಸಲು ಇಂಟರೆಸ್ಟ್‌ನಿಂದ ಇದ್ದಾರೆ. ಅವರಿಗೆ ಅವಕಾಶ ಕೊಡಬಾರದು. ಇಂತಹದ್ದೇ ಒಂದು ಸಂದರ್ಭ ಬಂದಾಗ ಮದರ್ ಆಫ್ ಪಾರ್ಲಿಮೆಂಟ್‌ನಲ್ಲಿ ಏನು ಡಿಸಿಷನ್ ತೆಗೆದುಕೊಂಡಿದ್ದಾರೆ ಎಂಬ ವಿಷಯವನ್ನು ಸಭೆಯ ಮುಂದೆ ಇಡುತ್ತೇನೆ.' ಅದು ಈ ರೀತಿ ಇದೆ:

On 22nd June 1858 the House of Commons resolved:

> " That it is contrary to the usage and derogatory to the dignity of this House that any of its members should bring forward, promote or advocate in this House any proceeding or measure in which he may have acted or been concerned for or in consideration of any pecuniary fee or reward."

Sri K. H. PATIL.—Is it a point of order ? He is an agent of the Government. He has stated facts contrary to truth.

Sri I. SOMASEKHARAPPA.—My point of order is that since he is an interested party he should be estopped from taking part in the discussion.

Sri K. H. PATIL.—No power on earth can stop me from taking part in the discussion here.

Sri G. DUGGAPPA.—I rise to a point of order. The hon. Member Sri Somasekharappa has raised certain points and he has made certain allegations. It is an accepted convention in this House that any hon. member who makes a statement in the House is responsible for that statement and he must prove it with facts and figures. Now I request the hon. member Sri Somasekharappa to produce before the House any documentary evidence or material in his possession to prove his statement. Otherwise he must withdraw the statement now made by him.

Sri I. SOMASEKHARAPPA.—I will clarify my statement.

Sri A. P. APPANNA (Deputy Minister for Industries).—Let us hear Mr. K. H. Patil whether he accepts this allegation or not.

Sri. K. H. PATIL.—I do not want any assistance from my friend Sri Duggappa.

Before I raise this half-an-hour discussion I want immediately to raise a privilege question against the hon. Member Sri Somasekharappa because he has stated in the House that Mr. K. H. Patil is the President of the Society. I am not at all the President of the Society. So by saying that I am the President of the Society he has misled the House. The second point that he said is that as President of the Society I am indebted to the Marketing Society to the tune of Rs. 7 lakhs. This is also absolutely incorrect. For these two incorrect statements made about me in the House I raise a privilege question against the said hon. Member because he has made these statements wilfully. This is a false statement because he is a Director of the Marketing Society and he should be aware of the position. While making a statement he must be responsible for its accuracy and correctness. He has acted as an agent of the Government in trying to see that the House does not hear Mr. K. H. Patil so that he may get an honour for himself. Therefore I am raising this privilege motion against him. Let my privilege motion be taken up right now immediately. It need not necessarily have any prior notice because the incident has happened on the floor of the House just now in the presence of the Speaker and the other members both on this side and the other side of the House. I deny all the allegations made by him as a responsible member. I am not the President of any Society which has misappropriated funds. If he has any concrete example before him, let him prove.

Mr. DEPUTY SPEAKER.—It is very difficult for the Chair to decide when there are two different versions.

Sri H. SIDDAVEERAPPA.—The point of order that has been raised by the hon. Member Sri Somasekharappa is clear. He also quoted May's Parliamentary practice in support of his point of order. I am unable to understand what rule we are following. That apart, let us come to facts. The facts are that he made two statements. One is that Mr. K. H. Patil is interested in a Cotton Sales Society or Cotton

(SRI H. SIDDAVEERAPPA)

Society which has taken manure to the tune of Rs. 7 to 8 lakhs and secondly, if I have heard him correctly, is that he misappropriated that sum……

Sri I. SOMASEKHARAPPA.—Or misapplied.

Sri H. SIDDAVEERAPPA.—All right. That means the hon. member himself is not sure about the facts. This is what he has stated and it is there on record. This is a very serious matter. He is a responsible and an honourable member of this House and against him some allegations of a very grave character have been made.

This is a matter of misappropriation or misapplication as he puts pending adjudication by way of Writ Petition in the High Court. That is what he said. The Hon. Member has condemned Sri K. H. Patil by saying that he has misappropriated or misused the funds. What he said is not borne out by any evidence. When it is not borne out by any evidence either oral or documentary, the Hon. Member will have to meet the consequences of it. I am pleading on both the sides. Sri K. H. Patil denies the charges levelled against him and he says that they are not true and he further says that by involving him in this matter, the hon. member has committed a breach of privilege and it may be referred to the Privilege Committee. Therefore you may straight away refer this matter to the Privilege Committee and let the Committee consider this matter. I am also requesting Sri K. H. Patil not to proceed with the present motion on the agenda. I am also one of those speakers on this motion. Sriyuts Channabasappa, Gopala Gowda, K. H. Patil and myself have given this motion. Therefore I request you to withhold this motion which is standing in our name and take up this privilege motion immediately and refer the same to the Privilege Committee. Let the Committee give its finding.

Mr. DEPUTY SPEAKER.—At this stage, the Speaker cannot take any decision. The Hon. Member may give a notice which will be considered.

Sri K. H. PATIL.—Sir, any member may raise a privilege motion at any time. It is the duty of the Speaker to refer the matter to the Privilege Committee.

Mr. DEPUTY SPEAKER.—This is altogether a different case. No incident took place in the House. The Hon. Member made a statement on certain matters.

Sri K. H. PATIL.—The statement made by the Hon. Member is an obstruction to discharge my duty as a member of this House. When my rights and privileges are questioned, should I not raise this point ? What right have I got then ?

Sri H. SIDDAVEERAPPA.—The Hon. Member Sri K. H. Patil is not a member of care of footpath. He is an Hon. Member of this House against whom certain allegations are made. It is a serious charge to say that he has misappropriated some money.

Sri K. H. PATIL.—I want to know the decision from the Chair.

Mr. DEPUTY SPEAKER.—I have already stated that if a notice is given, it will be considered.

Sri K. H. RANGANATH.—Please see rule No. 288 (ii). It says that a member while speaking shall not make a personal charge against a member. But this Hon. Member has made a personal charge.

Mr. DEPUTY SPEAKER.—Does it amount to a breach of privilege ?

Sri K. H. RANGANATH.—Yes. He has made a serious allegation. He said that Sri K. H. Patil has misappropriated or misspent the money of the society to the tune of nearly one lakh. It has gone into the records. But Sri K. H. Patil has denied the fact. Therefore, it is for the Hon. Sri Somashekarappa to prove whether it is a fact, otherwise he has to be hauled up.

Mr. DEPUTY SPEAKER.—That is why I said a notice has to be sent.

Sri H. SIDDAVEERAPPA.—As a Lawyer you know even the oral notice is as good as written notice.

Mr. DEPUTY SPEAKER.—Can the hon. Member tell me under which rule I can do this ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಅವರು ನೋಟಿಸು ಕಳುಹಿಸಬೇಕಾಗಿಲ್ಲ. ಹಿಂದೆ ಇದೇ ಸಭೆಯಲ್ಲಿ ಮಾನ್ಯ ಪಾರ್ಲಿಮೆಂಟರಿ ಶಾಖೆಯ ಮಂತ್ರಿಗಳು ಇಲ್ಲಿಯೇ ಶ್ರೀಮಾನ್ ಗೋಪಾಲಗೌಡರ ಮೇಲೆ ಆಪಾದನೆಯನ್ನು ಹೊರಿಸಿ ಪ್ರಿವಿಲೇಜ್ ಮೋಷನ್ ಬಂದುದು ನಮ್ಮ ಕಣ್ಣುಎದುರಿಗೇ ಇದೆ. ಈಗ ತಾವು ಹೇಳುವ ಹಾಗೆ ಇನ್‌ಸ್ಟೆನ್‌ಸಸ್ ಇಲ್ಲ ಎಂದರೆ ಫೋನು ಕಿತ್ತುಹಾಕಿ ಹೊಡೆದದ್ದು ಮಾತ್ರ ಇನ್‌ಸ್ಟೆನ್ಸ್ ಎಂದು ತಾವು ಹೇಳುತ್ತೀರಾ ? ಒಬ್ಬರು ಮಾನ್ಯ ಸದಸ್ಯರು ಇನ್ನೊಬ್ಬರು ಮಾನ್ಯ ಸದಸ್ಯರ ಮೇಲೆ ಆಪಾದನೆ ಮಾಡಿ ಹಣವನ್ನು ದುರುಪಯೋಗ ಮಾಡಿದ್ದಾರೆ ಎಂದು ಅವರು ಅಸತ್ಯವನ್ನು ಹೇಳಿದ್ದಾರೆ. ಇದು ಇನ್‌ಸ್ಟೆನ್ಸ್ ಅಲ್ಲವೇ ?

Sri K. H. RANGANATH.—Please see rule 289. It says like this :

> "No allegations of a defamatory or incriminatory nature shall be made by a member against any person unless the member has given previous intimation to the Speaker and also to the Minister concerned so that the Minister may be able to make an investigation into the matter for the purpose of reply; "

ಇದರ ಪ್ರಕಾರ ಈ ವಿಷಯವನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬೇಕು ಎಂದು ನಾನು ಹೇಳುತ್ತೇನೆ.

ಉಪಾಧ್ಯಕ್ಷರು.—ಇದರ ಸತ್ಯಾಸತ್ಯತೆಯನ್ನು ಜಡ್ಜ್ ಮಾಡುವುದಕ್ಕೆ ಅವರು ನೋಟೀಸ್ ಬರೆದು ಕಳುಹಿಸಲಿ. ಆಮೇಲೆ ನಾನು ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಲೇ ತಾವು ಈ ಪ್ರಿವಿಲೇಜ್ ಮೋಷನ್ ತೆಗೆದುಕೊಂಡು ಕಮಿಟಿಯವರಿಗೆ ಕಳುಹಿಸಬೇಕು.

Mr. DEPUTY SPEAKER.- It will be considered. Let the Hon. Member give notice.

ಶ್ರೀ ಜಿ. ದುಗ್ಗಪ್ಪ.—ಮಾನ್ಯ ಸದಸ್ಯರು ಸತ್ಯಕ್ಕೆ ದೂರವಾದ ವಿಷಯವನ್ನು ಈ ಸಭೆಯ ಮುಂದೆ ಹೇಳಿದ್ದಾರೆ. ಅದು ಇರುವಾಗ ಮತ್ತೆ ನೋಟೀಸ್ ಕೊಡಿ ಇನ್‌ಸ್ಟೆನ್ಸಸ್ ಇಲ್ಲ ಎಂದರೆ ಹೇಗಾಗುತ್ತದೆ. ಇಂಥಾದ್ದೇ ಈ ಸಭೆಯಲ್ಲಿ ನಡೆದಿರುವುದನ್ನು ನಾವು ನೋಡಿದ್ದೇವೆ. ಆದ್ದರಿಂದ ಈ ಪ್ರಿವಿಲೇಜ್ ಮೋಷನ್ ಎತ್ತುವುದಕ್ಕೆ ಇದರ ಅರ್ಜೆನ್ಸಿ ಏನು ಎನ್ನುವುದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಇದನ್ನು ಗಮನಕ್ಕೆ ತೆಗೆದುಕೊಂಡು ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬಹುದು. ಮಾನ್ಯ ಸದಸ್ಯರನ್ನು ತಾವು ಕೇಳಿ, ಅವರು ಹೇಳಿದ್ದನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳಿದರೆ ನಮ್ಮದು ಏನೂ ಅಭ್ಯಂತರವಿಲ್ಲ. ಈಗ ಇದನ್ನು ವಿಚಾರಣೆ ಮಾಡಿ. ನೀವು ಇದಕ್ಕೆ ಒಪ್ಪಲೇ ಬೇಕು ; ಮತ್ತು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬೇಕು. ಇಲ್ಲದಿದ್ದರೆ ವಿರೋಧ ಪಕ್ಷದ ಯಾವ ಸದಸ್ಯರನ್ನಾದರೂ ಒಬ್ಬೊಬ್ಬರನ್ನಾಗಿ ಇದೇ ರೀತಿ ಮಾಡುತ್ತಾ ಹೋಗಬಹುದು ; ಮತ್ತು ಕಂಡೆಮ್ ಮಾಡಬಹುದು. ಇದರ ಬಗ್ಗೆ ನೀವು ಒಂದು ನಿಷ್ಪಕ್ಷಪಾತವಾದ ತೀರ್ಮಾನವನ್ನು ಇದರಲ್ಲಿ ಸಮಾಧಾನಪಟ್ಟುಕೊಂಡು ತೆಗೆದುಕೊಳ್ಳಬೇಕು.

ಶ್ರೀ ಎಲ್. ಶ್ರೀಕಂಠಯ್ಯ.—ಶ್ರೀಮಾನ್ ರಂಗನಾಥರವರು ಕೇಳಿದಾಗ ತಾವು ಯಾವ ಆಧಾರದ ಮೇಲೆ ಪ್ರಿವಿಲೇಜ್ ಮೋಷನ್ ಆಗುತ್ತದೆಂದು ಕೇಳಿದ್ದೀರಿ. ತಾವು ರೂಲ್ 182 ನ್ನು ನೋಡಿದರೆ ಸ್ಪಷ್ಟವಾಗಿ ತಿಳಿಯುತ್ತದೆ. ಅದರಲ್ಲಿ ಈ ರೀತಿ ಹೇಳುತ್ತದೆ :

> "Notwithstanding anything contained in these rules, the Speaker may refer any question of privilege to the Committee of Privileges for examination, investigation or report."

ಈಗ ನಮ್ಮ ಮುಂದಿರತಕ್ಕ ವಿಷಯ ಇಷ್ಟೆ. ನಾನು ಮಾನ್ಯ ಸೋಮಶೇಖರಪ್ಪನವರು ಹೇಳುವಾಗ ಬೇರೆ ಕಡೆ ಹೋಗಿದ್ದೆ. ಈಗ ರಂಗನಾಥರವರು ಹೇಳಿದಾಗ ಅರ್ಥವಾಯಿತು. ಅವರು ಮಿಸ್ ಅಪ್ರೋಪ್ರಿಯೇಷನ್ ಅಥವಾ ಮಿಸ್ ಅಪ್ಲಿಕೇಷನ್ ಎಂದು ಹೇಳಿದ್ದಾರೆ. ಮಿಸ್ ಅಪ್ರೋಪ್ರಿಯೇಶನ್ ಅಂದರೆ ಕ್ರಿಮಿನಲ್ ಚಾರ್ಜಸ್ ಆಗುತ್ತದೆ, ಮಿಸ್ ಅಪ್ಲಿಕೇಶನ್ ಕ್ರಿಮಿನಲ್ ಚಾರ್ಜಸ್ ಆಗುವುದಿಲ್ಲ. ಮಿಸ್ ಅಪ್ರೋಪ್ರಿಯೇಷನ್ ಅಥವಾ ಮಿಸ್ ಅಪ್ಲಿಕೇಷನ್ ಕೆ. ಎಚ್. ಪಾಟೀಲರು ಮಾಡಿದರು ಎಂದು ಅವರು ಹೇಳಿದ್ದಾರೆ. ಮಾನ್ಯ ಕೆ. ಎಚ್. ಪಾಟೀಲರು ಇವೆಲ್ಲಾ ಸುಳ್ಳು ಅಪಾದನೆಗಳು ಎಂದೂ ಹೇಳಿದರು. ಒಟ್ಟು ಮಾನ್ಯ ಸದಸ್ಯರು ಇಲ್ಲಿ ಕುಳಿತಿರುವಾಗ ಅವರ ಮೇಲೆ ಚಾರ್ಜಸ್ ಮಾಡಿದಾಗ, ಅದನ್ನು ಮಾನ್ಯ ಕೆ. ಎಚ್. ಪಾಟೀಲರು ಪ್ರತಿಭಟಿಸಿದ್ದಾರೆ. ಆದ್ದರಿಂದ ತಮಗೆ ರೂಲ್ 182ರ ಪ್ರಕಾರ ಇದನ್ನು ಪ್ರಿವಿಲೇಜ್ ವಿಚಾರ ಎಂದು ತೀರ್ಮಾನಿಸಲು ಅಧಿಕಾರ ಇದೆ.

Sri H. SIDDAVEERAPPA.—Sir, in deference to the guidance you have given, we will give it in writing and let it be taken up afterwards.

Mr. DEPUTY SPEAKER.—All right.

†**ಶ್ರೀ ಕೆ. ಎಚ್. ಪಾಟೀಲ್** (ಗದಗ).—ಸ್ವಾಮಿ, ಅಧ್ಯಕ್ಷರೇ, ಈಗ ನಮ್ಮ ಎದುರಿಗೆ ಮೈಸೂರು ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ವಿಚಾರದಲ್ಲಿ ಶ್ರೀಮಾನ್ ಸಿ. ಕೆ. ರಾಜಯ್ಯ ಶೆಟ್ಟರು ಪ್ರಶ್ನೆ 63ರನ್ನು ಕೇಳಿದರ ಬಗ್ಗೆ ಸಾಕಷ್ಟು ಉಪಪ್ರಶ್ನೆಗಳು ಎದ್ದು, ಸಮಯದ ಅಭಾವ ಇದ್ದುದರಿಂದ ಉಪಪ್ರಶ್ನೆಗಳಿಗೆ ಸಮಾಧಾನಕರವಾದಂತಹ ಉತ್ತರ ಅವರಿಂದ ಸಿಗದ ಕಾರಣ ಈ ಅರ್ಧ ಗಂಟೆಯ ಚರ್ಚೆಯು ಬಂದಿದೆ. ಆ ಕಾರಣಕ್ಕೆ ಈ ಚರ್ಚೆಯನ್ನು ಮಾಡಬೇಕಾಯಿತು. ಅದರ ಹಿನ್ನೆಲೆಯಲ್ಲಿ, ಇದರಲ್ಲಿ ಯಾವುದೇ ಪೂರ್ವ ಉದ್ದೇಶಿತ ದ್ವೇಷಭಾವನೆ ಇರಲಿ, ಇವತ್ತು ಸಹಕಾರಿ ಕ್ಷೇತ್ರದಲ್ಲಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯು ಬಹಳ ಮಹತ್ತರವಾದ ಪಾತ್ರವನ್ನು ವಹಿಸಬೇಕಾಗಿದೆ. ಈ ಸಹಕಾರೀ ಚಳವಳಿಯಲ್ಲಿ ಸಹಕರಿಸಿ ಈ ಘನವಾದ ಉದ್ದೇಶದಲ್ಲಿ ಪಾಲ್ಗೊಳ್ಳಲು ಸದಸ್ಯರಿಗೂ ಮನಸ್ಸಿದೆ ಎಂಬುದನ್ನು ನಮ್ಮ ಸ್ನೇಹಿತರಿಗೆ ಹೇಳುತ್ತಿದ್ದೇನೆ. ಕೆಲವು ಸ್ನೇಹಿತರು ಈ ಪ್ರಶ್ನೆಯ ಜೊತೆಯಲ್ಲಿ ಡೈರೆಕ್ಟರಾಗಿದ್ದಂತವರು ಈ ಸಂಸ್ಥೆಯಲ್ಲಿ ಅಪವ್ಯಯ ಮಾಡಿದ್ದಾರೆ, ಮಿಸ್ ಅಪ್ರೋಪ್ರಿಯೇಷನ್ ಮಾಡಿದ್ದಾರೆ ಎಂದೆಲ್ಲಾ ಬಾಯಿಗೆ ಬಂದ ಹಾಗೆ, ಸರ್ಕಾರದ ಪ್ರಚೋ

ದನೆಯಿಂದ ಮಾತನಾಡುತ್ತಿದ್ದಾರೆ. ಆದರೆ ನಾನು ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಅವರು ಗದಗ್‌ನ ಸಂಸ್ಥೆಯಲ್ಲಿ ಕೆ. ಎಚ್. ಪಾಟೀಲರು ಅಧ್ಯಕ್ಷರಾಗಿದ್ದಾರೆಂದು ಹೇಳಿದರು. ನಾನು ಅದರ ಅಧ್ಯಕ್ಷನಾಗಿಲ್ಲ.

ಶ್ರೀ ಬಾಪುಗೌಡ.—ಮಾನ್ಯ ಕೆ. ಎಚ್. ಪಾಟೀಲರು ಕಾಟನ್ ಸೊಸೈಟಿಯ ಅಧ್ಯಕ್ಷರು ಯಾವತ್ತೂ ಆಗಿರಲಿಲ್ಲವೇ ? ಇದುವರಿಗೆ ಎಂದೂ ಆಗಿರಲಿಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.—ನಾನು ಹುಟ್ಟಿದಾರಭ್ಯ ಇಲ್ಲಿ ನಿಂತ ಅವಧಿಯವರೆಗೂ ಆಗಿರಲಿಲ್ಲ.

Sri BAPU GOWDA.-Let the Hon. Member say whether he is directly or indirectly connected with it or not.

ಶ್ರೀ ಕೆ. ಎಚ್. ಪಾಟೀಲ್.—ನಾನು ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಸಂಸ್ಥೆಯಲ್ಲಿ ಇವರು ಈ ಮೈಸೂರು ಸರ್ಕಾರದವರು ಮಾಡಬಾರದ್ದನ್ನು ಮಾಡಿ, ನನ್ನ ಮುಖಕ್ಕೆ ಮಸಿ ಬಳಿಯುವ ಕಾರ್ಯವನ್ನು ಮಾಡಿ, ನನ್ನ ಸ್ಥಾನಕ್ಕೆ ಕಳಂಕ ಬರುವ ಹಾಗೆ ವರ್ತನೆ ಮಾಡುತ್ತಿದ್ದಾರೆ. ಹಣ ಕೊಡುವ ಬಗ್ಗೆ, ನೀವು ಲೆಕ್ಕಗಳನ್ನು ಸರಿಯಾಗಿ ಬರೆದಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಸೋಮ. ಶೇಖರಪ್ಪನವರು ನಾಲ್ಕು ವರ್ಷದ, 6 ವರ್ಷದ ಲೆಕ್ಕದ ಬಗ್ಗೆ ಈ ರೀತಿ ಹೇಳುತ್ತಿರುವುದು ಬಹಳ ವಿಷಾದನೀಯ ಮತ್ತು ನಾಚಿಕೆಗೇಡಿನ ವಿಷಯ. ಈ ವಿಚಾರ ಈಗಾಗಲೇ ಕೋರ್ಟಿನ ಮುಂದ ಇದೆ, ಮತ್ತು ಅದಕ್ಕೆ ಈಗಾಗಲೇ ಸ್ಟೇ ಕೊಟ್ಟಿದ್ದಾರೆ. ಇವರು ಅರ್ಬಿಟ್ರೇಟರ್ ಎದುರು ಹೋದಾಗ, ಅದು ತಪ್ಪು ಎಂದು ಹೇಳಿದ್ದಾರೆ. ಅದಕ್ಕೆ ಸ್ಟೇ ಆಗಿರುವುದರಿಂದ ಆ ವಿಚಾರವನ್ನು ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ನಾನು ಹೇಳುತ್ತಿರುವ ವಿಚಾರ ಇಷ್ಟೇ. ಇವತ್ತು ಒಂದು ಕೋಟಿ 9 ಲಕ್ಷದ 72 ಸಾವಿರದ 700 ರೂಪಾಯಿಯಷ್ಟು ಹಣವನ್ನು ನಮ್ಮ ಸರ್ಕಾರದವರು ಅಲ್ಲಿ ತೊಡಗಿಸಿದಾರೆ. ಇದನ್ನು ಯಾವರೀತಿ ಪ್ರೊಪೋರ್ಷನೇಟ್ ಆಗಿ ಕೊಟ್ಟಿದ್ದೀರಿ ? ನೀವು ಉಳಿದ ಸಹಕಾರ ಸಂಘಗಳಿಗೆ ಯಾವ ರೀತಿ, ಹೇಗೆ ಕೊಟ್ಟಿದ್ದೀರಿ ? ಇಲ್ಲಿ ಅವರು ನಿಮ್ಮ ಕೈಬಡುಕರು ಆಗಿರುವುದರಿಂದ ಇದನ್ನು ಅವ್ಯವಹಾರಿಕವಾಗಿ ಕೊಟ್ಟಿದ್ದೀರೆಂಬುದು ಮೂಲ ಪ್ರಶ್ನೆಯಾಗಿದೆ. ಮಾನ್ಯ ಸೋಮಶೇಖರಪ್ಪನವರು ಹೇಳುವುದು ಮತ್ತು ಮಾನ್ಯ ಬಿ. ಎಲ್. ಗೌಡರು ಹೇಳುವುದು ನೋಡಿದರೆ, ಅದು ಸರಿಯಲ್ಲದ ಮಾತು. ಇವರು ಒಂದಲ್ಲ ಒಂದು ರೀತಿಯಲ್ಲಿ ಅವರ ನಾಮಿನಿಗಳು ಆಗಿರುವುದರಿಂದ ನಿಜವಾಗಿಯೂ ಡಿಸ್‌ಕ್ವಾಲಿಫೈ ಆಗುತ್ತಾರೆ. ನಿಜವಾಗಿಯೂ ಒಬ್ಬ ಸದಸ್ಯರು ಆ ರೀತಿ ಮಾತನಾಡುವುದು ಸರಿಯಲ್ಲ. ಇವತ್ತಿನ ದಿವಸ ನೀವು ಒಂದು ಕೋಟಿಗಿಂತ ಹೆಚ್ಚಿನ ಹಣವನ್ನು ಅಲ್ಲಿ ಸೇರಿಸುವುದಕ್ಕೆ ಕಾರಣವೇನು ? ಅದನ್ನು ಯಾವ ರೂಪದಲ್ಲಿ ಕೊಟ್ಟಿದ್ದೀರಿ ? ಷೇರ್ ರೂಪದಲ್ಲಿ ಕೊಟ್ಟಿದ್ದೀರಾ ? ಅದರಿಂದ ನಿಮಗೆ ಬಂದಂತಹ ಬಡ್ಡಿ ಏನು ? ಕೇಂದ್ರ ಸರ್ಕಾರದ ಹಣವನ್ನು ಪಡೆದುಕೊಂಡು ನ್ಯಾಷನಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಹಣವನ್ನು ಪಡೆದುಕೊಂಡು ಅದನ್ನು ಯಾವ ರೀತಿ ವಿನಿಯೋಗ ಮಾಡಿದ್ದೀರಿ ? ವಿನಿಯೋಗ ಮಾಡಿದ್ದಕ್ಕೆ ಯಾವ ರೀತಿ ಇನ್‌ಕಂ ಪಡೆದಿದ್ದೀರಿ ? ಇವತ್ತು ರೈತರಿಗೆ ಗೊಬ್ಬರವನ್ನು ಮಾರುತ್ತಿದ್ದೀರಿ; ಆದರೆ ಅದರಲ್ಲಿ ಹೇರಳವಾದ ಲಾಭವನ್ನು ಗಳಿಸುವಂತೆ ಚಾರ್ಜ್ ಹಾಕುತ್ತಿದ್ದೀರಿ. ಆದರೂ ಸಹ ನೀವು ಪಡೆದಿರುವ ಲಾಭ ಏನು ಎಂದು ಕೇಳಬೇಕಾಗುತ್ತದೆ. ಇವೊತ್ತಿನ ದಿವಸ ನೀವು ಮಾರ್ಕೆಟ್ ಸೊಸೈಟಿಗೆ ಹೇರಳವಾದ ಹಣವನ್ನು ಕೊಟ್ಟಿದ್ದೀರಿ. 7–8 ವರ್ಷದ ವರೆಗೂ ಬಡ್ಡಿಯನ್ನು ತೆಗೆದುಕೊಳ್ಳದೆ ಇಟ್ಟುಕೊಂಡಿದ್ದೀರಿ. ಅವರಿಂದ ಬಡ್ಡಿಯನ್ನು ಯಾಕೆ ವಸೂಲು ಮಾಡಿಲ್ಲ; ಮತ್ತು ಕೊಟ್ಟ ಹಣವನ್ನೂ ಸಹ ಯಾಕೆ ವಸೂಲು ಮಾಡುವುದಿಲ್ಲ ? ನೀವು ಈ ರೀತಿ ಯಾವ ಸೊಸೈಟಿಗೆ ಕೊಟ್ಟಿದ್ದೀರಿ ಮತ್ತು ಆ ತರಹ ಯಾವ ಸೊಸೈಟಿಯಿಂದ ಬಡ್ಡಿ ಕೂಡ ತೆಗೆದುಕೊಳ್ಳುವುದಿಲ್ಲ. ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ.

7–30 P.M.

ಇವೊತ್ತಿನ ದಿವಸ ಒಂದು ಸಂಕಟ ಪರಿಸ್ಥಿತಿ ಏನೆಂದರೆ ಮಾರ್ಕೆಟಿಂಗ್ ಸೊಸೈಟಿ ಬಡ್ಡಿ ವಸೂಲು ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಹಿಂದಿನಿಂದ ನೇರವಾಗಿ ಆ ಹಣ ಸರ್ಕಾರಕ್ಕೆ ಬರಬೇಕು. ಹೋದ ವರ್ಷ ರಿಜರ್ವ್ ಬ್ಯಾಂಕಿನವರ ಒತ್ತಾಯಕ್ಕೆ ಒಳಗಾಗಿ ಬಡ್ಡಿಯನ್ನು ವಸೂಲು ಮಾಡುವುದಕ್ಕೆ ಹತ್ತಿದ್ದಾರೆ. ಈಗ ಹಿಂದಿನ ಬಡ್ಡಿಯನ್ನು ವಸೂಲು ಮಾಡಿ ಎಂದರೆ ಅದನ್ನು ವಸೂಲು ಮಾಡುತ್ತೇವೆ ಎಂದು ಆಶ್ವಾಸನೆ ಕೊಡುತ್ತೀರಾ ಎಂದು ನಾನು ಕೇಳುತ್ತೇನೆ. ರಾಜ್ಯದ ಬೊಕ್ಕ

(ಶ್ರೀ ಕೆ. ಎಚ್. ಪಾಟೀಲ್)

ಸಕ್ಕೆ ಹಾನಿಯಾಗಬಾರದು. ಈಗ ನೀವೇ ಕೊಟ್ಟಿರುವ ಇನ್‌ಫರ್‌ಮೇಷನ್ ಪ್ರಕಾರ 1967-68ರ ವರೆಗೆ ಪ್ರಾಫಿಟ್ ಅಂಡ್ ಲಾಸ್ ಕೊಟ್ಟಿದ್ದೀರಿ. 1968-69ನೇ ಸಾಲಿನ ಆಡಿಟ್ ಆಗಿಲ್ಲ ಎನ್ನುವ ಮಾತು ಸ್ಪಷ್ಟವಾಗುತ್ತದೆ. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ರಾಜ್ಯದಲ್ಲಿ ಎಲ್ಲಾ ಸೊಸೈಟಿಗಳಿಗೂ ಮಾದರಿಯಾಗಿರಬೇಕು. ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆಲ್ಲಾ ಎನ್ನುವ ಹಾಗೆ ಈ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರೇ ಈ ರೀತಿ ವ್ಯವಹಾರ ಮಾಡುವುದಾದರೆ ಇನ್ನು ಉಳಿದ ಎಲ್ಲಾ ಸಹಕಾರ ಸಂಘಗಳಿಗೂ ಇದೇ ಹವ್ಯಾಸ ಬರುತ್ತದೆ. ಈ ರೀತಿ ರಾಜ್ಯಭಾರ ಮಾಡುವುದು ಸರಿಯಲ್ಲ. ರಾಜ್ಯದಲ್ಲಿ ಸಹಕಾರ ಇಲಾಖೆಯಲ್ಲಿ ಮಂತ್ರಿಗಳು ಮತ್ತು ಉಪಮಂತ್ರಿಗಳು ಇದ್ದುಕೊಂಡು ಒಂದು ವರ್ಷ ಪೂರ್ತಿಯಾದರೂ ಆ ಸೊಸೈಟಿಯ ಲೆಕ್ಕವನ್ನು ಇನ್ನೂ ಮುಗಿಸಿಲ್ಲ, ಆಡಿಟ್ ಮಾಡಿಲ್ಲ ಎಂದರೆ ಇದರ ಹಿನ್ನೆಲೆಯಲ್ಲಿ ಯಾವ ರೀತಿ ಮೋಸ ನಡೆಯುತ್ತದೆ ಎಂಬುದು ನಮಗೆ ಎದ್ದು ಕಾಣುತ್ತಿದೆ. ಆದ್ದರಿಂದ ನಾನು ತಮ್ಮನ್ನು ಬಹಳ ನಮ್ರತೆಯಿಂದ ಕೇಳುತ್ತೇನೆ, ಆ ಸಂಘಕ್ಕೆ ಲೇಟೆಸ್ಟ್ ಆಗಿ ಆದಂತಹ ಲಾಭ ಏನು ? ಮತ್ತು ಅವರು ಸರ್ಕಾರಕ್ಕೆ ಕೊಡಬೇಕಾದ ಹಣ ಎಷ್ಟು, ಬಡ್ಡಿ ಎಷ್ಟು ? ತಾವು ಎಷ್ಟು ಹಣವನ್ನು ಅವರಿಂದ ವಸೂಲು ಮಾಡುತ್ತೀರಿ, ಎಷ್ಟು ಹಣವನ್ನು ನೋಡಿ ಬಿಡುತ್ತೀರಿ ? ಈ ಬಗ್ಗೆ ಆ ಸಂಘದ ಡೈರೆಕ್ಟರ್ ಮತ್ತು ಪ್ರೆಸಿಡೆಂಟರೊಡನೆ ಆಲೋಚನೆ ಮಾಡಿದ್ದೀರಾ ! ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟಿನಲ್ಲೇ ಗೊಬ್ಬರವನ್ನು ಹಂಚುವ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದರೆ ಏನು ಪ್ರಮಾದವಾಗುತ್ತಿತ್ತು ? ಸಹಕಾರ ಇಲಾಖೆಯವರು ಗೊಬ್ಬರದ ಹಂಚಿಕೆಯನ್ನು ಉತ್ತಮವಾದ ರೀತಿಯಲ್ಲಿ ನಡೆಸುವುದಾದರೆ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಈ ರೀತಿ ದುರುಪಯೋಗ ದುರ್ವ್ಯವಹಾರಗಳು ನಡೆದರೆ ನಾನು ಅದನ್ನು ಸಹಿಸುವುದಕ್ಕಾಗುವುದಿಲ್ಲ. ಈ ರೀತಿ ಸಹಕಾರ ರಂಗದಲ್ಲಿ ಈ ಗೊಬ್ಬರದ ವ್ಯವಹಾರವನ್ನು ನಡೆಸುವುದಾದರೆ ಇದರಿಂದ ಜನಗಳಿಗೆ ಕಲ್ಯಾಣವಾಗುವುದಿಲ್ಲ. ನೀವು ಸಹಕಾರ ಸಂಘಗಳಿಗೆ ಕೊಟ್ಟಂಥಾ ಗೊಬ್ಬರ ಉಳಿಯುತ್ತದೆ. ವರ್ಷೇ ವರ್ಷೇ ಇದರಿಂದ ಹಾನಿಯಾಗುತ್ತದೆ. ರೈತನಿಗೂ ಅನುಕೂಲವಾಗುವುದಿಲ್ಲ. ಈ ದೃಷ್ಟಿಯಿಂದ ತಾವು ವಿವೇಚನೆ ಮಾಡಬೇಕು ಎಂದು ನಾನು ಕಳಕಳಿಯಿಂದ ಬಿನ್ನಹ ಮಾಡಿಕೊಳ್ಳುತ್ತೇನೆ.

ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ ಅದೇನೆಂದರೆ ಈ ಸ್ಟೇಟ್ ಮಾರ್ಕೆಟಿಂಗ್ ಸಂಘದವರು ಗೊಬ್ಬರವನ್ನು ಖರೀದಿ ಮಾಡುವಾಗ ಅದು ಒಂದು ವಿಧವಾದ ವಾಸನೆ ಬರುತ್ತಿತ್ತು. ಆದರೆ ಇವರು ಕೇಂದ್ರ ಸರ್ಕಾರದ ಮಂತ್ರಿಗಳ ಸಂಬಂಧೀಕರ ಒಬ್ಬರ ಪ್ರಭಾವಕ್ಕೊಳಗಾಗಿ ಅನಾವಶ್ಯಕವಾಗಿ ಗೊಬ್ಬರವನ್ನು ಖರೀದಿ ಮಾಡಿದ್ದಾರೆ. ಇದು ನಿಜವೇ ಅಥವಾ ಸುಳ್ಳೇ ? ಇದು ಸುಳ್ಳು ಎಂದರೆ ಅದನ್ನು ನಾನು ನಿಜವಾಗಿಯೂ ಸ್ವಾಗತಿಸುತ್ತೇನೆ. ಆದರೆ ನನಗೆ ಬಂದ ವರ್ತಮಾನದ ಪ್ರಕಾರ ಇವರು ಒಬ್ಬರ ಪ್ರಭಾವಕ್ಕೊಳಗಾಗಿ ಆ ಗೊಬ್ಬರವನ್ನು ಖರೀದಿ ಮಾಡಿದ್ದಾರೆ. ಇದರಲ್ಲಿ ರಾಜಕೀಯ ಭ್ರಷ್ಟಾಚಾರ ನಡೆದಿದೆ. ಇದರಲ್ಲಿ ಈ ವ್ಯವಹಾರದಲ್ಲಿ ಸಂಶಯ ಬರುವುದಕ್ಕೆ ಕಾರಣವಾಗಿದೆ. ಈ ದೃಷ್ಟಿಯಿಂದ ನಾನು ಕೇಳುತ್ತೇನೆ. ಈ ಗೊಬ್ಬರವನ್ನು ಖರೀದಿ ಮಾಡುವುದಕ್ಕೆ ಟೆಂಡರ್ ಕರೆದಿದ್ದೀರಾ ! ಇಲ್ಲ. ನೀವು ಮದ್ರಾಸ್‌ನಿಂದ ನೈಟ್ರೋಜನ್ ಮತ್ತು ಸೂಪರ್‌ಫಾಸ್ಫೇಟ್‌ಗಳನ್ನು ಖರೀದಿ ಮಾಡಿದ್ದೀರಾ. ಇದರಲ್ಲಿ ಏನೋ ಕೈವಾಡ ನಡೆದಿದೆ. ಎಲ್ಲೆಲ್ಲಿ ಇವರ ಹಿತಚಿಂತಕರು ಇದ್ದಾರೆ, ಎಲ್ಲೆಲ್ಲಿ ದುರುಪಯೋಗ, ದುರ್ವ್ಯವಹಾರ ನಡೆದಿದೆ ಅದನ್ನು ವಿಚಾರ ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಲಿ. ಇವೊತ್ತು ಎಲ್ಲೆಲ್ಲಿ ಗೊಬ್ಬರದ ಖರೀದಿ ಆಗಿದೆ ಅದೆಲ್ಲವೂ ಖಾಸಗಿಯವರ ಮುಖಾಂತರ, ಕಂಪೆನಿಗಳ ಮುಖಾಂತರ ಆಗಿದೆ. ಇವರು ಟೆಂಡರ್ ಕರೆದಿದ್ದಾರೆಯೇ ? ಪತ್ರಿಕೆಗಳಲ್ಲಿ ಪ್ರಸಿದ್ಧ ಮಾಡಿದ್ದಾರೆಯೇ ? ಸಹಕಾರ ಸಂಘಗಳವರು ಪ್ರಸಿದ್ಧ ಮಾಡಿದ್ದಾರೆಯೇ ! ಇವೊತ್ತು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನವರು ಮತ್ತು ರಿಜರ್ವ್ ಬ್ಯಾಂಕಿನವರು ಈ ಬಗ್ಗೆ ಸರ್ಕಾರಕ್ಕೆ ಏನು ಹಣ ಸಹಾಯವನ್ನು ಮಾಡುತ್ತಿದ್ದಾರೆ ಅದನ್ನು ತಾವು ಸರಿಯಾಗಿ ಉಪಯೋಗ ಮಾಡುತ್ತಿದ್ದೀರಾ ! ಈ ಬಗ್ಗೆ ಸಹಕಾರ ಸಂಘಗಳಿಗೆ ಕೊಡತಕ್ಕಂಥ ಹಣ ದುರುಪಯೋಗವಾಗುತ್ತಿದೆ, ದುರ್ವಿನಿಯೋಗವಾಗುತ್ತಿದೆ ಎಂದು ನಾನು ಹೇಳುತ್ತೇನೆ. ಈಗ ಇಲ್ಲಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯ ಒಂದು ಉದಾಹರಣೆ ಇದೆ. ಇಂಥಾದ್ದು ಅನೇಕ ಇವೆ. ನಾನು ಮಾತನಾಡುವಾಗ ಏನಾದರೂ ವಿರೋಧವಾಗಿ ಮಾತನಾಡಿದರೆ ಅದು ಸಹಕಾರಿ ಅಭಿವೃದ್ಧಿಯ ದೃಷ್ಟಿಯಿಂದ ಹೇಳುವುದು. ನಾನು ಮಾನ್ಯ ಬಿ.ಎಲ್.ಗೌಡರಲ್ಲಿ ಸವಿನಯಪೂರ್ವಕವಾಗಿ ತಿಳಿಸುತ್ತೇನೆ. ಅಗ್ರಿಕಲ್‌ಚರಲ್ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಒಳ್ಳೆಯ ಉದಾತ್ತವಾದ ಭಾವನೆಯುಳ್ಳ ಜನಗಳನ್ನು ನಿಯಮಿಸಿ ರೈತರಿಗೆ ಬೇಕಾದಂತಹ ಬೀಜ ಗೊಬ್ಬರ ಇತ್ಯಾದಿಗಳನ್ನು ಸರಿಯಾದ ರೀತಿಯಲ್ಲಿ ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಎಲ್ಲಾ ರೀತಿಯಿಂದಲೂ ಆಡಳಿತದಲ್ಲಿ ತಾರತಮ್ಯ ಮಾಡಕೂಡದು ಎಂದು ನಾನು ಹೇಳುತ್ತೇನೆ.

ಇದನ್ನೆಲ್ಲಾ ಕಂಟ್ರೋಲ್ ಮಾಡುವುದಕ್ಕೆ ನಾನು ಹೇಳಿದ ಮಾತುಗಳನ್ನೆಲ್ಲಾ ಮಾನ್ಯ ಉಪಮಂತ್ರಿಗಳಾದ ಶ್ರೀ ಬಿ. ಎಲ್. ಗೌಡರು ಗಮನದಲ್ಲಿಟ್ಟುಕೊಂಡು ನಿಜವಾಗಿಯೂ ರಾಜ್ಯದಲ್ಲಿ ಎಲ್ಲಾ ಮಾರ್ಕೆಟಿಂಗ್ ಸೊಸೈಟಿಗಳು ಹೆಚ್ಚು ಪೋಷಕವಾಗುವಂತೆ ಬೆಳೆಸಬೇಕು. ವಕ್ಕಲುತನಕ್ಕೆ ಬೇಕಾದಂತಹ ಬೀಜ, ಗೊಬ್ಬರ, ವ್ಯವಸಾಯದ ಉಪಕರಣ ಇವುಗಳನ್ನೆಲ್ಲಾ ಸರಿಯಾದ ರೀತಿಯಲ್ಲಿ ಮಾರಾಟ ಮಾಡುವಂಥಾ ವ್ಯವಸ್ಥೆಯನ್ನು ಮಾಡಿ ಅವು ನಿಜವಾದ ಬೆಲೆಗೆ ರೈತರಿಗೆ ಸಿಕ್ಕುವಂತಾಗಬೇಕು. ಇವು ಕತ್ತಲಲ್ಲಿ ಹಣವನ್ನು ಇಟ್ಟುಕೊಂಡಿರತಕ್ಕ ಶ್ರೀಮಂತರ ಕೈಗೆ, ವ್ಯಾಪಾರಸ್ಥರ ಕೈಗೆ ಕೊಟ್ಟು ಅವರು ಅವುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಹಣವನ್ನು ಗಳಿಸುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಮಾರಾಟ ಮಾಡುವಂಥಾ ಬೆಲೆ ಸರಿಯಾದ ಬೆಲೆ ಆಗಬೇಕು. ಇಂಥಾದ್ದಕ್ಕೆಲ್ಲಾ ಮಾರ್ಕೆಟಿಂಗ್ ಸೊಸೈಟಿಯನ್ನು ಉಪಯೋಗ ಮಾಡಿ ಅದರ ಮೂಲಕ ಈ ಸಲಕರಣೆಗಳನ್ನು ಮಾರಾಟ ಮಾಡಿದರೆ ಸಾರ್ಥಕವಾಗುತ್ತದೆ. ಕೇಂದ್ರ ಸರ್ಕಾರದಿಂದ ನಮ್ಮೆಲ್ಲರ ಹೆಸರಿನಲ್ಲಿ, ಮಾರ್ಕೆಟಿಂಗ್ ಸೊಸೈಟಿಗಳ ಹೆಸರಿನಲ್ಲಿ, ಸಹಕಾರ ಸಂಘದ ಹೆಸರಿನಲ್ಲಿ ನೀವು ಏನು ಹಣವನ್ನು ಪಡೆಯುತ್ತೀರೋ ಅದನ್ನು ದುರುಪಯೋಗ ಮಾಡದೆ ಅದನ್ನು ಸದುಪಯೋಗ ಮಾಡಬೇಕು. ಸ್ವಾರ್ಥಿಗಳ ಕೈಯಲ್ಲಿ ಇದನ್ನು ಕೊಟ್ಟು ಅವರು ತಮ್ಮ ಹಿತವನ್ನು ಸಾಧಿಸಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಡಿ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಉಪಾಧ್ಯಕ್ಷರೇ ಶ್ರೀಮಾನ್ ಸಿ.ಕೆ. ರಾಜಯ್ಯಶೆಟ್ಟರ ಪ್ರಶ್ನೆಗೆ ಸರ್ಕಾರದವರು ಉತ್ತರವನ್ನು ಕೊಟ್ಟಿದ್ದಾರೆ. ಈ ಬಗ್ಗೆ ಚರ್ಚೆ ಕೂಡ ಆಗಿದೆ. ಸಹಕಾರ ಸಂಸ್ಥೆಗೆ ಸಂಬಂಧಪಟ್ಟ ರಿಜಿಸ್ಟ್ರಾರರು ಇಲ್ಲಿ ಹಾಜರಿದ್ದಾರೆ. ಮತ್ತು ಸಹಕಾರ ಕ್ಷೇತ್ರದಲ್ಲಿ ಬಹಳ ಪಳಗಿದ ಮಂತ್ರಿಗಳು ಇದ್ದಾರೆ. ಈ ಪ್ರಶ್ನೆಯನ್ನು ಹಾಕುವುದಕ್ಕೆ ಕಾಲ ಇಲ್ಲ ಎಂದರು. ಕ್ರಿಯಾಲೋಪ ಎತ್ತಿದವರೂ ಕೂಡ ಸಹಕಾರ ಸಂಸ್ಥೆಯಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂದು ನಾನು ಕೇಳಿದ್ದೇನೆ. ಶಿವಮೊಗ್ಗ ಜಿಲ್ಲೆಯ ಹೊಸ ನಗರದ ಸದಸ್ಯರು ಏನು ಮಾಡಿದ್ದಾರೆ ಆ ವಿಷಯದ ಬಗ್ಗೆ ನಾನು ಈಗ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಸಮಯ ಇಲ್ಲ. ಆದರೆ ಮಾನ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ಕೇಳುವುದು ಏನೆಂದರೆ ತಾವು ಒದಗಿಸಿರುವ ಉತ್ತರಗಳ ಜೊತೆಗೆ ಯಾರ ಪ್ರೇರಣೆಯಿಂದ ಸರ್ಕಾರ ಈ ವ್ಯವಹಾರವನ್ನು ಕೈಕೊಂಡಿತು. ರಾಸಾಯನಿಕ ಗೊಬ್ಬರದ ವಾರ್ಷಿಕ ಅವಶ್ಯಕತೆ ಎಷ್ಟು? ಈಗ ಒಂದು ವರ್ಷಕ್ಕೆ 6 ಲಕ್ಷ ರೂಪಾಯಿ ನಷ್ಟ ಮತ್ತು ಬಡ್ಡಿ 17 ಲಕ್ಷ 37 ಸಾವಿರ ರೂಪಾಯಿ. ಈ ರೀತಿ ಎಲ್ಲಾ ಕೊಟ್ಟಿದ್ದನ್ನು ಸಹಕಾರಿ ಸಂಸ್ಥೆಯಿಂದ ಕೊಡುತ್ತೀರೋ ಅಥವಾ ಸಹಕಾರಿ ಸಂಸ್ಥೆಯಲ್ಲಿರತಕ್ಕ ಹಣವೆಲ್ಲಾ ಡೈರೆಕ್ಟರ ಸ್ವಂತ ಅನುಭವಕ್ಕೆ—ಅವರು ಒಂದು ಸಲ ಆ ತರಹ ಉತ್ತರ ಕೊಟ್ಟಿದ್ದಾರೆ ಒಂದು ಕಡೆ—ಆಹಾರ ಪದಾರ್ಥವನ್ನು ಕೊಳ್ಳುವುದಕ್ಕೆ ಕೊಟ್ಟ 9–10 ಕೋಟಿ ರೂಪಾಯಿ ಅದು ನಮ್ಮ ಹಣ ಇದ್ದ ಹಾಗೆಯೇ ಏಕೆಂದರೆ ಅದನ್ನು ಬೇಕಾದಾಗ ನಾವು ಉಪಯೋಗಿಸುತ್ತೇವೆ, ಬೇಡವಾದಾಗ ಯಾವುದೋ ಒಂದು ಬ್ಯಾಂಕಿನಲ್ಲಿ ಇಟ್ಟಿರುತ್ತೇವೆ, ಆ ಪ್ರಕಾರ ಸರ್ಕಾರಿ ಲೆಕ್ಕದಲ್ಲಿ ಇದೆಲ್ಲಾ ಬರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಈ ರೀತಿ ವ್ಯವಹಾರ ನಡೆದಿದೆ. ಒಟ್ಟು ಏನು ಮುಖ್ಯ ಮಂತ್ರಿಗಳು ಮೈಸೂರು ರಾಜ್ಯದ ಇತಿಹಾಸದಲ್ಲಿಯೇ ನಾವು ಇಷ್ಟು ಕೋಟಿ ರೂಪಾಯಿಗಳ ಸಾಲವನ್ನು ರೈತರಿಗೆ ಕೊಟ್ಟುಬಿಟ್ಟಿದ್ದೇವೆ ಎಂದು ಹೇಳಿ ತುಂಬಾ ಹೆಮ್ಮೆಯಿಂದ ಈ ಸಭೆಯ ಮುಂದೆ ಏನು ಹೇಳಿಕೊಂಡಿದ್ದಾರೋ ಈ ಸಾಲ ಕೊಟ್ಟ ಕ್ರಮ, ಯಾರಿಗೆ ಕೊಟ್ಟಿದ್ದಾರೆ? ಎಷ್ಟೆಷ್ಟು ಕೊಟ್ಟಿದ್ದಾರೆ? ಯಾವ್ಯಾವ ಡೈರೆಕ್ಟರುಗಳು, ರಿಜಿಸ್ಟ್ರಾರರುಗಳು ಇದಕ್ಕೆ ಹೊಣೆ ಅಂತ ಅನ್ನುವುದು ವಿಚಾರಣೆಯ ಕಾಲದಲ್ಲಿ ವಿಚಾರಣೆ ಆಗಿಯೇ ಆಗುತ್ತದೆ. ಕೆಲವು ನಿರಪರಾಧಿಗಳಿಗೆ ಶಿಕ್ಷೆ ಆಗಲೂ ಬಹುದು. ಕೋತಿ ತಿಂದು ಮೇಕೆ ಬಾಯಿಗೆ ಒತ್ತಿರುತ್ತದೆ, ಏಕೆಂದರೆ ಕೋತಿ ಬುದ್ಧಿವಂತ ಪ್ರಾಣಿ. ಆದ್ದರಿಂದ ಈ ರಾಸಾಯನಿಕ ಗೊಬ್ಬರವನ್ನು ಪಡೆದುಕೊಂಡಿರುವ ಬಗ್ಗೆ, ಮಾರಾಟದ ದರ, ಏಜೆಂಟರು ಇಟ್ಟಿರುವ ಗೋಡೌನು, ಅದಕ್ಕೆ ಕೊಟ್ಟಿರುವ ಬಡ್ಡಿ ಮತ್ತು ಆಗಿರುವ ನಷ್ಟ ಮತ್ತು ತೋರಿಸಿರುವ ಲಾಭ, ಯಾವ ಮೂಲಕ ಲಾಭ ಬಂದಿದೆ, ಲಾಭದ ದೃಷ್ಟಿಯಿಂದ ಲಾಭ ಬಂದಿದೆಯೇ? ಈ ಲಾಭ ತೋರಿಸಿದ್ದೀರಲ್ಲಾ ಇದು ಓಪನ್ ಮಾರ್ಕೆಟ್‌ನಲ್ಲಿ ಮಾರಾಟ ಮಾಡಿ ನೀವು ಪಡೆದುಕೊಂಡ ಹಣಕ್ಕಿಂತ ಹೆಚ್ಚು ಲಾಭ ಬಂದಿದೆಯೇ? ಸೊಸೈಟಿಗಳಲ್ಲಿ ಲೆಕ್ಕ ಹಾಕಿ ಈ ಸಭೆಗೆ ತೋರಿಸಲಿಕ್ಕೆ ಮಾಡಿರುವಂತಹ ಲಾಭವೇ? ಇದನ್ನೆಲ್ಲಾ ತಾವು ನಮಗೆ ದಯವಿಟ್ಟು ಹೇಳಬೇಕು. ಮತ್ತು ಒಂದು ಸಾವಿರ ಷೇರು ಬಂಡವಾಳವನ್ನು ತೊಡಗಿಸಿದ್ದೀರಲ್ಲಾ ಇದು ಯಾವ ರೀತಿ ವಿನಿಯೋಗವಾಗುತ್ತದೆ! ತಾವು ವಾಪಸು ಕೊಡುವಂತಹ ಷೇರುಗಳೇ ಅಥವಾ ಅಲ್ಲೇ ಜೀರ್ಣವಾಗುವಂತಹ ಷೇರುಗಳೇ? ಅಥವಾ ಬೇರೆ ಉಪಯೋಗಕ್ಕೆ ಬಳಸುವಂತಹ ಷೇರು ಬಂಡವಾಳವೇ ಎಂಬ ಬಗ್ಗೆ ಸಹ ಉತ್ತರ ಕೊಡಬೇಕೆಂದು ಕೇಳಿಕೊಂಡು ಈ ವ್ಯವಹಾರದ ಬಗ್ಗೆ ಸರ್ಕಾರದವರು ಒಂದು ನ್ಯಾಯಾಂಗ ವಿಚಾರಣೆಗೆ ಇದನ್ನು ಗುರಿಪಡಿಸಬೇಕೆಂದು ಹೇಳಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

†ಶ್ರೀ ಎಚ್. ಸಿದ್ದವೀರಪ್ಪ.—ಒಂದು ಮಾತು ಹೇಳುತ್ತೇನೆ, ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ. ಶ್ರೀಮಾನ್ ಗೋಪಾಲಗೌಡರು ಹೇಳಿದ ಒಂದೆರಡು ಮಾತುಗಳನ್ನು ಪುಷ್ಟೀಕರಿಸುತ್ತಾ ಮಾನ್ಯ ಉಪಮಂತ್ರಿಗಳಿಗೆ ಕೇಳುತ್ತೇನೆ, ಅವರು ಜವಾಬು ಕೊಡಬೇಕಾದರೆ ನಾನು ಎತ್ತತಕ್ಕ ಪ್ರಶ್ನೆಗಳಿಗೆ ನೇರವಾದ ಜವಾಬನ್ನು ಕೊಡುತ್ತಾರೆ ಎಂದು ನಿರೀಕ್ಷಣೆ ಮಾಡುತ್ತೇನೆ. ನನಗೆ ಗೊತ್ತಿದ್ದ ಹಾಗೆ ಸುಮಾರು 30 ಕೋಟಿ ರೂಪಾಯಿಗಳ ಬಂಡವಾಳವನ್ನು ಇದರಲ್ಲಿ ತೊಡಗಿಸಿದ್ದೀರಿ. ಇಷ್ಟು ಗೊಬ್ಬರ ಬೇಕೆಂದು ಯಾರು ಎಸ್ಟಿಮೇಟ್ ಮಾಡಿದರು ? ಇಲಾಖೆ ಇಲಾಖೆಗಳಲ್ಲಿಯೇ ಅವರ ಮೇಲೆ ಇವರು, ಇವರ ಮೇಲೆ ಅವರು ಹೇಳತಕ್ಕ ಪರಿಸ್ಥಿತಿ ಬಂತೇ ? ಇದು ಒಳಅಂತರಂಗ ಗೊತ್ತಿರತಕ್ಕ ವಿಷಯವಾಗಿರುವುದರಿಂದ ಇದನ್ನು ಸ್ಪಷ್ಟಪಡಿಸಬೇಕು. ನಿನ್ನೆ ದಿವಸ ಮಾನ್ಯ ಸಭಾನಾಯಕರು ಇಲ್ಲಿ ಭಾಷಣವನ್ನು ಮಾಡಿ, ಅವರು ಸಾಧನೆ ಮಾಡಿರತಕ್ಕ ವಿಷಯಗಳನ್ನು ಹೇಳುತ್ತಾ ಇಷ್ಟೊಂದು ಹಣ ಸಾಲ ಕೊಟ್ಟಿದ್ದೇವೆ ಎಂದು ಹೇಳಿದರು. ನೋಡುವುದಕ್ಕೆ ಈ ಅಂಕಿಅಂಶಗಳು ಬಹಳ ಚೆನ್ನಾಗಿ ಕಾಣಬಹುದು. ಈ ಗೊಬ್ಬರದ ವಿಷಯದಲ್ಲಿ ಏನಾಗಿದೆ ಎಂದರೆ ಮನಾಪಲಿ ಇಟ್ಟುಕೊಂಡರು ಅದರ ಜೊತೆಗೆ ಖಾಸಗಿಯವರಿಗೆ ಸ್ವಲ್ಪ ಅದನ್ನು ವ್ಯಾಪಾರ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಾರೆ. ಖಾಸಗಿಯವರು ಇವರಿಗಿಂತ ಸ್ವಲ್ಪ ಕಡಿಮೆ ಬೆಲೆಗೆ ಮಾರಾಟ ಮಾಡಿರುವುದರಿಂದ ಇವರ ಗೊಬ್ಬರ ಮಾರ್ಕೆಟ್‌ನಲ್ಲಿ ವ್ಯಾಪಾರವಾಗುತ್ತಾ ಇಲ್ಲ. ಇವರು ತರಿಸಿರುವುದು ಇತಿಮಿತಿ ಇಲ್ಲದೇ ತರಿಸಿದ್ದಾರೆ. ನಮ್ಮ ರೈತರು ಈ ಗೊಬ್ಬರದ ಖಾರ ಹೊರಟು ಹೋಗಿದೆ, ಕಟ್ಟು ಹೋಗಿ ನಾಥ ಬರುತ್ತಿದೆ, ಆದ್ದರಿಂದ ಇದು ನಮಗೆ ಬೇಡ ಎಂದು ಹೇಳುತ್ತಾರೆ. ಎರಡನೆಯದಾಗಿ ಖಾಸಗಿಯವನು ಮುಗ್ಗಲಿನಲ್ಲೇ ಕುಳಿತಿದ್ದಾನೆ, ಅವನು ಮಾರತಕ್ಕ ಗೊಬ್ಬರದ ಬೆಲೆ ಕಡಿಮೆ ಬೆಲೆ ಇದೆ. ಈ ಒಂದು ವ್ಯವಸ್ಥೆಯನ್ನು ಯಾವ ರೀತಿ ಮಾಡಿದರು ಎಂಬುದನ್ನು ಮಾನ್ಯ ಉಪಮಂತ್ರಿಗಳು ಹೇಳಬೇಕು. ಕಾಸ್ಟ್ ಅಕೌಂಟ್ ಲೆಕ್ಕ ಹಾಕಿದಾಗ ಹೊರಗಡೆಯಿಂದ ಬರುವ ಗೊಬ್ಬರದ ಕಾಸ್ಟ್ ಪ್ರೈಸ್ ಏನಿದೆ ಇದು ಕೊನೆಗೆ ಕನ್‌ಸ್ಯೂಮರ್ ಆದ ರೈತನ ಮೇಲೆ ಬೀಳುವಾಗ ಎಕ್ಸ್ ಪ್ಲಸ್ 35 ರುಪೀಸ್‌ನಂತೆ ಬಿದ್ದಿದೆ. ಎಕ್ಸ್ ಪ್ಲಸ್ 35 ರುಪೀಸ್ ಬೀಳಬೇಕಾದರೆ ಅದನ್ನು ನೀವು ಎಲ್ಲೆಲ್ಲಿ, ಯಾವ ಯಾವ ಹಂತದಲ್ಲಿ ಜಾಸ್ತಿ ಮಾಡಿದ್ದೀರಿ, ಹೇಗೆ ಆಯಿತು ಎಂಬುದನ್ನು ನೋಡಿದರೆ ಟ್ರಾನ್ಸ್‌ಪೋರ್ಟ್ ಇದೆಲ್ಲಾ ಬೀಳಬೇಕಾದ್ದೆ, ಬಿದ್ದಿದೆ, ಇದರಲ್ಲಿ ಸುಮಾರು ರೂಪಾಯಿನಲ್ಲಿ 14 ಆಣೆ ಭಾಗ ಈ ಸಹಕಾರ ಸಂಘಗಳಲ್ಲಿ ಸೆಂಟ್ರಲ್ ಬ್ಯಾಂಕ್ ಆದ ಅಪೆಕ್ಸ್ ಬ್ಯಾಂಕು ಅಲ್ಲಿಂದ ಕೆಳಗೆ ಡಿಸ್ಟ್ರಿಕ್ಟ್ ಬ್ಯಾಂಕು, ಅಲ್ಲಿಂದ ಕೆಳಗೆ ತಾಲ್ಲೂಕು ಸೊಸೈಟಿ, ಇತ್ಯಾದಿ ಇತ್ಯಾದಿಯಾಗಿ ಹೋಗಿ ಕನ್‌ಸ್ಯೂಮರ್‌ಗೆ ಸಿಕ್ಕಬೇಕಾದರೆ ಇಷ್ಟು ದುಡ್ಡು ಜಾಸ್ತಿಯಾಗಿದೆ. ಇನ್ನೊಂದು ವಿಷಯವನ್ನು ಈ ಮಾನ್ಯ ಸಭೆ ಗಮನಿಸಬೇಕು. ಸೆಂಟ್ರಲ್ ಸೊಸೈಟಿಯವರು ಒಬ್ಬನಿಂದ ಒಂದು ಕ್ವಿಂಟಾಲ್‌ಗೆ 5 ರೂಪಾಯಿ ಜಾಸ್ತಿ ತೆಗೆದುಕೊಂಡು ಅದನ್ನು ಸೆಂಟ್ರಲ್ ಸೊಸೈಟಿಯ ಷೇರಿಗೆ ಅಂತ ಹಾಕಿದ್ದಾರೆ. ಸೆಂಟ್ರಲ್ ಸೊಸೈಟಿಯ ಷೇರು ಮೊಬಲಗು ಕೊಡುವವನು ರೈತ. ಈ ರೈತನಿಂದ ತೆಗೆದುಕೊಂಡ ಲಾಭ ಅಪಾರ ಲಾಭ. ಬಿತ್ತುವ ಹಾಗಿಲ್ಲ, ಬೆಳೆಯುವ ಹಾಗೆ ಇಲ್ಲ. ತಮಗೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಿಕೊಂಡು ಅವರ ಸಹಾಯವನ್ನು ಪಡೆದುಕೊಂಡು ಇಷ್ಟೊಂದು ಅನ್ಯಾಯ ಮಾಡಿದ್ದಾರೆ. ಇದರ ವಿಚಾರಣೆಯನ್ನು ಮಾಡಿದರೆ ಇಲ್ಲಿರತಕ್ಕ ತಿಮಿಂಗಲಗಳು, ಯಾವ ಯಾವ ರೀತಿಯಲ್ಲಿ ಸೇರಿಕೊಂಡಿವೆ ಅನ್ನುವುದು ಈಚೆಗೆ ಬಂದರೆ ಮೈಸೂರು ದೇಶದಲ್ಲಿ ಈ ಸರ್ಕಾರ ಇರಲಿಕ್ಕೆ ಲಾಯಕ್ ಅಲ್ಲ, ಇದು ಜನಗಳ ಶೋಷಣೆಯನ್ನು ಮಾಡತಕ್ಕ ಕಾರ್ಯ ಕೈಕೊಂಡಿದೆ ಎಂಬುದು ಬಯಲಿಗೆ ಬರುತ್ತದೆ.

ಇನ್ನೊಂದು ವಿಷಯ ಏನೆಂದರೆ ಗೊಬ್ಬರ ಹಾಕಿದ್ದಾರೆ, ದಾವಣಗೆರೆಯ ಒಂದರ ವಿಷಯ ನನಗೆ ಗೊತ್ತು, ಅಲ್ಲಿ ಸುಮಾರು ಒಂದು ತಿಂಗಳಿಗೆ ಐದೂವರೆ, ಆರು ಸಾವಿರ ರೂಪಾಯಿ ಗೋಡೌನ್ ಚಾರ್ಜಸ್ ಕೊಡಬೇಕು. ಅವರು ಇದನ್ನು ತೆಗೆದು ಹಾಕಿರಿ, ನಮಗೆ ಗೊಬ್ಬರ ಬೇಡ, ಗೋಡೌನ್ ಚಾರ್ಜಸ್ ಕೊಡುವುದಕ್ಕಾಗುವುದಿಲ್ಲ ನಮ್ಮ ಷೇರು ಬಂಡವಾಳ ಇರುವುದೆಲ್ಲಾ 50- 0 ಸಾವಿರ ರೂಪಾಯಿ ಇರಬಹುದು, ಅದನ್ನು ನಾವು ಇದರ ಬಾಡಿಗೆಗೇ ಕೊಟ್ಟರೆ ಹೇಗೆ ಉಳಿದುಕೊಳ್ಳಬೇಕು ಎಂದು ಹೇಳಿ ರಿಜಿಸ್ಟ್ರಾರ್‌ರವರಿಗೆ ನೋಟೀಸ್ ಕೊಟ್ಟಿದ್ದಾರೆ. ಇದನ್ನು ಇಡಬೇಡಿ ಎಂದು ಹೇಳಿದ್ದಾರೆ. ಈಗ ಅದನ್ನು ತೆಗೆದುಕೊಂಡು ಹೋಗಿ ಮುನಿಸಿಪಾಲಿಟಿಗೆ ಹಾಕುವುದಕ್ಕೂ ದಾರಿ ಇಲ್ಲ. ಇಂತಹ ಒಂದು ಪರಿಸ್ಥಿತಿ ಏನಿದೆ ಇದರ ವಿಚಾರಣೆಗೆ ಒಂದು ಸ್ಪೆಷಲ್ ಆಡಿಟ್ ಸೆಲ್ ಮಾಡುವುದರ ಜೊತೆಗೆ ಈಗ ಏನು ಆಗಿದೆ ಇದರ ವಿಷಯದಲ್ಲಿ ತಾವು ಏನು ಹೇಳುತ್ತೀರಿ ? ಇದು ಸರಿಯೇ ! ಅಲ್ಟಿಮೇಟ್ ಆಗಿ ಎಷ್ಟು ಲುಕ್ಸಾನಾಗಿದೆ ?

ಈಗ ಕೈಗಾರಿಕಾ ಸಂಸ್ಥೆಯಲ್ಲಿ ಏನೇನಾಗಿದೆ ಎನ್ನುವುದನ್ನು ಹೇಳುತ್ತೇನೆ. ಸಹಕಾರ ಸಂಘಗಳಲ್ಲಿ ಅಚಲ ವಿಶ್ವಾಸ, ಅಚಲ ಪ್ರೇಮ ಇಟ್ಟುಕೊಂಡು ನಾನು 1928 ನೇ ಇಸವಿಯಿಂದಲೂ ಕೆಲಸ ಮಾಡುತ್ತಿದ್ದೆ. ಇತ್ತೀಚೆಗೆ ಆಗುತ್ತಾ ಇರತಕ್ಕಂಥಾದ್ದನ್ನು ನೋಡಿದರೆ ಈಗ ಈ ಸಂಸ್ಥೆ

ಗಳನ್ನು ರಿಜಿಸ್ಟರ್ ಮಾಡಿಸಬೇಕಾದರೆ ರಿಜಿಸ್ಟ್ರಾರ್ ಆಫ್ ಜಾಯಿಂಟ್ ಸ್ಟಾಕ್ ಕಂಪನೀಸ್ ಅವರ ಹತ್ತಿರ ಮಾಡಿಸೋಣ ಅನ್ನುವಷ್ಟು ಬೇಜಾರಾಗಿದೆ. ರಿಜಿಸ್ಟ್ರಾರ್ ಆಫ್ ಕೋಆಪರೇಟೀವ್ ಸೊಸೈಟೀಸ್ ಅವರ ಸಹವಾಸವೇ ಬೇಡ ಅನಿಸುತ್ತದೆ, ಅವರ ಹಿಡಿತವೇ ಬೇಡ ಅನಿಸುವಷ್ಟು ಬೇಜಾರಾಗಿಬಿಟ್ಟಿದೆ. ಅದನ್ನು ತಿಳಿದುಕೊಂಡು ಆದಷ್ಟು ಜಾಗ್ರತೆ ಅಂಕಿಅಂಶಗಳನ್ನು ಕೊಡುತ್ತಾರೆಂದು ಹೇಳಿ ಶ್ರೀಮಾನ್ ಕೆ. ಹೆಚ್. ಪಾಟೀಲರು ತಂದಿರತಕ್ಕಂಥ ಅರ್ಧಗಂಟೆಯ ಕಾಲ ಚರ್ಚೆಯನ್ನು ಪುಷ್ಟೀಕರಿಸುತ್ತೇನೆ.

†ಶ್ರೀ ಬಿ. ಎಲ್. ಗೌಡ (ಸಹಕಾರಿ ಶಾಖೆಯ ಉಪಮಂತ್ರಿಗಳು).—ಮಾನ್ಯ ಸಭಾಪತಿಗಳೇ, ಶ್ರೀಮಾನ್ ಸಿ. ಕೆ. ರಾಜಯ್ಯಶೆಟ್ಟರು ಈ ಸಭೆಯಲ್ಲಿ ಪ್ರಸ್ತಾಪಿಸಿದ ರಾಜ್ಯದ ಮಾರಾಟ ಸಂಘದಲ್ಲಿರುವ ರಾಸಾಯನಿಕ ಗೊಬ್ಬರದ ವ್ಯಾಪಾರದ ಪ್ರಶ್ನೆ ಬಗ್ಗೆ ಈ ಒಂದು ಚರ್ಚೆಯನ್ನು ಕಲ್ಪಿಸಿಕೊಟ್ಟಿದ್ದಾರೆ. ಮಾನ್ಯ ಸ್ನೇಹಿತರು ಪ್ರಸ್ತಾಪ ಮಾಡಿರತಕ್ಕಂಥ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಉತ್ತರಕೊಡಲು ನನಗೆ ಕಾಲಾವಕಾಶ ಬೇಕು. ಆದಕ್ಕೋಸ್ಕರ ತಾವು ಸಹಕರಿಸಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈ ರಾಜ್ಯದ ಮಾರಾಟ ಸಂಘದಲ್ಲಿರುವ ರಾಸಾಯನಿಕ ಗೊಬ್ಬರದ ಇತಿಹಾಸ ಹೀಗಿದೆ. 1950 ರಿಂದ 1960ನೇ ಇಸವಿಯವರೆಗೂ ಗೊಬ್ಬರವನ್ನು ವ್ಯವಸಾಯ ಇಲಾಖೆಯವರು ಶೇಖರಣೆ ಮಾಡಿ ಮಾರಾಟ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಅವರಲ್ಲಿ ದಾಸ್ತಾನಿದ್ದ ಗೊಬ್ಬರವನ್ನು ರೈತರಿಗೆ ಉಪಯೋಗ ಮಾಡುವ ಬಗ್ಗೆ ವಿಸ್ತರಣೆ ಮತ್ತು ಪ್ರಚಾರ ಮಾಡಲಿಕ್ಕೆ ಸಾಕಷ್ಟು ರೀತಿಯಲ್ಲಿ ಕಾಲಾವಕಾಶ ಇಲ್ಲವೆಂದು ಹೇಳಿ 1960ರಲ್ಲಿ ಕೋ-ಆಪರೇಟೀವ್ ಇಲಾಖೆಗೆ ವರ್ಗ ಮಾಡಿದರು. 1961 ರಿಂದ ಈಚೆಗೆ ಗೊಬ್ಬರದ ವಹಿವಾಟು ಸಹಕಾರಿ ರಂಗದಲ್ಲಿ ನಡೆಯುತ್ತಾ ಇದೆ. ಆದರೂ ಸಹ ಗೊಬ್ಬರವನ್ನು ಎಷ್ಟು ಕೊಂಡುಕೊಳ್ಳಬೇಕು. ಯಾವ ವರ್ಷದಲ್ಲಿ ಎಷ್ಟು ಕೊಂಡುಕೊಳ್ಳಬೇಕು. ಈ ಒಂದು ಜವಾಬ್ದಾರಿ ಮಾತ್ರ ವ್ಯವಸಾಯ ಇಲಾಖೆಯವರ ಮುಖೇನ ನಡೆಯುತ್ತಾ ಇದೆಯೇ ಹೊರತು ನೇರವಾಗಿ ರಾಜ್ಯದ ಮಾರಾಟ ಸಹಕಾರ ಸಂಘದವರೇ ಮಾಡಿಲ್ಲ. ಅದನ್ನು ಯಾವಾಗ ಕೊಂಡುಕೊಳ್ಳಬೇಕಾದರೂ ನಿರ್ದೇಶನ ಕೊಡುವವರು ನಿರ್ಧಾರ ಮಾಡುವವರು ವ್ಯವಸಾಯ ಇಲಾಖೆಯವರೇ ಎಂದು ಮತ್ತೊಮ್ಮೆ ಈ ಸಭೆಗೆ ಹೇಳಬಯಸುತ್ತೇನೆ. ಆದುದರಿಂದ ಗೊಬ್ಬರ ಕೊಳ್ಳುವುದಕ್ಕೆ ನಿಗದಿ ಮಾಡುವವರು ವ್ಯವಸಾಯ ಇಲಾಖೆಯವರು ಎಂದು ಹೇಳಬಯಸುತ್ತೇನೆ.

ಇದಾದ ಮೇಲೆ ಈ ಒಂದು ಸೊಸೈಟಿಯಲ್ಲಿ ಎಷ್ಟೆಷ್ಟು ಲಾಭಾಂಶವನ್ನು ಕೊಟ್ಟಿದ್ದಾರೆ ಎನ್ನುವ ಅಂಕಿಸಂಖ್ಯೆಗಳನ್ನು ಶ್ರೀಮಾನ್ ಸಿದ್ಧವೀರಪ್ಪನವರು ಕೇಳಿದ್ದಾರೆ. ಅದನ್ನು ಹೇಳುತ್ತೇನೆ. 1963-64 ರಲ್ಲಿ ಸ್ಟೇಟ್ ಮಾರ್ಕೆಟಿಂಗ್ ಕೋ ಆಪರೇಟಿವ್ ಸೊಸೈಟಿಯವರು 6 ರೂಪಾಯಿ ಮಾರ್ಜಿನ್‌ನಲ್ಲಿ ಮಾರಿದ್ದಾರೆ. ತಾಲ್ಲೂಕು ಮಾರ್ಕೆಟಿಂಗ್ ಕೋ ಆಪರೇಟಿವ್ ಸೊಸೈಟಿಯವರು 18 ರೂಪಾಯಿನಂತೆ ಮಾರ್ಜಿನ್ ಇಟ್ಟು ಕೊಡುತ್ತಾ ಇದ್ದಾರೆ. ಪ್ರೈಮರಿ ಸಹಕಾರ ಸಂಘದವರು 16 ರೂಪಾಯಿನ ಮಾರ್ಜಿನ್ ಇಟ್ಟುಕೊಂಡು ಕೊಡುತ್ತಾ ಇದ್ದಾರೆ. 1964 ರಲ್ಲಿ ಇದು ಕಡಿಮೆ ಎಂದು ತಿಳಿದುಕೊಂಡು ಸರ್ಕಾರದವರು ರಿವೈಸ್ ಮಾಡಿದ ಮೇಲೆ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರು 10 ರೂಪಾಯಿ, ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯವರು 11 ರೂಪಾಯಿ, ಪ್ರೈಮರಿ ಮಾರ್ಕೆಟಿಂಗ್‌ನವರು 9 ರೂಪಾಯಿನಂತೆ ಮಾರ್ಜಿನ್ ಇಟ್ಟುಕೊಂಡು ಕೊಡುತ್ತಾ ಇದ್ದಾರೆ. ಈ ಸಂದರ್ಭದಲ್ಲಿ ಗೊಬ್ಬರದ ಮಾರಾಟ ಸಂಘದವರ ಮಾರ್ಜಿನ್ ಬಹಳ ಕಡಿಮೆ ಇದೆ. ಅದರಲ್ಲಿ ಅಪರೇಷನ್ ಕಾಸ್ಟ್ ಬಹಳ ಜಾಸ್ತಿ. ಇದು ಮೈಸೂರಿನ ರಾಜ್ಯದಲ್ಲಿ ಒಂದರಲ್ಲೇ ಅಲ್ಲ. ಇಡೀ ಭರತಖಂಡದಲ್ಲಿ ಎಲ್ಲಾ ರಾಜ್ಯಗಳಲ್ಲಿ ಸಹಕಾರಿ ಮಾರ್ಕೆಟಿಂಗ್ ಸೊಸೈಟಿ ಮುಖಾಂತರ ಓಪನ್ ಆದ ಸಹಕಾರೀ ಸಂಸ್ಥೆಗಳಿಗೆ ಹೆಚ್ಚಿನ ಮಾರ್ಜಿನ್ ಕೊಡಬೇಕೆಂದು ಕೇಂದ್ರ ಸರ್ಕಾರದ ಒಂದು ಸಮಿತಿ ಶಿಫಾರಸ್ಸು ಮಾಡಿದ. ಅವರು ಯಾರು ಎಂದರೆ ಕೇಂದ್ರ ಸರ್ಕಾರದ ವ್ಯವಸಾಯದ ಕಾರ್ಯದರ್ಶಿಗಳಾದ ಶಿವರಾಮನ್ ಅವರ ಅಧ್ಯಕ್ಷತೆಯಲ್ಲಿ ಸೇರಿದ ಒಂದು ಸಮಿತಿ ಶಿಫಾರಸ್ಸು ಮಾಡಿದ ಪ್ರಕಾರ ಟನ್ ಒಂದಕ್ಕೆ 50 ರೂಪಾಯಿನಂತೆ ಮಾರಿದರೆ ಸ್ಟೇಟ್ ಮಾರ್ಕೆಟಿಂಗ್‌ನವರಿಗೆ 15 ರೂಪಾಯಿ, ತಾಲ್ಲೂಕು ಮಾರ್ಕೆಟಿಂಗ್ ಮತ್ತು ಪ್ರೈಮರಿ ಮಾರ್ಕೆಟಿಂಗ್ ಎರಡೂ ಸೇರಿ 35 ರೂಪಾಯಿ. ಅಂದರೆ ಟನ್ ಒಂದಕ್ಕೆ 35 ರೂಪಾಯಿನಂತೆ ಮಾರ್ಜಿನ್ ಇಟ್ಟುಕೊಂಡು ಮಾರುತ್ತಾರೆ. ಇಷ್ಟೆಲ್ಲಾ ನಾವು ಮಾಡಿದರೂ ಕೂಡ ಈ ಹಸಿರು ಕ್ರಾಂತಿ ಗೊಬ್ಬರಕ್ಕೆ ವಿಪರೀತ ಬೇಡಿಕೆ ಬರುತ್ತಿತ್ತು. ಎರಡು ವರ್ಷದಿಂದೀಚೆಗೆ ಗೊಬ್ಬರದ ಪರಿಸ್ಥಿತಿ ಹೇಗಿತ್ತು ಎಂದರೆ ತುಂಬಾ ಡಿಮ್ಯಾಂಡ್ ಆಗಿ ಬ್ಲಾಕ್ ಮಾರ್ಕೆಟ್‌ನಲ್ಲೂ ಕೂಡ ಹೋಗಿ ತರುತ್ತಾ ಇದ್ದರು. ಈ ರೀತಿ

(ಶ್ರೀ ಬಿ. ಎಲ್. ಗೌಡ)

ಡಿಮ್ಯಾಂಡು ಇದ್ದುದರಿಂದ ಹೊರದೇಶದಿಂದ ಬೇಕಾದಷ್ಟು ಆಮದು ಮಾಡಿದರೂ ರಾಜ್ಯ ಸರ್ಕಾರದವರು ವ್ಯವಸಾಯ ಇಲಾಖೆಯ ಮುಖಾಂತರವೇ ಸ್ಟಾಕ್ ಮಾಡಿದರು. ಹೋದವರ್ಷದಿಂದೀಚೆಗೆ ವರ್ಷಕ್ಕೆ 1½ ಲಕ್ಷ ಟನ್ ಖರ್ಚಾಗುತ್ತಾ ಇದೆ. ಈ ಆಧಾರದ ಮೇಲೆ ಲೆಕ್ಕ ತೆಗೆದುಕೊಂಡರೆ 2½ ಲಕ್ಷ ಟನ್‌ಗಿಂತ ಜಾಸ್ತಿ ಖರ್ಚಾಗುವುದಿಲ್ಲ. ಇತ್ತೀಚೆಗೆ ಕಾಫಿ ಕಂಪನಿಯವರು ಮನೆ ಬಾಗಿಲಿಗೆ ಬಂದು ಕಡಿಮೆ ದರದಲ್ಲಿ ಕೊಡುತ್ತಾ ಇದ್ದಾರೆ. ಅವರು ಕೊಡುತ್ತಾ ಇದ್ದಾರೆ ನಿಮ್ಮ ಕೈಯ್ಯಲ್ಲಿ ಏತಕ್ಕೆ ಆಗುವುದಿಲ್ಲ ಎಂದು ಶ್ರೀಮಾನ್ ಸಿದ್ಧವೀರಪ್ಪನವರು ಹೇಳಿದರು. ಕಂಪನಿಗಳಲ್ಲೂ ಸ್ಟಾಕ್ ಉಳಿದಿದೆ. ಖಾಸಗಿಯವರಿಗಿಂತ ರೇಟು ಜಾಸ್ತಿ ಅನ್ನುವುದನ್ನು ನಾನು ಡಿಸ್ಪ್ಯೂಟ್ ಮಾಡುವುದಿಲ್ಲ. ಗೌರ್ನಮೆಂಟ್ ಅಂಡರ್‌ಟೇಕಿಂಗ್ಸ್‌ನವರು ಖಾಸಗಿಯವರೊಂದಿಗೆ ಪೈಪೋಟಿ ನಡೆಸುವುದು ಕಷ್ಟ. ಪ್ರೈವೇಟ್‌ನವರು ಮಾರ್ಜಿನ್‌ಕೂಡ ಬಿಟ್ಟು ಮಾರಬಹುದು. ನಾವು ಆರೀತಿ ಮಾಡುವುದಕ್ಕಾಗುವುದಿಲ್ಲ. ಈ ರೀತಿ ಖಾಸಗಿಯವರ ಪೈಪೋಟಿಯಿಂದ ಸಹಕಾರಿ ಸಂಘಕ್ಕೆ ನಷ್ಟವಾಯಿತು ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಇದಾದ 2 ವರ್ಷದಲ್ಲಿ ರಾಜ್ಯ ಸರ್ಕಾರದವರೇ ಗೊಬ್ಬರವನ್ನು ಕೊಂಡು ಇಡುತ್ತಾ ಇದ್ದರು. ಸ್ಟೇಟ್ ಮಾರ್ಕೆಟಿಂಗ್‌ನವರು ಕನ್‌ಸ್ಟೈನ್‌ಮೆಂಟ್ ಬೇಸಿಸ್‌ಮೇಲೆ ಕೊಡುತ್ತಾ ಇದ್ದರು. 1960 ನೇ ಇಸವಿ ಸೆಪ್ಟೆಂಬರ್‌ನಲ್ ಕ್ಯಾಷ್ ಅಂಡ್ ಕ್ಯಾರಿ ಬೇಸಿಸ್‌ಮೇಲೆ ಕೊಡಬೇಕೆಂದು ತೀರ್ಮಾನವಾಯಿತು. ಇದಾದ ಮೇಲೆ ಪೂರ್ಣ ಜವಾಬ್ದಾರಿ ಮೈಸೂರು ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗೆ ಬಂತು, ಅದರ ಮೇಲೆ ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ಮೊದಲ 2 ವರ್ಷದ ಲಾಭಾಂಶ ಈ ರೀತಿ ಇದೆ 1966-67 ರಲ್ಲಿ ಆಗಿರುವ ಲಾಭ 18,43,371-52 ರೂಪಾಯಿಗಳು, ಡಿವಿಡೆಂಡ್ 5 ಪರ್ಸೆಂಟು ಬಂದಿದೆ. 1967-68 ರಲ್ಲಿ ಆಗಿರುವ ಲಾಭ 2,47,974-20 ರೂಪಾಯಿಗಳು, ಡಿವಿಡೆಂಡ್ 4 ಪರ್ಸೆಂಟು ಬಂದಿದೆ. ಇನ್ನು 1968-69 ರಲ್ಲಿ ಬ್ಯಾಲೆನ್ಸ್ ಷೀಟ್ ಪ್ರಕಾರ 12 ಲಕ್ಷ 59 ಸಾವಿರ ರೂಪಾಯಿಯಷ್ಟು ಹಾನಿಯಾಗಿದೆ. ಈ ರೀತಿ ಲುಕ್ಸಾನು ಆಗುವುದಕ್ಕೆ ಕಾರಣ ಏನೆಂದು ಶ್ರೀ ಸಿದ್ಧವೀರಪ್ಪನವರು ಕೇಳಿದರು. ಕಾರಣ ಏನೆಂದರೆ 2½ ಲಕ್ಷ ಟನ್ನಿನಷ್ಟು ಗೊಬ್ಬರ ದಾಸ್ತಾನು ಇದ್ದಿತು. ಇದಕ್ಕೆ ರಾಜ್ಯದ ಎಲ್ಲಾ ಕಡೆಗಳಲ್ಲೂ ವೇರ್‌ಹೌಸಿಂಗ್ ಛಾರ್ಜಸ್ ಕೊಡಬೇಕು, ಬ್ಯಾಂಕಿಗೆ ಇಂಟರೆಸ್ಟ್ ಕೊಡಬೇಕು, ವಾಚ್ ಅಂಡ್ ವಾರ್ಡ್‌ಗೆ ಕೊಡಬೇಕು, ಇನ್‌ಷೂರೆನ್ಸ್ ಕಟ್ಟಬೇಕು. ಇಷ್ಟೆಲ್ಲಾ ಇರುವುದರಿಂದ ಲುಕ್ಸಾನು ಆಗಿದೆಯೇ ಹೊರತು ಬೇರೆ ಯಾವ ಕಾರಣವೂ ಇಲ್ಲ ಎಂದು ನಾನು ಮಾನ್ಯ ಸಿದ್ಧವೀರಪ್ಪನವರಿಗೆ ಹೇಳಬಯಸುತ್ತೇನೆ.

ಶ್ರೀ ಹೆಚ್. ಸಿದ್ಧವೀರಪ್ಪ.—ಈ ರೀತಿ ಲುಕ್ಸಾನು ಆಗುವುದಾದರೆ ಅದನ್ನು ಧರ್ಮವಾಗಿ ಕೊಟ್ಟುಬಿಡಿ. ಇಲ್ಲದಿದ್ದರೆ 50 ಪರ್ಸೆಂಟು ಕಡಿಮೆ ಮಾಡಿ ಕೊಟ್ಟುಬಿಡಿ.

ಶ್ರೀ ಬಿ. ಎಲ್. ಗೌಡ.—ನಮ್ಮ ಸ್ನೇಹಿತರು ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ಶ್ರೀಮಾನ್ ಸಿದ್ಧವೀರಪ್ಪನವರು ಮುಖ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಹೀಗಾದರೆ ನಿಮ್ಮ ಬಂಡವಾಳವೇ ಕೊಚ್ಚಿ ಹೋಗುತ್ತದೆ. ಅವರ ಸಲಹೆ ಒಳ್ಳೆಯದು ಎಂದು ನಾನು ಪುಷ್ಟೀಕರಿಸುತ್ತೇನೆ.

ಶ್ರೀ ಬಿ. ಎಲ್. ಗೌಡ.—ಇನ್ನು ಷೇರ್ ಕ್ಯಾಪಿಟಲ್ ಬಗ್ಗೆ ಶ್ರೀಮಾನ್ ಕೆ. ಹೆಚ್. ಪಾಟೀಲರು ಹೇಳಿದ ಹಾಗೆ ಇದಕ್ಕೆ ಬಂಡವಾಳ 1 ಕೋಟಿ 2 ಲಕ್ಷ ರೂಪಾಯಿಗಳನ್ನು ರಾಜ್ಯ ಸರ್ಕಾರದವರು ಹಾಕಿದ್ದಾರೆ. ಎನ್. ಸಿ. ಡಿ. ಸಿ. ಯವರು 7 ಲಕ್ಷ 72 ಸಾವಿರ ರೂಪಾಯಿ ಕೊಟ್ಟಿದ್ದಾರೆ. ಮೊದಲು ರಾಜ್ಯ ಸರ್ಕಾರದವರು ಇದಕ್ಕೆ ಬಂಡವಾಳ ಹಾಕಿ ಈ ಮಾರ್ಕೆಟಿಂಗ್ ಸೊಸೈಟಿಗೆ ಕನ್‌ಸ್ಟೈನ್‌ಮೆಂಟ್ ಬೇಸಿಸ್‌ಮೇಲೆ ಕೊಟ್ಟರು.

8-00 P. M.

ಈಗ ರಿಜರ್ವ್ ಬ್ಯಾಂಕಿನಿಂದ ಬೇರೆಬೇರೆ ಕಮರ್ಷಿಯಲ್ ಬ್ಯಾಂಕುಗಳಿಂದ ಹಣವನ್ನು ಸಾಲ ಪಡೆಯಬೇಕಾದರೆ ಆ ಸಂಸ್ಥೆಗಳಿಗೆ ಬಾರೋಯಿಂಗ್ ಕ್ಯಪಾಸಿಟಿ ಇರಬೇಕು.

ಶ್ರೀ ಕೆ. ಎಚ್. ಪಾಟೀಲ್.—ನಾವು ಒಂದು ಲಕ್ಷ ರೂಪಾಯಿ ಬಂಡವಾಳ ಅವರಿಗೆ ಕೊಡಬೇಕಾದರೆ, ನಿಮಗೂ ಒಂದು ಲಕ್ಷ ರೂಪಾಯಿ ಬಂಡವಾಳ ಇರಬೇಕು. ಅನುಕೂಲ ಇದ್ದವರಿಗೆ

ಒಂದು ಕೋಟಿ ಕೊಟ್ಟಿದ್ದೀರಿ What is proportion in which you are contributing ?

ಶ್ರೀ ಬಿ. ಎಲ್. ಗೌಡ.—ವಿಶೇಷವಾದಂಥ ಸಂದರ್ಭದಲ್ಲಿ ರಾಜ್ಯದ ಮಾರಾಟ ಸಹಕಾರ ಸಂಘಗಳಿಗೆ ಬಾರೋಯಿಂಗ್ ಕ್ಯಾಪಾಸಿಟಿ ಬರಲಿಯೆಂದು ಒಂದು ಕೋಟಿ ಎರಡು ಲಕ್ಷ ರೂಪಾಯಿಗಳಷ್ಟು ಬಂಡವಾಳ ಗೊಬ್ಬರಕ್ಕಾಗಿ ಒದಗಿಸಬೇಕಾಗಿ ಬಂತು. ಅಷ್ಟು ಹಣವನ್ನು ರಾಜ್ಯಸರ್ಕಾರದವರು ಕೊಟ್ಟಿದ್ದಾರೆ. ಎನ್.ಸಿ.ಡಿ.ಸಿ.ಯವರಿಂದ 7 ಲಕ್ಷ 72 ಸಾವಿರ ರೂಪಾಯಿಗಳು ಬಂದಿದೆ.

ಇನ್ನು ಡೆವಿಡೆಂಡನ್ನು 1966–67ನೇ ಮತ್ತು 1967–68ನೇ ಸಾಲಿಗೆ ಸೇಕಡ 5 ಮತ್ತು ಸೇಕಡ 4 ರಂತೆ ಕ್ರಮವಾಗಿ ಹಂಚಿದ್ದೇವೆ.

ಇನ್ನು ಆಡಿಟ್ ರಿಪೋರ್ಟ್ ಬಗ್ಗೆ ಹೇಳುವುದಾದರೆ, ಟೆಂಟೆಟಿವ್ ಆಡಿಟ್ ವರದಿ ಪ್ರಕಾರ ಸೇಕಡ 12ರಷ್ಟು ಲುಕ್ಸಾನು ಆಗಿದೆ, ಅದಕ್ಕೆ ಕಾರಣವೇನೆಂದು ಕೇಳಿದ್ದಾರೆ. ಯಾರೋ ಮಂತ್ರಿಗಳ ಪ್ರಭಾವಕ್ಕೊಳಗಾಗಿ ಗೊಬ್ಬರವನ್ನು ಕೊಂಡುಕೊಂಡಿದ್ದಾರೆಂದು ಹೇಳಿದರು. ಇದಕ್ಕೆ ಉತ್ತರವನ್ನು ನಾನು ಮೊದಲೇ ತಿಳಿಸಿದ್ದೇನೆ ಇದರಲ್ಲಿರತಕ್ಕದ್ದು ಬಹುಭಾಗ ಇಂಪೋರ್ಟೆಡ್ ಫರ್ಟಿಲೈಜರ್ ಆದ್ದರಿಂದ ಯಾರೂ ಯಾರ ಪ್ರಭಾವಕ್ಕೂ ಒಳಗಾಗಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಇದಕ್ಕೆ ಯಾರಾದರೂ ಟೆಂಡರ್ ಹಾಕಿದರೋ ? ಅಥವಾ ಇದಕ್ಕೆ ಯಾವ ರೀತಿ ಟೆಂಡರ್ ಕರೆದಿದ್ದೀರಿ ?

ಶ್ರೀ ಬಿ. ಎಲ್ ಗೌಡ.—ಈ ವ್ಯಾಪಾರ ಮಾಡಬೇಕಾದರೆ, ಏನೇನು ಕಂಡೀಷನ್ಸ್, ಹಾಕಬೇಕಾಗಿತ್ತೋ ಅವನ್ನು ಹಾಕಿದ್ದೇವೆ. What a prudent man can observe the conditions, we have observed.

ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರು ಗೊಬ್ಬರಕ್ಕೆ ಸಂಬಂಧಪಟ್ಟ ಕೆಲವಾರು ಪ್ರಶ್ನೆಗಳನ್ನು ಕೇಳಿದರು. ಅದಕ್ಕೆಲ್ಲಾ ನನ್ನಲ್ಲಿ ಉತ್ತರವಿಲ್ಲ.

ರಾಜ್ಯಸರ್ಕಾರದವರು ತಮ್ಮ ಫಾಲೊಯರ್ಸ್ ಯಾರು ಇದ್ದಾರೆಯೋ ಅವರಿಗೆ ಉತ್ತೇಜನ ಕೊಡುವುದಕ್ಕೋಸ್ಕರ ಬಂಡವಾಳ ಕೊಟ್ಟಿದ್ದಾರೆಂದು ಹೇಳಿದರು. ಇದು ಸತ್ಯಕ್ಕೆ ಬಹಳ ದೂರವಾದ ಮಾತು. ಇದು ಎಲೆಕ್ಟೆಡ್ ಬಾಡಿ ಎಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು,

ಶ್ರೀ ಕೆ. ಎಚ್. ಪಾಟೀಲ್.—ಯಾವುದೇ ಒಂದು ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರಿಗೂ ನನಗೂ ಸಂಬಂಧವಿದೆಯೆಂದು ಇವರು ಹೇಗೆ ಹೇಳುತ್ತಾರೆ ?

ಶ್ರೀ ಬಿ. ಎಲ್. ಗೌಡ.—ಅವರು ಆಫೀಸರ್ಸ್ ಆಗಿರುತ್ತಾರೆ. ಮಾನ್ಯ ಸದಸ್ಯರು ಅವರನು ನಮ್ಮ ಫಾಲೋಯರ್ಸ್ ಎಂದು ಹೇಳುತ್ತಾರೆ. ಹಾಗಾದರೆ ನಾಳೆ ನೀವು ಅಧಿಕಾರಕ್ಕೆ ಬಂದರೆ ನೀವೂ ಅವರನ್ನು ಚಾಲೆಂಜ್ ಮಾಡುತ್ತೀರಾ ? ಅದು ಕಷ್ಟ.

ಇನ್ನು ಮಾನ್ಯ ಶ್ರೀ ಗೋಪಾಲಗೌಡರು ಯಾರೋ ಒಬ್ಬರ ಪ್ರೇರೇಪಣೆಯಿಂದ ಹೀಗೆ ಮಾಡಿದ್ದಾರೆಂದು ಹೇಳಿದ್ದಾರೆ. ವ್ಯವಸಾಯ ಇಲಾಖೆಯವರು ಇವರ ಸಲಹೆ ಮೂಲಕ ಸಾಲ ಕೊಟ್ಟಿದ್ದಾರೆ, ಅದರಿಂದ ಹೇಗೆ ಲಾಭ ಬರುತ್ತದೆಂದು ಹೇಳಿದರು. ಅದಕ್ಕೆ ಉತ್ತರವನ್ನು ನಾನು ಮೊದಲೇ ಹೇಳಿದ್ದೇನೆ. ಮಾನ್ಯ ಸದಸ್ಯರಲ್ಲಿ ಕೆಲವರು ಹೇಳಿದ ಹಾಗೆ ಪ್ರತಿಯೊಂದಕ್ಕೂ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕಾಗಿಲ್ಲ. ಆಡಿಟರುಗಳಿಂದ, ಅಕೌಂಟೆಂಟ್ ಜನರಲ್ ಅವರಿಂದ, ಅವರ ಇಲಾಖೆಗಳಿಂದ ಲೆಕ್ಕಗಳು ಆಡಿಟ್ ಆಗುತ್ತವೆ. ಅದರಲ್ಲಿ ಒಂದುವೇಳೆ ನ್ಯೂನತೆಗಳಿದ್ದರೆ, ಖಂಡಿತವಾಗಿ ಯಾವ ಸೊಸೈಟಿಯೇ ಆಗಲೀ, ಅಧಿಕಾರವರ್ಗವಾಗಲೀ, ಯಾರೇ ಆಗಲಿ, ನಮ್ಮ ಪಕ್ಷದವರೇ ಆಗಿರಲಿ, ಅಂತಹವರ ಮೇಲೆ ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅನೇಕ ಸಹಕಾರ ಸಂಘಗಳಲ್ಲಿ ನಮ್ಮ ಪಕ್ಷದವರಿದ್ದರೂ ಅವನ್ನು ಈಗ ಸೂಪರ್‌ಸೀಡ್ ಮಾಡಿದ್ದೇವೆ. ವಿರೋಧಪಕ್ಷದ ನಾಯಕರು ಮಾತನಾಡುವಾಗ ಫರ್ಟಿಲೈಜರ್ಸ್‌ನಲ್ಲಿ ಮನಾಪಲಿ ಆಗಿದೆಯೆಂದು ಹೇಳಿದರು. ನಾವು ಇಲ್ಲಿ ನ್ಯಾಯವಾಗಿ ರೈತರಿಗೆ ಅವನ್ನು ಪೈಪೋಟಿಇಲ್ಲದಂತ ಕೊಡುತ್ತಾ ಇದ್ದೇವೆ. ಪಂಜಾಬಿನಲ್ಲಿರುವ ವಿಷಯ ಹೇಳುವುದಾದರೆ ಅಲ್ಲಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗೆ ಮನಾಪಲಿ ಇದೆ. ಅಲ್ಲಿ ಅವರು ಪೈಪೋಟಿಯನ್ನು ಈಗ ಬಿಟ್ಟಿದ್ದಾರೆ. ಆದರೂ ನ್ಯಾಯ ದೊರಕಿಲ್ಲ. ಇಲ್ಲಿ ಇರುವ ಫರ್ಟಿಲೈಜರ್ಸ್ ಕ್ವಾಲಿಟಿ ಏನೂ ಡಿಟರಿಯರೇಟ್ ಆಗಿಲ್ಲ. ಮೊದಲಿದ್ದಂತೆಯೇ ಅದರ ಕ್ವಾಲಿಟಿ ಇದೆಯೆಂದು ಹೇಳುತ್ತೇನೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈಗ ಅದನ್ನು ಪರೀಕ್ಷೆ ಮಾಡಿಸಿದ್ದೀರಾ ?

ಶ್ರೀ ಬಿ.ಎಲ್. ಗೌಡ.—ಅದನ್ನು ಪರೀಕ್ಷೆ ಮಾಡಿಸಿದ ಮೇಲೆಯೇ ನಾನು ಹೇಳುತ್ತಾ ಇರುವುದು. ಒಬ್ಬ ಸದಸ್ಯರು ಪ್ರತಿಯೊಂದು ಕ್ವಿಂಟಾಲನಿಂದ ಹಣವನ್ನು ಷೇರ್ ಕ್ಯಾಪಿಟಲ್‌ಗೋಸ್ಕರ ಪಡೆದಿದ್ದಾರೆಂದು ಹೇಳಿದ್ದಾರೆ. ಸರ್ಕಾರದ ನೀತಿ ಆ ರೀತಿಯಾಗಿಲ್ಲವೆಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ದಯವಿಟ್ಟು ಅದನ್ನು ವೆರಿಫೈಮಾಡಿ ಮುಂದಿನ ಸಾರಿ ಹೇಳಲಿ. ಅದು ಅವರಿಗೇ ಚೆನ್ನಾಗಿ ಗೊತ್ತಿದೆ.

ಶ್ರೀ ಎಸ್. ಗೋಪಾಲಗೌಡ.—ಇನ್ನೊಂದು ಸಾರಿ ವಿಚಾರಣೆ ಮಾಡಿ ಅದರ ಬಗ್ಗೆ ತಿಳಿಸುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಆಗಲಿ. ಒಟ್ಟಿನಲ್ಲಿ ಗೊಬ್ಬರ ವ್ಯಾಪಾರದಲ್ಲಿ ಇಲ್ಲಿ ಯಾವ ವಿಧವಾದ ಅನ್ಯಾಯವೇನೂ ನಡೆದಿಲ್ಲ. ರೈತರಿಗೆ ಉಪಕಾರವಮಾಡುವ ಉದ್ದೇಶದಿಂದ ಮತ್ತು ಹೆಚ್ಚುಹೆಚ್ಚಿಗೆ ಆಹಾರವನ್ನು ಬೆಳೆಯುವ ಉದ್ದೇಶದಿಂದ ಎಲ್ಲಿ ಫರ್ಟಿಲೈಜರುಗಳ ಸ್ಕೇರ್ಸಿಟಿ ಇರುತ್ತದೋ ಅಲ್ಲಿ ಅದನ್ನು ಸ್ಟಾಕ್ ಮಾಡಿದ್ದೇವೆ. ಇದನ್ನು ಸರಿಯಾಗಿ ದೇಶದಲ್ಲಿ ವಿರೇವಾರಿ ಮಾಡುವುದಕ್ಕೋಸ್ಕರ ಇವುಗಳ ಬೆಲೆಯನ್ನು ಕಡಿಮೆಮಾಡಿದ್ದೇವೆ. ಇನ್ನು ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ವಿತರಣೆಗೋಸ್ಕರ ಸರಿಯಾದಂಥ ಏರ್ಪಾಡುಗಳನ್ನು ಮಾಡಿದ್ದೇವೆ. ಒಟ್ಟಿನಲ್ಲಿ ಈ ಸಹಕಾರ ಸಂಘಗಳು ಇನ್ನು ಮುಂದೆ ನ್ಯಾಯವಾಗಿ ನಡೆದುಕೊಳ್ಳುವ ಹಾಗೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಅವರ ದೂರದೃಷ್ಟಿ ಹೇಗಿದೆಯೆಂದರೆ, ಈಗ ಕ್ಷಾಮ ಡಾಮರಗಳು ಪ್ರತಿವರ್ಷವೂ ಬರುವುದರಿಂದ ಆಹಾರಧಾನ್ಯಗಳು ಹೆಚ್ಚಿಗೆ ಸಿಗದೇ ಹೋಗುವಾಗ ಮುಂದೆ ಜನರು ರಾಸಾಯನಿಕ ಗೊಬ್ಬರವನ್ನಾದರೂ ತಿಂದು ಬದುಕಲಿ ಎಂದು ಈ ರೀತಿ ಅವರು ಹೇಳಿದ್ದಾರೆಂದು ನನಗೆ ಭಾಸವಾಗುತ್ತದೆ.

Mr. DEPUTY SPEAKER.—The House will now adjourn and meet tomorrow at 8-30 A. M.

The House adjourned at Ten Minutes past Eight of the Clock to meet again at Thirty Minutes past Eight of the Clock on Saturday, the 31st January 1970.

4877

DW 14641—GPB—520—21-7-1970

ಮೈಸೂರು ವಿಧಾನಸಭೆಯ ನಡೆವಳಿಕೆಗಳು
MYSORE LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ನಾಲ್ಕನೆಯ ವಿಧಾನಸಭೆಯ ಏಳನೆಯ ಅಧಿವೇಶನ
SEVENTH SESSION OF THE FOURTH LEGISLATIVE ASSEMBLY

೩೧ನೇ ಶನಿವಾರ, ಜನವರಿ ೧೯೭೦ [ಮಾಘ ೧೧, ೧೮೯೧ (ಶಕ)]

SATURDAY, 31st JANUARY 1970 [Magha 11, 1891 (Saka)]

ಸಂಪುಟ ೨೩—ಕ್ರಮಾಂಕ ೨

Vol. XXIII—No. 2

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ
Price : 25 Paise

CONTENTS

PAGES

1 (i) Starred Questions and Answers ... 97—124

(ii) Short Notice Question and Answer ... 124—128

(ii) Questions for Answers on the day (but not taken up) 128

2 Speaker's Ruling on the notice of a motion under Rule 146 *re*: the reported Statement of the Chief Minister on the Cauvery Waters ... 129—130

3 Speaker's Ruling *re*: A notice of adjournment motion about the arrest and detention of Sri Vatal Nagaraj in Tamil Nad ... 130—132

4 Utilisation of the Non-official Business Day for other Motion ... 132—133

5 Private Members' Bills –

(i) Mysore Co-operative Societies (Amendment) Bill, 1970—(Introduced) ... 133

(ii) Mysore Village Panchayats and Local Boards (Amendment) Bill, 1970—(Introduced) ... 134

(iii) Mysore Irrigation (Amendment) Bill, 1970 - (Introduced) ... 134

(iv) Mysore Public Men Inquires Bill, 1969—(Motion to Consider) —(Ruling Reserved) ... 134—158

(v) Mysore University (Amendment) Bill, 1969—(Motion to Consider)—(Debate not concluded) ... 158—164

ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Saturday, 31st January 1970.

The House met in the Assembly Chamber, Vidhana Soudha, Bangalore, at Thirty-five Minutes past Eight of the Clock.

MR. SPEAKER (SRI S. D. KOTHAVALE) in the Chair.

Sri B. B. SAYANAK.—Sir, we have begun late by five minutes. You may be pleased to extend the Question Hour by five minutes.

Mr. SPEAKER.—There was no quorum at 8-30 A.M. and that was why there was delay in the commencement of the meeting.

STARRED QUESTIONS

(to which oral answers were given)

Appointment of Selling Agents to sell Cast Iron Pipes manufactured by M.I.S.L.

23. **Sri H. SIDDAVEERAPPA** (Harihar).—

Will the Minister for Industries, Information and Publicity be pleased to state :—

(*a*) whether they have called for any applications for appointment as selling agents to sell cast iron pipes manufactured in Mysore Iron and Steel Limited, Bhadravathi ;

(*b*) whether it is a fact that an application is received and is under the consideration of the management for giving a wholesale agency to sell all the cast iron pipes manufactured in Mysore Iron and Steel Limited and all consumers—whether Government—Municipal Corporations and Private consumers, have to pay commission to the applicant which is under consideration ;

(SRI H. SIDDAVEERAPPA)

(*c*) if so, who is the applicant whose application is under consideration ;

(*d*) the terms under negotiation ?

Sri M. RAJASEKHARA MURTHY (Minister for Industries, Information and Publicity).—

(*a*) No.

(*b*) No.

(*c*) Dose not arise in view of reply to part (*a*).

(*d*) Dose not arise in view of reply to part (*a*).

Sri H. SIDDAVEERAPPA.—May I know whether cast iron pipes are manufactured at the M.I.S.L. ?

Sri M. RAJASEKHARA MURTHY.—No, Sir.

Sri H. SIDDAVEERAPPA.—Since how long they have stopped the manufacture of that article ?

Sri M. RAJASEKHARA MURTHY.—From June 1968 it is stopped.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ತಯಾರಾಗತಕ್ಕ ವಿಶೇಷ ತರಹದ ಉಕ್ಕನ್ನು ನಮ್ಮ ಮಾರುಕಟ್ಟೆಯಲ್ಲಿ ಮಾರುವುದಕ್ಕೆ ಅವಕಾಶವಿದ್ದರೂ ಸೋಲ್ ಏಜನ್ಸಿ ಅಥವಾ ಏಜನ್ಸಿ ಏಜನ್ಸಿ ಕ್ರಿಯೇಟ್ ಮಾಡುವುದಕ್ಕೆ ಕಾರಣವೇನು ?

Sri M. RAJASEKHARA MURTHY.—There is no such proposal to create sole agency. We have not been manufacturing this item.

ಶ್ರೀ ಎಂ. ಮುನಿಸ್ವಾಮಯ್ಯ.—ಇಲ್ಲಿ ತಯಾರಾದ ವಸ್ತುಗಳನ್ನು ಮಾರುತ್ತೇವೆ ಅದಕ್ಕೆ ಕೊಡಿ ಎಂದು ಯಾರಾದರೂ ಅರ್ಜಿ ಕೊಟ್ಟಿದ್ದಾರೆಯೇ ?

Sri M. RAJASEKHARA MURTHY.—No.

Collection of Water Rate

77. **Sri H. N. NANJE GOWDA** (Arkalgud).—

Will the Minister for Revenue be pleased to state :—

(*a*) the total year-war demand of assessment of "Water Rate" in the State (Districtwar details from the year 1958 up to the end of 1968 may be furnished) ;

(SRI H. V. KOUJALGI)

STATEMENT

	57-58	58-59	59-60	60-61	61-62
Hassan ...	5,596	8,014	5,641	11,084	8,905
Bellary ...	1,23,857	1,63,688	3,03,896	4,31,869	5,53,75
Coorg ...	...	...	...	...	...
North Kanara	...	...	...	...	...
Bidar ...	...	...	...	...	...
Raichur ...	...	...	...	...	...
Gulbarga ...		...	...	...	...
Bijapur ...	15,181	13,100	40,567	76,792	1,31,350
Dharwar ...	3,725	5,024	10,149	21,356	26,205
Belgaum ...	6,28,670	6,33,264	8,56,227	7,86,421	7,56,366
Chickmagalur	1,491	2,310	5,115	1,516	1,725
Chitradurga...	...	...	...	...	...
South Kanara	...	...	...	...	...
Tumkur ...	...	...	...	...	...
Kolar ...	...	...	...	...	...
Mysore ...	...	2,44,125	2,04,376	1,90,179	1,03,132
Mandya ...	24,14,884	19,31,645	24,86,894	20,32,928	26,05,329
Bangalore ...	...	20,878	31,700	43,410	69,529
Shimoga		not received			

I

62–63	63–64	64–65	65–66	66–67	67–68
12,441	13,131	11,681	4,68,628	5,47,413	6,15,232
7,69,266	10,85,900	8,48,286	14,36,847	19,95,968	21,90,625
...	...	...	50,737	34,169	32,600
...	...	...	...	...	1,78,790
...	...	...	39,161	18,239	27,005
...	...	...	30,86,808	16,82,799	16,34,560
...	...	...	1,10,271	3,24,404	2,87,702
2,55,166	3,81,217	3,90,127	2,06,775	2,68,486	2,98,654
15,199	23,648	8,193	6,27,501	6,50,712	3,72,975
8,83,764	10,94,654	11,72,477	12,14,934	13,24,347	12,41,716
5,044	7,567	1,35,174	2,26,842	2,22,639	1,97,146
...	...	...	8,90,140	12,38,065	9,80,203
...	...	...	3,37,942	3,40,033	3,44,093
...	...	...	2,70,505	3,21,853	6,19,730
...	...	29,979	3,39,685	4,91,446	5,98,280
1,81,055	2,13,525	2,25,760	5,24,458	5,72,107	10,23,223
21,71,825	26,11,224	24,45,964	21,67,114	25,96,401	26,76,291
80,835	66,678	78,672	4,02,475	13,86,705	20,94,484

V-31st N70

N70-23-1

Ⓑ 4877-

(SRI H. V. KOUJALGI)

STATEMENT

	57–58	58-59	59–60	60–61	61–62
Hassan ...	5,522	8,176	5,394	9,357	8,902
Bellary ...	36,913	80,361	1,62,909	1,32,878	1,53,264
Coorg ...	...	...	...	...	...
North Kanara	...	...	...	...	...
Bidar ...	...	...	...	...	...
Raichur ...	...	...	...	...	...
Gulbarga ...	...	...	...	...	...
Bijapur ...	15,055	13,100	34,827	71,820	1,24,424
Dharwar ...	2,919	4,180	2,321	6,021	15,374
Belgaum ...	2,42,244	2,45,649	3,04,038	3,59,131	2,79,595
Chickmagalur	2,0[illegible]4	2,093	4,898	1,147	1,375
Chitradurga...	...	...	...	...	...
South Kanara	...	...	...	...	...
Kolar ...	...	...	...	...	...
Mysore ...	Incomplete information				
Mandya ...	Total amount collected to end of 1968 is Rs. 2,54,27,452				
Bangalore ...	...	16,758	24,342	11,534	30,793
Shimoga ...	Information not received		...	...	...

II

62–63	63–64	64–65	65–66	66–67	67–68
12,085	6,581	14,812	35,617	17,141	13,436
3,29,008	4,49,945	2,79,083	5,85,836	5,11,400	11,11,852
...	...	...	1,087	138	900
...	...	...	...	...	333
...	...	...	...	14,742	14,838
...	...	...	7,79,656	8,17,126	3,81,388
...	...	...	5,799	36,706	1,87,334
1,01,087	2,36,252	2,84,536	1,36,122	82,098	8,921
21,078	15,025	23,428	76,292	67,158	36,450
4,05,295	4,13,510	7,94,614	6,74,244	7,32,418	3,45,775
2,160	5,975	47,894	6,163	26,419	18,820
...	...	...	32,298	24,960	34,017
...	...	...	1,435	1,419	1,496
...	...	...	...	...	...
...	...	...	...	...	...
...	...	...	...	...	...
44,427	32,546	54,114	60,377	6,748	12,425
...	...	...	...	...	...

(SRI H. V. KOUJALGI)

STATE

District	1957-58	1958-59	1959-60	1960-61	1961-62
1	2	3	4	5	6
Hassan ...	74	...	247	1,727	3
Bellary ...	86,944	83,327	1,40,987	2,98,991	4,00,487
Coorg ...	...	...	...	...	...
North Kanara	...	...	...	...	...
Bidar ...	...	...	...	...	...
Raichur ...	...	...	...	...	...
Gulbarga ...	...	...	...	...	...
Bijapur ...	126	...	5,740	4,972	6,925
Dharwar ...	806	844	7,828	15,335	10,831
Belgaum ...	3,86,426	3,87,615	5,52,189	4,27,290	4,76,771
Chickmagalur	457	217	217	369	350
Chitradurga...	...	...	...	...	...
South Kanara	...	...	...	...	...
Kolar ...	...	...	...	...	...
Mysore ...	Incomplete information.				
Mandya ...	Arrears as on 1-7-68 is Rs. 44,95,100.				
Bangalore ...	...	4,120	7,357	31,875	35,135
Shimoga ...	Information not received.				

MENT—III

1962–63	1963·64	1964–65	1965–66	1966–67	1967–68
7	8	9	10	11	12
356	6,550	...	4,33,011	5,30,265	6,01,796
4,40,258	6,35,955	5,69,203	8,51,011	14,84,568	10,78,773
...	...	...	49,650	34,031	31,700
...	...	...	...	...	1,78,407
...	...	...	39,161	42,658	54,825
...	...	...	23,07,152	8,65,673	12,43,172
...	...	...	1,04,472	2,87,702	1,00,368
1,54,079	1,44,964	35,591	70,653	1,86,388	2,08,833
Over colln.	8,623	Over colln.	5,51,209	5,83,554	3,36,525
4,78,469	6,81,144	3,77,863	5,40,690	5,91,929	8,94,941
2,884	1,592	87,280	2,20,679	1,96,220	1,78,326
...	...	...	8,57,842	12,13,105	9,46,186
...	...	3,36,507	3,38,613	3,42,597	1,14,221
...	...	29,979	3,39,685	4,91,446	5,98,280
36,408	34,131	24,557	3,42,097	13,79,957	20,82,059

Sri H. V. KOUJALGI.—There is one correction to the replies already given in the statements furnished, figures regarding Tumkur district have not been supplied. I think it is an error. I will supply figures subsequently.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಾಗಿದ್ದರೆ ಇದರ ಮೇಲೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇಲ್ಲ, ತುಮಕೂರು ಜಿಲ್ಲೆಯ ಪೂರಾ ಅಂಕಿಅಂಶ ಇಲ್ಲ, ಆದ್ದರಿಂದ ಸೋಮವಾರ ಇದನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು.

Mr. SPEAKER.—This question No. 77 is held over. Sri C. M. S. Sastry is permitted to put question No. 115.

Improvement made by the Department of Information and Tourism

115. **Sri C. M. S. SASTRY** (Chickmanglur) [On behalf of SRI B. P. GANGADHAR (Tumkur)].—

Will the Minister for Industries, Information and Publicity be pleased to state :—

(*a*) the substantial improvements done by the Department of Information and Tourism during the last 3 years ;

(*b*) the basis for the release of Government advertisements and the list of advertisements released in Dailies and Weeklies from November 1966 onwards up to the end of December 1968 ;

(*c*) when the "Song and Drama Division" in the Information Department will be started and what are, its objects ;

(*d*) the names of documentaries produced by Government so far and the cost of each film ?

Sri M. RAJASEKHARA MURTHY (Minister for Industries, Information and Publicity).—

(*a*) A note is placed on the Table of the House.*

(*b*) Prior to November 1966 there was no media list in the department in respect of casual and commercial advertisement releases.

Action has been taken to prepare a *pro forma* and to collect infrormation from all newspapers in the State and to prepare a Media list depending upon the circulation and content of each newspaper.

Advertisement campaigns have been conducted through important newspapers with a view to invite industrialists to Mysore.

In respect of commercial publicity, special layouts have been prepared and released to the Press to catch the eye of the public to promote the sales of Silks, Soaps and Hassan Implements Factory products.

---

* Copy placed in the Mysore Legislature Library.

A list of newspapers and periodicals for which advertisement grants have been sanctioned for 1966-67, 1967-68 and 1968-69, is placed on the Table of the House.

(*c*) The Song and Drama Unit was started on 14th May 1968. The object of the Unit is to publicise the achievements of the various development schemes of Government through the media of Dance, Drama and Music.

(*d*) The names of documentaries and newsreels produced so far and their cost are as follows :—

	Name of the documentary/Newsreel.	*Cost* Rs.
1	Decade of progress	38,086.00
2	Sharavathi	58,485.00
3	Plan achievements in Gulbarga, Bangalore and Mysore Divisions.	1,20,000.00
4	Confluence	60,000.00
5	Mysore News Reel No. 1	29,153.00
6	Mysore News Reel No. 2	20,000.00
7	Mysore News Reel No. 3	20,000.00
	Total	3,45,724.00

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ವಿವರಗಳನ್ನು ಸಭೆಯ ಮುಂದೆ ಇಡಲಾಗಿರುವ ಪಟ್ಟಿಯಲ್ಲಿ ಒದಗಿಸಲಾಗಿದೆ ಎಂದು ಹೇಳಿದ್ದೀರಿ. ಆ ಪಟ್ಟಿ ಇಲ್ಲಿ ಇಲ್ಲ ಎಂದು ಹೇಳಿದರು. ಕೈಗಾರಿಕಾ ಮತ್ತು ವಾರ್ತಾ ಮಂತ್ರಿಗಳು ಅಡ್ವರ್‌ಟೈಸ್‌ಮೆಂಟ್ ಕೊಡತಕ್ಕ ಒಂದು ಉದ್ದೇಶವನ್ನು ಇಟ್ಟುಕೊಂಡು ಕಾಂಗ್ರೆಸ್‌ನವರು ನಡೆಸತಕ್ಕ ವಸ್ತುಪ್ರದರ್ಶನಕ್ಕೆ ತಾವು ಎಷ್ಟು ಅಡ್ವರ್‌ಟೈಸ್‌ಮೆಂಟ್ ಕೊಟ್ಟಿದ್ದೀರೋ ಹಾಗೆಯೇ ಇತರ ಪೌರಸಭೆಗಳವರು ನಡೆಸತಕ್ಕ ವಸ್ತು ಪ್ರವರ್ಶನಕ್ಕೆ ಉದಾಹರಣೆಗೆ ದಾವಣಗೆರೆಯಲ್ಲಿ ನಡೆಸತಕ್ಕ ವಸ್ತು ಪ್ರದರ್ಶನಕ್ಕೆ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎಂ. ರಾಜಶೇಖರಮೂರ್ತಿ.—ಕಾಂಗ್ರೆಸ್‌ನವರು ನಡೆಸುತ್ತಾರೆ ಅಥವಾ ಬೇರೆ ಪಾರ್ಟಿಯವರು ನಡೆಸುತ್ತಾರೆ ಎಂಬ ಬೇಸಿಸ್ ಮೇಲೆ ಅಡ್ವರ್‌ಟೈಸ್‌ಮೆಂಟ್ ಕೊಡುವುದಿಲ್ಲ. ಆಯಾಯಾ ಪ್ರದೇಶದಲ್ಲಿ ನಡೆಸತಕ್ಕ ಎಕ್ಸಿಬಿಷನ್ ಯಾವ ರೀತಿ ಇರುತ್ತದೆ ಎಂಬುದನ್ನು ನೋಡಿಕೊಂಡು ಕೊಟ್ಟಿದ್ದೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಕಾಂಗ್ರೆಸ್‌ನವರು ನಡೆಸಲಿ, ಪೌರಸಭೆಯವರು ನಡೆಸಲಿ ಅಥವಾ ಇತರೆ ಖಾಸಗಿಯವರು ನಡೆಸಲಿ ತಾವು ಕೊಟ್ಟಿರತಕ್ಕ ಅಡ್ವರ್‌ಟೈಸ್‌ಮೆಂಟ್ ಏನಿದೆಯೋ ಅದರಲ್ಲಿ ಯಾವ ವ್ಯತ್ಯಾಸವನ್ನೂ ಕೂಡ ಮಾಡಿಲ್ಲವೇ? ಒಂದೇ ರೀತಿಯಲ್ಲಿ ಕೊಟ್ಟಿದ್ದೀರಾ?

ಶ್ರೀ ಎಂ. ರಾಜಶೇಖರಮೂರ್ತಿ.—ಎಲ್ಲರಿಗೂ ಒಂದೇ ಸಮನಾಗಿ ಕೊಡುವುದಕ್ಕಾಗುವುದಿಲ್ಲ, ಯಾವುದಾದರೂ ಒಂದು ಹಳ್ಳಿಯಲ್ಲಿ ಎಕ್ಸಿಬಿಷನ್ ಮಾಡಿದರೆ ಅದಕ್ಕೆ ಐದು ಸಾವಿರ ರೂಪಾಯಿ ಕೊಡಿ ಎಂದರೆ ಕೊಡುವುದಕ್ಕಾಗುವುದಿಲ್ಲ. ಬೆಂಗಳೂರು ಸಿಟಿಯಲ್ಲಿ ಮಾಡುವುದನ್ನು ಅದಕ್ಕೆ ಕಂಪೇರ್ ಮಾಡಿಕೊಂಡು ಈಕ್ವಲ್ ಆಗಿ ಕೊಡಬೇಕೆಂದರೆ ಆಗುವುದಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಹೋದ ವರ್ಷ ದಾವಣಗೆರೆಯಲ್ಲಿ ಮುನಿಸಿಪಾಲಿಟಿಯವರು ವಸ್ತುಪ್ರದರ್ಶನವನ್ನು ನಡೆಸಿದರು. ಅವರಿಗೆ ಎಷ್ಟು ಅಡ್ವರ್‌ಟೈಸ್‌ಮೆಂಟ್ ಚಾರ್ಜಸ್ ಕೊಟ್ಟಿದ್ದೀರೋ ಅಷ್ಟೇ ಈ ವರ್ಷ ಕಾಂಗ್ರೆಸ್‌ನವರು ನಡೆಸುತ್ತಾ ಇರತಕ್ಕ ವಸ್ತು ಪ್ರದರ್ಶನಕ್ಕೂ ಕೊಡುತ್ತೀರಾ?

Sri M. RAJASEKHARA MURTHY.---The request is being considered by the Government. We have not yet given advertisement to the Exhibition. ನನಗೆ ಜ್ಞಾಪಕ ಇರುವ ಹಾಗೆ ಹೋದ ವರ್ಷ ದಾವಣಗೆರೆಯಲ್ಲಿ ಮಾಡಿದ್ದಕ್ಕೆ ಒಂದು ಸಾವಿರ ರೂಪಾಯಿ ಕೊಟ್ಟಿರಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ರತಿ ಜಿಲ್ಲೆಯಲ್ಲೂ ಇರತಕ್ಕ ಇನ್‌ಫರ್ಮೇಷನ್ ಆಫೀಸರುಗಳು ಪತ್ರಿಕಾ ಪ್ರತಿನಿಧಿಗಳನ್ನು ಮತ್ತು ಇತರ ಕೆಲವು ಮಹನೀಯರನ್ನು ಕರೆದು ಅವರಿಗೆ ಪ್ರತಿದಿವಸ ಶೋಡಶೋಪಚಾರ ನಡೆಸಿ ಅವರನ್ನು ತೃಪ್ತರನ್ನಾಗಿಟ್ಟುಕೊಂಡಿರಬೇಕೆನ್ನುವುದು ಈಗ ಮಾಡಿರತಕ್ಕ ಇಂಪ್ರೂವ್‌ಮೆಂಟ್‌ನಲ್ಲಿ ಅದೂ ಒಂದು ಅಲ್ಲವೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಶೋಡಶೋಪಚಾರ ಮಾಡಬೇಕೆಂದು ಎಲ್ಲಿ ಹೇಳಿದೆ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಆ ರೀತಿ ವರ್ತಮಾನ ಬಂದಿದೆ. ತಾವು ಮಾಡಿರತಕ್ಕ ಅಭಿವೃದ್ಧಿಯಲ್ಲಿ ಇದೂ ಒಂದಾಗುತ್ತದೆಯೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಬಹುಶಃ ಇದು ಮಾನ್ಯ ಸದಸ್ಯರ ಊಹೆ ಎಂದು ಕಾಣುತ್ತದೆ. ಷೋಡಶೋಪಚಾರ ಪೂಜೆ ಮಾಡುತ್ತಾರೆಯೇ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಹಾಗೆ ಮಾಡುವುದಿಲ್ಲ. ಜಿಲ್ಲೆಗಳಲ್ಲಿರುವ ಅಧಿಕಾರಿಗಳು ಅಲ್ಲಿರುವ ಪತ್ರಿಕಾಕರ್ತರನ್ನು ಮತ್ತು ಇತರ ಮುಖ್ಯಸ್ಥರನ್ನು ಟಚ್‌ನಲ್ಲಿ ಇಟ್ಟುಕೊಂಡಿರಬೇಕು ಎನ್ನುವುದು ಇಲಾಖೆಯ ಮುಖ್ಯ ಕರ್ತವ್ಯಗಳಲ್ಲಿ ಒಂದು.

ಶ್ರೀ ಎಂ. ನಾಗಪ್ಪ.—ಯಾವ ಯಾವ ನ್ಯೂಸ್ ರೀಲ್ಸ್ ತೆಗೆದಿದ್ದಾರೆ ಎನ್ನುವುದನ್ನು ಹೇಳಿದ್ದಾರೆ. ಅದರಲ್ಲಿ ಮೂರನೆ ಯೋಜನೆಯ ಸಾಧನೆಗಳನ್ನು ಒಳಗೊಂಡ ಚಿತ್ರಗಳನ್ನು ತೆಗೆಯಲಾಗಿದೆ. ಇದರಲ್ಲಿ ಬೆಳಗಾಂ ಡಿವಿಜನ್‌ನಲ್ಲಿ ಪ್ಲಾನ್‌ನಲ್ಲಿ ಏನೂ ಆಗಿಲ್ಲ. ಅದಕ್ಕಾಗಿ ಸರ್ಕಾರ ಯಾವ ತರಹ ರೀಲನ್ನೂ ತೆಗೆದಿಲ್ಲ ಎಂದು ಭಾವಿಸಬಹುದೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಈಗ ಅದನ್ನು ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಪ್ಪ.—ಗ್ರಾಮ ಯೂನಿಟ್ಟುಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪನೆ ಮಾಡಿ, ಅವರಿಗೆ ಹೆಚ್ಚು ಅನುಕೂಲಗಳನ್ನು ಕಲ್ಪಿಸಿಕೊಟ್ಟು ಆ ಜನ ಸುಸಂಸ್ಕೃತರಾಗುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ಗ್ರಾಮಾಂತರ ಪ್ರದೇಶವಲ್ಲಿ ಸ್ಥಾಪನೆ ಮಾಡುವುದಕ್ಕಾಗುವುದಿಲ್ಲ. ಸೆಂಟ್ರಲ್ ಯೂನಿಟ್ ಇದೆ. ಈ ಯೂನಿಟ್ ಎಲ್ಲ ಭಾಗಗಳಿಗೂ ಹೋಗುತ್ತದೆ. ಕಾನ್‌ಫರೆನ್ಸ್ ಆಗಲೀ, ಎಗ್ಸಿಬಿಷನ್ ಆಗಲೀ, ಡಿಗ್ನಿಟರೀಸ್ ಬರಲೀ ಅಂಥ ಸಂದರ್ಭಗಳಲ್ಲಿ ಹಳ್ಳಿಗಳಿಗೆ ಹೋಗುತ್ತಾರೆ, ತಾಲ್ಲೂಕು ಹೆಡ್‌ಕ್ವಾರ್ಟರುಗಳಿಗೆ ಹೋಗುತ್ತಾರೆ, ಡಿವಿಜನಲ್ ಹೆಡ್‌ಕ್ವಾರ್ಟರುಗಳಿಗೆ ಹೋಗುತ್ತಾರೆ. ಸಂದರ್ಭ ಬಂದಾಗಲೆಲ್ಲ ನಾಟಕಗಳನ್ನೂ ಏರ್ಪಾಡು ಮಾಡುತ್ತಾರೆ. ಆ ಮುಖಾಂತರ ಸಾಕಾದಷ್ಟು ಕುಟುಂಬ ಯೋಜನೆ, ಸಣ್ಣ ಉಳಿತಾಯ ಇಂಥ ಕೆಲವು ವಿಚಾರಗಳ ಬಗ್ಗೆ ಸಾಕಾದಷ್ಟು ಪ್ರಚಾರ ಮಾಡುತ್ತಾರೆ.

ಶ್ರೀ ಬಿ. ದೊಡ್ಡಬೋರೇ ಗೌಡ.—ಸಂಗೀತ ಮತ್ತು ನಾಟಕ ವಿಭಾಗವನ್ನು ಇನ್ನೂ ಹೆಚ್ಚು ಮಾಡಿ ಅದರಿಂದ ಅವಿದ್ಯಾವಂತರಾಗಿರುವ ಗ್ರಾಮಾಂತರ ಪ್ರದೇಶದ ಜನರನ್ನು ಜಾಗೃತಗೊಳಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

Sri M. RAJASEKHARA MURTHY.—I bear that suggestion in mind.

ಶ್ರೀ ಆರ್. ಮುನಿಸ್ವಾಮಯ್ಯ —ನ್ಯೂಸ್ ರೀಲುಗಳನ್ನು ಎಲ್ಲೆಲ್ಲಿ ಪ್ರದರ್ಶನ ಮಾಡುವುದಕ್ಕೆ ಏರ್ಪಾಡು ಮಾಡಿದ್ದೀರಿ ?

ಶ್ರೀ ಎಂ. ರಾಜಶೇಖರಮೂರ್ತಿ.—ರಾಜ್ಯದ ಎಲ್ಲ ಭಾಗಗಳಲ್ಲಿಯೂ ಪ್ರದರ್ಶಿಸುವುದಕ್ಕೆ ಏರ್ಪಾಡು ಮಾಡಲಾಗಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಪ್ರದರ್ಶನ ಮಾಡುವುದಕ್ಕೆ ತಮ್ಮಿಂದ ಏನಾದರೂ ರುಸುಂ ಕೊಡಲಾಗುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ.—ನಮ್ಮಲ್ಲಿ ಪ್ರೊಜೆಕ್ಟರುಗಳಿವೆ. ಅವುಗಳನ್ನು ಡಿಸ್ಟ್ರಿಕ್ಟ್ ಆಫೀಸರುಗಳಿಗೆ ಕೊಟ್ಟಿದ್ದೇವೆ. ನ್ಯೂಸ್ ರೀಲ್ಸ್ ಕೂಡ ಅವರಿಗೆ ಕೊಡುತ್ತೇವೆ. ಅವರಲ್ಲಿ ವಾಹನಗಳಿವೆ. ಅವರು ಎಲ್ಲ ಭಾಗಗಳಿಗೂ ಹೋಗಿ ಪ್ರದರ್ಶನ ಮಾಡುತ್ತಾರೆ.

ಶ್ರೀ ಎಂ. ನಾಗಪ್ಪ.—ಸಂಗೀತ ಮತ್ತು ನಾಟಕ ವಿಭಾಗ ಎಂದು ಹೇಳಿದ್ದಾರೆ. ನಾಟ ಕಂಪೆನಿಗಳು ಅಲ್ಲಿ ಬರುತ್ತವೇಯೇ?

ಶ್ರೀ ಎಂ. ರಾಜಶೇಖರಮೂರ್ತಿ.—ಅದಕ್ಕೆ ಪ್ರತ್ಯೇಕವಾದ ವಿಭಾಗವಿದೆ. ಅಮೆಚೂರ್ ಸಂಸ್ಥೆಗಳನ್ನೂ ಅಸೋಸಿಯೇಟ್ ಮಾಡಿಕೊಳ್ಳುತ್ತೇವೆ.

Sri H. SIDDAVEERAPPA.—What is the annual expenditure of this Unit mentioned in sub-para (c)?

Sri M. RAJASEKHARA MURTHY.—I want notice.

ಶ್ರೀ ಎಂ. ಕೆ. ಬೊಮ್ಮೇ ಗೌಡ.—10 ವರ್ಷಗಳಲ್ಲಿ 38,086 ರೂಪಾಯಿ ಖರ್ಚಾಗಿದೆ ಎಂದು ಹೇಳಿದ್ದಾರೆ ಇದರಲ್ಲಿ ಏನೇನು ಸಾಧಿಸಿದ್ದಾರ, ಯಾವ ಯಾವ ರೀತಿ ಪ್ರಗತಿಯಾಗಿದೆ ಎಂದು ಹೇಳುತ್ತಾರೆಯೇ?

ಶ್ರೀ ಎಂ. ರಾಜಶೇಖರಮೂರ್ತಿ.—ಪ್ರೋಗ್ರೆಸ್ ಎಂದರೆ ಹತ್ತು ವರ್ಷಗಳಲ್ಲಿ ಸಾಧಿಸಿದಂಥ ಕೆಲಸವನ್ನೆಲ್ಲ ತೋರಿಸುವಂಥ ಡಾಕ್ಯುಮೆಂಟರಿ ಫಿಲಂ ತಯಾರು ಮಾಡಿದ್ದೇವೆ. ಅದಕ್ಕೆ ಇಷ್ಟು ಹಣ ಖರ್ಚಾಗಿದೆ.

Sri B. B. SAYANAK.—It is a fact that Belgaum and surrounding areas belong to Maharashtra. That is why there is no news reel for this Belgaum area; is it not?

Sri H. N. NANJE GOWDA.—I take objection to this supplementary. It is not a fact.

Mr. SPEAKER.—It is a wishful thinking on the part of the hon. Member. Everybody is entitled to hold his own opinion.

Sri B. B. SAYANAK.—We are claiming that part.

Sri M. RAJASEKHARA MURTHY.—Even with regard to that Division, we are producing a documentary.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈಗರಾದರೂ ವಾರ್ತಾ ಇಲಾಖೆಯವರು ರಾಜಕೀಯ ಪಕ್ಷಗಳು ಮುಂದೆ ನಡೆಸತಕ್ಕ ವಸ್ತು ಪ್ರದರ್ಶನಗಳಿಗೆ ಸರ್ಕಾರದಿಂದ ಅಡ್ವರ್ಟೈಸ್‌ಮೆಂಟ್ ಕೊಡತಕ್ಕುದನ್ನು ನಿಲ್ಲಿಸುತ್ತಾರೆಯೇ?

ಶ್ರೀ ಎಂ. ರಾಜಶೇಖರಮೂರ್ತಿ.—ರಾಜಕೀಯ ಪಕ್ಷಗಳು ಮಾಡುತ್ತವೆ ಎಂದು ನಿಲ್ಲಿಸುವುದಕ್ಕೆ ಹೋಗುವುದಿಲ್ಲ. ಬೆನಿಫಿಟ್ ಆದರೆ ಏಕೆ ಕೊಡಬಾರದು?

Ministers conversant with Kannada Language

126. **Sri L. SRIKANTAIAH** (Nanjangud).—

Will the Chief Minister be pleased to state:—

(*a*) whether all the Ministers of the present Government know to read and write Kannada Language;

(*b*) if not, the Ministers who do not know to read and write Kannada Language;

(*c*) the steps taken by the Government to make them learn to read and write Kannada Language?

Sri VEERENDRA PATIL (Chief Minister).—

(*a*) Yes ; all with the exception of three.

(*b*) (i) Minister for Transport and Tourism.
(ii) Deputy Minister for Agriculture.
(iii) Deputy Minister for Home.

(*c*) Nil.

ಶ್ರೀ ಎಲ್. ಶ್ರೀಕಂಠಯ್ಯ.—(ಸಿ) ಭಾಗಕ್ಕೆ ಉತ್ತರವಾಗಿ 'ಏನೂ ಇಲ್ಲ' ಎಂದು ಹೇಳಿದ್ದಾರೆ. ನಾನು ತಿಳಿದಂತೆ ಇವರು ಮೂರು ವರ್ಷಗಳಿಂದ ಮಂತ್ರಿಗಳಾಗಿದ್ದಾರೆ. ಪ್ರತಿ ತಿಂಗಳೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರವಾಸವನ್ನು ಕೈಗೊಳ್ಳುತ್ತಾರೆ. ಹಾಗೆ ಪ್ರವಾಸ ಹೋದಾಗ ಬಡ ರೈತರು ಅಹವಾಲನ್ನು ಕೊಡುತ್ತಾರೆ. ಆ ಅಹವಾಲನ್ನು ಸೆಕ್ರೆಟರಿಯವರಿಗೆ ಕೊಟ್ಟು ಅವರು ಏನು ಹೇಳುತ್ತಾರೆ ಅದನ್ನು ಕೇಳಿ ತಿಳಿದುಕೊಳ್ಳುತ್ತಾರೆ. ಜನರ ಕುಂದುಕೊರತೆಗಳನ್ನು ನೇರವಾಗಿ ತಿಳಿದುಕೊಳ್ಳುವುದಕ್ಕಾಗಿ ಮೂರು ವರ್ಷದಿಂದ ಕನ್ನಡ ಭಾಷೆಯನ್ನು ಓದಲು ಮತ್ತು ಬರೆಯಲು ಕಲಿತುಕೊಳ್ಳುವುದಕ್ಕೆ ಆಗುತ್ತಿರಲಿಲ್ಲವೇ, ಸ್ವಾಮಿ ?

†ಶ್ರೀ ವೀರೇಂದ್ರ ಪಾಟೀಲ್.—ಅವರಿಗೆ ಓದಿ ಬರೆಯಲು ಬರುವುದಿಲ್ಲ. ಅವರಿಗೆಲ್ಲ ಕನ್ನಡ ಅರ್ಥವಾಗುತ್ತದೆ. ಕನ್ನಡದಲ್ಲಿ ಮಾತನಾಡುವುದಕ್ಕೆ ಸಾಧ್ಯವಿದೆ. ಈಗ ಇಬ್ಬರು ಉಪಮಂತ್ರಿಗಳು ಕನ್ನಡದಲ್ಲ ಓದುವುದಕ್ಕೆ, ಬರೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಒಬ್ಬರು ಮಂತ್ರಿಗಳು ಬಹುಶಃ ಕನ್ನಡದಲ್ಲಿ ಈಗಿನ ಅವರ ವಯಸ್ಸಿನಲ್ಲಿ ಓದುವುದು, ಬರೆಯುವುದು ಬಹಳ ಕಷ್ಟ. ಅವರಿಗೆ ಕನ್ನಡ ಅರ್ಥವಾಗುತ್ತದೆ.

ಶ್ರೀ ಎಲ್. ಶ್ರೀಕಂಠಯ್ಯ.—ಕನ್ನಡ ಓದುವುದಕ್ಕೆ ಬರೆಯುವುದಕ್ಕೆ ಬಂದ ಹೊರತು ಮಂತ್ರಿಮಂಡಲಕ್ಕೆ ತೆಗೆದುಕೊಳ್ಳುವುದಿಲ್ಲ ಎನ್ನುವ ಭರವಸೆಯನ್ನು ಕೊಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಹೇಗೆ ಕೊಡುವುದಕ್ಕಾಗುತ್ತದೆ ?

ಶ್ರೀ ಎಂ. ನಾಗಪ್ಪ.—ನಮ್ಮ ರಾಜ್ಯದ ಭಾಷೆ ಕನ್ನಡ ಭಾಷೆ. ಆದುದರಿಂದ ಮುಂದೆ ಮಂತ್ರಿಮಂಡಲದಲ್ಲಿ ಹೆಚ್ಚು ಕನ್ನಡದಲ್ಲಿಯೇ ಕೆಲಸಕಾರ್ಯಗಳನ್ನು ಮಾಡತಕ್ಕ ಪರಿಸ್ಥಿತಿ ಬರಬಹುದು ಎನ್ನುವ ದೃಷ್ಟಿಯಿಂದ ಇವರಿಗೆಲ್ಲ ಕನ್ನಡ ವಿದ್ಯಾಭ್ಯಾಸಕ್ಕಾಗಿ ಒಂದು ಶಾಲೆ ಹಾಕಿ ಇವರಿಗೆ ವಿದ್ಯೆ ಕೊಡಲಿಕ್ಕೆ ಪ್ರಯತ್ನ ಮಾಡುತ್ತಾರೆಯೇ ಅಥವಾ ಮಂತ್ರಿಮಂಡಲದಲ್ಲಿ ಏನಾದರೂ ಬದಲಾವಣೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಕನ್ನಡ ಶಾಲೆ ತೆಗೆಯುವುದಕ್ಕೆ ಪ್ರಯತ್ನ ಮಾಡುವ ಹಾಗಿಲ್ಲ, ಮಂತ್ರಿಮಂಡಲದಲ್ಲಿ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುವ ಹಾಗೆಯೂ ಇಲ್ಲ.

ಶ್ರೀ ಬಿ. ದೊಡ್ಡಬೋರೇಗೌಡ.—ಕನ್ನಡ ಬಾರದೇ ಇರತಕ್ಕ ಮೂರು ಜನ ಮಾನ್ಯ ಮುಖ್ಯಮಂತ್ರಿಗಳ ಉತ್ತರದ ಪ್ರಕಾರ ಮಂತ್ರಿಮಂಡಲದಲ್ಲಿದ್ದಾರೆ. ಬಹುತೇಕ ಈ ರಾಜ್ಯದಲ್ಲಿ ಕನ್ನಡ ಭಾಷೆ ಮಾತನಾಡಬೇಕು, ನಮ್ಮ ವೇಷ ಭೂಷಣಗಳಲ್ಲಿಯೂ ಕನ್ನಡವೇ ಆಗಬೇಕು ಎಂದು ಸುಮಾರು 15 ವರ್ಷದಿಂದ ಹೇಳಿಕೊಂಡು ಬಂದಿದ್ದಾರೆ. ಹೀಗಿದ್ದಾಗ್ಯೂ ಕೂಡ ಕನ್ನಡವೇ ಬಾರದೆ ಇರತಕ್ಕವರನ್ನು, ಸಾಮಾನ್ಯವಾಗಿ ನೂರಕ್ಕೆ 90 ಜನ ಕನ್ನಡ ಮಾತನಾಡುವ ಜನರಿರುವ ರಾಜ್ಯದಲ್ಲಿ ಮಂತ್ರಿಗಳಾಗಿ ನೇಮಕ ಮಾಡಿರುವುದರಿಂದ ಜನರಿಗೆ ತೊಂದರೆಯಾಗುವುದಿಲ್ಲವೆ ? ಇವರನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಈಗಾಗಲೇ ಹೇಳಿದಂತೆ ಅವರಿಗೆ ಕನ್ನಡದಲ್ಲ ಬರೆಯುವುದಕ್ಕೆ, ಓದುವುದಕ್ಕೆ ಬರುವುದಿಲ್ಲ. ಅವರು ಕನ್ನಡದಲ್ಲಿ ಮಾತನಾಡುತ್ತಾರೆ, ಕನ್ನಡದಲ್ಲಿ ಮಾತನಾಡಿದರೆ ಅರ್ಥವಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಕನ್ನಡ ರಾಜ್ಯ ಅನೇಕ ಭಾಷೆಗಳನ್ನೊಳಗೊಂಡ ರಾಜ್ಯವಾಗಿರುವುದರಿಂದ ಅನೇಕ ಭಾಷೆಗಳನ್ನು ಕಲಿತವರಿದ್ದಾರೆ. ಭರತ ಖಂಡದ ಅಭಿವೃದ್ಧಿಯ ದೃಷ್ಟಿಯಿಂದ ಆಯಾ ಭಾಷೆಯನ್ನು ಮಾತೃಭಾಷೆಯಾಗಿ ಉಳ್ಳವರು ಮಂತ್ರಿಮಂಡಲದಲ್ಲಿರುವುದು ಸಹಜವಾದಮಾರ್ಗವಲ್ಲವೇ ?

---

† Indicates that remarks or speeches have not been revised by the member concerned.

ಶ್ರೀ ವೀರೇಂದ್ರ ಪಾಟೀಲ್.—ಅವರಿಗೆ ಒಂದುವೇಳೆ ಕನ್ನಡ ಕಲಿಯುವುದಕ್ಕೆ ಸಾಧ್ಯವಿದ್ದರೆ ಕಲಿಯುತ್ತಾರೆ ಮತ್ತು ಒಂದುವೇಳೆ ಅವರ ಮಾತೃಭಾಷೆ ಕನ್ನಡವಾಗಲಾರದೆ ಇದ್ದರೆ ಕನ್ನಡ ಕಲಿಯಲೇ ಬೇಕು, ಕಲಿಯದ ವಿನಾ ಮಂತ್ರಿಯಾಗುವುದಕ್ಕೆ ಸಾಧ್ಯವಿಲ್ಲ ಎಂದು ಒತ್ತಾಯ ಹೇರುವುದು ಸಾಧುವಾದುದಲ್ಲ. ಬಾರ್ಡರ್ ಏರಿಯಾದಿಂದ ಬರುವಂಥ ಅನೇಕ ಜನರಿಗೆ ತೆಲುಗು, ಮರಾಠಿ, ತಮಿಳು ಭಾಷೆ ಬರುತ್ತದೆ. ಮೈಸೂರು ರಾಜ್ಯದಲ್ಲಿ ಮಂತ್ರಿಯಾಗಿ ಅಂಥವರೂ ಕೆಲಸ ಮಾಡುತ್ತ ಇರುತ್ತಾರೆ. ಅವರಿಗೆ ಕನ್ನಡದ ಜ್ಞಾನ ಬೇಕು. ಅವರಿಗೆ ಅಷ್ಟರಮಟ್ಟಿನ ಜ್ಞಾನವಿದೆ, ಮಾತನಾಡಲಿಕ್ಕೆ ಬರುತ್ತದೆ, ಅರ್ಥವಾಗುತ್ತದೆ. ಬರೆಯುವುದಕ್ಕೆ, ಓದುವುದಕ್ಕೆ ಬರುವುದಿಲ್ಲ.

Sri B. B. SAYANAK.—May I know since how many years the Hon. Minister for Transport and Tourism is Minister here, in Mysore State ?

Sri VEERENDRA PATIL.—He is Minister since 1967.

ಶ್ರೀ ಎಚ್. ಸಿದ್ದವೀರಪ್ಪ.—ಕನ್ನಡ ಭಾಷೆಯನ್ನು ಅವರೆಲ್ಲ ಅರ್ಥ ಮಾಡಿಕೊಳ್ಳಬೇಕಾದರೆ ಎಲ್ಲ ಭಾಗದ ಕನ್ನಡಿಗರೂ ಅರ್ಥ ಮಾಡಿಕೊಳ್ಳತಕ್ಕ ಒಂದು ಕನ್ನಡ ಭಾಷೆಯನ್ನು ಸುಲಭವಾದ ರೀತಿಯಿಂದ ಕಲಿಯಲಿಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಎಲ್ಲರಿಗೂ ಮಾಡಬೇಕಾಗುತ್ತದೆ; ಕೇವಲ ಮಂತ್ರಿಗಳಿಗಲ್ಲ. ಎಲ್ಲರಿಗೂ ಆ ರೀತಿಯ ವ್ಯವಸ್ಥೆ ಮಾಡಬೇಕಾಗುತ್ತದೆ.

ಶ್ರೀ ಎಲ್. ಶ್ರೀಕಂಠಯ್ಯ.—ಕನ್ನಡದಲ್ಲಿ ಮಾತನಾಡುತ್ತಾರೆ ಎಂದು ಹೇಳಿದಿರಿ. ಹಾಗಾದರೆ ಕನ್ನಡದಲ್ಲಿ ಮಾತನಾಡುವುದನ್ನು ಅದರ ತಾತ್ಪರ್ಯ ಹೇಳುವುದಕ್ಕೆ ಎಕ್ಸ್‌ಪೆರಿಮೆಂಟ್ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅವರಿಗೆ ಕನ್ನಡ ಅರ್ಥವಾಗುತ್ತದೆ. ಹಳೇ ಮೈಸೂರು ಕನ್ನಡ ಬೇರೆ, ಬೀದರ್ ಕನ್ನಡ ಬೇರೆ, ಬೆಳಗಾಂವ ಕನ್ನಡ ಬೇರೆ ತರಹ ಆಗಿರುವುದರಿಂದ ಅವರು ಇಂಗ್ಲೀಷ್ ನಲ್ಲಿ ಹೇಳುತ್ತಾರೆ ಆದರೆ ಅವರಿಗೆ ಕನ್ನಡ ಅರ್ಥವಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಈ ಕರ್ನಾಟಕ ರಾಜ್ಯದಲ್ಲಿ ಆಡಳಿತ ಭಾಷೆ ಕನ್ನಡ ಶಿಕ್ಷಣ ಮಾಧ್ಯಮ ಕನ್ನಡ ಹೀಗೆ ಎಲ್ಲಾ ಮಟ್ಟದಲ್ಲೂ ಕನ್ನಡ ಆಗಬೇಕು ಎಂದು ಇರುವುದರಿಂದ ಮಂತ್ರಿಗಳು ಕೂಡ ಕನ್ನಡದಲ್ಲಿ ಮಾತನಾಡುವುದು ಅಷ್ಟೇ ಅವಶ್ಯಕವಾಗಿರುವುದರಿಂದ ಅವರು ಓದು ಬರೆಯುವುದಕ್ಕೆ ಕಲಿಯಲು ಏರ್ಪಾಡು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಇದಕ್ಕೆ ಸಾಕಷ್ಟು ಉತ್ತರ ಕೊಟ್ಟಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಕನ್ನಡದಲ್ಲಿ ಕಾಗದ ಬರೆದರೆ ಅದಕ್ಕೆ ಉತ್ತರ ಕನ್ನಡದಲ್ಲಿ ಹೋಗುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಮಂತ್ರಿಗಳ ಆಫೀಸಿನಲ್ಲಿ ಪ್ರೈವೇಟ್ ಸೆಕ್ರೆಟರಿ ಇರುತ್ತಾರೆ ಸ್ಟೆನೋ ಇರುತ್ತಾರೆ. ಆದುದರಿಂದ ಕನ್ನಡದಲ್ಲಿ ಉತ್ತರ ಹೋಗುವುದಕ್ಕೆ ವ್ಯವಸ್ಥೆ ಮಾಡಲು ಸಾಧ್ಯವಿದೆ.

Formation of Roads in Pavagada Taluk

136. **Sri P. ANJANAPPA** (Pavagada).—

Will the Minister for Public Works be pleased to state :—

(*a*) whether the P. W. D. will take over the road from Arsikere road in Pavagada to the road joining Devalakere road *via* Naliganahalli, Paradabetta, Mugadalabetta and from it ;

(*b*) whether the P. W. D. will form the road from Bugadur in Pavagada taluk to the road going to Thirupathi *via* Appajanahalli, Ryasabehussainpura ;

(SRI P. ANJANAPPA)

(*c*) whethar the P. W. D. will form the road from Valluru in Pavagada taluk to Venkatammanahalli ;

(*d*) whether the P. W. D. will form the road from Dommakapuri in Pavagada taluk to Garalligatta ?

Sri BASAVARAJ MAGAVI (Deputy Minister for Public Works).—

(*a*) This will be considered.

(*b*), (*c*) and (*d*) No, since these roads are not P.W.D. roads.

ಶ್ರೀ ಪಿ. ಅಂಜನಪ್ಪ.—ಈ ರಸ್ತೆಗಳು ಲೋಕೋಪಯೋಗಿ ಇಲಾಖೆಗೆ ಸೇರಿದವುಗಳಲ್ಲವಾದ್ದರಿಂದ ಮಾಡಿಸಲಾಗುವುದಿಲ್ಲ ಎಂದು ಉತ್ತರ ಹೇಳಿದೆ. ಹಾಗಾದರೆ ಈ ತಾಲ್ಲೂಕಿನಲ್ಲಿ ಯಾವ ರಸ್ತೆ ಇಲ್ಲವೇ ?

† ಶ್ರೀ ಬಸವರಾಜ ಮಾಗಾವಿ.—ಎಲ್ಲ ರಸ್ತೆಗಳು ತಾಲ್ಲೂಕ ಬೋರ್ಡ್ ರಸ್ತೆಗಳಾಗಿವೆ.

ಶ್ರೀ ಜಿ. ರಾಮೇಗೌಡ.—ಇದನ್ನು ಪರಿಶೀಲಸಲಾಗುವುದು ಎಂದು ಹೇಳಿದ್ದೀರಿ. ಹಾಗಾದರೆ ಪರಿಶೀಲನೆ ಮಾಡಿ ಪಿ. ಡಬ್ಲ್ಯು. ಡಿ. ಗೆ ಸೇರಿಸುವುದಕ್ಕೆ ಯಾವಾಗ ಪ್ರಯತ್ನ ಮಾಡುತ್ತೀರಿ ?

ಶ್ರೀ ಬಸವರಾಜ ಮಾಗಾವಿ.—ಈಗಾಗಲೇ 11,145 ಮೈಲಿ ರಸ್ತೆ ಪಿ. ಡಬ್ಲ್ಯು. ಡಿ. ತೆಗೆದುಕೊಂಡಿರುವುದು ಸುವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗಿಲ್ಲ ಹಾಗು ಅದಕ್ಕೆ ಬೇಕಾಗುವ ಹೆಚ್ಚಿನ ಹಣ ಇಲ್ಲ, ಆದುದರಿಂದ ಪರಿಶೀಲಿಸಲಾಗುವುದು ಎಂದು ಹೇಳಿದೆ. ಮುಖ್ಯವಾಗಿ ಹಣ ದೊರೆತರೆ ಈ ರಸ್ತೆ ತೆಗೆದುಕೊಳ್ಳಬೇಕು ಎನ್ನುವುದನ್ನು ಪರ್ಯಾಲೋಚಿಸುತ್ತಿದ್ದೇವೆ. ತೀವ್ರ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ.

ಒಬ್ಬ ಮಾನ್ಯಸದಸ್ಯರು.—ಸಾಗರ ತಾಲ್ಲೂಕಿನಲ್ಲಿ ಎಷ್ಟು ಮೈಲಿ ರಸ್ತೆ ತೆಗೆದುಕೊಂಡಿದೆ ?

ಶ್ರೀ ಬಸವರಾಜ ಮಾಗಾವಿ.—ಈ ಮಾಹಿತಿ ನನ್ನ ಹತ್ತಿರ ಇಲ್ಲ. ಬೇರೆ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

Sri H. M. CHANNABASAPPA.—In the matter of taking over of roads to P. W. D. for maintenance, have the Government prescribed any norms ?

Sri BASAVARAJ MAGAVI.—Yes, it depends upon the importance of the roads, tourist traffic, and such other things. The fact is now since we have taken more than 1145 miles to the possession of the P. W. D. and we are not in a position to bring them to our standard, we have withheld further taking over of roads till such time we are able to bring these roads to a particular specification.

Allotment of Central aid under Agricultural Development Programme in Tumkur District

146. **Sri G. T. GOVINDA REDDY** (Madhugiri).—

Will the Minister for Development be pleased to state :—

(*a*) the taluk of Tumkur District to which the Centeral financial aid for giving loans to ryots for wells and pumpsets as per the Agricultural Development Programme, is applicable ;

(*b*) whether efforts will be made to make it applicable to the entire district ?

Sri B. L. GOWDA (Deputy Minister for Co-operation).—

(*a*) The scheme to dig irrigation wells and set up pumpsets in Koratagere, Tumkur and Gubbi taluks of Tumkur District with the aid of Agricultural Refinance Corporation has been sanctioned.

(*b*) A proposal to extend this scheme to Sira, Madhugiri and Pavagada taluks of Tumkur District has been sent for the consideration of the Agricultural Refinance Corporation.

As the digging of irrigation wells depend upon the availability of water in the land, there is no proposal at present to extend the said scheme to the remaining taluks of the district.

ಶ್ರೀ ಜಿ. ಟಿ. ಗೋವಿಂದರೆಡ್ಡಿ.—ಈ ಯೋಜನೆಯನ್ನು ತುಮಕೂರು ಜಿಲ್ಲೆಯ ಸಿರಾ ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳಿಗೆ ವಿಸ್ತರಿಸುವ ಸಲಹೆಯನ್ನು ಅಗ್ರಿಕಲ್ಚರಲ್ ರೀಫೈನಾನ್ಸ್ ಕಾರ್ಪೋರೇಷನ್ನಿಗೆ ಪರಿಶೀಲನೆಗೆ ಕಳುಹಿಸಲಾಗಿದೆ ಎಂದು ಉತ್ತರ ಹೇಳಿದೆ. ಅದನ್ನು ಕಳುಹಿಸಿ ಎಷ್ಟು ದಿವಸವಾಯಿತು ?

† ಶ್ರೀ ಬಿ. ಎಲ್. ಗೌಡ.—ಅಕ್ಟೋಬರ್ ತಿಂಗಳಿನಲ್ಲಿ ಕಳುಹಿಸಿದೆ.

ಶ್ರೀ ಜಿ. ಟಿ. ಗೋವಿಂದರೆಡ್ಡಿ.—ಈ ಮೂರು ತಾಲ್ಲೂಕುಗಳನ್ನು ಸೇರಿಸಲು ಜಾಗ್ರತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಪರಿಶೀಲನೆಗೆ ಕಳುಹಿಸಿದ್ದು ಬಂದ ತಕ್ಷಣ ಮಾಡುತ್ತೇವೆ.

ಶ್ರೀ ಎಂ. ಎನ್. ರಾಮಣ್ಣ.—ಗುಬ್ಬಿ ತಾಲ್ಲೂಕಿನಲ್ಲಿ ಇದನ್ನು ತೆಗೆದುಕೊಂಡಿಲ್ಲ ಆದ್ದರಿಂದ ಒಂದಾದರೂ ತೆಗೆದುಕೊಳ್ಳುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಇದಕ್ಕೆ ಒಂದು ನಿಯಮ ಇದೆ. ಭೂಗರ್ಭದಲ್ಲಿ ನೀರು ಹೆಚ್ಚಾಗಿ ಇರಬೇಕು. ಈ ಬಗ್ಗೆ ತನಿಖೆ ಮಾಡಿ ರಿಪೋರ್ಟ್ ಕೊಡುತ್ತಾರೆ ಅದರ ಆಧಾರದ ಮೇಲೆ ಮಾಡಬೇಕಾಗುತ್ತದೆ. ಪರಿಶೀಲನೆಗೆ ಕಳುಹಿಸಿಕೊಟ್ಟು ಅಲ್ಲಿ ನೀರು ಇದೆ ಎಂದು ಶಿಫಾರಸು ಮಾಡಿದರೆ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ನಾಗಪ್ಪ.—ಭೂಗರ್ಭದಲ್ಲಿ ನೀರು ಇದೆ ಇಲ್ಲಾ ಎನ್ನುವುದನ್ನು ಪರಿಶೀಲನೆ ಮಾಡಿದ ಮೇಲೆ ಕೆಲಸ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಹಾಗಾದರೆ ಇಡೀ ರಾಜ್ಯದಲ್ಲಿ ಸರ್ವೇ ಮಾಡಿಸಿದ್ದೀರಾ ? ರಿಪೋರ್ಟ್ ಬಂದಿರುವ ಪ್ರಕಾರ ಕೆಲಸ ತೆಗೆದುಕೊಳ್ಳಲು ಒಪ್ಪಿಕೊಂಡಿದ್ದೀರಾ ?

ಶ್ರೀ ಬಿ. ಎಲ್. ಗೌಡ.—ಒಂದು ರಿಪೋರ್ಟು ಬಂದಿದೆ. ಇನ್ನೊಂದು ರಿಪೋರ್ಟ್ ಬರುವುದರಲ್ಲಿ ಇದೆ.

ಶ್ರೀ ಎಂ. ಎನ್. ರಾಮಣ್ಣ.—ತುಮಕೂರು ಜಿಲ್ಲೆಯಲ್ಲಿ ಎಲ್ಲೆಲ್ಲಿ ನೀರು ಇದೆ ಎನ್ನುವುದಕ್ಕೆ ರಿಪೋರ್ಟ್ ತರಿಸುವದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ತುಮಕೂರು ಬಗ್ಗೆ ರಿಪೋರ್ಟ್ ತಯಾರಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕುಣಿಗಲ್ ತಾಲ್ಲೂಕಿನಲ್ಲಿ ಪರಿಶೀಲನೆ ಮಾಡಿಸುತ್ತೀರಾ ? ಪರೀಕ್ಷೆ ಮಾಡಿಸದೆ ಉತ್ತರ ಹೇಳಿದಹಾಗೆ ಇದೆ. ಆದುದರಿಂದ ಉಳಿದ ತಾಲ್ಲೂಕಿನ ಬಗ್ಗೆ ಪರಿಶೀಲನೆ ನಡೆಸಿ ಈ ಯೋಜನೆ ಕೈಗೊಳ್ಳಲು ಪ್ರಯತ್ನಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ದೊಡ್ಡಬೋರೆಗೌಡ.—ಈ ಯೋಜನೆ ಪೂರ್ತಿಯಾಗುವುದಕ್ಕೆ ಎಷ್ಟು ಅವಧಿ ಬೇಕಾಗುತ್ತವೆ ಹೇಳುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಭೂಗರ್ಭದಲ್ಲಿ ನೀರು ಇದ್ದರೆ ಅದಕ್ಕೆ ಬೇಕಾಗುವ ಹಣ ಇದ್ದರೆ ಇದನ್ನು ಮಾಡುತ್ತೇವೆ. ಇಷ್ಟು ದಿವಸಗಳಲ್ಲಿ ಮಾಡುತ್ತೇವೆ ಎಂದು ಹೇಳಲು ಆಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ನೀರಾವರಿ ಭಾವಿ ತೋಡುವ ಯೋಜನೆ ಭೂಗರ್ಭದಲ್ಲಿ ದೊರೆಯುವ ನೀರನ್ನು ಅವಲಂಬಿಸಿದೆ. ನೀರು ಎಲ್ಲಿ ಸಿಕ್ಕುತ್ತದೆ ಎನ್ನತಕ್ಕಂಥಾದ್ದನ್ನು ಪರೀಕ್ಷೆ ಮಾಡತಕ್ಕಂಥ ಮಾರ್ಗಗಳು ಯಾವುವು? ಕಡ್ಡೀ ಹಿಡಿದು ನೋಡುವ ಶಾಸ್ತ್ರವನ್ನು ಪರಿಗಣಿಸುತ್ತೀರಾ!

ಶ್ರೀ ಬಿ. ಎಲ್. ಗೌಡ.—ಈಗಾಗಲೇ ಇದಕ್ಕೆ ಉತ್ತರ ಹೇಳಿದ್ದೇನೆ.

ಶ್ರೀ ಜಿ. ಟಿ. ಗೋವಿಂದರೆಡ್ಡಿ.—ಇಡೀ ತಾಲ್ಲೂಕಿನಲ್ಲಿ ಈ ಯೋಜನೆ ಅನ್ವಯಿಸುವ ಹಾಗೆ ಮಾಡುತ್ತೀರಾ?

ಶ್ರೀ ಬಿ. ಎಲ್. ಗೌಡ.—ಅದಕ್ಕೆ ಉತ್ತರ ಹೇಳಿದ್ದೇನೆ. ಭೂಗರ್ಭಇಲಾಖೆಯವರು ಎಲ್ಲಿ ನೀರು ದೊರೆಯುತ್ತದೆ ಎಂದು ಶಿಫಾರಸು ಮಾಡುತ್ತಾರೋ ಅಂಥ ಜಾಗದಲ್ಲಿ ಈ ಯೋಜನೆ ತೆಗೆದುಕೊಳ್ಳುತ್ತೇವೆ. ಶ್ರೀಮಾನ್ ಗೋವಿಂದರೆಡ್ಡಿಯವರೇ ಆಗಲಿ ಅಥವಾ ಯಾರೇ ಸದಸ್ಯರಾಗಲಿ ಇಂಥ ಒಂದು ಜಾಗದಲ್ಲಿ ನೀರು ಬರುತ್ತದೆ ಎಂದು ಸಲಹೆ ಕೊಟ್ಟರೆ ಅಲ್ಲಿ ಪರಿಶೀಲನೆ ಮಾಡುತ್ತೇವೆ.

9-00 A.M.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ತುಮಕೂರು ಜಿಲ್ಲೆಯಲ್ಲಿ 3 ರಿಂದ 23 ಪರ್ಸೆಂಟಿನವರೆಗೆ ಕಡಿಮೆಯಾಗಿರುವುದು 4–6 ತಾಲ್ಲೂಕುಗಳಿವೆ. ಅಂತಹ ಕಡೆ ಪ್ರಿಯಾರಿಟಿ ಕೊಟ್ಟು ಇರ್ರಿಗೇಷನ್ ವೆಲ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ. ಎಲ್. ಗೌಡ.—ಇರ್ರಿಗೇಷನ್ ಈ ವರ್ಷ ಕಡಿಮೆ ಎನ್ನುವುದನ್ನು ಒಪ್ಪುತ್ತೇನೆ. ಮಾನ್ಯ ಸದಸ್ಯರು ಹೇಳಿದ ಒಂದು ಸಲಹೆಯನ್ನು ಪರಿಶೀಲನೆ ಮಾಡುತ್ತೇನ.

State Fund Road in Chickmagalur District

151. **Sri M. MALLAPPA** (Birur).—

Will the Minister for Public Works be pleased to state :—

(*a*) the number of miles of road that have been taken over in Chickmagalur District as State Fund Roads (Talukwise details may be given for the past three years);

(*b*) the number of roads taken over as State Fund Roads that have been metalled and the amount spent for the said State Fund roads;

(*c*) the number of years in which the Government would complete metalling all the roads converted as State Fund Roads in Chickmagalur District?

Sri K. LAKKAPPA (Minister for Public Works).—

(*a*)—

Name of Taluka	*Years* *1966* *M.F.*	 *1967* *M.F.*	 *1968* *M.F.*
1. Chickmagalur	...	21-2	7-6
2. Kadur	...	...	24-0
3. Mudigere	...	...	6-2
4. Koppa	...	4-4	...
5. N. R. Pura	...	4-4	21-0

(*b*) No road is metalled. The total amount spent on these roads is Rs. 3,68,954.

(*c*) This depends upon the availability of funds and the necessity for metalling.

ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ 1968ನೇ ಸಾಲನಲ್ಲಿ ಸುಮಾರು 58 ಮೈಲಿ ಸ್ಟೇಟ್ ಫಂಡ್ ರಸ್ತೆಗಳನ್ನಾಗಿಯೂ, 1967ನೇ ಸಾಲಿನಲ್ಲಿ ಸುಮಾರು 29 ಮೈಲಿ ಸ್ಟೇಟ್ ಫಂಡ್ ರಸ್ತೆಗಳನ್ನಾಗಿ ಮಾಡಿದ್ದೇವೆ ಎಂದು ಹೇಳಿದ್ದೀರಿ. ಆದರೆ (ಬಿ) ಗೆ ಉತ್ತರವಾಗಿ ಯಾವ ರಸ್ತೆಗಳಿಗೂ ಜಲ್ಲಿ ಕಲ್ಲು ಹಾಕಿರುವುದಿಲ್ಲ, ಈ ರಸ್ತೆಗಳ ಬಗ್ಗೆ ವೆಚ್ಚ ಮಾಡಿರುವ ಮೊಬಲಗು 3,68,954 ರೂಪಾಯಿಗಳು ಎಂದು ಹೇಳಿದ್ದೀರಿ. ಚಿಕ್ಕಮಗಳೂರು ಜಿಲ್ಲೆಗೆ ಇಷ್ಟೊಂದು ಹಣ ಖರ್ಚು ಮಾಡಿದ್ದೀರಲ್ಲಾ ಕಡೂರು ತಾಲ್ಲೂಕಿನಲ್ಲಿ ಎಷ್ಟು ಮೈಲಿ ರಸ್ತೆಗಳನ್ನು ರಿಪೇರಿ ಮಾಡಿದ್ದೀರಿ ?

ಶ್ರೀ ಕೆ. ಲಕ್ಕಪ್ಪ.—ಈ ರಸ್ತೆಗಳಿಗೆ ವೆಚ್ಚ ಮಾಡಿರುವ ಮೊಬಲಗು 3,68,954 ರೂಪಾಯಿಗಳು. ಆದರೆ ಜಲ್ಲಿ ಹಾಕಿರುವುದಿಲ್ಲ. ಜಲ್ಲಿ ಹಾಕಬೇಕಾದರೆ ಮೊದಲು ಮಣ್ಣಿನ ಕೆಲಸ ಮಾಡಿಕೊಂಡು ಅನಂತರ ಜಲ್ಲಿ ಕೆಲಸ ಮಾಡಬೇಕು. ಆದರೆ ಕಡೂರು ತಾಲ್ಲೂಕಿನ ವಿಚಾರ ಹೇಳಬೇಕಾದರೆ ಆದರ ವಿವರ ಈಗ ನನ್ನಲ್ಲಿಲ್ಲ. ಮತ್ತೊಂದು ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ಎಂ. ಮಲ್ಲಪ್ಪ.—ಕಡೂರು ತಾಲ್ಲೂಕಿನ ರೋಡು ಮೆಟಲ್ ಮಾಡಿದರೆ ಎಂ. ಎಸ್. ಆರ್. ಟಿ. ಸಿ. ಬಸ್ ಬಿಡುತ್ತೇವೆ ಎಂದು ಹೇಳುತ್ತಾರೆ. ಅವರು ಪಿ. ಡಬ್ಲ್ಯು. ಡಿ. ಗೆ ಅನೇಕ ಬಾರಿ ಒತ್ತಾಯ ಮಾಡಿದರು. ರಸ್ತೆ ಯೋಗ್ಯರೀತಿ ಇಲ್ಲದೇ ಇದ್ದುದರಿಂದ 3 ವರ್ಷವಾದರೂ ಬಸ್ಸನ್ನು ಬಿಟ್ಟಿಲ್ಲ. ಇಲಾಖೆಯವರು ಸರ್ವೆ ಮಾಡಿದ್ದಾರೆ. ಬಸ್ ಬಿಡಬೇಕಾದರೆ ಮೆಟಲ್ ಕೆಲಸ ಆಗಬೇಕು. ಅದುದರಿಂದ ಇಲಾಖೆಯವರಿಗೆ ಸೂಚನೆ ಕೊಟ್ಟು ಅತಿ ಶೀಘ್ರವಾಗಿ ಆ ರೋಡುಗಳಿಗೆ ಮೆಟಲ್ ಕೆಲಸ ಆಗುವಂತೆ ಮಾಡಿಸುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಯಾವ ರಸ್ತೆಗಳು ನಾದುರಸ್ತು ಆಗಿವೆಯೋ ಆ ವಿವರ ನನ್ನಲ್ಲಿಲ್ಲ. ಮಾನ್ಯ ಸದಸ್ಯರು ವಿವರ ಕೊಡುವುದಾದರೆ, ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಮಾಡಬಹುದು ಮತ್ತು ಈಗ ಇಂತಕ್ಕಂಥ ಹಣದ ಮಿತಿಯಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಮಾಡುತ್ತಾರೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಮಲೆನಾಡಿನ ಭಾಗದ ಕೊಪ್ಪದಲ್ಲಿ 3 ವರ್ಷದಿಂದ ಸುಮಾರು 4 ಮೈಲಿ ರಸ್ತೆಯನ್ನು ತೆಗೆದುಕೊಂಡಿದ್ದೀರಿ. ಇನ್ನೂ ಪ್ರಾಮುಖ್ಯವಾದ ರಸ್ತೆಗಳಿವೆ. ಅದರಲ್ಲಿ ಶೃಂಗೇರಿ ರಸ್ತೆ ಮುಖ್ಯವಾದುದು. ಅದನ್ನೂ ತೆಗೆದುಕೊಂಡಿಲ್ಲ. ಆದುದರಿಂದ ಉಳಿದ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ. ಎಂ ಎಸ್. ಶಾಸ್ತ್ರಿ.—ಚಿಕ್ಕಮಗಳೂರಿನಲ್ಲಿ ತಾಲ್ಲೂಕುಬೋರ್ಡ್ ವಶದಲ್ಲಿರತಕ್ಕಂಥ 28 ಮೈಲಿ ರಸ್ತೆಗಳನ್ನು ವಹಿಸಿಕೊಂಡು, ಅದಕ್ಕೆ ಒಟ್ಟು 3,68,954 ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇನ್ನು ಉಳಿದಿರತಕ್ಕಂಥ ರಸ್ತೆಗಳಿಗೆ ಎಷ್ಟು ರೂಪಾಯಿಗಳು ಖರ್ಚು ಮಾಡಬೇಕಾಗಿದೆ, ಸ್ವಾಮಿ ?

ಶ್ರೀ ಕೆ. ಲಕ್ಕಪ್ಪ.—ಆ ವಿವರ ನನ್ನಲ್ಲಿಲ್ಲ.

ಶ್ರೀ ಎಂ. ಮಲ್ಲಪ್ಪ.—ಈ ರಾಜ್ಯನಿಧಿಯ ರಸ್ತೆಗಳನ್ನಾಗಿ ತೆಗೆದುಕೊಳ್ಳಬೇಕಾದರೆ ಏನಾದರೂ ನಿಯಮವಿದೆಯೇ ? ಬರುವ ವರ್ಷದೊಳಗೆ ಎಷ್ಟು ರಸ್ತೆಗಳನ್ನು ರಾಜ್ಯನಿಧಿಯ ರಸ್ತೆಗಳನ್ನಾಗಿ ಮಾಡಬೇಕು ಎಂದು ನಿರ್ಧಾರ ಮಾಡಿದ್ದೀರಿ ?

ಶ್ರೀ ಕೆ. ಲಕ್ಕಪ್ಪ.—ಈಗಾಗಲೇ ನಮ್ಮ ಉಪಮಂತ್ರಿಗಳು ಆ ಪ್ರಶ್ನೆಗೆ ಉತ್ತರ ಹೇಳಿದ್ದಾರೆ. ಎಲ್ಲೆಲ್ಲಿ ಆದ್ಯತೆ ಇದೆಯೋ ಅದನ್ನು ಪರಿಶೀಲನೆ ಮಾಡಿ, ಎಲ್ಲೆಲ್ಲಿ ತೆಗೆದುಕೊಳ್ಳಬೇಕೋ ಅಲ್ಲಲ್ಲ ತೆಗೆದುಕೊಳ್ಳುತ್ತಾರೆ. ಮುಂದೆ ಕೆಲವು ಮೈಲಿಗಳ ರಸ್ತೆಗಳನ್ನು ರಾಜ್ಯನಿಧಿಯ ರಸ್ತೆಗಳನ್ನಾಗಿ ತೆಗೆದುಕೊಳ್ಳಬೇಕೆನ್ನುವ ಉದ್ದೇಶ ಸರ್ಕಾರ ಯೋಚನೆ ಮಾಡುತ್ತಾ ಇದೆ. ಇಷ್ಟೇ ಮೈಲಿ ತೆಗೆದುಕೊಳ್ಳಬೇಕೆಂಬ ನಿರ್ಧಾರವಿಲ್ಲ.

Smuggling of Sandalwood from Forests of South Kanara District

160. **Sri B. M. IDINABBA** (Mangalore-II).—

Will the Minister of State for Forests be pleased to state :—

(*a*) the number of cases wherein not only costly trees but also Sandal trees were removed stealthily and transported from Government Forest of South Kanara District during 1966-67 and 1967-68 ;

(*b*) cut of them in how many cases suits have been filed ;

(*c*) the number of persons arrested in this behalf ;

(*d*) whether they are not thinking of taking drastic action to prevent removing of trees stealthily ?

Sri ALUR HANUMANTHAPPA (Minister of State for Forests).—

(*a*) The number of cases wherein trees have been removed stealthily and transported from Government Forests of South Kanara District are as follows :

1966-67	...	236
1967-68	...	415

(*b*) Suits have been filed in 103 cases.

(*c*) 7 persons have been arrested.

(*d*) Action is being taken to prevent removing of trees stealthily.

ಶ್ರೀ ಬಿ. ಎಂ. ಇದಿನಬ್ಬ.—(ಅ) ಗೆ ಉತ್ತರವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ಅರಣ್ಯಗಳಿಂದ ಕಳ್ಳತನದಿಂದ ಮರಗಳನ್ನು ಕಡಿದು ಸಾಗಿಸಿದ ಒಟ್ಟು ಪ್ರಕರಣಗಳು 19 6-67 ರಲ್ಲಿ 236 ಮತ್ತು 1967-68 ರಲ್ಲಿ 415 ಎಂದು ಹೇಳಿದ್ದೀರಿ. ಇದರಲ್ಲಿ 103 ಪ್ರಕರಣಗಳ ಬಗ್ಗೆ ದಾವೆ ಹಾಕಲಾಗಿದೆ ಎಂದು ಹೇಳಿದ್ದೀರಿ. ಉಳಿದವುಗಳನ್ನು ಬಿಡಲಿಕ್ಕೆ ಕಾರಣ ಏನು ಸ್ವಾಮಿ ? ಅವರನ್ನು ಕಾಳಸಂತೆ ಖದೀಮರೆಂದು ಬಿಟ್ಟಿದ್ದೀರಾ ?

† ಶ್ರೀ ಆಲೂರು ಹನುಮಂತಪ್ಪ.—ಅವು ಕಾಂಪೌಂಡಬಲ್ ಕೇಸಸ್ ಆಗದೇ ಇದ್ದುದರಿಂದ 103 ಕೇಸಸ್ ಹಾಕಿದ್ದೇವೆ. ಎಷ್ಟೋ ಜನಕ್ಕೆ ಜುರ್ಮಾನೆ ಆಗಿದೆ, ಎಷ್ಟೋ ಜನಕ್ಕೆ ಶಿಕ್ಷೆ ಆಗಿದೆ. ಎಷ್ಟೋ ವಾಹನಗಳನ್ನು ಸ್ವಾಧೀನಪಡಿಸಿಕೊಂಡಿದೆ.

ಶ್ರೀ ಬಿ. ಎಂ. ಇದಿನಬ್ಬ.--ಎಷ್ಟು ಕೇಸಸ್‌ನಲ್ಲಿ ಶಿಕ್ಷೆ ಆಗಿದೆ ?

ಶ್ರೀ ಆಲೂರು ಹನುಮಂತಪ್ಪ.—ಕುಂದಾಪುರ ಡಿವಿಷನ್‌ನಲ್ಲಿ ಒಟ್ಟು 3 ಕೇಸ್‌ನಲ್ಲಿ ಶಿಕ್ಷೆ ಆಗಿದೆ. ಅದರಪೈಕಿ 1966-67 ರಲ್ಲಿ ಒಂದು ಇದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಕೆಲವು ಕೇಸುಗಳಲ್ಲಿ ಫಾರೆಸ್ಟ್ ಇಲಾಖೆಯವರೇ ಕಳ್ಳಸಾಗಾಣಿಕೆಯಲ್ಲಿ ಸೇರಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಅಂತಹ ಸಂದರ್ಭದಲ್ಲಿ ಅಫಿಷಿಯಲ್ಸ್ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಸಸ್‌ಪೆನ್‌ಷನ್ ಕೂಡ ಆಗಿದೆ. ಎನ್‌ಕ್ವೈರಿ ರಿಪೋರ್ಟ್ ಕೂಡ ಆಗಿದೆ.

ಶ್ರೀ ಜಿ. ಟಿ. ಗೋವಿಂದರೆಡ್ಡಿ.—ಅರಣ್ಯದಲ್ಲಿರುವ ಫಾರೆಸ್ಟ್ ಗಾರ್ಡ್‌ಗೆ ಅವರ ಆತ್ಮರಕ್ಷಣೆಗೆ ಶಸ್ತ್ರವನ್ನು ಏನಾದರೂ ಕೊಟ್ಟಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—ಅದು ಸರ್ಕಾರದ ಆಲೋಚನೆಯಲ್ಲಿದೆ.

ಶ್ರೀ ಎನ್. ಜಿ. ಹಾಲಪ್ಪ.—ಸ್ಯಾಂಡಲ್ ಮೇಲೆ ಎಷ್ಟು ಕೇಸಸ್ ಹಾಕಿದ್ದೀರಿ ? ಪೋಲೀಸಿನವರಿಗೆ ಎಷ್ಟು ದೂರು ಕೊಟ್ಟಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಸ್ಯಾಂಡಲ್ ಮೇಲೆ ಹಾಕುವ ಕೇಸಸ್ ಬೇರೆ ಬೇರೆ ರೀತಿಯಲ್ಲಿ ಅಫೆನ್ಸ್‌ಸ್ ಆಗುತ್ತದೆ. ತೆಫ್ಟ್ ಆಗಿದ್ದರೆ ಪೋಲೀಸನವರಿಗೆ ದೂರು ಕೊಟ್ಟು ಛಾರ್ಜ್‌ಷೀಟ್ ಹಾಕಿರುವುದು ಬೇಕಾದಷ್ಟು ಇವೆ. ಬೇರೆ ಬೇರೆ ರೀತಿಯಲ್ಲಿ ಅಫೆನ್ಸ್ ಆಗಿ ಕಾಂಪೌಂಡ್ ಮಾಡಿ ಸರ್ಕಾರಕ್ಕೆ ಹಣ ವಸೂಲು ಮಾಡಿರುವುದೂ ಬೇಕಾದಷ್ಟು ಇವೆ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ದಕ್ಷಿಣ ಕನ್ನಡ ಮತ್ತು ಹಾಸನ ಜಿಲ್ಲೆಯಲ್ಲಿ ಗಂಧದ ಮರವನ್ನು ಕದ್ದು ಮಂದಗೆರೆ ರೈಲ್ವೆ ಸ್ಟೇಷನ್ನಿನಲ್ಲಿ ರೈಲ್ವೇ ಪೋರ್ಟರ್ಸ್ ಮತ್ತು ರೈಲ್ವೆ ಅಧಿಕಾರಿಗಳು ಸೇರಿ ರಾಜಾಸ್ಥಾನಕ್ಕೆ ಕಳುಹಿಸುತ್ತಿದ್ದುದು ತಮ್ಮ ಗಮನಕ್ಕೆ ಬಂದಿದೆಯೇ? ರಾಜಾಸ್ತಾನದಲ್ಲಿ ಪ್ರಪಂಚದಲ್ಲಿ ಹೆಸರುವಾಸಿಯಾದಂಥ ಮೈಸೂರು ಗಂಧದ ಮರವನ್ನು ಮೆಟ್ರಿಕ್ ಟನ್ ಒಂದಕ್ಕೆ 15–20 ಸಾವಿರ ರೂಪಾಯಿನಂತೆ ಮಾರಾಟ ಮಾಡುತ್ತಿದ್ದಾರೆ. ಹೀಗೆ ಗಂಧದ ಮರಗಳನ್ನು ಕದ್ದು ಮಾರುವುದನ್ನು ರಾಜಸ್ಥಾನ ಸರ್ಕಾರದವರೂ ಮೈಸೂರು ಸರ್ಕಾರದವರೂ ಸೇರಿ ಹಿಡಿಯುವ ಪ್ರಯತ್ನ ಮಾಡುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಹೇಳಿದ್ದು ಜನರಲ್ ಕೊಶ್ಚನ್. ಮತ್ತೊಂದು ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಗಂಧದ ಕಳ್ಳಸಾಗಾಣಕೆ ದಿನೇ ಹೆಚ್ಚಾಗುತ್ತಾ ಇರುವುದರಿಂದ ಅದನ್ನು ಪತ್ತೆ ಮಾಡಲು ಸರ್ಕಾರದವರು ಏನಾದರೂ ಕಾರ್ಯಕ್ರಮ ತೆಗೆದು ಕೊಂಡಿದ್ದೀರಾ?

ಶ್ರೀ ಆಲೂರು ಹನುಮಂತಪ್ಪ.—ನಾವು ಆಂಟಿ ಸ್ಮಗ್ಲಿಂಗ್ ಸ್ಕ್ವಾಡ್‌ನು ಇಟ್ಟಿದ್ದೇವೆ. ಅವರು ಬೇಕಾದಷ್ಟು ಕೇಸಸ್‌ಗಳನ್ನು ಹಿಡಿದಿದ್ದಾರೆ. ಅದನ್ನು ಪತ್ರಿಕೆಗಳಲ್ಲಿ ನೋಡಿದರೆ ಗೊತ್ತಾಗುತ್ತದೆ. ಗಂಧದ ಮರದ ಮೇಲೆ ಸರ್ಕಾರದ ಸಂಪೂರ್ಣ ಅಧಿಕಾರ ಇದೆ. ಇದಲ್ಲದೆ ಯಾರು ಯಾರು ಅವರವರ ಫೀಲ್ಡ್‌ನಲ್ಲಿ ಗಂಧದ ಸಾಕಾಣಿಕೆ ಮಾಡುತ್ತಾರೋ ಅವರಿಗೆ ಮೈಂಟೆನನ್ಸ್ ಖರ್ಚು ಕೊಡುತ್ತೇವೆ ಅದನ್ನು ಮಾರಾಟ ಮಾಡಿದ ಮೇಲೆ ಬಂದ ಹಣದಿಂದ 100ಕ್ಕೆ 50 ಪರ್ಸೆಂಟ್ ಅಷ್ಟು ಇನ್‌ಸೆಂಟೀವ್ ಆಗಿ ಕೊಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದೆ.

ಶ್ರೀ ಸುಬ್ಬರಾವ್ ಹರ್ಸನಾಡ್.—ಕುಂದಾಪುರದಲ್ಲಿ ಗಂಧದಮರಗಳು ಕಳುವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು.

ಶ್ರೀ ಎಂ. ಎಂ. ಜಾಲಿಸಟ್ಗಿ.—1966–67 ಮತ್ತು 1967–68 ನೇ ಸಾಲಿನಲ್ಲಿ ಕಳ್ಳತನ ಮಾಡಿರುವ ಅಂಕೆಗಳನ್ನು ಕೊಟ್ಟಿದ್ದೀರಿ. ಇದರಲ್ಲಿ ಎಷ್ಟು ಕೇಸುಗಳು ಮುಗಿದು ಅವರಿಗೆ ಎಷ್ಟು ಜುಲ್ಮಾನೆ ವಸೂಲು ಮಾಡಲಾಗಿದೆ? ಉಗ್ರ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದರೆ ಯಾವ ರೀತಿ ಉಗ್ರ ಕ್ರಮವನ್ನು ಸರಕಾರ ಇದುವರೆಗೆ ತೆಗೆದುಕೊಂಡಿದೆ?

ಶ್ರೀ ಆಲೂರು ಹನುಮಂತಪ್ಪ.—ಎಷ್ಟು ಕೇಸುಗಳು ಎನ್ನುವ ವಿವರಗಳನ್ನು ಕೊಡಲಾಗಿದೆ ಇದರಲ್ಲಿ ಕೆಲವರಿಗೆ ಫೈನ್ ವಿಧಿಸಲಾಗಿದೆ ಮತ್ತು ಶಿಕ್ಷೆಗಳನ್ನೂ ಕೋರ್ಟಿನವರು ಕೊಟ್ಟಿದ್ದಾರೆ. ಇವರಿಂದ ಕಾಂಪನ್‌ಸೇಷನ್ ಮೂಲಕ ಬಂದಿರುವ ವಿವರಗಳು ಹೀಗಿವೆ: 1966–67 ರಲ್ಲಿ 40,250 ರೂಪಾಯಿಗಳು, 1968–69 ರಲ್ಲಿ 75,762 ರೂಪಾಯಿಗಳು, ಕುಂದಾಪುರದಲ್ಲಿ 1966–67 ರಲ್ಲಿ 19,967 ರೂಪಾಯಿಗಳು ಮತ್ತು 1968–69 ರಲ್ಲಿ 52,348 ರೂಪಾಯಿಗಳು ಬಂದಿವೆ.

Smt. WINNIFRED F. FERNANDES—Has it come to the notice of the Government that there is some understanding between the Forest Authorities and the persons who steal the sandalwood?

Sri ALUR HANUMANTHAPPA.—It is the information of the Hon. Member.

ಶ್ರೀ ಎಂ. ಎಂ. ಜಾಲಿಸಟ್ಗಿ.—ಮಾನ್ಯ ಮಂತ್ರಿಗಳು ಇಲ್ಲ ಉಗ್ರಕ್ರಮ ತೆಗೆದುಕೊಳ್ಳಲಾಗಿದೆ ಎಂದರೆ ಏನು ಉಗ್ರ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಆಲೂರು ಹನುಮಂತಪ್ಪ.—ಕೋರ್ಟಿನಲ್ಲಿ ಕೇಸುಗಳು ಬಂದ ಮೇಲೆ ಕೆಲವರಿಗೆ ಶಿಕ್ಷೆಗಳಾಗಿರುತ್ತವೆ ಮತ್ತು ಕೆಲವರಿಂದ ಫೈನ್ ಹಾಗೂ ಶಿಕ್ಷೆಗಳೂ ಆಗಿರುತ್ತವೆ. ರೂಲ್ಸು ಪ್ರಕಾರ ಮ್ಯಾಕ್ಸಿಮಂ ಹಾಗೂ ಮಿನಿಮಂ ಪನಿಷ್‌ಮೆಂಟ್ ಎಂದು ಇರುತ್ತದೆ; ಇದರಂತೆ ಇಲಾಖೆಯ ಅಧಿಕಾರಿಗಳು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಮತ್ತು ಫೈನ್‌ಗಳನ್ನು ರಿಕವರಿ ಮಾಡುತ್ತಾರೆ.

ಶ್ರೀ ಎಂ. ನಾಗಪ್ಪ.—ಸೂಟ್ಸ್ ಎಂದು ಹೇಳಿದ್ದೀರಿ ? ಇವು ಸಿವಿಲ್ ಸೂಟ್ಸ್‌ಗಳೇ ಇಲ್ಲವೇ ಕ್ರಿಮಿನರ್ ಸೂಟ್ಸ್‌ಗಳೇ ತಿಳಿಸುತ್ತೀರಾ ಮತ್ತು ಉಗ್ರ ಕ್ರಮ ತೆಗೆದುಕೊಳ್ಳಲಾಗಿದೆ ಎಂದರೆ ಯಾವ ರೀತಿ ಕ್ರಮ ತೆಗೆದುಕೊಳ್ಳಲಾಗಿದೆ ಹೇಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಇವೆಲ್ಲಾ ಕ್ರಿಮಿನಲ್ ಕೇಸುಗಳು. ಇವು ಕ್ರಿಮಿನಲ್ ಪ್ರೊಸೀಜರು ಕೋಡು ಪ್ರಕಾರ ಆದ ಕೇಸುಗಳು. ನಿಯಮದಂತೆ ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆ.

Lists of Elected Members of Village Panchayats

171. **Sri S. H. PUTTARANGANATH** (Belur).—

Will the Minister for Development be pleased to state :—

(*a*) whether the Government is maintaining the list of elected members of Village Panchayats, Taluk Boards and Municipal Councils belonging to Scheduled Castes and Tribes ;

(*b*) whether there is a proposal before the Government to compile such lists and place it on the Table of the House for the information of the members ;

(*c*) the number of members elected to the above Bodies, other than to the reserved seats, belonging to Scheduled Castes and Tribes ?

Sri B. L. GOWDA (Deputy Minister for Co-operation).—

(*a*) The Government are not maintaining such lists.

(*b*) No.

(*c*) Such information is not also maintained. However, if the member so desires it will be obtained and furnished to him.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಇಲ್ಲಿ ಪಟ್ಟಿಗಳನ್ನು ಇಡುತ್ತಿಲ್ಲ ಎಂದು ಹೇಳಿದರೆ ಸರಕಾರ ಈ ಸಭೆಗೆ ಉತ್ತರ ಕೊಡುವಾಗ ಮಿಸ್‌ಲೀಡ್ ಮಾಡುತ್ತಾರೆ ಎಂದು ಅರ್ಥ ಮಾಡಿಕೊಳ್ಳೋಣವೇ ?

† ಶ್ರೀ ಬಿ. ಎಲ್. ಗೌಡ.—ಸರಕಾರದವರು ಪಟ್ಟಿ ಇಟ್ಟಿಲ್ಲ. ಆದರೆ ಪಂಚಾಯಿತಿಗಳಲ್ಲಿ ಹಾಗೂ ತಾಲ್ಲೂಕು ಬೋರ್ಡ್‌ಗಳಲ್ಲಿ ಮತ್ತು ಜಿಲ್ಲೆಗಳಲ್ಲಿರುವ ಡೆಪ್ಯುಟಿ ಕಮಿಷನರುಗಳು ಈ ಪಟ್ಟಿಗಳನ್ನು ಮಾಡಿರುತ್ತಾರೆ. ಇಂತಹ ಪಟ್ಟಿಗಳು ಬೇಕಾದರೆ ಅವರಿಂದ ತರಿಸಿಕೊಡಬಹುದು.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಉತ್ತರ (ಸಿ) ನಲ್ಲಿ ಹೀಗೆ ಇದೆ :

> "Such information is not also maintained. However, if the member so desires it will be obtained and furnished to him"

ಎಂದರೆ ನಾನು ಕೇಳಿಲ್ಲ ಅದರಿಂದ ನನಗೆ ಕೊಡಬೇಕಾಗಿಲ್ಲ ಎಂದು ಅರ್ಥ ಮಾಡೋಣವೇ ?

ಶ್ರೀ ಬಿ. ಎಲ್. ಗೌಡ.—ಸರಕಾರದವರು ಇಂತಹ ಒಂದು ಪಟ್ಟಿಯನ್ನು ಕ್ರೋಡೀಕರಿಸಿ ಮಾಡಿಟ್ಟಿಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ತರಿಸಿಕೊಡಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹರಿಜನರ ಹಾಗೂ ಗಿರಿಜನರ ಮೀಸಲು ಸ್ಥಾನಗಳನ್ನು ಹತ್ತು ಹತ್ತು ವರ್ಷಕ್ಕೊಂದು ಸಾರಿ ನಮ್ಮ ಮುಂದೆ ಇಡಬೇಕೆಂದು ಬರುತ್ತಿರುವುದರಿಂದ ಇಂತಹ

ಒಂದು ಪಟ್ಟಿಯನ್ನು ತಯಾರು ಮಾಡಿ ಸರಕಾರ ಇಡಬೇಕಾದುದು ಅಗತ್ಯ. ಆದುದರಿಂದ ಈಗಿನಿಂದಲಾದರೂ ಸರಕಾರದವರು ಇಂತಹ ಒಂದು ಪಟ್ಟಿಯನ್ನು ಮಾಡಲು ಕ್ರಮ ಕೈಗೊಳ್ಳುತ್ತಾರೆಯೇ ?

ಶ್ರೀ ಬಿ. ಎಲ್. ಗೌಡ.—ಈಗಾಗಲೇ ಡೆಪ್ಯೂಟಿ ಕಮಿಷನರ ಕಡೆಯಲ್ಲಿ ಇಂತಹ ವಿವರಗಳಿರುವ ಪಟ್ಟಿಗಳಿವೆ. ಇವನ್ನು ಅವರಿಂದ ತರಿಸಿಕೊಂಡು ಮಾಡಬೇಕಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ರಾಜ್ಯಾಂಗದ ಪ್ರಕಾರ ಇಂತಹ ಮೀಸಲು ಸ್ಥಾನಗಳ ಪಟ್ಟಿಯನ್ನು ಮಾಡುವುದು ಸರಕಾರದ ಕರ್ತವ್ಯವಾಗಿದೆ. ಪಂಚಾಯಿತಿಗಳಲ್ಲಿರುವ ಹಾಗೂ ತಾಲ್ಲೂಕು ಬೋರ್ಡುಗಳಲ್ಲಿರುವ ಮೀಸಲು ಸ್ಥಾನಗಳ ಪಟ್ಟಿಯಂತೆ ಚುನಾವಣೆಗಳನ್ನು ಮಾಡುವಾಗ ಸಂಖ್ಯಾ ಬಲದಿಂದ ಮಾಡಬೇಕಾಗಿದೆ. ಇದಕ್ಕನುಕೂಲವಾಗುವಂತೆ ಸರಕಾರ ಇಂತಹ ಪಟ್ಟಿಗಳನ್ನು ತಯಾರಿಸಲು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಬಿ. ಎಲ್. ಗೌಡ.—ಸರಕಾರದಲ್ಲಿ ಇಂತಹ ಪಟ್ಟಿ ಮಾಡಿಲ್ಲ. ಎಲ್ಲ ಕಡೆ ಇರುವ ಪಂಚಾಯಿತಿಗಳಲ್ಲಿ ಹಾಗೂ ತಾಲ್ಲೂಕು ಬೋರ್ಡುಗಳಲ್ಲಿ ಇಂತಹ ಅಂಕೆ ಅಂಶಗಳು ಇರುವ ಪಟ್ಟಿಗಳಿವೆ. ಇದನ್ನು ಕ್ರೋಡೀಕರಿಸಿ ಪಟ್ಟಿ ತಯಾರು ಮಾಡಬೇಕಾಗಿದೆ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಇಂತಹ ಷೆಡ್ಯೂಲ್ ಕ್ಯಾಸ್ಟ್ ಹಾಗೂ ಟ್ರೈಬ್ಸ್‌ಗಳ ಸಂಗಡದ ಸಮಿತಿಯ ಸದಸ್ಯರುಗಳ ಹೆಸರನ್ನು ಗೆಜೆಟ್ಟಿನಲ್ಲಿ ಪ್ರಕಟ ಮಾಡುತ್ತಿಲ್ಲವೆ ?

ಶ್ರೀ ಬಿ. ಎಲ್. ಗೌಡ.—ಪ್ರಕಟಿಸಲಾಗುತ್ತಿದೆ.

Construction of Bunds in Handadi Village

180. **Sri S. JAYAPRAKASH SHETTY** (Brahmavar).—

Will the Minister of State for Minor Irrigation be pleased to state:—

(*a*) whether it has come to the notice of Government that hundreds of acres of cultivable land in Dugganakat e of Handadi village, Udipi taluk has submerged due to floods of Seetha river during rainy season ;

(*b*) the difficulties in the way of Government in not implementing the request made by the villagers for construction of small bunds, costing about fifty thousand rupees only ?

Smt. BASAVARAJESHWARI (Deputy Minister for Social Welfare) [On behalf of Sri A. J. Doddameti (Minister of State for Minor Irrigation)].—

(*a*) Yes. About 4 acres of land.

(*b*) It is not possible to avert the said difficulties by constructing small bunds. The matter is being examined by the Mysore Engineering Research Station in solving the difficulties caused to the adjacent lands by floods of Seetha river.

The question of averting the trouble caused to neighbouring lands by the floods of Seetha river is being considered by the Mysore Technical Research Centre.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.- ನಾಲ್ಕು ಎಕರೆ ಭೂಮಿ ಎಂದು ಹೇಳುವುದು ಸತ್ಯಕ್ಕೆ ದೂರವಾದ ಅಂಶವಾಗಿದೆ. ಇದರ ಬಗ್ಗೆ ಸರಕಾರ ಏನು ಹೇಳುತ್ತದೆ ?

† ಶ್ರೀಮತಿ ಬಸವರಾಜೇಶ್ವರಿ.—ನಮಗೆ ವರದಿ ಬಂದಿರುವ ಪ್ರಕಾರ ಸರ್ವೇ ನಂಬರುಗಳು 5, 12, 19, 3–14, ಇತ್ಯಾದಿ ಭೂಮಿಗಳಲ್ಲಿ ಸುಮಾರು ನಾಲ್ಕು ಎಕರೆಗಳಷ್ಟು ಆಗಿದೆ ಎಂದು ಇದೆ. ಇದರಲ್ಲಿ ಇನ್ನೂ ಹತ್ತಾರು ಎಕರೆಗಳು ಇದೆ ಎಂದು ಹೇಳುತ್ತಿರುವುದರಿಂದ ಇದನ್ನು ಪುನಃ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—ಒಡ್ಡುಗಳನ್ನು ಮಾಡುವುದರಿಂದ ಸಾಧ್ಯವಿಲ್ಲ ಎಂದು ಇಲ್ಲಿ ಹೇಳಿದೆ. ಆದರೆ ತಾವು ಪರಿಶೀಲನೆ ಮಾಡುತ್ತೇವೆ ಎಂದು ಇಲ್ಲಿ ಹೇಗೆ ಹೇಳುತ್ತೀರಿ ?

ಶ್ರೀಮತಿ ಬಸವರಾಜೇಶ್ವರಿ.—ಎನ್.ಇ.ಎಸ್.ಮಾಡಲ್ ಸ್ಕೀಂ ಪ್ರಕಾರ ಇದನ್ನು ಪರಿಶೀಲನೆ ಮಾಡಿ ಇದಕ್ಕೆ ಖಾಯಂ ಆದ ಪರಿಹಾರವನ್ನು ಕಂಡು ಹಿಡಿಯಬೇಕೆಂದು ಇದನ್ನು ಎಂ.ಇ.ಆರ್ ಎಸ್. ಕಮಿಟಿಗೆ ರೆಫರ್ ಮಾಡಲಾಯಿತು. ಅವರು ಡೀಟೇಲ್ಸ್‌ಗಳನ್ನು ಕಳುಹಿಸಿದ ನಂತರ ಬೇಕಾದರೆ ಇದರ ಅಸಿಸ್ಟೆಂಟು ಇಂಜಿನೀಯರವರ ಕಡೆಗೆ ಕಳುಹಿಸಿ ಅವರಿಂದ ವರದಿ ತರಿಸ ಬೇಕಾಗಿದೆ. ಅವರು ಯಾವುದಾದರೂ ಖಾಯಂ ಆದ ಪರಿಹಾರ ಕ್ರಮವನ್ನು ಮಾಡಬೇಕೆಂದು ಹೇಳಿದರೆ ಅದನ್ನು ಸರಕಾರ ವಿಚಾರ ಮಾಡಲಾಗುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.—ಇದು ಒಂದು ಸಣ್ಣ ನೀರಾವರಿ ಯೋಜನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇರೆ ಯಾವ ಯೋಜನೆಯೂ ಇಲ್ಲ. ಇದಕ್ಕಾಗಿ ಸರಕಾರ ಐವತ್ತು ಸಾವಿರ ಖರ್ಚು ಮಾಡಿ ಶೀಘ್ರವಾಗಿ ಇದರ ಕಾರ್ಯಕ್ರಮ ಮಾಡಲು ಪ್ರಯತ್ನ ಮಾಡುತ್ತಾರೆಯೇ ?

ಶ್ರೀಮತಿ ಬಸವರಾಜೇಶ್ವರಿ.—ಎನ್.ಇ.ಎಸ್. ಕಮಿಟಿಯಿಂದ ವರದಿ ಬೇಗ ಬಂದರೆ ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡಬಹುದು. ಇದು ಬಂದ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

Selection of Probationers by the P.S.C.

211. **Sri SIDDAIAH KASHIMATH** (Shirahatti).—

Will the Chief Minister be pleased to state :—

(*a*) the number of I and II grade probationers who have been selected by the Public Service Commission during the year 1969–70, up to a latest convenient date ;

(*b*) why the orders of appointment of II Grade officers have not been issued so far by the Government ;

(*c*) the reasons for the delay ?

Sri VEERENDRA PATIL (Chief Minister).—

(*a*) Under the Gazetted Probationers Recruitment Rules, 1966, in all 129 candidates have been selected ; out of these 26 candidates have been selected for Class I Posts and the remaining for Class II Posts.

(*b*) and (*c*) Since some of the candidates selected for Class I posts were included for appointment to Class II posts also, assignment to various services under Class II was required to be deferred till the candidates appointed to Class I Posts reported for duty. Appointment orders will be issued as soon as preliminaries such as Medical Examination, verification of antecedent are completed.

ಶ್ರೀ ಸಿದ್ಧಯ್ಯ ಕಾಶೀಮಠ್.—ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಇಲಾಖೆಗಳ ಸಹಕಾರವನ್ನು ಪಡೆದು ಲೋಕ ಸೇವಾ ಆಯೋಗದವರು ನಿರ್ಧಾರ ಮಾಡುತ್ತಾರೆಯೇ ?

†ಶ್ರೀ ವೀರೇಂದ್ರ ಪಾಟೀಲ್.—ಲಿಸ್ಟ್ ಮಾಡಿ ಪಟ್ಟಿಗಳನ್ನು ಸರಕಾರಕ್ಕೆ ಲೋಕ ಸೇವಾ ಆಯೋಗದವರು ಕಳುಹಿಸುತ್ತಾರೆ. ಸರಕಾರದವರೇ ಒಂದನೇ ಹಾಗೂ ಎರಡನೇ ದರ್ಜೆಗಳಿಗೆ ಅಯ್ಕೆಗಳನ್ನು ಮಾಡುತ್ತಾರೆ ಮತ್ತು ಅವರು ಕೊಟ್ಟಿರುವ ಲಿಸ್ಟ್ ಪ್ರಕಾರವೇ ಮಾಡುತ್ತಾರೆ. ಇದರಲ್ಲಿ ಯಾವ ಯಾವ ಇಲಾಖೆಗೆ ಎಷ್ಟು ಜನರನ್ನು ಆರಿಸಬೇಕು ಮತ್ತು ಇದರಲ್ಲಿ ಷೆಡ್ಯೂಲು ಕ್ಯಾಸ್ಟ್ ಹಾಗೂ ಟ್ರೈಬ್ಸ್‌ಗಳಿಗೆ ರಿಸರ್ವೇಷನ್ ಯಾವ ರೀತಿ ಮಾಡಬೇಕು ಎನ್ನುವುದನ್ನು ನೋಡಿ ಮಾಡುವಾಗ ಸ್ವಲ್ಪ ಕಾಲ ಬೇಕಾಗುತ್ತದೆ. ಬಹುಮಟ್ಟಿಗೆ ಪಟ್ಟಿಯಂತೆಯೇ ಆರಿಸಲಾಗುತ್ತದೆ.

ಶ್ರೀ ಸಿದ್ಧಯ್ಯ ಕಾಶೀಮಠ್.—ಈಗ ಎರಡನೆಯ ದರ್ಜೆಯ ಅಭ್ಯರ್ಥಿಗಳನ್ನು ನೇಮಕ ಮಾಡುವುದಕ್ಕೆ ಸರ್ಕಾರದವರು ಏರ್ಪಾಟು ಮಾಡುತ್ತಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಮೊದಲನೆಯ ದರ್ಜೆಯ ಹುದ್ದೆಗಳಿಗೆ ಆಯ್ಕೆ ಮಾಡಲಾಗಿದ್ದು ಆಯಾ ಹುದ್ದೆಗಳಿಗೆ ಪೋಸ್ಟಿಂಗ್ಸ್ ಮಾಡಲಾಗಿದೆ. ಎರಡನೆಯ ದರ್ಜೆಯ ಹುದ್ದೆಗಳಿಗೆ ಆಯ್ಕೆ ಮಾಡಲಾಗಿದೆ. ವೈದ್ಯಕೀಯ ಪರೀಕ್ಷೆ ಮುಗಿದಮೇಲೆ ಅವರನ್ನೂ ಸಹ ಪೋಸ್ಟಿಂಗ್ಸ್ ಮಾಡಲಾಗುತ್ತದೆ.

ಶ್ರೀ ಎಸ್. ಎ. ಚನ್ನೇಗೌಡ.—ಈಗ ಒಂದನೇ ದರ್ಜೆಯ ಹುದ್ದೆಗೆ ಆಯ್ಕೆಯಾದ ಕೆಲವರನ್ನು ಎರಡನೆಯ ದರ್ಜೆಯ ಹುದ್ದೆಗೆ ನೇಮಕ ಮಾಡಲಾಗಿದೆ. ಇದರಿಂದ ವೇತನಗಳಲ್ಲಿ ವ್ಯತ್ಯಾಸವಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಒಬ್ಬರದ್ದು ಮಾತ್ರ ಆಗಿದೆ. ಇದಕ್ಕೆ ಕಾರಣ ಒಬ್ಬರ ಹೆಸರೇ ಮೊದಲನೆ ಮತ್ತು ಎರಡನೆಯ ದರ್ಜೆಯ ಹುದ್ದೆಗಳ ಪಟ್ಟಿಯಲ್ಲಿ ಇರುವುದಕ್ಕೆ ಕಾರಣ. ಈಗ ಮೊದಲನೆಯ ಮತ್ತು ಎರಡನೆಯ ದರ್ಜೆಯ ಹುದ್ದೆಗಳ ಪಟ್ಟಿಯನ್ನು ಪ್ರಿಫರೆನ್ಸ್ ಮೇಲೆ ಫೈನಲೈಸ್ ಮಾಡಲಾಗಿದೆ. ಈಗ ಮೊದಲನೆಯ ದರ್ಜೆಯ ಅಭ್ಯರ್ಥಿಗಳಿಗೆ ಅಪಾಯಿಂಟ್‌ಮೆಂಟ್ ಆರ್ಡರ್ ಕೊಡಲಾಗಿದೆ. ಎರಡನೆಯ ದರ್ಜೆಯ ಅಭ್ಯರ್ಥಿಗಳಿಗೆ ಅಪಾಯಿಂಟ್‌ಮೆಂಟ್ ಆರ್ಡರನ್ನು ಇಷ್ಟರಲ್ಲೇ ಕೊಡಲಾಗುತ್ತದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಈಗ ಪಬ್ಲಿಕ್ ಸರ್ವಿಸ್ ಕಮೀಷನ್‌ನಲ್ಲಿ ಮೆಂಬರುಗಳಾಗಿರುವವರಲ್ಲಿ ಬಹಳ ಜನ ಅಧಿಕಾರಿಗಳು. ಕೆಲವರನ್ನು ನಾಮಿನೇಟ್ ಮಾಡಲಾಗಿದೆ. ಇದರ ಬದಲು ಅಲ್ಲಿ ಚೆನ್ನಾಗಿ ಕೆಲಸ ನಡೆಯಬೇಕಾದರೆ, ನ್ಯಾಯವಾಗಿ ಕೆಲಸಮಾಡಬೇಕಾದರೆ ಹೈಕೋರ್ಟಿನ ಒಬ್ಬ ಜಡ್ಜರನ್ನು ಕಾಯಮ್ ಆಗಿ ಚೇರ್‌ಮನ್‌ಷಿಪ್ ಕೊಟ್ಟು ನೇಮಿಸುವುದು ಒಳ್ಳೆಯದಲ್ಲವೇ ?

Mr. SPEAKER.— It is disallowed, because it is beyond the scope of the question.

Sri G. CHANDRAKANTH.—In answer to (b) it is stated that appointment orders will be issued as soon as preliminaries such as Medical Examination, verification of antecedents are completed. Is it not a fact that there have been writ petitions pending in the High Court in connection with the selection and that is the reason why Government is still thinking over the matter ?

Sri VEERENDRA PATIL.—I don't think so. Even if there are any writ petitions, we will honour the orders of the High Court. If there is a stay order, we will stay, otherwise we proceed.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸರ್ಕಾರದವರು ಎರಡನೆಯ ದರ್ಜೆಯ ಅಧಿಕಾರಿಗಳನ್ನು ನೇಮಕ ಮಾಡದೆ ಇಲ್ಲಿಯವರೆಗೆ ತಡೆಹಿಡಿದಿರುವುದಕ್ಕೆ ಕಾರಣ ಏನು ? ಮತ್ತು ಇವರನ್ನು ಯಾವಾಗ ನೇಮಕ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಕಾರಣ ಈಗಾಗಲೇ ಹೇಳಿದೆ. ಎರಡನೆಯ ದರ್ಜೆಯ ಕೆಲವು ಅಧಿಕಾರಿಗಳ ಹೆಸರು ಮೊದಲನೆಯ ದರ್ಜೆಯ ಹುದ್ದೆಗಳಲ್ಲಿಯೂ ಸಹ ಇತ್ತು ಮತ್ತು ಮೊದಲನೆಯ ದರ್ಜೆಯ ಒಬ್ಬ ಅಧಿಕಾರಿಯ ಹೆಸರು ಎರಡನೆಯ ದರ್ಜೆಯಲ್ಲಿ ಇತ್ತು. ಈ ಕಾರಣದಿಂದ

(ಶ್ರೀ ವೀರೇಂದ್ರ ಪಾಟೀಲ್)

ಮೊದಲನೆಯ ದರ್ಜೆಯ ಅಧಿಕಾರಿಗಳನ್ನು ಮೊದಲು ಪೋಸ್ಟಿಂಗ್ ಮಾಡಿ ನಂತರ ಎರಡನೆಯ ದರ್ಜೆಯ ಅಧಿಕಾರಿಗಳನ್ನು ಪೋಸ್ಟಿಂಗ್ ಮಾಡುವುದು ಒಳ್ಳೆಯದೆಂದು ತೀರ್ಮಾನ ಮಾಡಿದ್ದರಿಂದ ಈ ರೀತಿ ತಡವಾಯಿತು. ಅಲ್ಲದೆ ಕ್ಲಾಸ್-1 ಆಫೀಸರ್ಸ್ ಏನಿದ್ದಾರೆ ಅವರು ರೆವಿನ್ಯೂ ಇಲಾಖೆಯಲ್ಲಿಯೇ ಕೆಲಸಬೇಕೆಂದು ಕೇಳಿಕೊಳ್ಳುತ್ತಿದ್ದರು. ಅದನ್ನು ಲೆಕ್ಕಕ್ಕೆ ತೆಗೆದುಕೊಂಡು ಆ ಬಗ್ಗೆ ಲಾ ಡಿಪಾರ್ಟ್‌ಮೆಂಟಿನ ಸಲಹೆ ತೆಗೆದುಕೊಂಡು ಅವರ ಅಭಿಪ್ರಾಯದ ಪ್ರಕಾರ ಕ್ಲಾಸ್-1 ಆಫೀಸರ್ಸ್‌ನ್ನು ಈಗ ಅಪಾಯಿಂಟ್ ಮಾಡಲಾಗಿದೆ. ಕ್ಲಾಸ್-2 ಆಫೀಸರ್ಸ್‌ದ್ದು ಕೂಡ ಫೈನಲೈಸ್ ಆಗಿದೆ. ಅಪಾಯಿಂಟ್‌ಮೆಂಟ್ ಆರ್ಡರ್ಸ್ ಆಗುವುದಕ್ಕೆ ಬಹಳ ದಿವಸವಾಗುವುದಿಲ್ಲ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಸುಮಾರು 4 ವರ್ಷಗಳ ಹಿಂದೆ ಸ್ಥಳೀಯ ಅಭ್ಯರ್ಥಿಗಳಾಗಿ ಯಾರು ಕೆಲಸ ಮಾಡುತ್ತಿದ್ದಾರೆ ಅಂತಹವರನ್ನು ಕಾಯಂಗೊಳಿಸಬೇಕೆಂದು ಪಬ್ಲಿಕ್ ಸರ್ವಿಸ್ ಕಮೀಷನ್‌ಗೆ ಆದೇಶ ಕೊಟ್ಟು ತಾ. 1-11-1969ರಿಂದ ಸ್ಥಳೀಯ ಅಭ್ಯರ್ಥಿಗಳನ್ನು ಕೆಲಸಕ್ಕೆ ತೆಗೆದುಕೊಳ್ಳಬಾರದು ಎಂದು ಆದೇಶ ಕೊಟ್ಟಿರುವುದು ನಿಜವೇ? ಮತ್ತು 4-5 ವರ್ಷಗಳಿಂದ ಯಾರು ಯಾರು ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೋ ಅಂತಹವರನ್ನು ಕಾಯಂ ಮಾಡುವುದಕ್ಕೆ ತೀರ್ಮಾನ ಕೈಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಪ್ರತ್ಯೇಕವಾದ ಪ್ರಶ್ನೆ ಕೇಳುತ್ತಿದ್ದಾರೆ. ಈಗ ಇಲ್ಲಿ ಲೋಕಸೇವಾ ಆಯೋಗದವರಿಂದ ಪ್ರೊಬೇಷನರುಗಳ ಆಯ್ಕೆ ಬಗ್ಗೆ ಪ್ರಶ್ನೆ ಬಂದಿರುವುದು. ಆದಕಾರಣ ಮಾನ್ಯ ಸದಸ್ಯರು ಕೇಳುತ್ತಿರುವ ಪ್ರಶ್ನೆ ಪ್ರತ್ಯೇಕವಾಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಯಾರು ಯಾರು ಯಾವ ಯಾವ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ಇಷ್ಟಪಡುತ್ತಾರೋ ಅಂತಹವರನ್ನು ಆಯಾ ಇಲಾಖೆಗೇ ಪೋಸ್ಟ್ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅವರು ಬೇಡುವಂಥ ಇಲಾಖೆಗೆ ಅವರನ್ನು ಪೋಸ್ಟಿಂಗ್ ಮಾಡುವುದಕ್ಕಾಗುವುದಿಲ್ಲ. ಒಂದು ಸಾರಿ ಸೆಲೆಕ್ಟ್ ಮಾಡಿದಮೇಲೆ ಷೆಡ್ಯೂಲ್‌ಕ್ಯಾಸ್ಟ್, ಷೆಡ್ಯೂಲ್ ಟ್ರೈಬ್ಸ್ ಮತ್ತು ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ರಿಜರ್ವ್ ವೇಕೆನ್ಸಿಮೇಲೆ ಎಲ್ಲಾ ಇಲಾಖೆಗಳಲ್ಲಿಯೂ ಕೆಲವು ಸ್ಥಾನಗಳನ್ನು ಕೊಡುವುದು ಇರುತ್ತದೆ. ಈಗ ಎಲ್ಲರೂ ರೆವಿನ್ಯೂ ಇಲಾಖೆಯೇ ಬೇಕು, ಅಸಿಸ್ಟೆಂಟ್ ಕಮೀಷನರ್ ಪೋಸ್ಟೇ ಬೇಕು ಎಂದು ಕೇಳಿದರೆ ಕೊಡುವುದಕ್ಕಾಗುವುದಿಲ್ಲ. ಪೋಸ್ಟಿಂಗ್ ಮಾಡುವುದರಲ್ಲಿ ಹೆಚ್ಚು ಕಡಿಮೆಯಾದರೆ ಅನ್ಯಾಯವಾದವರು ಕೋರ್ಟಿಗೆ ಹೋಗುತ್ತಾರೆ. ಆ ರೀತಿ ಆದರೆ ಮತ್ತೆ ನಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿಯಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಲಾ ಡಿಪಾರ್ಟ್‌ಮೆಂಟಿನಿಂದ ಸವಿಸ್ತಾರವಾಗಿ ಎಗ್ಜಾಮಿನ್ ಮಾಡಿಸಿ ನಂತರ ಪೋಸ್ಟಿಂಗ್ಸ್ ಮಾಡುತ್ತೇವೆ.

Hubli-Dharwar Planning Board

235. **Sri R. G. WALI** (Hubli).—

Will the Minister of State for Municipal Administration be pleased to state :—

(*a*) since when the City (Hubli-Dharwar) Planning Board is functioning ;

(*b*) the number of times the Board has met ;

(*c*) the important decisions taken by the Board ?

Sri B. M. PATIL (Minister of State for Municipal Administration).—

(*a*) The Hubli-Dharwar Planning Authority is functioning since the year 1969.

(b) 5 times.

(c) (i) Preparation of Outline Development Plan for the Hubli-Dharwar City Local Planning Area.

(ii) Approval of layouts in the local Planning Area.

Sri R. G. WALI.—I learn that the Planning Board was appointed prior to the general elections to the Corporation and that Board did not function. What were the reasons? Even if this Board has met five times, is it true that it has met only after I sent this question?

† **Sri B. M. PATIL.**—In fact the Board was constituted in December 1966. After that there was a protracted correspondence between the Government and the Planning Authority regarding the functions, finances and the staff of the Planning Authority. So far, the Planning Authority has met five times and transacted business.

Sri R. G. WALI.—It is stated that Outline Development Plan for the Hubli-Dharwar City Local Planning Area is being prepared. I learn that there is only one Assistant Engineer for this work. How can this Assistant Engineer prepare a master plan for a developing City like Hubli-Dharwar? Is the Government thinking of appointing a competent person to prepare the master plan?

Sri B. M. PATIL.—The Assistant Director of Town Planning is the Secretary for the Planning Board, and whatever assistanee the Planning Authority would need, would be forthcoming from the Director of Town Planning.

Sri K. H. PATIL.—Is the Government aware of the fact that the town planning work has almost been completed and only implementation is stopped on accouut of non co-operation on the part of the Municipality?

Sri B. M. PATIL.—It is not correct. The Planning authority met so many times and is now concentrating on preparation of outline development plans for the Hubli-Dharwar City Local Planning Area.

Delay in Payment of Salaries to Non-Government Secondary School Teachers in Dharwar Division

105. **Sri D. S. NADKARNI** (Ankola).—

Will the Minister for Education be pleased to state :—

(a) the number of non-Government Secondary Schools in Dharwar Division where the salaries of teachers was paid within 5th day of every month under the direct salary payment system ;

(b) the number of advance salary grant bills return to the Non-Government Secondary Schools for compliance and re-submission for some mistake in calculation or any other reason by the D. E. Os. in different Districts?

Sri N. M. KOTRABASIAH SOGI (Deputy Minister for Education).—

(*a*) During the year 1969-70 the following are the average number of Non-Government Secoundary Schools which were paid within 5th day of every month ;

(1) Dharwar	...	110
(2) Belgaum	...	80
(3) Bijapur	...	53
(4) North-Kanara	...	66

(*b*) The following are the average number of advance grant bills returned to the schools on account of incomplete information or want of necessary enclosures and not arithmetical mistakes :—

(1) Dharwar	...	25
(2) Belgaum	...	40
(3) Bijapur	...	17
(4) North-Kanara	...	15

ಶ್ರೀ ಡಿ. ಎಸ್. ನಾಡಕರ್ಣಿ.—ನನ್ನ (ಅ) ಪ್ರಶ್ನೆಗೆ ಉತ್ತರ ಕೊಡುತ್ತಾ ಧಾರವಾಡದಿಂದ 25, ಬೆಳಗಾಂನಿಂದ 40, ಬಿಜಾಪುರದಿಂದ 17, ಉತ್ತರಕನ್ನಡದಿಂದ 15 ಬಿಲ್‌ಗಳನ್ನು ವಾಪಸ್ ಮಾಡಲಾಗಿದೆ ಎಂದು ಹೇಳಿದ್ದೀರಿ. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಬಿಲ್‌ಗಳನ್ನು ಸಣ್ಣ ಸಣ್ಣ ತಪ್ಪಿನ ಕಾರಣಗಳಿಗೋಸ್ಕರ ವಾಪಸ್ ಮಾಡುತ್ತಿದ್ದರೆ ಅಧಿಕಾರಿಗಳು ಲಂಚ ತೆಗೆದುಕೊಳ್ಳುವುದಕ್ಕೆ ಅಸ್ಪದವಾಗುವುದಕ್ಕೆ ಕಾರಣವಾಗುವುದಿಲ್ಲವೇ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ. - ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ಬಿಲ್‌ಗಳ ಜೊತೆಯಲ್ಲಿ ಅಗತ್ಯವಾಗಿರುವಂಥ ಎನ್‌ಕ್ಲೋಸರ್‌ನ್ನು ಹಾಕಿ ಕಳಿಸದೇ ಇರುವುದರಿಂದ ಮತ್ತು ರೆಕಾರ್ಡ್ಸ್‌ನ್ನು ಸರಿಯಾಗಿ ಬಿಲ್ಡ್ ಅಪ್ ಮಾಡದೇ ಇರುವುದರಿಂದ ಬಿಲ್‌ಗಳನ್ನು ವಾಪಸು ಕಳಿಸಬೇಕಾಗುತ್ತದೆ. ಈ ಕಾರಣಕ್ಕಾಗಿ ತಡವಾಗಿದೆ. ಈ ವಿಚಾರದಲ್ಲಿ ನಮ್ಮ ಇಲಾಖೆಯ ಅಧಿಕಾರಿಗಳಿಂದ ಯಾವ ತಪ್ಪೂ ಆಗಿಲ್ಲ.

Mr. SPEAKER.—Now Question Hour is over.

SHORT NOTICE QUESTION AND ANSWER

Filling up of the Posts of Assistant Excise Inspector by P. S. C.

20. **Sri M. NAGAPPA** (Raichur) —

Will the Minister for Finance, Planning and Youth Welfare be pleased to state :—

(*a*) whether the present Assistant Excise Inspectors have been appointed about two years back ;

(*b*) whether these employees were retrenched from the Mineral Development and Survey Settlement Offices due to the abolition of those offices ;

(*c*) whether it is a fact that Public Service Commission has called for the applications for filling up the vacancies of the posts of Assistant Excise Inspectors ;

(*d*) whether the Government propose to recommend the cases or these employees to be treated as permanent by regularsing theif services;

(*e*) if not, the reasons for the same?

Sri RAMAKRISHNA HEGDE (Minister for Finance, Planning and Youth Welfare).—

(*a*) Yes.

(*b*) Not all but some of the candidates appointed are the employees retrenched from the Mineral Development and Survey Settlement Offices.

(*c*) Yes.

(*d*) No.

(*e*) The employees referred to colud be taken only as local candidates pending regularisation of the appointments by Public Service Commission. The Public Service Commission has called for applications for these posts and these employees have to take their chances along with other applicants. Hence Government cannot interfere in the selection by Public Service Commission.

ಶ್ರೀ ಎಂ. ನಾಗಪ್ಪ.—ಈ ನೌಕರರು ಲೋಕಲ್ ಕ್ಯಾಂಡಿಡೇಟ್ಸ್ ಆಗಿದ್ದರು ಎಂಬ ಅಭಿಪ್ರಾಯವನ್ನು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ನನಗೆ ತಿಳಿದ ಮಟ್ಟಿಗೆ ಮಿನರಲ್ ಡೆವಲಪ್‌ಮೆಂಟ್ ಮತ್ತು ಸರ್ವೆ ಸೆಟಲ್‌ಮೆಂಟ್ ಆಫೀಸ್‌ಗಳಲ್ಲಿ ಕೆಲಸ ಮಾಡುತ್ತಿದ್ದ ನೌಕರರು ಕಾಯಂ ನೌಕರರಾಗಿದ್ದರು. ಈ ಆಫೀಸ್‌ಗಳಲ್ಲಿ ಕೆಲಸ ಮಾಡುತ್ತಿದ್ದ ನೌಕರರು ಎಷ್ಟು ವರ್ಷಗಳಿಂದ ಅಲ್ಲಿ ಕೆಲಸ ಮಾಡುತ್ತಿದ್ದರು ಎಂಬುದನ್ನು ತಿಳಿಸಬೇಕು ಮತ್ತು 1966ನೇ ಇಸವಿಯಲ್ಲಿ ಒಂದು ಗೌರ್ನಮೆಂಟ್ ಆರ್ಡರ್ ಹೊರಡಿಸಿ ಯಾರು ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಿದ್ದಾರೋ ಅವರನ್ನೆಲ್ಲಾ ಕಾಯಂ ನೌಕರರನ್ನಾಗಿ ಮಾಡಿದಿರಿ. ಈ ಒಂದು ಆರ್ಡರ್ ಇವರಿಗೂ ಅನ್ವಯವಾಗುತ್ತಿರಲಿಲ್ಲವೇ? ಮತ್ತು ಈ ಆರ್ಡರ್ ಪ್ರಕಾರ ಈ ಎರಡು ಆಫೀಸ್‌ಗಳಲ್ಲಿ ಕೆಲಸ ಮಾಡುತ್ತಿದ್ದ ನೌಕರರನ್ನೂ ಸಹ ಕಾಯಂ ಮಾಡುವುದಕ್ಕೆ ಸಿದ್ಧರಿದ್ದೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಮಿನರಲ್ ಡೆವಲಪ್‌ಮೆಂಟ್ ಬೋರ್ಡು ಸರ್ಕಾರದ ಒಂದು ವಿಭಾಗವಲ್ಲ. ಸರ್ವೆ ಅಂಡ್ ಸೆಟಲ್‌ಮೆಂಟ್ ಆಫೀಸ್‌ನಲ್ಲಿ ಕೆಲಸ ಮಾಡುತ್ತಿದ್ದ ಅನೇಕ ಸ್ಥಳೀಯ ಕರ್ಮಚಾರಿಗಳನ್ನು ಕೆಲಸ ಮುಗಿದ ಮೇಲೆ ರಿಟ್ರೆಂಚ್ ಮಾಡಲಾಯಿತು. ನಂತರ ಎಕ್ಸೈಜ್ ಡಿಪಾರ್ಟ್‌ಮೆಂಟಿಗೆ 200 ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುವ ಸಂದರ್ಭ ಬಂದಾಗ ಈ ಮಿನರಲ್ ಡೆವಲಪ್‌ಮೆಂಟ್ ಬೋರ್ಡಿನಲ್ಲಿ ಮತ್ತು ಸರ್ವೆ ಅಂಡ್ ಸೆಟಲ್‌ಮೆಂಟ್ ವಿಭಾಗದಲ್ಲಿ ಕೆಲಸ ಮಾಡಿ ಯಾರು ಯಾರು ರಿಟ್ರೆಂಚ್ ಆಗಿದ್ದಾರೋ ಅವರು ಅರ್ಜಿ ಹಾಕಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಲಾಯಿತು. ಮತ್ತು ಅಂತಹವರ ಅರ್ಜಿಗಳಿಗೆ ಪ್ರಿಫರೆನ್ಸ್ ಕೊಡಬೇಕೆಂದು ಸರ್ಕಾರದವರು ನಿರ್ಧಾರ ಮಾಡಿದರು.

9-30 A. M.

ಅಂಥವರನ್ನು ಎಕ್ಸೈಜ್ ಅಸಿಸ್ಟೆಂಟ್ ಇನ್‌ಸ್ಪೆಕ್ಟರುಗಳಾಗಿ ತೆಗೆದುಕೊಂಡಿದ್ದಾರೆ, ಈಗ ಪಬ್ಲಿಕ್ ಸರ್ವಿಸ್ ಕಮಿಷನ್ ಮುಖಾಂತರ ರಿಕ್ರೂಟ್‌ಮೆಂಟ್ ಆಗಬೇಕಾಗುತ್ತದೆ. ರೂಲ್ಸ್ ಪ್ರಕಾರ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಅರ್ಜಿಯನ್ನು ಕರೆದಿದ್ದಾರೆ. 220 ಪೋಸ್ಟುಗಳಿಗೆ 14 ಸಾವಿರ ಅರ್ಜಿಗಳು ಬಂದಿವೆ. ರೂಲ್ಸ್ ಪ್ರಕಾರ ಪಬ್ಲಿಕ್ ಸರ್ವೀಸ್ ಕಮಿಷನಿನವರು ರಿಕ್ರೂಟ್‌ಮೆಂಟ್ ಮಾಡುತ್ತಾರೆ. ಕೇವಲ ಮಿನರಲ್ ಡೆವಲಪ್‌ಮೆಂಟ್ ಬೋರ್ಡಿನಲ್ಲಿ ಮತ್ತು ಸರ್ವೆ ಸೆಟಲ್‌ಮೆಂಟ್ ಆಫೀಸಿನಲ್ಲಿ ಕೆಲವರು ಕೆಲಸ ಮಾಡಿದ್ದಾರೆ ಎನ್ನುವ ಕಾರಣದಿಂದ ಅವರನ್ನು ಪರ್ಮನೆಂಟ್ ಎಂಪ್ಲಾಯೀಸ್ ಎಂದು ಪರಿಗಣಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ನಾಗಪ್ಪ.—ಈಗ ಅವರನ್ನು ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿ ಸೇರಿಸಿಕೊಂಡಿದ್ದವು ಎಂದು ಹೇಳಿದ್ದೀರಿ. ತಮ್ಮ ಡಿಪಾರ್ಟ್‌ಮೆಂಟಿನಲ್ಲಿ ಅವರಿಗೆ ಅಪಾಯಿಂಟ್‌ಮೆಂಟ್ ಕೊಟ್ಟಿದ್ದೀರಿ. ಅವರನ್ನು ಪರ್ಮನೆಂಟ್ ನೌಕರರೆಂದು ಕಲ್ಪನೆ ಮಾಡಿದ್ದೀರಿ. ಆದಾಗ್ಯೂ ಸಹ ಈಗ ತಾವು ಯಾವುದೋ ಒಂದು ಕಾರಣದಿಂದ ಅವರನ್ನು ಲೋಕಲ್ ಕ್ಯಾಂಡಿಡೇಟ್ಸ್ ಎಂದು ಟ್ರೀಟ್ ಮಾಡಿದ್ದೇವೆ ಎಂದು ಹೇಳಿದ್ದೀರಿ. ಈಗ ಮಿನರಲ್ ಡೆವಲಪ್‌ಮೆಂಟ್ ಬೋರ್ಡ್ ಮತ್ತು ಸರ್ವೆ ಸೆಟಲ್‌ಮೆಂಟ್ ಆಫೀಸ್‌ಗಳಿಂದ ರಿಟ್ರೆಂಚ್ ಆಗಿರುವ ನೌಕರರು ಈಗ ಅಸಿಸ್ಟೆಂಟ್ ಎಕ್ಸೈಜ್ ಇನ್‌ಸ್ಪೆಕ್ಟರುಗಳಾಗಿ ಕೆಲವರು ಕೆಲಸಮಾಡುತ್ತಿದ್ದಾರೆ. ಈ ನೌಕರರು ಈ ಕೆಲಸಕ್ಕೆ ಅರ್ಜಿಯನ್ನು ಹಾಕಿಕೊಂಡಿಲ್ಲ. ಏತಕ್ಕೆಂದರೆ ಅವರು ಪರ್ಮನೆಂಟ್ ಎಂಪ್ಲಾಯೀಸ್ ಎಂದು ಭಾವನೆ ಮಾಡಿಕೊಂಡು ಅವರು ಈ ಕೆಲಸಕ್ಕೆ ಅರ್ಜಿಯನ್ನು ಹಾಕಿಕೊಂಡಿಲ್ಲ. ಆದ್ದರಿಂದ ಈಗ ತಾವು ಅವರನ್ನು ಲೋಕಲ್ ಕ್ಯಾಂಡಿಡೇಟ್ಸ್ ಎಂದು ಭಾವನೆ ಮಾಡುವುದಾದರೆ ಅವರಿಗೆ ಮತ್ತೆ ಈ ಹುದ್ದೆಗಳಿಗೆ ಅರ್ಜಿ ಹಾಕಿಕೊಳ್ಳುವುದಕ್ಕೆ ಟೈಮ್ ಎಕ್ಸ್‌ಟೆಂಡ್ ಮಾಡಿ ಅವಕಾಶ ಮಾಡಿಕೊಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಸರ್ವೆ ಅಂಡ್ ಸೆಟ್ಲ್‌ಮೆಂಟ್ ಡಿಪಾರ್ಟ್‌ಮೆಂಟಿನವರನ್ನು ಆ ಹುದ್ದೆಗಳಿಗೆ ನೇಮಕ ಮಾಡುವಾಗಲೇ ಅವರಿಗೆ ಇದು ತಾತ್ಕಾಲಿಕ ನೌಕರಿ ಎಂದು ನಾವು ಸ್ಪಷ್ಟವಾಗಿ ತಿಳಿಸಿದ್ದೇವೆ. ಆದ್ದರಿಂದ ಅವರನ್ನು ಪರ್ಮನೆಂಟ್ ಗೌರ್ನಮೆಂಟ್ ಸರ್ವೆಂಟ್ಸ್ ಎಂದು ಗಣನೆಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಿನರಲ್ ಡೆವಲಪ್‌ಮೆಂಟ್ ಬೋರ್ಡ್ ಮತ್ತು ಸರ್ವೆ ಸೆಟಲ್‌ಮೆಂಟ್ ಆಫೀಸಿನಲ್ಲಿದ್ದ ನೌಕರರನ್ನು ತಾವು ರಿಟ್ರೆಂಚ್ ಮಾಡುವಾಗ ಅವರಿಗೆ ಖಾಯಂ ಕೆಲಸವನ್ನು ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಲ್ಲಿ ಕೊಡುತ್ತೇವೆ ಎಂದು ಹೇಳಿ, ಇವರ ಬಗ್ಗೆ ಹಿಂದೆ ಸರ್ಕಾರದಿಂದ ಸರ್ಕ್ಯುಲರ್ ಹೋಗಿದ್ದು ನಿಜವೇ? ಆ ರೀತಿ ತಾವು ಅವರಿಗೆ ಮಾತುಕೊಟ್ಟಿದ್ದರೆ, ಅವರಿಗೆ ಖಾಯಂ ಆಗಿ ಕೆಲಸ ಕೊಡುವುದಕ್ಕೆ ಆದ್ಯತೆ ಕೊಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಸರ್ವೆ ಅಂಡ್ ಸೆಟಲ್‌ಮೆಂಟ್ ಕೆಲಸ ಮುಗಿದಮೇಲೆ ಅಲ್ಲಿ ಕೆಲಸ ಮಾಡತಕ್ಕ ನೌಕರರು ಸರ್ಕಾರಕ್ಕೆ ಮನವಿ ಮಾಡಿಕೊಂಡಾಗ ಇನ್ನುಮುಂದೆ ಸರ್ಕಾರ ಬೇರೆ ಬೇರೆ ಕೆಲಸಗಳಿಗೆ ರಿಕ್ರೂಟ್‌ಮೆಂಟ್ ಮಾಡುವಾಗ ಅವರಿಗೆ ಅವಕಾಶವನ್ನು ಕೊಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದು ಉಂಟು. ಈ ಭರವಸೆಗೆ ಅನುಗುಣವಾಗಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ರಿಕ್ರೂಟ್‌ಮೆಂಟ್ ಮಾಡುವಾಗ ಬೇರೆ ಅಭ್ಯರ್ಥಿಗಳನ್ನು ಕರೆಯುವಾಗ ಇವರನ್ನು ಕರೆಯುತ್ತಾರೆ, ಅಲ್ಲ ಇವರಿಗೆ ಪ್ರಿಫರೆನ್ಸ್ ಕೊಡುತ್ತಾರೆ. ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿ ಇವರಿಗೆ ಕೆಲಸ ಕೊಟ್ಟಿದ್ದು ತಾತ್ಕಾಲಿಕ ಆದ್ದರಿಂದ ಅವರನ್ನು ಈಗ ಪರ್ಮನೆಂಟ್ ನೌಕರರೆಂದು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದು ನಮ್ಮ ರೂಲ್ಸಿಗೆ ವಿರುದ್ಧವಾಗುತ್ತದೆ.

ಶ್ರೀ ವಿ. ಎಲ್. ಪಾಟೀಲ್.—ಈಗ ತಾವು ಎಷ್ಟೋ ಇಲಾಖೆಗಳಲ್ಲಿ ವರ್ಕ್‌ಚಾರ್ಜ್ ನೌಕರರನ್ನು ಇಟ್ಟುಕೊಂಡಿದ್ದೀರಿ. ಅಲ್ಲಿ ಕೆಲಸವೇನೋ ಯಾವಾಗಲೂ ಪರ್ಮನೆಂಟಾಗಿ ಇರುತ್ತದೆ, ಆದರೆ ನೌಕರರನ್ನು ಮಾತ್ರ ಟೆಂಪರರಿಯಾಗಿ ಕೆಲಸಕ್ಕೆ ತೆಗೆದುಕೊಂಡಿದ್ದೀರಿ. ಈಗ ಉದಾಹರಣೆಗೆ ಹೇಳಬೇಕಾದರೆ ರೋಡ್ ಡೆವಲಪ್‌ಮೆಂಟ್ ಮತ್ತು ರೋಡ್ ರಿಪೇರ್ ಕೆಲಸಗಳು ಪರ್ಮನೆಂಟ್ ಆಗಿರುತ್ತವೆ. ಆದರೆ ಅಲ್ಲಿ ನೌಕರರನ್ನು ಮಾತ್ರ ಟೆಂಪರರಿ ಎಂದು ಇಟ್ಟುಕೊಂಡಿರುತ್ತೀರಿ ಅಂಥವರು ಶಾಶ್ವತವಾಗಿ ಕೆಲಸದಲ್ಲಿ ಇರುವ ಗ್ಯಾರಂಟಿ ಇದೆಯೋ ಅಥವಾ ಇಲ್ಲವೋ?

ಅಧ್ಯಕ್ಷರು.—ಈ ಪ್ರಶ್ನೆಗೆ ಅದು ಸಂಬಂಧಪಡುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಿನರಲ್ ಡೆವಲಪ್‌ಮೆಂಟ್ ಬೋರ್ಡ್ ಒಂದು ಸಂಸ್ಥೆ. ಆದ್ದರಿಂದ ಅಲ್ಲಿ ಕೆಲಸ ಮಾಡತಕ್ಕ ನೌಕರರು ಖಾಯಂ ಆದ ನೌಕರರು. ಈಗ ತಾವು ಮಿನರಲ್ ಡೆವಲಪ್‌ಮೆಂಟ್ ಬೋರ್ಡನ್ನು ಅಬಾಲಿಷ್ ಮಾಡಿದ್ದೀರಿ, ಅಲ್ಲಿದ್ದ ನೌಕರರನ್ನು ರಿಟ್ರೆಂಚ್ ಮಾಡಿದ್ದೀರಿ. ಈಗ ಮಿನರಲ್ ಡೆವಲಪ್‌ಮೆಂಟ್ ಬೋರ್ಡಿಗೆ ಬದಲಾಗಿ ಸ್ಥಾಪಿಸಿರತಕ್ಕ ಸಂಸ್ಥೆಯಲ್ಲಿ ಆ ನೌಕರರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುವುದಕ್ಕೆ ಏನು ಅಡ್ಡಿ ಇದೆ, ಮತ್ತು ಸರ್ವೆ ಅಂಡ್ ಸೆಟಲ್‌ಮೆಂಟ್ ಆಫೀಸಿನಲ್ಲಿ ರಿಟ್ರೆಂಚ್ ಆಗಿರುವವರನ್ನು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಈಗ ಹೊಸದಾಗಿ ಕೆಲಸಕ್ಕೆ ನೌಕರರನ್ನು ಚುನಾಯಿಸಿಕೊಳ್ಳತಕ್ಕ ಸಂದರ್ಭದಲ್ಲಿ ಅವರಿಗೆ ಪ್ರಿಫರೆನ್ ಕೊಡುತ್ತೇವೆಂದು ಸರ್ಕಾರದವರು ಅವರಿಗೆ ತಿಳಿಸಿದ್ದರೆ. ಆ ರೀತಿ ಅವರಿಗೆ ಪ್ರಿಫರೆನ್ಸ್ ಕೊಡುವುದಕ್ಕೆ ಅಡ್ಡಿ ಏನಿದೆ, ಅಡ್ಡಿ ಇಲ್ಲದಿದ್ದರೆ ಅವರಿಗೆ ಪ್ರಿಫರೆನ್ಸ್ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಮಿನರಲ್ ಡೆವಲಪ್‌ಮೆಂಟ್ ಬೋರ್ಡಿನಲ್ಲಿ ಕೆಲಸ ಮಾಡತಕ್ಕ ನೌಕರರನ್ನು ಪರ್ಮನೆಂಟಾಗಿ ನೇಮಕಮಾಡಿಕೊಂಡಿದ್ದರೆ ಅವರನ್ನ ರಿಟ್ರೆಂಚ್ ಮಾಡತಕ್ಕ ಪ್ರಶ್ನೆಯೇ ಬರುತ್ತಿರಲಿಲ್ಲ. ಬೇರೆ ಡಿಪಾರ್ಟ್‌ಮೆಂಟಿಗೆ ವರ್ಗಮಾಡುತ್ತಿದ್ದೆವು. ಆದರೆ ಒಂದು ಸಲ ರಿಟ್ರೆಂಚ್ ಮಾಡಿದಮೇಲೆ ಪುನಃ ನೌಕರಿಗೆ ನೇಮಿಸಿಕೊಳ್ಳುವಾಗ ಯಾವ ನಿಯಮವನ್ನು ಹಾಕಿಕೊಂಡಿದ್ದೇವೋ ಆ ನಿಯಮವನ್ನು ಅನುಸರಿಸಿ ನೌಕರರನ್ನು ನೇಮಿಸಿಕೊಳ್ಳುತ್ತೇವೆ. ಸರ್ಕಾರದವರು ನೇರವಾಗಿ ನೌಕರರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಮತ್ತು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರಿಗೆ ನಾವು ಇಂಥವರನ್ನೇ ನೇಮಕಮಾಡಿ ಎಂದು ಆದೇಶ ಕೊಡುವುದಕ್ಕೆ ಸಾಧ್ಯವಿಲ್ಲ. ನಿಯಮಾವಳಿಗನುಸಾರವಾಗಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಇಷ್ಟಿಷ್ಟು ಎಂದು ರಿಜರ್ವೇಷನ್ ಮಾಡಬೇಕು, ಅರ್ಹತೆ ಇರಬೇಕು ಇದನ್ನೆಲ್ಲಾ ನೋಡಿಕೊಂಡು ಅವರು ಪರಿಶೀಲನೆ ಮಾಡುತ್ತಾರೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಅನೇಕ ಸಂದರ್ಭಗಳಲ್ಲಿ ಲೋಕಲ್ ಕ್ಯಾಂಡಿಡೇಟ್‌ಗಳನ್ನು ರಗ್ಯುಲರೈಜ್ ಮಾಡುವಂಥಾ ಸಂದರ್ಭದಲ್ಲಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರನ್ನು ಕೇಳಿ ಮಾಡುವುದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಕೆಲವೊಂದು ಸಂದರ್ಭದಲ್ಲಿ ರೆಗ್ಯುಲರೈಜ್ ಮಾಡತಕ್ಕ ಸಂದರ್ಭ ಬಂದಿದೆ. 2–3 ವರ್ಷಗಳ ಹಿಂದೆ ಲೋಕಲ್ ಕ್ಯಾಂಡಿಡೇಟ್‌ಗಳ ಸಂಖ್ಯೆ ಹೆಚ್ಚಾಗಿದ್ದು ಅವರು 4–5 ವರ್ಷಗಳಿಂದ ಲೋಕಲ್ ಕ್ಯಾಂಡಿಡೇಟ್‌ಗಳಾಗಿ ಕೆಲಸ ಮಾಡುತ್ತಿದ್ದುದರಿಂದ ಅಂಥವರನ್ನು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರ ಅಭಿಪ್ರಾಯವನ್ನು ಪಡೆದು ನೇಮಕ ಮಾಡಿದ್ದೇವೆ.

ಶ್ರೀಮತಿ ಚಂಪಾಬಾಯಿ ಭೋಗಲೆ.—ಸರ್ವೆ ಆಂಡ್ ಸೆಟ್ಲ್‌ಮೆಂಟ್ ಆಫೀಸಿನಲ್ಲಿ ರಿಟ್ರೆಂಚ್ ಆದವರನ್ನು ಎಕ್ಸೈಜ್ ಡಿಪಾರ್ಟ್‌ಮೆಂಟಿಗೆ ತೆಗೆದುಕೊಂಡಿದ್ದೀರಿ. ಅವರಿಗೆ ಈಗಾಗಲೇ 3 ವರ್ಷ ಸರ್ವೀಸ್ ಆಗಿದೆ. ಅವರ ಗತಿ ಏನು ? ಈಗ ಮತ್ತೆ ಅವರನ್ನು ಕೆಲಸದಿಂದ ತೆಗೆದರೆ ಅವರಿಗೆ ಏನು ಪ್ರಯತ್ನ ಮಾಡುತ್ತೀರಿ, ಅವರ ಗತಿ ಏನು?

ಶ್ರೀ ರಾಮಕೃಷ್ಣ ಹೆಗಡೆ.—ದೇವರೇ ಗತಿ. ಸರ್ಕಾರದವರು ನೇರವಾಗಿ ಅವರನ್ನು ಆ ಕೆಲಸಕ್ಕೆ ನೇಮಿಸುವಾಗ ಅದು ತಾತ್ಕಾಲಿಕವಾದದ್ದು ಅದನ್ನು ಖಾಯಂಮಾಡುವಾಗ ಪಬ್ಲಿಕ್ ಸರ್ವೀಸ್ ಕಮಿಷನ್ ಮುಖಾಂತರ ನೇಮಕ ಮಾಡಬೇಕು ಎಂದು ಸ್ಪಷ್ಟ ಮಾಡಿದಮೇಲೂ ಅವರ ಗತಿ ಏನು ಎಂದರೆ ನಾನು ಏನು ಹೇಳುವುದಕ್ಕೆ ಸಾಧ್ಯವಾಗುತ್ತದೆ ? ಇದು ನಮ್ಮ ದೇಶದಲ್ಲಿ ಮಾತ್ರ ಇಂಥಾ ಒಂದು ಪ್ರವೃತ್ತಿ ಇದೆ. ಬೇರೆ ಕಡೆ 2 ವರ್ಷ ಕೆಲಸ ಸಿಕ್ಕಲಿ. ಸಿಕ್ಕಿದಷ್ಟು ದಿವಸ ಕೆಲಸ ಮಾಡುತ್ತಾರೆ. ಮತ್ತೆ ಬೇರೆ ಕಡೆಗೆ ಕೆಲಸಕ್ಕೆ ಹೋಗುತ್ತಾರೆ.

ಶ್ರೀ ಎಂ. ಎನ್. ರಾಮಣ್ಣ.—ಈಗಾಗಲೇ ಅವರಿಗೆ ಒಂದು ಸಲ ರಿಟ್ರೆಂಚ್ ಮಾಡಿ ಎರಡನೆಯ ಸಲ ಕೆಲಸ ಕೊಟ್ಟಿದ್ದೀರಿ. ಈಗ ಮತ್ತೆ ಅವರನ್ನ ಕೆಲಸದಿಂದ ತೆಗೆದರೆ ಅವರಿಗೆ ಬೇರೆ ಕೆಲಸ ಸಿಕ್ಕುವುದಿಲ್ಲ. ಆದ್ದರಿಂದ ಒಂದು ಸಲ ರಿಟ್ರೆಂಚ್ ಮಾಡಿ ಮತ್ತೆ ಅಪಾಯಿಂಟ್ ಮಾಡಿದಮೇಲೆ ಅವರನ್ನು ಅಬ್ಸಾರ್ಬ್ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

Sri L. SRIKANTAIAH (Nanjangud).—An important constitutional point is involved. Before we take a decision on the technicalities of the subject, I feel the Hon'ble Minister may be permitted to speak, because very important points are involved. These are points of law and we cannot express an *ad hoc* opinion and be done with it.

Sri K. PUTTASWAMY.—Sir, I thank the Hon'ble Member Sri L. Sreekantaiah for coming to my rescue. I will not take much time. I will just make a reference to the point whether under article 246, this House can pass a legislation of this kind.

Sir, from the decisions that I have so far cited, it is very clear that a High Court judge discharging any function other than that of a judge of the High Court, would not be judicial function of the court.

The next question for consideration is whether a State Legislature is competent under the legislative powers vested in it by clauses (2) and (3) of article 246 of the Constitution or any other provision of the Constitution, to make law imposing obligation upon the judges of the High Court and district judges to discharge functions other than those that have to be discharged by them—in the case of judges of the High Court, as part of the High Court and in the case of district judges, as presiding officers of the district courts. The State Legislature can make laws relating to the administration of justice and the State has powers regarding the constitution and organisation of all courts except the the Supreme court and High Court and the State can make law relating to the jurisdiction of all courts except the Supreme Court with respect to any of the matters in that list. The State can also make laws relating to the jurisdiction of powers of all courts except the Supreme Court with respect to any matters in that list. Sir, it may be noticed that these lists empower the Legislature to make laws relating to the administration of justice and confer jurisdiction upon the courts in respect of matters enumerated in lists 2 and 3. The judge required to hold an enquiry for purposes of prosecution of persons against whom an accusation is made, would not be dealing with the administration of justice; to hold an enquiry for the purpose of prosecution cannot be considered to be part of the functions of the court. They are really the functions of the police normally under the Criminal Procedure Code. Under Annexure-seventh Schdeule, item 78, Parliament has exclusive power of legislation in respect of the constitution and organisation of the High Courts, except provisions as to Officers and servants of High Courts, persons entitled to practice before the High Court. The High court has held in Shivarudrappa Vs. the State of Mysore—Mysore Law Journal 158, that the word 'organisation entry 78 of List 1 extends to all acts necessary give orderly structure in order to evolve a working order. Section 18 of the Mysore High Court Act 1884, empowers the Chief Justice to distribute work in the High Court between himself and other Judges of the said High Court. This provision relates to the organisation of the High Court. The internal function of the High court other than the administration of justice for which laws could be made by the State Legislature under items 3 of list 2 will have to be regulated by law made by Parliament. There is no provision in the Constitution by virtue of which the State legislature can make law in respect of the judge of the High Court discharging functions unconnected with the High Court.

(SRI K. PUTTASWAMY)

Regarding the making district Judges hold to an enquiry under this Act, this is not also possible because under article 235, the promotion and control of district judges courts vests with the High Court and therefore the High Court also cannot entrust non-judicial work to the district judges. That position is also very clear. And regarding staff also, even granting that either the High Court Judge or the District Judge is appointed as enquiry judge, he would require additional assistance and for additional assistance staff is also to be appointed. There is no provision under the constitution to make the staff of the High Court to take up additional work. If they are to be asked to take up additional work, additional hands will have to be given and even if there is not much work, and even if one person is to be asked to additional work not being the duties attached to District Judges Court as such, then he will have to be paid emoluments and that becomes a second objection, because, it cannot be considered in respect of this Bill by the tate Legislature without the recommendation of the Governor, because if the High Court Judge is to be appointed to do this work, in his place another High Court Judge will have to be appointed to work. If a District Judge is appointed to be enquiry judge, another district judge will have to be appointed in his place. Therefore, expenditure from the consolidated fund will have to be incurred.

Sri H N. NANJE GOWDA.—We are not appointing any new judge for this work. The case will be referred to him that is all.

Sri K. PUTTASWAMY.—Sir, the Hon. Member has not cought my point. I said that this function not being judicial function, these judges cannot be asked to perform these functions.

Therefore, that question does not arise and my friend thought that by avoiding reference to other agencies, he would be able to get over the effect of Art. 207 of the Constitution and that it is not possible. Therefore, I think I have been able to establish these two points. One is: the High Court Judge or a District Judge while functioning under the Public Men Inquiries Bill, would not be discharging judicial functions. And this House is competent only to legislate for the administration of justice and not for creating obligation on the High Court Judge and the District Judges for discharging non-judicial functions. If we appoint any High Court Judge or a District Judge to discharge functions under this Bill, then in their places additional Judges will have to be appointed and they have to be provided with additional employees. Therefore, for all these things, expenditure from the Consolidated Fund of the State will have to be incurred. On these two grounds, this Bill cannot be taken up for consideration.

† **Sri L. SRIKANTAIAH.**—Sir, I have heard patiently the arguments advanced by my learned friend Sri K. Puttaswamy, Minister for Parliamentary Affairs. I am giving my humble opinion. Of course I

am saying this with all the limitations and unpreparedness because this is an issue in which expert opinion is necessary. If it is possible, I wish the opinion of the Advocate-General is obtained later because the issues raised, are of paramount importance for our future guidance also. I am not disputing the importance of this Bill because our minds are exercised. There should be some sort of a forum where accusations levelled against Ministers and the members of the Legislature are disposed of and justice is meted out; there are no two opinions on that. If I may draw the attention of the House, Kerala State Assembly has recently passed the Public Men Inquires Bill in a different form; and equally the Parliament is also enacting Lok Ayukt and Lokpal Bill just like Ombudsman of Sweden and the report on that Bill is awaited.

I am glad that the Hon. Minister for Parliamentary Affairs has conceded in principle the necessity of having a legislation of this type so far as the State is concerned. But here the point we are considering is whether the Bill is brought forward on the recommendation of the Governor as the recommendation of the Governor is necessary for introduction of this Bill. The Hon. Minister Sri Puttaswamy has opposed this bill on two grounds. I shall summarise them. The first ground is that the Constitution of India has prescribed the functions of the High Court as well as the Supreme Court. Therefore, in the guise of creating a function, if you put extra function on the High Court Judge, this is not warranted by the Constitution. Therefore, that can be done only on the recommendation of the President or if necessary with the concurrence of the Parliament. That is ground number one. Ground No. 2 is: even accepting for argument's sake that a High Court Judge could be entrusted with additional functions, the next objection, namely, financial implication, comes. It means extra work, extra staff and extra money which requires to be borrowed from the Consolidated Fund of the State. Therefore, previous sanction of the Governor is necessary.

So we are faced with two objections which have been raised. I have already stated that I am arguing with all the limitations. I also need to be enlightened on this important Constitutional issue. At the face value, to me the objections appear to be tenable. And the objections will have to be upheld for the following reasons.

So far as the first one is concerned, I had conceded the arguments of the learned Law Minister. So far as administration of justice in India is concerned, to my knowledge, in the hierarchy of judicial functions, the High Court has only appellate powers and even the Supreme Court has only appeal powers. The functions of the High Court may be pointed out; whether it is a criminal case or civil case or a revenue case. Only appeal matters are being considered by the High Court. Except in contempt cases and write petitions, the High Court will not make up original functions; it is not a court of original jurisdiction. Now with the inauguration of our Constitution that original power, more or less, is being taken away except in very few cases, as already stated, like contempt cases and writ petitions.

(SRI L. SIRKANTAIAH)

Now the question would be: whether the High Court Judge could be burdened with another duty. Now I have carefully gone through the Private Member's Bill. I invite attention to clause 9 (2) of the Bill which reads:

> "Where the Vigilance Commissioner has reported that the accusation is wholly or partly substantiated, the Judge shall proceed to enquire into it."

Now the question is: supposing clause 9 is adopted, can this House, within the limitations prescribed under the Constitution, ask a Judge of the High Court to inquire into the matter? I think it is not possible. For instance, let us take 207 Cr. P. C. We find, so far as sessions cases are concerned, there are two stages of enquiry; enquiry by the enquiring Magistrate and if he finds that there is a prima facie case, he commits it to a Court of Session for trial. Now the question is whether a Judge who is an inquiring magistrate can be clubbed with a Judge of the High Court and whether a Judge of the High Court sitting, is an inquiring judge. For instance, let us take a case under the Representation of People's Act. Formerly, for all election disputes, a Tribunal was constituted. But by an amendment to the Representation of People's Act, the High Court Judge is now made the enquiry judge. Election petitions are tried by the High Court Judge himself: witnesses are examined, cross-examined; and arguments are heard and judgement is delivered. I would submit that in that case, that is an enactment made by the Parliament itself and an additional duty is conferred on the Judge. In fact, formerly there were no witness boxes in the High Court. For the first time, to try original cases, we are seeing witnesses in just rawness being examined and cross-examined by the Counsels in the High Court. That is a duty cast on the High Court by a Parliamentary legislation.

11-30 A.M.

My learned friend was pleased to cite several cases. I cannot express an opinion *ad hoc* because *prima facie* it appears, here is a State legislature enacting a piece of legislation, calling upon a judge to enquire. The matter is not so simple as it appears. There are reported cases. The administration of justice and the judicial functions of the High Court or the Supreme Court are defined by their Lordships in various cases. Therefore, with due deference to the case law cited, I would request the Chair to refer the matter for the advice of the Advocate General because it is a very important and also a highly ticklish matter. I cannot express final opinion on whether in the guise of administration of justice and prescribing functions, whether this can be a general law of the land and the High Court Judge Could be called upon to administer law just like administering any ordinary law of the land. I think an expert opinion on this is necessary and

Accession No. (B) 4877
Date

time is required to study this problem. I would rather make a submission to the minister and also to the Speaker to have consultation with the Advocate General and other legal experts in this field. I cannot express a definite opinion on this matter.

Conceding for arguments sake any objection is raised; and assuming that this House has power to invest a judge with extra functions, it means extra finance. So far as my opinion is concerned, I have to concede that point because the High Court is already overburdened with cases. Supposing a Judge is called for, naturally he asks for staff, building, etc. It definitely means extra expenditure and it becomes a Finance Bill. Apart from technicalities, I agree with Sri Nanje Gowda when he says that there is absolute necessity for a Public men Enquiries Bill, in whatever form it comes, overcoming the legal hurdles and difficulties that are placed. We have been urging for the past three years for such a legislation. Why not the State Government take up immediately this problem and just like Kerala bring in a legislation? There is absolute necessity for such a legislation and why not the Government initiate legislation taking preliminary steps to see how best these hurdles can be overcome? Even when with best of intentions the hon. member brings in a Bill, it is asked where is the recommendation of the Governor? When we address to the Governor, invariably we get the answer 'no'. This almost curbs the enthusiasm of the members who want to initiate legislation in these matters. In fact I have introduced two bills. We know the constitutional position. The Governor will not assent unless he consults the ministry. It is the constitutional obligation on the part of the Governor that he should not go against the advice tendered by the Government. As to what advice was tendered cannot be enquired by any court. Therefore, naturally the ministry will say 'no'. We get replies; it is written on a beautiful paper with red embossed seal and when we read we find that request for consent is not conceded. So, the entire enthusiasm is doomed. By bringing in this Bill, it is not meant only to Ministers. It is a long noose to catch any member including the Opposition member. The object is that public life must be kept clean no matters whoever he may be. Nobody is above law. From the way the constitution is worded and from the organisation of courts we have at present, the Supreme Court cannot be burdened with additional functions without the consent of the President. More than this, with the limited preparation, I cannot give more views on this point. If the hon Minister is prepared to give an assurance that the Government will take up this matter immediately at least during the session, I would accept that position. The necessity for such a Bill is felt by everybody. After all when Kerala has done it, why should we lag behind? I am told in U.P. it has already become a law. When other State legislatures have enacted similar legislations, why should Mysore lag beind? Therefore, I want a definite assurance from the Minister that the Government would take steps to initiate a legislation in this respect.

With these observations I close my speech.

Sri H. SIDDAVEERAPPA.—Sir, on this Bill the hon. Minister in the last session, on 5th September 1969, raised some objections which are now substantiated. The tenor of his whole argument was that there is constitutional difficulty in considering the Bill as introduced by my hon. friend Sri Nanje Gowda. On this point, the hon. member Sri Srikantiah contributed his views and has said something about the legal aspect of it. I am not addressing my arguments on this point. I am only concerned with the spirit underlying this Bill and whether especially in these days whether there is any need for a legislation of the type as has been introduced by Sri Nanje Gowda.

The Statement of Objects and Reasons has made it abundantly clear as to why this legislation has been introduced by him:

> "With the growth of public investments and economic activities in the State and consequent on democratisation, there has been enormous increase in the number and variety of institutions headed by men in public life. The contact points with the citizen and the scope for abuse of power have grown both in width and depth. This has agitated the public mind so much that serious allegations and counter-allegations are being made almost incessantly both in the press and the platform. This is not without serious and adverse repurcussions on the stability of Governments and the morale in administration."

It can be seen that when man began to move in organised society, from that time onwards when Governments came into being, there have always been complaints that men in public places have an opportunity to get corrupted and in order to obviate that kind of a feeling, the first democratic country in the world that ever thought of purifying public administration, sterilizing it and placing ethical values high, was Sweden. The first institution of Ombudsman started in 1809. This has been working there for nearly 1½ centuries with very good results. The Ombudsman that we have seen is an Officer of the Legislature, the Legislature being supreme. Among the 3 limbs, it will be seen that Legislature is sovereign. With regard to the powers that have been given to it and within its orbit, the judiciary is sovereign. The executive has the power to translate into action what has been laid down by the Legislature and has been more or less a servant of the Legislature. What the Legislature demands, it is the duty of the executive to execute it. When such is the position, what has happened in this country is worth seeing. For a variety of reasons, after Independence, especially during the last 10 years, nothing was done in this direction. Firstly, they were just new to it in the first and second general elections. Men had not come so much out to demand that this man is corrupt, that man is corrupt and various other things. Now what has happened is that we have formed Corporations, Boards and various other bodies where non-officials have been entrusted with power and patronage including monetary power. That is why it is very difficult to make any difference between a horse and an ass as it were. Even if a person is a very honest man, the moment he becomes M. L. A., they say that he has entered the profession to amass wealth : the moment he becomes a Minister, they say that this gentleman has gone there to amass wealth. They have been doing it non-challantly with the result that there is now a contempt for this kind of place in public service. This is not new to our country only. Even in other countries, wherever there are democracies they have been trying to evolve some kind of machinery so that one should not try to throw dust or mud in the face of those that have been in power. As has been said, mud cannot be washed by mud and so some other solution has got to be found for it. So long as we are here men may say so many things. We must evolve a machinery which will receive the complaints against public men. It may be the machinery of Lok Pal or Lok Ayukt passed by the Lok Sabha or it may be any other machinery that you can think of. Mr. Puttaswamy said that there is a Bill introduced in Parliament and let us wait and see its working. But I would like to say that we cannot wait. The country has been seeing so many charges levelled against you. Why not you try to get cleared of them ? Even in the Moghul period they used to have a bell rung ; if any man had a public grievance he would go and ring the bell and then his grievance would be heard. Unless you do something of that sort, I do not think this kind of complaint is not going to stop. The greatest drawback in our administration to day is the way, character has been assassinated. I won't say character has been assasinated, but I will only say character has been attacked. Assasination comes later. You will have to use that word after the whole thing has been subjected to enquiry. Therefore, I plead with all the emphasis at my command that you must subscribe to the view or the idea underlying this Bill. It is now for you to initiate the idea. Mr. Nanje Gowda has prompted you to take action in the manner in which he has suggested, so that hereafter the public may have a sense of feeling that if anybody is suspected of corruption he can be brought to book. The Vigilance Commission in Mysore State was introduced in 1965, probably after the report of the Santhanam Committee, but that refers only to Government servants. Even there the feeling in the country is that it is not perfect and that it has not given satisfactory service. Unless you trap a Government servant you cannot get any evidence and trapping is not so easy. Even there we have seen that nowadays it has become so common to have contact-men. Unless you have contact-men nothing can be done. Unless you pay grease money, nothing can move ; you will have to use oil and grease. That has become very common. Persons wielding power in Vidhana Soudha must be free from this charge. If you are to be free from that, you must allow the public to place their charges before a competent authority and that can only be done under the cover of law. The other day Chief Minister was helpless and he was pathetically saying : "What can I do you people do not co-operate with me ?". That should not be the position. If any man fails to

(SRI H. SIDDAVEERAPPA)

co-operate the law must be strong enough to catch him and then say "you shall not escape". That is why we have been pleading for it. There are two States in India which have taken action in this matter, namely U.P. and Kerala. Why don't you copy them ? The other day the Chief Minister was saying that we are the first States to do such and such a thing. Here is a case where other State have already taken action. I want Mysore to follow it. You do it in any manner you like. You say that you will create a machinery before which any man who has a grievance against any public men can place his grievance, instead of allowing people to indulge in loose talk of grievance. Now if anybody, says that Sri Puttaswamy took Rs. 1 lakh from him, there is nothing to stop him from saying that. But suppose there is a law and I make that allegation, then you can say, "come on, prove it." For that there should be a machinery. That is why we have been pleading for this in your own interest and in the interests of those who are there in power who want to get a clearance certificate and also in the interests of those that may come hereafter. After all, that place cannot be in a vacuum. It will have to be there for all time to come as long as organised society exists. There is an organisation as in Sweden and we find that there are not any complaints there. It is such a perfect organisation there that there are hardly 5 cases in a year because everybody knows that if he commits a mistake there is an organisation which the people will approach and throttle him. The result is that for a full year there are hardly 5 cases. This has a very salutary effect.

In this connection we remember that Sri Rama sent his wife to the forest for purification when a washerman questioned her chastity. That poor lady had to undergo this purification. Why all this happended ? Rama wanted to see that public doubt was removed. Likewise, the Mysore State is a model State and you must try to be model in getting all the charges cleared. With this objective in view I strongly recommend this Bill for the acceptance of this House. If you want time to bring a new law keeping this spirit in view and if you hold out a promise to this effect I will request Sri Nanje Gowda to withdraw this Bill.

†**Sri H. M. CHANNABASAPPA.**—This question has been discussed at length. There appears to be no need for further discussion. All that is wanted by Government is that it should make up its mind to bring a legislation to establish a machinery which can check malpractice and misuse of power in Mysore State as is being done in season and out of season. The Government should make up its mind to bring such a legislation. If that kind of assurance is given, there should be no difficulty for withdrawal. On the other hand if the Government wants to take a stand of its own, it will have to reap its consequences and this House cannot be a party to that. Sri Nanje Gowda wants an assurance

that the Government will bring that measure before this House for acceptance. If that assurance is coming forth, I will also join hands with my leader in requesting Sri Nanje Gowda to witndraw it.

† ಶ್ರೀ ಎಚ್. ಎನ್. ನಂಜೇಗೌಡ.—ಈ ಮಸೂದೆಯನ್ನು ಪರಿಶೀಲನೆ ಮಾಡಬೇಕೇ ಬೇಡವೇ ಎಂಬ ವಿಷಯದಲ್ಲಿ ಮಾನ್ಯ ಮಂತ್ರಿಗಳು ಭಾರಿ ವಿರಳವಾದ ವಿವರವನ್ನು ಮಂಡಿಸಿದ್ದಾರೆ. ಶ್ರೀಮಾನ್ ಶ್ರೀಕಂಠಯ್ಯನವರು ಮಾತನಾಡುತ್ತಾ ಎಕ್ಸ್‌ಟ್ರಾ ಫೈನಾನ್ಸ್ ಬೇಕಾಗುತ್ತದೆ ಎಂದು ಹೇಳಿದರು. On that point there was a ruling on the other day. I quote that. But regarding other points ಮಾನ್ಯ ಮಂತ್ರಿಗಳು ಕೆಲವು ಪುಸ್ತಕಗಳನ್ನು ರೆಫರ್ ಮಾಡಿದ್ದಾರೆ. ನಾನೂ ಕೂಡ ಅವನ್ನು ನೋಡಿಯೇ ಉತ್ತರ ಕೊಡಬೇಕು ಅಂತ ನನಗೆ ಅನ್ನಿಸಿತು. ಶ್ರೀಮಾನ್ ಪುಟ್ಟಸ್ವಾಮಿಯವರು ಮಾತನಾಡಿದ ಮೇಲೆ ನನಗೂ ಕೂಡ ಎರಡು ಮಾತುಗಳನ್ನು ಹೇಳಬೇಕೆಂದು ಅನಿಸುತ್ತಾ ಇದೆ. ನಮ್ಮಲ್ಲಿ ಸಾರ್ವಜನಿಕ ಜೀವನ ಕಲುಷಿತವಾಗಿರತಕ್ಕದ್ದು ಕಂಡುಬಂದಿದೆ. ನಾನು ತಮ್ಮ ಅಧಿಕಾರವನ್ನು ಬೆಳೆಸಿಕೊಳ್ಳುವುದಕ್ಕೆ ಇಂತಹ ಬಿಲ್ಲನ್ನು ಬೇಡ ಎಂದು ಹೇಳುತ್ತಾ ಇದ್ದೀರಿ ಅಂತ ಆಗಲಿ ಕ್ಯಾರೆಕ್ಟರ್ ಅಸ್ಯಾಸಿನೇಷನ್ ಮಾಡುವುದಕ್ಕಾಗಲಿ ಹೇಳುತ್ತಾ ಇಲ್ಲ. We are really convinced that there is some truth in what we say. ಅಂತ ಅನ್ನುವುದನ್ನು ನಾವು ಹೇಳುತ್ತಾ ಇದ್ದೇವೆ. ರಾಜಕೀಯದ ಬಗ್ಗೆ ಮಾತನಾಡುವುದು ಇದು ಏನೋ ಒಂದು ಕಸಬು ಇಲ್ಲದ ಕಾರ್ಯ, ಏಕೆ ಈ ವಿಷಯ ಮಾತನಾಡಬೇಕು, ಅವನು ಏನು ಹೇಳಿದ, ಇವನು ಏನು ಹೇಳಿದ ಎನ್ನುವ ವಿಷಯಗಳೂ ಕೂಡ ಸಾರ್ವಜನಿಕರ ಮನಸ್ಸಿನಲ್ಲಿ ಉತ್ಪನ್ನವಾಗಿವೆ. ಲೋಕಪಾಲರ ವಿಷಯ ಹೇಳಿದರು. ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ರೆಕಮೆಂಡ್ ಆಗಿ ಬಂದು ಇವತ್ತು ಲೋಕ ಸಭೆಯಲ್ಲಿ ಇರತಕ್ಕ ಮಸೂದೆಯ ಪ್ರಕಾರ ಹಿಂದೆ ಅಧಿಕಾರದಲ್ಲಿದ್ದವರನ್ನೂ ಕೂಡ ವಿಚಾರಣೆ ಮಾಡುವುದಕ್ಕೆ ಮತ್ತು ಹಾಲಿ ಇರತಕ್ಕವರನ್ನೂ ವಿಚಾರಣೆ ಮಾಡುವುದಕ್ಕೆ ಅವಕಾಶ ಇದೆ. ಕೇಂದ್ರ ಸರ್ಕಾರದ ಅಧಿಕಾರಿಗಳು ಮತ್ತು ಮಂತ್ರಿಗಳು ಮಾತ್ರವಲ್ಲ ರಾಜ್ಯಗಳಲ್ಲಿರತಕ್ಕ ಅಧಿಕಾರಿಗಳು ಮತ್ತು ಮಂತ್ರಿಗಳು ಅಲ್ಲದೇ ವಿಧಾನ ಸಭೆಯ ಸದಸ್ಯರ ಬಗ್ಗೆಯೂ ಕೂಡ ಇಂತಹ ವಿಚಾರಣೆ ಮಾಡಬೇಕೆಂಬ ಒಂದು ಪ್ರಾವಿಜನ್‌ಗೆ ಅವಕಾಶ ಇದೆ. ಆದ್ದರಿಂದ ನಿಜವಾಗಿಯೂ ಈ ಬಿಲ್ಲನ್ನು ತಯಾರುಮಾಡಬೇಕಾದರೆ ನಾನು ಭಾರಿ ಸರ್ಕಸ್ ಮಾಡಿ ಇದನ್ನು ಡ್ರಾಫ್ಟ್ ಮಾಡಿದ್ದೇನೆ. ನಿಜವಾಗಿಯೂ ಸರ್ಕಸ್ ಮಾಡಬೇಕಾಯಿತು. ಟೆಕ್ನಿಕಲಿ 100 ಪರ್ಸೆಂಟ್ ಚೆನ್ನಾಗಿ ತಯಾರು ಮಾಡಿ ಕೊಟ್ಟಿದ್ದು ತಮಗೆ ಗೊತ್ತಿದೆ. ಈ ಸಭೆಯಲ್ಲಿ ತಮ್ಮ ಅನುಮತಿಯನ್ನು ಪಡೆದೇ ಇದನ್ನು ಮಂಡಿಸಿದ್ದೇನೆ. ಹಿಂದೆ ಒಂದು ಸಾರಿ ಮಂಡಿಸಿದಾಗ ದುರಾದೃಷ್ಟವಶಾತ್ ರಾಜ್ಯಪಾಲರು ಇದನ್ನು ತೆಗೆದುಕೊಳ್ಳಬೇಕೆಂದು ಶಿಫಾರಸು ಮಾಡಲಿಕ್ಕೆ ಒಪ್ಪಲಿಲ್ಲ ಎಂದು ಸರ್ಕಾರದವರು ಹೇಳಿದರು. ಆದ್ದರಿಂದ ಆಗ ತರಲು ಸಾಧ್ಯವಾಗಲಿಲ್ಲ. ಈಗ ಬಂದಿರುವಂತಹ ಕಾಲದಲ್ಲಿ ರಾಜ್ಯಪಾಲರ ಶಿಫಾರಸು ಎಲ್ಲಾ ಆಗಿದೆ. ನಾನು ಮೊದಲೇ ಹೇಳಿದಹಾಗೆ ಬಹಳ ಸರ್ಕಸ್ ಮಾಡಿದೆ. ಫೈನಾನ್ಷಿಯಲ್ ಇಂಪ್ಲಿಕೇಷನ್ ಯಾವುದೂ ಇಲ್ಲದ ರೀತಿಯಲ್ಲಿ ನನ್ನ ಬುದ್ಧಿಗೆ ಸಮಾಧಾನ ತೋರಿದಂತೆ ಡ್ರಾಫ್ಟ್ ಮಾಡಿದ್ದೇನೆ. ನನ್ನ ಉದ್ದೇಶವಾದರೂ ಇಷ್ಟೆ. ಇಂಥಾದ್ದು ಒಂದು ಮಸೂದೆ ಚರ್ಚೆಗೆ ಬರಬೇಕು ಚರ್ಚೆಗೆ ಬಂದನಂತರ ಕೂಲಂಕಷವಾಗಿ ಪರ್ಯಾಲೋಚನೆ ಮಾಡಲ್ಪಟ್ಟು ಇಂಥ ಒಂದು ಮಸೂದೆ ಆಗಬೇಕೆಂಬುದು ಆಗಿದೆ.

12-00 NOON.

Mr. SPEAKER.—This Bill was introduced during the last Session and after introduction it came up for consideration. At that stage, the Hon. Minister for Parliamentary Affairs raised two objections: (1) that in the absence of the recommendation by the Governor under Article 205(3) the Bill cannot be proceeded with, and (2) the incapacity of the Legislature to deal with it because it affects the Judges of the High Court and all that. Sri Nanje Gowda replied to the objection. Thereafter, hon. Members Sriyuths L. Srikantaiah, H. Siddaveerappa and H. M. Channabasappa expressed their views. If hon. Member Sri Nagappa also wants to say something, he can also state his points in a few minutes.

ಶ್ರೀ ಎಚ್. ಎನ್. ನಂಜೇಗೌಡ.—ಒಂದು ಉದ್ದೇಶಕ್ಕಾಗಿ ನಾನು ಈ ಪ್ರಯತ್ನ ಮಾಡಿದೆ. ಏನೆಂದರೆ ಈ ಸರ್ಕಾರದ ಮನಸ್ಸು ಏನಿದೆ, ಇಂಥ ಒಂದು ಮಸೂದೆ ಇಲ್ಲಿ ಚರ್ಚೆಯಾಗಿ ಸರ್ಕಾರದ ಮನೋಭಿಪ್ರಾಯವೇನು, ಆ ಕಡೆ ಕುಳಿತಿರುವ ಗೆಳೆಯರ ಅಭಿಪ್ರಾಯವೇನು, ಇಂಥ ಕಾನೂನು ಇರಬೇಕು ಎಂದು ಹೇಳುತ್ತಾರೆಯೇ, ಇರಬೇಕಾಗಿಲ್ಲ, ಎಂದು ಹೇಳುತ್ತಾರೆಯೇ ಅಷ್ಟನ್ನಾದರೂ ಅವರಿಂದ ಹೇಳಿಸಬೇಕು ಎನ್ನುವುದೇ ನನ್ನ ಉದ್ದೇಶವಾಗಿದೆ.

Mr SPEAKER.—If I have understood the mind of the Government, the Hon. Minister for Parliamentary Affairs also says that there is necessity for such a law.

Sri H. M. CHANNABASAPPA.—That does not amount to a categorical assurance.

Mr. SPEAKER.—However, I do not want to interfere either way in such matters.

ಶ್ರೀ ಎಚ್. ಎನ್. ನಂಜೇಗೌಡ.—ಕ್ಯಾಟಗಾರಿಕಲ್ಲಾಗಿ ಅವರ ಅಭಿಪ್ರಾಯವೇನು ಎನ್ನುವುದು ಅರ್ಥವಾಗಲಿಲ್ಲ ಎನ್ನುವ ಉದ್ದೇಶದಿಂದ ಇದನ್ನು ನಾನು ತಂದಿದ್ದೇನೆ. ಅದನ್ನು ಅವರು ತಪ್ಪಿಸಿಕೊಳ್ಳುವ ರೀತಿಯಲ್ಲಿ, ನೇರವಾಗಿ ಅದನ್ನು ಬೇಡ ಎನ್ನುವುದಕ್ಕೆ ಬದಲಾಗಿ ಟೆಕ್ನಿಕಲ್ ಆಗಿ ಸರಿಯಿಲ್ಲ, ರಾಜ್ಯಪಾಲರ ರೆಕಮೆಂಡೇಷನ್ ಇಲ್ಲ, ಎನ್ನುವ ನೆಪಗಳನ್ನು ಅವರು ತರುತ್ತಿದ್ದಾರೆನ್ನುವುದನ್ನು ನಾನು ತಿಳಿದುಕೊಂಡಿದ್ದೇನೆ. ಈಗಲೂ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತೇನೆ, ನಾನು ತಂದಿರುವ ಇಂಥ ಕಾನೂನಿನಿಂದ ತಮಗೆ ತಾಪತ್ರಯವಾಗುತ್ತದೆ, ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆ, ತಮ್ಮ ಪರಿಸ್ಥಿತಿ ಪ್ರಕೋಪಕ್ಕೆ ಹೋಗುತ್ತದೆ, ಅದರಿಂದ ರಕ್ಷಿತರಾಗಿರಬೇಕು ಎನ್ನುವ ಉದ್ದೇಶಕ್ಕಾಗಿ ಇಂತಹ ಕಾನೂನನ್ನು ವಿರೋಧ ಮಾಡುತ್ತೇವೆಂದು ಹೇಳಲಿ. ಅವರು ಬಹುಮತದಲ್ಲಿರುವುದರಿಂದ ನಾನು ಇದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಮಂಗಳೂರು ನೀರು ಸರಬರಾಜು ಮತ್ತು ಇಂಥವಕ್ಕೆ ಸಂಬಂಧಪಟ್ಟ ಕೆಲವು ತಪ್ಪುಗಳಿರಬಹುದು. ಇಂಥವಿರುವ ಕಾಲದಲ್ಲಿ ನಾನು ಇಂಥ ಕಾನೂನು ತಂದರೆ ನಮಗೆ ಮತ್ತು ಹಿರಿಯರಾದ ನಿಜಲಿಂಗಪ್ಪನವರಿಗೆ ಮುಂತಾದವರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಈ ಕಾನೂನನ್ನು ಒಪ್ಪುವುದಿಲ್ಲ ಎಂದು ಘಂಟಾಘೋಷವಾಗಿ ತಮ್ಮ ತೀರ್ಮಾನವನ್ನು ಹೇಳಲಿ, ಈ ಬಿಲ್ಲನ್ನು ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಆದರೆ ಟೆಕ್ನಿಕಲ್ ಆಗಿ ಸರಿಯಿಲ್ಲ ಎಂದು ಹೇಳುವುದು ಸರಿಯಿಲ್ಲ. ನಾನು ಇನ್ನೂ ವಿದ್ಯಾರ್ಥಿ. ವಿದ್ಯಾರ್ಥಿಯಾದ ಮೇಲೆ ನನಗೆ ತಜ್ಞರ ಸಹಾಯವಿರುವುದಿಲ್ಲ. ಸರ್ಕಾರದವರಿಗಾದರೆ ಲಾ ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ ಹೀಗೆ ಬೇಕಾದಷ್ಟು ಸಿಬ್ಬಂದಿ ವರ್ಗ ಇರುವುದರಿಂದ ಅವರು ಚೆನ್ನಾಗಿ ಡ್ರಾಫ್ಟ್ ಮಾಡಬಹುದು. ಆದರೆ ನಾನು ನನ್ನ ಬುದ್ಧಿಗೆ ಪರಿಮಿತವಾಗಿ ಡ್ರಾಫ್ಟ್ ಮಾಡಿದ್ದೇನೆ. ಇದು ಟೆಕ್ನಿಕಲೀ ಸರಿಯಿಲ್ಲ ಎಂದು ಹೇಳುವುದಾದರೆ, ಪುನಃ ಕಷ್ಟಪಟ್ಟು ಹಿರಿಯರನ್ನು ಕೇಳಿ ಡ್ರಾಫ್ಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇದರಿಂದ ಸ್ವಲ್ಪ ಕಾಲ ತಡವಾಗುತ್ತದೆ. ಆದರೆ ಸರ್ಕಾರದವರೇ ಇಂಥ ಒಂದು ಕಾನೂನನ್ನು ತರುವುದಾಗಿ ಹೇಳಿದರೆ ನಾನು ಈ ಬಿಲ್ಲನ್ನು ವಾಪಸು ತೆಗೆದುಕೊಳ್ಳುತ್ತೇನೆ. ಇನ್‌ಕ್ವೈರಿ, ಇನ್‌ಕ್ವೈರಿಂಗ್ ಜಜ್ ಇಂಥ ಪದಗಳಿಗೆ ಇರುವ ಅರ್ಥ ವಿವರಣೆಯಲ್ಲಾಗಲೀ, ಅಥವಾ ಬೇರೆ ಯಾವುದೇ ಭಾಗದಲ್ಲಾಗಲೀ ತಿದ್ದುಪಡಿಗಳನ್ನು ಸರ್ಕಾರದವರು ತರುವುದಾದರೆ ಅದನ್ನು ಕೂಡ ಒಪ್ಪಿಕೊಳ್ಳಬಹುದು. ಆದರೆ ಯಾವುದೋ ನೆವಗಳನ್ನು ಒಡ್ಡುವುದು ಬೇಡ. ಸರ್ಕಾರದವರೇ ಇಂಥ ಕಾನೂನು ಬೇಕಾಗಿದೆ, ತರುತ್ತೇವೆ ಎಂದು ಹೇಳುವುದಾದರೆ ನಾನು ಇನ್ನೊಂದು ಸಲ ಡ್ರಾಫ್ಟ್ ಮಾಡುವ ತಂಟೆಗೆ ಹೋಗುವುದಿಲ್ಲ. ಇಲ್ಲಿ ಚರ್ಚೆಯಾಗಿ, ಸಭೆಯ ಕಾಲ ವ್ಯರ್ಥವಾಗಿ ಅನಂತರ ಬಿದ್ದು ಹೋಗುವುದು ಬೇಡ. ಇಂಥ ಕಾನೂನಿನಿಂದ ಕೆಲವಾರು ಜನರಿಗೆ ತೊಂದರೆಯಾಗುತ್ತದೆ, ಬೇಡ ಎಂದರೆ ನಾನು ವಾಪಸು ತೆಗೆದುಕೊಳ್ಳುತ್ತೇನೆ. ಇಂಥ ಕಾನೂನಿನ ಅವಶ್ಯಕತೆ ಇದೆ, ಈಗ ತಂದಿರುವುದು ಸರಿಯಾಗಿಲ್ಲ, ಸರ್ಕಾರ ಲಾ ಡಿಪಾರ್ಟ್‌ಮೆಂಟಿನ ಮುಖಾಂತರ ಇದೇ ಅರ್ಥ ಬರತಕ್ಕ ಕಾನೂನನ್ನು ತರುವುದಾಗಿ ಹೇಳಿದರೆ ಅದಕ್ಕೆ ನನ್ನ ಅಭ್ಯಂತರವಿಲ್ಲ. ಶ್ರೀಮಾನ್ ಚನ್ನಬಸಪ್ಪನವರು, ಶ್ರೀಮಾನ್ ಸಿದ್ಧವೀರಪ್ಪನವರು, ಶ್ರೀಮಾನ್ ನಿಜಲಿಂಗಪ್ಪನವರು ಇವರೆಲ್ಲ ಹಿಂದೆ ಅಧಿಕಾರದಲ್ಲಿದ್ದವರು. 10–15 ವರ್ಷದ ಹಿಂದಿನಿಂದ ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ಕೊಡಿ, ಅಥವಾ ಸ್ವಾತಂತ್ರ್ಯ ಬಂದಾಗಿನಿಂದ ಎಂದರೆ 1947 ರಿಂದಲೇ ಜಾರಿಗೆ ಬರುವಂತೆ ಮಾಡಿ. ಹಿಂದೆ ಯಾರು ಯಾರು ಅಧಿಕಾರದಲ್ಲಿದ್ದರು ಅವರೆಲ್ಲರಿಗೂ ಅನ್ವಯವಾಗುವಂತೆ ಮಾಡಿ. ಮಟ್ಟೆದೊಡ್ಡಿ ಪ್ರಕರಣ ಶರಾವತಿ ಕರ್ಮ ಕಾಂಡದಿಂದ ಹಿಡಿದು ಹೊಸದಾಗಿ ಬಂದಿರುವ ಮಂಗಳೂರು ನೀರು ಸರಬರಾಜು ಯೋಜನೆ, ಬೆಂಗಳೂರು ನೀರು ಸರಬರಾಜು

ಯೋಜನೆಯನ್ನೂ ಸೇರಿಸಿಕೊಂಡು ಎಲ್ಲ ಕರ್ಮ ಕಾಂಡಗಳೂ ಸೇರಿ ಸ್ವಾತಂತ್ರ್ಯ ಬಂದಮೇಲೆ ನಮ್ಮ ರಾಜ್ಯದಲ್ಲಿ ಯಾರು ಯಾರು ಅಧಿಕಾರದಲ್ಲಿದ್ದರು ಅವರ ಅಸೆಟ್ಸ್ ಅಂಡ್ ಲಯಬಿಲಿಟೀಸ್ ಪಟ್ಟಿಯನ್ನೂ ಒಳಗೊಂಡು ಎಲ್ಲವನ್ನೂ ವಿಚಾರಣೆ ಮಾಡುವುದಕ್ಕೆ ಅವಕಾಶ ಮಾಡಿ, ಕ್ಯಾರೆಕ್ಟರ್ ಅಸಾಸಿನೇಷನ್‌ಗೆ ಅವಕಾಶವಿಲ್ಲದಂತೆ ಮಾಡೋಣ. ಇಂಥ ವಿಚಾರಗಳೆಲ್ಲವನ್ನೂ ವಿಚಾರಣೆ ಮಾಡುವುದಕ್ಕೆ ಅವಕಾಶ ಮಾಡತಕ್ಕ ಒಂದು ಮಸೂದೆಯನ್ನು ಸರ್ಕಾರದವರು ಈ ಅಧಿವೇಶನದಲ್ಲಿ ತರುತ್ತಾರೆ ಎನ್ನುವ ಭರವಸೆಯನ್ನು ಕೊಟ್ಟರೆ ನಾನು ಇದನ್ನು ವಾಪಸು ತೆಗೆದುಕೊಳ್ಳುತ್ತೇನೆ. ಮಸಿ ಬಳಿಯುವುದಕ್ಕೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಇದರಿಂದ ನನ್ನ ಮನಸ್ಸಿಗೆ ಬಹಳ ನೋವಾಗಿದೆ. ಯಾರಿಗೂ ಮಸಿ ಬಳಿಯುವುದಕ್ಕೆ ನಾನು ಈ ಮಸೂದೆಯನ್ನು ತಂದಿಲ್ಲ. ಅಂಥದಕ್ಕೆ ಅವಕಾಶವಿಲ್ಲದೆ ಇರಲಿ ಎಂದೇ, ಅದನ್ನು ತಪ್ಪಿಸಬೇಕು ಎಂದೇ ನಾನು ಈ ಬಿಲ್ಲನ್ನು ತಂದಿರುವುದು. ಯಾರಾದರೂ ಉದ್ದೇಶಪೂರಿತರಾಗಿ ಒಬ್ಬರ ಕ್ಯಾರೆಕ್ಟರ್ ಅಸಾಸಿನೇಷನ್ ಮಾಡುವುದಕ್ಕೆ ಪ್ರಯತ್ನ ಪಟ್ಟರೆ ಅಂಥವರನ್ನು ಪ್ರಾಸಿಕ್ಯೂಟ್ ಮಾಡುವ ಉದ್ದೇಶವನ್ನೂ ನಾನು ಹೊಂದಿದ್ದೇನೆ. ನಮ್ಮ ಸರ್ಕಾರಕ್ಕೆ ಒಂದು ರಕ್ಷಣೆ ಕೊಡಬೇಕು ಎನ್ನುವ ಉದ್ದೇಶದಿಂದ ತಂದಿದ್ದೇನೆ. ಅವರನ್ನು ರಕ್ಷಣೆ ಮಾಡಬೇಕೆಂದು ತಂದಿರುತ್ತೇನೆಯೇ ಹೊರತು ಭಕ್ಷಣೆ ಮಾಡುವುದಕ್ಕೆ ತಂದಿಲ್ಲ. ಸರಕಾರದವರು ಇಂಥ ಒಂದು ಮಸೂದೆ ಸಭೆಯ ಮುಂದೆ ತರುತ್ತೇವೆ ಎಂದು ಹೇಳಿದರೆ ನಾನು ನನ್ನ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಇಲ್ಲದಿದ್ದರೆ ನನ್ನ ಮಸೂದೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು. ನನ್ನ ಮಸೂದೆಯಲ್ಲಿ ಏನಾದರೂ ಆಕ್ಷೇಪಾರ್ಹವಾದ ಪದಗಳು ಇದ್ದರೆ, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ತೊಂದರೆ ಏನೂ ಇಲ್ಲ. ಇಂಥ ಪದಗಳಲ್ಲಿ ವ್ಯತ್ಯಾಸ ಮಾಡಬೇಕಾಗಿದ್ದರೆ ಅದಕ್ಕೆ ತಿದ್ದುಪಡಿ ಕೊಡಬಹುದು. ಅದಕ್ಕೆ ಪ್ರಯತ್ನ ಮಾಡುತ್ತೇನೆ. ಕೊನೆಯದಾಗಿ ನಾನು ಒಂದು ಅರಿಕೆ ಮಾಡಿಕೊಳ್ಳುತ್ತೇನೆ. ಏನೆಂದರೆ ಇದನ್ನು ಚರ್ಚೆ ಮಾಡಲು ಅವಕಾಶ ಮಾಡಿ ಕೊಡಬೇಕು ಎಂಬುದಾಗಿ. ಇಲ್ಲವೆ ಶ್ರೀಮಾನ್ ಶ್ರೀಕಂಠಯ್ಯನವರು ಹೇಳಿದ ರೀತಿಯಲ್ಲಿ ಇದನ್ನು ವಾಪಸ್ಸು ತೆಗೆದುಕೊಳ್ಳಲು ತಯಾರಾಗಿದ್ದೇನೆ. ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ಎಂ. ನಾಗಪ್ಪ.—ಮಾನ್ಯ ಅಧ್ಯಕ್ಷರೇ, ಒಂದೆರಡು ಮುಖ್ಯ ವಿಚಾರಗಳನ್ನು ತಮ್ಮ ಮೂಲಕ ಸರಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಶ್ರೀಮಾನ್ ಪುಟ್ಟಸ್ವಾಮಿಯವರು ಕಾನ್ಸ್ಟಿಟ್ಯೂಷನ್ನಿನ ಸೆಕೆಂಡ ಷೆಡ್ಯೂಲ್ ಪಾರ್ಟ್–ಡಿ 11–ಬಿ ಪ್ರಕಾರ ಆಬ್‌ಜಕ್ಷನ್ ತೆಗೆದುಕೊಂಡಿದ್ದಾರೆ. ಏನೆಂದರೆ ಈಗ ಮೈಸೂರು ಪಬ್ಲಿಕ್ ಮೆನ್ ಇನ್‌ಕ್ವಾಯರೀಜ್ ಬಿಲ್ ನಂಬರ್ 7 ಆಫ್ 1969 ಚಾಪ್ಟರ್ 3, ಸೆಕ್ಷನ್ 8 ರಲ್ಲಿ ಚೀಫ್ ಜಸ್ಟಿಸ್‌ರು ಸಬಾರ್ಡಿನೇಟ್ ಜಡ್ಜ್‌ರವರಿಗೆ ಪರಿಶೀಲನೆಗೆ ಕಳಿಸಬಹುದು ಎಂದು ಇದೆ. ಇದು ಮನಿ ಬಿಲ್ ಆಗುವುದಿಲ್ಲ, ಇದರಲ್ಲಿ ಫೈನಾನ್ಸಿಯಲ್ ಇಂಪ್ಲಿಕೇಷನ್ಸ್ ಉದ್ಭವವಾಗುವುದಿಲ್ಲ ಇದಕ್ಕೆ ಗವರ್ನರರ ಅನುಮತಿ ಬೇಕು ಬೇಡ ಹೇಳುವುದಕ್ಕೆ ಮುಂಚೆ ಜಡ್ಜ್‌ರವರ ಡ್ಯೂಟಿ ಪರಿಗಣಿಸಬೇಕಾಗುತ್ತದೆಯೇ ಇಲ್ಲವೇ ಎನ್ನುವುದನ್ನು ನೋಡಬೇಕಾಗುತ್ತದೆ. ಇದನ್ನೆಲ್ಲಾ ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಆರ್ಟಿಕಲ್ 246 ರ ಪ್ರಕಾರ ಲೆಜಿಸ್ಲೇಚರ್‌ನ ಅಧಿಕಾರದಲ್ಲಿ ಯಾವ ಕಾಯಿದೆ ತರಬಹುದು ಎನ್ನುವುದು ಇದೆ. ಈ ಬಿಲ್ಲಿನಲ್ಲಿ ನಮೂದಿಸಿದಂಥ ಕೆಲಸ ಕಾರ್ಯಗಳು ಜಡ್ಜ್‌ಗೆ ಸಂಬಂಧಪಟ್ಟದ್ದು ಆಗಿದೆಯೆಂದರು. ಈ ಮಾನ್ಯ ಸಭೆಗೆ ಇಂಥ ಕಾನೂನು ಮಾಡುವ ಅಧಿಕಾರ ಉಂಟು. ಈ ಸಭೆಯ ಕಾಯಿದೆಯಿಂದ ಹೈಕೋರ್ಟ್ ನ್ಯಾಯಾಧೀಶರು ಇಂಥಿಂಥ ಕ್ರಮ ಮಾಡಬಹುದು ಎಂದು ಹೇಳತಕ್ಕ ಅಧಿಕಾರ ಕೊಡುತ್ತದೆ. ಸೆಕಂಡ್ ಷೆಡ್ಯೂಲಿನಲ್ಲಿರುವ ಡ್ಯೂಟೀಜ್‌ಗೆ ಇದು ವಿರೋಧವಾಗುತ್ತದೆ ಎಂದು ಮಂತ್ರಿಗಳು ಏನು ಹೇಳಿದರೋ ಅದು ಸರಿಯಾದ ಇಂಟರ್‌ಪ್ರಿಟೇಷನ್ ಅಲ್ಲ. ರೂಲಿಂಗ್ಸ್ ಓದಿದರೆ ನನಗೆ ಅರ್ಥವಾಗಲಿಲ್ಲ. ನಮ್ಮ ಹೈಕೋರ್ಟಿನಲ್ಲಿ ಇಂಥ ಒಂದು ಕೇಸು ಆಗಿದೆ. ಬಹುಶಃ ಅವರು ಈ ಕೇಸಿನ ಬಗ್ಗೆ ಓದಿದ್ದು ನಾನು ಕೇಳಲಿಲ್ಲ. 1965, ಪುಟ 158, ಶಿವರುದ್ರಪ್ಪ ಕಪೂರಚಂದ ಮಾರವಾಡಿ ಈ ಕೇಸಿನಲ್ಲಿ ನಿರ್ಣಯವಾಗಿದೆ. ಅಲ್ಲಿ ಇರತಕ್ಕಂಥ ಪರಿಸ್ಥಿತಿ ಉದ್ಭವಿಸಿದೆ. ಆ ಕೇಸಿನಲ್ಲಿ ಇರತಕ್ಕ ಪಾಯಿಂಟ ಸಂಪೂರ್ಣವಾಗಿ ಸಂಬಂಧಪಡುತ್ತದೆ. ನಮ್ಮ ಹೈ ಕೋರ್ಟು ನಿರ್ಣಯವನ್ನು ಇದಕ್ಕಿಂತ ಹೆಚ್ಚಿನದಾದ ಸುಪ್ರೀಂ ಕೋರ್ಟು ಓವರ್ ರೂಲ್ ಮಾಡದೇ ಇರುವಾಗ ಮಾನ್ಯ ಮಂತ್ರಿಗಳು ಪುಸ್ತಕ ತಂದು ತೋರಿಸುವ ಅಗತ್ಯ ಇರಲಿಲ್ಲ.

1965ರ ಡಿಸಿಷನ್ ಕೋಟ್ ಮಾಡಿದರೆ ಪ್ರತಿಕೋಟ್ ಮಾಡುತ್ತೇವೆ ಎಂದು ಹೇಳುತ್ತಾರೆ. ಬುಕ್ ಕೋಟ್ ಮಾಡಿದರೆ ವಾದವಿವಾದಕ್ಕೆ ಆಸ್ಪದ ಇಲ್ಲ. ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟೀಸ್ ಏನಾಗಿದೆ ಎನ್ನುವುದನ್ನು ಸ್ಪಷ್ಟವಾದ ಪದಗಳಲ್ಲಿ ಹೇಳಿದ್ದೇನೆ. ಆ ದೃಷ್ಟಿಯಿಂದ ಈ ಸಭೆಯಲ್ಲಿ ವಾದ ಉದ್ಭವಿಸುವುದಕ್ಕೆ ಕಾರಣವಿಲ್ಲ. ಏನು ನಿರ್ಣಯ ಮಾಡಿದೆ ಆ ನಿರ್ಣಯದ ಪ್ರಕಾರ ತಾವು

(ಶ್ರೀ ಎಂ. ನಾಗಪ್ಪ)

ರೂಲಿಂಗ್ ಕೊಟ್ಟರೆ ಯಾವ ವಿಧವಾದ ತೊಂದರೆಯೂ ಆಗಲಿಕ್ಕಿಲ್ಲ. ಈ ಮಾನ್ಯ ಸಭೆಗೆ ರೂಲಿಂಗ್ ಬೇಕಾಗಿದೆ. ಶ್ರೀಮಾನ್ ನಂಜೇಗೌಡರು ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಇಂಥ ಪರಿಸ್ಥಿತಿಯಲ್ಲಿ ಸರ್ಕಾರಕ್ಕೂ ವಿರೋಧಿಸಬೇಕಾದ ಪರಿಸ್ಥಿತಿ ಬರುತ್ತದೆ. ಈ ಮಾನ್ಯಸಭೆಗೆ ನಿರ್ಣಯ ಬೇಕೇ ಬೇಕು. ಪ್ರತಿಸಾರಿ ಹೈಕೋರ್ಟ್ ರೂಲಿಂಗ್ಸ್ ತಂದು ವಾದವಿವಾದ ಮಾಡುವುದಕ್ಕಿಂತ ತಾವು ಗೈಡ್‌ಲೈನ್ಸ್ ಹಾಕಿ ಇಂತಿಂಥ ಪರಿಸ್ಥಿತಿಯಲ್ಲಿ ಹೈಕೋರ್ಟ್ ರೂಲಿಂಗ್ಸ್ ರೆಫರ್ ಮಾಡಿ ಎಂದು ಹೇಳಿ ಮಾನ್ಯ ಮಂತ್ರಿಗಳು ರೂಲಿಂಗ್ ಕೊಟ್ಟಿದ್ದಾರೆ ಎಂದು ಹೇಳಿದರು ನಾನು ಕೋಟ್ ಮಾಡಿದ್ದು ಅಪ್ರೋಪ್ರಿಯೇಟ್ ರೂಲಿಂಗ್ ಇದೆ, ನನ್ನ ಕೇಸು ಅಪ್ಲೈ ಆಗುತ್ತದೆ. ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದರೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ದಯವಿಟ್ಟು ನಿರ್ಣಯ ಕೊಡಿ. ಇದು ಮುಂದಕ್ಕೆ ಸಹಾಯವಾಗುತ್ತದೆ.

Mr. SPEAKER.—I resume the ruling.

(v) Mysore University (Amendment) Bill, 1969

Motion to Consider

Mr. SPEAKER.—Now Hon. Member Sri L Srikantaiah may move his Bill, which was introduced on 28th March 1969.

Sri L. SRIKANTAIAH.—I beg to move :

"That the Mysore University (Amendment) Bill, 1969 be taken into consideration".

Mr. SPEAKER.—Motion moved :

"That the Mysore University (Amendment) Bill, 1969 to be taken for consideration".

†**ಶ್ರೀ ಎಲ್. ಶ್ರೀಕಂಠಯ್ಯ.**—ಸ್ವಾಮಿ, ಈ ಒಂದು ತಿದ್ದುಪಡಿ ಶಾಸನದ ಬಗ್ಗೆ ನಾನು ಕೆಲವು ಅಂಶಗಳನ್ನು ಸೂಕ್ಷ್ಮವಾಗಿ ಹೇಳುವುದಕ್ಕೆ ಪ್ರಯತ್ನಪಡುತ್ತೇನೆ. 1956ರ ಮೈಸೂರು ವಿಶ್ವವಿದ್ಯಾನಿಲಯದ ಶಾಸನದ ರೀತ್ಯಾ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ಸ್ ಏನು ಮಾಡಿದ್ದಾರೆ ಅದರ ಸ್ವಭಾವ ಮತ್ತು ಅದರ ಅವಶ್ಯಕತೆ ಬಗ್ಗೆ ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕಾದರೆ ಅದರ ಹಿನ್ನಲೆಯನ್ನು ನಾನು ಈ ಮಾನ್ಯ ಸಭೆಗೆ ಸ್ವಲ್ಪ ಹೇಳಬೇಕಾಗಿದೆ.

1956ರ ಮುನ್ನ ಮೈಸೂರು ವಿಶ್ವವಿದ್ಯಾನಿಲಯದ ಸಂಬಂಧಪಟ್ಟಂತೆ ಒಂದು ಶಾಸನ ಇತ್ತು. 1956 ರಲ್ಲಿ ಇದು ತಿದ್ದುಪಡಿ ಆಗಿದೆ; ನನಗೆ ತಿಳಿದಮಟ್ಟಿಗೆ 1956ಕ್ಕೆ ಮುನ್ನ ಮೈಸೂರು ವಿಶ್ವವಿದ್ಯಾನಿಲಯದ ಅಂಗರಚನೆಯಲ್ಲಿ ಪ್ರಾಮುಖ್ಯವಾದ ಯೂನಿವರ್ಸಿಟಿ ಕೌನ್ಸಿಲ್ ಅಥವಾ ಸಿಂಡಿಕೇಟ್ ಇತ್ತು. ಈಗ ಇರುವ ಹಾಗೆ ಉಪಅಂಗವಾಗಿ ಯೂನಿವರ್ಸಿಟಿ ಕೌನ್ಸಿಲ್ ಮತ್ತು ಸೆನೆಟ್ ಭಾಗಗಳು ಇದ್ದವು. ಮುಖ್ಯವಾಗಿ ಅಧ್ಯಾಪಕ ವರ್ಗವನ್ನು ಮತ್ತು ಇತರರನ್ನು ನೇಮಕ ಮಾಡತಕ್ಕಂಥ ಪೂರ್ಣ ಅಧಿಕಾರ ಯೂನಿವರ್ಸಿಟಿ ಅಥವಾ ಸಿಂಡಿಕೇಟ್‌ಗೆ ಇತ್ತು. ಪದ್ಧತಿ ಹೇಗೆ ಇತ್ತು ಎಂದರೆ ಯಾವುದೋ ಒಂದು ಅಡ್ವೈಸರಿ ಬಾಡಿ ಮಾಡಿಕೊಂಡು ಅವರು ಕ್ಯಾಂಡಿಡೇಟ್ಸ್‌ನನ್ನು ಇಂಟರ್‌ವ್ಯೂ ಮಾಡಿ ಅವರ ರೆಕಮೆಂಡೇಷನ್ಸ್ ಸಿಂಡಿಕೇಟ್ ಅಥವಾ ಕೌನ್ಸಿಲ್‌ಗೆ ಬಂದರೆ, ಅವು ಸಿಂಡಿಕೇಟ್, ಛಾನ್ಸಲರ ಒಪ್ಪಿಗೆ ಪಡೆದು ಅವರನ್ನು ಅಪಾಯಿಂಟ್ ಮಾಡತಕ್ಕಂಥ ಪದ್ಧತಿ ಇತ್ತು. ನೇರವಾಗಿ ಸರ್ಕಾರದವರೇ ಅಪಾಯಿಂಟ್ ಮಾಡುತ್ತಿದ್ದರು ಎಂದು ಹೇಳಬಹುದು. ಈ ಒಂದು ಕಾರ್ಯಾಚರಣೆಯಲ್ಲಿ ಬಹಳ ವಿಧವಾದ ಲೋಪದೋಷಗಳು ಕಂಡುಬಂದಿವೆ ಎಂದರೆ ವಿಶ್ವವಿದ್ಯಾನಿಲಯದ ಕೌನ್ಸಿಲ್‌ನಲ್ಲಿ ಯಾರು ಹೆಚ್ಚು ಪ್ರಭಾವವನ್ನು ಬೀರುವುದಕ್ಕೆ ಅವಕಾಶ ಇದೆಯೋ ಅಥವಾ ಯಾವ ಕೌನ್ಸಿಲ್ ಸದಸ್ಯರ ಅವರ ಅನುಯಾಯಿಗಳಾಗಿದ್ದಾರೋ ಅಥವಾ ಅವರ ಚೇಲಗಳಾಗಿದ್ದಾರೋ ಅಂತಹವರಿಗೆ ಅರ್ಹತೆ ಇರಲಿ ಅಥವಾ ಇಲ್ಲದೇ ಹೋಗಲಿ ಅಪಾಯಿಂಟ್‌ಮೆಂಟ್ ಆಗುತ್ತಾ

ಇತ್ತು. 1956 ನೇ ಶಾಸನ ಬಂದಾಗ ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಮತ್ತು ಬೋಧಕ ವಿಷಯದಲ್ಲಿ ಈ ವಿಧವಾದ ತಾರತಮ್ಯ ಮಾಡಿ ಅಧಿಕಾರಿ ವರ್ಗವನ್ನು ನೇಮಕ ಮಾಡುವುದರಿಂದ ದಕ್ಷತೆಗೆ ಚ್ಯುತಿ ಬರುತ್ತದೆ ಎಂದು ತಿಳಿದುಕೊಂಡು ಈ ಸಭೆ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ಸ್ ಎಂದು ಒಂದು ಸಮಿತಿಯನ್ನು ಮಾಡಿತು. ಅಂದರೆ 26ನೇ ಸೆಕ್ಷನ್ ಯೂನಿವರ್ಸಿಟಿ ಅಮೆಂಡ್‌ಮೆಂಟ್ ಆಕ್ಟ್ 1956 ಪ್ರಕಾರ ಯೂನಿವರ್ಸಿಟಿ ಕೌನ್ಸಿಲ್ ಅಥವಾ ಸಿಂಡಿಕೇಟಿನ ಯಾವುದು ಒಂದು ಕಾರ್ಯ ನಿರ್ವಾಹ ಮಂಡಲ ಇತ್ತು ಅವರಿಂದ ಆ ಅಧಿಕಾರವನ್ನು ತೆಗೆದುಕೊಂಡು ಬಿಟ್ಟಿತು. ಯಾವುದೇ ವಿಶ್ವವಿದ್ಯಾನಿಲಯ ಅಧ್ಯಾಪಕ ವರ್ಗವನ್ನು ನೇಮಕ ಮಾಡಿದರೂ ಸಂಪೂರ್ಣ ಅಧಿಕಾರವನ್ನು ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ಸ್‌ಗೆ ಕೊಟ್ಟರು.

1956 ರಲ್ಲಿ 26ನೇ ಸೆಕ್ಷನ್ ಅಮೆಂಡ್ ಮಾಡತಕ್ಕಂಥ ಉದ್ದೇಶ ಏನೆಂದರೆ ಅವರ ಭಾವನೆಯಲ್ಲಿ ಈ ಒಂದು ಇಂಡಿಪೆಂಡೆಂಟ್ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ಸ್, ಪಬ್ಲಿಕ್ ಸರ್ವಿಸ್ ಕಮೀಷನ್ ಅಥವಾ ಸೆಂಟ್ರಲ್ ಪಬ್ಲಿಕ್ ಸರ್ವಿಸ್ ಕಮೀಷನ್ ಇರುವ ಹಾಗೆ ಮಾಡಿದರೆ, ಅವರು ಯಾವ ಪ್ರಭಾವಕ್ಕೂ ಒಳಗಾಗುವುದಿಲ್ಲ. ಮಾನ್ಯ ದೊಡ್ಡ ಗಣ್ಯ ವ್ಯಕ್ತಿಗಳು ಲರ್ನೆಡ್ ಪ್ರೊಫೆಸರ್ಸ್ ಬಹಳ ನಿಷ್ಪಕ್ಷಪಾತವಾಗಿ ವ್ಯಕ್ತಿಯ ಅರ್ಹತೆಯನ್ನು ತಿಳಿದುಕೊಂಡು ಯೂನಿವರ್ಸಿಟಿ ಸಿಂಡಿಕೇಟ್‌ಗೆ ರೆಕಮೆಂಡೇಷನ್ಸ್ ಮಾಡುತ್ತಾರೆ ಎಂದು ಇತ್ತು. ಇನ್ನೊಂದು ವಿಷಯ ಏನೆಂದರೆ 26ನೇ ಸೆಕ್ಷನ್ ಪ್ರಕಾರ ಬೋರ್ಡ್ ರೆಕಮೆಂಡೇಷನ್ಸ್ ಮಾಡಿದರೆ ಆ ರೆಕಮೆಂಡೇಷನ್ಸನ್ನು ಸಿಂಡಿಕೇಟಿನವರು ಪುನಃ ಕನ್ಸಿಡರ್ ಮಾಡುವುದಕ್ಕೆ ಅಧಿಕಾರ ಕೊಟ್ಟಿಲ್ಲ. ನೇರವಾಗಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ಸ್‌ನ ರೆಕಮೆಂಡೇಷನ್ ಛಾನ್ಸಲರ್‌ಗೆ ಹೋಗುತ್ತದೆ. ಛಾನ್ಸಲರು ರೆಕಮೆಂಡೇಷನ್ಸ್‌ಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ನೋಡಿ ಇಂತಹವರನ್ನು ನೇಮಕ ಮಾಡಿದ್ದೇವೆ ಎಂದು ಹುಕುಮ್ ಅನ್ನು ಹೊರಡಿಸುತ್ತಾರೆ. ಸಿಂಡಿಕೇಟಿನವರು ಇದರ ಬಗ್ಗೆ 'ಚ' ಕಾರ ಶಬ್ದವನ್ನೂ ಕೂಡ ಎತ್ತುವುದಕ್ಕೆ ಅವಕಾಶವಿಲ್ಲ. ಹಿಂದೆ ಈ ಕೌನ್ಸಿಲ್‌ನ ಅಧಿಕಾರ ದುರುಪಯೋಗವಾಗಿ ತಮ್ಮ ತಮ್ಮ ಕಡೆಯವರಿಗೆ ಅರ್ಹತೆ ಇಲ್ಲದೇ ಇರುವವರಿಗೆ ಯಾವುದೋ ಪಕ್ಷಪಾತಕ್ಕೆ ಒಳಗಾಗಿ ಅಥವಾ ಪ್ರೆಷರ್‌ಗೆ ಒಳಗಾಗಿ ನೇಮಕಮಾಡುತ್ತಿದ್ದರು. ಅದು ಪೂರ್ತಿ ತಪ್ಪಿ ಹೋಗುತ್ತದೆ ಮತ್ತು ಅದು ವಿದ್ವತ್‌ಮಂಡಲಿಯಾಗಿರುವುದರಿಂದ ನೇಮಕದ ಬಗ್ಗೆ ಯಾವ ವಿಧವಾದ ತಂಟೆತಕರಾರುಗಳು ಬರುವುದಿಲ್ಲ ಎನ್ನುವ ಉದ್ದೇಶದಿಂದ ಮಾಡಿದ್ದಾಗಿದ್ದಿತು.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ (ವಿದ್ಯಾಶಾಖೆಯ ಉಪಮಂತ್ರಿಗಳು).—1962 ರಲ್ಲಿ ಒಂದು ಅಮೆಂಡ್‌ಮೆಂಟ್ ಆಗಿರುವುದು ತಮ್ಮ ಗಮನದಲ್ಲಿದೆಯೋ?

ಶ್ರೀ ಎಲ್. ಶ್ರೀಕಂಠಯ್ಯ.—26ನೇ ಸೆಕ್ಷನ್ ಅಮೆಂಡ್ ಆಗಿದೆಯೋ ಹೇಳಿ.

Sri N. M. KOTRABASAIAH SOGI.—It consists of a representative of the Syndicate also.

Sri L. SRIKANTAIAH.—Factually I am not wrong composition of the Board of appointment ಆಲ್ಟರ್ ಮಾಡಿದರೇ ಹೊರತು ಸಿಂಡಿಕೇಟ್ ಅದರಮೇಲೆ ವಿಚಕ್ಷಣೆ ನಡೆಸತಕ್ಕ ಅಧಿಕಾರವನ್ನು ಕೊಡಲಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

Mr. SPEAKER.—I would like to extend the time for discussion if the House is inclined.

HON. MEMBERS.—Yes.

ಅಧ್ಯಕ್ಷರು.—ಸಭೆಯ ಕಾಲವನ್ನು ಇನ್ನೂ ಅರ್ಧ ಗಂಟೆ ಮುಂದುವರಿಸುತ್ತೇನೆ.

12-30 P.M.

ಶ್ರೀ ಎಲ್. ಶ್ರೀಕಂಠಯ್ಯ.—ಸೆಕ್ಷನ್ 26 ಅಮೆಂಡುಮೆಂಟ್ ಆಗಿದೆ ಎಂದು ಮಾನ್ಯ ಉಪಮಂತ್ರಿಗಳಾದ ಶ್ರೀಮಾನ್ ಸೋಗಿಯವರು ಇಲ್ಲಿ ಹೇಳಿದರು. ಅದರಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನಲ್ಲಿ ಮಾತ್ರ ಬದಲಾವಣೆಗಳನ್ನು ಮಾಡಿದ್ದಾರೆಯೇ ಹೊರತು ಇದರಲ್ಲಿದ್ದ ಅಧಿಕಾರಗಳನ್ನು ಬದಲಾಯಿಸಿಲ್ಲ ಮತ್ತು ಸಿಂಡಿಕೇಟಿಗೆ ಇದರಮೇಲೆ ಅಧಿಕಾರವನ್ನು ಚಲಾಯಿಸುವುದಕ್ಕೆ ಯಾವ ಅಧಿಕಾರವನ್ನು ಕೊಟ್ಟಿಲ್ಲ. ಇದನ್ನು ನಾನು ಮೊದಲೇ ಹೇಳಿದ್ದೇನೆ. 26ನೇ ಸೆಕ್ಷನ್‌ನಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನಲ್ಲಿ ಯಾವ ರೀತಿ ನೇಮಕಗಳನ್ನು ಮಾಡಬೇಕು ಮತ್ತು ಅದಕ್ಕೆ ಹೇಗೆ ಮನ್ನಣೆ ಕೊಡಬೇಕು ಮತ್ತು ಯಾವ ರೀತಿ ಪಕ್ಷಾತೀತವಾಗಿರಬೇಕು ಎನ್ನುವ ಘನ ಉದ್ದೇಶ

(ಶ್ರೀ ಎಲ್. ಶ್ರೀಕಂಠಯ್ಯ)

ದಿಂದ ತಂದಿದ್ದಾರೋ ಅಂತಹ ಉದ್ದೇಶ ಕಾರ್ಯಗತವಾಗುತ್ತಿಲ್ಲ. ನಾನು ಕೂಡ 1936 ರಿಂದಲೂ ಸೆನೆಟ್ ಸದಸ್ಯನಾಗಿದ್ದೇನೆ ಮತ್ತು ಈಗ ಸಿಂಡಿಕೇಟ್ ಸದಸ್ಯನಾಗಿಯೂ ಇದ್ದೇನೆ. ನನ್ನ ಅನುಭವದಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ಎಂದು ಏನು ಮಾಡಿದ್ದಾರೋ ಅದು ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ ಇದಕ್ಕೆ ಬೇಕಾದರೆ ಮೂರು ನಾಲ್ಕು ನಿದರ್ಶನಗಳನ್ನು ಕೊಟ್ಟರೆ ಇವರ ಬಗ್ಗೆ ಸ್ಪಷ್ಟವಾಗಿ ತಾವೇ ತಿಳಿಯಬಹುದು. ಸಾಮಾನ್ಯವಾಗಿ ಸಿಂಡಿಕೇಟಿನಲ್ಲಿ ಯೂನಿವರ್ಸಿಟಿ ಕೌನ್ಸಿಲ್‌ನಲ್ಲಿ ಪ್ರೊಫೆಸರುಗಳಿಗೆ ಹೆಡ್ ಆಗಿರುವವರು, ಅಕೆಡೆಮಿಕ್ ಕೌನ್ಸಿಲ್‌ನಲ್ಲಿ ಸದಸ್ಯರಾದ ಕೆಲವರು ಹಾಗೂ ಇನ್ನಿತರ ಎಕ್ಸ್ ಅಫಿಷಿಯೋ ಸದಸ್ಯರುಗಳು ಇರುತ್ತಾರೆ. ಇದು ಒಂದು ಎಕ್ಸ್‌ಪರ್ಟ್ ಬಾಡಿ. ಇಂತಹ ಎಕ್ಸ್‌ಪರ್ಟ್ ಬಾಡಿಯವರು ಯಾವ ರೀತಿ ವಿಚಕ್ಷಣೆಯಿಂದ ಕೆಲಸ ಮಾಡುತ್ತಾರೆ ಎನ್ನುವುದನ್ನು ಮುಂದೆ ಹೇಳುತ್ತೇನೆ.

ಈಗ 26ನೇ ಸೆಕ್ಷನ್ ಪ್ರಕಾರ ಬೋರ್ಡ್ ಆಫ್ ಅಪಾಯಿಂಟ್‌ಮೆಂಟುಗಳನ್ನು ಮಾಡಿರುವ ಪ್ರಸಂಗಗಳು ಯಾವ ರೀತಿ ಸಂದೇಹಕ್ಕೆ ಎಡೆಕೊಡುತ್ತವೆ ಎನ್ನುವುದನ್ನು ವ್ಯಕ್ತಮಾಡಲು ಎರಡು ಮೂರು ನಿದರ್ಶನಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ನಿಜವಾಗಿಯೂ ತಮ್ಮ ಶಿಫಾರಸ್ಸುಗಳನ್ನು ಮಾಡುವಾಗ ಅವರು ತಮ್ಮ ಕರ್ತವ್ಯವನ್ನು ನಿಷ್ಪಕ್ಷಪಾತವಾಗಿ ಮಾಡಿದ್ದಾರೆಯೇ ಎನ್ನುವುದಕ್ಕಾಗಿ ಹೇಳುತ್ತೇನೆ ಇದರಲ್ಲಿ ವ್ಯಕ್ತಿಗಳ ಹೆಸರು ಹಾಗೂ ಇಲಾಖೆ ಹೆಸರು ಹೇಳಬಾರದು ಎಂದು ಹೇಳಿದ್ದಾರೆ ಅವನ್ನು ಒಂದೂ ಹೇಳುವುದಿಲ್ಲ. ಯಾವುದೋ ಒಂದು ಡಿಪಾರ್ಟ್‌ಮೆಂಟಿನಲ್ಲಿ ಒಂದು ಕೆಲಸ ಖಾಲಿ ಬಿತ್ತು. ಅದಕ್ಕಾಗಿ ಅರ್ಜಿಗಳನ್ನು ಕರೆದರು. ಅದಕ್ಕೆ ಒಬ್ಬ ವ್ಯಕ್ತಿ ತನ್ನ ಅರ್ಹತಾ ಪತ್ರಗಳೊಡನೆ ಅರ್ಜಿ ಕಳುಹಿಸಿದ್ದರು. ಇವರನ್ನು ಎಕ್ಸ್‌ಪರ್ಟ್ ಬಾಡಿ ಇಂಟರ್‌ವ್ಯೂಗಾಗಿ ಕರೆದಾಗ ಅವರು ಅರ್ಹರಲ್ಲ ಎಂದು ಅವರ ಅರ್ಜಿಯನ್ನು ತಳ್ಳಿಹಾಕಿದರು. ಆದರೆ ಆ ವ್ಯಕ್ತಿಯಲ್ಲಿ ಎಕ್ಸ್‌ಪರ್ಟ್ ಬಾಡಿಯಲ್ಲಿರುವ ಒಬ್ಬರಿಗೆ ಇಂಟರೆಸ್ಟ್ ಇದ್ದುದರಿಂದ ಹೇಗಾದರೂ ಮಾಡಿ ಅವರಿಗೆ ಕೆಲಸ ಕೊಡಿಸಬೇಕು ಎಂದು ಪ್ರಯತ್ನಪಟ್ಟರು. ಇನ್ನೊಂದು ವೇಕೆನ್ಸಿ ಬಿದ್ದಾಗ ಮೊದಲು ಅನರ್ಹ ಎಂದು ಆಗಿದ್ದ ವ್ಯಕ್ತಿಯಿಂದ ಪುನಃ ಅರ್ಜಿ ಹಾಕಿಸಿ ಹಿಂದಿನ ಬೋರ್ಡ್ ಅವರು ಕ್ವಾಲಿಫಿಕೇಷನ್ ಇತ್ಯಾದಿಗಳಲ್ಲಿ ಸರಿಯಾಗಿಲ್ಲ ಎಂದು ಹಿಂದೆ ತೀರ್ಮಾನ ಮಾಡಿದ್ದರೂ, ಅದೇ ವ್ಯಕ್ತಿ ಎಲ್ಲದರಲ್ಲೂ ಲಾಯಕ್ಕಾಗಿದ್ದಾರೆ ಎಂದು ಫಸ್ಟ್‌ಕ್ಲಾಸು ಸರ್ಟಿಫಿಕೇಟನ್ನು ಇನ್ನೊಂದು ಬೋರ್ಡ್ ಕೊಟ್ಟು ಅವರನ್ನು ನೇಮಕವಾಗುವಂತೆ ಮಾಡಿದರು. ಹೀಗೆ ಇವರು ಮಾಡುವ ತೀರ್ಮಾನಕ್ಕೆ ನಭೂತೋನ ಭವಿಷ್ಯತಿ ಎನ್ನುವಂತೆ ಆಗುತ್ತಿದೆ. ಹೀಗೆ ಎಕ್ಸ್‌ಪರ್ಟ್ ಬಾಡಿಯವರು ಸರ್ಟಿಫಿಕೇಟನ್ನು ಕೊಟ್ಟರೆ ನಾವೇನು ಹೇಳಬೇಕು ? ಇವೆಲ್ಲಾ ಮೂರು ತಿಂಗಳ ಅಂತರದಲ್ಲಿ ಆಗಿದೆ. ಹಿಂದೆ ಇದ್ದ ಬೋರ್ಡ್ ಹೋಗಿ ಬೇರೆ ಮತ್ತೊಂದು ಬೋರ್ಡ್ ಬಂದು ಅದರ ಮೂಲಕ ಇದನ್ನೆಲ್ಲಾ ಮಾಡಿದ್ದಾರೆ. ಇದರಿಂದ ಎಕ್ಸ್‌ಪರ್ಟ್ ಬಾಡಿ ಎನ್ನುವ ಮಾತಿಗೆ ಮರ್ಯಾದೆ ಬರುತ್ತದೆಯೇ ! ಒಂದು ಸಾರಿ ನಾಲಾಯಕ್ಕು ಎಂದು ತೀರ್ಮಾನವಾದ ಮೇಲೆ ಅದೇ ವ್ಯಕ್ತಿಯನ್ನು ಪುನಃ ಹಿಂದಿನ ಬಾಗಿಲಿನಿಂದ ತಂದು ನೇಮಕ ಮಾಡಿದರೆ ಸಂದೇಹ ಬರುವುದಿಲ್ಲವೇ ? ಇನ್ನು ಎರಡನೇ ನಿದರ್ಶನ ಹೇಳುತ್ತೇನೆ. ಇದರಲ್ಲೂ ಕೂಡ ಹೆಸರು ಹಾಗೂ ಇಲಾಖೆ ಹೇಳುವುದಿಲ್ಲ. ಯಾವುದೋ ಒಂದು ಡಿಪಾರ್ಟ್‌ಮೆಂಟಿನಲ್ಲಿ ಎರಡು ರೀಡರುಗಳ ಪೋಸ್ಟನ್ನು ಖಾಲಿ ಬಿತ್ತು ಎಂದು ಇದಕ್ಕಾಗಿ ಅರ್ಜಿಗಳನ್ನು ಕರೆದಿದ್ದರು. ಇದರಲ್ಲಿ ಸುಮಾರು ಏಳೆಂಟು ಜನರು ಪಿ. ಹೆಚ್. ಡಿ. ಪಡೆದ ಪದವೀಧರರು ಹಾಗು ಇನ್ನಿತರ ಒಳ್ಳೆಯ ಅರ್ಹತೆಗಳನ್ನು ಪಡೆದವರು ಹಾಗೂ ಫಸ್ಟ್‌ಕ್ಲಾಸು ಮಾಡಿದವರು ಮತ್ತು ಇದರ ಜೊತೆಗೆ ಥರ್ಡ್ ಕ್ಲಾಸಿನಲ್ಲಿ ಪಾಸ್ ಆದವರು ಎಂ.ಎ. ಫೇಲ್ ಆದವರು ಅರ್ಜಿಗಳನ್ನು ಹಾಕಿದ್ದರು. ಇವರನ್ನೆಲ್ಲಾ ಇಂಟರ್‌ವ್ಯೂಗಾಗಿ ಕರೆದರು. ಇವರಲ್ಲಿ ಎಕ್ಸ್‌ಪರ್ಟ್ ಬಾಡಿಯವರು ಒಳ್ಳೆಯ ಪಿ. ಹೆಚ್. ಡಿ. ಹಾಗೂ ಫಸ್ಟ್‌ಕ್ಲಾಸು ಪಾಸುಮಾಡಿ ಡಿಗ್ರಿ ಪಡೆದವರನ್ನು ನಾಲಾಯಕ್ಕು ಎಂದು ತೀರ್ಮಾನ ಮಾಡಿ ಅವರಿಗೆ ಬೇಕಾದವರು ಎಂದು ಯಾರೋ ಒಬ್ಬರನ್ನು ರೀಡರುಗಳ ಜಾಗಕ್ಕೆ ಸರಿಯಾದವರು ಎಂದು ನೇಮಕ ಮಾಡಿದರೆ ಎಕ್ಸ್‌ಪರ್ಟ್ ಬಾಡಿಗೆ ಇದರಿಂದ ಮರ್ಯಾದೆ ಬರುತ್ತದೆಯೇ ? ಈ ರೀತಿ ರಿಕಮೆಂಡೇಷನ್‌ಗಳು ಬಂದರೆ ನಾವೇನು ಹೇಳುವದು ? ಇಲ್ಲಿರುವ ಸದಸ್ಯರುಗಳು ಅಧ್ಯಕ್ಷರ ಒಂದು ಭಯಕ್ಕಾಗಿಯೋ ಇಲ್ಲವೇ ತಮನ್ನೇ ಇಲ್ಲಿ ಮುಂದಿನ ಸಲಕ್ಕೂ ಚುನಾಯಿಸಲಿ ತಮಗೆ ಟಿ. ಎ. ಹಾಗೂ ಡಿ. ಎ. ಬರಲಿ ಎಂತಲೋ ಏನೋ ಹೀಗೆ ಇಲ್ಲಿ ರೀಡರುಗಳ ಪೋಸ್ಟನ್ನು ತಮ್ಮ ಮನಸ್ಸಿಗೆ ಬಂದಂತೆ ಭರ್ತಿ ಮಾಡಿದರು. ಇವರನ್ನು ಇಂಟರ್‌ವ್ಯೂನಲ್ಲಿ ಅಳೆಯಲು ಏನಾದರೂ ಒಂದು ಬ್ಯಾರಾಮೀಟರು ಇಟ್ಟಿದ್ದಾರೋ ಏನೋ ನನಗಂತೂ ಗೊತ್ತಿಲ್ಲ. ಒಳ್ಳೆಯ ಮೇಧಾವಿಗಳು ಫಸ್ಟ್‌ಕ್ಲಾಸು ಬಂದವರು, ಪಿ.ಹೆಚ್.ಡಿ. ಡಿಗ್ರಿ ಪಡೆದವರನ್ನು ಡಿಸ್‌ಕ್ವಾಲಿಫೈ ಮಾಡಿದರೆ ಈ ಎಕ್ಸ್‌ಪರ್ಟ್ ಬಾಡಿಯನ್ನು ನಾವೇನು ಹೇಳುವುದು ?

ನಾವು ಈ ಎಕ್ಸ್‌ಪರ್ಟ್ ಬಾಡಿ ಮೇಲೆ ಪೂರ್ತ ನಂಬಿಕೆಯನ್ನು ಇಟ್ಟುಕೊಂಡಿರುತ್ತೇವೆ. ಅದರಂತೆ ಛಾನ್ಸಲರ್ ಕೂಡ ಅಪಾಯಿಂಟ್ ಮಾಡುತ್ತಾರೆ. ಮೂರನೆಯ ದರ್ಜೆಯಲ್ಲಿ ಪಾಸ್ ಆದವರಿಗೆ ಕೆಲಸ ಸಿಕ್ಕಿದ್ದು ಎರಡನೆಯ ನಿದರ್ಶನವಾದರೆ, ಮೂರನೆಯ ನಿದರ್ಶನ ಒಂದನ್ನು ಹೇಳುತ್ತೇನೆ. ಒಂದು ಇಲಾಖೆಯಲ್ಲಿ ಎರಡು ಪ್ರೊಫೆಸರ್‌ಗಳ ಪೋಸ್ಟ್ ಖಾಲಿಯಿತ್ತು ಮೊದಲನೆಯ ಪೋಸ್ಟ್‌ನಲ್ಲಿ ಯಾರು ಅಭ್ಯರ್ಥಿಯಾಗಿದ್ದನೋ ಆತನ ಸ್ನೇಹಿತ ಎಕ್ಸ್‌ಪರ್ಟ್ ಬಾಡಿಯಲ್ಲಿ ಹೋಗಿ ಸೆಲೆಕ್ಟ್ ಮಾಡುವುದಕ್ಕೆ ಕೂತ. ಈ ಕಾರಣದಿಂದ ಆತನ ಸ್ನೇಹಿತ ಸೆಲೆಕ್ಟ್ ಆದ. ಇನ್ನೊಂದು ಪೋಸ್ಟ್‌ನಲ್ಲಿ ಯಾರು ಅಭ್ಯರ್ಥಿಯಾಗಿದ್ದನೋ ಅವನ ಸ್ನೇಹಿತ ಎಕ್ಸ್‌ಪರ್ಟ್ ಬಾಡಿಯಲ್ಲಿ ಹೋಗಿ ಸೆಲೆಕ್ಟ್ ಮಾಡುವುದಕ್ಕೆ ಕೂತ. ನಂತರ ಈತನ ಸ್ನೇಹಿತ ಸೆಲೆಕ್ಟ್ ಆದ. ಒಟ್ಟಿನಲ್ಲಿ ಇಬ್ಬರು ಸ್ನೇಹಿತರಿಗೂ ಕೆಲಸ ಸಿಕ್ಕಿತು. ಅವನ ಬೆನ್ನನ್ನು ಇವನು ಕೆರೆದ, ಇವನ ಬೆನ್ನನ್ನು ಅವನು ಕೆರೆದ. ಈ ಕೇಸ್ ಈಗ ಸುಪ್ರೀಮ್ ಕೋರ್ಟ್‌ನಲ್ಲಿ ಇರುವುದರಿಂದ ಇನ್ನು ಹೆಚ್ಚು ಇದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಗೀವ್ ಅಂಡ್ ಟೇಕ್ ವ್ಯಾಪಾರ ನಡೆಯುತ್ತಿರುವುದನ್ನು ನೋಡಿದರೆ ಮನಸ್ಸಿಗೆ ಬಹಳ ಬೇಜಾರಾಗುತ್ತದೆ. ಅಲ್ಲಿ ಗಬ್ಬು ಹೊಡೆಯುತ್ತಿದೆ. ಎಕ್ಸ್‌ಪರ್ಟ್ ಬಾಡಿಯಲ್ಲಿ ಸೆಲೆಕ್ಟ್ ಮಾಡುವುದಕ್ಕೆ ಯಾರು ಇರುತ್ತಾರೆ ಎಂಬುದನ್ನು ಕೆಲವರು ಮೊದಲೇ ತಿಳಿದುಕೊಂಡು, ಅವರನ್ನು ಹೋಟೇಲ್ ಇಂಟರ್‌ನ್ಯಾಷನಲ್‌ನಲ್ಲಿಯಾಗಲೀ, ಯೂನಿವರ್ಸಿಟಿ ಗೆಸ್ಟ್‌ಹೌಸ್‌ನಲ್ಲಿಯಾಗಲೀ ಇಳಿಸಿ ಅವರಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಡುತ್ತಾರೆ. ಯಾರಿಗೆ ಕೆಲಸ ಕೊಡಬೇಕು ಎಂಬುದು ಮೊದಲೇ ತೀರ್ಮಾನವಾಗಿ ಹೋಗಿರುತ್ತದೆ. ಈ ಕಾರಣದಿಂದ ಈ ಕಮಿಟಿಯ ಬಗ್ಗೆ ನಮಗೆ ಯಾವ ಅಭಿಮಾನವೂ ಬರುವುದಿಲ್ಲ. ನಾಲ್ಕನೆಯ ನಿದರ್ಶನ ಒಂದನ್ನು ಹೇಳುತ್ತೇನೆ. ಇಲಾಖೆಯ ಹೆಸರನ್ನು ಹೇಳುವುದಿಲ್ಲ. ಒಂದು ಪ್ರೊಫೆಸರ್ ಪೋಸ್ಟ್ ಮೂರು ವರ್ಷದಿಂದ ಖಾಲಿ ಇತ್ತು. ಎಕ್ಸ್‌ಪರ್ಟ್ ಬಾಡಿಯಲ್ಲಿ ಸೆಲೆಕ್ಟ್ ಮಾಡುವುದಕ್ಕೆ ಇದ್ದ ಅಧಿಕಾರಿಯವರು 'ಎ' ಎಂಬ ಅಭ್ಯರ್ಥಿಯನ್ನು ಅಪಾಯಿಂಟ್ ಮಾಡುವ ಬಗ್ಗೆ ಅಭಿಪ್ರಾಯಪಟ್ಟರು. ಅಲ್ಲಿಯ ಪ್ರಿಸೈಡಿಂಗ್ ಆಫೀಸರ್ ಅವರು 'ಬಿ' ಎಂಬ ಇನ್ನೊಬ್ಬ ಅಭ್ಯರ್ಥಿಯನ್ನು ಸೆಲೆಕ್ಟ್ ಮಾಡುವಂತೆ ಸೆಲೆಕ್ಟ್ ಕಮಿಟಿಯಲ್ಲಿ ಇದ್ದ ಅಧಿಕಾರಿಗೆ ಹೇಳಿದರು. ಆದರೆ 'ಬಿ' ಎಂಬ ಅಭ್ಯರ್ಥಿಯನ್ನು ಸೆಲೆಕ್ಟ್ ಮಾಡುವುದಕ್ಕೆ ಸೆಲೆಕ್ಟ್ ಕಮಿಟಿಯ ಅಧಿಕಾರಿಗೆ ಇಷ್ಟ ಇಲ್ಲ. ಒಂದು ಪೋಸ್ಟ್ ಖಾಲಿ ಇದ್ದಾಗ ಎಕ್ಸ್‌ಪರ್ಟ್ ಬಾಡಿಯಲ್ಲಿದ್ದವರು ಯಾರಾದರು ಒಬ್ಬರನ್ನು ಆರಿಸಬೇಕು, ನಂತರ ಅವರ ಅಭಿಪ್ರಾಯದಂತೆ ಛಾನ್ಸಲರ್ ಅವರು ಅಪಾಯಿಂಟ್ ಮಾಡಬೇಕು. ಆದರೆ ಈ ಕೇಸ್‌ನಲ್ಲಿ ಆ ರೀತಿ ಆಗಲಿಲ್ಲ. ಪ್ರಿಸೈಡಿಂಗ್ ಆಫೀಸರ್‌ಗೆ 'ಬಿ' ಎಂಬ ಅಭ್ಯರ್ಥಿಯನ್ನು ಸೆಲೆಕ್ಟ್ ಮಾಡುವುದಕ್ಕೆ ಇಷ್ಟವಿದ್ದರಿಂದ, ಇವರು ಮತ್ತು ಸೆಲೆಕ್ಟ್ ಕಮಿಟಿಯ ಅಧಿಕಾರಿ ಇಬ್ಬರೂ ಸೇರಿ ಇನ್ನೊಂದು ಪೋಸ್ಟ್‌ನ್ನು ಕ್ರಿಯೇಟ್ ಮಾಡಿ ಇಬ್ಬರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾಗಿದೆ ಎಂದು ಕಾಗದ ಬರೆದರು. ಇನ್ನೊಂದು ಪೋಸ್ಟ್ ಬಗ್ಗೆ ಇದುವರೆಗೆ ಯು.ಜಿ.ಸಿ. ಅವರು ಮಂಜೂರಾತಿ ಕೊಟ್ಟಿಲ್ಲ. ಇದರಿಂದ ಏನಾಗಿದೆ ಎಂದರೆ 'ಬಿ' ಗೆ ಇನ್ನೊಂದು ಪೋಸ್ಟ್‌ನ್ನು ಕ್ರಿಯೇಟ್ ಮಾಡುವವರೆಗೆ 'ಎ' ಗೆ ಕೆಲಸ ಸಿಕ್ಕುವಾಗಿಲ್ಲ. ಈ ತರಹ ಪರಿಸ್ಥಿತಿ ಬಂದಿದೆ. ಈಗ ನಾಲ್ಕು ನಿದರ್ಶನಗಳನ್ನು ಕೊಟ್ಟಿದ್ದೇನೆ. ಇನ್ನೂ ಅನೇಕ ನಿದರ್ಶನಗಳನ್ನು ಕೊಡಬಹುದು. ಆದರೆ ಇಲ್ಲಿಯ ರಾಜಕೀಯ ಎಷ್ಟರಮಟ್ಟಿಗೆ ಅಸಹ್ಯವಾಗಿದೆ ಎಂಬುದನ್ನು ಇನ್ನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಾನು ಈಗ ಅಮೆಂಡ್‌ಮೆಂಟ್ ತಂದಿರುವ ಉದ್ದೇಶವಾದರೂ ಇಷ್ಟೇ: ಎಕ್ಸ್‌ಪರ್ಟ್ ಬಾಡಿಯವರು ಯಾರನ್ನು ರೆಕಮೆಂಡ್ ಮಾಡುತ್ತಾರೋ, ಅವರ ಹೆಸರನ್ನು ಛಾನ್ಸಲರ್‌ಗೆ ಕಳಿಸುವುದಕ್ಕೆ ಮುಂಚೆ ಸಿಂಡಿಕೇಟ್‌ಗೆ ಕಳಿಸಬೇಕು ಎಂಬುದು. ಸಿಂಡಿಕೇಟ್‌ನಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಸದಸ್ಯರು ಇರುತ್ತಾರೆ. ಮತ್ತು ಚುನಾಯಿತ ಸದಸ್ಯರು ಸಹ ಇರುತ್ತಾರೆ. ಒಟ್ಟು 15 ಜನ ಸದಸ್ಯರು ಇದ್ದಾರೆ. ಸೆಲೆಕ್ಟ್ ಆದ ಅಭ್ಯರ್ಥಿಯ ಬಗ್ಗೆ ಸಿಂಡಿಕೇಟ್ ಸದಸ್ಯರು ಸಹ ಪೂರ್ವಭಾವಿಯಾಗಿ ಕನ್ಸಿಡರ್ ಮಾಡುವುದು ಒಳ್ಳೆಯದು, ಅಲ್ಲಿಯಾದರೆ ಅಭ್ಯರ್ಥಿಯ ಬಗ್ಗೆ ನಾನಾ ತರಹ ಅಭಿಪ್ರಾಯಗಳು ಬರುತ್ತವೆ. ಸೆಲೆಕ್ಟ್ ಆದ ಅಭ್ಯರ್ಥಿಯ ಗುಣ, ನಡತೆ, ಅನುಭವ ಎಲ್ಲವನ್ನೂ ತಿಳಿದವರೂ ಸಹ ಕೆಲವರು ಇರುತ್ತಾರೆ. ಅಂತಹವರು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ. ಮತ್ತು ಸಲಹೆ ಕೊಡುತ್ತಾರೆ. ಅನಂತರ ಸೆಲೆಕ್ಟ್ ಆದ ಅಭ್ಯರ್ಥಿಯನ್ನು ಇಲ್ಲಿಯೂ ಸಹ ಸದಸ್ಯರು ಯುನಾನಿಮಸ್ ಆಗಿ ಒಪ್ಪಿಕೊಂಡರೆ ಸಂತೋಷ. ಏನಾದರು ಭಿನ್ನಾಭಿಪ್ರಾಯ ಬಂದರೆ ಅಭ್ಯರ್ಥಿಗೆ ಸಂಬಂಧಪಟ್ಟ ಫುಲ್ ಡಾಕ್ಯುಮೆಂಟನ್ನು ಛಾನ್ಸಲರ್‌ಗೆ ಕಳಿಸಿಕೊಡಲಿ. ಸಿಂಡಿಕೇಟ್‌ನವರು ಕೊಟ್ಟಿರುವ ಅಭಿಪ್ರಾಯವನ್ನು ಸಾಂಗವಾಗಿ ಛಾನ್ಸಲರ್ ಅವರು ಪರಿಶೀಲನೆ ಮಾಡಿ ತಮ್ಮ ಆದೇಶ ಕೊಡಲಿ. ಈ ಉದ್ದೇಶಕ್ಕಾಗಿಯೇ ನಾನು ಈ ತಿದ್ದುಪಡಿಯನ್ನು ತಂದಿರುವುದು. ಈಗ ನಾನು ತಂದಿರತಕ್ಕಂಥ ತಿದ್ದುಪಡಿ ಹೊಸದೇನು ಅಲ್ಲ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಯೂನಿವರ್ಸಿಟಿಯ ಎಸ್ಟಾಬ್ಲಿಷ್‌ಮೆಂಟ್ ಸ್ಟಾಫ್‌ಗೆ ಅಪಾಯಿಂಟ್ ಮಾಡುವುದಕ್ಕೆ ಸಿಂಡಿಕೇಟ್‌ನವರೇ ಈ ಸಂದರ್ಭದಲ್ಲಿ ಒಂದು ರೂಲ್ ಮಾಡುವುದಕ್ಕಾಗುವುದಿಲ್ಲವೇ ?

Sri L. SRIKANTAIAH.—There is a separate statutory body for appointments. So the Syndicate cannot sit in judgement over the recommendations of the Board. It becomes ultra vires. That is my legal opinion with regard to it.

ಈಗ ಇರತಕ್ಕಂಥ ಬೆಂಗಳೂರು ವಿಶ್ವವಿದ್ಯಾನಿಲಯದ ಶಾಸನವನ್ನು ನೋಡುವುದಾದರೆ ಬೋರ್ಡ್ ಆಫ್ ಅಪಾಯಿಂಟ್‌ಬಗ್ಗೆ 28ನೇ ವಿಧಿಯಲ್ಲಿರುವ ಕ್ಲಾಸ್ ಒಂದು, ಎರಡು ಮತ್ತು ಮೂರನೆಯ ಮತ್ತು ನಾಲ್ಕನೆಯ ಹಾಗೂ ಐದನೆಯ ಕ್ಲಾಸ್‌ಗಳಲ್ಲಿ ಬಹಳ ಕ್ಲಿಯರ್ ಆಗಿ ಹೇಳಲಾಗಿದೆ. ಇದೇ ರೀತಿಯ ಶಾಸನವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೂ ಅನ್ವಯಿಸುವುದು ಒಳ್ಳೆಯದು.

ಶ್ರೀ ಕೆ. ಪುಟ್ಟಸ್ವಾಮಿ.—ಕಳೆದ ಅಧಿವೇಶನದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಆದಂತಹ ಅಪಾಯಿಂಟ್‌ಮೆಂಟ್‌ಗಳ ಬಗ್ಗೆಯೂ ಕೂಡ ಅವಿವೇಕ ನಡೆದಿದೆ ಎಂದು ಕೆಲವರು ಹೇಳಿದ್ದರು.

ಶ್ರೀ ಎಲ್. ಶ್ರೀಕಂಠಯ್ಯ.—ಈಗ ಸಂದಿಗ್ಧ ಪರಿಸ್ಥಿತಿ ಬಂದಿದೆ. 1956ಕ್ಕೆ ಮುಂಚೆ ಅಪಾಯಿಂಟ್‌ಮೆಂಟ್ ಅಧಿಕಾರವನ್ನು ಪೂರ್ತಾ ಕೌನ್ಸಿಲ್‌ನ ತೀರ್ಮಾನಕ್ಕೆ ಬಿಟ್ಟಿದ್ದರು. ಅಲ್ಲಿ ಅನ್ಯಾಯ ನಡೆಯುತ್ತಿದೆ ಎಂಬುದಾಗಿ ಎಕ್ಸ್‌ಪರ್ಟ್ ಬಾಡಿಯನ್ನು ನೇಮಕ ಮಾಡಲಾಯಿತು. ಕೌನ್ಸಿಲ್ ದೆವ್ವವಾದರೆ ಎಕ್ಸ್‌ಪರ್ಟ್ ಬಾಡಿ ದೊಡ್ಡ ದೆವ್ವವಾಗಿದೆ. ಮೊದಲು ಪೂರ್ತಾ ಪವರ್‌ನ್ನು ಇಟ್ಟುಕೊಂಡಿದ್ದ ಕೌನ್ಸಿಲ್‌ನ ದೆವ್ವದ ಕಾಟದಿಂದ ತಪ್ಪಿಸಿಕೊಳ್ಳಬೇಕೆಂದು ಎಕ್ಸ್‌ಪರ್ಟ್ ಬಾಡಿ ಮಾಡಿದರೆ ಇದೂ ಕೂಡ ದೊಡ್ಡ ದೆವ್ವವಾದರೆ ಏನು ಮಾಡಬೇಕು. ಈ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಇವತ್ತಿನದಿವಸ ನಾವು ತೊಳಲಾಡುತ್ತಿದ್ದೇವೆ. ಯಾವುದಾದರು ಒಂದು ಮಾರ್ಗದಿಂದ ಟೀಚಿಂಗ್ ಸ್ಟಾಫನ್ನು ಅಪಾಯಿಂಟ್ ಮಾಡಲೇಬೇಕಾಗಿದೆ. ಈ ಕಾರಣದಿಂದ ಈಗ ಇರತಕ್ಕಂಥ ಲೋಪದೋಷಗಳನ್ನು ಸರಿಪಡಿಸಲು ಒಂದು ಮಾರ್ಗದರ್ಶನವನ್ನು ಹುಡುಕಬೇಕಾಗಿದೆ. ಸೆಲೆಕ್ಟ್ ಮಾಡತಕ್ಕಂಥ ಅಧಿಕಾರಿಗಳನ್ನು ಸ್ವರ್ಗದಿಂದ ಕರೆದುಕೊಂಡು ಬರುವುದಕ್ಕಾಗುವುದಿಲ್ಲ. ಅದರೂ ಕೂಡ ಒಂದು ಒಳ್ಳೆಯ ಕ್ರಮವನ್ನು ಹಾಕಿಕೊಂಡರೆ ಒಳ್ಳೆಯದೆಂದು ನನ್ನ ಅಭಿಪ್ರಾಯವಾಗಿದೆ. 1956ಕ್ಕೆ ಮುಂಚೆ ಪೂರ್ತಾ ಅಧಿಕಾರವನ್ನು ಕೌನ್ಸಿಲ್‌ಗೆ ಕೊಟ್ಟಿದ್ದನ್ನು ತೆಗೆದು ಈಗ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್‌ಗೆ ಕೊಡಲಾಗಿದೆ. ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್‌ಗೂ ಕೂಡ ಈ ಅಧಿಕಾರ ಬೇಡ ಎನ್ನುವುದಾದರೆ, ಈ ಅಧಿಕಾರವನ್ನು ಛಾನ್ಸಲರ್‌ಗೆ ಕೊಡುವುದಕ್ಕಾಗುವುದಿಲ್ಲ. ಅವರೇ ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸಿಂಡಿಕೇಟ್‌ನವರು ತೀರ್ಮಾನ ಮಾಡಲಿ ಎಂದು ನೀವು ಹೇಳುವುದಾದರೆ ಅಲ್ಲಿಯೂ ಕೂಡ ರಾಜಕೀಯ ಬಂದರೆ ಏನು ಮಾಡುವುದು ?

ಶ್ರೀ ಎಲ್. ಶ್ರೀಕಂಠಯ್ಯ.—ಇವತ್ತಿನ ದಿವಸ ತಮ್ಮ ತಮ್ಮವರಿಗೆ ಕೆಲಸ ಕೊಡಿಸಬೇಕೆಂಬ ಕಾರಣದಿಂದ ರಾಜಕೀಯ ನಡೆಯುತ್ತಿದೆ. ಈ ಒಂದು ಅನ್ಯಾಯವನ್ನು ತಪ್ಪಿಸಲು ನಾನು ಒಂದು ಕಾಂಪ್ರಮೈಸ್ ಫಾರಮ್ಯುಲಾವನ್ನು ತಂದಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಧ್ಯಮ ಮಾರ್ಗ ಮೊದಲು ಇತ್ತು. 1956ಕ್ಕೆ ಮುಂಚೆ ಅಪಾಯಿಂಟ್ ಬಗ್ಗೆ ಸ್ಟ್ಯಾಚುಟರಿ ಬಾಡಿ ಶಿಫಾರಸ್ ಮಾಡಿದ್ದು ಯೂನಿವರ್ಸಿಟಿ ಕೌನ್ಸಿಲ್ ಮುಂದೆ ಬರುತ್ತಿತ್ತು. ನಂತರ ಕೌನ್ಸಿಲ್‌ನವರು ತಮ್ಮ ಅಭಿಪ್ರಾಯದ ಜೊತೆಯಲ್ಲಿ ಸರ್ಕಾರಕ್ಕೆ ಕಳಿಸುತ್ತಿದ್ದರು. ನಂತರ ನೇಮಕವಾಗುತ್ತಿತ್ತು. ಆಗಲೂ ಕೂಡ ನೇಮಕದ ಬಗ್ಗೆ ಅತೃಪ್ತಿ ಕಾಣುತ್ತಿತ್ತು. ನಾನಾ ಅಭಿಪ್ರಾಯಗಳನ್ನು ಅಪಾಯಿಂಟ್ ಮಾಡಿದ ಬಗ್ಗೆ ಕೆಲವರು ಕೊಡುತ್ತಿದ್ದರು. ಮಾನವರೇ ಇಲ್ಲದಿರುವ ಕಮಿಟಿಯನ್ನು ಏನಾದರೂ ಮಾಡಿದರೆ ಕೆಲಸ ಸರಿಯಾಗಿ ನಡೆಯಬಹುದೆಂದು ಕಾಣುತ್ತದೆ.

ಶ್ರೀ ಎಲ್. ಶ್ರೀಕಂಠಯ್ಯ.—ಈಗ ನಾನು ನನ್ನ ತಿದ್ದುಪಡಿ ಮಸೂದೆಯನ್ನು ತಂದಿರುವ ಉದ್ದೇಶ ಇಷ್ಟೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನೇಮಕದ ಸಂಬಂಧದಲ್ಲಿ ಯಾವ ರೀತಿ ಉಪ ವಿಭಾಗ ಇದೆಯೋ ಅದೇ ರೀತಿ ಅವಕಾಶವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೂ ಮಾಡುವುದು. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್‌ನವರು ಮಾಡತಕ್ಕಂಥ ಸಿಫಾರಸ್ಸುಗಳು ಸಿಂಡಿಕೇಟಿಗೆ ಬಂದು ಆ ನಂತರ ಛಾನ್ಸಲರಿಗೆ ಹೋಗುವುದು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈ ಪದ್ಧತಿ ಇಲ್ಲ. ಆದ್ದರಿಂದ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ಉಪ ವಿಭಾಗ ಯಾವ ರೀತಿ ಇದೆಯೋ ಅದನ್ನು ಮೈಸೂರು ವಿಶ್ವವಿದ್ಯಾನಿಲಯದ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ಶಾಸನಕ್ಕೆ ನನ್ನ ತಿದ್ದುಪಡಿಯ ಪ್ರಕಾರ ಲಗತ್ತು ಮಾಡವುದಕ್ಕೆ ಪ್ರಯತ್ನ ಮಾಡಬೇಕು. ಆಗ ಏನಾಗುತ್ತದೆ ಎಂದರೆ ಈ ಅಮೆಂಡ್‌ಮೆಂಟ್ ಬಂದರೆ ಬೆಂಗಳೂರು ವಿಶ್ವವಿದ್ಯಾನಿಲಯಲದ ಒಂದು ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್‌ನಲ್ಲಿ ಸಬ್‌ಕ್ಲಾಸ್ (5) ಹೇಗಿದೆಯೋ ಅದೇ ಕ್ಲಾಜನ್ನು ಮೈಸೂರು ಯೂನಿವರ್ಸಿಟಿ ಆಕ್ಟಿನ 26ನೇ ಉಪ ವಿಧಿಗೆ ಸೇರಿಕೊಳ್ಳುತ್ತದೆ. ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನವರು ತಮ್ಮ ರೆಕಮೆಂಡೇಷನ್‌ಗಳನ್ನು ಸಿಂಡಿಕೇಟಿಗೆ ಕಳುಹಿಸತಕ್ಕದ್ದು, ಸಿಂಡಿಕೇಟಿನವರು ಇದನ್ನು ಕೂಲಂಕಷವಾಗಿ ಚರ್ಚೆ ಮಾಡಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸತಕ್ಕದ್ದು. ಈ ಎರಡು ಅಭಿಪ್ರಾಯಗಳನ್ನು ತರುವಾಯ ಛಾನ್ಸಲರಿಗೆ ಕಳುಹಿಸಿದರೆ ಒಂದು ಮಾರ್ಗದಲ್ಲಿ ನ್ಯಾಯ ದೊರಕಬಹುದು ಎನ್ನುವ ದೃಷ್ಟಿಯಿಂದ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿರುವ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನ ಉಪ ವಿಭಾಗ 5 ನ್ನು ಮೈಸೂರು ವಿಶ್ವವಿದ್ಯಾನಿಲಯದ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನ ಉಪ ವಿಭಾಗಕ್ಕೆ ನನ್ನ ತಿದ್ದುಪಡಿಯ ಮೂಲಕ ಸೇರಿಸುವುದಕ್ಕೆ ನಾನು ಪ್ರಯತ್ನ ಪಟ್ಟಿದ್ದೇನೆ. ಈ ರೀತಿ ಮಾಡುವುದಕ್ಕೆ ನಾನು ಏತಕ್ಕೆ ಪ್ರಯತ್ನ ಮಾಡಿದೆ ಎಂದರೆ ಬೆಂಗಳೂರು ವಿಶ್ವವಿದ್ಯಾನಿಲಯದ ಶಾಸನದಲ್ಲಿ ಇಂಟರ್‌ಮೀಡಿಯರಿ ಸ್ಟೇಜ್ ಕಲ್ಪನೆ ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಶಾಸನದಲ್ಲಿ ಇಂಟರ್‌ಮೀಡಿಯರಿ ಸ್ಟೇಜ್ ಇಲ್ಲ. ಇಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನವರು ಮಾಡಿದಂತಹ ಸಿಫಾರಸ್ಸುಗಳು ನೇರವಾಗಿ ಛಾನ್ಸಲರಿಗೆ ಹೋಗುತ್ತವೆ. ಬೆಂಗಳೂರು ವಿಶ್ವವಿದ್ಯಾನಿಲಯದ ಶಾಸನದಲ್ಲಿ ಉಪ ವಿಭಾಗ 5 ರಲ್ಲಿ ಇಂಟರ್‌ಮೀಡಿಯರಿ ಸ್ಟೇಜ್ ಇದೆ. ಆದ್ದರಿಂದ ಅದನ್ನು ಮೈಸೂರು ವಿಶ್ವವಿದ್ಯಾನಿಲಯದ ಉಪ ವಿಭಾಗಕ್ಕೆ ಸೇರಿಸಿದರೆ ಸ್ವಲ್ಪ ಬಿಗಿ ಇರುತ್ತದೆ. ಹಿಡಿತ ಇರುತ್ತದೆ. 13 ಜನ ಇರುವ ಸಂಸ್ಥೆ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನವರು ಕೊಡತಕ್ಕ ಸಿಫಾರಸ್ಸುಗಳನ್ನು ಸಿಂಡಿಕೇಟಿನವರು ಡೀಟೈಲಾಗಿ ಸ್ಕ್ರೂಟಿನಿ ಮಾಡಿ ತರುವಾಯ ಅವರ ಅಭಿಪ್ರಾಯಗಳನ್ನೂ ಸೇರಿಸಿ ಅದನ್ನು ಛಾನ್ಸಲರಿಗೆ ಕಳುಹಿಸಿದರೆ ಒಂದು ರೀತಿಯಲ್ಲಿ ನ್ಯಾಯ ದೊರಕಬಹುದು ಎನ್ನುವ ದೃಷ್ಟಿಯಿಂದ ನಾನು ಇದನ್ನು ತಂದಿದ್ದೇನೆ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೊಗಿ.—ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಮಾನ್ಯ ಸದಸ್ಯರು ಹೇಳುವ ಪದ್ಧತಿ ಇದೆ. ಆದರೂ ಸಹ ಅಲ್ಲಿಯೂ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನವರ ಮೇಲೆ ದೋಷಾರೋಪಣೆಗಳು ಇವೆ.

ಶ್ರೀ ಎಲ್. ಶ್ರೀಕಂಠಯ್ಯ.—ನಮ್ಮ ಕರ್ತವ್ಯ ಏನು ಎಂದರೆ ಸಾಧ್ಯವಾದ ಮಟ್ಟಿಗೆ ಇಂಟರ್‌ಮೀಡಿಯರಿ ಸ್ಟೇಜಿನಲ್ಲಿ ಚೆಕ್ಸ್ ಇಟ್ಟು ಸಾಧ್ಯವಾದ ಮಟ್ಟಿಗೆ ಅದನ್ನು ಸಮರ್ಪಕವಾಗಿ ಮಾಡುವ ಉದ್ದೇಶದಿಂದ ನಾನು ಈ ತಿದ್ದುಪಡಿಯನ್ನು ತಂದಿದ್ದೇನೆಯೇ ಹೊರತು ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನವರ ಮೇಲೆ ದೋಷಾರೋಪಣೆ ಬಾರದೆ ಇರುವ ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ವಿಶ್ವವಿದ್ಯಾನಿಲಯದ ನೇಮಕಗಳ ವ್ಯಾಪ್ತಿಯನ್ನು ಕೊಡುವುದು ಸಾಧುವಲ್ಲ. ಈಗ ಇದ್ದದ್ದನ್ನು ಸಾಧ್ಯವಾದ ಮಟ್ಟಿಗೆ ಉತ್ತಮಪಡಿಸುವ ಉದ್ದೇಶದಿಂದ ಅಗ್ರಿಕಲ್‌ಚರಲ್ ವಿಶ್ವವಿದ್ಯಾನಿಲಯದಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನ ಉಪ ವಿಭಾಗ ಇರುವ ಹಾಗೆ, ಬೆಂಗಳೂರು ವಿಶ್ವವಿದ್ಯಾನಿಲಯದ ಶಾಸನದಲ್ಲಿ ಇಂಟರ್‌ಮೀಡಿಯರಿ ಸ್ಟೇಜ್ ಇರುವ ಹಾಗೆ ಮೈಸೂರು ವಿಶ್ವವಿದ್ಯಾನಿಲಯದ ಶಾಸನದಲ್ಲಿ ಆ ಇಂಟರ್‌ಮೀಡಿಯರಿ ಸ್ಟೇಜನ್ನು ಸೇರಿಸಿದರೆ ಒಳ್ಳೆಯದು. ಯಾವ ಅಪಾಯಿಂಟ್‌ಮೆಂಟ್‌ಗಳು ದೋಷಾರೋಪಣೆಯಿಂದ ವಿಮುಕ್ತವಾಗುವುದಿಲ್ಲ; ಆದರೂ ಸಹ ಅವುಗಳ ಬಗ್ಗೆ ಸಾಧ್ಯವಾದ ಮಟ್ಟಿಗೆ ಚೆಕ್ಸ್ ಇದ್ದರೆ ಒಳ್ಳೆಯದು. ಈ ದೃಷ್ಟಿಯಿಂದ ನಾನು ತಂದಿರತಕ್ಕ ತಿದ್ದುಪಡಿ ಅವಶ್ಯಕವಾಗಿ ಬೇಕಾಗಿದೆ. ಈ ಸಭೆಯವರು ಬಹಳ ವಿವೇಚನೆ ಮಾಡಿ ಇದನ್ನು ಒಪ್ಪಬೇಕು. ಬೆಂಗಳೂರು ವಿಶ್ವವಿದ್ಯಾನಿಲಯದ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ಉಪ ವಿಭಾಗ ಇರುವ ಹಾಗೆ ಮತ್ತು ಅಗ್ರಿಕಲ್‌ಚರಲ್ ವಿಶ್ವವಿದ್ಯಾನಿಲಯದ ಬೋರ್ಡ್ ಅಪಾಯಿಂಟ್‌ಮೆಂಟ್ ಉಪ ವಿಭಾಗ ಇರುವ ಹಾಗೆ ಮೈಸೂರು ವಿಶ್ವವಿದ್ಯಾನಿಲಯದ ಶಾಸನದ ಉಪವಿಭಾಗದಲ್ಲಿ ಸೇರಬೇಕು. 1956 ನೇ ಇಸವಿಗಿಂತ ಮುಂಚೆ ಇದ್ದಂತಹ ಕಾಯಿದೆಯಲ್ಲಿ ಅಪಾಯಿಂಟ್‌ಮೆಂಟ್ ಅಧಿಕಾರ ಪೂರ್ಣವಾಗಿ ಕೌನ್ಸಿಲ್ಲಿಗೆ ಇತ್ತು ಎಂದು ಕಾಣುತ್ತದೆ. ಅದು ಭದ್ರವಾಗಿಲ್ಲ, ಅಲ್ಲಿ ಅನ್ಯಾಯ ನಡೆಯುತ್ತದೆ ಎಂದು ಅದು ನೇರವಾಗಿ ಸರ್ಕಾರದಿಂದ ವಿಮುಕ್ತವಾಗಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ 1956 ನೇ ಇಸವಿಯಲ್ಲಿ ಬಂತು. 1956 ನೇ ಇಸವಿಯ ನಂತರ ಅಗ್ರಿಕಲ್‌ಚರಲ್ ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳು ಸ್ಥಾಪನೆಯಾದವು.

(ಶ್ರೀ ಎಲ್. ಶ್ರೀಕಂಠಯ್ಯ)

ಅವುಗಳು ಸ್ಥಾಪನೆಯಾದ ಮೇಲೆ ಆ ಎರಡು ವಿಶ್ವವಿದ್ಯಾನಿಲಯಗಳಲ್ಲಿಯೂ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನವರು ಮಾಡಿದಂತಹ ನೇಮಕಗಳನ್ನು ಪರಿಶೀಲನೆ ಮಾಡುವ ಉದ್ದೇಶದಿಂದ ಇಂಟರ್‌ಮೀಡಿಯರಿ ಸ್ಟೇಜಿನಲ್ಲಿ ಸಿಂಡಿಕೇಟ್ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಇರಬೇಕು ಎನ್ನುವ ದೃಷ್ಟಿಯಿಂದ ಅದನ್ನು ಮಾಡಿದ್ದಾರೆ. ಅವು ದೊಡ್ಡ ವಿಶ್ವವಿದ್ಯಾನಿಲಯಗಳು ಅವುಗಳ ಶಾಸನ ಉನ್ನತ ಮಟ್ಟದಲ್ಲಿರುತ್ತದೆ. ಆದ್ದರಿಂದ ಅದೇ ಅವಕಾಶವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೂ ಒದಗಿಸಿ ಕೊಟ್ಟು, ನಾನು ನನ್ನ ತಿದ್ದುಪಡಿಯಲ್ಲಿ ತಂದಿರುವ ಹಾಗೆ ಅದನ್ನು ಮೈಸೂರು ವಿಶ್ವವಿದ್ಯಾನಿಲಯದ ಆಕ್ಟಿನಲ್ಲಿ ಅಳವಡಿಸಬೇಕು. ಆ ರೀತಿ ಮಾಡಿದರೆ ಅಲ್ಲಿ ಉತ್ತಮವಾದ ಅಪಾಯಿಂಟ್‌ಮೆಂಟ್‌ಗಳಾಗುತ್ತವೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಪ್ರೊಫೆಸರ್ ಶ್ರೀಕಂಠಯ್ಯನವರು ಸೂಚಿಸಿರತಕ್ಕಂತಹ ಮೈಸೂರು ಯೂನಿವರ್ಸಿಟಿ ಅಮೆಂಡ್‌ಮೆಂಟ್ ಬಿಲ್ ಏನಿದೆ, ಅದನ್ನು ನಾನು ಸಮರ್ಥನೆ ಮಾಡುತ್ತಾ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಈಗಿರುವಂತಹ ಒಂದು ವ್ಯವಸ್ಥೆಯಲ್ಲಿ ಅನೇಕ ಅವ್ಯವಹಾರಗಳಿಗೆ ಅವಕಾಶ ಇದೆ. ಈ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ಸ್ ಏನಿದೆ, ಅಲ್ಲಿ ಅನಾಚಾರಕ್ಕೆ, ಅವ್ಯವಹಾರಕ್ಕೆ ಅವಕಾಶ ಇದೆ. ಅದನ್ನು ತೆಗೆದುಹಾಕುವುದಕ್ಕೆ ಈ ತಿದ್ದುಪಡಿಯನ್ನು ತಂದಿದ್ದಾರೆ; ಅದು ಸರಿಯಾದುದೆಂದು ಹೇಳುತ್ತೇನೆ. ಅವರು ಸಲಹೆ ಮಾಡಿರುವಂತೆ 23 ನೇ ಸೆಕ್ಷನಿನಲ್ಲಿ ಪ್ರಿನ್ಸಿಪಲ್ ಆಕ್ಟಿಗೆ ಏನು ಅಮೆಂಡ್‌ಮೆಂಟ್ ಸೂಚಿಸಿದ್ದಾರೆ, ಇದರ ಪ್ರಕಾರ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನವರು ಏನು ಮಾಡುತ್ತಾರೆ, ಅದನ್ನು ಸಿಂಡಿಕೇಟಿಗೆ ಪರಿಶೀಲಿಸಲು ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ. ಇದು ಹೊಸದೇನಲ್ಲ. ಯಾವ ಹುದ್ದೆಗೆ ಆರಿಸಬೇಕೋ, ಆ ಹುದ್ದೆಗೆ ಒಮ್ಮೆ ಆರಿಸಿದ ಮೇಲೆ ಮತ್ತೆ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಆರಿಸುವಂತಹವರು ಎಷ್ಟು ಎಚ್ಚರವನ್ನು ತೆಗೆದುಕೊಂಡರೂ ಒಳ್ಳೆಯದು. ಆ ದೃಷ್ಟಿಯಿಂದ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ಏನು ಒಂದು ಸಲಹೆ ಕೊಡುತ್ತಾರೆ, ಆ ಸಲಹೆಯನ್ನು ಮತ್ತೆ ಸಿಂಡಿಕೇಟ್ ಪರಿಶೀಲಿಸುವುದರಲ್ಲಿ ಅತ್ಯುತ್ತಮವಾದ ಫಲಿತಾಂಶ ಬರಬಹುದೆಂದು ತಿಳಿಸುತ್ತೇನೆ. ಬೋರ್ಡ್ ಆಫ್ ಅಪಾಯಿಂಟ್‌ನವರ ಸಲಹೆ ನಿಜವಾಗಿಯೂ ಸರಿಯಾಗಿದ್ದರೆ ಅದನ್ನು ಸಿಂಡಿಕೇಟ್‌ನವರು ಚಾನ್ಸಲರಿಗೆ ಕಳುಹಿಸಿಕೊಡಬಹುದು ಮತ್ತು ಉಮೇದ್ವಾರರು ಸರಿಯಾದ ಅರ್ಹತೆ ಪಡೆದಿದ್ದಾರೆಂದರೆ, ಅವರನ್ನು ನೇಮಕ ಮಾಡಿಕೊಳ್ಳಬಹುದು.

> "If the Syndicate considers that the recommendations of the Board of Appointments are not accentable, it shall record its reasons and submit the case to the Chancellor for orders and the orders of the Chancellor thereon shall be final."

ಈ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ಈಗಿರುವ ದೃಷ್ಟಿಯಲ್ಲಿ ಬಹಳ ಸಂಕುಚಿತ ದೃಷ್ಟಿಯಲ್ಲಿದೆ. ಶ್ರೀ ಶ್ರೀಕಂಠಯ್ಯನವರು ಸಲಹೆ ಮಾಡಿರುವ ಪ್ರಕಾರ ಇದು ಸರಿಯಾಗಿದೆ ಎಂದು ನನ್ನ ಅಭಿಪ್ರಾಯ. ಮಾನ್ಯ ಪ್ರೊಫೆಸರ್ ಶ್ರೀಕಂಠಯ್ಯನವರು ಈ ಕ್ಷೇತ್ರದಲ್ಲಿ ನಾನಾ ರೀತಿಯ ಅನುಭವ ಪಡೆದು ಅಲ್ಲಿಯ ಲೋಪದೋಷಗಳನ್ನು ಕಂಡು ಈ ತಿದ್ದುಪಡಿಯನ್ನು ತಂದಿದ್ದಾರೆ. ಹಿರಿಯ ಹುದ್ದೆಗಳಿಗೆ ಆರಿಸುವಾಗ, ಈ ರೀತಿ ಮಾಡುವುದರಿಂದ ಸರಿಯಾಗಿ ನೋಡಿಕೊಂಡು ನೇಮಕ ಮಾಡಲು ಅವಕಾಶ ಇದೆ. ಇದನ್ನು ಮಾನ್ಯ ಸೋಗಿಯವರು ಬೆಂಗಳೂರು ಮತ್ತು ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಮಾಡಿದ್ದಾರೆ. ಸರ್ಕಾರ ಇದನ್ನು ಒಪ್ಪುವುದಿಲ್ಲ ಎನ್ನುವ ಮಾತನ್ನು ಹೇಳುವುದಾದರೆ, ಬೆಂಗಳೂರು ಯೂನಿವರ್ಸಿಟಿಯಲ್ಲಿ ಮತ್ತು ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಮಾಡಿರುವ ವ್ಯವಸ್ಥೆ ತಪ್ಪು ಎಂದು ಹೇಳಿದ ಹಾಗೆ ಆಗುತ್ತದೆ. ಆದ್ದರಿಂದ ಈ ತಿದ್ದುಪಡಿಗೆ ಸರ್ಕಾರ ಬೆಂಬಲ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now adjourn and meet on Monday, the 2nd February 1970, at 1-00 P.M.

The House adjourned at Five Minutes past One of the Clock to meet again at One of the Clock on Monday, the 2nd February 1970.

WD 14637—GPB—600—21-7-1970

ಮೈಸೂರು ವಿಧಾನಸಭೆಯ ನಡೆವಳಿಕೆಗಳು
MYSORE LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ನಾಲ್ಕನೆಯ ವಿಧಾನಸಭೆಯ ಏಳನೆಯ ಅಧಿವೇಶನ
SEVENTH SESSION OF THE FOURTH LEGISLATIVE ASSEMBLY

ಅನೇ ಸೋಮವಾರ, ಫೆಬ್ರವರಿ ೧೯೭೦ [ಮಾಘ ೧೩, ೧೮೯೧ (ಶಕ)]
MONDAY, 2ND FEBRUARY 1970 [MAGHA 13, 1891 (SAKA)]

ಸಂಪುಟ ೨೩—ಕ್ರಮಾಂಕ ೩

Vol. XXIII—No. 3

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು
Mysore Legislature Secretariat, Bangalore

ಬೆಲೆ : ೨೫ ಪೈಸೆ
Price : 25 Paise

CONTENTS

PAGES

1 (i) Starred Questions and Answers ... 165—182

(ii) Short Notice Question and Answer ... 182—183

(ii) Questions for Answers on the day (but not taken up) 183—186

2 Communication from the Magistrate, Gobichettipalyam, about arrest of Sri Vatal Nagaraj in Tamilnadu—(Announced) ... 186

3 Question of Privilege *re*: Arrest of Sri Vattal Nagaraj in Tamilnadu Government—(Ruled out) ... 187—190

4 Notice of adjournment Motion *re*: The Mysore Maharashtra Boundary Dispute—(Consent withheld)... 190—192

5 Notice of adjournment motion *re*: the Strike by the M.E.I. Works—(Consent withheld) ... 192—195

6 Question of Privilege *re*: Inconsistent Statement by the Minister for Education and the Deputy Minister for Education—(Postponed) ... 195—197

7 Notice of adjournment motion *re*: Harijan families in Gangavati Taluk—(Postponed) ... 197—198

8 Calling Attention to Matters of Urgent Public Importance
(i) *re*: Mass Murder at Kalgi Village, Chittapur Taluk ... 199—200

(ii) *re*: Fire accident at Karnatak Co-operative Textile Mills, Hubli ... 200—201

(iii) *re*: Hunger Strike by some members of all Party Action Committee at Gulbarga against the affairs of Hyderabad Karnatak Education Society ... 201—207

9 Mysore Land Reforms (Amendment) Bill, 1970—(Motion to Consider—(Debate not concluded) ... 207—231
... 231—237

10 Release of Sri Vatal Nagaraj by Sub-Magistrate, Gobichettipalayam, Tamilnadu State—(Announced) ... 231

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Monday, 2nd February 1970.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Mr. SPEAKER.—With respect to question No. 106 I have received a letter from the Chief Minister. I shall read it out.

> "My throat is badly affected for the past 3 days and I have been medically advised to have complete rest. Hence I am unwell to attend the Assembly sessions today."

Under the circumstances, I hold over all the questions which stand in his name. Now next question.

Bridge across Karalahalli near Byagadahally, Birur Hobli

152. **Sri M. MALLAPPA** (Birur).—

Will the Minister for Public Works be pleased to state :—

(*a*) whether it has come to the notice of Government that the public of Birur Hobli are urging the Government for the construction of bridge across Karalahalli near Byagadahally, Birur Hobli, Kadur Taluk ;

(*b*) whether there is any proposal to construct the bridge with a view to help the agriculturists who are suffering for want of bridge ?

Sri BASAVARAJ MAGAVI (Deputy Minister for Public Works).—

(*a*) Yes.

(*b*) No.

ಶ್ರೀ ಎಂ. ಮಲ್ಲಪ್ಪ.—ಮೊದಲನೆಯ ಪ್ರಶ್ನೆಗೆ ಬಾದಿದೆ ಎಂದು ಉತ್ತರ ಹೇಳಿದ್ದೀರಿ. ಹಾಗಾದರೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

† ಶ್ರೀ ಬಸವರಾಜ ಮಾಗಾವಿ.—ಇಪ್ಪತ್ತು ಸಾವಿರ ರೂಪಾಯಿ ಎಸ್ಟಿಮೇಟು ಮಾಡಿದ್ದೇವೆ. ಬ್ಯಾಡಗಹಳ್ಳಿಯಿಂದ ಮುಂದಿನ ಒಂದು ಮೈಲಿನಲ್ಲಿ ಒಂದು ಬ್ರಿಜ್ ಇದೆ, ಇಲ್ಲಿ ಒಂದು ಹೈ ಲೆವೆಲ್ ಕಾಸ್‌ವೇ ಮಾಡಬೇಕಾಗಿದೆ, ಅದರೆ ಹಣದ ಅಭಾವ ಇದೆ. ಹಣದ ಅಭಾವದಿಂದ ತೆಗೆದುಕೊಂಡಿಲ್ಲ. ಈ ಕೆಲಸ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಮಲ್ಲಪ್ಪ.—ಈ ಸೇತುವೆ ನಿರ್ಮಿಸುವುದರಿಂದ ಜನರಿಗೆ ಬಹಳ ಅನುಕೂಲವಾಗುವುದು, ದಯವಿಟ್ಟು ಈ ಸೇತುವೆ ಕೆಲಸ ತೆಗೆದುಕೊಳ್ಳಬೇಕು.

ಶ್ರೀ ಬಸವರಾಜ ಮಾಗಾವಿ.— ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಮಲ್ಲಪ್ಪ.—ಎರಡನೆಯ ಪ್ರಶ್ನೆಗೆ ಕೊಟ್ಟಿರುವ ಉತ್ತರ ಬಹಳ ವಿಚಿತ್ರವಾಗಿದೆ. ‘ಇಲ್ಲ’’ ಎಂದು ಹೇಳಿದೆ. ಹಾಗಾದರೆ ವ್ಯವಸಾಯಗಾರರಿಗೆ ಕಷ್ಟ ಇದೆ ಎಂದು ಹೇಳಿದರೆ ಅವರಿಗೆ ಸಹಾಯ ಮಾಡಬಾರದು ಎಂಬುದು ನಿಮ್ಮ ಉದ್ದೇಶವೇ ?

ಶ್ರೀ ಬಸವರಾಜ ಮಾಗಾವಿ.—ಹಾಗಲ್ಲ. ಹಣದ ಅಭಾವದಿಂದ ಮಾಡಿಲ್ಲ.

Milk Dairy Project at Birur

165. Sri K. M. THAMMAIAH (Kadur).—

Will the Minister of State for Veterinary Services, Animal Husbandry and Dairy Development be pleased to state :—

(*a*) whether Government has a proposal before it to open a Milk Dairy at Birur Amrithmahal Kaval in Chickmagalur District ;

(*b*) if so, the estimated cost of the Project ?

Sri G. B. SHANKAR RAO (Minister of State for Veterinary Services, Animal Husbandry and Dairy Development).—

(*a*) No.

(*b*) Does not arise.

ಶ್ರೀ ಕೆ. ಎಂ. ತಮ್ಮಯ್ಯ.—ನಮ್ಮ ರಾಜ್ಯದಲ್ಲಿ 19 ಜಿಲ್ಲೆಗಳಿವೆ. ಎಷ್ಟು ಜಿಲ್ಲೆಗಳಲ್ಲಿ ಡೈರಿ ಫಾರಂ ಇಲ್ಲ ಎಂಬುದನ್ನು ಹೇಳುತ್ತೀರಾ ?

† ಶ್ರೀ ಜಿ. ಬಿ. ಶಂಕರರಾವ್.—ಜಿಲ್ಲಾವಾರು ಡೈರಿ ಫಾರಂ ಮಾಡಿಲ್ಲ.

ಶ್ರೀ ಕೆ. ಎಂ. ತಮ್ಮಯ್ಯ.—ಚಿಕ್ಕಮಗಳೂರಿನಲ್ಲಿ ಹಾಲಿನ ಡೈರಿ ಮಾಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಜಿ. ಬಿ. ಶಂಕರರಾವ್ .—50 ಸಾವಿರ ಪ್ರಜಾ ಸಂಖ್ಯೆ ಇರುವ ದೊಡ್ಡ ನಗರಗಳಲ್ಲಿ ಮಾತ್ರ ಮಿಲ್ಕ್ ಡೈರಿ ಮಾಡಬೇಕು ಎಂದು ನಾಲ್ಕನೇ ಯೋಜನೆಯಲ್ಲಿ ಗುರಿ ಇಟ್ಟುಕೊಂಡಿದ್ದೇವೆ.

ಶ್ರೀ ಎಂ. ನಾಗಪ್ಪ.—ದೊಡ್ಡ ನಗರ ಎಂದರೆ ಪಾಪ್ಯುಲೇಷನ್ ಬೇಸಿಸ್ ಇಟ್ಟುಕೊಂಡಿದ್ದೀರಾ? ಎಷ್ಟು ಪಾಪ್ಯುಲೇಷನ್ ಇದ್ದರೆ ದೊಡ್ಡ ನಗರ ಎಂದು ಪರಿಗಣಿಸುತ್ತೀರಿ ? ಪ್ರತಿಯೊಂದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸಿನಲ್ಲಾದರೂ ಪ್ರಾರಂಭ ಮಾಡಲು ಪ್ರಯತ್ನಮಾಡುತ್ತೀರಾ ?

---

† Indicates that the remarks or speeches have not been revised by the member concerned.

Sri G. B. SHANKAR RAO.—We have got a limit for this. We have a programme under the Fourth Plan for setting up dairies in cities having a population of 50,000 and above. I know there are cities with a population of 50,000 and above but it is not possible to set up dairies in all of them. Wherever there is acute shortage of milk, Government have decided to set up 4 or 5 dairies in the Fourth Plan and one of them will be in Raichur.

Sri M. M. JALIGSATGI.—What is the basis for starting a dairy farm ?

ಶ್ರೀ ಜಿ. ಬಿ. ಶಂಕರರಾವ್.—50 ಸಾವಿರ ಪ್ರಜಾ ಸಂಖ್ಯೆ ಇರುವ ನಗರಗಳಲ್ಲಿ ಅವಶ್ಯಕತೆ ಇದ್ದಲ್ಲಿ ಪ್ರಾರಂಭ ಮಾಡಲು ಪ್ರಯತ್ನ ಮಾಡಬೇಕು ಎಂದು ನಾಲ್ಕನೇ ಯೋಜನೆಯಲ್ಲಿ ಒಂದು ಗುರಿ ಇದೆ ಎಂದು ಹೇಳಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಹಾಗಾದರೆ ಪ್ರತಿಯೊಂದು ಜಿಲ್ಲೆಯಲ್ಲಿ ಡೈರಿ ಫಾರಂ ಪ್ರಾರಂಭಿಸುವ ಕಾರ್ಯಕ್ರಮ ಕೈಕೊಂಡಿದ್ದೀರಾ !

ಶ್ರೀ ಜಿ. ಬಿ. ಶಂಕರರಾವ್.—ತಳಿ ಅಭಿವೃದ್ಧಿ ಯೋಜನೆಗಳ ಕಾರ್ಯಕ್ರಮದ ಬಗ್ಗೆ ಪ್ರತಿಯೊಂದು ಜಿಲ್ಲೆಯಲ್ಲಿ ಕೇಂದ್ರ ಪ್ರಾರಂಭ ಮಾಡಲು ಯೋಚನೆ ಮಾಡುತ್ತೇನೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ಯಾವ ಯಾವ ಸ್ಥಳದಲ್ಲಿ ಮಿಲ್ಕ್ ಡೈರಿ ಪ್ರಾರಂಭ ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—4ನೇ ಪಂಚವಾರ್ಷಿಕ ಯೋಜನೆಯಲ್ಲಿ ರೂರಲ್ ಡೈರಿ ಸೆಂಟರ್ಸ್ ಮಾಡಬೇಕು. 50 ಸಾವಿರಕ್ಕಿತ ಹೆಚ್ಚು ಪ್ರಜಾಸಂಖ್ಯೆ ಇರುವ 4–6 ಸ್ಥಳಗಳಲ್ಲಿ ಮಾಡಬೇಕು ಎಂದು ಯೋಚಿಸಿದ್ದೇವೆ. ಆ ಸ್ಥಳಗಳು ಯಾವುವು ಎಂದರೆ ರಾಯಚೂರು, ಹಾಸನ, ಬಿಜಾಪುರ ಮತ್ತು ಬಳ್ಳಾರಿ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—50 ಸಾವಿರ ಪ್ರಜಾ ಸಂಖ್ಯೆಗಿಂತ ಹೆಚ್ಚು ಇದ್ದ ಕಡೆ ಡೈರಿ ಪ್ರಾರಂಭ ಮಾಡುವ ನೀತಿ ಇದೆಯೆಂದು ಮಾನ್ಯ ಮಂತ್ರಿಗಳು ಹೇಳಿದರು. ಮಲನಾಡು ಪ್ರದೇಶದಲ್ಲಿ ಅಂದರೆ ದಕ್ಷಿಣ ಕನ್ನಡ ಜಿಲ್ಲೆ ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರಜಾಸಂಖ್ಯೆ ಬಲ ಕಡಿಮೆ. ಆದುದರಿಂದ ಅಂತಹ ಜಿಲ್ಲೆಗಳಿಗೆ ಏನಾದರೂ ರಿಯಾಯಿತಿ ತೋರಿಸಿ ಡೈರಿ ಫಾರಂನಿಂದ ಹೆಚ್ಚು ಹಾಲು ದೊರೆಯುವಂತೆ ಹೊಸ ಯೋಜನೆ ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಹಾಲನ್ನು ಉತ್ಪನ್ನ ಮಾಡಿ ಎಲ್ಲಾ ಕಡೆಗಳಲ್ಲೂ ಸರ್ಕಾರದವರೇ ಜನಗಳಿಗೆ ಹಂಚಬೇಕು ಎನ್ನುವುದು ಸರ್ಕಾರದ ಉದ್ದೇಶವಲ್ಲ. ಕಾರ್ಮಿಕರ ಸಂಖ್ಯೆ ಎಲ್ಲಿ ಬೆಳೆಯುತ್ತಾ ಇದೆ ಆ ನಗರಗಳಲ್ಲಿ ಸರ್ಕಾರದವರೇ ಗ್ರಾಮಾಂತರ ಜನರಿಂದ ಉತ್ಪಾದಿತ ಹಾಲನ್ನು ಹಂಚಬೇಕು ಎನ್ನುವ ಉದ್ದೇಶ ಇಟ್ಟುಕೊಂಡಿದೆ. ಆದರೆ ಸಣ್ಣ ನಗರಗಳಲ್ಲಿ ಜನಗಳು ಹಾಲು ಉತ್ಪನ್ನಮಾಡಲು ಮುಂದೆ ಬಂದರೆ ಅದಕ್ಕೆ ಸರ್ಕಾರ ಸಹಾಯ ಮಾಡುತ್ತದೆ.

ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ಕಡೂರು–ಬೀರೂರು ಪ್ರಜಾ ಸಂಖ್ಯೆ 30 ಸಾವಿರ ಇದೆ ನೀವು ಹೇಳಿದತರಹದಲ್ಲಿ 50 ಸಾವಿರ ಪ್ರಜಾಸಂಖ್ಯೆ ಇರುವ ಕಡೆ ಡೈರಿ ಫಾರಂ ಮಾಡುತ್ತೇವೆಂದು ಹೇಳಿದಿರಿ. ಕಡೂರು ಬೀರೂರು ಮಧ್ಯೆ 800 ಎಕರೆ ಜಮೀನು ಇದೆ. ಆ ಜಮೀನಲ್ಲಿ ಫಾರಂ ಮಾಡಿದರೆ ಅದು ಎಕಾನಮಿಕ್ ಆಗಿ ಆಗುತ್ತದೆ. ಅಲ್ಲಿ ಉತ್ತಮವಾದ ತಳಿಗಳನ್ನು ತಯಾರಿಸಿ ಲಾಭದಾಯಕ ರೀತೀಲಿ ಮಾಡಬಹುದು ಎಂದು ನನ್ನ ಸ್ನೇಹಿತರು ಅಭಿಪ್ರಾಯ ಪಟ್ಟಿದ್ದಾರೆ. ತಜ್ಞರೂ ಅಭಿಪ್ರಾಯ ಪಟ್ಟಿದ್ದಾರೆ. ಆದುದರಿಂದ ಸರ್ಕಾರದವರು ಒಂದು ಡೈರಿ ಫಾರಂ ಸ್ಥಾಪನೆ ಮಾಡಿದರೆ ಇಡೀ ಜಿಲ್ಲೆಗೆ ಅನುಕೂಲ ಮಾಡಿದಂತಾಗುತ್ತದೆ. ಮತ್ತು ಹೆಚ್ಚು ಹಾಲು ಉತ್ಪತ್ತಿಯಾಗಿ ಭದ್ರಾವತಿಗೂ ಕೂಡ ಕಳುಹಿಸಬಹುದು. ಇದನ್ನು ಏತಕ್ಕೆ ಮಾಡಬಾರದು ?

Sri G. B. SHANKAR RAO.—I have already made it clear that there is difference between milk dairy and dairy farm. It is not possible to have a milk dairy in each place. I know this economic farm having more than

(SRI G. B. SHANKAR RAO)

thousand acres and being made use of for raising bull calves. We may place some exotic bulls at the farm. We have got a cross-breeding programme, by which the cross bred stock is distributed to farmers for further breeding in the area round about.

ಶ್ರೀ ಅಬ್ದುಲ್ ಖುದ್ದೂಸ್ ಅನ್ವರ್.—ಈಗತಾನೇ ಹೇಳಿದಿರಿ 50,000 ಪಾಪ್ಯುಲೇಷನ್ ಇದ್ದ ಕಡೆ ಡೈರಿ ಮಾಡುವುದು ಎಂದು. ಮರ್ಕರಾದಲ್ಲಿ 15 ಸಾವಿರ ಪಾಪ್ಯುಲೇಷನ್ ಇದೆ. ಅಂಥ ಸ್ಥಳಕ್ಕೆ ಏತಕ್ಕೆ ಕೊಟ್ಟಿರಿ ?

ಶ್ರೀ ಜಿ. ಬಿ. ಶಂಕರರಾವ್.—ಮರ್ಕರಾಕ್ಕೆ ಈಚೆಗೆ ಕೊಟ್ಟದ್ದಲ್ಲ. ಅರ್ಸ್ಟ್‌ವೈಲ್ ಕೂರ್ಗ್ ಇದ್ದಾಗಲೇ ಆ ಸರ್ಕಾರದವರು ಮಿಲ್ಕ್ ಡೈರಿ ಮಾಡಿಕೊಂಡಿದ್ದರು. ಹಿಂದೆ ಇದ್ದುದನ್ನೇ ಕಂಟಿನ್ಯೂ ಮಾಡಿಕೊಂಡು ಬರುತ್ತಿದ್ದೇವೆ.

ಶ್ರೀ ಎ. ಆರ್. ಬದ್ರಿನಾರಾಯಣ್.—ಹಳ್ಳಿಗಾಡಿನ ಪ್ರದೇಶಗಳಲ್ಲಿ ಜಾನುವಾರುಗಳನ್ನು ಸಾಕು ಮಾಡಿ, ಸಾಕಷ್ಟು ಅನುಭವ ಇದ್ದಂಥ ಜನಗಳು ಇದ್ದರೆ ಅವರಿಗೇನಾದರೂ ಸಬ್ಸಿಡೈಸ್ ಮಾಡಿ ಫಾರಂ ಮಾಡುವುದಕ್ಕೆ ಏನಾದರೂ ಅವಕಾಶ ಮಾಡಿಕೊಡುವಂತೆ ಅಂತಹ ಪ್ಲಾನ್ ಸರ್ಕಾರದಲ್ಲಿದೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಅಂತಹ ಯೋಜನೆ ಸರ್ಕಾರದಲ್ಲಿಲ್ಲ. ಅದರಲ್ಲಿ ಅನುಭವ ಇದ್ದು ಆಸಕ್ತಿ ಹೊಂದಿರುವವರು ತಳಿ ಅಭಿವೃದ್ಧಿ ಮಾಡಬೇಕೆಂದಿದ್ದರೆ ಗರ್ಭಧಾರಣೆ ಮುಖಾಂತರ ಮಿಶ್ರತಳಿ ಅಭಿವೃದ್ಧಿ ಯೋಜನೆಗೆ ಸರ್ಕಾರ ಸಹಾಯ ಮಾಡುತ್ತದೆ. ಸಬ್ಸಿಡಿ ಮುಖಾಂತರ ಜಾನುವಾರುಗಳನ್ನು ಹಂಚುವ ಕಾರ್ಯಕ್ರಮ ಸರ್ಕಾರ ಇಟ್ಟುಕೊಂಡಿಲ್ಲ.

ಶ್ರೀ ಎನ್. ಎ. ಚನ್ನೇಗೌಡ.—ತಾವು ಹೇಳಿದಿರಿ 50 ಸಾವಿರ ಪ್ರಜಾಸಂಖ್ಯೆ ಇರುವ ಕಡೆ ಮಾತ್ರ ಮಿಲ್ಕ್ ಡೈರಿ ಮಾಡುತ್ತೇವೆ ಎಂದು. ಐ. ಎ. ಡಿ. ಪಿ. ಇರತಕ್ಕಂಥ ಜಿಲ್ಲೆಗಳಲ್ಲಿ ಸಣ್ಣ ಹಳ್ಳಿಗಳಲ್ಲೂ ಕೂಡ ಹಾಲಿನ ಅಭಾವ ಜಾಸ್ತಿಯಾಗಿದೆ. ಇಂತಹ ಸಣ್ಣ ಹಳ್ಳಿಗಳು ಇರುವ ಕಡೆ ಏನಾದರೂ ಆಲ್ಟರ್‌ನೇಟೀವ್ ಪ್ಲಾನ್ ಮಾಡಿ ಹಾಲು ಸರಬರಾಜು ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಮೈಸೂರು ರಾಜ್ಯದಲ್ಲಿ ಹಾಲು ಉತ್ಪಾದನೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆ. ಅದು ಆಗಬೇಕಾದರೆ ತಳಿಯ ಅಭಿವೃದ್ಧಿ ಆಗಬೇಕು. ಅದಾದಮೇಲೆ ಹೆಚ್ಚು ಹಾಲು ಕೊಡತಕ್ಕಂಥ ಹಸುಗಳು ಉತ್ಪಾದನೆ ಆಗಬೇಕು. ಅದಕ್ಕೆ ತಕ್ಕಂಥ ಬೀಜದ ಹೋರಿಗಳನ್ನು ಮತ್ತು ಕೃತಕವೀರ್ಯ ಸೆಂಟರುಗಳನ್ನು ಇಡಬೇಕು. ಕೃತಕ ವೀರ್ಯದಿಂದ ಒಳ್ಳೆಯ ಹಸುಗಳು ಆಗಬೇಕು. ಆ ಹಸುಗಳಿಂದ ಹಾಲಿನ ಉತ್ಪಾದನೆ ಆಗಬೇಕು. ರೈತರು ಹೆಚ್ಚು ಹಾಲು ಉತ್ಪನ್ನ ಮಾಡಬೇಕು. ಇದನ್ನು ಸರ್ಕಾರ ದೇಶಾದ್ಯಂತ ಮಾಡುವುದಕ್ಕೆ ಸಾಧ್ಯ ಇಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಕಡೂರು ಬೀರೂರು ಜನಸಂಖ್ಯೆ 50 ಸಾವಿರ ಇದ್ದಮೇಲೆ ಅಲ್ಲಿ ಒಂದು ಮಿಲ್ಕ್ ಡೈರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಆ ಕ್ಷೇತ್ರದಿಂದ ಬಂದಿರತಕ್ಕ ಸದಸ್ಯರೇ ಹೇಳಿದರು ಆ ಎರಡು ನಗರದಲ್ಲಿ 30 ಸಾವಿರ ಜನಸಂಖ್ಯೆ ಇದೆ ಎಂದು. ನಮ್ಮ ರಾಜ್ಯದಲ್ಲಿ 50 ಸಾವಿರಕ್ಕಿಂತ ಹೆಚ್ಚು ಪ್ರಜಾಸಂಖ್ಯೆ ಇದ್ದರೆ ಅಂತಹ ಒಂದು ಕಡೆ ಮಿಲ್ಕ್ ಡೈರಿ ಮಾಡಬಹುದು. ಇಂತಹ ಸಣ್ಣ ನಗರಗಳಲ್ಲಿ ಮಾಡವುದಕ್ಕಾಗುವುದಿಲ್ಲವೆಂದು ಮೊದಲೇ ಸ್ಪಷ್ಟಪಡಿಸಿದ್ದೇನೆ.

ಶ್ರೀ ಕೆ. ಎಂ. ತಮ್ಮಯ್ಯ.—ನೀವು ಮಿಲ್ಕ್ ಡೈರಿಯೇ ಬೇರೆ, ಮತ್ತು ಡೈರಿ ಫಾರಂ ಬೇರೆ ಎಂದು ಹೇಳುತ್ತೀರಿ. ಅಮೃತ ಮಹಲ್ ಕಾವಲಿನಲ್ಲಿ ಸಾವಿರಾರು ರಾಸುಗಳು ಇವೆ. ಅಲ್ಲಿ ಡೈರಿ ಫಾರಂ ಮಾಡುವುದಕ್ಕೆ ಕಟ್ಟಿಸಿದ ಬಿಲ್ಡಿಂಗ್ ಹಾಗೆಯೇ ಇದೆ. ಅಲ್ಲಿ ಹೆಚ್ಚು ಕವಾಡಿಗರೂ ಇದ್ದಾರೆ. ಅವರ ಜೀವನಕ್ಕೆ ಹಾಲಿನ ಕಸಬೇ ಒಂದು ಮುಖ್ಯವಾದ ದಾರಿ. ಅವರು ಆ ಹಾಲನ್ನೆಲ್ಲಾ ಹೋಟೇಲಿಗೆ ಕೊಟ್ಟುಬಿಡುತ್ತಾರೆ. ಮತ್ತು ಹೋಟೇಲಿನಲ್ಲಿ ಆ ದುಡ್ಡಿಗೆ ತಿಂಡಿಯನ್ನೂ ತಿಂದುಬಿಡುತ್ತಾರೆ. ಮತ್ತೆ ಅವರಿಗೆ ಸಪ್ಲೈ ಮಾಡುವ ಹಾಲಿನ ದರವೂ ಕಡಿಮೆ. ಆದುದರಿಂದ ಅವರ ಜೀವನಕ್ಕೆ ತೊಂದರೆಯಾಗುತ್ತದೆ. ಅವರ ಒಂದು ಅಭಿವೃದ್ಧಿಗೋಸ್ಕರ ತಾವೇ ಒಂದು ಪ್ರಮಾಣದಲ್ಲಿ, ಹಾಲನ್ನು ತೆಗೆದುಕೊಂಡು ಸರಿಯಾದ ರೇಟು ಕೊಡುವುದಕ್ಕೆ ಏತಕ್ಕೆ ಪ್ರಯತ್ನ ಮಾಡಬಾರದು ?

ಶ್ರೀ ಜಿ. ಬಿ. ಶಂಕರರಾವ್.—ನಮ್ಮದು ಡೈರಿ ಫಾರಂ ಇದೆ. Government have proposed to place some exotic bulls at their disposal so that we can take up cross-breeding programme in the farm and distribute cross-breeding animals to the farmers so that they can also take up cross-breeding programme on a large scale.

Levy Paddy deteriorating in Godowns

175. **Sri S. JAYAPRAKASH SHETTY** (Brahmavar).—

Will the Minister of State for Food and Civil Supplies be pleased to state :—

(*a*) the quantity of levy paddy collected during the last year in the State ;

(*b*) out of that the quantity of rice distributed during rainy season (lean months) ;

(*c*) whether Government is aware of the fact that large quantities of foodgrains are deteriorating in several godowns for want of distribution ;

(*d*) the number of godowns in Udipi taluk where rice is in stock for want of distribution during 1968-69 together with the quantity of rice in stock ?

Sri B. VITHALDAS SHETTY (Minister of State for Food and Civil Supplies).—

(*a*) 1,01,760 tonnes.

(*b*) In addition to the regular quota of 6,899 tonnes of rice per month a quantity of 85 tonnes per month was allotted during lean months of the year from September to end of December 1969.

(*c*) No such large scale deterioration has been reported.

(*d*) No rice is remaining undistributed in the godowns of Udipi taluk.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—(ಇ)ಗೆ ಉತ್ತರವಾಗಿ ಆ ರೀತಿ ಹೆಚ್ಚು ಪ್ರಮಾಣದಲ್ಲಿ ನಾಶವಾಗುತ್ತಿರುವುದು ವರದಿಯಾಗಿಲ್ಲ ಎಂದು ಹೇಳಿದ್ದಾರೆ. ಸಾಮಾನ್ಯವಾಗಿ ಕಡಿಮೆ ಪ್ರಮಾಣದಲ್ಲಿ ನಾಶವಾಗಿದ್ದರೆ, ಅದರ ನಷ್ಟ ಎಷ್ಟಾಗಿದೆ ಎಂದು ಹೇಳುತ್ತೀರಾ ?

† ಶ್ರೀ ಬಿ. ವಿಠಲದಾಸ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನೂ ಡ್ಯಾಮೇಜ್ ಆಗಿಲ್ಲ. ಬೆಂಗಳೂರಿನಲ್ಲಿ ವೀಟ್ ಡ್ಯಾಮೇಜ್ ಆಗಿದೆ ಮತ್ತು ಬಿಜಾಪುರ ಮತ್ತು ಧಾರವಾಡದಲ್ಲಿ ಈ ಎರಡು ಜಿಲ್ಲೆಗಳಲ್ಲಿ ಮಾತ್ರ ಸ್ವಲ್ಪ ಡ್ಯಾಮೇಜ್ ಆಗಿದೆ.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—ಇದೇ ಉಡುಪಿ ತಾಲ್ಲೂಕಿನಲ್ಲಿ 4-5 ಕೋ ಆಪರೇಟೀವ್ ಸೊಸೈಟಿಗಳಲ್ಲಿ 450 ಕ್ವಿಂಟಾಲ್ ಅಷ್ಟು ಹಾಳಾಗಿದೆ ಎಂದು ನನಗೆ ಗೊತ್ತಿದೆ. ಅದು ನಿಜವೇ ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಇದುವರೆಗೆ ಸರ್ಕಾರದ ಅವಗಾಹನೆಗೆ ಬಂದಿಲ್ಲ. ತಾವು ಅದನ್ನು ಬರೆದು ಕಳುಹಿಸಿದರೆ ವಿಚಾರಣೆ ನಡೆಸಿ ತಮಗೆ ಉತ್ತರ ಕೊಡುತ್ತೇನೆ.

Sri BAPU GOWDA.—Is it not a fact that this year hybrid jawar which has been collected, is getting deteriorated in Hyderabad area ? Government have not taken action to distribute it.

Sri B. VITHALADAS SHETTY.—No. ಹೈದ್ರಾಬಾದ್ ಏರಿಯಾದಲ್ಲಿ ನಾವು ಡಿಸ್ಟ್ರಿಬ್ಯೂಟ್ ಎಷ್ಟು ಮಾಡಬೇಕೋ ಅಷ್ಟನ್ನು ಮಾಡಿದ್ದೇವೆ. ಕೆಲವು ಕಡೆ ಬಫರ್‌ಸ್ಟಾಕ್ ಇಟ್ಟುಕೊಳ್ಳಬೇಕಾಗುತ್ತದೆ. ಯಾವ ಸಂದರ್ಭದಲ್ಲಿ ಯಾವ ಪರಿಸ್ಥಿತಿ ಬರುತ್ತದೆ ಎನ್ನುವುದು ಗೊತ್ತಾಗುವುದಿಲ್ಲ. ಏನಾದರೂ ಎಮರ್ಜನ್ಸಿ ಬಂದರೆ ಬೇಕೆಂದು ಬಫರ್ ಸ್ಟಾಕ್ ಇಟ್ಟುಕೊಳ್ಳುತ್ತೇವೆ. ಇದು ದೇಶದ ಹಿತದೃಷ್ಟಿಯಿಂದ ಮತ್ತು ಜನತೆಯ ಹಿತದೃಷ್ಟಿಯಿಂದ ಈ ರೀತಿ ಬಫರ್‌ಸ್ಟಾಕ್ ಇಟ್ಟುಕೊಳ್ಳುವುದು ಅಗತ್ಯ. . .

Sri BAPU GOWDA.—My question is not answered.

Mr. SPEAKER.—It does not arise within the scope of the main question. I am sorry I cannot allow it.

ಶ್ರೀ ಬಿ. ಭಾಸ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರು ಮೊದಲನೇ ಫಸಲಿನಲ್ಲಿ ಬಂದ ಬತ್ತವನ್ನು ಮಾರಿ ಲಾಭ ಸಂಪಾದನೆ ಮಾಡುತ್ತಾರೆ. ಹೀಗೆ ಕೇರಳಕ್ಕೆ ನಮ್ಮ ಭಾಗದ ಮೂಲಕ ಅಕ್ಕಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಮಾನ್ಯ ಸದಸ್ಯರು ಹೇಳುವಂತಹ ಯಾವ ವಿಚಾರಗಳೂ ಇದುವರೆಗೆ ಸರ್ಕಾರದ ಅವಗಾಹನೆಗೆ ಬಂದಿಲ್ಲ. ಸದಸ್ಯರು ಇದರ ಬಗ್ಗೆ ಎಲ್ಲಿ ಆ ರೀತಿ ಹೋಗುತ್ತಿದೆ ಎನ್ನುವುದನ್ನು ನಿರ್ದಿಷ್ಟವಾಗಿ ತಿಳಿಸಿದರೆ ಅಂತಹ ಸಂದರ್ಭದಲ್ಲಿ ಕೂಡಲೇ ಉಗ್ರ ಕಾರ್ಯಕ್ರಮ ಕೈಗೊಳ್ಳುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ.—ಆ ಲೆವಿ ಬತ್ತದ ವಸೂಲಿಯಲ್ಲಿ ರೈತರಿಗೆ ತೊಂದರೆಯಾಗುತ್ತಿದೆ ಎಂದು ಕೇಳುತ್ತೇವೆ. ಇದಕ್ಕಾಗಿ ಆಯಾ ಜಿಲ್ಲೆಯಲ್ಲಿ ಬೆಳೆದ ಭತ್ತವನ್ನು ಆಯಾ ಜಿಲ್ಲೆಗೆ ಉಪಯೋಗಿಸಲು ಅವಕಾಶ ಏಕೆ ಮಾಡಬಾರದು ? ಆಯಾ ಜಿಲ್ಲೆಯಲ್ಲಿ ಬೆಳೆದ ಭತ್ತ ಅದೇ ಜಿಲ್ಲೆಗೆ ಕೊಡುವುದು ಒಳ್ಳೆಯದಲ್ಲವೇ ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಮಾನ್ಯ ಸದಸ್ಯರು ಸೂಚಿಸುವಂತಹ ಸಲಹೆ ಬಹಳ ಸ್ವಾಗತಾರ್ಹವಾದುದು. ಆದರೆ ಕೆಲವು ಜಿಲ್ಲೆಗಳಲ್ಲಿ ಭತ್ತವೇ ಬೆಳೆಯುವುದಿಲ್ಲ. ಎಲ್ಲಿ ಭತ್ತದ ಬೆಳೆ ಇಲ್ಲವೋ ಅಲ್ಲಿಗೆ ಭತ್ತ ಬೆಳೆಯುವ ಕಡೆಗಳಿಂದ ಕಳುಹಿಸಲೇಬೇಕಾಗುತ್ತದೆ. ಈ ರೀತಿ ಒಂದು ಕಡೆ ಬೆಳೆಯುವ ಭತ್ತವನ್ನು ಒಂದೇ ಕಡೆ ಇಡುವುದು ಅಸಾಧ್ಯ. ಎಲ್ಲ ಕಡೆಗೂ ಸಾಗಾಣಿಕೆ ಮಾಡಲೇಬೇಕಾಗುತ್ತೆ.

ಶ್ರೀ ಬಿ. ಪಿ. ಗಂಗಾಧರ್.—(ಸಿ)ಗೆ ಉತ್ತರವಾಗಿ ಹೆಚ್ಚು ಪ್ರಮಾಣದಲ್ಲಿ ನಾಶವಾಗಿಲ್ಲ ಎಂದು ಹೇಳಿದೆ. ಆಹಾರ ಧಾನ್ಯಗಳನ್ನು ದಾಸ್ತಾನು ಮಾಡಿರತಕ್ಕ ಮೂರು ಗೋಡೌನ್‌ಗಳಲ್ಲಿ ಇರುವ ಕಾಳುಗಳು ಹುಳುತು ಕೊಳೆತು ನಾಶವಾಗಿರುವುದನ್ನು ನಾವು ನೋಡಿದ್ದೇವೆ. ಇದರಲ್ಲಿ ಸುಮಾರು ಎಂಟು ಸಾವಿರ ಟನ್‌ಗಳಷ್ಟು ದವಸ ನಾಶವಾಗಿದೆ ಮತ್ತು ಸರಕಾರಕ್ಕೆ ಇದರಿಂದ 48 ಲಕ್ಷದಷ್ಟು ಹಣ ನಷ್ಟವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಇದು ದೊಡ್ಡ ಪ್ರಮಾಣದಲ್ಲಿ ನಷ್ಟವಾಗಿದೆ ಎಂದು ಮಾನ್ಯ ಸದಸ್ಯರು ಹೇಳುವುದನ್ನು ಸಂಪೂರ್ಣವಾಗಿ ಒಪ್ಪಲಿಕ್ಕೆ ಆಗುವುದಿಲ್ಲ. ಕಾರಣವೇನೆಂದರೆ ಎಲ್ಲ ಕಡೆಗಳಲ್ಲೂ ಬಫರ್ ಸ್ಟಾಕು ಇಡಬೇಕೆಂದು ಮಾಡಲಾಗಿದೆ. ಮತ್ತು ಕೆಲವು ಜಿಲ್ಲೆಗಳಲ್ಲಿ ಕೆಲವು ವೇಳೆ ತೊಂದರೆಗಳು ಬರಬಹುದು. ಉದಾಹರಣೆಯಾಗಿ ಮಾನ್ಯ ಸದಸ್ಯರ ಕ್ಷೇತ್ರವಾದ ತುಮಕೂರು ಜಿಲ್ಲೆಯಲ್ಲಿ ಭತ್ತ ದಾಸ್ತಾನು ಇಲ್ಲ ಎಂದು ಕೇಳಿ ಬಂದರೆ ಅಲ್ಲಿಗೆ ಬಫರ್ ಸ್ಟಾಕು ದವಸ ಇಲ್ಲದಿದ್ದರೆ, ವಿತರಣೆ ಮಾಡುವುದಕ್ಕೆ ಆಗುವುದಿಲ್ಲ. ಇವಕ್ಕಾಗಿ ಸರಕಾರ ಗೋಡೌನ್‌ಗಳಲ್ಲಿ ಆಹಾರ ಧಾನ್ಯಗಳನ್ನು ಶೇಖರಿಸಿಟ್ಟಿದೆ. ಇದನ್ನು ಜನರಿಗೆ ಸಹಾಯ ಮಾಡುವುದಕ್ಕಾಗಿ ಸರಕಾರ ಮಾಡುತ್ತಿದೆ. ಅಲ್ಲಲ್ಲಿ ಆಹಾರ ಸಾಮಗ್ರಿಗಳು ಸ್ವಲ್ಪಮಟ್ಟಿಗೆ ಹಾಳಾಗಿ ಹೋಗುವುದು ಸರ್ವೇಸಾಮಾನ್ಯವಾಗಿದೆ. ಇದನ್ನು ತಪ್ಪಿಸಲಿಕ್ಕೆ ಯಾವ ಸರಕಾರಕ್ಕೂ ಆಗುವುದಿಲ್ಲ. ಈ ರೀತಿ ದಾಸ್ತಾನು ಮಾಡದೆ ಇದ್ದರೆ ಜನರಿಗೆ ತೊಂದರೆಯಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಲೆವಿ ಭತ್ತದಿಂದ ಸುಮಾರು 1,01,760 ಟನ್ನುಗಳಷ್ಟು ಭತ್ತ ಬಂದಿದೆ ಎಂದು ಹೇಳುತ್ತೀರಿ. ಇದನ್ನು ಲೆವಿದರದಲ್ಲಿ ಕೊಳ್ಳಲಾಯಿತೇ ? ಇಲ್ಲವೇ ಮಾರ್ಕೆಟ್ ದರದಲ್ಲಿ ಕೊಳ್ಳಲಾಯಿತೇ ? ಎರಡನೇದು ಬಫರು ಸ್ಟಾಕು ಮಾಡುವಾಗ ಕಂಟ್ರಾಕ್ಟರುಗಳ ಇಲ್ಲವೇ ಇತರ ಏಜೆನ್ಸಿಗಳ ಮೂಲಕ ಯಾವ ರೇಟಿನಲ್ಲಿ ಖರೀದಿ ಮಾಡಲಾಗಿದೆ ಎನ್ನುವುದನ್ನೇನಾದರೂ ಯೋಚನೆ ಮಾಡಿದ್ದೀರಾ ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಅವನ್ನೆಲ್ಲ ನಾನು ಯೋಚನೆ ಮಾಡಿದ್ದೇನೆ. ಪ್ರೈವೇಟು ಏಜೆನ್ಸಿಗಳಿಗೆ ಯಾವ ರೇಟು ಕೊಡಬೇಕು ಎನ್ನುವುದನ್ನೂ ನೋಡಿದ್ದೇವೆ, ಇದರಿಂದ ಜನರಿಗೆ ತೊಂದರೆಯಾಗುವುದಿಲ್ಲ ಎಂದು ಮಾಡಲಾಗಿದೆ.

ಶ್ರೀ ಎಚ್. ಸಿದ್ಧವೀರಪ್ಪ.—ಬಹಳ ಹೆಚ್ಚಿನ ಆಹಾರಧಾನ್ಯ ಕೆಟ್ಟು ಹೋಗಿಲ್ಲ ಎಂದು ಇಲ್ಲಿ ಮಾನ್ಯ ಮಂತ್ರಿಗಳು ಹೇಳುತ್ತಾರೆ. ನಾವು ಸೆಂಟ್ರಲ್ ಫುಡ್ ಕೌನ್ಸಿಲ್‌ನಲ್ಲಿ ಇರುವುದರಿಂದ ಎಷ್ಟು ಕಡೆ ದವಸಗಳು ಹಾಳಾಗಿವೆ ಎನ್ನುವುದು ಗೊತ್ತಿದೆ. ನಾನು ತಮ್ಮಲ್ಲಿ ಕೇಳುವುದು ನಮ್ಮ ನೆರೆಯ ರಾಜ್ಯವಾದ ಮದ್ರಾಸಿನಲ್ಲಿ ಪೂರ್ತಿಯಾಗಿ ಫುಡ್ ಕಂಟ್ರೋಲನ್ನು ತೆಗೆದುಹಾಕಿದ್ದಾರೆ ಮತ್ತು ಈಗ ಅಲ್ಲಿದ್ದ ಆಹಾರ ಇಲಾಖೆಯನ್ನು ಸಂಪೂರ್ಣವಾಗಿ ತೆಗೆದುಬಿಟ್ಟಿದ್ದಾರೆ. ಈ ರೀತಿ ಇಲ್ಲೂ ಕೂಡ ಪೂರ್ತಿಯಾಗಿ ರೇಷನಿಂಗನ್ನು ತೆಗೆದುಬಿಡಲು ಇದು ಸೂಕ್ತ ಸಮಯವಲ್ಲವೇ ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಮಾನ್ಯ ಸದಸ್ಯರು ಮದ್ರಾಸಿನಲ್ಲಿ ಸಂಪೂರ್ಣವಾಗಿ ಕಂಟ್ರೋಲು ತೆಗೆದಿದ್ದಾರೆಂದು ಹೇಳಿದರು, ಅದನ್ನು ನಾನು ಸಂಪೂರ್ಣವಾಗಿ ಒಪ್ಪಲಿಕ್ಕಾಗುವುದಿಲ್ಲ. ಮದ್ರಾಸಿನಲ್ಲಿ ಹಾಗೂ ಕೊಯಮತ್ತೂರಿನಲ್ಲಿ ಫಾರ್ಮಲ್ ರೇಷನಿಂಗು ಇದ್ದೇ ಇವೆ. ನಮ್ಮಲ್ಲಿರುವುದು ಇನ್‌ಫಾರಮಲ್ ರೇಷನಿಂಗು ಇದರಂತೆ ಅಲ್ಲಿ ಇಲ್ಲ. ನಮ್ಮಲ್ಲಿ ಈಗ ಬೆಂಗಳೂರು ಹಾಗೂ ಕೆ. ಜಿ. ಎಫ್.ನಲ್ಲಿ ಈ ಇನ್‌ಫಾರ್ಮಲ್ ರೇಷನಿಂಗ್ ಪದ್ಧತಿ ಇದೆ. ಇದೇ ರೀತಿ ಈಗ ಮದ್ರಾಸ್‌ನವರು ಕೂಡ ಇನ್‌ಫಾರ್ಮಲ್ ರೇಷನಿಂಗು ಪದ್ಧತಿಯನ್ನು ಜಾರಿಗೆ ತರಬೇಕೆಂದಿದ್ದಾರೆ. ಅಲ್ಲದೆ ನಮ್ಮಲ್ಲಿ ಡಿಸ್ಟ್ರಿಕ್ಟ್‌ನಿಂದ ಡಿಸ್ಟ್ರಿಕ್ಟ್‌ಗೆ ಧಾನ್ಯ ರವಾನೆ ರೆಸ್ಟ್ರಿಕ್ಷನ್ಸ್‌ಗಳಿಲ್ಲ. ಮದ್ರಾಸಿನಲ್ಲಿ ಕೂಡ ನಮ್ಮಲ್ಲಿರುವಂತ ಇನ್‌ಫಾರ್ಮಲ್ ರೇಷನಿಂಗ್ ತರಬೇಕೆಂದಿದ್ದಾರೆ ಎನ್ನುವುದನ್ನು ಮಾನ್ಯ ಸದಸ್ಯರ ಅವಗಾಹನೆಗೆ ತರಲು ಇಚ್ಛಿಸುತ್ತೇನೆ.

Smt. WINNIFRED F. FERNANDES.—Has it come to the notice of the Government that in South Canara 6,000 quintals of rice and 29,000 quintals of paddy procured in 1969 is still rotting in the godown ?

Sri B. VITHALDAS SHETTY.—It has not come to the notice of the Government so far. I will take note of it.

ಶ್ರೀ ಆರ್. ಜಿ. ಪಾಲಿ.—ಭತ್ತದ ಪೀಕು ಈ ಸಾಲಿನಲ್ಲಿ ಹೆಚ್ಚಾಗಿ ಬಂದು ಮತ್ತು ಲೆವಿ ಭತ್ತ ಕೂಡ ಸಾಕಾದಷ್ಟು ಸರ್ಕಾರಕ್ಕೆ ಬಂದಿರುವುದರಿಂದ ಇನ್ನು ಮುಂದೆ ಈ ಲೆವಿ ಭತ್ತ ವಸೂಲುಮಾಡುವುದನ್ನು ನಿಲ್ಲಿಸಿದರೆ ಒಳ್ಳೆಯದೆಂದು ಹೇಳಿ ರೈತರುಗಳು ಸರಕಾರಕ್ಕೆ ಮನವಿಗಳನ್ನು ಕಳುಹಿಸಿಲ್ಲವೇ ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಇಲ್ಲಿಯ ತನಕ ನನಗೆ ರಾಜ್ಯದ ಯಾವ ಕಡೆಯಿಂದಲೂ ದೂರುಗಳು ಬಂದಿಲ್ಲ ಮತ್ತು ಯಾವ ರೈತನೂ ನಮಗೆ ತೊಂದರೆಯಾಯಿತು ಎಂದು ದೂರನ್ನು ಕೊಟ್ಟಿಲ್ಲ. ಎಲ್ಲ ಕಡೆಯಲ್ಲೂ ಬೆಳೆ ಚೆನ್ನಾಗಿ ಬಂದಿಲ್ಲ, ಚಿತ್ರದುರ್ಗ ಹಾಗೂ ತುಮಕೂರುಗಳಲ್ಲಿ ಹೆಚ್ಚು ಬೆಳೆ ಬಂದಿಲ್ಲ. ಇಂತಹ ಕಡೆಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಅಲ್ಲಿನ ಡಿ. ಸಿ. ಗಳಿಗೆ ತಿಳಿಸಲಾಗಿದೆ. ಇದರಲ್ಲಿ ತೊಂದರೆಯಾಗಿದೆ ಎಂದು ಸ್ಪಷ್ಟವಾಗಿ ಯಾರೂ ಹೇಳಿಲ್ಲ. ಈ ಸಾರಿ ಭತ್ತದ ಬೆಳೆ ಕೆಲವು ಕಡೆ ಚೆನ್ನಾಗಿ ಬಂದಿವೆ. ಸೌತ್ ಕ್ಯಾನರ ನಾರ್ತ್ ಕ್ಯಾನರಾ ಚಿಕ್ಕಮಗಳೂರು, ಶಿವಮೊಗ್ಗ, ರಾಯಚೂರು ಮತ್ತು ಬಳ್ಳಾರಿ ಈ ಜಿಲ್ಲೆಯ ಕೆಲವು ಭಾಗಗಳಲ್ಲಿ ನಿರೀಕ್ಷಿಸಿದಷ್ಟು ಬೆಳೆ ಬಂದಿವೆ. If the hon. Members feel that there is difficulty, Government will welcome suggestion and it will consider whether levy is to be continued or not.

1-30 P. M.

ಶ್ರೀ ಎಚ್. ಬಿ. ಜ್ವಾಲನಯ್ಯ.—(ಅ) ಪ್ರಶ್ನೆಗೆ ಉತ್ತರವಾಗಿ 1,01,760 ಟನ್ನುಗಳು ಎಂದು ಹೇಳಿದ್ದೀರಿ. ಇದರಲ್ಲಿ ಸೊಸೈಟಿಗಳಲ್ಲಿ ಎಷ್ಟು ಸ್ಟಾಕ್ ಮಾಡಿದ್ದೀರಿ, ರೈಸ್ ಮಿಲ್‌ಗಳಲ್ಲಿ ಎಷ್ಟು ಸ್ಟಾಕ್ ಮಾಡಿದ್ದೀರಿ. ಮತ್ತು ಅವರುಗಳು ಷಾರ್ಟೇಜ್ ಬಗ್ಗೆ ಎಷ್ಟು ಕ್ಲೈಮ್ ಮಾಡಿದ್ದಾರೆ, ಸರ್ಕಾರದವರು ಎಷ್ಟು ಅಲೋ ಮಾಡಿದ್ದಾರೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಆ ಬಗ್ಗೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

ಶ್ರೀ ಬೋಳಾ ರಘುರಾಮ ಶೆಟ್ಟಿ.—ಈಗ ಲೆವಿ ಧಾರಣೆಗೂ ಮಾರ್ಕೆಟ್ ಧಾರಣೆಗೂ 30 ರೂಪಾಯಿಗಳ ವ್ಯತ್ಯಾಸ ಇದೆ. ಇದೇ ವಿಚಾರದಲ್ಲಿ ಕೆಲವರು ಹೈಕೋರ್ಟಿಗೆ ಹೋದಾಗ ಹೈಕೋರ್ಟಿನವರು ಮಾರ್ಕೆಟ್ ರೇಟನ್ನು ಲೆವಿ ಭತ್ತಕ್ಕೆ ಕೊಡಬೇಕೆಂದು ಹುಕುಂ ಸಹ ಕೊಟ್ಟಿದ್ದಾರೆ. ಇವೆಲ್ಲಾ ಕಾರಣಗಳಿಂದ ಮತ್ತು ಈಗ ಆಹಾರದ ಸಮಸ್ಯೆ ಒತ್ತಡ ಕಡಿಮೆಯಾಗಿರುವುದರಿಂದ ಕಡ್ಡಾಯ ಲೆವಿ ಪದ್ಧತಿಯನ್ನೇ ತೆಗೆದುಬಿಡುತ್ತೀರಾ ?

ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಲೆವಿ ಧಾರಣೆಗೂ ಮಾರ್ಕೆಟ್ ಧಾರಣೆಗೂ 30 ರೂಪಾಯಿಗಳ ವ್ಯತ್ಯಾಸವಿರುವುದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಸದಸ್ಯರಿಗೆ ಈ ವಿಚಾರ ಹೆಚ್ಚು ತಿಳಿದಿಲ್ಲವೆಂದು ಕಾಣುತ್ತದೆ. ಇವತ್ತಿನದಿವಸ ಮಾರ್ಕೆಟ್ ರೇಟಿಗೂ ಲೆವಿ ರೇಟಿಗೂ ಕೇವಲ ಒಂದೆರಡು ರೂಪಾಯಿಗಳ ವ್ಯತ್ಯಾಸ ಇದೆ. ಇನ್ನೂ ಕೆಲವು ಕಡೆ ಒಂದೇ ಧಾರಣೆ ಇದೆ. ಗಂಗಾವತಿ ಪ್ರದೇಶದ ಜನ ಲೆವಿಗಿಂತಲೂ ಹೆಚ್ಚಿನ ಬತ್ತವನ್ನು ತಮ್ಮಲ್ಲಿ ಶೇಖರಣೆ ಮಾಡಲು ಸ್ಥಳ ಇಲ್ಲವೆಂದು ಸರ್ಕಾರಕ್ಕೆ ಕೊಡುತ್ತಿದ್ದಾರೆ. ರೈತರ ಅನುಕೂಲಕ್ಕಾಗಿಯೇ ಲೆವಿ ಪದ್ಧತಿಯನ್ನು ಇಡಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಈ ಪದ್ಧತಿ ಬೇಡ ಎಂದು ಹೇಳಿದರೆ ಅದನ್ನು ಸರ್ಕಾರ ಪರಿಶೀಲನೆ ಮಾಡುವುದಕ್ಕೆ ಸಿದ್ಧವಿದೆ.

ಶ್ರೀ ಸದಾಶಿವಪ್ಪ ಪಾಟೀಲ್.—ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಶೇಖರಣೆ ಮಾಡಿದ್ದ ಲೆವಿ ಜೋಳವನ್ನು ಜನರಿಗೆ ಹಂಚಲು ಜಿಲ್ಲಾಧಿಕಾರಿಯವರು ಕ್ರಮ ತೆಗೆದುಕೊಳ್ಳದಿರುವುದರಿಂದ ಜೋಳ ಕೆಡುವ ಸ್ಥಿತಿ ಬಂದಿದೆ. ಇದರಿಂದ ಆಗುವ ಲಾಸ್‌ಗೆ ಮಾರ್ಕೆಟಿಂಗ್ ಸೊಸೈಟಿಯವರು ಹೊಣೆಯೇ ಅಥವಾ ಸರ್ಕಾರದವರೇ ಮತ್ತು ಎಲ್ಲಿ ನಾಲ್ಕಾಣೆಗಿಂತ ಕಡಿಮೆ ಬೆಳೆಯಾಗಿದೆಯೋ ಅಲ್ಲಿ ಲೆವಿ ವಸೂಲಿ ಮಾಡಬಾರದೆಂದು ಸರ್ಕಾರದವರು ಜಿಲ್ಲಾಧಿಕಾರಿಯವರಿಗೆ ಆದೇಶ ಕೊಟ್ಟಿದ್ದಾರೆಯೇ ?

ಅಧ್ಯಕ್ಷರು.—ಈ ಪ್ರಶ್ನೆ ಇದಕ್ಕೆ ಸಂಬಂಧವಿಲ್ಲದ್ದರಿಂದ ಕೇಳುವುದಕ್ಕಾಗುವುದಿಲ್ಲ.

Sri D. B. KALMANKAR.—Out of these 1,01,760 tons, may I know what is collection districtwise ?

Sri B. VITHALDAS SHETTY.—Please put a separate question and then I will be able to answer.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈಗತಾನೆ ಮಾನ್ಯಮಂತ್ರಿಗಳು ಮಾರ್ಕೆಟ್ ಧಾರಣೆಗೂ ಲೆವಿ ಧಾರಣೆಗೂ ಎರಡು ಮೂರು ರೂಪಾಯಿಗಳ ವ್ಯತ್ಯಾಸ ಇದೆ ಎಂದು ಹೇಳಿದರು. ಮತ್ತು ಶ್ರೀಮತಿ ಫರ್ನಾಂಡಿಸ್ ಅವರು ಅವರ ಕ್ಷೇತ್ರದಲ್ಲಿ ಕೆಲವು ಗೋಡೌನ್‌ಗಳಲ್ಲಿ ಸ್ಟಾಕ್ ಆಗಿರುವ ಮಾಲು ಕೆಡುತ್ತಿದೆ ಎಂದು ಹೇಳಿದಾಗ ಆ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದರು. ಹಳೆಯ ಬತ್ತದ ರೇಟಿಗೂ ಹೊಸ ಬತ್ತದ ರೇಟಿಗೂ 20-30 ರೂಪಾಯಿಗಳ ವ್ಯತ್ಯಾಸ ಇವತ್ತು ಇದೆ. ಇಂತಹ ಹಳೆಯ ಭತ್ತ ಕೆಡುತ್ತಿದೆ ಎಂದು ಹೇಳಿದರೂ ಕೂಡ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತಾರೆ. ಸರ್ಕಾರದ ಗಮನಕ್ಕೆ ಬರದಿರುವುದಕ್ಕೆ ಆಫೀಸರ್‌ಗಳ ಅಭಾವವೇ, ಆಫೀಸರ್‌ಗಳು ಹೋಗಿ ನೋಡುವುದಕ್ಕೆ ಕಾಲದ ಅಭಾವವಿದೆಯೋ, ಅಥವಾ ಶಕ್ತಿಯ ಅಭಾವವಿದೆಯೋ ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ವಿಠಲ್‌ದಾಸ್ ಶೆಟ್ಟಿ.—ಎಲ್ಲೋ ಏನೋ ನಡೆದಿದೆ ಎಂದು ಹೇಳಿದರೆ ಉತ್ತರ ಕೊಡುವುದಕ್ಕಾಗುವುದಿಲ್ಲ. ಇಂತಹ ಸ್ಥಳದಲ್ಲಿ ಇಂತಹ ಗೋಡೌನ್‌ನಲ್ಲಿರುವ ಸ್ಟಾಕ್ ಕೆಟ್ಟಿದೆ ಎಂದು ತಿಳಿಸಿದರೆ ನಾನು 24 ಗಂಟೆಯೊಳಗೆ ಉತ್ತರ ತರಿಸಿ ಕೊಡುತ್ತೇನೆ.

Repair of Kudlur Tank in Channapatna Taluk

191. **Sri T. V. KRISHNAPPA** (Channapatna).—

Will the Minister of State for Minor Irrigation be pleased to state:—

(*a*) whether Government have issued instructions to repair the Kudlur Tank, Channapatna Taluk which breached four years ago as per statement made on the floor of the House;

(*b*) if so, whether Government is aware that the repair work has not been attended to so far in spite of the instructions issued?

Smt. BASAVARAJESHWARI (Deputy Minister for Social Welfare) [On behalf of Sri A. J. DODDAMETI (Minister of State for Minor Irrigation)].—

(*a*) Yes.

(*b*) The repair work has been attended to and completed. Restoration work is under progress.

ಶ್ರೀ ಟಿ. ವಿ. ಕೃಷ್ಣಪ್ಪ.— (ಅ) ಪ್ರಶ್ನೆಗೆ ಉತ್ತರವಾಗಿ ದುರಸ್ತು ಕಾಮಗಾರಿಯನ್ನು ಕೈಕೊಂಡಿದ್ದು ಪೂರ್ತಿಗೊಳಿಸಲಾಗಿದೆ ಎಂದು ಹೇಳಲಾಗಿದೆ. ಆದರೆ ಆ ರೀತಿ ಕೆಲಸವಾಗಿಲ್ಲ. ಈ ಕೆಲಸ ಮುಗಿಯಬೇಕಾದರೆ ಇನ್ನು ಎಷ್ಟು ವರ್ಷ ಬೇಕಾಗುತ್ತದೆ ?

† ಶ್ರೀಮತಿ ಬಸವರಾಜೇಶ್ವರಿ.—ಕೆರೆಯನ್ನು ಜೀರ್ಣೋದ್ಧಾರ ಮಾಡುವ ಬಗ್ಗೆ 2.34 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಅಂದಾಜನ್ನು ತಯಾರಿಸಲಾಗಿದೆ. 1968–69ರಲ್ಲಿ ಸ್ಕೇರ್ಸಿಟಿ ಕಂಡೀಷನ್ ಬಂದಾಗ ಒಂದು ಲಕ್ಷ ಎರಡು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಪೀಸ್‌ಮೀಲ್ ಆಗಿ ಕೆಲಸವನ್ನು ಮಾಡಲಾಗಿದೆ. ಉಳಿದ ಕೆಲಸ ಮಾಡಲು ಟೆಂಡರ್ ಕರೆಯಲಾಗಿದೆ. ಟೆಂಡರ್ ಫಿಕ್ಸ್ ಆದಮೇಲೆ ಕೆಲಸ ಪ್ರಾರಂಭ ಮಾಡಲಾಗುತ್ತದೆ.

ಶ್ರೀ ಟಿ. ವಿ. ಕೃಷ್ಣಪ್ಪ.—ನಾಲ್ಕು ವರ್ಷವಾದರೂ ಕೂಡ ಈ ಕೆರೆಯ ಕೆಲಸ ಮುಗಿದಿಲ್ಲ. ಅಂದರೆ ಎಷ್ಟು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ ಅಲ್ಲವೇ ?

ಶ್ರೀಮತಿ ಬಸವರಾಜೇಶ್ವರಿ.—1968--69ರಲ್ಲಿ ಪೀಸ್ ಮೀಲ್‌ನಲ್ಲಿ ಸ್ವಲ್ಪ ಕೆಲಸ ಮಾಡಲಾಗಿದೆ. ಉಳಿದ ಕೆಲಸ ಮಾಡಲು ಟೆಂಡರ್ ಕರೆದಿದ್ದೇವೆ. ಟೆಂಡರ್ ಫಿಕ್ಸ್ ಆದಮೇಲೆ ಕೆಲಸ ಪ್ರಾರಂಭ ಮಾಡಲಾಗುತ್ತದೆ.

ಶ್ರೀ ವಿ. ಎಲ್. ಶಿವಪ್ಪ.—ಹಳೆಯ ಕೆರೆಗಳ ಜೀರ್ಣೋದ್ಧಾರ ಕಾಮಗಾರಿಯನ್ನು ಮುಗಿಸುವವರೆಗೆ ಹೊಸ ಕೆರೆಗಳನ್ನು ಮಾಡಿಸುವುದಿಲ್ಲವೆಂದು ಸರ್ಕಾರದವರು ಹೇಳಿದ್ದಾರೆ. ಇವತ್ತಿನದಿವಸ ಸಾವಿರಾರು ಕೆರೆಗಳ ಜೀರ್ಣೋದ್ಧಾರ ಕೆಲಸವಾಗದೆ, ಆ ಕೆರೆಗಳು ನಶಿಸಿಹೋಗುತ್ತಿವೆ. ಈಗಲಾದರೂ ಕೂಡ ಹಳೆಯ ಮೈಸೂರಿನಲ್ಲಿರುವ ಸಾವಿರಾರು ಕೆರೆಗಳ ಜೀರ್ಣೋದ್ಧಾರ ಕೆಲಸವನ್ನು ಮಾಡಿಸುತ್ತೀರಾ ?

ಶ್ರೀಮತಿ ಬಸವರಾಜೇಶ್ವರಿ.—ರೆಸ್ಟೋರೇಷನ್ ಕೆಲಸ ಮಾಡಬಾರದು ಎಂಬುದು ಸರ್ಕಾರದ ನೀತಿ ಅಲ್ಲ. ಅನೇಕ ಕೆರೆಗಳ ಜೀರ್ಣೋದ್ಧಾರ ಕಾಮಗಾರಿ ಕೆಲಸವನ್ನು ಮಾಡುತ್ತಿದ್ದೇವೆ. ಹಣ ಒದಗಿದಂತೆ ನೋಡಿಕೊಂಡು ಈ ಕೆಲಸ ಮಾಡಬೇಕಾಗಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಕೆಲವು ಕೆರೆಗಳನ್ನು ದುರಸ್ತು ಮಾಡಿದರೂ ಕೂಡ ಜಾಗ್ರತೆ ಒಡೆದುಹೋಗುತ್ತಿವೆ. ಇದು ಇಲಾಖೆಯ ತಪ್ಪೋ ಅಥವಾ ಕಂಟ್ರಾಕ್ಟರ್‌ಗಳ ತಪ್ಪೋ ಎಂಬುದನ್ನು ಕಂಡುಹಿಡಿದು ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀಮತಿ ಬಸವರಾಜೇಶ್ವರಿ.—ಫ್ಲಡ್ಸ್ ಬಂದಾಗ ಡ್ಯಾಮೇಜ್ ಆಗುತ್ತದೆ. ಆಗ ಡೀಟೈಲ್ಡ್ ಇನ್‌ವೆಸ್ಟಿಗೇಷನ್ ಮಾಡಿ ಸ್ಟ್ಯಾಂಡರ್ಡ್ ಫಿಕ್ಸ್ ಮಾಡಿ ಆ ಸ್ಟ್ಯಾಂಡರ್ಡ್ ಪ್ರಕಾರ ಕೆಲಸ ಮಾಡಿಸುತ್ತೇವೆ. ಮಾನ್ಯ ಸದಸ್ಯರು ಕಂಟ್ರ್ಯಾಕ್ಟರ್‌ಗಳು ಸರಿಯಾಗಿ ಕೆಲಸ ಮಾಡಿಲ್ಲವೆಂದು ಹೇಳುತ್ತಾರೆ. ಯಾವ ಕೆರೆಯ ಬಗ್ಗೆ ಆಗಿದೆ ಎಂದು ಮಾನ್ಯ ಸದಸ್ಯರು ಹೇಳಿದರೆ ವಿಚಾರ ಮಾಡಬಹುದು.

Plying of Private Buses on Nationalised Routes

203. **Sri SIDDAIAH KASHIMATH** (Shirhatti).—

Will the Minister for Transport be pleased to state:—

(*a*) whether it has come to the notice of Government that a good number of private buses are plying during night time regularly in the nationalised routes in the State ;

(*b*) if so, whether this would not adversely affect the earnings of the Mysore State Road Transport Corporation ;

(*c*) the steps taken to put an end to this system of competition ?

Sri MOHAMED ALI (Minister for Transport).—

(*a*) Yes.

(*b*) Yes.

(*c*) The Executive staff of the Motor Vehicles Department and the flying squads of the Mysore State Road Transport Corporation have carried out intensive checks resulting in over 1,000 check-reports and 24 permits have been suspended, 25 permits have been cancelled and Rs. 34,767 collected as penalty in respect of 314 check reports by the Regional Transport Authorities. Action in respect of the remaining reports is being expedited and checking continues unabated. The Mysore Motor Vehicles Rules have been amended to enable the permit issuing authority to refuse to grant or to renew the contract carriage permits whenever there are more than 3 entries in the History Sheet of the applicant relating to offences committed by him.

Further amendments to Rules and Acts are also under active consideration of Government.

Sri SIDDAIAH KASHIMATH.—How many private buses are plying now and what is the number of permits issued during 1969 ?

Sri MOHAMED ALI.—The total number of private buses to which contract carriage permits have been issued is 192. I do not have year-wise figures.

ಶ್ರೀ ಸಿದ್ದಯ್ಯಕಾಶಿಮಠ.—ಖಾಸಗೀ ಬಸ್‌ನವರು ಕಡಿಮೆ ದರದಲ್ಲಿ ಪ್ರಯಾಣಿಕರನ್ನು ಕಡಿಮೆ ವೇಳೆಯಲ್ಲಿ ಕರೆದುಕೊಂಡು ಹೋಗುತ್ತಿರುವುದರಿಂದ ಈಗಿರುವ ರಾಷ್ಟ್ರೀಕರಣವನ್ನು ರದ್ದು ಮಾಡುತ್ತೀರಾ ?

Sri MOHAMED ALI.—There is no question of denationalisation. Here the point is that the conditions of contract carriage permits are being misused and Government feel that the legal provisions are not sufficient to deal with them and legislative measures for the same are being contemplated.

Sri B. P. GANGADHAR.—This mater is coming before the Assembly often. In the last budget Session you promised to bring legislative measures to amend the Act and the Rules so as to enable you to take stern action. Hundreds of buses are plying without permits and lakhs of rupees are lost to the State Exchequer. What action do you propose to take ?

Sri MOHAMED ALI.—On account of certain legal complications the proposed amendments are being re-considered by the Law Department. Out of 192 contract carriage permits, 24 have been suspended, 25 have been cancelled. 314 cases have been compounded and there are hundreds pending disciplinary action before the concerned RTAs. I think I will be able to bring legislative measure possibly in the next Assembly Session.

ಶ್ರೀ ಎಚ್. ಬಿ. ಜ್ವಾಲನಯ್ಯ.—ಸರ್ಕಾರದವರು ಯಾವ ಯಾವ ಲೈನ್‌ನ್ನು ರಾಷ್ಟ್ರೀಕರಣ ಮಾಡಿದ್ದಾರೋ ಆ ಸ್ಥಳದಲ್ಲಿ ಪ್ರೈವೇಟ್ ಬಸ್ಸುಗಳನ್ನು ಓಡಿಸುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ರೋಡ್‌ಟ್ರಾನ್ಸ್‌ಪೋರ್ಟ್ ಅಥಾರಿಟಿಯವರು ತೀರ್ಮಾನವನ್ನು ಕೊಟ್ಟಿದ್ದರೂ ಕೂಡ, ಅಲ್ಲಿ 100 ಕ್ಕಿಂತ ಹೆಚ್ಚು ಪ್ರೈವೇಟ್ ಬಸ್‌ಗಳು ಓಡುತ್ತಿವೆ. ಅವಕ್ಕೆ ಸರ್ಕಾರದವರು ನೇಮಿಸಿರತಕ್ಕ ಕಮಿಟಿಗಳವರು ತಮ್ಮ ಅನುಮತಿಯನ್ನು ಕೊಟ್ಟಿಲ್ಲವೇ ?

Sri MOHAMED ALI.—All the contract carriage permit holders are not misusing. The difficulty is about the lack of precise defintion of contrat carriage. Now the question of defining the contract carriage and tourist carriage is being considered by the Government of India and by the State Government also. The difficulty is how we have to protect the genuine tourist operators and we have to get rid off the menace of contract carriages which are violating the conditions of the permit. So far as the Motor Vehicles Department and the Road Transport Corporation are concerned, they are having intensive checks and in 314 cases, decisions have been taken and in other cases the decision is yet to be taken and it will be taken shortly. The Government is modifying the rules. If these contract carriage holders defy the conditions for three times, permits will not be renewed.

Sri G. CHANDRAKANTH.—Is it not a fact that these carriage permits have been issued by the competent authority and is it not necessary to bring about a necessary legislation about which you are promising for the last two or three sessions, so that we can avoid loss to the exchequer ?

Sri MOHAMED ALI.—I have already answered.

ಶ್ರೀ ಬಿ. ಎಂ. ಇದಿನಬ್ಬ.—ಸ್ವಾಮಿ ಸರ್ಕಾರದವರು ರಾಷ್ಟ್ರೀಕರಣ ಮಾಡಿರುವ ಪ್ರತಿಯೊಂದು ಬಸ್ ಲೈನಿನಲ್ಲೂ ಸರ್ಕಾರಿ ಬಸ್ಸು ಒಂದೊಂದು ಓಡಾಡಿದರೆ 4-5 ಖಾಸಗೀ ಬಸ್ಸುಗಳು ಓಡಾಡುತ್ತಿವೆ. ಸರ್ಕಾರಿ ಬಸ್ಸುಗಳಲ್ಲಿ 14-15 ಸೀಟುಗಳು ಖಾಲಿ ಇರುತ್ತವೆ. ಇದರಿಂದ ಸರ್ಕಾರಕ್ಕೆ ನಷ್ಟವಾಗುವುದು ಒಂದುಕಡೆ, ಮತ್ತೊಂದು ಕಡೆ ರಾಷ್ಟ್ರೀಕರಣ ಅಪಹಾಸ್ಯಕ್ಕೆ ಒಳಗಾಗುವುದಿಲ್ಲವೇ ?

Sri MOHAMED ALI.—One of the measures that has been suggested is to introduce alternative arrangement, that is to say night services of the Road Transport Corporation, to get rid of these private services. It is not enough if we introduce the legislative measure to get rid of this menace, but it is also necessary to make alternative arrangements for transport of the people.

Sri H. SIDDAVEERAPPA.—Is it not advisable to consult the Road Transport Department before giving permit to the Private operators, so that the number of permits issued could be minimised and the loss to the Department could be checked ? Is it not necessary to take some effective measures ?

Sri MOHAMED ALI.—Unfortunately the position of the Road Transport Corporation is like any other ordinary operators and they will have no voice against the grant of such permits to private carriage owners. The Road Transport Corporation has filed appeals in a number of such cases. The Road Transport Corporation has also challenged the R.T.A.S. authority to issue statewise permits as thair jurisdiction is limited. This matter may take a long time to be decided. Since the R.T.A. is quasi-judicial authority, the Government will have no say in the matter. Only legislative measures will have to be taken in the matter. As suggested by Sri Siddaveerappa, some effective changes are necessary so that there should not be any scope for misuse.

ಶ್ರೀ ಕೆ. ಸಂಗನಗೌಡ.—ಈಗ ತಾವು ಮಂಜೂರು ಮಾಡಿರತಕ್ಕ 192 ಪರ್ಮಿಟ್‌ಗಳಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಪರ್ಮಿಟ್‌ಗಳನ್ನು ಕೊಟ್ಟಿದ್ದೀರಿ, ರಾಯಚೂರ್ ಜಿಲ್ಲೆಯಿಂದ ಎಷ್ಟು ಅಪ್ಲಿಕೇಷನ್ ಬಂದಿದ್ದವು. ಆ ಪೈಕಿ ಎಷ್ಟು ಸ್ಯಾಂಕ್ಷನ್ ಮಾಡಿದ್ದೀರಿ, ಉಳಿವವುಗಳನ್ನು ಸ್ಯಾಂಕ್ಷನ್ ಮಾಡದೇ ಇರುವುದಕ್ಕೆ ಕಾರಣವೇನು ?

Sri MOHAMED ALI.—We have not sanctioned or issued any such permits. Quasi-judicial authorities sanction them and therefore, it is difficult for Government to say why these permits have been granted.

ಶ್ರೀ ಎಸ್. ಗೋಪಾಲಗೌಡ.—ರಾಜ್ಯ ಸರ್ಕಾರದವರು ರಸ್ತೆ ಸಾರಿಗೆ ವ್ಯವಸ್ಥೆಯನ್ನು ಪೂರ್ತಿಯಾಗಿ ರಾಜ್ಯದಲ್ಲಿ ರಾಷ್ಟ್ರೀಕರಣ ಮಾಡುವುದಕ್ಕೆ ಏನಾದರೂ ಸಮಯಬದ್ಧವಾದ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆಯೇ ? ಮತ್ತು ಈಗ ತಾವು ಕೆಲವು ಲೈಸೆನ್ಸ್‌ಗಳನ್ನು ಕೊಟ್ಟಿದ್ದೀರಿ, ಕಾನೂನು ಪ್ರಕಾರ ಕೆಲವು ಲೈಸೆನ್ಸ್‌ಗಳನ್ನು ರದ್ದುಪಡಿಸಿದ್ದೀರಿ, ಇಂಥಾ ಕಾನೂನನ್ನು ತಿದ್ದುಪಡಿ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

Sri MOHAMED ALI.—The policy of the Road Transport Corporation regarding nationalisation of the roads has been announced long back. The policy is to nationalise all the remaining roads in a phased manner. It depends upon the availability of funds. Funds have not been allotted to the Corporation for some time and therefore there is no scope to nationalise any roads. Regarding the misuse of these Stage carriage permits, some legislative measures are necessary and it is being examined by Law Department of the State Government. Even the Central Government is also considering the question of defining the terms "Stage Carriage and tourists carriage." in precise terms. If they do it, there will not be much difficulty. The point here is that there are certain genuine tourist operators and we have to see that these genuine tourist operators are protected and those who misuse are put out of the roads by suitable legislation.

Sri C. K. RAJAIAH SHETTY.—Is it not a fact that the Government is tolerating these private buses which are running just because the M.S.R.T.C. is not having enough buses ?

Sri MOHAMED ALI.—No Sir, The M.S.R.T.C. has got a big programme of augmenting the services.

ಶ್ರೀ ಬಿ. ದೊಡ್ಡಬೋರೇಗೌಡ.—ರಾಜ್ಯದಲ್ಲಿ ಖಾಸಗೀ ಬಸ್ಸುಗಳು ಸರ್ಕಾರೀ ಬಸ್ಸಿಗಿಂತ ಬಹಳ ಕಡಿಮೆ ದರದಲ್ಲಿಯೂ ಮತ್ತು ವೇಳೆಗೆ ಸರಿಯಾಗಿಯೂ ಪ್ರಯಾಣಿಕರನ್ನು ಒಯ್ಯುವುದರಿಂದ, ನಿಮ್ಮ ಬಸ್ಸುಗಳಿಗೆ ನಷ್ಟವಾಗುವುದಿಲ್ಲವೇ ? ಮತ್ತು ಈ ಕಂಟ್ರಾಕ್ಟ್ ಕೇರೇಜಿನಿಂದಲೂ ನಿಮ್ಮ ಸರ್ಕಾರೀ ಬಸ್ಸುಗಳಿಗೆ ನಷ್ಟವಾಗುವುದಿಲ್ಲವೇ ? ಮತ್ತು ಎಷ್ಟು ಕೇಸುಗಳನ್ನು ಹಿಡಿಯಲಾಗಿದೆ ?

Sri MOHAMED ALI.—Sir, the total number of fleet of the Road Transport Corporation is more than 2,800 whereas the contract carriages granted is only 192. It is not correct to say that more people are travelling by contract carriages. It is true that some of them are good. I do not know what fare they are charging. Certainly it is a good suggestion made by the hon. member that Road Transport Corporation should also provide better buses and better travelling facilities.

Sri V. N. PATIL.—How is it that the private buses are running full always and the Government buses are running empty ? Is it not a fact that the private operators start early and the Government buses late so that the private operators are given an upper hand to make better profit ?

Sri MOHAMED ALI.—Sir, I do not propose to say that our buses are running empty and I do not have that information. So far as Road Transport Corporation is concerned, it is making profit and the income is increasing. Last year also, it has made a profit of 8 per cent after payment of income tax, etc.

Mining Lease for Moulding sand in Ghataprabha River

251. **Sri A. R. PANCHAGAVI** (Arabhavi).—

Will the Minister for Industries, Information and Publicity be pleased to state:—

(*a*) whether there was any advertisement or publicity before granting the mining lease of sand in the river near Ghataprabha and Markandeya Villages in Gokak taluka ;

(*b*) whether the Government had offered this lease to the Panchayats or Municipality or other local bodies before granting it to private persons ;

(SRI A. R. PANCHAGAVI)

(*c*) whether it has come to the notice of the Government that this sand is being used for constructing houses and the lessee has been charging exhorbitant rates for private as well as Government buildings for their requirements of sand ;

(*d*) the special qualifications or reasons for giving this lease to this person and his experience in mining ;

(*e*) whether it has also come to the notice of Government that receipts are not passed in majority of sales ;

(*f*) the amount of taxes and royalty recovered and steps Government has taken to see that there was no evasion of taxes in this transactions ;

(*g*) the steps Government has taken to supply sand free of cost or at minimum cost for house building and industrial purposes ?

Sri A. P. APPANNA (Deputy Minister for Industries).—

(*a*) No.

(*b*) No.

(*c*) Yes.

(*d*) The lease has been granted in accordance with the provisions of Mines and Minerals (Regulation and Development) Act, 1957 and Mineral Concessions Rules, 1960 as the lessee was the first applicant.

(*e*) No.

(*f*) The lessee has paid a sum of Rs. 2,816 for the year 1968. The accounts which are required to be maintained by the lessee are audited by the Department and amount due will be collected.

(g) Government cannot supply sand free of cost either for house building or industrial purposes.

Sri A. R PANCHAGAVI.—Sir, without advertising, without giving any publicity to others to apply and without offering it to public instructions like Panchayats and Municipalities, why is it that a particular person was given such a long lease ?

† **Sri A. P. APPANNA.**—The Mineral Regulation Act has come into being in 1957, and it is open for anybody to apply for the same ; and the Village Panchayat or any other institution could have applied from 1957 onwards. But this gentleman has come in 1968 to apply for a lease, and the Government has to grant the lease to any person who applies earlier.

ಶ್ರೀ ಬಿ, ಎಂ. ಸಾಣಿಕೊಪ್ಪ.—ನೂರಾರು ಟ್ರಕ್‌ಗಳಲ್ಲಿ ಪರವಾನಿಗೆ ಇಲ್ಲದೆ ತೆಗೆದುಕೊಂಡು ಹೋಗುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಬಹಳ ಲುಕ್ಸಾನು ಆಗುತ್ತದೆ. ಆದ್ದರಿಂದ ಇದರ ಬಗ್ಗೆ ಏನಾದರೂ ರೂಲ್ಸ್ ಮಾಡಿದ್ದೀರಾ ? ಮತ್ತು ಸರ್ಕಾರದ ಗಮನಕ್ಕೆ ಈ ವಿಚಾರ ಬಂದಿದೆಯೇ?

Sri A. P. APPANNA.—This lease has been given under the Mineral Concession Rules of 1960. It is obligatory on the part of the Government to grant the lease for the first applicant. We are not getting any revenue from persons of other areas who have not applied.

Sri A. R. PANCHAGAVI.—Is the lessee allowed to charge any rate as he likes ?

Sri A. P. APPANNA.—Under the lease agreement he is authorised to sell all the consignment that is available under the mining lease to whomsoever he wishes. But, he must charge the fair market rate. If exhorbitant rates are charged, we will issue a notice not to charge exhorbitant rates, but we cannot control.

Sri A. R. PANCHAGAVI.—What precautions are taken by the Government to see that he is not charging exhorbitant rates or that he charges proper rates ?

Sri A. P. APPANNA.—He is supposed to maintain an account, which is audited by the Department for the purposes of royalty. So far as the price of the material is concerned, we have no exact control under law. He may charge a particular rate and say that it is a fair market rate.

Undergound Drainage in Hubli-Dharwar Corporation Area

255. **Sri R. G. WALI** (Hubli).—

Will the Minister of State for Municipal Administration be pleased to state :—

(*a*) the progress made in respect of underground drainage construction in Hubli-Dharwar Corporation area;

(*b*) whether Government is aware that the progress is very slow ;

(*c*) whether there are any difficulties coming in the way of immediate completion of the work of underground drainage ?

Sri B. M. PATIL (Minister of State for Municipal Administration).—

(*a*)—

Hubli Unit .

(i) Laying of street sewer lines completed.

(ii) Laying of collective sewer lines completed.

(iii) Sewerage treatment works not taken.

Dharwar Unit

(i) Laying of underground drianage main lines and sewer lines completed.

(SRI B. M. PATIL)

(*b*) Yes.

(*c*) Yes. The Corporation has to find funds for the completion of the balance work.

Sri R. G. WALI.—In answer to (*a*), it is stated that so many works are carried on. When they will be taken up. Is there any possibility of compeleting those works ? In answer to (c), it is stated that the Corporation has to find funds for the completion of the balance work. Is there any difficulty in providing funds ? I think loans are easily available. May I know what are the difficulties?

† **Sri B. M. PATIL.**—About the completion of the scheme, it is not the responsibility of the State Government; it is the responsibility of the Local Body to complete the scheme. Loan and assistance admissible under the rules, have already been extended. It is for the Local Body to furnish all the details and transmit them to Government.

Sri SIDDAIAH KASIMATH.—May I know the time required to complete the scheme ?

Sri B. M. PATIL.—As soon as the details are made available to the Government it will be examined.

Sri S. R. BOMMAI.—May I know when the scheme was started, what is the amount already spent and what is the amount required to complete the scheme ?

Sri B. M. PATIL.—Initially it was sanctioned in 1958-59 and 1960-61.

Sri R. G. WALI.—Sir, it is already 12 years. If things move like this, is it ever possible to complete it ?

Sri B. M. PATIL.—It is for the Local Body to complete it.

Construction of Police Quarters at Aland

270. **Sri D. B. KALMANKAR** (Aland).—

Will the Chief Minister be pleased to state :—

(*a*) whether there is any proposal before Government to construct Police Quarters and a Police Station at Aland ;

(*b*) if so, the stage at which the matter stands ?

Sri MANIKRAO PATIL (Deputy Minister for Home)

(*a*) No.

(*b*) Does not aries.

Sri D. B. KALMANKAR.—Is it not a fact that a proposal was sent by the Police Station, Aland, for construction of the Police Quarters and Police Station?

†**Sri MANIKRAO PATIL.**—The strength of the Police Station at Aland, Gulbarga District: is one Circle Inspector, one Sub-Inspector, one Assistant Sub-Inspector, five Head Constables and 44 Constables, and quarters have to be provided to them. A plot had been selected earlier. But, subsequently it was found to be insufficient and also unsuitable. Later on, another plot has been selected. Now, we have directed the District Superintendent of Police, Gulbarga, to obtain a certificate of avilability of the land on engineering and hygienic points of view. After obtaining the certificate. We will take further steps in the matter.

Land for Location of Industrial Estate in Chitradurga Town

277. **Sri H. SIDDAVEERAPPA** (Harihar).—

Will the Minister for Industries, Information and Publicity be pleased to state :—

(*a*) whether any land is reserved for locating an Industrial Estate in Chitradurga Town and if so, its acreage ;

(*b*) whether there is any proposal before Government to construct any building for locating an Industrial Estate in that land ;

(*c*) whether any privately owned Educational Institution in Chitradurga Town has asked for transfer of this land in its favour for locating a College building ;

(*d*) if so, whether Government has taken any decision in that behalf ?

Sri A. P. APPANNA (Deputy Minister for Industries),—

(*a*) Yes, 10 acres in Medehally.

(*b*) No.

(*c*) Yes.

(*d*) No.

2-00 P. M.

Sri H. SIDDAVEERAPPA.—May I know, when this land is taken up for locating an Industrial Estate? Why no action has been taken so far in furtherance of it ?

Sri A. P. APPANNA.—If the hon. Member remember we had taken a decision in 1968 that in certain areas where we thought of constructing Industrial Estates not to go ahead with the same because of the fact that we found that the response for this Industrial Estate was not good. But now it has been written by the Assistant Director of Industries, Chitradurga that there is a demand and we are calling the names of entrepreneurs and after a list is received, the State Government will take a decision to provide Industrial development area to the entrepreneurs.

Sri H. V. KOUJALGI.—Sir, as regads held over question No. 77 I want a little more time to reply to the question. From Tumkur certain information was not made available and this was brought to my notice by the hon. Member and I have called for the information and it might be received to-day evening. In any case, I will answer it tomorrow.

Mr. SPEAKER.—Alright. The question is held-over.

Now short notice question No. 13.

SHORT NOTICE QUESTION AND ANSWER

Fine levied by the Irrigation Officer on Turkandoni and Purthipli villagers under Irrigation Act

13. **Sri M. NAGAPPA** (Raichur).—

Will the Minister for Revenue be pleased to state:—

(*a*) whether the raiyats of village Turkandoni and Purthipli, who have raised their crop under the minor irrigation projects (Private and public) *i.e.*, irrigation wells (Private) and tanks, have been levied maximum fine by the irrigation officer under Section 28 (5) of the Irrigation Act ;

(*b*) whether it is a fact that the Deputy Commisssioner, Raichur as per the request of the Irrigation Officer, ordered the Tahsildar, Raichur to recover the fine by coercive methods very recently, and even attached the produce and standing crop of the land ;

(*c*) whether the Government would issue immediate orders to stay the recovery of fines and appoint an officer to enquire into the matter ?

Sri H. V. KOUJALGI (Minister for Revenue).—

(*a*) No penalty has been levied under section 28 (5) of the Irrigation Act.

(*b*) and (*c*) Do not arise in view of reply to (*a*).

ಶ್ರೀ ಎಂ. ನಾಗಪ್ಪ.—ತಾವು (ಅ) ಕ್ಕೆ ಉತ್ತರವಾಗಿ ಯಾವ ದಂಡವನ್ನು ವಿಧಿಸಿರುವುದಿಲ್ಲವೆಂದು ಹೇಳಿದ್ದೀರಿ. ಆದು ಇರ್ರಿಗೇಷನ್ ಆಕ್‌ನಲ್ಲಿ ಬರಲಾರದು. ಬಾವಿಗಳನ್ನು ಇಟ್ಟುಕೊಂಡಿರುವವರು ಬಾವಿಗಳ ನೀರಿನಿಂದ ತೆಗೆಯುವ ಬೆಳೆಗಳಿಗೆ ವಾಟರ್ ರೇಟ್ ಕೊಡಲಿಲ್ಲ ಎಂದು ತುರ್ಕಂದೋಣಿ ಮತ್ತು ಪುತ್ತಿಪ್ಲಿ ಗ್ರಾಮಸ್ಥರಿಗೆ ಅನ್ಯಾಯವಾಗಿ ದಂಡ ವಿಧಿಸಿ ತೊಂದರೆಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† **Sri H. V. KOUJALGI.**—No such penalty has been levied. The position is like this. In these two villages some of the lands have been localised for light irrigation under T. V. P. even though they have been classified as wet and garden lands. Since the ryots utilised the Tungabhadra canal water and instead of growing light crops they have grown wet crops, the Irrigation officer has taken action under rule 23 (a) of the Mysore Irrigation Rules read with section 64 of the Mysore Irrigation Act.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಹೇಳಿದಂತೆ ಸರ್ಕಾರದ ಉದ್ದೇಶವಲ್ಲ. ಅದು ಕಾಂಗ್ರೆಸ್ ಅಥವಾ ಬೇರೆಯವರು ಎಂದು ಸರ್ಕಾರ ಆ ದೃಷ್ಟಿಯಿಂದ ನೋಡುವುದಿಲ್ಲ. ಅಕೌಂಟ್ಸ್ ಸಬ್ಮಿಟ್ ಮಾಡುವಾಗ ಲಿಸ್ಟ್ ಅಫ್ ಮೆಂಬರ್ಸ್ ಕೊಡಬೇಕಾಗಿತ್ತು, ಕೊಟ್ಟಿಲ್ಲ. ರಿಜಿಸ್ಟ್ರಾರ್ ಫುಲ್ ಪರ್ಟಿಕ್ಯುಲರ್ಸ್ ಕೇಳಿದ್ದಾರೆ, ಮತ್ತು ಅದನ್ನು ಒದಗಿಸುವುದಕ್ಕೆ ಸಮಯ ತೆಗೆದುಕೊಂಡಿದ್ದಾರೆ.

3–30 P.M.

ಶ್ರೀ ವಿ. ಎನ್. ಪಾಟೀಲ್.—ಅವರು 1968 69ನೇ ಸಾಲಿನ ಅಕೌಂಟ್ಸ್ ಬಗ್ಗೆ ಒಂದು ಲಿಸ್ಟ್ ಕೊಟ್ಟಿದ್ದಾರೆಯೇ ಹೊರತು, ಎಷ್ಟು ವರ್ಷಗಳಿಂದ ಆ ಸಂಸ್ಥೆಗಳು ಹಾಗೆಯೇ ಇವೆಯೆಂದು ಹೇಳಲಿಲ್ಲ. 11 ವರ್ಷಗಳ ಲೆಕ್ಕಪತ್ರ ಕೊಟ್ಟಿಲ್ಲವೆಂಬುದಕ್ಕೆ ನಮ್ಮ ಹತ್ತಿರ ಟೆಲಿಗ್ರಾಂಸ್ ಬಂದಿವೆ. ಇಷ್ಟಾದರೂ 11 ವರ್ಷಗಳಿಂದ ಲೆಕ್ಕ ಪತ್ರ ಅವು ಕೊಟ್ಟಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿಲ್ಲ. ಅಂದಮೇಲೆ ಅಲ್ಲಿ 11 ವರ್ಷಗಳಿಂದ ಅಲ್ಲಿ ಒನ್‌ಮ್ಯಾನ್ ರೂಲ್ ಇತ್ತೇ? ಅಂತಹ ಸ್ಟೇಟ್ ಆಫ್ ಅಫೇರ್ಸನ್ನು ಮುಚ್ಚಿಬಿಡುವುದಕ್ಕೆ ಇಂತಹ ಸೊಸೈಟಿಗಳನ್ನು ಮುಂದುವರಿಸಿಕೊಂಡು ಹೋಗಿದ್ದೀರಿ. ಹೀಗೆ ಮಾಡಿ ತಮ್ಮ ರಿಜಿಸ್ಟ್ರಾರ್ ಅವರಿಗೆ ಅನುಕೂಲ ಮಾಡುತ್ತಿದ್ದೀರಲ್ಲವೇ? ಇಷ್ಟು ಟೆಲಿಗ್ರಾಮ್ಸ್ ಬಂದರೂ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ರಿಜಿಸ್ಟ್ರಾರ್ ಅವರು ಕಳುಹಿಸಿದಂಥ ಬೇರೆ ಸ್ಟೇಟ್‌ಮೆಂಟನ್ನು ಇಲ್ಲಿ ಮಂತ್ರಿಗಳು ಓದುತ್ತಿದ್ದಾರೆ. ಇಂತಹ ದುರಾಡಳಿತವನ್ನು ತೊಡೆದುಹಾಕಲು ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಅವರಿಗೆ ಟೆಲಿಗ್ರಾಮ್ಸ್ ಬಂದಿವೆಯೆಂದು ಹೇಳಿದರು. ಅದು ನನಗೆ ಗೊತ್ತಿಲ್ಲ. ಸರ್ಕಾರಕ್ಕೆ ಆ ತರಹ ಯಾವ ಒಂದ್ ವರದಿಯೂ ಬಂದಿಲ್ಲ. ಮಾನ್ಯ ಸದಸ್ಯರು ಏನಾದರೂ ಇನ್‌ಫರ್‌ಮೇಷನ್ ಬೇಕೆಂದು ಕೇಳಿದರೆ, ಅವರು ಕೇಳಿದ ಪ್ರಶ್ನೆಗೆ ಎಲ್ಲಾ ವಿವರಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಮಿಸ್ ಅಪ್ರೋಪ್ರಿಯೇಷನ್ ಬಗ್ಗೆ ನನ್ನ ಸ್ಟೇಟ್‌ಮೆಂಟ್ ಓದಿದಮೇಲೆ ಯಾವ ತರಹ ಆರೋಪಣೆಗಳು ಇದ್ದರೆ, ಅವನ್ನು ಹೇಳಬಹುದು. ಅವರು ಕಾಲ್ ಅಟೆನ್ಷನ್ ನೋಟೀಸ್ ಕಳುಹಿಸಿದ್ದಕ್ಕೆ ನಾನು ಒಂದು ಸ್ಟೇಟ್‌ಮೆಂಟ್ ಮಾಡಿದ್ದೇನೆ. ವಿವರವಾಗಿ ಆರೋಪಣೆಗಳನ್ನು ತಿಳಿಸಿದರೆ ಆ ಬಗ್ಗೆ ವಿವರವಾಗಿ ವಿಚಾರಣೆ ಮಾಡುತ್ತೇನೆಂದು ನಾನು ಹೇಳಿದ್ದೇನೆ.

Sri V. N. PATIL.—I want to know whether there was under submission 11 years account or only 2 years account.

Sri N. M. KOTRABASAIAH SOGI.—If you want to know more particulars, please give it in writing.

ಶ್ರೀ ಬಾಪೂಗೌಡ.—ಮಾನ್ಯ ಮಂತ್ರಿಗಳು ಸುಮಾರು 11 ವರ್ಷಗಳವರೆಗೂ ಗ್ರಾಂಟ್ ಇನ ಏಡ್ ಕೊಡಬೇಕಾದರೆ, ಆ ಸಂಸ್ಥೆಗಳ 11 ವರ್ಷಗಳವರೆಗೂ ಅಕೌಂಟ್ಸನ್ನು ಸಬ್‌ಮಿಟ್ ಮಾಡದೆಯೇ ಅವಕ್ಕೆ ಗ್ರಾಂಟ್ ಇನ್ ಏಡ್ ಸಿಗುತ್ತದೆಯೇ? ಆ ರೀತಿ ಇದ್ದರೆ ಮಾನ್ಯ ಸದಸ್ಯರು ಹೇಳುವ ಹಾಗೆ ಗ್ರಾಂಟ್ ಇನ್ ಏಡ್ ಆ ಸಂಸ್ಥೆಗಳಿಗೆ ಕೊಡುವ ಕಾಲದಲ್ಲಿ ಮಿಸ್‌ಅಪ್ರೋಪ್ರಿಯೇಷನ್ ಆಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎನ್ ಎಂ. ಕೊಟ್ರಬಸಯ್ಯ ಸೋಗಿ.—ಅದರ ಬಗ್ಗೆ ವಿವರವಾಗಿ ವಿಚಾರಮಾಡಿ ನಂತರ ಮಾನ್ಯ ಸದಸ್ಯರಿಗೆ ಬೇಕಾದ ಮಾಹಿತಿಯನ್ನು ಒದಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್.—ಈ ಇನ್‌ಸ್ಟಿಟ್ಯೂಷನ್ 11 ವರ್ಷಗಳಿಂದ ನಡೆಯುತ್ತಾ ಇರತಕ್ಕಂಥಾದ್ದು ಎಂಬುದು ಗೊತ್ತಾಗುತ್ತದೆ. ಈ ಸಂಸ್ಥೆಗಳಿಗೆ 11 ವರ್ಷಗಳಿಂದಲೂ ಸರ್ಕಾರದಿಂದ ಹಾಗೂ ಯೂನಿವರ್ಸಿಟಿಯಿಂದ ಗ್ರಾಂಟು ಮತ್ತು ಇತರ ಸಹಾಯ ವರ್ಷೇ ವರ್ಷೇ ದೊರಕಿದ್ದರೆ, ಆ ವಿವರಗಳನ್ನು ಕೊಡಬೇಕು.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಕಾಲ್ ಅಟೆನ್ಷನ್ ನೋಟೀಸ್ ಇರತಕ್ಕದ್ದು ಯಾರೋ ಉಪವಾಸ ಸತ್ಯಾಗ್ರಹ ಮಾಡಿದ್ದಕ್ಕೆ ಸಂಬಂಧಪಟ್ಟದ್ದು. ಅದರ ಬಗ್ಗೆ ಎಲ್ಲಾ ಮಾಹಿತಿಯನ್ನು ಒದಗಿಸಿದ್ದೇನೆ. ಈ ಸಂಸ್ಥೆಯಲ್ಲಿ 11 ವರ್ಷಗಳಿಂದ ಅಕೌಂಟ್ಸನಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿದೆಯೋ ಇಲ್ಲವೇ ಎಂಬುದರ ಬಗ್ಗೆ ವಿವರವಾಗಿ ವಿಚಾರಣೆ ಮಾಡ

(ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ)

ಬೇಕಾಗುತ್ತದೆ. ಮಾನ್ಯ ಸದಸ್ಯರು ನಿರ್ದಿಷ್ಟವಾದ ಆರೋಪಣೆಯನ್ನು ಮಾಡಿ ಅರ್ಜಿ ಕೊಟ್ಟರೆ ಅದನ್ನು ವಿಚಾರ ಮಾಡಿ ಎಲ್ಲಾ ವಿವರಗಳನ್ನು ಒದಗಿಸುತ್ತೇನೆ. The notice is about Satyagraha and hunger strike.

ಶ್ರೀ ಎಚ್. ಸಿದ್ಧವೀರಪ್ಪ.—ಅನ್ನ ಸತ್ಯಾಗ್ರಹ ಕೆಲವು ಸದಸ್ಯರು ಮಾಡುತ್ತಿದ್ದಾರೆಂದು ಇದರಲ್ಲಿ ಮಾನ್ಯ ಮಂತ್ರಿಗಳು ಒದಗಿಸಿರುವ ಇನ್‌ಫರ್‌ಮೇಷನ್.

Mr. DEPUTY SPEAKER.—The Hon'ble Minister is saying that he will hold detailed enquiry and furnish the report. That is with regard to the strike only.

ಶ್ರೀ ಕೆ. ಎಚ್. ಪಾಟೀಲ್.—ನಿಮ್ಮ ಸರ್ಕಾರ ಆ ಸಂಸ್ಥೆ ಮಿಸ್‌ಅಪ್ರೋಪ್ರಿಯೇಷನ್ ಮಾಡಿದ್ದನ್ನು ಮುಚ್ಚಲಿಕ್ಕೆ ಪ್ರಯತ್ನ ಮಾಡುತ್ತಿದೆ. ಅದರ ಬಗ್ಗೆ ಏನಾದರೂ ವಿಚಾರಣೆ ಮಾಡಿದ್ದೀರಾ ?

Mr. DEPUTY SPEAKER.—No debate is permitted on this.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರಿಂದ ಸರ್ಕಾರಕ್ಕೆ ಅನ್ನ ಸತ್ಯಾಗ್ರಹದ ಬಗ್ಗೆ ಒಂದು ಸೂಚನೆ ಬಂದಿದೆ. ಅದರ ಬಗ್ಗೆ ಸ್ಟೇಟ್‌ಮೆಂಟ್ ತಯಾರಾಗಿದೆ. ಈ ಸ್ಟೇಟ್‌ಮೆಂಟನ್ನು ಯಾವತ್ತು ತಯಾರು ಮಾಡಿದ್ದಾರೆ ? 10-11 ವರ್ಷಗಳಿಂದಲೂ ಚುನಾವಣೆ ಹೇಗೆ ನಡೆಯಿತು ? ಅದರ ಆಡಳಿತ ಹೇಗೋ ನಡೆದುಕೊಂಡು ಹೋಗುತ್ತಿದೆಂದು ಹೇಳತಕ್ಕದ್ದು ನಿಜವೇ, ಸುಳ್ಳೇ ? ಒಂದು ವೇಳೆ ಆ ರೀತಿ ಚುನಾವಣೆ ನಡೆಯದೇ ಹೋದರೆ, ಶಾಸನದ ಪ್ರಕಾರ ಸರ್ಕಾರ ಇವತ್ತಿನವರೆಗೆ ಏನು ಕೆಲಸ ಮಾಡಿತು ? ನಿದ್ರೆ ಹೋಗುತ್ತಿತ್ತೇ ? ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ? ಆಕ್ಟಿನ ಪ್ರಕಾರ ನೀವು ಅದನ್ನು ಸೂಪರ್‌ಸೀಡ್ ಮಾಡಬೇಕಾಗಿತ್ತು. ಕಾನೂನು ಪ್ರಕಾರ ಅದರ ಮೇಲೆ ಯಾವುದಾದರೂ ಒಂದು ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ಇಲ್ಲಿ ಬೇಕಾದಷ್ಟು ಇರ್ರೆಗ್ಯುಲಾರಿಟೀಸ್ ನಡೆದಿವೆ. ಈಚೆಗೆ ಬೋಗಸ್ ಮೆಂಬರ್‌ಷಿಪ್‌ಗಳು ಆಗಿವೆಯೆಂದು ಹೇಳುತ್ತಾರೆ. ಆ ಸಂಸ್ಥೆಗೆ ಒಬ್ಬ ಕಂಟ್ರಾಕ್ಟರ್ 5 ಸಾವಿರ ರೂಪಾಯಿಗಳಿಗೆ ಸುಮ್ಮನೆ ಒಂದು ಕ್ರಾಸ್ ಚೆಕ್ ಕೊಟ್ಟು ಚುನಾವಣೆಗೆ ಅರ್ಜಿ ಹಾಕುತ್ತೇನೆಂದು ಹೇಳಿದ್ದು ತಮ್ಮ ಗಮನಕ್ಕೆ ಬಂದಿದೆಯೆ ? ಹೀಗೆ ಹಲವು ಕಾರಣಗಳನ್ನು ಸೂಚನೆ ಮಾಡಿದ್ದರ ಜೊತೆಗೆ ಬೋಗಸ್ ವೋಟರ್ಸ್ ಲಿಸ್ಟ್ ಬೇರೆ ಮಾಡಿದ್ದೀರಿ. ಅದು ಇಲ್ಲೀಗಲ್. ಬೈಲಾ ಪ್ರಕಾರ ಇಲ್ಲ. ಆ ವೋಟರ್ಸ್ ಲಿಸ್ಟಿನಂತೆ ಚುನಾವಣೆ ಮಾಡಿದ್ದೀರಿ. ಅದು ಕ್ರಮಬದ್ಧವಲ್ಲ. ಆದ್ದರಿಂದ ಇವನ್ನು ನಿಲ್ಲಿಸಬೇಕೆಂಬುದು ನಿಮಗೆ ಆಲೋಚನೆಗೆ ಬಂದಿದೆಯೋ ಇಲ್ಲವೆ; ಒಬ್ಬ ಕಂಟ್ರಾಕ್ಟರ್ 5 ಸಾವಿರ ರೂಪಾಯಿಗಳ ಕ್ರಾಸ್ ಚೆಕ್ ಕೊಟ್ಟಿದ್ದಾನಲ್ಲವೇ ? ಅದು ಒಂದು ದೊಡ್ಡ ಸಂಸ್ಥೆಯಾಗಿರುವುದರಿಂದ, ಅದರ ಯೋಗ್ಯತೆಗೆ ಅನುಸಾರವಾಗಿ ಕೆಲಸ ಮಾಡಬೇಕಾಗಿರುವುದರಿಂದ ಕೆಲವಾರು ಮಾಹಿತಿಗಳನ್ನು ಕೇಳಿದರೆ, ಇಲ್ಲಿ ಮಂತ್ರಿಗಳು ಬರೀ ಒಂದು ಸ್ಟೇಟ್‌ಮೆಂಟನ್ನು ಮಾಡಿಕೊಂಡು ಅಲ್ಲಿರುವ ತಪ್ಪುಗಳನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಏನಾದರೂ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಾನು ಈಗಾಗಲೇ ಹೇಳಿದಂತೆ ಸರ್ಕಾರಕ್ಕೆ ಕಾಲ್ ಅಟೆನ್‌ಷನ್ ನೋಟೀಸ್ ಬಂದಿತ್ತು. ಅದು ಅನ್ನ ಸತ್ಯಾಗ್ರಹಕ್ಕೆ ಸಂಬಂಧಪಟ್ಟದ್ದು. ಅದರ ವಿಷಯದಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆಯೆಂಬುದನ್ನು ನಾನು ಹೇಳಿದ್ದೇನೆ. ಈಗ ಗಮನ ಸೆಳೆಯುವ ಸೂಚನೆ ಬಂದಿರುವುದು ಹೈದರಾಬಾದ್ ಕರ್ಣಾಟಕ ಎಜುಕೇಷನಲ್ ಸೊಸೈಟಿಯಲ್ಲಿ ಸ್ವಲ್ಪ ಅವ್ಯವಸ್ಥೆಯಾಗಿದೆ ಮಿಸ್‌ಅಪ್ರೋಪ್ರಿಯೇಷನ್ ಆಗಿದೆ, ಮಿಸ್ ಮಾನೇಜ್‌ಮೆಂಟ್ ಆಗಿದೆ ಎಂದು ಅಲ್ಲಿ ಅನ್ನ ಸತ್ಯಾಗ್ರಹ ನಡೆದಿದೆ ಎಂದು. ನಿರ್ದಿಷ್ಟವಾದ ಆರೋಪಗಳನ್ನು ಅರ್ಜಿ ಮುಖಾಂತರ ಯಾವುದೂ ಸರಕಾರದ ಗಮನಕ್ಕೆ ಬಂದಿಲ್ಲ. ಅದರ ಬಗ್ಗೆ ವಿವರ ಕೇಳಲಿಲ್ಲ. ಅದು ಸರಕಾರದವರು ನೇಮಕ ಮಾಡಿದಂಥ ಸಂಸ್ಥೆ ಅಲ್ಲ. ಅದರಲ್ಲಿ ಅನ್ಯಾಯ ಆಗಿದ್ದರೆ ನಿರ್ದಿಷ್ಟವಾದ ಆರೋಪಗಳನ್ನು ಸರಕಾರದ ಗಮನಕ್ಕೆ ತಂದರೆ ಯಾವ ಮುಲಾಜು ಇಲ್ಲದೇ, ಯಾವ ಪಕ್ಷಪಾತವೂ ಇಲ್ಲದೆ ವಿಚಾರಣೆ ಮಾಡಿ ಮಾನ್ಯ ಸದಸ್ಯರಿಗೆ ಬೇಕಾದಂಥ ವಿವರಗಳನ್ನು ಕೊಡುತ್ತೇವೆ. ಇದರಲ್ಲಿ ಪಕ್ಷ, ಪಂಗಡಗಳ ವಿಚಾರವಿಲ್ಲ. ಕಾಂಗ್ರೆಸ್ ಇಂಡಿಕೇಟ್, ಸಿಂಡಿಕೇಟ್ ಎಂಬ ವಿಚಾರ

ಇಲ್ಲ. ನಿಷ್ಪಕ್ಷಪಾತವಾದ ವಿಚಾರಣೆ ಮಾಡುತ್ತೇವೆ. ತಪ್ಪು ಕಂಡ ಬಂದರೆ ಕಾಯಿದೆ ಪ್ರಕಾರ ಶಿಕ್ಷೆ ಮಾಡುತ್ತೇವೆ. ಯಾವ ವಿಧವಾದ ಪಕ್ಷಪಾತವನ್ನೂ ತೋರಿಸುವುದಿಲ್ಲ ಎಂದು ಹೇಳುತ್ತೇನೆ.

[*Interruptions*]

* * * *

ಶ್ರೀ ಶರಣಗೌಡ ಇನಾಂದರ್.—ಈ ಕಾಲ್ ಅಟೆನ್‌ಷನ್ ನೋಟೀಸ್ ತರುವ ಮುಖ್ಯ ಉದ್ದೇಶ ಉಪವಾಸ ಕೊಡತಕ್ಕಂಥ ಪರಿಸ್ಥಿತಿ ಏನು ಇದೆ, ಅದನ್ನು ತಿಳಿಸುವುದು. ಮುಂದೆ ಆದರೂ ಕೂಡ ಈ ರೀತಿ ಉಪವಾಸ ಕೂತು ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗುವುದಕ್ಕೆ ಅವಕಾಶವಿದೆ. ಅದನ್ನು ತಡೆಗಟ್ಟಲು ಸರಕಾರ ಜವಾಬ್ದಾರಿ ವಹಿಸಿಕೊಂಡು ಎನ್‌ಕ್ವೈರಿ ಮಾಡುತ್ತಾರೆಯೇ ಎನ್ನುವ ಬಗ್ಗೆ ಇಲ್ಲಿಯತನಕ ಸರಕಾರದಿಂದ ಉತ್ತರ ಬರಲಿಲ್ಲ.

Sri M. N. RAMANNA.—I rise on a point of order, Sir. Rule 63 (2) definitely says that there shall be no debate on such statement at the time it is made.

[*Sri G. Chandrakant rose.*]

Mr. DEPUTY SPEAKER.—Let the Hon. Member Sri Chandrakant resume his seat and allow Sri Ramnna to complete what he has to say.

Sri G. CHANDRAKANT.—Sir, after all, your ruling on the point of order will be that there is no force in the point of order.

Sri M. N. RAMANNA.—Sir, the Hon. Member has made a remark which is not fair. I request him through you, Sir, to withdraw it. Every member has the right to have his say ; it is not the monopaly of any member. He should not insult us. I have got the same right as he has.

Mr DEPUTY SPEAKER.—I uphold the point of order raised by the Hon. Member Sri Ramnna. Only clarification can be asked by Hon. Members.

Sri G. CHADRAKANT.—It has been said that there have been misrepresentations and misappropriations by the Hyderabad Karnatak Education Society and that Government will not hesitate to take action I would like to know whether Government is satisfied by that because there have been several representation with regard to misappropriations, etc. I am told that the Chairman, namely, Sri Rampure, is being shielded because he is a weighty M. P. of the area.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗಾಗಲೇ ಉತ್ತರದಲ್ಲಿ ಸ್ಪಷ್ಟಪಡಿಸಿದ್ದೇನೆ. ಇದು ಸರ್ಕಾರಿ ಸಂಸ್ಥೆ ಅಲ್ಲ, ಖಾಸಗಿ ವಿದ್ಯಾ ಸಂಸ್ಥೆ, ಅದಕ್ಕೆ ಸರ್ಕಾರದಿಂದ ಗ್ರಾಂಟು ಕೊಡುತ್ತಾ ಇದ್ದೇವೆ. ಆ ಸಂಸ್ಥೆಯವರು ಮಾಡಿದ್ದನ್ನೆಲ್ಲಾ ಸರ್ಕಾರ ಒಪ್ಪುತ್ತದೆ ಅಂತ ಅಲ್ಲ, ಪ್ರೋತ್ಸಾಹಿಸುತ್ತದೆ ಅಂತ ಅಲ್ಲ. ಅಲ್ಲಿ ಮಿಸ್ ಅಪ್ರೂಪ್ರಿಯೇಷನ್, ಮಿಸ್ ಮ್ಯಾನೇಜ್‌ಮೆಂಟ್ ಏನಾಗಿದೆ ಆ ಬಗ್ಗೆ ನಿರ್ದಿಷ್ಟವಾದ ಆರೋಪ ಕೊಡಬೇಕಾಗುತ್ತದೆ, ಯಾವುದನ್ನೇ ಆಗಲಿ ಪರಿಶೀಲನೆ ಮಾಡದೆ ಕ್ರಮ ಕೈಗೊಳ್ಳುವುದಕ್ಕೆ, ಕಷ್ಟವಾಗುತ್ತದೆ. ಆದ್ದರಿಂದ ನಿರ್ದಿಷ್ಟವಾದ ಆರೋಪ ಮಾಡಿದರೆ ಖಂಡಿತವಾಗಿಯೂ ಸರ್ಕಾರ ಯಾವ ತರಹದ ಪಕ್ಷಪಾತವೂ ಇಲ್ಲದೇ, ಮುಲಾಜೂ ಇಲ್ಲದೇ ತೀವ್ರವಾದ ಕ್ರಮ ಕೈಗೊಳ್ಳುತ್ತದೆ. ಮತ್ತು ನಿಯಮಗಳ ಪ್ರಕಾರ ಸಂಸ್ಥೆಯವರ ಮೇಲೆ ಯಾವ ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇವೆ ಉಪವಾಸ ಸತ್ಯಾಗ್ರಹ ಮಾಡತಕ್ಕದ್ದು ಸಂಸ್ಥೆಯವರಿಗೆ ಬಿಟ್ಟದ್ದು. ಆದರೆ ಯಾವುದೇ ವಿಧವಾದ ಅನಾನುಕೂಲ ಉಂಟಾಗದಂತೆ ಸರ್ಕಾರ ಮುಂಚಿತವಾದ ಕ್ರಮ ಕೈಗೊಳ್ಳುತ್ತದೆ.

---

* * * Matter not recorded as ordered by the Chair.

Sri G. CHANDRAKANT.—Very specific charges have been made against the Society. But unfortunately Government has not taken steps to allay public misapprehensions. Government have taken little pains to have the allegations investigated. Moreover this is a very hypothetical reply that is given now.

Mr. DEPUTY SPEAKER.—We have spent sufficient time on this subject. We cannot afford to spend more time.

(MR. SPEAKER in the Chair)

Mr. SPEAKER.—Call Attention Notice is meant to obtain a statement. from the Government No discussion is permitted on it. But, however, a convention has grown to permit only the Members who have given notice to seek clarifications; that too, one or two and not more than that. Three clarifications were asked and were replied to. It may be that Members may not be satisfied with the answers. But the scope of no rule is very limited. We may go to the next item in the business.

Sri K. H. PATIL.—I agree. But when we ask the Deputy Minister whether he has received any memorandum and when he goes on evading a direct reply, do you mean to say that we should keep quiet here. Have we no remedy to press upon the Hon. Minister to come with a proper reply ?

Mr. SPEAKER.—There is a remedy. There are various ways of raising the matter. There will be general debate on the Budget, there will be debate on the Demands. The Hon. Members may make use of those opportunities to elicit information. After all, it is a private organisation There are hundred and hundreds of private organisations serving the people in the field of education. Matters can be raised if the Government is responsible for the management or otherwise I permitted this notice because there was hunger-strike by some persons. So I requested the Hon. Minister to Let the House know the correct position regarding the strike. The Call Attention was permitted for making a reference only to the fasting by some persons. I have gone through the Mysore Societies Registration Act. It provides for and checks and counter-checks for minimising grievances for ventilating them in a proper way. The Registrar of Societies is seized of this matter. I think let us stop at that.

Sri D. B. KALMANKAR.—I have been told that in that report, there is nobody's signature.

Mr. SPEAKER.—I shall find out.

Sri K. H. PATIL.—Sympathetic consideration is necessary for those on hunger strike. The Central Government have taken a decision recently following hunger strike. But here is a Government which has not got even good words to redress the grievances the persons on hunger strike and others against the Society. If you do not give protection, how can we express our sympathies to them? Let the people not say that this House has got sympathy and faith in this Government which is not prepared to look into the legitimate grievances of the public.

Mr. SPEAKER.—Now Sri Srikantiah to continue his speech.

Mysore Land Reforms (Amendment) Bill 1970 motion to consider

(Debate Continued)

†**Sri L. SRIKANTAIAH.**—On Friday, Sir, I was just trying to draw the attention of the Hon. Minister for Revenue how the best intentions on the part of the Government are being defeated by transferring the so-called executive function to the Tahsildar. At the same time, I pointed out with reference to Section 116 and the new clause 16 which seeks its amendment, that the intention does not seem to be clear. Now my argument gets reinforced as I draw the attention of the Hon. Minister to the old Section 42. In the first place, I am unable to understand the purport of this amendment which says: "In section 42 of the principal Act, before sub-section (2), the following sub-section shall be inserted, namely:.................." If I look to the old Act and open Section 12, I find that sub clause (1) is already there. I have with me edition of 1965 and I do not think in between 1965 and 1970, this sub-section (1) had been deleted on a former occasion. In the 1965 edition, the very exact paragraph we find repeated in section 42 (1).

4-00 P. M.

Sri M. NAGAPPA.—On a point of order. Amendment to section 42 has been suggested in the Bill. For the section 42(1) I have sent an amendment stating that it might be omitted because it is redundant. I do not know why the Chair has disallowed that amendment and it has not been circulated to the members. The other day a similar amendment was moved by the hon. Minister for omitting certain clause in the Excise Bill and it was admitted and put before the House. I request that my amendment may be admitted and circulated.

Mr. SPEAKER.—I shall say what has happened. Omission of a Clause amounts to a negative amendment and on that ground it was disallowed. The amendment of a similar nature was wrongly admitted the other day and the hon. member might know that it was not put to vote. I am sorry it was wrongly admitted.

Sri L. SRIKANTAIAH.—I shall draw the attention of the hon. Minister to clause (2). It reads as follows:

> "The landlord claiming payment of rent by tenant may apply to the tribunal in the prescribed from for directing the tenant to pay landlord."

(SRI L. SRIKANTAIAH)

It is clear that the landlord claiming payment of rent shall apply to the court in the prescribed form. Section 42 (2) read with amended section 116 makes it amply clear that the landlord shall seek his remedy only in the court. The court is defined in section 2 of section 34. If I remember carefully what the Minister for Revenue has stated on the floor and made clear in the Objects and Reasons. The object is to bifurcate judicial functions from executive functions and transfer those functions to the Tahsildar. If that be the case, the whole thing becomes contradictory and inconsistent.

Another aspect to which I wish to draw the attention of the Minister is, the object of the Government is a laudable one. I quite understand it is to expedite speedy implementation of the land reforms. Please see section 118 (3). Of course the Government has not brought forward an amendment. That apart, while discussing a very major legislation, it is my duty to draw the attention of the Minister as to how delays are caused, if advice is not taken from proper quarters or if the sections are not properly scrutinised. Let the Minister read section 118 (3). In the scheme of appeals and revision from an order of the Munsiff, an appeal shall apply to the appellate authority and it is defined as District Judge. Under section 118 (3) a party may desire for the decision of the High Court and the appellate autbority or the Revenue Appellate Tribunal shall have to refer the question for the decision of the High Court. My submission is if the Government has to cut short the delay what is the effect of this provision ? The moment a case comes before the District Judge any party may present a petition and say that the matter may be referred to the High Court and the High Court has to take it. We all know the load of work in the High Court. In this connection I wish to draw your attention to section 113 of the Civil Procedure Code. They are only under certion conditions. A very salutory proviso is provided there. In fact we know several instances where the High Court have observed why references were made to them. I remember on many occasions the Civil Judges and District Judges getting a whipping from the High Court; asking them on what ground they referred the cases to High Court. But here, any party may apply ; suo motu the matter is referred and the High Court takes three years. On a slightest matter a party can present a petition and say let the matter be decided by the High Court. Therefore I think section 118 (3) requires urgent amendment.

Another aspect to which I wish to draw your attention is :.......

Mr. SPEAKER.—Only two hours are allotted to this Bill. Hence I request hon. members to please finish their speeches in five minutes. They may state points only.

Sri L. SRIKANTAIAH.—I wish to draw the attention of the Hon. Minister to section 22 (d). There also the time and procedure for notice for recovery of the land has not been made clear. I think it is better in conformity with the Transfer of Property Act section 22 (d) is carefully worded like the provisions of the Rent Control Act.

Lastly, I wish to draw the attention of the Hon. Minister to the definition of the word 'court' contained in the amended section 2 (9a). The Hon. Minister knows what it is and I also know that a court means the Court of Munsiff, but if one reads section 2 (9a) in law whether the court should be considered as the Court of Munsiff, is not made elear. The word 'court' as defined here has reference to the Court of Munsiff, but it may not be the Court of Munsiff as constituted under the law under the Civil Court Act or under the Code of Civil Procedure. It my be the Court of Munsiff as constituted under section 133. But that conflict is there apparent. I know and the Hon. Minister knows that 'court' means the Court of Munsiff, but in law I am not compelled to assume that 'court' means the court of Munsiff. I do not want to elaborate this point further as there is no time.

I shall conclude by saying one thing. Last year a question was put to the Hon. Minister, what is the surplus land available and the Hon. Minister was pleased to say that facts are not availabe as yet. I stopped at that. In this session also, I called upon the Hon. Minister to state who are those persons or institutions who enjoyed non-ceiling exemption and he gave a list saying that it includes Mathadhipathis and religous institutions, etc. I asked him about the extent of lands these people owned and for that also the reply was that facts are not available because it involves extra labour. May I point out that in the year 1961 this Act came into force and still you do not know who are those persons and institutions who are above the celling limit like charitable institutions, foreign companies and private individuals. Eight years have passed and still the Government are not in a position to possess vital statistics of land reforms. When are you going to get it ? That is the point. Suppose I call upon the Hon. Minister to state the private companies which own lands beyond the purview of the ceiling clause, he does not have information. We know that there are certain foreign companies owning more than 2000 acres of land and you exempt them, but you call a small holder owning one or two acres of land as an exploiter whereas these foreign companies owning more than 2000 acres of land go scot-free under your Land Reforms Act. Is this the type of socialism that you want to usher in ? Therefore I wish the Hon. Minister bestows some thought on these matters and bring suitable amendments after taking proper advice from proper quarters.

†ಶ್ರೀ ಟಿ. ಆರ್. ಶಾಮಣ್ಣ. (ಬೆಂಗಳೂರು ಪೋರ್ಟ್). ಮಾನ್ಯ ಸಭಾಪತಿಗಳೇ, ಈಗ ನಾನು ಲ್ಯಾಂಡ್‌ಲಾರ್ಡ್ ಅಲ್ಲ ಅಥವಾ ಟೆನೆಂಟೂ ಅಲ್ಲ. ಆದರೆ ಒಂದು ಅಂಶ ಇಲ್ಲಿ ಎದ್ದು ಕಾಣುತ್ತಾ ಇದೆ ಈ ಲ್ಯಾಂಡ್ ರಿಫಾರಂಸ್ ಬಿಲ್ ಆಕ್ಟ್ ಆದಮೇಲೆ 1961ರಲ್ಲಿ ಜಾರಿಗೆ ಬಂತು. ಈಗ 1970ನೇ ಇಸವಿ ಬಂದರೂ ಕೂಡ ಕೆಲವು ವರ್ಷಗಳಿಂದ ಅದನ್ನು ಜಾರಿಗೆ ತರದೆ ಹಾಗೆ ಬಿಟ್ಟಿದ್ದರಿಂದ ಇದರಲ್ಲಿ ಏನು ಮುಖ್ಯ ಉದ್ದೇಶ ಅಡಗಿತ್ತೋ ಅದಕ್ಕೆ ತೊಂದರೆಬರುತ್ತಾ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ಕಳೆದ 4 – 5 ವರ್ಷಗಳಿಂದ ಅನೇಕರು ಈ ಜಮೀನುಗಳನ್ನು ಪರಭಾರೆ ಮಾಡಿ ಎಷ್ಟೆಷ್ಟು ತೊಂದರೆ ಕೊಡಬೇಕೋ ಅಷ್ಟೆಲ್ಲಾ ಮಾಡಿರುವುದರಿಂದ ಕೊನೆಗೆ ಉಳಿಯತಕ್ಕಂಥ

(ಶ್ರೀ ಟಿ. ಆರ್. ಶಾಮಣ್ಣ)

ಜಮೀನು ಎಷ್ಟು ಎನ್ನುವುದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಎರಡನೆದಾಗಿ ಬೇರೆಯವರ ಜಮೀನನ್ನು ಕಿತ್ತುಕೊಂಡು ಮತ್ತೊಬ್ಬರಿಗೆ ಕೊಡವುದಕ್ಕೆ ಮುಂದೆ ಸರಕಾರದ ವಶದಲ್ಲೇ ಸುಮಾರು 25 ಲಕ್ಷ ಎಕರೆಗಳಷ್ಟು ಭೂಮಿ ಎಂದರೆ ಅನ್‌ಕಲ್ಟಿವೇಟೆಡ್ ಲ್ಯಾಂಡು ಇದೆ ಎಂದು ಕೇಳುತ್ತೇವೆ. ಇದನ್ನಾದರೂ ತಕ್ಷಣ ವಿಲೇವಾರಿ ಮಾಡಿದ್ದರೆ ಇದರಿಂದ ಅನೇಕರಿಗೆ ಜಮೀನಾದರೂ ಸಿಗುತ್ತಿತ್ತು. ಇದರ ಜೊತೆಗೆ ದೇಶದಲ್ಲಿ ಇದ್ದ ಆಹಾರದ ಸಮಸ್ಯೆ ಕೂಡ ಸ್ವಲ್ಪಮಟ್ಟಿಗೆ ಬಗೆಹರಿಯುತ್ತಿತ್ತು. ಹೀಗೆ ಶೀಘ್ರವಾಗಿ ಇದರ ಕೆಲಸವನ್ನು ಮಾಡದೇ ಇರುವುದು ತುಂಬಾ ವಿಷಾದದ ಸಂಗತಿ. ಇದನ್ನು ಮಾಡಲು ಜಮೀನೆಲ್ಲಾ ಸರಕಾರದ ಕೈಯಲ್ಲೇ ಪೂರ್ತಿಯಾಗಿತ್ತು, ಇನ್ನೊಂದು ವಿಚಾರ ಇದರಲ್ಲಿ ಬರುತ್ತೆ. ಇನಾಂ ಅಬಾಲಿಷನ್ ಅಕ್ಟ್ ಜಾರಿಗೆ ಬಂದಾಗ ಅನೇಕರಿಗೆ ಸಂಬಂಧಪಟ್ಟ ಹಾಗೆ ಅವರಿಗೆ ಕೊಡಬೇಕಾದ ಪರಿಹಾರದ ಹಣವನ್ನು ಇನ್ನೂ ಕೊಟ್ಟಿಲ್ಲ. ಅನೇಕರು ನನ್ನ ಬಳಿ ಬಂದು ಇವರ ಬಗ್ಗೆ ಸಾಕಾದಷ್ಟು ಸಂಕಟಗಳನ್ನು ತೋಡಿಕೊಂಡು ವ್ಯಥೆಪಡುತ್ತಿದ್ದೇವೆ ಎಂದೂ ಹೇಳಿದ್ದಾರೆ ಮತ್ತು ಸರಕಾರಕ್ಕೂ ಮನವಿಗಳನ್ನು ಸಲ್ಲಿಸಿದ್ದಾರೆ. ಇದರ ಬಗ್ಗೆ ಸರಕಾರ ಬೇಗನೆ ತೀರ್ಮಾನ ತೆಗೆದುಕೊಂಡು ತಕ್ಷಣ ಇವರೆಲ್ಲರಿಗೂ ಅನುಕೂಲ ಮಾಡಿಕೊಡತಕ್ಕದ್ದು ಬಹು ಮುಖ್ಯ ಇದರ ಜೊತೆಗೆ ಇನ್ನೊಂದು ವಿಚಾರ ಇದರಲ್ಲಿದೆ. ಅದು ಟೆನೆಂಟುಗಳು ಎಂದು ಇರುವವರ ಬಗ್ಗೆ ಏನು ಒಂದು ರೀತಿಯಾಗಿ ಹೇಳಿದ್ದಾರೆ ಅದರಂತೆ ವ್ಯವಹಾರ ಹಳ್ಳಿಗಳಲ್ಲಿ ಮಾಡಲು ಆಗುವುದಿಲ್ಲ. ಹಳ್ಳಿಗಳಲ್ಲಿ ಇರುವ ಜನರು ತಮ್ಮ ಜಮೀನನ್ನು ಬೇರೆಯವರಿಗೆ ಕೊಟ್ಟು ಅವರಿಂದ ಗುತ್ತಿಗೆ ಪಡೆಯುತ್ತಾ ಬೇರೆಯವರ ಜಮೀನನ್ನು ತಾವು ಮಾಡುತ್ತೇವೆ ಎಂದು ಅವರಿಗೆ ಗೇಣಿ ಕರಾರು ಬರೆದು ಕೊಡುವ ದಳ್ಳಾಳಿಗಳಂತೆ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರಿಂದ ಇಂತಹ ಮಧ್ಯವರ್ತಿಗಳಿಂದಾಗುವ ತೊಂದರೆಗಳನ್ನು ತಪ್ಪಿಸಬೇಕು. ಅಬ್ಸೆಂಟೀ ಲ್ಯಾಂಡ್‌ಲಾರ್ಡುಗಳು ಎಂದು ಇಲ್ಲಿ ಮಧ್ಯವರ್ತಿಗಳ ಕಾಟ ಬಹಳ ಹೆಚ್ಚಾಗಿದೆ. ಪರ್ಮನೆಂಟು ಟೆನೆಂಟಾಗಿ ಕೆಲಸ ಮಾಡುವವರಲ್ಲಿ ಬೇರೆ ಒಂದು ರೀತಿಯಾದ ಹೆಸರು ಕೊಟ್ಟು ನ್ಯಾಯವಾಗಿ ಇರುವ ಗೇಣೀದಾರರಿಗೆ ಗೇಣಿಯೇ ಸಿಗುವುದಿಲ್ಲ. ಇಂತಹ ಇಂಟರುಮೀಡಿಯರೀಸ್‌ಗಳಿಂದ ಆಗುವ ತೊಂದರೆಗಳನ್ನು ಸರಕಾರ ತಪ್ಪಿಸಬೇಕು. ಇದರ ಬಗ್ಗೆ ಸರಕಾರ ತೀವ್ರವಾಗಿ ಯೋಚನೆ ಮಾಡಬೇಕು. ಇನ್ನೊಂದು ಇದರಲ್ಲಿ ಒಂದು ಎರಡು, ಮೂರು ಇತ್ಯಾದಿ ಎಂಟು ವರ್ಗಗಳವರಿಗೆ ಕ್ಲಾಸುಗಳು ಎಂದು ಮಾಡಿದ್ದಾರೆ. ಇವುಗಳನ್ನು ಎಕರೆಗಳಿಂದ ಹೆಕ್ಟಾರುಗಳು ಎಂದು ಮಾಡಬೇಕೆಂದು ಹೇಳಿದ್ದಾದರೆ, ಇವನ್ನೆಲ್ಲಾ ಮಾಡಬೇಕಾದರೆ ಬಹಳ ಕಾಲ ಹಿಡಿಯುತ್ತದೆ. ಆದುದರಿಂದ ಇದರ ಬಗ್ಗೆ ಬೇಗ ತೀರ್ಮಾನ ತೆಗೆದುಕೊಂಡು ಬೇಗನೆ ಪರಿಹಾರವನ್ನು ಜನರಿಗೆ ಸಿಗುವಂತೆ ಏರ್ಪಾಡು ಮಾಡಬೇಕು ಮತ್ತು ಸರಕಾರ ತೀವ್ರವಾಗಿ ಗಮನ ಕೊಟ್ಟು ಜನರ ಕಷ್ಟವನ್ನು ಬೇಗನೆ ಪರಿಹಾರ ಮಾಡಬೇಕು. ಈಗಿರತಕ್ಕ ಸಂದರ್ಭದಲ್ಲಿ ಇಲ್ಲಿ ತಂದಿರುವ ಲ್ಯಾಂಡು ರಿಫಾರಂಸ್ ಅಕ್ಟ್ ಜಾರಿಗೆ ತರುವುದರಲ್ಲೇ ಸಾಕಾದಷ್ಟು ತಡವಾಗಿದೆ. ಇನ್ನೂ ತಡವಾಗವುದಕ್ಕೆ ಅವಕಾಶ ಮಾಡಿದರೆ ಇದರಿಂದ ಜನರಿಗೆ ಅನುಕೂಲವಾಗುವುದಿಲ್ಲ. ಆದುದರಿಂದ ಸರಕಾರ ಜನರಿಗೆ ಸರಿಯಾದ ಪರಿಹಾರವನ್ನು ಕೊಟ್ಟು ಇದನ್ನು ಬೇಗನೆ ಬಗೆಹರಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೊಂದು ವಿಚಾರವನ್ನು ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ ಬೆಂಗಳೂರಿನಲ್ಲಿರತಕ್ಕ ಅನೇಕ ಸ್ಮಾಲ್ ಹೋಲ್ಡರುಗಳು ಸ್ವಲ್ಪ ಭೂಮಿಯನ್ನು ಇಟ್ಟುಕೊಂಡಿದ್ದಾರೆ. ಇವರಿಗೆ ಈ ಕಾನೂನಿನಿಂದ ತೊಂದರೆಯಾಗಿದೆ ಮತ್ತು ಇವರುಗಳು ಜೀವನ ಮಾಡಲು ಜಮೀನನ್ನೇ ನಂಬಿದ್ದಂತಹವರು. ಇವರಿಗೆ ತೊಂದರೆಯಾಗುವಂತೆ ಮಾಡಬಾರದು. ಇದು ಹೇಗಿದೆ ಎಂದರೆ ಹಾವನ್ನು ಹೊಡೆದು ಹದ್ದಿಗೆ ಹಾಕಿದರು ಎನ್ನುವಂತೆ ಯಾರದೋ ಜಮೀನನ್ನು ಕಿತ್ತು ಇನ್ನೊಬ್ಬರಿಗೆ ಕೊಡುವಂತೆ ಮಾಡಬಾರದು. ಸ್ಮಾಲ್ ಹೋಲ್ಡರುಗಳಿಗೆ ಅನುಕೂಲ ಮಾಡಿಕೊಡಬೇಕು. I am neither a tenant nor a land-lord. Some representations were made to me. In this connection I request that the Government should take all steps to see that the available Government land is distributed. Secondly the Act, is meant for disposing of cases.

ಇವನ್ನೆಲ್ಲಾ ರೂಲ್ಸು ಮಾಡುವಾಗ ಸರಿಯಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನ್ಯಾಯವಾಗಿ ಜನರಿಗೆ ಅನುಕೂಲವಾಗುವಂತೆ ಸರಕಾರ ಬೇಗನೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ನಾಗಪ್ಪ.—ಮಾನ್ಯ ಅಧ್ಯಕ್ಷರೇ, ಈ ಬಿಲ್ಲಿನ ಮೇಲೆ ಮಾತನಾಡುವುದಕ್ಕೆ ಮುಂಚಿತವಾಗಿ ಮಾನ್ಯ ರೆವೆನ್ಯೂ ಮಂತ್ರಿಗಳ ಗಮನಕ್ಕೆ ಈ ಅಮೆಂಡುಮೆಂಟು ಕ್ಲಾಸು 4 ನ್ನು ಓದಬೇಕು ಮತ್ತು ನಾನು ಇದೇ ಆಕ್ಟಿನ ಒರಿಜನಲ್ ಆಕ್ಟಿನಲ್ಲಿರುವ ಕ್ಲಾಸು 42ನ್ನು ತಮ್ಮ ಅವಗಾಹನೆಗಾಗಿ ಓದುತ್ತೇನೆ. ಅದು ಹೀಗಿದೆ :

> " 42 (1) Notwithstanding anything contained in any agreement or in any law for the time being in force, no suit or other proceeding shall lie in any Court or before any other authority for recovery of any rent payable by tenant, except as provided in this Section. "

Under this Section 42 of the principal Act, before Sub-Section (2), the following Sub-Section shall be inserted, namely :—

> "(1) Notwithstanding anything contained in any agreement or in any law for the time being in force, no suit or other proceeding shall lie in any Court or before any other authority for recovery of any rent payable by tenant, except as provided in this Section. It is a mockery of democracy. You have got army of officers. There is a Secretary, Deputy Secretaries, Assistant Secretaries and all that. '

ಈಗ ತಂದಿರುವ ಅಮೆಂಡ್‌ಮೆಂಟ್ ಬಿಲ್ಲಿನಲ್ಲಿ ತಂದಿರುವುದು ಇದೇ ವಾಕ್ಯಗಳಲ್ಲಿದೆ. ಇದರ ಮೇಲೆ ಮಂತ್ರಿಗಳು ತಮ್ಮ ಅಭಿಪ್ರಾಯ ಏನು ಎನ್ನುವುದನ್ನು ತಿಳಿಸಬೇಕು. ಇಂತಹ ಅಬ್‌ಸರ್ಡ್ ಅಮೆಂಡ್‌ಮೆಂಟ್ ಎಂದರೆ ಇದು ಮಾಕರಿ ಆಫ್ ಡೆಮಾಕ್ರಸಿ ಆಗುತ್ತೆ ಇಂತಹ ನಾಚಿಕೆಗೇಡಿನ ಅಮೆಂಡ್‌ಮೆಂಟ್ ಎಂದು ಇಲ್ಲಿರುವ 216 ಜನ ಸದಸ್ಯರು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳುವುದರಲ್ಲಿ ಅರ್ಥವೇನು ? ಮಿಸ್‌ಕೋಟು ಮಾಡಿ ತರಲು ಕಾರಣವೇನು. ನಿಮಗೆ ಆರ್ಮಿ ಆಫ್ ಆಫೀಸರುಗಳು ಇದ್ದಾರೆ. ಸೆಕ್ರೆಟರಿಗಳು, ಡೆಪ್ಯುಟಿ ಸೆಕ್ರೆಟರಿಗಳು ಅಡಿಷನಲ್ ಲಾ ಸೆಕ್ರೆಟರಿಗಳು ಇದ್ದಾರೆ. ರೆವೆನ್ಯೂ ಇಲಾಖೆಯಲ್ಲಿ ಸೆಕ್ರೆಟರಿಗಳು ಸ್ಪೆಷಲ್ ಅಡಿಷನಲ್ ಸೆಕ್ರೆಟರಿಗಳು ಹಾಗೂ ಡೆಪ್ಯೂಟಿ ಸೆಕ್ರೆಟರಿಗಳು ಹಾಗೂ ಇನ್ನಿತರ ಅಧಿಕಾರಿಗಳಿದ್ದಾರೆ. ಇಂತಹ ಒಂದು ಸೆಕ್ಷನನ್ನು ಏನಾದರೂ ನೋಡಿದ್ದಾರೆಯೇ ? ಇದೆಂತಹ ನಾಚಿಕೆಗೇಡಿನ ಪ್ರಸಂಗ ? ಇಂತಹ ತಿದ್ದುಪಡಿಗಳನ್ನು ಇನ್ನು ಮುಂದೆ ತರಬಾರದೆಂದು ನಾನು ಹೇಳುತ್ತೇನೆ. ಮಂತ್ರಿ ಮಂಡಲದಲ್ಲಿರುವ ಮುವತ್ತು ಜನ ಮಂತ್ರಿಗಳು ಇದನ್ನು ನೋಡಲಿಲ್ಲವೇ ಎಂದು ಕೇಳುತ್ತೇನೆ. ಈಗ ತಂದಿರತಕ್ಕಂಥ ತಿದ್ದುಪಡಿಯಿಂದ ಯಾವ ರೀತಿಯ ಅನಾನುಕೂಲವೂ ಸಹ ಆಗುವುದಿಲ್ಲ. ಒಂದು ತೊಂದರೆಯನ್ನು ತಪ್ಪಿಸುವುದಕ್ಕಾಗಿ ತಿದ್ದುಪಡಿಯನ್ನು ತರುವುದರ ಮೂಲಕ ಇನ್ನೊಂದು ತೊಂದರೆಯನ್ನು ಸೃಷ್ಟಿ ಮಾಡುತ್ತಿದ್ದೀರಿ. ಸೆಕ್ಷನ್ 111 ಸಬ್ ಕ್ಲಾಸ್ ಎರಡರಲ್ಲಿ ಈ ರೀತಿ ಹೇಳಿದೆ :

4–30 P.M.

> " For any area for which a Tribunal has not been constituted the Munsiff having jurisdiction over such area or any other judicial officer authorised in this behalf by the State Government shall exercise all the powers and perform all the duties and functions of the Tribunal under this Act."

ಸುವ ಮೋಟೋ ಈ ಸೆಕ್ಷನ್‌ನಿಂದಲೇ ಸರ್ಕಾರಕ್ಕೆ ಬೇಕಾದುದು ಆಗುತ್ತಿತ್ತು. ಆದರೆ ಈ ಒಂದು ಸೆಕ್ಷನನ್ನು ರದ್ದು ಮಾಡುವುದಕ್ಕೆ ಹೊರಟಿದ್ದೀರಿ. ಈಗ ತಂದಿರತಕ್ಕಂಥ ತಿದ್ದುಪಡಿಯಿಂದ ಜಾಗ್ರತೆ ಭೂಸುಧಾರಣೆಯನ್ನು ತರುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿದ್ದೀರಿ. ನಾನಾದರು ಹೇಳುತ್ತೇನೆ, ಈಗಿನ ತಿದ್ದುಪಡಿಯ ಪ್ರಕಾರ ಭೂಸುಧಾರಣೆಯನ್ನು ಜಾರಿಗೆ ತರಲು ಇನ್ನೂ ತಡವಾಗುತ್ತದೆ ಎಂಬುದಾಗಿ. ಮುನ್ಸೀಫರುಗಳಿಗೆ ಈ ಕೆಲಸವನ್ನು ಮಾಡಲು ಅಧಿಕಾರ ಕೊಟ್ಟರೆ ಕೆಲಸ ಜಾಗ್ರತೆಯಾಗುತ್ತದೆಂಬ ಮಾತನ್ನು ಹೇಳಿದ್ದೀರಿ. ಇದು ಸತ್ಯಕ್ಕೆ ದೂರವಾದ ಮಾತು.

(ಶ್ರೀ ಎಂ. ನಾಗಪ್ಪ)

ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಅಪ್ಲಿಕೇಷನ್‌ಗಳು ಇನ್ನೂ ಇತ್ಯರ್ಥವಾಗದೆ ಇವೆ ಎಂಬ ಬಗ್ಗೆ ಅಂಕಿಅಂಶಗಳನ್ನು ಒಂದು ಪ್ರಶ್ನೆಗೆ ಉತ್ತರವಾಗಿ ಒದಗಿಸಿಕೊಟ್ಟಿದ್ದೀರಿ. ಈಗ ಒಂದೊಂದು ತಾಲ್ಲೂಕ್‌ನಲ್ಲಿ ಒಬ್ಬೊಬ್ಬ ಮ್ಯಾಜಿಸ್ಟ್ರೇಟ್ ಇದ್ದಾರೆ. ಈಗ ಕೆಲವು ತಾಲ್ಲೂಕ್‌ಗಳಲ್ಲಿ 70—80 ಅಪ್ಲಿಕೇಷನ್‌ಗಳು ಪೆಂಡಿಂಗ್ ಇದ್ದರೆ ಇನ್ನೂ ಕೆಲವು ತಾಲ್ಲೂಕ್‌ಗಳಲ್ಲಿ 94,883 ರಿಂದ ಹಿಡಿದು 1,39,613 ಅಪ್ಲಿಕೇಷನ್‌ಗಳವರೆಗೆ ಪೆಂಡಿಂಗ್ ಇವೆ. ಇಂತಹ ಕಡೆ ಮುನ್ಸೀಫ್‌ಗೆ ಅಧಿಕಾರ ಕೊಟ್ಟರೂ ಕೂಡ ಜಾಗ್ರತೆ ಕೆಲಸವಾಗುವುದಿಲ್ಲ. ಏಕೆಂದರೆ ಅವರಿಗೆ ಮಾಮೂಲಿ ಕೆಲಸ ಬೇರೆ ಇರುತ್ತದೆ. ಅದರ ಜೊತೆಗೆ ಈ ಕೆಲಸವನ್ನು ಮಾಡಬೇಕಾಗುತ್ತದೆ. ಆದ್ದರಿಂದ ಈ ಭೂಸುಧಾರಣೆ ಜಾರಿಗೆ ಬರಲು ಇನ್ನೂ 8—10 ವರ್ಷಗಳು ಆಗಬಹುದು. ಇದನ್ನೆಲ್ಲಾ ಸರ್ಕಾರದವರು ಕೂಲಂಕುಷವಾಗಿ ವಿಚಾರಮಾಡಬೇಕೆಂದು ಹೇಳುತ್ತೇನೆ.

ಇನ್ನು ಎಕರೆ, ಗುಂಟೆ ಲೆಕ್ಕದಲ್ಲಿ ಜಮೀನನ್ನು ಅಳತೆ ಮಾಡುತ್ತಿದ್ದುದನ್ನು ಇನ್ನು ಮುಂದೆ ಎಕ್ಟಾರ್ ಲೆಕ್ಕದಲ್ಲಿ ಅಳತೆ ಮಾಡುವ ಬಗ್ಗೆ ಒಂದು ತಿದ್ದುಪಡಿಯನ್ನು ತಂದಿದ್ದೀರಿ. ಅಂದರೆ ಮೆಟ್ರಿಕ್ ಪದ್ಧತಿಯನ್ನು ಜಾರಿಗೆ ತರಲು ಹೊರಟಿದ್ದೀರಿ. ಈಗ ಆಡಳಿತ ನಡೆಸುತ್ತಿರುವ ಸಿಂಡಿಕೇಟ್ ಕಾಂಗ್ರೆಸ್‌ನವರು ಪ್ರಗತಿಪರರಿದ್ದಾರೆ, ಸೀಲಿಂಗ್ ಲಿಮಿಟ್‌ನ್ನು ಕಡಿಮೆ ಮಾಡುತ್ತಾರೆಂದು ನಾನು ತಿಳಿದಿದ್ದೆ: ಆದರೆ ಇದನ್ನು ಕಡಿಮೆ ಮಾಡಿಲ್ಲ. ಒಂದು ರೂಪಾಯಿಗೆ 100 ಪೈಸೆ ಎನ್ನುವ ಬದಲು 16 ಆಣೆಗೆ 100 ಪೈಸೆ ಎನ್ನುವಂತೆ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ ಅಷ್ಟೆ. ಇವತ್ತಿನ ದಿವಸ ನಿರುದ್ಯೋಗದ ಸಮಸ್ಯೆ ಜಾಸ್ತಿಯಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿಯೂ ಕೂಡ ಕೂಲಿಗಾರರಿಗೆ ಕೆಲಸ ಸಿಗುತ್ತಿಲ್ಲ. ಸೀಲಿಂಗ್ ಲಿಮಿಟ್‌ನ್ನು ಕಡಿಮೆ ಮಾಡಿದ್ದರೆ ಹೆಚ್ಚಿನ ಜನರಿಗೆ ಜಮೀನನ್ನು ಹಂಚುವುದಕ್ಕೆ ಸಾಧ್ಯವಾಗುತ್ತಿತ್ತು. ವ್ಯವಸಾಯದ ಬಗ್ಗೆ ಡಿಗ್ರಿ ಪಡೆದುಕೊಂಡಿರುವ ಪದವೀಧರರಿಗೆ ಕೂಡ ಹೆಚ್ಚಿನ ಭೂಮಿಯನ್ನು ಹಂಚಿಕೊಡುವುದಕ್ಕೆ ಸಾಧ್ಯವಾಗುತ್ತಿತ್ತು. ಸೀಲಿಂಗ್ ಲಿಮಿಟನ್ನು ಕಡಿಮೆ ಮಾಡದಿದ್ದರೆ ದಿನದಿಂದ ದಿನಕ್ಕೆ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುತ್ತದೆ. ಈ ಕಾರಣದಿಂದಲೇ ನಾನು ಸೀಲಿಂಗ್ ಲಿಮಿಟನ್ನು ಕಡಿಮೆ ಮಾಡುವ ಬಗ್ಗೆ ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಅದನ್ನು ಸರ್ಕಾರದವರು ಒಪ್ಪುತ್ತಾರೆಂದು ನಾನು ತಿಳಿದುಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ರತ್ನಕುಮಾರ್ ಕಟ್ಟೇಮಾರ್ (ಮೂಡಬಿದ್ರಿ).—ಮಾನ್ಯ ಅಧ್ಯಕ್ಷರೇ, ಇವತ್ತು ಭೂಸುಧಾರಣೆ ಕಾನೂನಿಗೆ ತಿದ್ದುಪಡಿಯನ್ನು ಎಲ್ಲರ ಪ್ರಯೋಜನಕ್ಕೆ ಬರುವಂತೆ ತಂದಿದ್ದೇವೆಂದು ಹೇಳಿದ್ದಾರೆ. ನಮ್ಮ ದಕ್ಷಿಣಕನ್ನಡ ಜಿಲ್ಲೆಯಿಂದ ರೈತವರ್ಗದಿಂದ ಮತ್ತು ಭೂಮಾಲೀಕರ ವರ್ಗದಿಂದ ಸರ್ಕಾರಕ್ಕೆ ಬೇಕಾದಷ್ಟು ಸೂಚನೆಗಳನ್ನು ಕಳಿಸಿಕೊಟ್ಟಿದ್ದೇವೆ. ಆ ಒಂದು ಸೂಚನೆಗಳ ಬಗ್ಗೆ ಯಾವ ಒಂದು ತಿದ್ದುಪಡಿಯನ್ನೂ ಸಹ ಸರ್ಕಾರದವರು ಇವತ್ತಿನದಿವಸ ತಂದಿಲ್ಲ. ಚುನಾವಣೆಯ ದೃಷ್ಟಿಯಿಂದ ಜನತೆಯನ್ನು ಸ್ವಲ್ಪ ಸಮಾಧಾನ ಮಾಡುವುದಕ್ಕೆ ಒಂದು ಆರ್ಡಿನೆನ್ಸ್ ಪಾಸ್ ಮಾಡಿಸಿ ಆ ಬಗ್ಗೆ ಈಗ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ. ಒಕ್ಕಲಿಗರಿಗಾಗಲೀ ಭೂಮಾಲೀಕರಿಗಾಗಲೀ ಪ್ರಯೋಜನವಾಗುವಂಥ ತಿದ್ದುಪಡಿಯನ್ನು ಇವರು ತರಲಿಲ್ಲ. ಈ ಬಗ್ಗೆ ಒಂದು ಉನ್ನತ ಮಟ್ಟದ ಕಮಿಟಿ ರಚನೆಯಾಗಬೇಕೆಂದು ನಾವು ಕೇಳಿಕೊಂಡಿದ್ದೇವೆ. ಈ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳಾಗಲೀ ಸರ್ಕಾರದವರಾಗಲೀ ಇನ್ನೂ ಆಲೋಚನೆ ಮಾಡಿಲ್ಲ. ಇದು ಬೇಸರ ಸಂಗತಿ ಎಂದು ಹೇಳಬಹುದು. ಚಾಲುಗೇಣಿದಾರರಿಗೆ ಯಾವ ರೀತಿ ಹಕ್ಕು ಉಂಟೋ ಅದರಂತೆ ಸರ್ಕಾರದವರು ಪ್ರತಿಯೊಬ್ಬರಿಗೂ ಕೂಡ ರಕ್ಷಣೆ ಕೊಟ್ಟಿಲ್ಲ. ಮೂರು ವಿಚಾರಗಳನ್ನು ಸರ್ಕಾರದವರು ಪರಿಶೀಲಿಸಬೇಕೆಂದು ಕೊಟ್ಟಿದ್ದೇವೆ. ಒಂದನೆಯದು ಎಂದರೆ ಯಾರು ಭೂಮಾಲೀಕರು ಇದ್ದಾರೋ ಅವರ ಜಮೀನಿನ ಗೇಣಿಯ ಹಕ್ಕನ್ನು ಅವರಿಗೇ ಬಿಟ್ಟುಕೊಡಬೇಕು ಇಲ್ಲದಿದ್ದರೆ ಆ ಕುಟುಂಬದಲ್ಲಿರುವ ಜನರಿಗೆ ಸೀಲಿಂಗ್ ಲಿಮಿಟ್ ಮಾಡಿ ಜಮೀನನ್ನು ಸಾಗುವಳಿಗಾಗಿ ಬಿಟ್ಟುಕೊಡಬೇಕು. ಎರಡನೆಯದು ಎಂದರೆ ಹೆಚ್ಚುವರಿ ಜಮೀನನ್ನು ಭೂಮಾಲಿಕರಿಂದ ಪಡೆದುಕೊಂಡರೆ ಆ ಜಮೀನಿಗೆ ಮಾರ್ಕೆಟ್ ಧಾರಣೆಯಲ್ಲಿ ನಗದು ಪರಿಹಾರ ಕೊಡಬೇಕು. ಮೂರನೆಯದು ಎಂದರೆ ಗೇಣಿದಾರರಿಂದ ಭೂಮಾಲೀಕರಿಗೆ ಗೇಣಿ ಬರುವಂತೆ ಮಾಡಬೇಕು. ಇವತ್ತು ಸಣ್ಣ ಹಿಡುವಳಿದಾರರಿಂದ ಹಿಡಿದು ದೊಡ್ಡ ಹಿಡುವಳಿದಾರರವರೆಗೆ ಯಾರೂ ಕೂಡ ಭೂಮಾಲೀಕರಿಗೆ ಒಂದು ಕವಡೆಯಷ್ಟು ಕೂಡ ಗೇಣಿಯನ್ನು ಕೊಡುತ್ತಿಲ್ಲ. ಇದರಿಂದ ಭೂಮಾಲೀಕರು ಸಾಲ ಮಾಡಿಯಾದರೂ ಕೂಡ ಕಂದಾಯವನ್ನು ಕಟ್ಟಬೇಕಾಗಿದೆ. ಅಲ್ಪಸ್ವಲ್ಪ ಜಮೀನು ಇರುವವರಿಗೆ ಕಂದಾಯ ಕಟ್ಟುವುದಕ್ಕೆ ಸಾಧ್ಯವಿಲ್ಲವಾಗಿದೆ. ಈ ವಿಚಾರವನ್ನು ಮಾನ್ಯ ಕಂದಾಯ ಮಂತ್ರಿಗಳು ಸಹ ಒಪ್ಪಿಕೊಂಡಿದ್ದಾರೆ. ಕೆಲವು

ಜಮೀನ್‌ದಾರರು ಮಾನ್ಯ ಮಂತ್ರಿಗಳ ಹತ್ತಿರ ಹೋಗಿ ಇರುವ ಕಷ್ಟಗಳನ್ನು ಹೇಳಿಕೊಂಡಾಗ ಅವರು ಸಹ ಪರಿಶೀಲಿಸುವುದಾಗಿ ಹೇಳಿದ್ದರು. ಆದರೆ ಭೂಮಾಲೀಕರಿಗೆ ಯಾವ ಪರಿಹಾರವನ್ನು ಸಹ ಕೊಟ್ಟಿಲ್ಲ. ಇದೇ ಪರಿಸ್ಥಿತಿ ಇನ್ನು ಮುಂದೆಯೂ ಮುಂದುವರೆದರೆ ಗಂಭೀರ ಪರಿಸ್ಥಿತಿ ಉಂಟಾಗುತ್ತದೆ. ಕೊನೆಗೆ ಇದು ಎಲ್ಲಿಗೆ ಬರುತ್ತದೆ ಎಂದರೆ ಇಡೀ ರಾಜ್ಯದಲ್ಲಿ ಅರಾಜಕತೆ, ಅನ್ಯಾಯ ಮತ್ತು ಅತ್ಯಾಚಾರ ನಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇವತ್ತಿನ ದಿವಸ ಭೂಮಾಲೀಕರಿಗೂ ಮತ್ತು ಒಕ್ಕಲಿಗರಿಗೂ ಈ ಸರ್ಕಾರದ ಮೇಲೆ ನಂಬಿಕೆ ಇಲ್ಲವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಭೂಸುಧಾರಣಾ ಕಾನೂನನು ತಪ್ಪು ಇದ್ದಲ್ಲಿ ತಿದ್ದುಪಡಿ ಮಾಡಲು ಒಂದು ಉನ್ನತಮಟ್ಟದ ಕಮಿಟಿಯನ್ನು ಮಾಡುವುದು ಒಳ್ಳೆಯದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri H. SIDDAVEERAPPA (Harihar).—Sir, I am only asking a clarification from the Hon'ble Revenue Minister. What is worrying me having gone through this Bill, not once but twice, is, what are the compelling reasons for him to change the standard acre into Hectares and areas. I saw the Kannada translation also. There also, the same word "area" is used. I do not know what he means thereby. If the Minister has any commonsense, he may kindly think what effect these words will have on the promotion of the objective he has in mind in bringing this amending Bill. This Bill was introduced by an ordinance. What is it they have done ? If they want to introduce the metric system, it is all right. But, do they remember that when the metric system was introduced in coinage, for some years until people got accustomed to it, both the systems were in vogue, and gradually after some time when people became accustomed it came into full force on a particular day. Up to this day, in many parts of our State our people know the measurements in acres and guntas and acres and cents, and not ares. All our revenue records like the record of rights, survey settlement records and other documents, etc., should be found only in acres and not in metric system. There are hardly one lakh and more cases. What you could have done is not to trouble yourselves. Because the Planning Commission said you should fall in line with metric ; system you could have introduced a legislation to the effect that all the records must be brought under the revenue system within a particular period say five years or if you can manage the affairs more efficiently say within three years, till then you could have kept all these things as they stand. What are our people, how do they know hectares and ares. I could not follow what two standard or one standard acre mean. To understand the meaning I had to go to the dictionary, I had to consult an expert mathematician and it took two days for me to find out what one hectare means. You say one hectare is equal to 2.74 acres or 100 ares. How are we to find it out ? Supposing I have 4 acres which might be equal to 1,000 ares or so. I have to apply for making a change in the records If there were to be any dispute about this calculation, the matter has to be taken to the Court. Instead of bringing in land reforms you are creating a set back which will give room for the lawyers to earn money. I therefore appeal to the Hon. Minister, in the interest of the ryots, to delete this particular clause. There is nothing spectacular about this. You have

(SRI H. SIDDAVEERAPPA)

not tried to promote the socialistic view of the thing. At least this will hinder us and bring in endless litigations. I appeal to keep off this metric system and delete this clause where you want to introduce these hectares and ares otherwise you will not be serving the public cause.

†ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಸನ್ಮಾನ್ಯ ಸಭಾಧ್ಯಕ್ಷರೇ, ಇವೊತ್ತಿನ ದಿವಸ ನಮ್ಮ ಎದುರಿಗೆ ಮೈಸೂರು ಲ್ಯಾಂಡ್ ರಿಫಾರಮ್ಸ್ ತಿದ್ದುಪಡಿ ಮಸೂದೆಯನ್ನು ಇಟ್ಟಿದ್ದಾರೆ. ಈ ಕಾಯಿದೆಯ ರೂಪರೇಷೆಗಳು ಇದರ ತಾತ್ವಿಕ ಧೋರಣೆ ಇವುಗಳು ಜನತೆಯ ಹಿತದೃಷ್ಟಿಯಿಂದ ಇರಬೇಕು ಎನ್ನುವ ವಾದವನ್ನು ಎಲ್ಲರೂ ಒಪ್ಪುವಾಗ ಸರ್ಕಾರದ ಕಡೆಯಿಂದ ಬಹಳ ಒಳ್ಳೆಯ ನಿರೀಕ್ಷಣೆ ಇದ್ದರೂ ಕೂಡ ನಾವು ನಿರೀಕ್ಷಿಸಿದ ರೂಪರೇಷೆಗಳು ಈ ಸಭೆಯ ಮುಂದೆ ಬರಲಿಲ್ಲ. ನೆಚ್ಚಿದ ಎಮ್ಮೆ ಕೋಣನನ್ನು ಈಯಿತಲ್ಲಾ! ಎನ್ನುವ ಹಾಗೆ ಸರ್ಕಾರದವರು ಈಗ ಈ ಮಸೂದೆಯನ್ನು ಈ ಸಭೆಯ ಮುಂದೆ ತಂದಿದ್ದಾರೆ. ಶ್ರೀಮಾನ್ ಸಿದ್ಧವೀರಪ್ಪನವರು ಮತ್ತು ಶ್ರೀಮಾನ್ ನಾಗಪ್ಪನವರು ಈ ಮಸೂದೆಯ ಮೇಲೆ ಮಾತನಾಡುತ್ತಾ ಬಹಳ ಚೆನ್ನಾಗಿ ಹೇಳಿದ್ದಾರೆ. ಯಾವುದೇ ಒಂದು ಕಾಯಿದೆಯನ್ನು ತರುವಾಗಲೂ ಕೂಡ ಮೈಸೂರು ಸರ್ಕಾರದವರು ಮುಂದಿನ ಯೋಚನೆಯನ್ನೇ ಮಾಡುವುದಿಲ್ಲ. ಸರ್ಕಾರದವರಿಗೆ ಯೋಚನೆಯ ಅಭಾವ ಬಹಳ ಇದೆ ಎಂದು ಅನಿಸುತ್ತದೆ. ಕಾಯಿದೆಯನ್ನು ಮಾಡಬೇಕು ಎಂದು ಅವರ ಮನಸ್ಸಿನಲ್ಲಿ ಬಂದಾಕ್ಷಣಕ್ಕೇ ಯಾವುದೋ ಒಂದು ರೂಪರೇಷೆಯಲ್ಲಿ ಸರ್ಕಾರದ ರೊತಕ್ಕದಿಂದ ಅದು ಪ್ರಿಂಟಾಗುತ್ತದೆ. ಅವರು ಹೇಳಿದಂತೆ ರಾಜ್ಯಪಾಲರ ಬಾಯಲ್ಲಿ ಕೂಡ ಆರ್ಡಿನೆನ್ಸ್ ಹೊರಡಿಸಿದ್ದೇವೆ ಎಂದು ಹೇಳಿಸುವಂತಹ ಮನೋಭೂಮಿಕೆ ಸರ್ಕಾರದಲ್ಲಿ ಬೆಳೆದು ಬಂದಿದೆ. ಈ ರೀತಿ ಮಾಡತಕ್ಕದ್ದು ಒಂದಲ್ಲ ಎರಡಲ್ಲ, ಅನೇಕ ವಿಷಯಗಳಲ್ಲಿ ಈ ರೀತಿ ಮಾಡಿರುವುದು ನಮಗೆ ಕಂಡು ಬಂದಿದೆ. ಪ್ರತಿಯೊಂದು ತಿದ್ದುಪಡಿಯನ್ನು ಕೂಲಂಕಷವಾಗಿ ವಿಚಾರ ಮಾಡಿದರೆ ಎಳ್ಳಷ್ಟೂ ಇದರ ಅವಶ್ಯಕತೆ ಇಲ್ಲ ಎಂದು ಪ್ರತಿಯೊಬ್ಬರೂ ಹೇಳಬಹುದು. ಸರ್ಕಾರದವರು ಹೇಳುತ್ತಾರೆ ನಾವು ಇವೊತ್ತಿನ ದಿವಸ ಭೂಸುಧಾರಣೆಯನ್ನು ತ್ವರಿತವಾಗಿ ಜಾರಿಗೆ ತರುವ ದೃಷ್ಟಿಯಿಂದ ಲ್ಯಾಂಡ್ ಟ್ರಿಬ್ಯೂನಲ್‌ಗಳನ್ನು ನಿರ್ಮಾಣ ಮಾಡಿದ್ದರೂ ಕೂಡ ಆ ಟ್ರಿಬ್ಯೂನಲ್‌ಗಳ ಮುಂದೆ ರಿಜಂಷನ್ ಅಪ್ಲಿಕೇಷನ್‌ಗಳು ಮತ್ತು ಗೇಣಿ ವಸೂಲಿ ಅಪ್ಲಿಕೇಷನ್‌ಗಳು ಜಾಸ್ತಿ ಇರುವುದರಿಂದ ಅವುಗಳನ್ನು ಇತ್ಯರ್ಥ ಮಾಡುವುದಕ್ಕೆ ತಡವಾಗುತ್ತಿದೆ, ಆದ್ದರಿಂದ ಅವುಗಳ ಬಗ್ಗೆ ನ್ಯಾಯ ನಿರ್ಣಯವನ್ನು ತ್ವರಿತಗೊಳಿಸಿ ರೈತಾಪಿ ಜನಗಳಿಗೆ ಹೆಚ್ಚಿನ ಸೌಕರ್ಯವನ್ನು ಕೊಡುವುದಕ್ಕೋಸ್ಕರ ಆರ್ಡಿನೆನ್ಸ್ ಹೊರಡಿಸಿದ್ದೇವೆ ಎಂದು ಮಾನ್ಯ ರೆವಿನ್ಯೂ ಮಂತ್ರಿಗಳು ತಮ್ಮ ಪೀಠಿಕಾ ಭಾಷಣದಲ್ಲಿ ಹೇಳಿದ್ದಾರೆ. ಇವರು ಯಾವೊತ್ತು ಆರ್ಡಿನೆನ್ಸ್ ಹೊರಡಿಸಿದ್ದಾರೆಯೋ ಅಲ್ಲಿಯತನಕ ಎಷ್ಟು ಜನರು ಮ್ಯಾಜಿಸ್ಟ್ರೇಟ್ ಕೋರ್ಟಿಗಾಗಲೀ ಸಿವಿಲ್ ಜಡ್ಜ್ ಕೋರ್ಟುಗಳಿಗಾಗಲೀ ಕೇಸುಗಳನ್ನು ಕೊಟ್ಟಿದ್ದಾರೆ; ಎಷ್ಟು ಕೇಸುಗಳನ್ನು ನಡೆಸಿದ್ದಾರೆ ಎನ್ನುವುದನ್ನು ವಿವೇಚನೆ ಮಾಡಿ ನೋಡಿದ್ದಾರೆಯೇ? ಇಂಥಾ ಟ್ರಿಬ್ಯೂನಲ್‌ನಲ್ಲಿ ಇತ್ಯರ್ಥವಾಗತಕ್ಕಂಥ ಕೇಸುಗಳನ್ನು ಮುನ್ಸೀಫ್ ಕೋರ್ಟು ಮತ್ತು ತಹಶೀಲ್ದಾರರಿಗೆ ರೆಫರ್ ಮಾಡುವರಿಂದ, ವಹಿಸುವದರಿಂದ ಮತ್ತಷ್ಟು ಕಾಂಪ್ಲಿಕೇಷನ್ ಆಗುತ್ತದೆ. ನೀವು ನಿಮ್ಮ ಪಕ್ಷಕ್ಕೆ ಒಪ್ಪುವ ಹಾಗೆ ಸಿಂಡಿಕೇಟ್ ಪಕ್ಷ ಎಂದರೆ ಹಣವುಳ್ಳವರ ಪಕ್ಷ ಎನ್ನುವುದಕ್ಕೆ ಯೋಗ್ಯರಾಗಿದ್ದೀರಿ. 1956 ನೇ ಇಸವಿಯಿಂದಲೂ ಇಲ್ಲಿಯವರೆಗೆ ಬರೀ ಕಾಯಿದೆಯನ್ನು ಮಾತ್ರ ಮಾಡಿದ್ದೀರಿ, ಈ ಕಾಯಿದೆಯನ್ನು ಆಚರಣೆಗೆ ತರುವ ಪ್ರಯತ್ನವನ್ನು ನೀವು ಮಾಡಿಲ್ಲ. ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳಿದಂತಹ ನೀವು ಯಾವ ತತ್ವವನ್ನು ಅನುಸರಿಸಿಕೊಂಡು ಬರುತ್ತಿದ್ದೀರಿ, ಯಾವರೀತಿಯ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಸ್ಥಾಪಸೆ ಮಾಡಿದ್ದೀರಿ? ಮಾನ್ಯ ಮುರಾರಜಿ ದೇಸಾಯಿ ಅವರು 1948 ನೇ ಇಸವಿಯ ಪೂರ್ವದಲ್ಲಿ ಬೊಂಬಾಯಿ ಟೆನೆನ್ಸಿ ಆಕ್ಟಿನಲ್ಲಿ 48 ಎಕರೆ ಜಮೀನನ್ನು ಶರವಾವಧಿ ಗೊತ್ತು ಮಾಡಿದ್ದಾರೆ. ಅದು ಇವೊತ್ತು ಯಾವರೀತಿ ಕಾಣುತ್ತದೆ? ಇದು ಪ್ರಗತಿಪರ ಸಾಧನೆಯಲ್ಲ. ಈ ತಿದ್ದುಪಡಿಯಿಂದ ಮತ್ತಷ್ಟು ಗೊಂದಲವುಂಟಾಗಿದೆ. ಸಮಾಜವಾದವನ್ನು ಕೈಬಿಡಲಾಗಿದೆ. ಹೀಗಿರುವಾಗ ನಿಮ್ಮನ್ನು ಯಾವ ರೀತಿಯಿಂದ ಕರೆಯೋಣ? ನಿಮ್ಮನ್ನು ಸಿಂಡಿಕೇಟ್ ಎಂದು ಕರೆಯಬೇಕೇ ಅಥವಾ ಕ್ಯಾಪಿಟಲಿಸ್ಟ್ ಎಂದು ಕರೆಯಬೇಕೇ ಅಥವಾ ರೈತರನ್ನು ಹಾಳುಮಾಡುವ ಭೂಪರು ಎಂದು ಕರೆಯಬೇಕೇ? ಆದಷ್ಟು ಜಾಗತ್ರೆ ಭೂಸುಧಾರಣೆ ಕಾಯಿದೆಯನ್ನು ಪೂರ್ತಿಯಾಗಿ ಅಮಲಿನಲ್ಲಿ ತಂದು ರೈತನಿಗೆ ಕಲ್ಯಾಣವನ್ನುಂಟುಮಾಡುವುದಕ್ಕೆ

ನಿಮಗೆ ಇರತಕ್ಕ ಅಡ್ಡಿ ಆತಂಕಗಳು ಏನು? ಈ ಬಗ್ಗೆ ವಿವೇಚನೆ ಮಾಡಿ ನೋಡಿ ಎಂದು ನಾನು ತಮ್ಮನ್ನು ಕೇಳುತ್ತೇನೆ. ಇವೊತ್ತಿನ ದಿವಸ ಟೆನೆನ್ಸಿ ಆಕ್ಟಿನಲ್ಲಿ ಲ್ಯಾಂಡ್ ಕನ್‌ಸಾಲಿಡೇಷನ್ ಕಾಯಿದೆಯ ರೂಪರೇಷೆಗಳೇ ಇದರಲ್ಲಿ ಇಲ್ಲ. ಈ ಕಾಯಿದೆಯನ್ನು ಯಾವರೀತಿ ಚಲಾವಣೆ ಮಾಡುತ್ತೀರಿ? ಜನರ ಕಣ್ಣಿಗೆ ಮಣ್ಣು ಎರಚಿ ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಜನತೆಯ ಎದುರಿನಲ್ಲಿ ಬರೀ ನಾಟಕವಾಡುತ್ತೀರಾ ಎಂದು ನಾನು ಕೇಳುತ್ತೇನೆ. ಇವೊತ್ತಿನ ದಿವಸ ಈ ಕಾಯಿದೆಯಲ್ಲಿ ಶ್ರೀಮಾನ್ ಸಿದ್ಧವೀರಪ್ಪನವರು ಹೇಳಿದಹಾಗೆ ಜಮೀನಿನ ಲೆಕ್ಕವನ್ನು ಹೆಕ್ಟಾರ್ಸ್ ಅಂಡ್ ಏರ್ಸ್ ಕ್ರಮವನ್ನು ಜಾರಿಗೆ ತರಲು ಉದ್ದೇಶಿಸಿರುವುದು ಸರಿಯಲ್ಲ. ರೈತರಿಗೆ ಜನಗಳಿಗೆ ತಿಳಿಯುವ ಹಾಗೆ ಹಿಂದೆ ಇದ್ದಹಾಗೆ ಮಾರ್ಪಾಡು ಮಾಡಬೇಕು. ಈಗ ನೀವು ಮಾಡಿರತಕ್ಕದ್ದು ವಕೀಲರಿಗೆ ಮತ್ತು ಸೆಕ್ರೆಟೇರಿಯಟ್‌ನಲ್ಲಿ ಎಷ್ಟು ಜನಗಳಿಗೆ ಅರ್ಥವಾಗುತ್ತದೆ ಎಂಬುದನ್ನು ನೋಡಿಕೊಳ್ಳಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಇವರಿಗೆ ಸಾಕಷ್ಟು ಕೆಲಸ ಇದೆ. 15–20 ವರ್ಷಗಳ ಕೇಸುಗಳು ಇನ್ನೂ ನಡೆಯುತ್ತಿವೆ. ಮಂತ್ರಿಯವರೂ ವಕೀಲರಾಗಿರುವುದರಿಂದ, ಅವರು ಮಂತ್ರಿಪದವಿಯಿಂದ ಹೋದ ಮೇಲೂ ಅದು ಇರಲಿ ಎಂದು ಮಾಡಿದರೋ ಎಂದು ಆಶ್ಚರ್ಯಪಡಬೇಕಾಗಿದೆ. ರೈತರಿಗೆ ಇದರಿಂದ ಅನುಕೂಲವಾಗಬಾರದು, ಕೇವಲ ಲ್ಯಾಂಡ್ ಲಾರ್ಡುಗಳಿಗೆ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದ ಆಗಾಗ್ಯೆ ಅಮೆಂಡ್‌ಮೆಂಟ್ ತಂದು ನಿಜವಾದ ಕಾಯಿದೆಯ ಅಸ್ತಿತ್ವಕ್ಕೆ ಅಡ್ಡಿ ತರುತ್ತಿದ್ದಾರೆ. ಇವತ್ತು ಪರಮಾವಧಿ ಹಿಡುವಳಿ ಗೊತ್ತುಮಾಡುವುದರಲ್ಲಿ ಯಾವ ರೀತಿ ಪ್ರಗತಿಯನ್ನು ಸಾಧಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ? ಈ ಸ್ಟ್ಯಾಂಡರ್ಡ್ ಎಕರೆಯಲ್ಲಿ 7 ತರಗತಿಗಳನ್ನು ಮಾಡಿದ್ದೀರಿ. ಅಲ್ಲಿಯ ಮಳೆಯ, ಹವಾಮಾನದ ಸ್ಥಿತಿಯನ್ನು ನೋಡಿಕೊಂಡು ನಿರ್ಧಾರ ಮಾಡುವುದು ಯಾವಾಗ? ಇದು ಜನರಿಗೆ ತಿಳಿಯುವುದು ಯಾವಾಗ? ಇವೆಲ್ಲವನ್ನೂ ಆಲೋಚನೆ ಮಾಡಬೇಕು. ಇನ್ನು ಕ್ಲಾಸ್ 7 ರಲ್ಲಿ ಹೆಕ್ಟರ್ಸ್ ಪ್ರಕಾರ ಲೆಕ್ಕ ಹಾಕಿದ್ದೀರಿ. 200 ಎಕರೆಗೆ ಪರಮಾವಧಿ ಇಟ್ಟಿದ್ದೀರಿ. ಇದರಿಂದ ಮಹಾರಾಜರು ಬಿಟ್ಟು ಉಳಿದವರೆಲ್ಲರೂ ನಿಮ್ಮ ಕಾಯಿದೆ ಒಳ್ಳೆಯ ದಾರಿಯೆಂದು ಅಭಿನಂದನೆ ಮಾಡಬಹುದು. ಇದರಿಂದ ರೈತರ ಕಲ್ಯಾಣ ಎಂದು ಆಗುತ್ತದೆ ಎಂದು ಕೇಳುತ್ತಿದ್ದೇನೆ. ಇದನ್ನು ಮಾನ್ಯ ಕಂದಾಯ ಮಂತ್ರಿಯವರು ವಿವೇಚನೆ ಮಾಡಬೇಕು. ಇವರಿಗೆ ಮೊರಾರ್ಜಿಯವರು ಬಾಂಬೇ ಸರ್ಕಾರದಲ್ಲಿದ್ದಾಗ ಅಸೆಂಬ್ಲಿ ಮೆಂಬರ್ ಆಗಿ ಕೆಲಸ ಮಾಡಿ ಅಲ್ಲಿ ಯಾವ ತರ ಟೆನೆನ್ಸಿ ಕಾಯಿದೆಯನ್ನು ಮಾಡಿದ್ದಾರೆಂಬುದು ಗೊತ್ತಿದೆ. ಅಲ್ಲಿ 42 ಎಕರೆ ಮಾತ್ರ ಇಟ್ಟಿದ್ದರು. ಆದರೆ ಇಲ್ಲಿ 200 ಎಕರೆಗೆ ಪ್ರಯತ್ನ ಮಾಡಿದ್ದಾರೆ. ಇದು ಸೂಕ್ತವಲ್ಲವೆಂದು ನಾನು ಹೇಳಬೇಕಾಗಿದೆ. ದೇಶದ ಎಲ್ಲಾ ಭಾಗಗಳಲ್ಲಿಯೂ ಸಮಾನವಾದ ಕಾಯಿದೆಗಳನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಒಂದು ಕಡೆ ಒಂದು ರೀತಿ, ಇನ್ನೊಂದು ಕಡೆ ಬೇರೆಯೇ ರೀತಿಯಲ್ಲಿ ಮಾಡಬಾರದು. ಇದನ್ನು ಮೈಸೂರು ಸರ್ಕಾರದವರು ಮಾಡಬಾರದು ಎಂದು ಎಚ್ಚರಿಕೆ ಕೊಡುತ್ತೇನೆ. ಮತ್ತು ಈ ಸರ್ಕಾರ ಇರುವವರೆಗೆ ನಿಜವಾಗಿಯೂ ರೈತರ ಕಲ್ಯಾಣವಾಗುವುದಿಲ್ಲ. ಲ್ಯಾಂಡ್ ಲಾರ್ಡ್‌ಗಳ ಕಲ್ಯಾಣವೂ ಇಲ್ಲ. ಮತ್ತು ಈ ಗೇಣಿದಾರರ ಕಲ್ಯಾಣವೂ ಆಗುವುದಿಲ್ಲ. ಇವರಿಗೆ ಇವತ್ತು ಬೇಕಾಗಿರುವುದು, ಒಂದೇ—ನಾವು ನಮ್ಮ ಅಧಿಕಾರವನ್ನು ಮುಂದುವರಿಸಿಕೊಂಡು ಹೋಗುವುದು ಹೇಗೆ?—ಎಂದು. ಅದರಿಂದ ಜನತೆಗೆ ದ್ರೋಹ ಬೇಕಾದರೆ ಆಗಲಿ, ಅಥವಾ ಅನ್ಯಾಯವಾದರೂ ಆಗಲಿ. ಆದರೆ ಅವರಿಗೆ ಅಧಿಕಾರ ಮಾತ್ರ ಮುಂದುವರಿಸಿಕೊಂಡು ಸುಖಪಡಬೇಕಾಗಿದೆ. ಈ ದೃಷ್ಟಿಯಿಂದ ಇಂದು ದೇಶದಲ್ಲಿ ಒಂದು ಕೋಲಾಹಲವೇ ಎದ್ದಿದೆ. ನೀವು ನಿಜವಾಗಿಯೂ ಜನರ ಕಲ್ಯಾಣವನ್ನು ಮಾಡಲು ನಿಮ್ಮ ಮಂತ್ರಿಮಂಡಲಕ್ಕೆ ಆಗುವುದಿಲ್ಲ. ಹಾಗೆ ಅವಕಾಶವಿದ್ದರೆ, ಇವತ್ತು ಕಾಂಗ್ರೆಸ್ಸಿನಲ್ಲೇ ನಿಮ್ಮ ಸಿಂಡಿಕೇಟ್ ನಿರ್ಮಾಣವಾಗಿ, ಇತರರು ಹೊರಗಡೆ ಹೋಗಬೇಕಾದ ಪ್ರಸಂಗ ಏಕೆ ಬರುತ್ತಿತ್ತು? ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದಿರತಕ್ಕ ಈ ಗೇಣಿ ಶಾಸನದ ತಿದ್ದುಪಡಿ ಮಸೂದೆಯನ್ನು ಸಂಪೂರ್ಣವಾಗಿ ವಿರೋಧ ಮಾಡಲು ನಾನು ನಿಂತಿದ್ದೇನೆ. ಈ ಕಾನೂನು 1961 ರಲ್ಲಿ ಕಾನೂನಾದರೂ 2–10-1965 ರಿಂದ, ಅಂದರೆ ಸುಮಾರು 5 ವರ್ಷಗಳ ನಂತರ ಜಾರಿಗೆ ಕೊಡಲ್ಪಟ್ಟಿತ್ತು. ಜಾರಿಗೆ ಕೊಡತಕ್ಕ ತಾರೀಖನ್ನು ಕೂಡ ಬಹಳ ವಿಶೇಷವಾಗಿ ಸರ್ಕಾರ ನಮೂದು ಮಾಡಿದೆ. ಮಹಾತ್ಮ ಗಾಂಧೀಜಿಯವರ ಹುಟ್ಟು ದಿನದಂದು ಶಾಸನವನ್ನು ಜಾರಿಗೆ ಕೊಟ್ಟು, ಭೂಮಿ ಇಲ್ಲವ ರೈತರಿಗೆ, ಗೇಣಿದಾರರಿಗೆ, ಭೂಮಾಲಿಕರಿಗೆ, ಎಲ್ಲರಿಗೂ ಒಂದು ವ್ಯವಸ್ಥೆ ಮಾಡಿ ಭೂಮಿ ಹಂಚಿಕೆ ಮಾಡುತ್ತೇವೆಂದು ಹೇಳಿದರು. ಆದರೆ 2–10–1965 ರಿಂದ ಇವತ್ತಿನವರೆಗೆ, ಅಂದರೆ 2–2–70 ರ ವರೆಗೆ ಸುಮಾರು 4 ತಿದ್ದುಪಡಿಗಳನ್ನು ಈ ಮಸೂದೆಗೆ ತಂದುದು ಸಾಲದೆ, ಈಗ 5 ನೇ ತಿದ್ದುಪಡಿಯನ್ನು ತಂದಿದ್ದಾರೆ. ಮೊದಲು ಯಾವ

(ಶ್ರೀ ಕೆ. ಎಚ್. ರಂಗನಾಥ್)

ಮಸೂದೆ ಇತ್ತೋ, ಅದು ಆಮೂಲಾಗ್ರವಾಗಿ ಬದಲಾವಣೆಯಾಗುತ್ತಾ ಬಂದಿದೆ. ರಾಜ್ಯಪಾಲರ ಭಾಷಣದಲ್ಲಿ ಕೂಡ ಈ ವಿಚಾರವಾಗಿ ಒಂದು ಮಾತನ್ನು ಹೇಳಲಾಗಿದೆ. ಅಲ್ಲಿ ಅವರು ಈ ರೀತಿ ಹೇಳುತ್ತಾರೆ: "My Government has paid close attention to the need for expediting implementation of the land reforms programme in the State" ಇಷ್ಟೇ ಉದ್ದೇಶ ವಿನಹ ಇದಕ್ಕಿಂತ ಮುಂದಿನ ಉದ್ದೇಶವೇನಿಲ್ಲವೆಂಬುದು ನಮ್ಮ ಮುಂದಿಟ್ಟಿರುವ ತಿದ್ದುಪಡಿಯಿಂದ ಅರ್ಥವಾಗುತ್ತದೆ. ಇನ್ನು ಮುಂದೆ ಹೇಳುತ್ತಾರೇನೆಂದರೆ, ಈ ಶಾಸನ ಜಾರಿಗೆ ಬಂದರೆ ಸರ್ಕಾರಕ್ಕೆ ದೊಡ್ಡ ಒಂದು ಹಣಕಾಸಿನ ಇಕ್ಕಟ್ಟಿನ ಪರಿಸ್ಥಿತಿ ಉದ್ಭವವಾಗುತ್ತದೆಂದು ಒಂದು ಹೆದರಿಕೆಯನ್ನು ಇಟ್ಟಿದ್ದಾರೆ. ರಾಜ್ಯಪಾಲರ ಭಾಷಣದ ಮೊದಲು ಕೂಡ ಪತ್ರಿಕೆಗಳಲ್ಲಿ ಕೆಲವಾರು ಸ್ಟೇಟ್‌ಮೆಂಟುಗಳಲ್ಲಿ ಇದನ್ನು ಹೇಳಿದ್ದರು. ಈ ನಾನ್ ರೆಸ್ಯೂಮೇಬಲ್ ಲ್ಯಾಂಡ್ಸ್ ಎಂದು ಏನು ಹೇಳುತ್ತೇವೆ, ಅವುಗಳನ್ನು ರೈತರಿಗೆ ದೊಡ್ಡ ದೊಡ್ಡ ಭೂಮಾಲಿಕರಿಂದ, ತೆಗೆದುಕೊಳ್ಳಬೇಕಾದರೆ, 35–40 ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಯಾವ ಸರ್ಕಾರಕ್ಕೆ ಬ್ಯಾಂಕುಗಳ ರಾಷ್ಟ್ರೀಕರಣದಲ್ಲಿ ನಂಬಿಕೆ ಇಲ್ಲವೋ, ಯಾವ ಸರ್ಕಾರ ಅದು ಸರಿಯಲ್ಲವೆಂದು ಹೇಳಿತ್ತೋ, ಅದೇ ಸರ್ಕಾರ ರಾಷ್ಟ್ರೀಕೃತವಾದಂತಹ ಬ್ಯಾಂಕುಗಳಿಂದ 35–40 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಭೂಮಾಲಿಕರಿಗೆ ಕೊಡತಕ್ಕ ಸಾಹಸ ಮಾಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಕೂಡ ಉತ್ತರದಲ್ಲಿ ಹೇಳಿದ್ದರು. ಭಾರತದಲ್ಲಿ ಎಲ್ಲೂ ಇಂಥ ಕಾನೂನನ್ನು ಮಾಡಿಲ್ಲ, ಗೇಣಿದಾರರಿಗೆ, ಅವರೇ ಮಾಲೀಕತ್ವಕ್ಕೆ ಬರುವಾಗ ಕೊಡಬೇಕಾದ ಹಣ ಇರುವುದಿಲ್ಲ; ಅದಕ್ಕೆ ಅವರ ಪರವಾಗಿ ಸರ್ಕಾರದವರು ಕೊಟ್ಟು ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಈ ಆಕ್ಟಿನ ಸೆಕ್ಷನ್ 14 ರ ಪ್ರಕಾರ ಸರ್ಕಾರ ರಿಸ್ಯೂಂ ಮಾಡತಕ್ಕ ಭೂಮಿಗಳು ಯಾವುದು ಎಂಬುದನ್ನು ಡಿಫೈನ್ ಮಾಡಬೇಕು. 5 ವರ್ಷಗಳಾಗಿದ್ದರೂ, ಇದನ್ನು ನೋಟಿಫೈ ಮಾಡಿದ್ದಾರೆಯೇ? ಸೆಕ್ಷನ್ 65–66 ರಲ್ಲಿ ಸರ್ಪ್ಲಸ್ ಲ್ಯಾಂಡ್ ಎನ್ನತಕ್ಕದ್ದನ್ನು ನಿಗದಿ ಮಾಡಿದ್ದಾರೆಯೆ? ಈ ಕಾನೂನನ್ನು ಆದಷ್ಟು ಜಾಗ್ರತೆ ಜಾರಿಗೆ ಕೊಡಲು ಒಬ್ಬ ಡಿವಿಜನಲ್ ಕಮಿಷನರ್ ಹುದ್ದೆಯ ಅಧಿಕಾರಿಯನ್ನು ಸ್ಪೆಶಲ್ಲಾಗಿ ನೇಮಕ ಮಾಡಿದ್ದಾರೆ. ಸೆಕ್ಷನ್ 66–67 ರ ಪ್ರಕಾರ ಸರ್ಪ್ಲಸ್ ಲ್ಯಾಂಡ್ ಎಷ್ಟೆಂಬುದನ್ನು ನೀವು ರಾಜ್ಯದ ಪ್ರಜೆಗಳ ಮುಂದೆ ಇಟ್ಟಿದ್ದೀರಾ? ಸೆಕ್ಷನ್ 14 ರ ಪ್ರಕಾರ ರೆಸ್ಯೂಮೇಬಲ್ ಲ್ಯಾಂಡ್ ಎಷ್ಟೆಂದು ಹೇಳಿದ್ದೀರಾ? ಮೊನ್ನೆ ಪ್ರಶ್ನೆಗಳು ಬಂದಾಗ ಸುಮಾರು 2 ಲಕ್ಷ ಚಿಲ್ಲರೆ ಅರ್ಜಿಗಳು ಬಂದಿವೆ. ಇಷ್ಟು ರೆಸ್ಯೂಮ್ ಮಾಡುವುದಕ್ಕೆ ಕೇಳಿದ್ದಾರೆ, ಮಿಕ್ಕಿದ್ದು ನಾನ್ ರೆಸ್ಯೂಮೆಬಲ್ ಎಂದು ಹೇಳಿದ್ದಾರೆ. ಇದರಲ್ಲಿ ಎಷ್ಟು ರೆಸ್ಯೂಂ ಆಗಿದೆ, ಎಂದರೆ ಸರ್ಕಾರದ ಉತ್ತರವಿಲ್ಲ. ಮಾನ್ಯ ಕಟ್ಟೀಮಾರರವರು ಹೇಳುತ್ತಾರೇನೆಂದರೆ, ಅವರಿಗೆ ಬರತಕ್ಕ ರೆಂಟ್ ಏನಿದೆ, ಅದು ಕೂಡ ಬರುತ್ತಾ ಇಲ್ಲ, ಎಂದು. ಇವೊತ್ತಿನ ದಿವಸ ಯಾವ ತಾರೀಕಿನಲ್ಲಿ ಗೇಣೀದಾರನು, ಗೊತ್ತಾದ ದಿವಸವೇ ಅವನು ಕಾನೂನು ಪ್ರಕಾರ ಗೇಣಿಯನ್ನು ಕೊಡಬೇಕೆಂದು ನಿಗದಿ ಮಾಡಿದ್ದೀರಾ?

5-00 P.M.

ಈ ಸಂದರ್ಭದಲ್ಲಿ ನಾನು ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ. ಏಕೆಂದರೆ ಇಲ್ಲಿ ಒಂದಷ್ಟು ಕಣ್ಣುಮುಚ್ಚಾಲೆಯ ಆಟ ನಡೆದಿದೆ. ಇಲ್ಲಿ ಮೂರು ಉದ್ದೇಶಗಳಿಗಾಗಿ ಶಾಸನವಿದೆ. ಟಿನೆಂಟಿಗೆ ಫಿಕ್ಸೇಷನ್ ಆಫ್ ಟೆನ್ಯೂರ್ ಮಾಡಿಕೊಡುವುದು ಇದರಲ್ಲಿದೆ. ಇಂತಹ ಸಂದರ್ಭದಲ್ಲಿ ಮೈಸೂರು ರಾಜ್ಯದಲ್ಲಿ ಸುಮಾರು ಒಂದು ಎಕರೆಯಿಂದ 5 ಎಕರೆವರೆಗೆ ಹಿಡುವಳಿದಾರರ ಸಂಖ್ಯೆ ಎಷ್ಟಿದೆಯೆಂಬುದನ್ನು ವಿಚಾರ ಮಾಡಬೇಕಾಗಿದೆ. ಅದರ ಬಗ್ಗೆ ಮಾನ್ಯ ಶ್ರೀ ಜತ್ತಿಯವರ ವರದಿ ಬೇರೆ ಇದೆ. ರಾಜ್ಯದ ಒಟ್ಟು ಭೂಹಿಡುವಳಿದಾರರ ಸಂಖ್ಯೆ ಎಷ್ಟೆಂಬುದನ್ನು ನೋಡಿದರೆ ಒಂದು ಎಕರೆಯಿಂದ 5 ಎಕರೆಯವರೆಗೆ ಇರುವವರು ಶೇಕಡ 47 ರಷ್ಟು ಜನರು ಇದ್ದಾರೆ. 75 ಎಕರೆಯಿಂದ 100 ಎಕರೆಯವರೆಗೆ ಇರುವವರು ದಾಮಾಷಾ ಪ್ರಕಾರ ಶೇಕಡ .05 ರಷ್ಟು ಇದ್ದಾರೆ. ಇನ್ನು 300 ಎಕರೆಗಳಿಂದ 500 ಎಕರೆಗಳವರೆಗೆ ಇರುವವರು ಶೇಕಡ .03 ರಷ್ಟು ಇದ್ದಾರೆ. ಇನ್ನು ಒಂದು ಸಾವಿರ ಎಕರೆಗಳಿಗೆ ಮೇಲೆ ಇರುವ ಜನರು ಶೇಕಡ .005 ರಷ್ಟು ಇದ್ದಾರೆ. ಆದರೂ ಸರ್ಕಾರದವರು ಇಂತಹ ಕಡಿಮೆ ಸಂಖ್ಯೆಯ ಜನರ ಹಿತರಕ್ಷಣೆ ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆಯೇ ಹೊರತು ಒಂದು ಎಕರೆಯಿಂದ 5 ಎಕರೆಗಳವರೆಗೆ ಇರುವಂಥ ಜನರು ಅಂದರೆ ಶೇಕಡ 47 ರಷ್ಟು ಇರುವಂಥವರ ಹಿತರಕ್ಷಣೆಯನ್ನೇನಾದರೂ ಮಾಡಿದ್ದೀರಾ? ಈ ಒಂದು

ಕಾನೂನನ್ನು ಜಾರಿಗೆ ತರುವುದರ ಉದ್ದೇಶವನ್ನು ಬಚ್ಚಿಟ್ಟು ಈಗ ಒಂದು ದೊಡ್ಡ ಗುಲ್ಲನ್ನು ಎಬ್ಬಿಸುತ್ತಿದ್ದಾರೆ. ಇವತ್ತಿನ ದಿವಸ ಅಂತಹ ಕಾನೂನನ್ನು ಜಾರಿಗೆ ಕೊಟ್ಟರೆ ಬರೀ ರೆಸ್ಯೂಮ್ ಮಾಡುವ ಭೂಮಿಗೋಸ್ಕರ 35 ಕೋಟಿ ರೂಪಾಯಿಗಳನ್ನು ಇವರು ಖರ್ಚು ಮಾಡಬೇಕಾಗುತ್ತದೆಂದು ಹೇಳಿದ್ದಾರೆ. ಇನ್ನು ಇಡೀ ಸರ್ಪ್ಲಸ್ ಲ್ಯಾಂಡ್ ಕೊಟ್ಟರೆ ಇನ್ನೆಷ್ಟು ದುಡ್ಡು ಕೊಡಬೇಕಾಗುತ್ತದೋ ಎಂದು ಒಂದು ದೊಡ್ಡ ಗೊಂದಲವನ್ನು ಎಬ್ಬಿಸುತ್ತಿದ್ದಾರೆ. ಆದರೆ ಎರಡು ಸಾವಿರಕ್ಕಿಂತ ಕಡಿಮೆ ಇದ್ದರೆ ನಗದು ಹಣ ಕೊಡುವುದು ಅಥವಾ ಮೇಲೆ ಇದ್ದರೆ ಬಾಂಡುಗಳನ್ನು ಕೊಡುವುದು ಎಂದು ಕಾನೂನಿನಲ್ಲಿದೆ. ಇಂತಹ ಪರಿಸ್ಥಿತಿ ಇರುವಾಗ 35 ಕೋಟಿ ರೂಪಾಯಿಗಳನ್ನು ಏಕೆ ಇದಕ್ಕಾಗಿ ಖರ್ಚುಮಾಡಬೇಕು ? ಕರಾರುವಾಕ್ಕಾಗಿ ಈ ಸಭೆಗೆ ಇದರ ಬಗ್ಗೆ ಉತ್ತರ ಕೊಡಬೇಕು. ಸುಮಾರು 8 ಜಿಲ್ಲೆಗಳಲ್ಲಿಯೂ ಈ ಗೇಣಿದಾರರಿಗೆ ಸಂಬಂಧಪಟ್ಟಂತೆ ಅತಿ ಶೀಘ್ರವಾಗಿ ಇದನ್ನು ವಿಚಾರಮಾಡಬೇಕು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಟೆನೆಂಟ್ ಕಲ್ಟಿವೇಷನ್ ಪರ್ಸೆಂಟೇಜ್ ಸೇಕಡ 8.4 ರಷ್ಟಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಸೇಕಡ 16.9 ರಷ್ಟಿದೆ. ಧಾರವಾಡ ಜಿಲ್ಲೆಯಲ್ಲಿ ಸೇಕಡ 9 ರಷ್ಟಿದೆ. ಬೆಳಗಾಂನಲ್ಲಿ ಸೇಕಡ 13.8 ರಷ್ಟಿದೆ. ಬಿಜಾಪುರದಲ್ಲಿ ಸೇಕಡ 7.2 ರಷ್ಟಿದೆ. ನಾರ್ತ್ ಕೆನರಾದಲ್ಲಿ ಸೇಕಡ 35 ರಷ್ಟಿದೆ. ಸೌತ್ ಕೆನರಾದಲ್ಲಿ ಸೇಕಡ 36 ರಷ್ಟಿದೆ. ಕೂರ್ಗ್‌ನಲ್ಲಿ ಸೇಕಡ 10.1ರಷ್ಟಿದೆ. ಸೆಕ್ಷನ್ 14ರ ಪ್ರಕಾರ ಸರ್ಕಾರದವರು ರೂಲ್ಸ್ ಮಾಡುವುದಕ್ಕೆ ಒಂದು ವರ್ಷ ತೆಗೆದುಕೊಂಡಿದ್ದಾರೆ. ಇನ್ನು ಗ್ರಾಸ್ ಪ್ರಾಸೀಡ್ಸ್ ಎಷ್ಟು ಎನ್ನುವುದನ್ನು ಯಾರು, ಯಾವ ರೀತಿ ನಿಗದಿ ಮಾಡಿದ್ದಾರೆನ್ನುವುದನ್ನು ನೋಟಿಫೈ ಮಾಡುವುದಕ್ಕೆ ಇವರು ಒಂದು ವರ್ಷ ತೆಗೆದುಕೊಂಡಿದ್ದಾರೆ. ಆದ್ದರಿಂದ ಯಾವ್ಯಾವ ತಾರೀಖಿನಲ್ಲಿ ನೋಟಿಫಿಕೇಷನ್ ಇಷ್ಯೂ ಆಗಿದೆಯೆಂಬುದನ್ನು ವಿಚಾರ ಮಾಡಬೇಕು. ಟೆನೆಂಟ್ಸ್ ಭೂಮಿ ಇಲ್ಲದೆ ಎಷ್ಟು ವರ್ಷಗಳವರೆಗೆ ಕಾಯಬೇಕು ? ಹಣವಿಲ್ಲದೆ ಭೂಮಿ ಕಳೆದುಕೊಂಡ ಭೂಮಾಲೀಕ ಎಷ್ಟು ವರ್ಷಗಳವರೆಗೆ ಕಾಯಬೇಕು? ಇದು ಸರಿಯಲ್ಲ. ಇದರಿಂದ ಭೂಮಾಲೀಕರಿಗೆ, ಗೇಣಿದಾರರಿಗೆ, ಭೂಹೀನ ರೈತರಿಗೆ, ಕೂಲಿಗಾರರಿಗೆ ತೊಂದರೆಯಾಗುತ್ತದೆ. ನಮ್ಮ ಅಧಿಕಾರ ಉಳಿಯಬೇಕೆಂಬ ದುರುದ್ದೇಶ ಇವರಿಗೆ ಇದೆಯೆಂದು ನನಗರ್ಥವಾಗುತ್ತಿದೆ. ಇನ್ನು ಇವತ್ತಿನ ದಿವಸ 113ನೇ ಸೆಕ್ಷನಿಗೆ ತಿದ್ದುಪಡಿಯನ್ನು ತಂದಿದ್ದಾರೆ. ಇದನ್ನು ಯಾವ ಉದ್ದೇಶದಿಂದ ಮಾಡಿದ್ದಾರೆ ? 113ನೇ ಸೆಕ್ಷನ್ನಿನಲ್ಲಿ ಸಿವಿಲ್ ಪ್ರೊಸೀಜರ್ ಕೋಡ್ ಎಲ್ಲದಕ್ಕೂ ಅನ್ವಯಿಯಾಗುತ್ತದೆಂದು ಹೇಳಿದ್ದಾರೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ವಕೀಲರಾದವರು ಮಾತೆತ್ತಿದರೆ ಯಾರಾದರೂ ಒಂದು ಅರ್ಜಿ ಹಾಕಿ ಕೂತರೇ ಸಾಕು. ಅವರೇ ಹೋಗಿ ಸರ್ಪ್ಲಸ್ ಲ್ಯಾಂಡ್ ಕಂಪನ್ಸೇಷನ್ ಬಗ್ಗೆ, ರೆಂಟ್ ಬಗ್ಗೆ ರೆಸ್ಯೂಮಬಲ್ ಲ್ಯಾಂಡ್ ಬಗ್ಗೆ ಮತ್ತು ನಾನ್ ರೆಸ್ಯೂಮಬಲ್ ಲ್ಯಾಂಡ್ ಬಗ್ಗೆ ವಿಚಾರ ಮಾಡುತ್ತಾರೆ. ಇಂತಹ ಪ್ರಶ್ನೆಗಳು ಇರುವಾಗ ಎಲ್ಲದಕ್ಕೂ ಸಿವಿಲ್ ಪ್ರೊಸೀಜರ್ ಕೋಡ್ ಅಪ್ಲೈಯಾಗಬೇಕೆಂಬ ಹೇಳಿದರೆ ಹೇಗೆ ? ಇದರಿಂದ ಯಾರಿಗೂ ಎಂದು ಏನೂ ಉಪಕಾರವಾಗಬಾರದೆಂದು ಎಂಬ ಅಂಶ ಇವರ ಮನಸ್ಸಿನಲ್ಲಿರಬೇಕು. ರಾಜ್ಯದಲ್ಲಿ ಪ್ರಜಾಪ್ರಭುತ್ವ ಹೇಗೆ ಸಾಗಬೇಕು ? ಇವರು ಎಲ್ಲರ ಮೂಗಿಗೆ ತುಪ್ಪ ಹಚ್ಚುವಂತೆ ಇದರಲ್ಲಿ ಮಾಡುತ್ತಿದ್ದಾರೆ. ಆದ್ದರಿಂದ ನಾನು ಹೇಳುವುದಿಷ್ಟೆ : ಈ 113ನೇ ಸೆಕ್ಷನ್ ಮೊದಲಿದ್ದಂತೆಯೇ ಇರಲಿ. ಅದನ್ನು ಈಗ ತಿದ್ದುಪಡಿ ಮಾಡುವುದು ಸಾಧುವಲ್ಲ. ಇನ್ನು ಮಾನ್ಯ ಶ್ರೀ ನಾಗಪ್ಪನವರು 42ನೇ ಸೆಕ್ಷನ್ ಸಬ್ ಕ್ಲಾಜ್ (1) ಬಗ್ಗೆ ಹೇಳಿರುವುದು ನನಗಂತೂ ಅರ್ಥವಾಗುತ್ತಿಲ್ಲ. ಇದರಿಂದ ತಮ್ಮ ಅಧಿಕಾರಿಗಳು ಎಷ್ಟರಮಟ್ಟಿಗೆ ಆಕ್ಟ್ ಬಗ್ಗೆ ವಿಚಾರ ಮಾಡುತ್ತಿದ್ದಾರೆ ಮತ್ತು ಅವರಿಗೆ ಎಷ್ಟು ಅನಾದರಣೆ ಇದೆಯೆಂಬುದು ಗೊತ್ತಾಗುತ್ತದೆ. ಇನ್ನು ನಮ್ಮ ಹಿರಿಯರಾದಂಥ ಮಾನ್ಯ ಶ್ರೀ ಸಿದ್ದವೀರಪ್ಪನವರು ಇದರ ಬಗ್ಗೆ ಏನು ಹೇಳಿದರೋ ಅದೂ ನನಗೆ ಗೊತ್ತಿಲ್ಲ. ಇದನ್ನು ಸರ್ಕಾರದವರು ಬಹಳ ವರ್ಷಗಳಿಂದ ತೀರ್ಮಾನ ಮಾಡುವವರಾಗಿದ್ದಾರೆ. ಮಾನ್ಯ ಶ್ರೀ ಜತ್ತಿಯವರು ಇದರ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಕಾನೂನು ಆಗಿ ಇದುವರೆಗೆ ಎಷ್ಟೋ ವರ್ಷಗಳು ಆಗಿದ್ದರೂ ಅದಿನ್ನೂ ಜಾರಿಗೆ ಬಂದಿಲ್ಲ. ಅದನ್ನು ಸರ್ಕಾರದವರು ವಿಚಾರ ಮಾಡಬೇಕು. ಅದರ ವಿಷಯದಲ್ಲಿ ಈ ಸಭೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಸ್ಪಷ್ಟವಾಗಿ ಹೇಳಬೇಕು. ಭೂಮಿ ಇಲ್ಲದೇ ಇರುವವರಿಗೆ ಭೂಮಿ ಕೊಡುವ ಉದ್ದೇಶವಿದೆಯೇ, ಗೇಣಿದಾರರಿಗೆ ಭೂಮಿ ಕೊಡುವ ಉದ್ದೇಶವಿದೆಯೇ, ಭೂಮಾಲೀಕರಿಗೆ ಕಂಪನ್ಸೇಷನ್ ಕೊಡುವ ಉದ್ದೇಶವಿದೆಯೇ ? ಒಂದು ವೇಳೆ ಆ ರೀತಿ ಉದ್ದೇಶವಿದ್ದರೆ ಅದನ್ನು ಎಷ್ಟು ದಿವಸಗಳಲ್ಲಿ ತೀರ್ಮಾನ ಮಾಡುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಆದ್ದರಿಂದ ನಾನು ಯಾವ ಸೆಕ್ಷನ್ನನ್ನೂ ಕೂಡ ಇದರಲ್ಲಿ ಒಪ್ಪುವುದಿಲ್ಲ. ಅದರ ಬಗ್ಗೆ ವಿಶದವಾಗಿ ಹೇಳುವ ಪ್ರಶ್ನೆ ಇಲ್ಲ. ಮಾನ್ಯ ಶ್ರೀ ನಾಗಪ್ಪನವರು ಎಲ್ಲಾ ಸೆಕ್ಷನ್ನುಗಳ ಬಗ್ಗೆ ಸ್ಥೂಲವಾಗಿ ಹೇಳಿದ್ದಾರೆ.

(ಶ್ರೀ ಕೆ. ಎಚ್. ರಂಗನಾಥ್)

ಇನ್ನು 36ನೇ ಸೆಕ್ಷನ್ನಿನಲ್ಲಿ ವ್ಯಾಲಿಡೇಷನ್ ಮಾಡುವ ಬಗ್ಗೆ ಹೇಳಿದ್ದಾರೆ. ಹೊಸದಾಗಿ ರಾಜ್ಯಗಳು ಶುರುವಾಗುವ ರೀತಿಯಲ್ಲಿ ಈ ತಿದ್ದುಪಡಿಗಳು ಇವೆ. ತಮ್ಮ ಉದ್ದೇಶ ರೈತರಿಗೆ ಉಪಕಾರ ಮಾಡಬೇಕೆಂದಿಲ್ಲ. ತಮ್ಮ ಉದ್ದೇಶವೇನಿದೆಯೆಂಬುದನ್ನು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಹೇಳಿ ಅವನ್ನು ಸುಮ್ಮನೆ ಇಲ್ಲಿ ತೆಗೆದುಕೊಂಡು ಬಂದಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಇವರ ಬಗ್ಗೆ ಒಂದು ಆರ್ಡಿನೆನ್ಸನ್ನು ತರುವುದಕ್ಕೆ ಏನು ಆವಶ್ಯಕವಿತ್ತು ? ಹೋದ ಸಾರಿಯೇ ಇದನ್ನು ತಂದಿದ್ದರೂ ಇದುವರೆಗೆ ಏನೂ ಮಾಡುವುದಕ್ಕಾಗಲಿಲ್ಲ. ಇದರಬಗ್ಗೆ ಕಾನೂನು ಮಾಡಿ ಒಂದುವೇಳೆ ಈ ಸಭೆಯಲ್ಲಿ ಬಂದಿದ್ದರೆ ಅದು ಪಾಸಾಗುತ್ತಿತ್ತು. ಈಗ ಆರ್ಡಿನೆನ್ಸ್ ಮುಖಾಂತರ ಕಾನೂನು ಆಗಿದೆ. ಈ ದಿನ ನಾವು ಆರ್ಡಿನೆನ್ಸನ್ನು ರಿಪ್ಲೇಸ್ ಮಾಡುವ ಪರಿಸ್ಥಿತಿಗೆ ಬಂದಿದ್ದೇವೆ. ತಮ್ಮ ಉದ್ದೇಶ ಸರಿಯಾಗಿಲ್ಲ. ಸರ್ಕಾರದವರು ಭೂಮಿ ಇಲ್ಲದೆ ಇರುವ ರೈತರ ಬಗ್ಗೆ ವಿಚಾರ ಮಾಡಿ ಅವರು ಚೆನ್ನಾಗಿ ವ್ಯವಸಾಯ ಮಾಡುವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. 35-40 ಕೋಟಿ ರೂಪಾಯಿಗಳ ಪ್ರಶ್ನೆಯನ್ನು ಎತ್ತಿದ್ದಾರೆ. ಅದು ಸಾಧುವಾದುದಲ್ಲ. ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿ ಆ ಹಣವನ್ನು ಅಪ್ರಯೋಜಕವಾಗಿ ಉಪಯೋಗಿಸುವುದಕ್ಕೆ ಅವಕಾಶ ಮಾಡಿಕೊಡಬೇಡಿ.

ಕೊನೆಯದಾಗಿ ಈ ಮಸೂದೆಯನ್ನು ವಿರೋಧ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).**—ಮಾನ್ಯ ಅಧ್ಯಕ್ಷರೇ, ಈಗಾಗಲೇ ತಿದ್ದುಪಡಿಯನ್ನು ವಿರೋಧಿಸಿ ಅನೇಕರು ಮಾತನಾಡಿದ್ದಾರೆ. ಈಗ ತಾನೇ ಮಾತನಾಡಿದ ಮಾನ್ಯ ಸದಸ್ಯರು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ರಾಜ್ಯಪಾಲರ ಭಾಷಣ ಆಗುವುದಕ್ಕಿಂತ ಮುಂಚೆ, ಪತ್ರಿಕೆಗಳಿಗೆ ಮುಖ್ಯಮಂತ್ರಿಗಳು ಕೊಟ್ಟ ವರದಿ ರಾಜ್ಯದ ರೈತರಿಗೆ ಬಗೆದ ಒಂದು ದ್ರೋಹ ಎಂದು ನಾನು ಸಣ್ಣ ಶಬ್ದದಲ್ಲಿ ಹೇಳುತ್ತೇನೆ. ಈ ಅಧ್ಯಾದೇಶಗಳನ್ನು ತರುವ ಉದ್ದೇಶ ಏನಿತ್ತೋ ನನಗೆ ಗೊತ್ತಿಲ್ಲ. ಲಿಂಕ್ ಪತ್ರಿಕೆ ಹೀಗೆ ಹೇಳಿದೆ: ಈ ಅಧ್ಯಾದೇಶ ತರುವ ಉದ್ದೇಶ "Yielded to the pressure of vested interests to delay and block the implementation of land reforms." ಎಂದು. ಅದು ನಮ್ಮ ಪೇಪರ್ ಅಲ್ಲ. ಇಂಡಿಕೇಟ್‌ನವರ ಪೇಪರ್. ಮುಖ್ಯಮಂತ್ರಿಗಳು ಅದನ್ನು ಓದಿರಬಹುದು. ಅದನ್ನು ನಾನು ಪೂರ್ತಿ ಒಪ್ಪುವುದಿಲ್ಲ. ಈ ತಿದ್ದುಪಡಿಯ ಬಗ್ಗೆ ಬಹಳ ಅವಸರ ತೋರಿಸುತ್ತಿದ್ದೀರಿ.

ಅಧ್ಯಕ್ಷರು.— ನಾನು ಅವಸರ ತೋರಿಸುತ್ತಾ ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದರ ಬಗ್ಗೆ ಏನು ಹೇಳಿದ್ದಾರೋ ಗೊತ್ತಿಲ್ಲ.

ಅಧ್ಯಕ್ಷರು.—ಇದರ ಚರ್ಚೆಗೆ ಎರಡು ಗಂಟೆ ಕಾಲ ಕೊಟ್ಟಿದ್ದಾರೆ. ಅದು ಮುಗಿದಿದೆ.

ಶ್ರೀ ಎಸ್. ಗೋಪಾಲಗೌಡ.—ಶೂನ್ಯ ಗಳಿಗೆಯಲ್ಲಿ ಮುಗಿದುಹೋದರೆ ನಾನು ಏನು ಮಾಡುವುದಕ್ಕಾಗುವುದಿಲ್ಲ. ಸಂಕ್ಷೇಪವಾಗಿ ಹೇಳುತ್ತೇನೆ. ಕಟುವಾದ ಪದಗಳನ್ನು ಉಪಯೋಗಿಸುತ್ತೇನೆ.

ಅಧ್ಯಕ್ಷರು.—ಕಟುವಾಗಿ ಮಾತನಾಡಿ ಅಥವಾ ಸಾಫ್ಟ್ ಆಗಿ ಮಾತನಾಡಿ. I am concerned with the time limit which is approved by this House.

ಶ್ರೀ ಎಸ್. ಗೋಪಾಲಗೌಡ.—ಈ 22 ವರ್ಷಗಳಲ್ಲಿ ಈ ದೇಶದ ಜನತೆಗೆ ಅದರಲ್ಲೂ ರೈತರಿಗೆ ಬಗೆದ ದ್ರೋಹ ಭೂಸುಧಾರಣೆಗೆ ಸಂಬಂಧಪಟ್ಟ ಮೊದಲನೆಯ ದ್ರೋಹ. ಕಾರ್ಮಿಕರಿಗೆ ಬಗೆದದ್ದು ಬೇರೆ ದ್ರೋಹ ಇದೆ. ಅದು ಈಗ ಬೇಡ. ನಮಗೆ ಸ್ವಾತಂತ್ರ್ಯ ಬಂದು 22 ವರ್ಷಗಳಾಯಿತು. ನಾನು ಈಗಾಗಲೇ ಶಿವಮೊಗ ಜಿಲ್ಲೆಯಲ್ಲಿ ಮತ್ತು ಬೇರೆ ಎಲ್ಲಾಕಡೆ ಹೇಳಿದ್ದೇನೆ— "20 ವರ್ಷ ಗೇಣಿಯನ್ನು ನೀವು ಪಾವತಿ ಮಾಡಿದ್ದೀರಿ. ಆದ್ದರಿಂದ ಇನ್ನು ಗೇಣಿ ಕೊಡುವ ಅಂಶ ಇಲ್ಲ. ನೀವು ಉಳುಮೆ ಮಾಡತಕ್ಕಂಥ ಭೂಮಿಗೆ ನೀವೇ ಮಾಲೀಕರು, ಇನ್ನು ಅದನ್ನು ಬದಲಾಯಿಸತಕ್ಕ ಹಕ್ಕು ಯಾವ ಸರಕಾರಕ್ಕೂ ಇಲ್ಲ ' ಎಂಬುದಾಗಿ. ಅಂತಹ ಸರಕಾರ ಬಂದರೆ ನಾವು ಕತ್ತರಿಸಿ ಹಾಕೋಣ ಎಂದು ಹೇಳಿದ್ದೇನೆ. ಇದಕ್ಕೆ ಒಂದು ತಿದ್ದುಪಡಿಯನ್ನು ನಾನು ಸೂಚಿಸುವುದು ಟ್ರಿಬ್ಯೂನಲ್ ಅಲ್ಲ ತಹಸೀಲ್ದಾರರೂ ಅಲ್ಲ. ಅವಕ್ಕೆ ಬದಲಾಗಿ ಸಂಯುಕ್ತ ಸೋಷಿಲಿಸ್ಟ್ ಪಾರ್ಟಿ ಎಂದು.

22 ವರ್ಷಗಳಿಂದ ಕಾದು ಕಾದು ಸಾಕಾಯಿತು. ಹಾದಿಯಲ್ಲಿ ಬಂದವರಿಗೆ ಹೋದವರಿಗೆ ದರಖಾಸ್ತು ಕೊಟ್ಟಿರಿ. ನಾವು ಕೈಯಲ್ಲಿ ಇರುವುದನ್ನು, ಮೈಯಲ್ಲಿ ಇರುವುದನ್ನು ಕೊಟ್ಟು ಅಲ್ಲಿ ಬೇಸತ್ತು ಮಾರ್ಗ ಕಾಣದೆ ನಾವು ಈವೊತ್ತು ಸ್ವತಂತ್ರ್ಯ ಜೀವಿ ಆಗಿದ್ದೇವೆ. ಸರಕಾರದ ಸಾಗುವಳಿಗೆ ಯೋಗ್ಯವಾದ ಜಮೀನನ್ನು ನಿಮ್ಮ ರೂಲ್ಸ್ ಪ್ರಕಾರ ಹರಿಜನ, ಗಿರಿಜನ ಮತ್ತು ಭೂಹೀನರು ಯಾರು ಯಾರು ಇದ್ದಾರೋ ಅವರಿಗೆ ಹಂಚಿಕೊಟ್ಟಿದ್ದೇವೆ. ಅದಕ್ಕೆ ಮೊಹರು ಹಾಕಿ. ಹಾಕುವುದಿಲ್ಲ ಎಂದರೆ ಅದನ್ನು ತನಿಖೆ ಮಾಡುತ್ತೇವೆ. ಮೊಹರು ಹಾಕಿದರೆ ಬದುಕುತ್ತೀರಿ. ಮೊಹರು ಹಾಕುವುದಿಲ್ಲ ಎಂದರೆ ಸಾಯುತ್ತೀರಿ ಎನ್ನುವ ಮಾತನ್ನು ಖಡಾಖಂಡಿತವಾಗಿ ಈ ಸಭೆಯಲ್ಲಿ ಹೇಳುತ್ತೇನೆ.

ಇನ್ನು ಪರಿಹಾರ ಯಾರಿಗೆ ಮತ್ತು ಯಾತಕ್ಕೆ ಎನ್ನುವ ಪ್ರಶ್ನೆ. ಈ ರಾಜ್ಯಾಂಗ ತಿದ್ದುಪಡಿ ಮಾಡಬೇಕು. ಮೂಲಭೂತ ಹಕ್ಕುಗಳಲ್ಲಿ ವಾಕ್ ಸ್ವಾತಂತ್ರ್ಯ ದೇಶದ ಯಾವುದೇ ಭಾಗದಲ್ಲಿ ಹೋಗಲಿ ಅಲ್ಲಿ ವಾಸಮಾಡುವ ಸ್ವಾತಂತ್ರ್ಯ ಯಾವುದೇ ಭಾಷೆ ಮಾತನಾಡುವ ಸ್ವಾತಂತ್ರ್ಯ ಯಾವುದೇ ಮತ ಮತ್ತು ದೇವರನ್ನು ನಂಬುವ ಸ್ವಾತಂತ್ರ್ಯ, ಇತ್ಯಾದಿ ಸ್ವಾತಂತ್ರ್ಯಗಳನ್ನು ಬಿಟ್ಟು ಈ ಆಸ್ತಿಪಾಸ್ತಿಗಳ ಪಟ್ಟಿಯನ್ನು ಮೂಲಭೂತ ಹಕ್ಕುಗಳಿಂದ ಕಿತ್ತು ಹಾಕಬೇಕು ಎಂಬುದಾಗಿ. 1952ನೇ ಇಸವಿಯಲ್ಲಿ ನಾನು ಈ ವಿಧಾನ ಸಭೆಗೆ ಬಂದಾಗ ಹೇಳಿದ್ದೆ. ಈ ಆಸ್ತಿಪಾಸ್ತಿಗಳು ಮೂಲಭೂತ ಹಕ್ಕಿನಲ್ಲಿ ಬರುವುದಿಲ್ಲ. ಆದುದರಿಂದ ಮೂಲಭೂತ ಹಕ್ಕಿನಿಂದ ಈ ಆಸ್ತಿಪಾಸ್ತಿಗಳನ್ನು ಮೊದಲು ಬಿಡಿಸಿ. ಆಮೇಲೆ ಬೆಂಗಳೂರು ಪೇಟೆಯಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಅಂತಸ್ತು ಮನೆಗಳು ಇದೆ ಎಂದು ಷುರು ಮಾಡಿ ಆಮೇಲೆ ಉಳಿಮೆ ಮಾಡುವ ಭೂಮಿಗೆ ಹೋಗೋಣ. ಈಗ ನಡೆಯುತ್ತಿರುವ ದೊಡ್ಡ ತಿಕ್ಕಾಟದಲ್ಲಿ ಇಂಡಿಕೇಟ್ ಶಕ್ತಿ, ಸಿಂಡಿಕೇಟ್ ಶಕ್ತಿ ನನಗೆ ಗೊತ್ತಿದೆ. ಅವನ್ನು ಬಹಳ ರೀತಿಯಾಗಿ ವಾಖ್ಯಾನ ಮಾಡುತ್ತಿದ್ದಾರೆ. ಸಮಾಜವಾದದಲ್ಲಿ ನಂಬಿಕೆ ಇದ್ದರೆ ನನ್ನನ್ನು ಹಿಂಬಾಲಿಸಿ ಎಂದು ಹೇಳುತ್ತಾರೆ. ಅದು ದೊಡ್ಡ ಮಾತು. ನಾವು ಎಲ್ಲಾ ಅವರನ್ನು ಹಿಂಬಾಲಿಸುತ್ತೇವೆ. ಆವರೆ ಗದೆಯನ್ನು ಕೈಯಲ್ಲಿ ಹಿಡಿದು ಹಿಂಬಾಲಿಸಬೇಕಾಗುತ್ತದೆ. ಅಹಿಂಸೆಯನ್ನು ಇಟ್ಟುಕೊಂಡು ಹಿಂಬಾಲಿಸುವುದಕ್ಕಾಗುವುದಿಲ್ಲ. ಈ ಹೊತ್ತು ಜನತೆಗೆ ಹೊಟ್ಟೆ ಹಸಿವಿನಿಂದ ಮಾಡುವುದಕ್ಕೆ ಕೆಲಸ ಇಲ್ಲದೆ ಹಳ್ಳಿ ಹಳ್ಳಿಯಲ್ಲಿ ಭಿಕ್ಷೆಬೇಡುವ ಸ್ಥಿತಿ ಬಂದಿದೆ. ಅವರು ಹಾಗೆ ಅಹಿಂಸೆಯಿಂದಲೇ ಸತ್ತುಹೋಗುತ್ತಾರೆ ಎಂದು ನಾನು ನಿರೀಕ್ಷೆ ಮಾಡುವುದಿಲ್ಲ. ದೇಶವ ಎಲ್ಲಾ ಕಡೆ ನೋಡಿದ್ದೇನೆ ಎಲ್ಲಾ ಕಡೆ ಓಡಾಡಿದ್ದೇನೆ. ಈ ಒಂದು ಎಚ್ಚರಿಕೆಯನ್ನು ನಾನು ಕೊಡಬಯಸುತ್ತೇನೆ. ಸ್ವಾಮಿ, ನಿಮ್ಮ ತಿದ್ದುಪಡಿ ನೋಡಿ ಬಹಳ ಆನಂದ ಪಟ್ಟೆ, ಕಣ್ಣೀರು ಆನಂದಾಶ್ರು ಇಟ್ಟೆ ಎಂದು ಹೇಳುತ್ತೇನೆ. ಏನು ತಿದ್ದುಪಡಿ ? ಶ್ರೀ ಸಿದ್ದವೀರಪ್ಪನವರು ಹೇಳಿದಂತೆ ಎಕರೆಗೆ ಬದಲಾಗಿ ಹೆಕ್ಟ್ಯಾರ್ ಹಾಕಿದ್ದಾರೆಂದು. ಅದು ಒಂದು ದೊಡ್ಡ ತಿದ್ದುಪಡಿ; ಸ್ಟ್ಯಾಂಡರ್ಡ್ ಎಕರೆ ಬದಲಾಗಿ ಸ್ಟ್ಯಾಂಡರ್ಡ್ ಹೆಕ್ಟ್ಯಾರ್ ದೊಡ್ಡ ತಿದ್ದುಪಡಿ, ಕೋರ್ಟ್ ಎಂದರೆ ಮುನ್‌ಸೀಫ್ ಕೋರ್ಟ್ ದೊಡ್ಡ ತಿದ್ದುಪಡಿ, ಅದಕ್ಕೆ ನಾನು ಹೇಳುವುದು ಕೋರ್ಟ್ ಎಂದರೆ ಸಂಯುಕ್ತ ಸೋಷಿಯಲಿಸ್ಟ್ ಪಾರ್ಟಿ ಎಂದು ಬರೆಯಿರಿ. ನಾವು ಏನೂ ಯಾರಿಗೂ ಅನ್ಯಾಯ ಮಾಡುವುದಿಲ್ಲ. ನಮಗೂ ಬದುಕುವ ಆಸೆ ಇದೆ. ಜನರು ಬದುಕಬೇಕು. ಕೋರ್ಟ್ ಎಂದರೆ ಸಂಯುಕ್ತ ಸೋಷಲಿಸ್ಟ್ ಪಾರ್ಟಿ ಎಂದು ಬರೆಯಿರಿ.

ಅಧ್ಯಕ್ಷರು.—ಆ ರೀತಿ ತಿದ್ದುಪಡಿ ಕೊಡಿ.

ಶ್ರೀ ಎಸ್. ಗೋಪಾಲಗೌಡ —ಇದಕ್ಕೆ ಆಧ್ಯತೆಗಳನ್ನು ಹೊರಡಿಸುವ ಅಗತ್ಯತೆ ತಮಗೆ ಇರಲಿಲ್ಲ. ತಾವು ಮನಸ್ಸು ಮಾಡಿದ್ದರೆ, ಆಗಸ್ಟ್ 15ನೇ ತಾರೀಖು 1947ರಲ್ಲಿ ಸ್ವಾತಂತ್ರ್ಯ ಬಂತು ಎಂದು ಜನಗಣಮನ ಹಾಡಿದಾಗ, ಒಂದೇ ವಾಕ್ಯದಲ್ಲಿ ಸಂಪೂರ್ಣ ಸರಂಜಾಮುಷಾಹಿ ಪದ್ಧತಿಯನ್ನು 24 ಗಂಟೆಗಳಲ್ಲಿ ತೊಡೆದು ಹಾಕಬಹುದಾಗಿತ್ತು, ಮಾಡಲಿಲ್ಲ. 22 ವರ್ಷಗಳಿಂದಲೂ ತೊಡೆದು ಹಾಕುತ್ತಾ ಇದ್ದೀರಿ. ದೇಶದ ಜನ ನಗುತ್ತಾರೆ. ಜಗತ್ತಿನ ಜನ ನಗುತ್ತಾರೆ. ನೀವು ಹೆಂಗಸರೂ ಅಲ್ಲ, ಗಂಡಸರೂ ಅಲ್ಲ. ಈ ರೀತಿ ಸರ್ಕಾರವನ್ನು ಜನತೆ ಸಹಿಸುವುದು ಇನ್ನು ಸಾಧ್ಯವಿಲ್ಲ. ಇನ್ನು ಕಾಂಪೆನ್‌ಸೇಷನ್ ಮೊತ್ತ 32 ಕೋಟಿ ರೂಪಾಯಿ ಇದ್ದದ್ದು 40 ಕೋಟಿ ರೂಪಾಯಿ ಆಯಿತು, ಮಾರ್ಕೆಟ್ ರೇಟು ಕೊಟ್ಟರೆ ಅವರೇ ಹೇಳುತ್ತಾರೆ ಇದೇ 80 ಕೋಟಿ ರೂಪಾಯಿ ಆಗುತ್ತದೆ ಎಂದು ಜೊತೆಗೆ ಶರಾವತಿಯಲ್ಲಿ ಜಮೀನು ಮುಳುಗಡೆಯಾದ ರೈತರಿಗೆ ಅಲ್ಲಿ ಭೂಮಿ ಕೊಟ್ಟಿದ್ದಾರೆ. ಮರ ಇಲ್ಲದೇ ಇರುವ ಪ್ರದೇಶವನ್ನು ತೋಟ ಅಂತ ಶ್ಯಾನುಭೋಗ ಪಹಣಿಯಲ್ಲಿ ಬರೆದು ಇದ್ದರೆ ಅದಕ್ಕೆ 18 ಸಾವಿರ ರೂಪಾಯಿ ತನಕ ಸರ್ಕಾರದ ಬೊಕ್ಕಸದಿಂದ ಹಣವನ್ನು ತೆತ್ತಿದ್ದೇವೆ. ಇದೆಲ್ಲಾ ನಮಗೆ ಗೊತ್ತಿದೆ. ತಾವು ಯಾರಿಗೆ ಉಪಕಾರ ಮಾಡುವುದು ? ಅಧ್ಯಾದೇಶ ಹೊರಡಿಸುತ್ತಾ ಇದ್ದೀರಿ. ನಾನು ದುರುದ್ದೇಶದಿಂದ ಆರೋಪ ಮಾಡುತ್ತಾ ಇಲ್ಲ. ತಮಗೆ ತಿಳಿದೋ ತಿಳಿದೆಯೋ ಮಾಡುತ್ತಾ ಇದ್ದೀರಿ. ಇದನ್ನು ತಾವು ಆದಷ್ಟು ಬೇಗ ತಿದ್ದಿಕೊಳ್ಳಬೇಕು.

(ಶ್ರೀ ಎಸ್. ಗೋಪಾಲಗೌಡ)

ಕೊನೆಯದಾಗಿ ನಾನು ಈ ಮುನ್ಸೀಫ್ ಗಿರ್‌ಸೀಫರುಗಳಿಗೆಲ್ಲಾ ಅಧಿಕಾರ ಕೊಡುವುದಕ್ಕೆ ತಯಾರಾಗಿಲ್ಲ. ಸ್ಟ್ಯಾಲಿನ್ ಅವರು ಯಾವ ವಿಧಾನವನ್ನು ಅನುಸರಿಸಿದರೋ ಆ ರೀತಿ ಮುನ್ಸೀಫ್ ಹಿಂದುಗಡೆ ಒಬ್ಬ ಬಂದೂಕು ಸಿಪಾಯಿ, ತಹಸೀಲ್ದಾರರ ಹಿಂದುಗಡೆ ಒಬ್ಬ ಬಂದೂಕು ಸಿಪಾಯಿ ಬಂದೂಕನ್ನು ಹಿಡಿದುಕೊಂಡು ಹಳ್ಳಿ ಹಳ್ಳಿಗೆ ಹೋಗಿ ಯಾರಾದರೂ ಅಡ್ಡಿ ಬಂದರೆ, ರೈತ ಆಗಿರಬಹುದು, ಗೇಣಿದಾರ ಆಗಿರಬಹುದು, ಭೂಮಾಲಿಕನಾಗಿರಬಹುದು, ಸರ್ಕಾರಿ ನೌಕರನಾಗಿರಬಹುದು ಅವನನ್ನು ಅಲ್ಲೇ ಗುಂಡಿಕ್ಕಿ ಕೊಂದು ಆ ಜಮೀನು ಇಂಥವನದು, ಇಂಥವನು ಭೂಮಾಲೀಕ ಅಂತ ನಿರ್ಣಯ ಮಾಡಬೇಕು. ಇವತ್ತು ನಾನು ಸ್ಟ್ಯಾಲಿನ್‌ರವರ ವಿಧಾನವನ್ನು ಸ್ವಾಗತಿಸುತ್ತೇನೆ.

Sri S. R. SHANMUGHAM.—Shame! Shame!

ಶ್ರೀ. ಎಸ್. ಗೋಪಾಲಗೌಡ.—ನಿಮಗೆ ಷೇಮು; ಷೇಮು ನಮಗಲ್ಲ, ಅಲ್ಲಿ ಕುಳಿತಿರುವ ನಿಮಗೆ ಷೇಮು. ಸ್ಟ್ಯಾಲಿನ್ ದಾರಿಯನ್ನು ಇವತ್ತು ಹಿಡಿಯಿರಿ, ಈ ಭೂಮಿಯ ವಿತರಣೆ ಮಾಡಿರಿ ಇಲ್ಲವಾದರೆ ಜನರಲ್ ಮ್ಯಾಕಾರ್ಥಿ ಅವರು ಜಪಾನಿನಲ್ಲಿ ತಂದ ರೀತಿಯಲ್ಲಿ ಭೂಮಿಯನ್ನು ಹಂಚಿ. ಕನಿಷ್ಠ 5 ಎಕರೆ, ಗರಿಷ್ಠ 15 ಎಕರೆ ಹಂಚುವ ವ್ಯವಸ್ಥೆ ಮಾಡಿ. ಯಾರಿಗೂ ಹೊರೆ ಆಗುವುದಿಲ್ಲ. ಗಂಡ ಹೆಂಡತಿ ಉಣ್ಣುತ್ತಾರೆ. ದೇಶಕ್ಕೂ ಅನ್ನ ಕೊಡುತ್ತಾರೆ. ನಾನು ನಿಮ್ಮಂತೆ ಗೇಣಿದಾರನಲ್ಲ, ಜಮೀನುದಾರನೂ ಅಲ್ಲ. ಜಹಗೀರಿದಾರನೂ ಅಲ್ಲ. ನನ್ನ ಹಳ್ಳಿಯಲ್ಲಿ ನಾನೂ ಒಬ್ಬನಾಗಿದ್ದೇನೆ ನನ್ನ ಹೊಟ್ಟೆಯಲ್ಲಿ ಇರುವ ಬೆಂಕಿ, ಉರಿ ನಿಮಗೆ ಗೊತ್ತಿಲ್ಲದೇ ಇರಬಹುದು, ಅದು ಬೇರೆ ಮಾತು, ಈ ಮಸೂದೆ ತರುವ ಮುಂಚೆ ಎಷ್ಟು ತಿದ್ದುಪಡಿಗಳನ್ನು ಮಾಡಿದಿರಿ? ಎಷ್ಟು ಟ್ರಿಬ್ಯೂನಲ್‌ಗಳನ್ನು ಮಾಡಿದಿರಿ? ಯಾವಾಗ? ಎಷ್ಟು ಅಧಿಕಾರಿಗಳನ್ನು, ಸಿಬ್ಬಂದಿಯನ್ನು ಅವರಿಗೆ ಕೊಟ್ಟಿರಿ? ಯಾವ ರೀತಿ ಕೆಲಸ ಮಾಡಬೇಕೆಂದು ಹೇಳಿದಿರಿ? ಅವರನ್ನು ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಬಿಟ್ಟಿರಾ? ಅವರಿಗೆ ಆವೇಶಗಳನ್ನು ಕೊಟ್ಟಿದ್ದೀರಾ? ರೂಲ್ಸ್‌ಗಳನ್ನು ಯಾವಾಗ ಮಾಡಿದಿರಿ? ಸರ್ವೇ ಯಾವಾಗ ಮಾಡಿದ್ದೀರಿ? ಇವತ್ತು ಹಳ್ಳಿಯಲ್ಲಿ ಸರ್ವೆ ಏನು ಆಗಿದೆ? ತಾವು ದಯವಿಟ್ಟು ಇದನ್ನೆಲ್ಲಾ ಸಭೆಗೆ ತಿಳಿಸಬೇಕು. ನಾನು ಈ ವಿಷಯದಲ್ಲಿ ಮಾತನಾಡುವುದಕ್ಕೆ ಹೋದರೆ ನನಗೆ ಸ್ವಲ್ಪ ಕ್ರೋಧವೇ ಹೆಚ್ಚಾಗುತ್ತದೆ. ಸಭೆಯಲ್ಲಿ ಅದನ್ನು ತೋರಿಸಬಾರದು, ಜೊತೆಗೆ ಕಾಲವೂ ಇಲ್ಲ. ಅದನ್ನು ನಾನು ಹೇಳುವುದಿಲ್ಲ. ಆದ್ದರಿಂದ ತಾವು ಈ 22 ವರ್ಷದಲ್ಲಿ ಈ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಏನು ಒಂದೇ ಸಮನೆ ದ್ರೋಹ ಬಗೆಯುತ್ತಾ ಇದ್ದೀರಿ ಅದರ ಬಗ್ಗೆ ವಿಷಾದ ವ್ಯಕ್ತಪಡಿಸುತ್ತೇನೆ.

ಕೊನೆಯದಾಗಿ ಈ ಒಂದು ವಿಳಂಬದಿಂದ ಸಣ್ಣ ಸಣ್ಣ ಭೂಮಾಲೀಕರು 5 ಎಕರೆ, 3 ಎಕರೆ, 2 ಎಕರೆ, 10 ಎಕರೆ ಇರತಕ್ಕ ಬಡಪಾಯಿಗಳು, ವಿಧವೆಯರು, ಸಣ್ಣ ಮಕ್ಕಳು ಅವರ ಸಂಸಾರ ಸಂಪೂರ್ಣ ನಾಶವಾಗಿದೆ. ರತ್ನಕುಮಾರ ಕಟ್ಟೆಮಾರರು ಗೇಣಿದಾರರು ಒಂದು ನಯಾಪೈಸೆ ಕೊಡುತ್ತಿಲ್ಲ ಎಂದು ಹೇಳುತ್ತಾರೆ. ಈ ಧಣಿಗಳು, ಜಮೀನ್ದಾರರು ಸರ್ಕಾರಕ್ಕೆ ಕಂದಾಯ ಕೊಟ್ಟೂ ಕೊಟ್ಟೂ ಬಹಳ ಕಷ್ಟದಲ್ಲಿದ್ದೇವೆ ಎಂದು ಹೇಳುತ್ತಾರೆ, ಇರಬಹುದು. ಮೊನ್ನೆ ಈ ಧಣಿಗಳು ಬಸರೂರಿನಲ್ಲಿ, ಕುಂದಾಪುರದಲ್ಲಿ ಗೇಣಿದಾರರಿಗೆ ಏನು ಮಾಡಿದ್ದಾರೆ ಎಂಬುದನ್ನು ಸ್ವಲ್ಪ ಹೇಳಲಿ.

ಶ್ರೀ ರತ್ನಕುಮಾರ ಕಟ್ಟಿಮಾರ್.—ಒಂದು ಗಂಟೆ ಟೈಂ ಕೊಟ್ಟರೆ ನಾನೂ ಅವರಿಗೆ ಜವಾಬು ಕೊಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಆದ್ದರಿಂದ ಅವರ ಚರಿತ್ರೆ ಬಹಳ ಹೇಳಬಹುದು. ಕಟ್ಟೆಮಾರ್‌ರವರು ಭೂಮಾಲೀಕರ ಪರವಾಗಿ ವಕಾಲತ್ತು ನಡೆಸಬಹುದು. ಅವರು ಬಂದೂಕು ಇರುವವರು, ಬಂದೂಕು ಇಲ್ಲದವರು ನಾವು ಏನು ಸೈನ್ಯ ಕಟ್ಟಬೇಕು? ಆದರೂ ನಾವು ಭೂಸೈನ್ಯ ಕಟ್ಟುತ್ತೇವೆ. ಯಾರು ಉಳುವವನಿಗೆ ಭೂಮಿಯನ್ನು ಬಿಟ್ಟುಕೊಡುವುದಿಲ್ಲವೋ ಅವನು ಅವಕ್ಕೆ ಪ್ರಾಣವನ್ನು ತೆರಬೇಕು. ಈ ತುದಿಗೆ ಬಂದು ಮುಟ್ಟಿದ್ದೇವೆ. ಬಹಳ ದೂರ ಇಲ್ಲ ಆ ಕಾಲ. ಬೇಕಾದರೆ ಅವರು ಜ್ಯೋತಿಷ್ಯರನ್ನು ಹೋಗಿ ಕೇಳಲಿ, ಅವರು ಭವಿಷ್ಯ ಹೇಳುತ್ತಾರೆ. ರತ್ನಕುಮಾರ್ ಕಟ್ಟೆಮಾರ್‌ರವರು ಬಹಳ ಸುತ್ತಿ ಬಂದಿರಬಹುದು, ಅವರು ದೊಡ್ಡ ಧಣಿಗಳು. ನಾನು ಹೇಳುವುದು ಇಷ್ಟೆ. ಆದ್ದರಿಂದ ಭೂಮಾಲೀಕರು ಭೂ ಸೈನ್ಯವನ್ನು ಕಟ್ಟಿ ಉಳುಮೆಗಾರರನ್ನು ಒಕ್ಕಲೆಬ್ಬಿಸುವುದಾದರೆ, ಉಳುಮೆಗಾರರ ಮನೆಗಳನ್ನೂ ಕಿತ್ತು ಹಾಕುವುದಾದರೆ— ಈಗ ಇರತಕ್ಕ ರಾಜ್ಯಾಂಗದ ಪ್ರಕಾರ ಯಾವ ಗಳಿಗೆಯಲ್ಲಿ ಯಾವ ರೈತನನ್ನು ಬೇಕಾದರೂ ಒಕ್ಕ

ಲೆಬ್ಬಿಸಬಹುದು, ಮನೆಯಿಂದ ಹೊರಗಡೆ ಹಾಕಬಹುದು, ಕೇಸು ಹಾಕಬಹುದು ಇತ್ಯಾದಿ ಏನಾದರೂ ಹೇಳುವುದಕ್ಕೆ ಹೋದರೆ ಇವತ್ತು ಈ ದೇಶದಲ್ಲಿ ಅಹಿಂಸಾತ್ಮಕ ರೀತಿಯಲ್ಲಿ ಕ್ರಾಂತಿಯಾಗುವುದಿಲ್ಲ, ರಕ್ತದ ಕ್ರಾಂತಿಯಾಗುವುದರಿಂದಲೇ ಅದು ಸಾಧ್ಯ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಸನ್ಮಾನ್ಯ ಸಭಾಪತಿಗಳೇ, ಮೈಸೂರು ಭೂಸುಧಾರಣಾ ವಿಧೇಯಕದ ಬಗ್ಗೆ ಶ್ರೀಮಾನ್ ಗೋಪಾಲಗೌಡರು ಹೇಳಿದ ಹಾಗೆ ಇದು 25 ವರ್ಷಗಳಲ್ಲಿ ಜನನವಾಗಿದೆ. ಮೈಸೂರು ರಾಜ್ಯ ಸರಕಾರ ಸಾಮಾನ್ಯ ಜನತೆಯ ಬಗ್ಗೆ ಇದೊಂದು ದೊಡ್ಡ ಅನ್ಯಾಯ ಮಾಡಿದೆ ಒಂದು ಅಪಘಾತವಾಗಿದೆ ಎಂದು ಹೇಳಬಹುದು. ಕಾನೂನು ಮಾಡುವಾಗ ಕೋರ್ಟಿಗೆ ಹೋಗುವ ಅವಶ್ಯಕತೆ ಏನು ಇದೆ? ಜಮೀನುದಾರನೇ ಆಗಲಿ ರೈತನೇ ಆಗಲಿ ಕೋರ್ಟಿಗೆ ಹೋದರೆ ಸೂಕ್ತ ಕಾಲದಲ್ಲಿ ಅದು ತೀರ್ಮಾನವಾಗುವುದಿಲ್ಲ, ಅದಕ್ಕೆ ಶತಮಾನ ಕಾಲ ಆಗಬಹುದು. ಈ ಭೂಸುಧಾರಣಾ ಕಾನೂನಿನಿಂದ ಸಾಯುವುದಿಲ್ಲ ಬದುಕುವುದಿಲ್ಲ. ಹಾಗೆ ಆಗಿದೆ. ಈ ತಿದ್ದುಪಡಿ ತಂದಿರುವುದು ಆಳಿಯನಲ್ಲ ಮಗಳ ಗಂಡ ಎಂದು ಹೇಳಿದ ಹಾಗೆ ಆಗಿದೆ. ಈ ತಿದ್ದುಪಡಿಯಿಂದ ಯಾರಿಗೂ ತೃಪ್ತಿಯಾಗುವುದಿಲ್ಲ. ಕಾನೂನು ಜಾರಿ ಮಾಡುವುದರಲ್ಲಿ ಸರಕಾರಕ್ಕೆ ದಕ್ಷತೆ ಇಲ್ಲ. ಚುನಾವಣೆಯ ಕಾಲದಲ್ಲಿ ಭೂಸುಧಾರಣೆ ಮಾಡುತ್ತೇವೆ ಎಂದು ಜನತೆಗೆ ಆಶ್ವಾಸನೆ ಕೊಡುತ್ತೀರಿ. ಭೂ ಕಂದಾಯ ರದ್ದು ಮಾಡುತ್ತೇವೆ ಎಂದು ಹೇಳುತ್ತೀರಿ. ಆದರೆ ಅಧಿಕಾರಕ್ಕೆ ಬಂದ ಮೇಲೆ ವಾತಾವರಣ ಬೇರೆಯಾಗುತ್ತದೆ. ಇದರಿಂದ ಜನ ಸಾಮಾನ್ಯರ ರಕ್ಷಣೆಯಾಗುವುದಿಲ್ಲ, ಜನತೆಗೆ ಶ್ರೇಯಸ್ಸು ಆಗುವುದಿಲ್ಲ. ಇದರಲ್ಲಿ ಸರಕಾರದ ಧ್ಯೇಯ ಸರಿಯಾಗಿಲ್ಲ. ಕೂಲಿಕಾರರನ್ನಾಗಲೀ ಜಮೀನದಾರನ್ನಾಗಲೀ ಕೋರ್ಟಿಗೆ ಹೋಗದಂತೆ ಕಾನೂನು ತರಬೇಕು. ಕಾನೂನಿನಿಂದಲೇ ಎಲ್ಲವನ್ನೂ ಬಗೆಹರಿಸಬೇಕು. ಕಳೆದ 2½ ವರ್ಷಗಳಿಂದ ಶ್ರೀರಂಗಪಟ್ಟಣದ ಕೋರ್ಟಿನಲ್ಲಿ ಆರೇಳು ಸಾವಿರ ಕೇಸುಗಳು ಪೆಂಡಿಂಗ್ ಇವೆ. ಒಂದು ಕೋರ್ಟು ಮಾಡಿದ್ದಾರೆ, ಅಲ್ಲಿ, 200 ಜಜ್ಮೆಂಟ್ ಮಾಡಿರಬಹುದು. ಆದರೆ ಇನ್ನೂ ಆರು ಸಾವಿರ ಕೇಸುಗಳು ಕೋರ್ಟಿನಲ್ಲಿ ಇವೆ. ಇವುಗಳನ್ನು ತೀರ್ಮಾನ ಯಾವಾಗ ಮಾಡುತ್ತಾರೆ? ಗೇಣಿದಾರರಿಗೆ ಪರಿಹಾರ ಇಲ್ಲ. ಈ ತಿದ್ದುಪಡಿ ಮಸೂದೆಯಲ್ಲಿ ಉಪಯೋಗಿಸಿರುವ ಕನ್ನಡ ಪದಗಳ ಅರ್ಥವೇ ಆಗುವುದಿಲ್ಲ. ಎಲ್ಲರಿಗೂ ಅರ್ಥವಾಗುವ ಪದಗಳನ್ನು ಉಪಯೋಗಿಸಬೇಕಾಗಿತ್ತು. ಈ ಭೂಸುಧಾರಣಾ ತಿದ್ದುಪಡಿಯಿಂದ ಯಾರಿಗೂ ಪ್ರಯೋಜನವಾಗಲಾರದು. ಈ ತಿದ್ದುಪಡಿಯಿಂದ ಸಮೃದ್ಧಿ ದೊರೆಯುವುದಿಲ್ಲ. ಆದುದರಿಂದ ಸರಕಾರದವರು ಈ ತಿದ್ದುಪಡಿ ಮಸೂದೆಯನ್ನು ವಾಪಸ್ಸು ತೆಗೆದುಕೊಂಡು ಈ ಶಾಸನಸಭೆಯು ಎಲ್ಲಾ ವರ್ಗದ ಜಮೀನ್‌ದಾರರಿಗೆ ಮತ್ತು ರೈತರಿಗೆ ಸರಿಸಮಾನವಾದ ಒಂದು ಮಸೂದೆಯನ್ನು ತರಬೇಕೆಂದು ಒತ್ತಾಯ ಮಾಡುತ್ತೇನೆ. ಕೋರ್ಟಿಗೆ ಹೋಗಿ ಕಷ್ಟ ಕಾರ್ಪಣ್ಯ ಪಡುವುದನ್ನು ತಪ್ಪಿಸಬೇಕು. ಈ ಭೂ ಸುಧಾರಣೆ ಮಸೂದೆಯನ್ನು ವಿರೋಧಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಆರ್. ಬೊಮ್ಮಾಯಿ (ಕುಂದಗೋಳ).—ಮಾನ್ಯ ಸಭಾಪತಿಗಳೇ, ಈಗ ತಂದಂಥ ಮಸೂದೆಗೆ ಅನುಮೋದನೆ ಮಾಡುತ್ತಾ ಕೆಲವು ಮಾತು ಹೇಳ ಬಯಸುತ್ತೇನೆ. ಉಳುವವನೇ ಭೂಮಿಯ ಒಡೆಯ ಎಂಬ ತತ್ವವನ್ನು ಅಂಗೀಕರಿಸಿ ಬಹಳ ವರ್ಷವಾಯಿತು. ಆದರೂ ಕೂಡ ಮಂದಗತಿಯಲ್ಲಿ ಇದು ನಡೆದಿದೆ. ಮುಂಬಯಿ ಕರ್ನಾಟಕ ಪ್ರದೇಶದಲ್ಲಿ 1937ನೇ ಇಸವಿಯಲ್ಲೇ ಈ ಕಾನೂನು ಅಮಲಿನಲ್ಲಿ ಬಂದಿದೆ. ಆದರೆ ಈ ರಾಜ್ಯದಲ್ಲಿ 1966 ರಲ್ಲಿ ಒಂದು ಸ್ಪಷ್ಟವಾದ ಕಾನೂನು ಬಂದಿದೆ. ಇದಕ್ಕೆ ಅನೇಕ ತಿದ್ದುಪಡಿಗಳು ಆಗಿವೆ. ಈ ತಿದ್ದುಪಡಿ ಮಸೂದೆಯಲ್ಲಿ ಜನರಿಗೆ ತೀವ್ರ ಪರಿಹಾರ ದೊರೆಯಬೇಕೆಂದು ಟ್ರಿಬ್ಯೂನಲ್ಲಿಗೆ ತೀರ್ಮಾನಮಾಡಲು ಅಧಿಕಾರ ಕೊಟ್ಟಿರುವುದು ಸ್ವಾಗತಾರ್ಹವಾಗಿದೆ. ಇದರಿಂದ ತೀವ್ರ ತೀರ್ಮಾನವಾಗಬಹುದು ಎಂದು ಅನಿಸುತ್ತದೆ. ಭೂಮಾಲೀಕರಿಗೆ ಭೂಮಿಯ ಬೆಲೆಯನ್ನು ನಿರ್ದಿಷ್ಟವಾದ ಅವಧಿಯಲ್ಲಿ ತೀರ್ಮಾನ ಮಾಡುವುದು ಅವಶ್ಯಕವಾಗಿದೆ. ಆದುದರಿಂದ ಈ ಬಗ್ಗೆ ಸರಕಾರ ಅವಶ್ಯಕವಾದ ತಿದ್ದುಪಡಿಯನ್ನು ತರಬೇಕೆಂದು ಸೂಚಿಸುತ್ತೇನೆ. ಭೂಮಾಲೀಕರಿಗೆ ಹಣ ತೀವ್ರವಾಗಿ ದೊರೆತು ರೈತ ಮತ್ತು ಭೂಮಾಲೀಕ ಇವರ ಸಂಬಂಧ ಪೂರ್ಣವಾಗಿ ತಪ್ಪಿ ರೈತನೇ ಭೂಮಿ ಒಡೆಯನಾಗಬೇಕು. ಇದಕ್ಕೆ ಬೇಕಾಗುವ ಹಣವನ್ನು ರಾಷ್ಟ್ರೀಕೃತ ಬ್ಯಾಂಕುಗಳಿಂದ ದೊರಕಿಸಿಕೊಂಡು ಭೂಮಾಲೀಕರಿಗೆ ಕೊಟ್ಟು ರೈತನಿಂದ ಹಂತ ಹಂತವಾಗಿ ವಸೂಲ್ಮಾಡಲು ಕ್ರಮ ತೆಗೆದುಕೊಳ್ಳಬೇಕು. ಇದಕ್ಕಾಗಿ ಸೂಕ್ತ ತಿದ್ದುಪಡಿ ಮಾಡುವುದು ಅಗತ್ಯ.

(ಶ್ರೀ ಎಸ್. ಆರ್. ಬೊಮ್ಮಾಯಿ)

ಚಿಕ್ಕ ಹಿಡುವಳಿದಾರರಿಗೆ ಸೂಕ್ತ ಸೌಲಭ್ಯ ದೊರೆಯುವುದಕ್ಕೆ ಅವಕಾಶವಿಲ್ಲ. ಚಿಕ್ಕ ಹಿಡುವಳಿದಾರರು ಭೂಮಿ ತೆಗೆದುಕೊಂಡು ಸಾಗುವಳಿ ಮಾಡುವುದಕ್ಕೆ ಅವಕಾಶ ಮಾಡಿ ಕೊಡುವ ತಿದ್ದುಪಡಿ ತರುವುದು ಅವಶ್ಯಕವಾಗಿದೆ. ಚಿಕ್ಕ ಹಿಡುವಳಿದಾರರು ಬಡವರಾಗಿದ್ದಾರೆ. ಅವರು ಸಾಗುವಳಿ ಮಾಡುವುದಕ್ಕೆ ಅವಕಾಶ ಇರಬೇಕು. ಅಂತಹವರ ಸಲುವಾಗಿ ಸ್ವಂತ ಸಾಗುವಳಿ ಮಾಡುವ ಸಲುವಾಗಿ ಇದು ಅತ್ಯಂತ ಅವಶ್ಯ ಎಂದು ಹೇಳಬಯಸುತ್ತೇನೆ. ಅದಲ್ಲದೆ ಈ ಸಮಯದಲ್ಲಿ ಒಂದು ಮಾತು ಹೇಳುವುದು ಅವಶ್ಯ ಎಂದು ನನಗೆ ಅನಿಸುತ್ತದೆ. ಉಳುವವನೇ ಹೊಲದ ಒಡೆಯನಾಗಬೇಕು ಎಂಬುದನ್ನು ಒಂದು ನಿರ್ದಿಷ್ಟವಾದ ದಿನ ಗೊತ್ತುಪಡಿಸಬೇಕು ಇಲ್ಲದೇ ಹೋದರೆ ಬೇಕಾದಷ್ಟು ಪ್ರಕರಣಗಳು ಟ್ರಿಬ್ಯೂನಲ್‌ಗೆ ಹೋಗುತ್ತವೆ. ಈಗ ಇರುವ ಪ್ರಕಾರ ಇತ್ಯರ್ಥ ಮಾಡಬೇಕಾದರೆ 5 ವರ್ಷ ಬೇಕಾಗುತ್ತದೆ. ಮುಂದೆ ಅಪೀಲು ವಗೈರೆ ಹೈಕೋರ್ಟಿಗೆ ಹೋಗುವುದಾದರೆ ಇತ್ಯರ್ಥವಾಗಲು 15 ವರ್ಷ ಬೇಕಾಗುತ್ತದೆ. ಅದಕ್ಕೆ ಸರ್ಕಾರದವರು ಒಂದು ನಿರ್ದಿಷ್ಟ ದಿನವನ್ನು ಗೊತ್ತು ಮಾಡಬೇಕು. ಭೂಮಾಲೀಕನಿಗೆ ಕಾಂಪನ್ಸೇಷನ್ ಕೊಡುವುದನ್ನು ನಿರ್ಧರಿಸಬೇಕು. ಉಳುವವನೇ ಭೂ ಒಡೆಯನಾಗಬೇಕು ಎಂದರೆ ಕ್ಲಾಸಿಫಿಕೇಷನ್ ಆಫ್ ಲ್ಯಾಂಡ್ ಆಗಬೇಕು ಇಲ್ಲದೆ ಹೋದರೆ ಯಾವ ಕಾರ್ಯವೂ ಆಗುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ. ಸರ್ಕಾರದವರು ಈ ಕೆಲಸಗಳನ್ನು ನಿಧಾನವಾಗಿ ಮಾಡಿದರೆ ಸರಿಹೋಗುವುದಿಲ್ಲ. ಇನ್ನೂ ಅನೇಕ ವಿಷಯಗಳ ಬಗ್ಗೆ ಸರ್ಕಾರದವರು ಭೂಮಿ ಹಂಚುವುದರಲ್ಲಿ ಭೂಮಿ ಬೆಲೆ ನಿರ್ಧಾರ ಮಾಡುವ ವಿಷಯದಲ್ಲಿ ಅನೇಕ ಕಾಯಿದೆಗಳನ್ನು ತರಬೇಕಾಗಿದೆ. ಅದನ್ನು ಆದಷ್ಟು ತೀವ್ರವಾಗಿ ತಂದು ಸರ್ಕಾರದವರು ಅನುಕೂಲ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಮಾನ್ಯ ಮಂತ್ರಿಗಳು ನಮ್ಮ ದೇಶದಲ್ಲಿ ಉತ್ತಮವಾದ ಕಾರ್ಯ ಮಾಡುತ್ತಿದ್ದಾರೆ. ಇನ್ನೂ ಹೆಚ್ಚಿನ ತ್ವರಿತದಲ್ಲಿ ಕಾರ್ಯ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರಕ್ಕೆ ಸದಾಕಾಲದಲ್ಲೂ ಪೂರ್ಣವಾಗಿ ರೈತರ ಮೇಲೆ ಕಟ್ಟುಕಣ್ಣು ಇದೆ ಎಂದು ಹೇಳುತ್ತೇನೆ. ಹಳ್ಳಿಗಳಲ್ಲಿ ಒಂದು ಗಾದೆ ಇದೆ. ಮಾರಿಕಣ್ಣು ಹೋತನ ಮೇಲೆ ಎಂದು. ನಮ್ಮ ಸರ್ಕಾರ ಯಾವ ಸುಧಾರಣೆಗಳನ್ನು ತರಬೇಕಾದರೂ ಮೊದಲ ಗುರಿ ರೈತರು, ಅದೂ ಸಣ್ಣ ಹಿಡುವಳಿದಾರರು. ನಾನಾದರೂ ಹೇಳುತ್ತೇನೆ. ಈ ಭೂಸುಧಾರಣೆ ತಿದ್ದುಪಡಿ ತಂದಿರುವುದು ಸಣ್ಣ ಹಿಡುವಳಿದಾರರಿಗೆ ಯಾವ ಅನುಕೂಲಗಳನ್ನೂ ಮಾಡಿಕೊಡುವುದಿಲ್ಲ ಎಂದು. ನಮ್ಮ ರಾಜ್ಯದಲ್ಲಿ ಬಹುವಾಗಿ ಸಣ್ಣ ಹಿಡುವಳಿದಾರರು ಇದ್ದಾರೆ. ಅವರಿಗೆ ಯಾವ ಅನುಕೂಲಗಳನ್ನೂ ಈ ತಿದ್ದುಪಡಿಯಲ್ಲಿ ಸೂಚಿಸಿಲ್ಲ. ಅಲ್ಲದೆ ಯಾವ ಕಾಯಿದೆ ಆದರೂ ಕೂಡ ಲಾಯರುಗಳಿಗೆ ಅನುಕೂಲವಾಗಲಿ ಅನ್ನುವ ಉದ್ದೇಶದಿಂದ ತಿದ್ದುಪಡಿಗಳನ್ನು ತರುತ್ತಾರೆ ಎಂದು ನನಗೆ ಅನ್ನಿಸುತ್ತದೆ. ಯಾವ ತಿದ್ದುಪಡಿಯನ್ನೇ ತರಲಿ ಜನರು ಏನನ್ನು ನಿರೀಕ್ಷಿಸುತ್ತಾರೋ ಅದನ್ನು ನೀವು ಮಾಡುತ್ತಾ ಇಲ್ಲ. ಈ ತಿದ್ದುಪಡಿ ತಂದಿರುವುದನ್ನು ನೋಡಿದರೆ ಸರ್ಕಾರ ಹೆಚ್ಚು ಹೆಚ್ಚು ವ್ಯವಹಾರ ನಡೆಸಲಿಕ್ಕೆ ಮಾಡಿದ್ದಾರೆ ಎಂದು ಹೇಳದೆ ಬೇರೆ ವಿಧಿಯಿಲ್ಲ. ಅವರು ತಂದಿರತಕ್ಕಂಥ 19ನೆಯ ತಿದ್ದುಪಡಿ ಬಗ್ಗೆ ಹೇಳುತ್ತೇನೆ. 19ನೇ ತಿದ್ದುಪಡಿಯಲ್ಲಿ 118 ಎ ನಲ್ಲಿ ಈ ರೀತಿ ಇದೆ :

> "118A. REVIEW BY THE DEPUTY COMMISSIONER.—If the Deputy Commissioner is satisfied that any order passed by the prescribed authority referred to in sub-section (3) of section 8, requires to be reviewed with referrence to any new and important matter which has since come to his notice, or on account of some mistake,"

ಈ ರಿವ್ಯೂ ಅಧಿಕಾರವನ್ನು ಡೆಪ್ಯೂಟಿ ಕಮೀಷನರ್ ಅವರಿಗೆ ಕೊಟ್ಟರೆ ಸಣ್ಣ ಹಿಡುವಳಿದಾರರಿಗೇ ಆಗಲಿ, ಗೇಣಿದಾರರಿಗೇ ಆಗಲಿ ಅವರು ಯಾರ ಪ್ರಭಾವಕ್ಕೆ ಒಳಗಾಗುತ್ತಾರೋ ಅಂತಹವರಿಗೆ ಹೆಚ್ಚಿನ ಗೇಣಿ ಲಾಭವನ್ನು ಕೊಡುತ್ತಾರೆ. ಇದರಿಂದ ಅವರು ಹೆಚ್ಚು ಗೇಣಿಯನ್ನು ತೆಗೆದುಕೊಂಡಾಕ್ಷಣಕ್ಕೆ ವ್ಯವಹಾರಗಳೇನೂ ಕಡಿಮೆಯಾಗುವುದಿಲ್ಲ. ತಿದ್ದುಪಡಿ ತರುವ ಉದ್ದೇಶವಾದರೂ ಕೂಡ ಜನಗಳ ತೊಂದರೆಗಳನ್ನು ತಪ್ಪಿಸುವುದಕ್ಕೆ ತರಬೇಕೇ ಹೊರತು ಹೆಚ್ಚು ಮಾಡುವ ಉದ್ದೇಶದಿಂದ ತರಬಾರದು. ಭೂಸುಧಾರಣೆ ಜಾಗ್ರತೆ ಜಾರಿಗೆ ಬರಬೇಕು ಎನ್ನುವ ಉದ್ದೇಶದಿಂದ

ಇದನ್ನು ತಂದಿಲ್ಲ ಎಂದು ನಾನು ಹೇಳುತ್ತೇನೆ. ಅಲ್ಲದೆ ಈ ಸರ್ಕಾರ ಸಣ್ಣ ಹಿಡುವಳಿದಾರರಿಗೆ ಮಾನವೀಯತೆ ಮತ್ತು ಆರ್ಥಿಕ ದೃಷ್ಟಿಯಿಂದ ಏನು ಸಹಾಯವನ್ನೂ ಮಾಡಿಲ್ಲ. ಭೂಸುಧಾರಣೆಯಾದಲ್ಲಿ ಒಬ್ಬ ಮನುಷ್ಯನಿಗೆ ಸರಾಸರಿ 0·9 ಎಕರೆ ಜಮೀನೂ ಬರುವುದಿಲ್ಲ. ಈ ದಿನ ಭೂಸುಧಾರಣಾ ಕಾನೂನು ಪ್ರಕಾರ 27 ಸ್ಟ್ಯಾಂಡರ್ಡ್ ಎಕರೆ ಮಿತಿ ಇದೆ. ರಾಯಚೂರಿನಲ್ಲಿ 144 ಎಕರೆ, ಅದೇ ಮಂಡ್ಯದಲ್ಲಿ 27 ಎಕರೆ ಜಮೀನು ಮಿತಿ ಬರುತ್ತದೆ. ಅಷ್ಟು ಜಮೀನು ಎಷ್ಟು ಜನಕ್ಕೆ ಸಿಕ್ಕುತ್ತದೆ ? ಒಂದು ಸರಿಯಾದ ವಿವರಣೆಯನ್ನು ತೋರಿಸಲಾರದಂಥ ಕಾನೂನನು ಜಾರಿಗೆ ತರಬಾರದು. ಇಂತಹ ಅಸ್ಪಷ್ಟ ಕಾನೂನಿಗೆ ನಾನು ವಿರೋಧವಾಗಿದ್ದೇನೆಂದು ಹೇಳುತ್ತೇನೆ.

ಇನ್ನು ತಾಸೀಲ್ದಾರರಿಗೆ ಕಾರ್ಯಾಂಗವನ್ನು ಟ್ರಾನ್ಸ್‌ಫರ್ ಮಾಡಬೇಕೆಂದು ಈ ತಿದ್ದುಪಡಿಯಲ್ಲಿ ಸೂಚಿಸಿದೆ. ಈಗಾಗಲೇ 1, ಲಕ್ಷ 39 ಸಾವಿರ 613 ಕೇಸುಗಳು ಇತ್ಯರ್ಥವಾಗದೇ ಉಳಿದಿದೆ. ಅವನ್ನು ಈ ಕಾರ್ಯಭಾರವನ್ನು ತಹಸೀಲ್ದಾರರಿಗೆ ವಹಿಸಿದರೆ ಇನೂ ವಿಳಂಬವಾಗುತ್ತದ. ಈಗಾಗಲೇ 8-10 ವರ್ಷಗಳಿಂದ ಹೋರಾಡಿದರೂ ಕೇಸುಗಳು ಇನ್ನೂ ಇತ್ಯರ್ಥವಾಗಿಲ್ಲ. ಈ ರೀತಿ ಮಾಡಿದರೆ ಇನ್ನೂ 10–15 ವರ್ಷ ಹಿಡಿಯುತ್ತದೆ. ಮತ್ತು ಸರಕಾರ ಉದ್ದೇಶಿಸಿರುವಂತೆ ಇನ್ನು 2 ವರ್ಷಗಳಲ್ಲಿ ಭೂಸುಧಾರಣೆ ಕಾರ್ಯ ಪೂರ್ಣಗೊಳಿಸಲಾಗುವುದಿಲ್ಲ. ಸರಕಾರ ಇದನ್ನೆಲ್ಲಾ ಮಾಡುತ್ತಾ ಇರುವುದು ಚುನಾವಣೆಯ ಒಂದು ಅನುಕೂಲಕ್ಕಾಗಿ ಎಂದು ನಾನು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†**ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).**— ಸ್ವಾಮಿ, ಈ ಮಾನ್ಯ ಸಭೆಯ ಮುಂದಿರುವ ಭೂಸುಧಾರಣಾ ತಿದ್ದುಪಡಿಗೆ ನಾನು ವಿರೋಧಿಸುತ್ತೇನೆ ಮತ್ತು ಇದರ ಬಗ್ಗೆ ಒಂದೆರಡು ವಿಷಯಗಳನ್ನು ಸೂಚಿಸಲಿಕ್ಕೆ ಬಯಸುತ್ತೇನೆ.

ಈ ಭೂಸುಧಾರಣೆಯನ್ನು ತ್ವರಿತಗೊಳಿಸಿ ಅದರಿಂದ ಭೂಮಿಯನ್ನು ಗೇಣಿದಾರರಿಗೆ ಆದಷ್ಟು ಜಾಗ್ರತೆ ಕೊಡಬೇಕೆನ್ನುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ ಎಂದು ಹೇಳಿದ್ದಾರ. ಆದರೆ ಈ ತಿದ್ದುಪಡಿಯಲ್ಲಿ ಹೇಳುವಂತೆ ಗೇಣಿದಾರರಿಗೆ ಭೂಮಿ ಮಾಲೀಕತ್ವ ಸಿಕ್ಕಬೇಕಾದರೆ ಇನ್ನೂ ತಡವಾಗುತ್ತದೆ ಎಂದು ನನ್ನಲ್ಲಿ ಅನುಮಾನವಾಗಿದೆ. ಹಿಂದೆ ಮಾನ್ಯ ಸದಸ್ಯರು ಹೇಳಿದ ಹಾಗೆ ಇಷ್ಟರವರೆಗೆ ಇದ್ದ ಎಕರೆ ಲೆಕ್ಕಾಚಾರ ಇನ್ನು ಮೇಲೆ ಹೆಕ್ಟಾರಿಗೆ ಪರಿವರ್ತನೆ ಆಯಿತು, ಆಮೇಲೆ ಮೆಟ್ರಿಕ್ ಟನ್ ಪದ್ಧತಿ ಜಾರಿಗೆ ತರುತ್ತೇವೆ ಎಂದು ಒಂದು ತಿದ್ದುಪಡಿ ತಂದುದು ಆಯಿತು. ನೀವು ಆಗಾಗ್ಗೆ ತಿದ್ದುಪಡಿಗಳನ್ನು ತರುವುದು, ಅಧಿಕಾರಿಗಳಿಗೆ ಮತ್ತಷ್ಟು ಅಧಿಕಾರವನ್ನು ಕೊಡುವುದು ನಿಮ್ಮದೊಂದು ವೈಶಿಷ್ಟ್ಯ. ಹೆಕ್ಟಾರ್ಸ್ ಮತ್ತು ಮೆಟ್ರಿಕ್ ಪದ್ಧತಿಯಿಂದಾಗಿ ಗೇಣಿದಾರರಿಗೆ ತೊಂದರೆಯಾಗುತ್ತದೆ. ಯಾವ ಅನುಕೂಲವೂ ಆಗುವುದಿಲ್ಲ. ಆದಷ್ಟು ಬೇಗ ಈ ಭೂಸುದಾರಣೆ ಜಾರಿಗೆ ತರಬೇಕು ಎನ್ನುವುದು ಕನಸಿನ ಮಾತು ಆದೀತು ಎಂದು ನಾನು ಹೇಳಬಯಸುತ್ತೇನೆ.

ಸ್ವಾಮಿ, 1947ನೇ ಇಸವಿಯಲ್ಲಿ ನಮಗೆ ಸ್ವರಾಜ್ಯ ಸಿಕ್ಕಿದರೂ ಕೂಡ ಸರ್ಕಾರದವರು ಇಂದಿನ ತನಕ ಉಳುವವನೇ ಭೂಮಿ ಒಡೆಯನಾಗಬೇಕು, ಭೂಸುಧಾರಣೆ ಜಾರಿಗೆ ತರುತ್ತೇವೆ ಎಂದು ಹೇಳಿಕೊಂಡು ಬರುತ್ತಿದ್ದಾರೆ. ಚುನಾವಣೆಯಲ್ಲೂ ಕೂಡ ಹೇಳಿದ್ದಾರೆ. 1956 ರಲ್ಲಿ ಜತ್ತಿ ಸಮಿತಿ ನೇಮಕವಾಯಿತು. 1957 ರಲ್ಲಿ ಆ ಸಮಿತಿಯವರು ರಿಪೋರ್ಟ್ ಕೊಟ್ಟರು. 1961 ರಲ್ಲಿ ಇದಕ್ಕೆ ಭೂಸುಧಾರಣೆ ಕಾನೂನು ಮಾಡಿದ್ದಾರೆ. ಇಷ್ಟಾದರೂ ಕೂಡ ಅಲ್ಲಿಂದ ಇವೊತ್ತಿನವರಿಗೂ ಎಷ್ಟು ಪ್ರಗತಿ ಸಾಧಿಸಿದ್ದಾರೆ, ಲೆಕ್ಕಾಚಾರ ಹಾಕಿ ನೋಡಲಿ. ಈಗ ಕಾನೂನು ಮಾಡಿದ್ದೀರಲ್ಲಾ ಅದರಲ್ಲಿ ಎಷ್ಟು ಪ್ರಗತಿ ಸಾಧನೆ ಮಾಡಿದ್ದಾರೆ? ಈಗ ಕೇಸುಗಳು ಎಷ್ಟೋ ಉಳಿದಿವೆ. ಇದನ್ನು ತೀರ್ಮಾನ ಮಾಡಲಿಕ್ಕೆ ಮುನ್ಸೀಫರಿಗೆ ಅಧಿಕಾರವನ್ನು ಕೊಡುತ್ತೇವೆ ಎಂದು ಹೇಳುತ್ತಾರೆ. ಈಗ ಇರುವ ಕೋರ್ಟುಗಳು ಕೆಲಸ ಮಾಡುತ್ತಾ ಇರುವುದನ್ನು ನೋಡಿದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಟ್ರಿಬ್ಯೂನಲ್ ಕೋರ್ಟು ನಿದ್ದೆ ಮಾಡುತ್ತಾ ಇದೆ. ಅಲ್ಲಿ ಏನಾಗಿದೆ ಎಂದರೆ ಹೈಕೋರ್ಟಿನಲ್ಲಿ ಗೇಣಿವಿಚಾರದಲ್ಲಿ ಕೇಸಸ್ ವಜಾ ಅಗಿವೆ ಅವರಿಗೆ ಪುನಃ ಗೇಣಿ ನಿರ್ಣಯ ಮಾಡಲಿಲ್ಲ. ಈಗ ಇರುವ ಕೋರ್ಟು ಯಾವ ಕೆಲಸಗಳನ್ನೂ ಮಾಡದೆ ಸುಮ್ಮನೆ ಕುಳಿತಿದೆ. ಹೀಗಿರುವಾಗ ಇಂತಹ ಕಾನೂನನ್ನು ತಂದು ಜನರನ್ನು ವಂಚಿಸುವ ಬದಲು ನಾವು ಭೂಸುಧಾರಣೆಯನ್ನು ಜಾರಿಗೆ ತರುವುದಿಲ್ಲ ಎಂದು ಹೇಳುವುದು ಉತ್ತಮ. ಏಕೆಂದರೆ ಎಲ್ಲಾ ಕಾಲದಲ್ಲಿಯೂ ಎಲ್ಲರನ್ನೂ ವಂಚಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಇಂದು ಸರಕಾರದ ನೀತಿ ಹೇಗಿದೆ ಎಂದರೆ ಕೆಲಸ ಮಾಡದೇ ಬರೀ ಪೂರ್ಣ ನಟನೆಯಲ್ಲಿ ಸಾಗುತ್ತಿದೆ,

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಜನರನ್ನು ಸುಧಾರಣೆ ಮಾಡುವುದಕ್ಕಾಗಿ ದೇಶದಲ್ಲಿ ಬೇಗನೆ ಭೂಸುಧಾರಣೆ ತರುತ್ತೇವೆ ಎಂದು ಬಾಯಲ್ಲಿ ಹೇಳುತ್ತಿದ್ದಾರೆ. ಕೃತಿಯಲ್ಲಿ ಏನನ್ನೂ ಮಾಡುತ್ತಿಲ್ಲ. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ರತ್ನಕುಮಾರ್ ಕಟ್ಟೆಮಾರ್ ಅವರು ಈ ಬಿಲ್ಲಿನ ಬಗ್ಗೆ ಹೇಳುತ್ತಾ ಇದರಲ್ಲಿ ಬಹಳ ಬಡ ಜನರಾದ ಹೆಂಗಸರು ಅದರಲ್ಲೂ ವಿಧವೆಯವರು ಯಾವ ರೀತಿ ಸಂಕಟಪಟ್ಟು ಕಷ್ಟದ ನೋವುಗಳನ್ನು ಅನುಭವಿಸುತ್ತಿದ್ದಾರೆ ಎನ್ನುವುದನ್ನು ಹೇಳಿದರು. ಅವರು ಹೇಳುವಂತೆ ಭೂಮಾಲೀಕರಾಗಿರುವ ಹೆಂಗಸರಿಗೆ 1965ನೇ ಇಸವಿಯಿಂದ ಇಲ್ಲಿಯವರೆಗೂ ಅವರಿಗೆ ಸಲ್ಲಬೇಕಾದ ಗೇಣಿ ಸಿಗಲಿಲ್ಲ ಎಂದು ತಿಳಿದು ಬರುತ್ತಿದೆ. ಹೀಗಾದರೆ ಅವರು ಜೀವನ ಮಾಡುವುದಾದರೂ ಹೇಗೆ! ಇನ್ನೂ ಅಲ್ಲಿ ಯಾವ ರೀತಿ ರೆಂಟು ಕೊಡಬೇಕು ಎನ್ನುವುದೇ ನಿರ್ಧಾರವಾಗಿಲ್ಲ. ಇದರಲ್ಲಿ ಇಂತಹ ಬಡ ಹೆಣ್ಣು ಮಕ್ಕಳಿಗೆ ಹಾಗೂ ವಿಧವೆಯರಿಗೆ ಗೇಣಿ ಕೊಡುವಾಗ ಶೇಕಡಾ 50 ರಷ್ಟು ಕೊಡಬೇಕೆಂದು ಇದರಲ್ಲಿ ಮಾಡಿದರೆ ಇಂತಹ ಜನಕ್ಕೆ ತುಂಬಾ ಉಪಕಾರವಾಗುತ್ತದೆ. ಇಲ್ಲದೇ ಇದ್ದರೆ ಇವರಿಗೆ ಬರುವ ಗೇಣಿಯೂ ಹೋಗುತ್ತದೆ ಮತ್ತು ಈ ಜನ ಬಹುಕಷ್ಟ ಪಡಬೇಕಾಗುತ್ತದೆ ಇಂತಹ ಒಂದು ಸಹಾಯವನ್ನು ಅನಾಥರಿಗೆ ವಿಧವೆಯಾದವರಿಗೆ ಸೌಲಭ್ಯ ಕಲ್ಪಿಸಲು ಇದರಲ್ಲಿ ಅನುಕೂಲ ಮಾಡಿಕೊಡಬೇಕು. ಇಂತಹ ಒಂದು ವಿಶಿಷ್ಟ ರೀತಿಯ ಸೌಲಭ್ಯವನ್ನು ಸರಕಾರ ಮಾಡಬೇಕು ಎಂದು ಹೇಳುತ್ತೇನೆ. ನಮಗೆ ಜತ್ತಿಯವರ ರಿಪೋರ್ಟಿನಂತೆ ಮೈಸೂರು ರಾಜ್ಯದಲ್ಲಿ ಒಟ್ಟು 2,67,76,797 ಎಕರೆಯಷ್ಟು ಭೂಮಿ ಇದೆ. ಇದರಲ್ಲಿ 61,36,173 ಎಕರೆಗಳಷ್ಟು ಗೇಣಿಯಲ್ಲಿದೆ. ಇದರಲ್ಲಿ ಸೌತ್ ಕ್ಯಾನರಾದಲ್ಲಿ ಸುಮಾರು 9,41,195 ಎಕರೆಗಳಷ್ಟು ಗೇಣಿದಾರರಿದ್ದಾರೆ. ಎಂದರೆ ದಕ್ಷಿಣ ಕನ್ನಡದ ಶೇಖಡಾವಾರು 67.86 ಎಂದು ಬರುತ್ತದೆ. ಇದನ್ನು ನೋಡಿದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಹೆಚ್ಚು ಜನ ಗೇಣಿದಾರರು ಇದ್ದಾರೆ ಎನ್ನುವುದು ಇದರಲ್ಲಿ ಗೊತ್ತಾಗುತ್ತದೆ. ಈಗ ಇಲ್ಲಿ ಇಂತಹ ಒಂದು ಕಾನೂನಿನ ಸಂಕೋಲೆಗೆ ಇವರನ್ನೆಲ್ಲಾ ತಂದು ಕಟ್ಟುತ್ತಿದ್ದೀರಿ. ಇದರಿಂದ ಧಣಿ, ಒಕ್ಕಲುತನ ಮಾಡುವವರಿಗೆ ಹಾಗೂ ಗೇಣಿದಾರರಿಗೆ ಬಹಳ ತೊಂದರೆಯಾಗುತ್ತಿದೆ. ಇದರ ಬಗ್ಗೆ ಆದಷ್ಟು ಬೇಗ ಒಂದು ತೀರ್ಮಾನವನ್ನು ಸರ್ಕಾರ ನಿರ್ಧಾರ ಮಾಡಿ ಸಹಾಯ ಮಾಡಬೇಕಾದುದು ಅಗತ್ಯ. ಇದೂ ಅಲ್ಲದೆ ಇಲ್ಲಿರುವ ರೈತರಿಗಾಗಿ ರಾಷ್ಟ್ರೀಕರಣವಾಗಿರುವ ಬ್ಯಾಂಕುಗಳ ಮೂಲಕ ಸಾಲವಾಗಿ ಪಡೆದು ರೈತರಿಗೆ ಹಂಚಬೇಕು ಎಂದು ಮಾಡಿ ಅವರ ಮೇಲೆ ಶೇಕಡಾ 8 ರಷ್ಟು ಇಲ್ಲವೇ ಹತ್ತರಷ್ಟು ಬಡ್ಡಿ ಅವರ ಮೇಲೆ ಹೊರಿಸುವುದಾದರೆ ಒಕ್ಕಲುತನ ಮಾಡುವ ರೈತರಿಗೆ ಇದನ್ನು ಕೊಡುವುದು ಎಂದರೆ ಬಹಳ ಕಷ್ಟವಾಗುತ್ತದೆ. ಇದರ ಬಗ್ಗೆ ಸರಕಾರದ ನೀತಿ ಏನಿದೆ ಎನುವುದನ್ನು ಇಲ್ಲಿ ಸ್ಪಷ್ಟಪಡಿಸಬೇಕೆಂದು ಕೇಳುತ್ತೇನೆ. ಈ ರೀತಿ ಬಡ ಗೇಣಿದಾರರ ಮೇಲೆ ಹಾಗೂ ರೈತರಮೇಲೆ ಹೆಚ್ಚು ಬಡ್ಡಿ ಹೊರೆ ಹೊರಿಸಿ ಹಣವನ್ನು ವಾಪಸು ಕೊಡಬೇಕೆಂದರೆ ಅದನ್ನು ಕೊಡಲು ಸಾಧ್ಯವಾಗುವುದಿಲ್ಲ. ಹೀಗೆ ವಿಪರೀತವಾಗಿ ಜನರಮೇಲೆ ಹೊರೆ ಹೊರಿಸುವುದಾದರೆ ಮುಂದೆ ಜನ ದಂಗೆ ಎದ್ದಾರು. ಹೀಗೆ ಜನ ದಂಗೆ ಏಳಲು ಅವಕಾಶ ಕೊಡಬಾರದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† **Sri V. N. PATIL** (Humnabad).—Sir, I am happy because an honest attempt has been made by the Government in bringing this measure. They are honest enough to express in so many words that they are going to this extent and not beyond this to help the landless class and to decide the rent matters pending between the landlords and tenants. In the Governor's Adress it is stated as follows :

> "In order to quicken the adjudication of resumption applications, rent recovery applications, etc., pending before the Tribunals, the total number of Courts to deal with these applications has been augmented considerably. Further, such of the functions of the Tribunals as were of purely executive character, have now been delegated to the executive machinery of the Revenue Department. These changes were brought about by an amendment promulgated as an Ordinance on 2nd January 1970."

So, there is no intention on the part of the Government to bring in a progressive land legislation, and it is only to help the landless class that they have brought forward this amending Bill. I am very happy and I feel that the Hon'ble Minister for Revenue must also be happy.

Immediately after the promulgation of the Ordinance and after the introduction of the Bill, the Hon'ble Chief Minister, while giving a statement to the Press, said that in order to help the tenants, the poor agriculturists and to pay the compensation amount to the landlords they have secured the help of the nationalised Banks. I would like to ask the Hon'ble Chief Minister and the Hon'ble Minister for Revenue, through the Chair whether by paying compensation amount they are helping the tenants or the landless class. In our area, there is the Inam Abolition Act and the Jahgir Abolition Act. As per these Acts immediately the land vests with the Government, the Government grants 10 instalments for payment of the amount whereas here in the name of bringing a progressive land legislation, our Chief Minister is seeking the help of the Banks to give the amount in lumpsum, for which the interest has to be paid by the tenant, and instead of paying in ten instalments, he is bound to pay the entire amount within a year. This amount will go in the hands of the landlord, who is already blessed with thousands of acres of land. In this way our Government is shedding crocodile tears in the name of the tenants.

The policy of the Central Government is that we must distribute the land within a year. If we fail to bring progressive legislation and if we fail to distribute the land there will be a revolution. Here, our Minister says: "let us go with patience and slowly" and this speed requires at least 5 years I do not know whether the present Government continues for 5 years. Why don't you take up a legislation to fulfil the promise within 1970? If at all the Government were to survive till 1972, bring in a legislation within 1972. It is bogus to say that they will distribute the land within 5 years and solve the problem. Our Government has failed in this respect. About the decimal system, the Government has published several tables and the diaries also contain these tables. There are other Acts also like the Mysore Land Revenue Act, the Record of Rights Act, etc. The legislation that is brought forward serves the purpose of only a few by prolonging the period of vesting the land in the Government. Sir, in Kerala, within a period of about 1½ months, thirty to forty thousand acres of land was distributed. But, here, we are yet to receive information about the land we have to distribute among the people and who are the people that are holding the land. There is no reply for that. I have received several replies from the Hon. Minister saying that in due course those statements will be placed on the table of this House. I request the Hon. Minister to remember the class from which he comes – he comes from the agriculturists class, from a rural folk, an agriculturist class. Therefore let him volunteer himself first and be a model to others. Let

(SRI V. N. PATIL)

the Hon. Minister fix a target saying that by 31st December 1970 and before the budget session 1971 we are going to distribute the lands. This is very necessary.

Mr. SPEAKER.—Since this Bill has to be completed to-day itself, I want to know from the House, whether the time of the sitting could be extended by two hours *i.e.*, up to 8-00 P.M.

HON. MEMBERS.—Yes.

[MR. DEPUTY SPEAKER in the Chair]

†**ಶ್ರೀ ಕೆ. ಪ್ರಭಾಕರ್ (ವರ್ತೂರ್).**—ಮಾನ್ಯ ಅಧ್ಯಕ್ಷರೇ, ಮೈಸೂರು ಭೂಸುಧಾರಣಾ ಕಾನೂನು ತಡವಾಗಿ ಕುಂಟು ಹೆಜ್ಜೆ ಇಡುತ್ತಾ ಬರುತ್ತಿದೆ. ಈ ಕಾನೂನನ್ನು ಜಾಗ್ರತೆ ಜಾರಿಗೆ ತರಬೇಕೆಂದು ಕೇಂದ್ರ ಸರ್ಕಾರದವರು ರಾಜ್ಯಸರ್ಕಾರಕ್ಕೆ ತಿಳಿವಳಿಕೆ ಕೊಡಬೇಕಾದಂಥ ಪರಿಸ್ಥಿತಿ ಬಂದಿದೆ ಎಂಬ ಶಂಕೆ ಕೆಲವರ ಮನಸ್ಸಿನಲ್ಲಿ ಇದೆ. ಭೂಸುಧಾರಣಾ ಕಾನೂನು ಜಾರಿಗೆ ಬರುತ್ತದೆ ಎಂಬ ಮಾತನ್ನು ಭೂಮಿ ಇಲ್ಲದವರು ಕೇಳಿದರೆ ಅವರಿಗೆ ಬಾಯಲ್ಲಿ ನೀರು ಬರುವಂತೆ ಆಗುತ್ತದೆ. ಏಕೆಂದರೆ ಅವರಿಗೆ ಭೂಮಿ ಸಿಗುತ್ತದೆ ಎಂಬ ಕಾರಣದಿಂದ. ಸರ್ಕಾರದ ಬಳಿ ಹಂಚುವಂತಹ ಭೂಮಿ ಎಷ್ಟಿದೆ ಎಂಬ ಬಗ್ಗೆ ಜತ್ತಿ ಕಮಿಟಿಯನ್ನು ಮಾಡಲಾಗಿತ್ತು. ಆ ಕಮಿಟಿಯವರು ಬಹಳ ಶ್ರದ್ಧೆಯಿಂದ ವರದಿಯನ್ನು ತಯಾರಿಸಿದರು. ಆದರೆ ಅದು ನೀರು ಪಾಲಾಗಿದೆ. ಸರ್ಕಾರದವರು ಅಷ್ಟು ಜಮೀನು, ಇಷ್ಟು ಜಮೀನು ಇದೆ ಎಂದು ಲೆಕ್ಕ ಕೊಡುತ್ತಾ ಬಂದಿದ್ದಾರೆಯೇ ಹೊರತು ಅದನ್ನು ಹಂಚುವ ಕೆಲಸ ಮಾಡುತ್ತಿಲ್ಲ. ಭೂಸುಧಾರಣೆ ಮಾಡುತ್ತೇವೆಂದು ಹೇಳುತ್ತಲೇ ಇದ್ದಾರೆ. ಭೂಸುಧಾರಣೆ ಎಂದರೆ ಈ ಸರ್ಕಾರದವರು ಕರಿ ಭೂಮಿಯನ್ನು ಬಿಳಿಭೂಮಿ ಮಾಡುತ್ತಾರೆಂದು ಕಾಣುತ್ತದೆ. ಭೂಸುಧಾರಣೆಯಿಂದ ಉಳುವವನಿಗೆ ಭೂಮಿ ಸಿಗುತ್ತದೆಯೇ ಎಂದು ಕೇಳಿದರೆ ಒಂದು ರೂಪದಲ್ಲಿ ಇಲ್ಲ ಎಂದು ಹೇಳಬೇಕಾಗಿದೆ. ಸಾದಾ ಎಕರೆ ಇದ್ದರೆ ಚೆನ್ನಾಗಿರುವುದಿಲ್ಲ ಎಂದುಕೊಂಡು ಸ್ಟ್ಯಾಂಡರ್ಡ್ ಎಕರೆ ಎಂದು ಮಾಡಿದರು. ಭೂಸುಧಾರಣೆಯ ಬಗ್ಗೆ ಹೆಚ್ಚಿನ ಅಭಿಮಾನ ಇಟ್ಟುಕೊಂಡಿದ್ದ ಹಿಂದಿನ ರೆವಿನ್ಯೂ ಮಂತ್ರಿಗಳಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಸಹ ಸಾದಾ ಎಕರೆಯೇ ಇರಲಿ ಎಂದು ಹೇಳಿದ್ದರು. ಆದರೆ ಈಗಿನ ಸರ್ಕಾರದವರು ಟೆಕ್ನಿಕಲ್ ಆಗಿ ಸ್ಟ್ಯಾಂಡರ್ಡ್ ಎಕರೆ ಎಂದು ಮಾಡಿದರು. ಇವತ್ತು ಸ್ಟ್ಯಾಂಡರ್ಡ್ ಎಕರೆ ಎಂದರೆ ಇಷ್ಟು ಬೆಲೆ ಬಂದು ಕಡೆ ಮಾಡಿದ್ದರೆ ಮತ್ತೊಂದು ಕಡೆ ಸ್ಟ್ಯಾಂಡರ್ಡ್ ಎಕರೆಗೆ ಇನ್ನೊಂದು ಬೆಲೆ ಮಾಡಿದ್ದಾರೆ. Statement of Objects and Reasons ನಲ್ಲಿ "disposal of the accumulation of resumption Applications, Rent applications and other Miscellaneous applications" ಎಂಬುದಾಗಿ ಹೇಳಿದ್ದಾರೆ. ರಿಜಂಷನ್ ಮಾಡಿಕೊಳ್ಳುವವರು ಯಾರು ಎಂದರೆ, ಜಮೀನು ಇರುವವರು. ತಮ್ಮ ಜಮೀನನ್ನು ಲ್ಯಾಂಡ್ ರಿಫಾರಮ್ಸ್ ರೂಲ್ಸ್ ಪ್ರಕಾರ ಕಳೆದುಕೊಳ್ಳಬೇಕಾಗುತ್ತದೆಂದು ಕೆಲವರು ರಿಜಂಷನ್ ಅಪ್ಲಿಕೇಷನ್ ಕೊಟ್ಟಿದ್ದಾರೆ. ಯಾರು ಭೂಮಿಯೇ ಇಲ್ಲದೇ ಇದ್ದಾರೋ ಅಂಥವರಿಗೆ ಭೂಮಿ ಒದಗಿಸಿಕೊಡುವುದು ಸರ್ಕಾರದ ಕರ್ತವ್ಯ. ಅದರಂತೆ ಯಾರು ಭೂಮಿಯನ್ನು ಜೀವನಕ್ಕೆ ಆಶ್ರಯ ಮಾಡಿಕೊಂಡಿದ್ದಾರೋ ಅಂತಹವರಿಂದ ಜಮೀನನ್ನು ಕಿತ್ತುಕೊಳ್ಳದೆ ಅವರಿಗೂ ರಕ್ಷಣೆ ಕೊಡುವುದು ಸರ್ಕಾರದ ಕರ್ತವ್ಯ. ಹೆಚ್ಚಿನ ಜಮೀನು ಇರುವವರಿಂದ ಬೇಕಾದರೆ ಜಮೀನನ್ನು ಸರ್ಕಾರದವರು ಬಿಡಿಸಿಕೊಳ್ಳಲಿ. ಆದರೆ ಎಲ್ಲರಿಗೂ ಒಂದೇ ರೀತಿಯ ಕಾನೂನು ಮಾಡುವುದು ಸರಿಯಲ್ಲ. ಒಂದು ಕಾಲಕ್ಕೆ ಮೈಸೂರು ರಾಜ್ಯದಲ್ಲಿ ಗುಡ್ ಅಡ್ಮಿನಿಸ್ಟ್ರೇಷನ್ ಇತ್ತು. ಆ ಒಂದು ಒಳ್ಳೆಯ ಹೆಸರನ್ನು ಮಾಯಾ ಮಾಡುವುದಕ್ಕೆ ಈ ಸರ್ಕಾರದವರು ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ಕೇಂದ್ರಸರ್ಕಾರದವರು ನಿಮ್ಮ ಮುಖಕ್ಕೆ ಮಸಿ ಹಚ್ಚಿ, ಭೂಸುಧಾರಣೆಯನ್ನು ಜಾಗ್ರತೆ ಜಾರಿಗೆ ತನ್ನಿ ಎಂದು ಹೇಳಿದ ಮೇಲೆ ಈ ಕೆಲಸವನ್ನು ಚುರುಕು ಮಾಡುತ್ತಿದ್ದಾರೆಂದು ಹೇಳುತ್ತಿದ್ದೇನೆ.

ಮಾನ್ಯ ರೆವಿನ್ಯೂ ಮಂತ್ರಿಗಳು ಲ್ಯಾಂಡ್ ಲಾರ್ಡ್ ಹೌದೋ ಇಲ್ಲವೋ ಗೊತ್ತಿಲ್ಲ. ಈಗತಾನೆ ಅವರು ಈ ಸಭೆಯಲ್ಲಿ ಮಾತನಾಡಿದುದನ್ನು ನೋಡಿದರೆ ಅವರು ಲ್ಯಾಂಡ್ ಲಾರ್ಡ್ ಇದ್ದರೂ ಇರ

ಬಹುದು ಎಂದು ಕಾಣುತ್ತದೆ. ಅವರು ಮೃದುವಾಗಿ ಮಾತನಾಡುವುದು ಮತ್ತು ಅವರ ಸರಳ ವ್ಯಾಸದ ಗುಣ ಇವೆಲ್ಲಾ ನೋಡಿದರೆ ಅವರು ಲ್ಯಾಂಡ್ ಲಾರ್ಡ್ ಎಂದು ಕಾಣುವುದಿಲ್ಲ. ಬಡವರ ವಿಷಯದಲ್ಲಿ ಅವರು ಮಾಡುವ ಸಹಾಯ ಏನು, ಬಡವರ ವಿಷಯದಲ್ಲಿ ಅವರ ಮನೋಭಾವ ಏನು ಎಂಬುದನ್ನು ಈಗ 3 ವರ್ಷಗಳಿಂದ ಪತ್ತೆ ಮಾಡುವುದಕ್ಕೆ ಆಗಲಿಲ್ಲ. ಈಗ ಈ ತಿದ್ದುಪಡಿಯ ಮಸೂದೆಯ ಪ್ರಕಾರ ಭೂಸುಧಾರಣೆಗೆ ಸಂಬಂಧಪಟ್ಟ ಕೇಸುಗಳನ್ನು ಲ್ಯಾಂಡ್ ಟ್ರಿಬ್ಯುನಲ್‌ಗಳು ನಡೆಸುವುದರ ಜೊತೆಗೆ ಮುನ್ಸೀಫ್ ಕೋರ್ಟುಗಳು ಮತ್ತು ತಹಶೀಲ್ದಾರರು ನಿರ್ವಹಿಸುತ್ತಾರೆ. ಈ ಭೂಸುಧಾರಣೆಯನ್ನು ಜಾರಿಗೆ ತರುವುದರಲ್ಲಿ ಬಡವರ ಬಗ್ಗೆ ಇವರಿಗೆ ಮನಸ್ಸಿಲ್ಲ. ರಾಜ್ಯಾಂಗದಲ್ಲೇನೋ ಹರಿಜನರಿಗೆ ಭೂಮಿಯನ್ನು ಕೊಡಬೇಕು, ಇತರ ಸೌಲಭ್ಯವನ್ನು ಕೊಡಬೇಕು ಎಂದು ಬರೆದಿದ್ದಾರೆ. ಆದರೆ ಸರ್ಕಾರವನ್ನು ನಡೆಸತಕ್ಕವರು ಧರ್ಮವಾಗಿ ಆ ನೀತಿಯನ್ನು ಪಾಲನೆ ಮಾಡುತ್ತಿಲ್ಲ. ಸರ್ಕಾರದವರು ಬಡವರ ಬಗ್ಗೆ, ಹರಿಜನರ ಬಗ್ಗೆ ಆಸಕ್ತಿಯನ್ನು ವಹಿಸಿ ಅವರಿಗೆ ಸಹಾಯ ಮಾಡದಿದ್ದರೆ ಅವರ ಗತಿ, ಅವರ ಪರಿಸ್ಥಿತಿ ನೆಟ್ಟಗಾಗುವುದಿಲ್ಲ. ಭೂಸುಧಾರಣೆ ಸಮಸ್ಯೆಯನ್ನು ಸರ್ಕಾರದವರು ಯಾರೀತಿ ಬಗೆಹರಿಸುತ್ತಾರೆಯೋ, ಎಷ್ಟು ದಿವಸಗಳಲ್ಲಿ ಇದನ್ನು ಇತ್ಯರ್ಥ ಮಾಡುತ್ತಾರೆಯೋ ಅದು ಬೇರೆ ಮಾತು. ಆದರೆ ಈ ಸಮಸ್ಯೆಯನ್ನು ಎಲ್ಲರೂ ಮೆಚ್ಚತಕ್ಕ ರೀತಿಯಲ್ಲಿ ಮಾಡತಕ್ಕ ಎದೆಗಾರಿಕೆ ಮತ್ತು ದಿಟ್ಟತನ ಇವರಿಗೆ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಈ ಒಂದು ಶಾಸನ ಯಾವಾಗ ಇವರ ಕೈಗೆ ಬಂತೋ ಆಗಲೇ ನಾನು ಅಂದುಕೊಂಡೆ ಇದು ಒಂದು ಕರಾಳ ಶಾಸನವಾಗುತ್ತದೆ ಎಂದು. ಇದರಲ್ಲಿರತಕ್ಕ ನೀತಿ ಏನು ? ಬಡವರಿಗೆ ಇರತಕ್ಕ ತೊಂದರೆಗಳನ್ನು ನಿವಾರಣೆ ಮಾಡುತ್ತೇವೆ, ಟೆನೆಂಟುಗಳಿಗೆ ಉಪಕಾರ ಮಾಡುತ್ತೇವೆ, ಇದಕ್ಕೆ ಸರಿಸಮನಾದ ಕ್ರಯಧನವನ್ನು ಪೂರ್ತಿಯಾಗಿ ಏಕಗಂಟಿನಲ್ಲಿ ಸಲ್ಲಿಸಿ ವಿಳಂಬವಿಲ್ಲದೆ ಸ್ವಾಮ್ಯಾಧಿಕಾರವನ್ನು ಪಡೆಯಲು ಗೇಣಿದಾರರಿಗೆ ಸಾಕಷ್ಟು ಧನಸಂಪತ್ತಿ ಇರಲಾರದ ಕಾರಣ ರಾಷ್ಟ್ರೀಕೃತ ಬ್ಯಾಂಕುಗಳ ನೆರವನ್ನು ಕೋರಲಾಗಿದೆ ಎಂದು ರಾಜ್ಯಪಾಲರ ಭಾಷಣದಲ್ಲಿ ರಾಜ್ಯಪಾಲರಿಂದ ಹೇಳಿಸಿದ್ದಾರೆ. ಇದರ ಬಗ್ಗೆ ಸರ್ಕಾರದವರೇ ನೇರವಾಗಿ ಬ್ಯಾಂಕುಗಳಿಂದ ಹಣವನ್ನು ತೆಗೆದುಕೊಂಡು ಒಂದು ಪಾಲಿಸಿ ರೂಪದಲ್ಲಿ ಭೂಮಿಗೆ ಹಣವನ್ನು ಕೊಟ್ಟು ಬಡವರಿಗೆ ಉಪಕಾರ ಮಾಡಬಹುದಾಗಿತ್ತು. ಏತಕ್ಕೆಂದರೆ ಈಗಾಗಲೇ ರೈತರು ಸಾಲದಲ್ಲಿ ಮುಳುಗಿ ಹೋಗಿದ್ದಾರೆ. ಅವರ ಮೇಲೆ ಮತ್ತಷ್ಟು ಸಾಲವನ್ನು ಹೇರಿದರೆ ಅವನು ಚೇತರಿಸಿಕೊಳ್ಳುವುದು ಕಷ್ಟವಾಗುತ್ತದೆ. ಅನ್ ಅಥರೈಜ್ಡ್ ಕಲ್ಟಿವೇಷನ್‌ನಲ್ಲಿರತಕ್ಕ ಭೂಮಿ ಏನಿದೆ ಅದನ್ನು ಬಡವರಿಗೆ ಕೊಡಿ ಎಂದು ಹೇಳಿದರೆ ಆ ಬಗ್ಗೆ ಸರ್ಕಾರದವರು ನಿಗಾ ಕೊಡುವುದಿಲ್ಲ. ಎಲ್ಲೆಲ್ಲಿ ಸರ್ಕಾರಿ ಜಮೀನು ಇದೆಯೋ ಅದನ್ನು ದೀನದಲಿತರಿಗೆ ಬಡವರಿಗೆ ಕೊಡಿ ಎಂದು ಹೇಳಿದರೆ ಅದನ್ನು ಇನ್ನೂ ಯೋಚನೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಯಾವ ಊರಿನಲ್ಲಿಯೂ ಬಡವರಿಗೆ ಜಮೀನಿಲ್ಲ. ನಮಗೆ ಸ್ವರಾಜ್ಯ ಬಂದಮೇಲೂ ಕೂಡ ಹರಿಜನರಿಗೆ ದೀನದಲಿತರಿಗೆ ಯಾವ ಯಾವ ಸೌಲಭ್ಯಗಳು ಎಷ್ಟರಮಟ್ಟಿಗೆ ಸಿಕ್ಕಬೇಕೆಂದು ನಾವು ನಿರೀಕ್ಷಣೆ ಮಾಡಿದ್ದೆವೋ ಅಷ್ಟರ ಮಟ್ಟಿನ ಸೌಲಭ್ಯ ಮತ್ತು ಸವಲತ್ತುಗಳು ಸಿಕ್ಕಿಲ್ಲ. ಅದನ್ನು ಕೇಳುವ ಎದೆಗಾರಿಕೆ ಯಾರಿಗೂ ಇಲ್ಲ. ಎಷ್ಟೋ ವರ್ಷಗಳಿಂದ ಅನ್‌ಅಥರೈಸ್ಡ್ ಆಗಿ ಕಲ್ಟಿವೇಷನ್ ಮಾಡಿರತಕ್ಕ ಭೂಮಿ ಹರಿಜನರ ವಶದಲ್ಲಿ ಎಷ್ಟಿದೆ ಎಂಬುದನ್ನು ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಲಿ. ನಾನು ನನ್ನ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಬಡವರಿಗೆ ಸಂಬಂಧಪಟ್ಟ ಅಂಕಿ ಅಂಶಗಳು ಇವರ ಕೈಯಲ್ಲಿ ಇಲ್ಲ. ಇವರು ಜನಗಳಿಗೆ ಯಾವರೀತಿ ಉಪಕಾರ ಮಾಡುತ್ತಾರೆ. ಇವರನ್ನು ಜನ ಹೇಗೆ ಮೆಚ್ಚುತ್ತಾರೆ ? ಬಡವರು ಕಣ್ಣೀರು ಹಾಕುತ್ತಿದ್ದಾರೆ. ಇವರಿಗೆ ಪಾಪ ಪುಣ್ಯದ ಭೀತಿ ಇದ್ದರೆ ಬಡವರು ಗೋಳಾಡುತ್ತಿರುವುದು ಇವರ ಮನಸ್ಸಿಗೆ ಬಂದಿದ್ದರೆ ಬಡವರ ಬಗ್ಗೆ ಆಸಕ್ತಿಯನ್ನು ವಹಿಸುತ್ತಿದ್ದರು. ಒಡಗೇಣಿದಾರರುಗಳಿಗೆ ಜಮೀನುಗಳಲ್ಲಿ ಉಳಲು ಕಿರುಕುಳ ಜಾಸ್ತಿಯಾಗುತ್ತಿದೆ. ಅದನ್ನು ತಪ್ಪಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಲಿಲ್ಲ. ಬಡವರಿಗೆ ಜಮೀನು ಮಂಜೂರು ಮಾಡುವುದನ್ನು ವಿಳಂಬ ಮಾಡುತ್ತಿದ್ದಾರೆ ಜಮೀನಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಸಂಗ್ರಹ ಮಾಡುವ ಬಗ್ಗೆ ನಾವೇನಾದರೂ ಕೇಳಿದರೆ ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳುತ್ತಾರೆ ಅಲ್ಲಿಗೆ ಕಾಗದವನ್ನು ಬರೆದಿದ್ದೇವೆ, ಇಲ್ಲಿಗೆ ಕಾಗದವನ್ನು ಬರೆದಿದ್ದೇವೆ ಎಂದು ಹೇಳುತ್ತಾರೆ. ಆದರೆ ಅವರು ಬರೆದ ಕಾಗದ ಪತ್ರಗಲ್ಲ ಶಿವಾಜಮಾ ಆಗುತ್ತದೆ. ಮಾಗಡಿ ತಾಲ್ಲೂಕಿನಲ್ಲಿ ಸೇಕದಾರರು ಲಿಂಗಾಯಿತರು, ಮೇಲಿನ ಆಫೀಸರು ಲಿಂಗಾಯಿತರು, ರೆವಿನ್ಯೂ ಮಂತ್ರಿಗಳು ಲಿಂಗಾಯಿತರು ಇರುವಾಗ ಹರಿಜನರಿಗೆ ಜಮೀನು ಹೇಗೆ ಸಿಕ್ಕುತ್ತದೆ ? ಅಂತೂ ಇಂತೂ ಕುಂತಿಮಕ್ಕಳಿಗೆ ರಾಜ್ಯವಿಲ್ಲ. ಹರಿಜನರಿಗೂ ಬಡವರಿಗೂ ಜಮೀನು ಸಿಕ್ಕುವುದಿಲ್ಲ. ಇವೊತ್ತು ಸರ್ಕಾರದ ಬೇರು ಸಡಿಲವಾಗುತ್ತಿದೆ. ದಿವಾನರ ಕಾಲದಲ್ಲಿ ಬಡವರ ಕೂಗು ಅವರಿಗೆ ಮುಟ್ಟುತ್ತಿತ್ತು. ಐ. ಜಿ. ಪಿ. ಯವರಿಗಾಗಲೀ, ಅಥವಾ ಡೆಪ್ಯುಟಿ ಕಮೀಷನರಿಗಾಗಲೀ ಯಾರಾದರೂ ಯಾವುದಾದರು ಒಂದು ವಿಷಯದ ಬಗ್ಗೆ ಒಂದು ಟೆಲಿಗ್ರಾಂ

(ಶ್ರೀ ಕೆ. ಪ್ರಭಾಕರ್)

ಕೊಟ್ಟರೆ ಎರಡು ಗಂಟೆಯೊಳಗಾಗಿ ಸ್ಥಳಕ್ಕೆ ಬಂದು ನೋಡುತ್ತಿದ್ದರು. ಸ್ವರಾಜ್ಯ ಬಂದಮೇಲೆ ಅದು ಒಂದು ದುರಾದೃಷ್ಟವೋ ಏನೋ ಬಡವರ ಅರ್ಜಿಗೆ ಬೆಲೆಯೇ ಬರುವುದಿಲ್ಲ. ಮತ್ತು ಬಡವರಿಗೆ ಪ್ರಯೋಜನವೂ ಆಗುವುದಿಲ್ಲ. ಮಾನ್ಯರೆವಿನ್ಯೂ ಮಂತ್ರಿಗಳು ಲಾ ಓದಿದ್ದಾರೆ, ಅನುಭವಿಗಳು ಕ್ಯಾಬಿನೆಟ್‌ನಲ್ಲಿರತಕ್ಕ ಮಂತ್ರಿಗಳಲ್ಲಿ ಇವರೇ ಹಿರಿಯರು ಹಾಗೂ ಧರ್ಮರಾಯರು ಎಂದು ಹೇಳುತ್ತಾರೆ. ಇವರಿಗೆ ವಯಸ್ಸೂ ಜಾಸ್ತಿಯಾಗಿದೆ. ಶ್ರೀಮಾನ್ ದೊಡ್ಡಮೇಟಿಯವರನ್ನು ಬಿಟ್ಟರೆ ಮಂತ್ರಿಮಂಡಲದಲ್ಲಿ ಇವರೇ ವಯಸ್ಸಿನಲ್ಲಿ ದೊಡ್ಡವರು ಎಂದು ಹೇಳುತ್ತಾರೆ. ಮತ್ತು ಬಡವರ ಕಷ್ಟ ಇವರಿಗೆ ಗೊತ್ತಿದೆ ಎಂದೂ ಹೇಳುತ್ತಾರೆ. ಬಡವರ ವಿಷಯದಲ್ಲಿ ಇವರೇನಾದರೂ ಹೇಳಿದರೆ ಒಬ್ಬ ಆಫೀಸರೂ ಇವರ ಮಾತನ್ನು ಕೇಳುವುದಿಲ್ಲ. ಒಂದು ಕಡೆ ಕೆರೆಯ ಜಮೀನನ್ನು ಉತ್ತಿರುವುದನ್ನು ಅವರಿಗೆ ತಿಳಿಸಿ ಅರ್ಜಿಕೊಟ್ಟಿದ್ದಾರೆ ಎನ್ನುವ ವರ್ತಮಾನ ಬಂದಿತ್ತು. ಆ ಬಗ್ಗೆ ಏನಾಗಿದೆ, ಎನ್ನುವ ವರ್ತಮಾನವನ್ನು ತರಿಸುವುದಕ್ಕೆ ನಾನು ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಎಷ್ಟೋ ಸಲ ಬರೆದಿದ್ದೇನೆ. ಆದರೂ ಸಹ ಅದನ್ನು ಮಾನ್ಯ ಮಂತ್ರಿಗಳು ತರಿಸಿಲ್ಲ. ಇವರಿಗೆ ಅದೇನು ಕಷ್ಟವೋ ಇವರ ಮಾತನ್ನು ಅಧಿಕಾರಿಗಳು ಕೇಳುತ್ತಾರೆಯೋ ಇಲ್ಲವೋ ಗೊತ್ತಿಲ್ಲ. ಇವರ ಘನ್ನಿಗೆ ಬೆಲೆ ಇದೆಯೋ ಇಲ್ಲವೋ ಗೊತ್ತಿಲ್ಲ. ಇವರ ಮಾತನ್ನು ಕೇಳುವ ಅಧಿಕಾರಿಗಳೇ ಇಲ್ಲ. ಬಡವರಿಗೆ ಮತ್ತು ದೀನ ದಲಿತರಿಗೆ, ಹರಿಜನರಿಗೆ ಉಪಕಾರ ಮಾಡುವ ವಾಂಛಲ್ಯ ಇವರಿಗೆ ಇಲ್ಲ. ಇವರಿಗೆ ಆ ಮನಸ್ಸೂ ಇಲ್ಲ ಹರಿಜನ ಸದಸ್ಯರ ಬೆಂಬಲದಿಂದ ಇವೊತ್ತು ಮೈಸೂರು ಸರ್ಕಾರ ನಡೆಯುತ್ತಿದೆ. ನಾವು ಹರಿಜನ ಸದಸ್ಯರು 31 ಜನಗಳಿದ್ದೇವೆ. ನಾವು ಏಕೆ ಇವರಿಗೆ ಸಹಾಯ ಮಾಡುತ್ತಿದ್ದೇವೆ ಇದು ನಿಜವಾಗಿಯೂ ತುಂಬಾ ಅನ್ಯಾಯ. ಈಗ ಅದಕ್ಕೂ ಕಾಲ ಸನ್ನಿಹಿತವಾಗುತ್ತದೆ. ಈಗ ಸರ್ಕಾರದವರು ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆ ಲ್ಯಾಂಡ್ ರೆಜ್ಯೂಮ್ ಮಾಡುತ್ತೇವೆ ಎಂದು ಹೇಳುತ್ತಾರೆ. ಜಮೀನು ಇರುವವರ ಹತ್ತಿರ ತೆಗೆದುಕೊಳ್ಳಿ. ಆದರೆ ಬಡವರಿಂದ ಜಮೀನು ಕಿತ್ತುಕೊಳ್ಳಬೇಡಿ. ಹರಿಜನರು ಕಲ್ಟಿವೇಟ್ ಮಾಡುತ್ತಿದ್ದಂತಹ ಬೇಕಾದಷ್ಟು ಜಮೀನನ್ನು ಅವರ ಕೈ ಬಿಡಿಸಿದ್ದಾರೆ. ಯಾವ ಜಮೀನು ಇಲ್ಲ. ಸರ್ಕಾರದವರು ಲ್ಯಾಂಡ್ ರೆಜ್ಯೂಮ್ ಮಾಡಿಕೊಳ್ಳುವುದಕ್ಕೆ ಜೀರೋ ಮಾಡಿದ್ದಾರೆ. ಹೀಗಿರುವಾಗ ಸರ್ಕಾರದವರು ಭೂಸುಧಾರಣೆಯನ್ನು ಜಾರಿಗೆ ತಂದು ಯಾವ ಜಮೀನನ್ನು ರೆಜ್ಯೂಮ್ ಮಾಡುತ್ತಾರೆಯೋ ನನಗೆ ಗೊತ್ತಿಲ್ಲ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†**Sri D. B. KALMANKAR.**—Mr. Speaker Sir, recently, the Central Home Ministry has isued an information that in this country in rural areas, there is a great land hunger and if that land hunger is not appreciated in time, and equitable distribution is not made in the interest of agricultural labourers and small tenants, there is every possibility that in this country instead of a green revolution coming, there will be a red revolution. Now it was in this perspective that the Chief Ministers' conference took place at New Delhi.

The Central Government was anxious to see that radical land reforms took place in this country and they also gave an ultimatum that if it was not done then something extraordinary would have to be done by the Centre. The Government which is ruling here. swears by democratic socialism and they surpassed the Indira Gandhi Congress by saying that they would do this and that and people at large were thinking that by this amendment the Veerendra Patil Government was giong to bring some revolutionary change in this State. They were thinking that this Land Reforms Amendment Bill was going to be in favour of the small holders and agricultural labourers and that there was going to be distribution of land on a very revolutionary basis. But what I find after going through this so-called amendment of the Land Reforms Act is only small things. Instead of saying acres they want to say hectares and instead of the Tribunal doing the work they say that the Tahsildar will do it and the court will function as a

Tribunal. Except these, I have failed to see any merit in this Bill. It is utterly disappointing to the agricultural labourers and the tenants. What we find today is that even the Record of Rights are not truly maintained in the villages. There are persons who are cultivating the lands but the Village Accountant who is generally the agent of the landlords and the propertied people writes the name of the owner and says that he is cultivating by himself. So, unless such records are corrected, I think nothing can be done in the interest of the agricultural labourers and the tenants.

Then it was said that the tenants are given all the facilities, that free legal aid is being given to them. It is there in the provisions of the Act but so far as my experience goes, in the disposal of resumption cases under Section 14 and Rent cases nowhere has the tenant been given free legal aid. Now a statement is issued as if this State is the first State to do a lot for the tenants. They want to give an appearance that this Ministry is a progressive Ministry and that it is going ahead of other States.

Then, I want to come to the ceiling area. Normally the ceiling area given here is 18 standard acres. The land a family can possess works out to more than 144 acres and in some casses if there are more members in an undivided Hindu family it may also go to 27 standard acres. I want to show how this is not really a revolutionary or socialistic legislation. Take the case of Bombay's Tenancy Law of 1948. There land is divided into only three categories : on is jirayat land *i.e.*. dry land and the maximum dry land a man can possess is 48 acres, There is another class which is seasonally irrigated and the ceiling in respect of this class of land is 24 acres and then comes the perennially irrigated land of which a man can hold 12 acres. Compared to the Bombay legislation, our ceiling is many times more. I thought that the ceiling area would be brought down and land would be made available for distribution after vesting it in Government. But it seems that vesting of land is not going to take place so early. Under Section 44 all those lands which are not resumable must vest in Government. For that notification must be issued and that notification has to be issued after all these cases are disposed of. As we all know, there are a lot of pending cases which are to be disposed of. That will take at least a period of 5 to 10 years. Till then, no vesting of non-resumable lands is going to take place. The question of distribution arises after the vesting of non-resumable lands in the Government Then there are other categories of limited owners and these lands also will have to be surrendered. Though there are some provisions, they will not come into force so early and I fail to see any ray of hope in the present amending Bill. It is most reactionary ; there is nothing in favour of the small man, agricultural labourer and tenant. So, this particular Bill is not at all progressive. So, I vehemently oppose this Bill and I thank the Chair for having given me an opportunity to say a few words.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಭೂಸುಧಾರಣೆಯ ಕಾನೂನು ಬಗ್ಗೆ ತಂದಿರತಕ್ಕ ತಿದ್ದುಪಡಿ ಏನಿದೆ, ಇದರಲ್ಲಿ ಭೂಸುಧಾರಣೆಯನ್ನು ತರುವುದಕ್ಕೆ ಏನೇನು ತೊಂದರೆ ಇದೆ, ಮತ್ತು ಭೂಸುಧಾರಣೆ ತರುವ ಒಳಗೆ ಭೂಮಿಯು ರೈತರ ಕೈಯಿಂದ ಇದು ತಪ್ಪಿಹೋಗುವ ಪರಿಸ್ಥಿತಿ ಏನಿದೆ, ಇದಕ್ಕೆಲ್ಲಾ ಅನುಕೂಲವಾಗುವ ತಿದ್ದುಪಡಿಯನ್ನು ಸಭೆಯ ಮುಂದೆ ತರುತ್ತಾರೆಂದು ಭಾವಿಸಿದ್ದೆ. ಆದರೆ ನಮ್ಮ ಮುಂದೆ ತಂದಿರತಕ್ಕಂತಹ ತಿದ್ದುಪಡಿ ಮಸೂದೆಯನ್ನು ನೋಡಿದರೆ, ಸರ್ಕಾರಕ್ಕೆ ಏನೋ ಒಂದು ಮಾಡಬೇಕು, ನಾವು ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಹೇಳುವುದಕ್ಕೋಸ್ಕರ ಇದನ್ನು ತಂದಿದ್ದಾರೆ. ಇದನ್ನು ಕಾರ್ಯತಃ ಮಾಡುವುದಕ್ಕಾಗಲ್ಲ. ಈಗ ಎಷ್ಟೋ ಲ್ಯಾಂಡ್ ಟ್ರಿಬ್ಯುನಲ್‌ಗಳಲ್ಲಿ ಕೇಸುಗಳನ್ನು ಹಾಕಿದ್ದಾರೆ. ಬಡವರಾದ ಜನರು ಕೋರ್ಟಿನಲ್ಲಿ ಒಪ್ಪಿಕೊಳ್ಳಲೇ ಬೇಕು, ಇಲ್ಲದಿದ್ದರೆ, ಧನಿಕರು, ನಿನ್ನ ತಲೆ ಒಡೆದು ಹಾಕುತ್ತೇನೆ, ಎಂಬ ಬೆದರಿಕೆಯನ್ನು ಹಾಕುತ್ತಿದ್ದಾರೆ. ಇವತ್ತು ಅನೇಕ ಭೂಸ್ವಾಮಿಗಳು ಈರೀತಿ ಬಡ ಜನರನ್ನು ಸತಾಯಿಸಿ ಹೆದರಿಸುತ್ತಿದ್ದಾರೆ. ರೈತನಿಂದ ಭೂಸ್ವಾಮಿಗೆ ಭೂಮಿಯನ್ನು ಕೊಡಲು ಒಪ್ಪಿಕೊಳ್ಳುತ್ತೇನೆಂದು, ಬೆದರಿಕೆ ಹಾಕಿ ಭೂಸ್ವಾಮಿಗಳು ಬರೆಸಿಕೊಳ್ಳುತ್ತಿದ್ದಾರೆ. ಈಗ ಹೀಗೆ 100ಕ್ಕೆ 50 ಭಾಗದ ಕೇಸುಗಳೆಲ್ಲಾ ಈ ರೀತಿ ರಾಜಿಯಿಂದ ಆಗಿರುವಂತಹ ತೀರ್ಮಾನಗಳು. ಭೂಸ್ವಾಮಿಗಳು ಒಂದು ಭೂಸೈನ್ಯವನ್ನೇ ಕಟ್ಟುತ್ತಿದ್ದಾರೆ. ಗೇಣಿ ರೈತರಿಗೆ ಭೂಸ್ವಾಮಿಗಳಿಂದ ಚಿತ್ರಹಿಂಸೆಯಾಗುತ್ತಿದೆ. ಯಾವಪೋಲೀಸ್ ಸ್ಟೇಷನ್ನಿನಲ್ಲೂ ಗೇಣಿದಾರರು ಅರ್ಜಿಕೊಟ್ಟರೆ ಅದರಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಇದು ಮಾಮೂಲಾಗಿ ನಡೆಯುತ್ತಿದೆ. ಹೀಗೆ ರೈತನನ್ನು ಭೂಸ್ವಾಮಿಗಳು ಸದೆಬಡಿದು, ತಮ್ಮ ಇಷ್ಟದಂತೆ ಬರೆಸಿಕೊಂಡು ಅವನಿಗೆ ಅನ್ಯಾಯವನ್ನು ಮಾಡುತ್ತಿದ್ದಾರೆ. ಸರ್ಕಾರದವರು ಭೂಸುಧಾರಣೆ ಮಾಡುತ್ತೇವೆಂದು ಹೇಳಿ ಅರ್ಧ ಮನಸ್ಸಿನಿಂದ ಪ್ರಯೋಜನ ಭೂಸ್ವಾಮಿಗಳಿಗೆ. ಇದರಿಂದ ನಿಜವಾಗಿಯೂ ಅನೇಕ ಜನ ರೈತರಿಗೆ ಸ್ವಾಧೀನದಲ್ಲಿದ್ದ ಭೂಮಿ ಸಹ ತಪ್ಪಿಹೋಗುತ್ತದೆ. ಇನ್ನು ಎಷ್ಟೋ ಕಡೆಗಳಲ್ಲಿ ಜಮೀನ್ದಾರರು, ರೈತರಿಗೆ 200-300 ರೂಪಾಯಿ ಕೊಟ್ಟುಬಿಟ್ಟು ಉಪಾಯ ಮಾಡಿ ಭೂಮಿಯನ್ನು ಬಿಡಿಸಿಕೊಂಡು ಬಿಟ್ಟಿದ್ದಾರೆ. ಭೂಸಮಸ್ಯೆಯ ಬಗ್ಗೆ ಕಾನೂನು ಮಾಡುತ್ತೇವೆ ಎಂಬುದಾಗಿ ಹೇಳಿದಮೇಲೆ ಅನೇಕ ಜನರು ಭೂಸ್ವಾಮ್ಯಗಳು ತಮ್ಮ ಜಮೀನುಗಳನ್ನು ವಿಭಾಗಮಾಡಿದ್ದಾರೆ. ಭೂಸ್ವಾಮಿಯಾದವನಿಗೆ 500 ಎಕರೆಗಳಿದ್ದರೆ ಅವನು ಮಕ್ಕಳ, ಮೊಮ್ಮೊಕ್ಕಳ ಹೆಸರಿಗೆ ಒಂದೇ ಮನೆಯಲ್ಲಿದ್ದರೂ ಅದನ್ನು ಬೇರೆಬೇರೆಯಾಗಿ ಖಾತೆ ಮಾಡಿಸಿಟ್ಟಿದ್ದಾನೆ. ಭೂಸುಧಾರಣೆಯ ಕಾನೂನು ಆದಮೇಲೆ ಅದಕ್ಕಿಂತ 10 ವರ್ಷಗಳ ಹಿಂದೆ ಯಾವ್ಯಾವ ರೀತಿಯಾಗಿ ಜಮೀನಿನ ವಿಭಾಗ ಮತ್ತು ಇತರ ಪರಭಾರೆಗಳನ್ನು ಹೇಗೆ ರದ್ದುಮಾಡಬೇಕೆಂಬುದನ್ನು ಯೋಚಿಸಿ ತಿದ್ದುಪಡಿ ತರಬೇಕಾಗಿದೆ. ರೆವಿನ್ಯೂ ಮಂತ್ರಿಗಳು ಇಷ್ಟಪಟ್ಟರೆ ಕೆಲವು ಕಾಪಿಗಳನ್ನು ತಂದು ಕೊಡುತ್ತೇನೆ. ಜಮೀನ್ದಾರರು ಅವರ ಮಕ್ಕಳ ಮತ್ತು ಮೊಮ್ಮೊಕ್ಕಳ ಹೆಸರಿಗೆ 500 ಎಕರೆಗಳನ್ನು ಒಂದೇಮನೆಯಲ್ಲಿದ್ದರೂ ವಿಭಾಗಮಾಡಿಕೊಂಡಿರುವ ವಿಷಯದಲ್ಲಿ. ಈ ಮಸೂದೆಯಲ್ಲಿ ಹೆಚ್ಚಿಗೆ ಉಳಿದ ಭೂಮಿಯನ್ನು ಕೊಂಡುಕೊಳ್ಳುವ ಬೆಲೆ ಹೇಗೆಂಬುದನ್ನು 75ನೇಸೆಕ್ಷನ್ನಿನಲ್ಲಿ ಹೇಳಿದ್ದಾರೆ. ಭೂಮಿಯ ಸಂಬಂಧದಲ್ಲಿ ಬರುವ ಸರಾಸರಿ ನಿವ್ವಳ ವಾರ್ಷಿಕ ವರಮಾನದ 10 ಭಾಗದಷ್ಟು ಕೊಡಬೇಕೆಂದು ನಿಗಧಿ ಮಾಡಿದ್ದಾರೆ. ಸರಾಸರಿ ಎಷ್ಟು ಎಂಬುದಾಗಿ ತೀರ್ಮಾನ ಹೇಗೆ ಆಗುವುದು ? ಒಂದೊಂದು ಪ್ರದೇಶದಲ್ಲಿರತಕ್ಕ ಭೂಮಿಯ ಬಗ್ಗೆ ಸರಾಸರಿ ವರಮಾನ ಎಷ್ಟಾಗುತ್ತದೆಂಬುದನ್ನು ಗೊತ್ತುಮಾಡಬೇಕು. ಕೋಲಾರ ಜಿಲ್ಲೆಯಲ್ಲಿ ಖುಷ್ಕಿ ಜಮೀನು ಎಂದು ಹೇಳಿದರೆ ಇಂತಹ ಜಮೀನಿಗೆ ಇಷ್ಟು ಬೆಲೆ ಎಂಬುದಾಗಿ ಖಚಿತವಾಗಿ ನಿಗದಿ ಮಾಡಿದರೆ ಒಳ್ಳೆಯದು ಅದಿಲ್ಲದೆ 10 ಪಟ್ಟು ಸರಾಸರಿ ಜಮೀನಿನ ನಿವ್ವಳ ವಾರ್ಷಿಕ ವರಮಾನವೆಂದು ಹೇಳಿದರೆ ಆ ವಿಷಯ ಕೋರ್ಟುಗಳಲ್ಲಿ ತೀರ್ಮಾನವಾಗಲು ಎರಡು ಮೂರು ವರ್ಷಗಳು ಆಗುತ್ತದೆ. ಅನಾವಶ್ಯಕವಾಗಿ ಕಾಲಹರಣೆಯಾಗುತ್ತದೆ. ಇಲ್ಲಿ ಅನೇಕ ತಿದ್ದುಪಡಿಗಳಿವೆ. ಅವೆಲ್ಲವನ್ನೂ ಹೇಳುವುದಕ್ಕೆ ಕಾಲಾವಕಾಶವಿಲ್ಲ. ಒಟ್ಟಿನಲ್ಲಿ ಈ ಸರ್ಕಾರಕ್ಕೆ ನಿಜವಾಗಿಯೂ ಭೂಸುಧಾರಣೆ ಜಾರಿಗೆ ತರಬೇಕು, ದುಡಿಯುತಕ್ಕ ರೈತರಿಗೆ ಜಮೀನು ಸಿಗಬೇಕು ಎನ್ನುವ ಉದ್ದೇಶ ಖಂಡಿತವಾಗಿಯೂ ಸರ್ಕಾರಕ್ಕೆ ಇಲ್ಲ. ಸುಮ್ಮನೆ ಅರೆಮನಸ್ಸಿನಿಂದ ಭೂಸ್ವಾಮ್ಯಗಳ ಒತ್ತಡಕ್ಕೆ ಸಿಕ್ಕಿ ಏನೋ ಒಂದು ರೀತಿಯಲ್ಲಿ ರೈತರನ್ನು ಸಮಾಧಾನಮಾಡುವುದಕ್ಕೆ ಅವರು ಭೂಸುಧಾರಣೆಗಳನ್ನು ತರುತ್ತಿದ್ದಾರೆ. ಅದನ್ನು ಪತ್ರಿಕೆಗಳಲ್ಲಿ ಬರೆಯಿಸಿಕೊಂಡು ರೈತರಿಗೆ ಮೋಸಮಾಡುವುದಕ್ಕೋಸ್ಕರವಾಗಿ ಈ ರೀತಿ ಮಾಡುತ್ತಿದ್ದಾರೆ. ಇಂಥಾ ಧೋರಣೆಯನ್ನು ಬಿಟ್ಟು ಸರ್ಕಾರದವರು ನ್ಯಾಯವಾಗಿ ಈ ಭೂಸುಧಾರಣೆಯನ್ನು ಜಾರಿಗೆ ತರಬೇಕಾದರೆ ಸುಳ್ಳು ಕಾಗದಪತ್ರಗಳ ಮೂಲಕ ಜಮೀನ್ದಾರರು ಏನು ಮಾಡಿದ್ದಾರೆಯೋ ಅದನ್ನೆಲ್ಲಾ ಗಣನೆಗೆ ತೆಗೆದುಕೊಳ್ಳಬೇಕು ರೈತರಿಗೆ ದೊರೆಯುವ ಜಮೀನಿನ ಬೆಲೆಯನ್ನು ಖಚಿತವಾಗಿ ನಿಗದಿಮಾಡಬೇಕು. ಮುಖ್ಯವಾಗಿ ರೈತರಿಗೆ ಅನುಕೂಲವಾಗುವ ತಿದ್ದುಪಡಿಗಳನ್ನು ತರಬೇಕೆಂದು ಹೇಳಿ, ಇದನ್ನು ಸರ್ಕಾರದವರು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಭೂಸುಧಾರಣಾ ಶಾಸನ

ಜಾರಿಕ್ರಮ ಮುಂದುವರಿಸಿದರೆ ಮಾನ್ಯ ಶ್ರೀ ಗೋಪಾಲಗೌಡರು ಹೇಳಿದ ಹಾಗೆ ಭೂಸುಧಾರಣೆ ನಾಟಕ ಹೋಗಿ ಮುಂದೆ ರುದ್ರನಾಟಕಕ್ಕೆ ದಾರಿಯಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Release of Sri Vatal Nagaraj by Sub-Magistrate, Gobichettipalayam, Tamil Nadu State

(*Announcement*)

MR. DEPUTY SPEAKER.—There is one announcement. I shall read the Message received from the I. G. P. Madras addressed to Speaker, Mysore State Legislative Assembly :

> " Thiru Vatal Nagaraj M. L. A. Mysore State was released from sub-jail Gobichettipalayam at 10.30. a. m. on 2nd February 1970 granting conditional bail by sub Magistrate, Gobi that he should report before his court daily at 1100 hours. Application was filed before Sub-Magistrate Gobi for relaxation of condition. Sub. Magistrate cancelled condition at 11.30 A. M. on 2nd February 1970. "

Mysore Land Reforms (Ammendment) Bill, 1970

(*Motion to consider—Debate continued*)

† **ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).**—ಮಾನ್ಯ ಅಧ್ಯಕ್ಷರೇ, ಲ್ಯಾಂಡ್ ರಿಫಾರಮ್ಸ್ ವಿಷಯದಲ್ಲಿ ಅನೇಕ ಜನರು ಮಾತನಾಡಿದ್ದಾರೆ. ಈಗ ಇದರ ಒಂದು ಪಬ್ಲಿಸಿಟಿ ಈ ದೇಶದ ಮುಂದೆ ಇದೆ. ಜನರು ಇದರಿಂದೇನೋ ಹೆಚ್ಚಿಗೆ ನಮಗೆಲ್ಲರಿಗೂ ಅನುಕೂಲಗಳನ್ನು ಮಾಡಿ ಕೊಡುತ್ತಾರೆಂದು ಭಾವಿಸಿಲ್ಲ. ಈಗ ಇಂಡಿಕೇಟ್ ಮತ್ತು ಸಿಂಡಿಕೇಟ್ ಆದಮೇಲೆ ಇಂತಹ ಪಬ್ಲಿಕೇಷನ್ಸ್ ಜಾಸ್ತಿ ಆಗಿದೆ. ಹೇ ಕಮಿಷನ್ನಿನ ವರದಿ ಜಾರಿಗೆ ಬಂತು. ಇವತ್ತು ನಮ್ಮಲ್ಲಿ ಎಫಿಷಿಯನ್ಸಿ ಬಹಳ ಜಾಸ್ತಿಯಾಗಿದೆ, 17 ತಿಂಗಳುಗಳ ಆಡಳಿತದಲ್ಲಿ ನನಗೆ ತೃಪ್ತಿಯಾಗಿದೆಯೆಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ದೇಶಕ್ಕೆ ತೃಪ್ತಿಯಾಗಿದೆಯೆಂದು ಹೇಳಲಿಲ್ಲ. ಅದು ಬಹಳ ಸಂತೋಷದ ವಿಷಯ. ಇನ್ನು ಇವತ್ತು ಭೂಸುಧಾರಣೆ ಕಾನೂನು ಜಾರಿಗೆ ಬಂದಮೇಲೆ ಪಹಣಿ ಬರದಿರುವುದನ್ನು ಬದಲಾವಣೆ ಮಾಡಿದ್ದಾರೆ. ವಿಲೇಜ್ ಅಕೌಂಟೆಂಟ್ ಮತ್ತು ಶ್ಯಾನುಭೋಗರು ಬರೆದಿರತಕ್ಕಂಥಾದ್ದು ಏನಿದೆಯೋ ಅದೇ ಇವತ್ತು ಆಧಾರಪತ್ರವಾಗಿದೆ. ಅಂಥಾದ್ದು ಏನಿದೆಯೋ ಅದನ್ನು ರೆವಿನ್ಯೂ ಮಿನಿಸ್ಟರ್ ತರಿಸಿ ಪಹಣಿ ಬರೆದಿರುವುದನ್ನು ಹೊಡೆದುಹಾಕಿ ಬೇರೆ ಬರೆದಿರುವುದು ಇದ್ದರೆ, ಅಥವಾ ಬದಲಾವಣೆ ಮಾಡಿದ್ದರೆ, ಅವರ ಮೇಲೆ ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಂಡಿದ್ದರೆ ಆಗ ಅವರ ಎಫಿಷಿಯನ್ಸಿ ಹೊರಗೆ ಬೀಳುತ್ತದೆ. ವೀರಪ್ಪಗೌಡರು ಒಂದು ತಿದ್ದುಪಡಿಯನ್ನು ತಂದಿದ್ದಾರೆ, ಅದನ್ನು ಚರ್ಚೆಮಾಡಬೇಕು, ಈ ಎಕರೆ ಏನೋ ಬದಲಾವಣೆ ಮಾಡಿದ್ದಾರೆ, ಇದರಲ್ಲಿ ಹೀಗೆ ಮಾಡಿದ್ದಾರೆ, ಅದರಲ್ಲಿ ಹೀಗೆ ಮಾಡಿದ್ದಾರೆಂದು ಲ್ಯಾಂಡ್ ರಿಫಾರಮ್ಸ್ ಬಗ್ಗೆ ಒಂದು ಪಬ್ಲಿಸಿಟಿ ತರುವ ನೆಸೆಸ್ಸಿಟಿಯೇ ಇರಲಿಲ್ಲ. ಇವತ್ತು ಎಷ್ಟು ಜನರು ಆ ರೀತಿ ಮಾಡಿದ್ದಾರೆನ್ನುವುದನ್ನು ರೆವಿನ್ಯೂ ಮಿನಿಸ್ಟರ್ ಒಂದು ವರದಿಯನ್ನು ತೆಗೆದುಕೊಂಡು ಬಂದು ಅವರ ಮೇಲೆ ತಕ್ಕ ಕ್ರಮವನ್ನು ತೆಗೆದುಕೊಂಡಿದ್ದರೆ ಸೋಷಿಯಲಿಜಂ ಎಂದು ಏನು ಹೇಳುತ್ತಾರೆ ಅದು ಸರಿಹೋಗುತ್ತದೆ. ಭೂ ಸುಧಾರಣೆ ಮಾಡುವ ಕಾಲದಲ್ಲಿ ನನಗೆ 50 ಎಕರೆಗಳಷ್ಟು

(ಶ್ರೀ ಕೆ. ಎನ್. ವೀರಪ್ಪಗೌಡ)

ಜಮೀನು ಇದ್ದು ಉತ್ಪತ್ತಿ ಚೆನ್ನಾಗಿದ್ದರೆ ನೌಕರರಿಗೆ ಸಿಗುವಂತೆ 300-400 ರೂಪಾಯಿಗಳ ಸಂಬಳ ಸಿಗುವುದಿಲ್ಲ. ಇದನ್ನು ಸರ್ಕಾರದವರು ಯೋಚನೆ ಮಾಡಬೇಕು. ರೈತರು ಸರಿಯಾದ ರೀತಿಯಿಂದ ಜೀವನ ಮಾಡುವುದಕ್ಕೆ ಎಷ್ಟು ಲ್ಯಾಂಡ್ಸ್ ಬೇಕಾಗುತ್ತದೆಂಬುದನ್ನು ಸರ್ಕಾರದವರು ನಿಗದಿ ಮಾಡಬೇಕು. ಎರಡನೆಯದಾಗಿ ಇನ್ನು ಒಂದೆರಡು ವರ್ಷಗಳೊಳಗೆ ಇವತ್ತಕ್ಕೆ ಭೂಮಿಯನ್ನು ಹಂಚುತ್ತೇವೆಂದು ಹೇಳುತ್ತಾರೆ. ಯಾರು ಸಾಗುವಳಿ ಮಾಡುತ್ತಾರೋ ಅಂತಹವರಿಗೆ ಜಮೀನನ್ನು ಒದಗಿಸುವುದು ನಿಮ್ಮ ಜವಾಬ್ದಾರಿ. ಒಂದು ಕಡೆ ಪ್ರಾಪರ್ಟಿ ಹಂಚಬಾರದೆಂದು ಹೇಳುತ್ತೀರಿ. ಆದರೆ ಪ್ರಾಪರ್ಟಿ ಹಂಚುವ ಕಾರ್ಯಕ್ಕೆ ನೀವು ಕೈಹಾಕುತ್ತಾ ಇಲ್ಲ. ಅದನ್ನು ನನ್ನ ಮಕ್ಕಳಿಗೆ, ಮೊಮ್ಮಕ್ಕಳಿಗೆ ಹಂಚಕೂಡದು ಎಂದು ಹೇಳುವಾಗ ಒಟ್ಟಿಗೆ ಕೂತು ಊಟ ಮಾಡಬಹುದೇ ? ಅಂತಹ ಕಾನೂನಿಗೆ ಮನ್ನಣೆಯೂ ಇಲ್ಲ. ಎಷ್ಟೋ ಜನರು ಕೋರ್ಟಿಗೆ ಹೋಗಿ ಒದ್ದಾಡುತ್ತಾ ಇದ್ದಾರೆ. ನಮ್ಮ ಕಡೆ ಜಮೀನು ಮಾಲೀಕತ್ವನ ತಮ್ಮ ಹೆಸರಿನಲ್ಲಿದ್ದರೂ ಈ ಕಾನೂನು ಜಾರಿಗೆ ಬಂದಮೇಲೆ, ಯಾರೂ ಕೂಡ ತಾವೇ ವಾಲಂಟರಿಯಾಗಿ ಭೂಮಿಯನ್ನು ಬಿಟ್ಟುಕೊಡುತ್ತಿಲ್ಲ, ಆದ್ದರಿಂದ ಇಂಥದ್ದನ್ನು ನ್ಯಾಯವಾಗಿ ಮಾಡುವುದಕ್ಕೆ ಅವಕಾಶ ಇಲ್ಲದೆ ದೇಶದಲ್ಲಿ ಸೋಷಿಯಲಿಜಂ ಹೇಳಿಕೊಂಡು ಹೋಗುವ ಪದ್ಧತಿ ಜಾಸ್ತಿಯಾಗಿದೆ. ಇವತ್ತು ನೀವು ಸಾಮಾನ್ಯ ಜನಗಳಿಗೆ ಜೀವನಕ್ಕೆ 200 ರೂಪಾಯಿಗಳು ಮಿತಿ ಇರಬೇಕೆಂದು ಹೇಳಿ ಪೇ ಕಮಿಷನ್ ವರದಿಯನ್ನು ಜಾರಿಗೆ ಕೊಡಬೇಕೆಂದು ಹೇಳುತ್ತಾ ಇದ್ದೀರಿ. ರೈತರಿಗೆ ವರ್ಷಕ್ಕೆ ಎರಡು-ಮೂರು ಸಾವಿರ ರೂಪಾಯಿಗಳಷ್ಟು ಉತ್ಪನ್ನ ಬರುವಂಥ ಲ್ಯಾಂಡ್ಸ್ ಇರಬೇಕು. ಅವನು ಅದರಿಂದಲೇ ಜೀವನ ಮಾಡಿಕೊಳ್ಳಬೇಕು. ನಾನು ಅನೇಕ ವೇಳೆ ಹೇಳಿದ್ದೇನೆ. ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಐದಾರು ಸಾವಿರ ರೂಪಾಯಿಗಳಷ್ಟು ಮನೆ ಬಾಡಿಗೆ ಬರುತ್ತಿದ್ದರೂ ಸರ್ಕಾರದ ನೌಕರಿಯಲ್ಲಿದ್ದುಕೊಂಡು 2 ಸಾವಿರ ರೂಪಾಯಿಗಳಷ್ಟು ಸಂಬಳವನ್ನು ತೆಗೆದುಕೊಳ್ಳುತ್ತಿದ್ದರೂ, ಅಂತಹ ಕಡೆಯಲ್ಲಿ ಸಾಧಾರಣ ಏನೂ ಇಲ್ಲ. ಬ್ಯಾಕ್‌ವರ್ಡ್ ಕ್ಲಾಸಿಗೆ ರಿಜರ್ವೇಷನ್ ಇರಬೇಕೆಂಬ ಬಗ್ಗೆ ಎಲ್ಲಾದರೂ ಒಂದೆರಡು ಪ್ರಶ್ನೆಗಳು ಬಂದರೆ, ಅದರ ಮೇಲೆ ಮೆರಿಟ್ಸ್, ಇತ್ಯಾದಿಗಳನ್ನು ಹೇಳಿಕೊಂಡು ಯಾರೋ ಒಬ್ಬರಿಗೆ ಅನುಕೂಲ ಮಾಡಿಕೊಡುತ್ತಾರೆ. ಯಾರೋ ಒಬ್ಬ ಡಾಕ್ಟರ್ ಹೇಳುತ್ತಿದ್ದರು. ಯಾರೋ ಒಬ್ಬರು ವಿಧವೆಯ ಹೆಸರನ್ನು ಕೊಟ್ಟು ಸೀಟು ತೆಗೆದುಕೊಂಡರು ಎಂದು. ಈ ರೀತಿ ಮಾಡುವುದನ್ನು ತಡೆಗಟ್ಟುವುದಕ್ಕೆ ಸಾಧ್ಯವಿಲ್ಲ. ಎಫಿಷಿಯನ್ಸಿ ಎಂಬುದು ಬಹಳಮಟ್ಟಿಗೆ ಜಾಸ್ತಿಯಾಗಿದೆ ಎನ್ನುವ ಸ್ವಭಾವ ಇದೆಯೇ ವಿನಾ ರೈತರ ಜೀವನ ಎಷ್ಟು ಕಷ್ಟವಾಗಿದೆ, ಅವರಿಗೆ ಏನೇನು ಅನುಕೂಲಗಳನ್ನು ಮಾಡಿಕೊಡಬೇಕು ಎಂಬುದನ್ನು ಯೋಚಿಸುತ್ತಿಲ್ಲ. ನೀರು ಕೊಡದೆ ಇದ್ದರೂ ವಾಟರ್ ಸೆಸ್ ವಿಧಿಸುತ್ತಾರೆ. ಕಾನೂನಿನಲ್ಲಿ ಅಪೀಲು ಮಾಡುವುದಕ್ಕೆ ಅವಕಾಶವಿದೆ. ಆದರೆ ರೈತರು ಬಸ್ಸಿನಲ್ಲಿ ತಿರುಗಾಡಿ ಲಾಯರಿಗೆ ದುಡ್ಡು ಕೊಟ್ಟು ಎಷ್ಟೋ ತೊಂದರೆ ಪಡಬೇಕಾಗುತ್ತದೆ. ಆದರೆ ರೈತರು ಕೊಡುವ 12 ಆಣೆ ಸ್ಟ್ಯಾಂಪ್ ಡ್ಯೂಟಿಯನ್ನು ವಜಾ ಮಾಡಿದ್ದೇವೆ ಎಂದು ಕ್ಯಾಬಿನೆಟ್‌ನಲ್ಲಿ ದೊಡ್ಡ ಡಿಸಿಷನ್ ತೆಗೆದುಕೊಂಡರೆ ಅದರಿಂದ ರೈತರಿಗೆ ಸಹಾಯ ಮಾಡಿದಂತಾಗುತ್ತದೆಯೆ ? ಈ ರೀತಿ ಸರ್ಕಾರದವರು ನಟನೆ ಯಾತಕ್ಕೆ ಮಾಡಬೇಕು ? ರೈತರಿಗೆ ಸಹಾಯ ಮಾಡಲು ಮನಸ್ಸು ಇದ್ದರೆ ಧೈರ್ಯವಾಗಿ ಕೆಲಸ ಮಾಡಬೇಕು. ಕೇಂದ್ರ ಸರಕಾರದವರು ಮುಖ್ಯ ಮಂತ್ರಿಗಳ ಒಂದು ಮೀಟಿಂಗ್ ಕರೆದು 1970ನೇ ಇಸವಿಯೊಳಗೆ ಮಧ್ಯಸ್ಥಗಾರರನ್ನು ತೆಗೆದುಹಾಕುತ್ತೇವೆ ಎಂದು ಹೇಳಿದ್ದಾರೆ. ಅದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದನ್ನು ಬಿಟ್ಟು ಅರ್ಜೆಂಟ್ ಆಗಿ ರೈತರು ಕೊಡತಕ್ಕ ಫೀ ಏನಿದೆ ಅದನ್ನು ವಜಾ ಮಾಡಿದ್ದೇವೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಹಾಗೆ ಷೋ ಮಾಡುವುದನ್ನು ಇನ್ನು ಮೇಲಾದರೂ ಕೂಡ ಕಡಿಮೆ ಮಾಡಬೇಕು. ಕೆಲಸದ ಮೇಲೆ ದೃಷ್ಟಿ ಇಡಿ. ಅಧಿಕಾರದಲ್ಲಿ ಉಳಿದುಕೊಳ್ಳುವುದಕ್ಕೆ ಆಸೆ ಇದ್ದರೆ ಕೆಲಸ ಮಾಡಿ.

ಶ್ರೀ ಎಂ. ರಾಮಪ್ಪ.—ಸೀಲಿಂಗ್ ಲಿಮಿಟ್ ಜಾಸ್ತಿ ಮಾಡಬೇಕು, 18 ಸ್ಟ್ಯಾಂಡರ್ಡ್ ಎಕರೆ ಸಾಲದು ಎಂದು ತಾವು ಹಿಂದೆ ಹೇಳುತ್ತಿದ್ದಿರಿ ?

ಶ್ರೀ ಕೆ. ಎನ್. ವೀರಪ್ಪಗೌಡ.—ಎರಡು ಎಕರೆಗಿಂತ ಮೇಲೆ ಒಬ್ಬ ರೈತನಿಗೆ ಜಮೀನು ಕೊಡಬಾರದು ಎಂದು ಇದೆ, 18 ಎಕರೆ ಅಲ್ಲ, ನಾನು 18 ಎಕರೆ ಕೊಡಬೇಕೆಂದು ಹೇಳುವುದಿಲ್ಲ. ಬೇಕಾದರೆ 5-6 ಎಕರೆಗೆ ಲಿಮಿಟ್ ಹಾಕಿ. ರೈತನು ಸಾಕಷ್ಟು ಉತ್ಪತ್ತಿ ಮಾಡಿ ಸುಖವಾಗಿ ಜೀವನ ಮಾಡಿಕೊಂಡು ಹೋಗುವಂತೆ ಇರಬೇಕು. ಅವನು ಬೇರೆ ಕಡೆ ಕೆಲಸಕ್ಕೆ ಹೋಗುವ

ಅವಕಾಶ ಮಾಡಿಕೊಡಬಾರದು. ಈಗ ಜನರಲ್ಲಿರುವ ನಿರುದ್ಯೋಗವನ್ನು ಬಗೆಹರಿಸಬೇಕಾದರೆ ಈ ಕ್ರಮವನ್ನು ಅನುಸರಿಸಿ ಲಕ್ಷಾಂತರ ರೂಪಾಯಿ ಕಾಫೀ ತೋಟ ಇರುವವರಿಗೆ ಡೆಪ್ಯುಟಿ ಕಮಿಷನರ ಗಿರಿ ಕೊಡಬಾರದು.

ಶ್ರೀ ಎಂ. ರಾಮಪ್ಪ.—ತಾವು ಭೂಮಾಲೀಕರ ಸಮ್ಮೇಳನದಲ್ಲಿ ಈ ಮಾತು ಹೇಳುತ್ತೀರಾ ?

ಶ್ರೀ ಕೆ. ಎನ್. ವೀರಪ್ಪಗೌಡ.—ಪಾರ್ಟಿಯಲ್ಲಿ ಇದಕ್ಕಿಂತ ಹೆಚ್ಚಿಗೆ ಹೇಳುತ್ತಿದ್ದೆ. ನೀವೆಲ್ಲಾ ಕೈ ಎತ್ತುವ ಜನ ಇದ್ದೀರಿ.

ಶ್ರೀ ಹೆಚ್. ವಿ. ಕೌಜಲಗಿ (ಕಂದಾಯ ಶಾಖೆಯ ಮಂತ್ರಿಗಳು).—1961 ನೇ ಇಸವಿ ಮೈಸೂರು ಲ್ಯಾಂಡ್ ರಿಫಾರಮ್ಸ್ ಕಾಯಿದೆ ಮಸೂದೆ ಮೇಲೆ ಕೆಲವು ತಿದ್ದುಪಡಿಗಳನ್ನು ತಂದದ್ದು ಇದೆ. ಈ ತಿದ್ದುಪಡಿಗಳನ್ನು ಮೊದಲು ಒಂದು ಆರ್ಡಿನೆನ್ಸ್ ಮುಖಾಂತರ ತಂದು ಅದನ್ನು ಕಾಯಿದೆ ಮಾಡಬೇಕು ಎಂದು ಈ ಮಸೂದೆಯನ್ನು ಮಾನ್ಯಸಭೆಯ ಮುಂದೆ ಇಟ್ಟಿದೆ. ಇದರ ಉದ್ದೇಶ ಮಹತ್ತರವಾಗಿ ಏನಾದರೂ ಬದಲಾವಣೆ ಮಾಡಬೇಕು ಅಥವಾ ಈಗ ಇರತಕ್ಕ ಕಾಯಿದೆಯಲ್ಲಿ ಫಂಡಮೆಂಟಲ್ ತತ್ವಕ್ಕೆ ಬದಲಾವಣೆ ಮಾಡಬೇಕು ಎನ್ನುವುದು ಅಲ್ಲ. ಅಂತಹ ಉದ್ದೇಶದಿಂದ ಈ ಕಾಯಿದೆಯನ್ನು ತಂದಿಲ್ಲ. ಈಗ ಇದ್ದ ಕಾಯಿದೆಯ ಅಮಲ್‌ಬಜಾವಣೆಯಲ್ಲಿ ಕೆಲವು ಲೋಪದೋಷಗಳು ಇವೆ. ಯಾರು ಭೂಮಿಯನ್ನು ಸಾಗುಮಾಡುತ್ತಾರೋ ಅವರನ್ನು ಭೂಮಾಲೀಕರನ್ನಾಗಿ ಮಾಡುವ ಉದ್ದೇಶದಿಂದ ಈ ಕಾಯಿದೆಯನ್ನು ಅಮಲು ಮಾಡಲಿಕ್ಕೆ ಏನು ತೊಂದರೆಗಳು ಇವೆ ; ಆ ತೊಂದರೆಗಳನ್ನು ದೂರ ಮಾಡುವುದಕ್ಕೆ ಈ ಒಂದು ಸಣ್ಣ ಮಸೂದೆಯನ್ನು ತಂದಿದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಅನೇಕ ಮಾನ್ಯಸದಸ್ಯರು 2-3 ಜನ ಹೊಸದಾಗಿ ಈ ಕಾಯಿದೆಯ ತತ್ವದ ಮೇಲೆ ತಮ್ಮ ತಮ್ಮ ಪಕ್ಷದ ಅಭಿಪ್ರಾಯ ಮತ್ತು ತಮ್ಮ ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಹೇಳಿದ್ದಾರೆ. ಸಾಮಾನ್ಯವಾಗಿ ಮಾನ್ಯ ಗೋಪಾಲ ಗೌಡರು ತಮ್ಮ ಒಂದು ವೈಯಕ್ತಿಕ ಮಾತನ್ನು ಹೇಳಿದ್ದಾರೆ. ಅದರ ಪ್ರಕಾರ ಈಗ ಇದ್ದ ಭೂಸುಧಾರಣೆ ಕಾಯಿದೆ ಪ್ರಕಾರ ಹೋದರೆ ಬಡವರಿಗೆ, ಉಳುವವರಿಗೆ ಭೂಮಿ ಮುಟ್ಟುವುದಿಲ್ಲ. ಸೀಲಿಂಗ್ ಲಿಮಿಟ್ ಹೆಚ್ಚು ಇದೆ. ನಾವು ಕೊಡುವ ಕಿಮ್ಮತ್ತು ಹೆಚ್ಚು ಎಂದು ಅವರು ಹೇಳಿದ್ದಾರೆ. ಅದಕ್ಕೆ ತದ್‌ವಿರುದ್ಧವಾಗಿ ಶ್ರೀಮಾನ್ ಕಟ್ಟೀಮಾರ್ ರವರು ಬೇರೆ ಅಭಿಪ್ರಾಯ ಹೇಳಿದ್ದಾರೆ. ಕೆಲವರು ಚಿಕ್ಕ ಹಿಡುವಳಿ ದೆಸೆಯಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೆಲವರು ಈಗ ಇರತಕ್ಕ ಸೀಲಿಂಗ್ ಬಹಳ ಹೆಚ್ಚಾಗುತ್ತದೆ ಇದರಿಂದ ಬಡಜನರಿಗೆ ಭೂಮಿ ಮುಟ್ಟುವುದಿಲ್ಲ ಇದನ್ನು ಕಡಿಮೆ ಮಾಡಬೇಕೆಂದು ಹೇಳಿದ್ದಾರೆ. ಅದು ಅಭಿಪ್ರಾಯದ ಮಾತು. ಭೂಸುಧಾರಣೆ ಕಾಯಿದೆ ಯಾವ ಯಾವ ಪ್ರಾಂತ್ಯಗಳಲ್ಲಿ ಇವೆ ಅಲ್ಲೆಲ್ಲಾ ಭಿನ್ನಭಿನ್ನವಾದ ಪದ್ಧತಿ ಇದೆ. ಆ ಭಾಗಗಳಿಗೆ ಅನುಸರಿಸಿ ಆ ಕಾಯಿದೆಗಳನ್ನು ತಂದಿದ್ದಾರೆ. ನಾನು ಈಗ ತಿದ್ದುಪಡಿ ತರುವಂಥ ಮುಖ್ಯ ಉದ್ದೇಶ ಏನು ಎಂಬುದನ್ನು ಹೇಳಿದ್ದೇನೆ. ಈಗ ಇದ್ದ ಕಾಯಿದೆ ಪ್ರಕಾರ ಭೂಮಿಯನ್ನು ತೀವ್ರವಾಗಿ ಯಾರು ಸಾಗು ಮಾಡುತ್ತಾರೋ ಅವರಿಗೆ ಮಾಲೀಕತ್ವ ಕೊಡಬೇಕು ಎನ್ನುವುದೇ ಮುಖ್ಯ ಉದ್ದೇಶ.

ಶ್ರೀ ಕೆ. ಎಚ್. ರಂಗನಾಥ್.—ಸಿವಿಲ್ ಪ್ರೊಸೀಜರ್ ಕೋಡ್ ಅಪ್ಲೈ ಮಾಡಿದರೆ ಭೂಮಿಯನ್ನು ಶೀಘ್ರವಾಗಿ ಕೊಡುವುದಕ್ಕೆ ಸಾಧ್ಯ.

Sri H. V. KOUJALGI.—This amendment would help the disposal of the land as early as possible. I can explain it to you. ಈ ಭೂಮಿ ತೀವ್ರವಾಗಿ ಸಾಗು ಮಾಡುವವರಿಗೆ ಮುಟ್ಟಬೇಕು ಎನ್ನುವ ಉದ್ದೇಶವನ್ನು ಎಲ್ಲಾ ಪಕ್ಷದವರೂ ಹೊಂದಿದ್ದಾರೆ. ಆದರೆ ಸರಕಾರದ ಉದ್ದೇಶ ಏನು ಎಂದು ನಾನು ಹೇಳುತ್ತೇನೆ. ಅದೇ ಉದ್ದೇಶದಿಂದ ಈ ಮಸೂದೆಯನ್ನು ತಂದದ್ದಾಗಿದೆ. ಮಾನ್ಯ ಸಿದ್ಧವೀರಪ್ಪನವರು ಹೇಳಿದರು ಎಕರೆ ಗುಂಟೆ ತೆಗೆದು ಹೆಕ್ಟರ್ ಎಂದು ಮಾಡುವ ಆವಶ್ಯಕತೆ ಇದ್ದಿದ್ದಿಲ್ಲ, ಇದರಿಂದ ಜನರಿಗೆ ತೊಂದರೆ ಆಗುತ್ತಿದೆ ಎಂದು. ಇದು ವ್ಯಾವಹಾರಿಕ ದೃಷ್ಟಿಯಿಂದ ಸಮಂಜಸ ಇರಬಹುದು. ಏಕೆಂದರೆ ನಮ್ಮಲ್ಲಿ ಎಕರೆ ಗುಂಟೆ ರೂಢಿಯೊಳಗೆ ಇದೆ. ಹೆಕ್ಟರ್ ವಗೈರೆ ಹೊಸದಾಗಿ ಕಲಿಯಬೇಕಾದರೆ ಸಾಮಾನ್ಯ ಜನರಿಗೆ ಆಗಲಿ ಅಥವಾ ನಮ್ಮಂಥವರಿಗಾಗಲೀ ಸ್ವಲ್ಪ ದಿವಸ ತೊಂದರೆ ಆಗಬಹುದು. ಕೇಂದ್ರಸರಕಾರದವರು ಇಡೀ ದೇಶದಲ್ಲಿ ಒಂದು ಪದ್ಧತಿ ಇರಬೇಕು ಎಂದು ನಿರ್ಣಯ ಮಾಡಿದ್ದಾರೆ. ನಾವು ಇಂತಹ ಕಾಯಿದೆ ಮಾಡುವ ಕಾಲಕ್ಕೆ ಕಾಯಿದೆ ಒಳಗೆ ಇದನ್ನು ಹಾಕುವುದು ಅವಶ್ಯ ಎಂದು ನನಗನಿಸುತ್ತದೆ. ಇದು ಒಂದೇ ಅಲ್ಲ. ಇದರ ಪೂರ್ವದಲ್ಲಿ ಅರ್ಧರೂಪಾಯಿ, ಪಾವಲಿ, ಗಟ್ಟಿ ದುಡ್ಡು ಎಂದು ಇತ್ತು. ಈಗ ಇದು ಎಲ್ಲಾ ಹೋಗಿ ರೂಪಾಯಿ, ಪೈಸೆ ಬಂದಿದೆ. ಮೈಲಿ ಹೋಗಿ ಕಿಲೋಮೀಟರ್ ಬಂದಿದೆ. ಯಾರ್ಡು, ಇಂಚ್ ಹೋಗಿ

(SRI H. V. KOUJALAGI)

ಮೀಟರ್ ಬಂದಿದೆ. ಇದೆಲ್ಲಾ ಕೇವಲ 10 ವರ್ಷಗಳಲ್ಲಿ ಆದ ಮಾರ್ಪಾಡುಗಳು. ಜನರಿಗೆ ಇದು ಗೊತ್ತಾಗುತ್ತಾ ಕ್ರಮೇಣ ಇರುವ ತೊಂದರೆ ಹೋಗುತ್ತಾ ಇದೆ. ಇದೇರೀತಿ ಎಕರೆ ಗುಂಟೆ ಹೋಗಿ ಹೆಕ್ಟರ್ ಬರುತ್ತದೆ. ಇನ್ನು 8-10 ವರ್ಷಗಳೊಳಗೆ ಈ ರೀತಿ ಅಡಚಣೆಗಳು ಮಾಯವಾಗುತ್ತದೆ. ಆದ್ದರಿಂದ ಆ ಕಾಯಿದೆ ಅನುಸಾರವಾಗಿ ಸಾಮಾನ್ಯವಾಗಿ ಮಾಡಿದ್ದು ಆಗಿದೆ. ಮಂಗಳೂರು ಜಿಲ್ಲೆಯಲ್ಲಿ ಎಕರೆ ಮತ್ತು ಸೆಂಟ್ಸ್ ಅಂತ ಹೇಳುತ್ತಾರೆ, ಇಲ್ಲಿ ಎಕರೆ ಮತ್ತು ಗುಂಟೆ ಅಂತ ಅನ್ನುತ್ತಾರೆ. ಸೆಂಟ್ರಲ್ ಗವರ್ನಮೆಂಟ್ ಅವರ ಆದೇಶದಂತೆ ಇಡೀದೇಶಕ್ಕೆ ಸಂಬಂಧಿಸಿದಂತೆ ಒಂದು ಅಳತೆಯನ್ನು ಇಡುವುದು ಅವಶ್ಯಕ. ಇದು ಮಹತ್ವದ ಬದಲಾವಣೆ ಅಲ್ಲದಿದ್ದರೂ ಕಾಯಿದೆಗೆ ಅವಶ್ಯಕವಾದಂತಹ ಒಂದು ಬದಲಾವಣೆ. ಶ್ರೀಮಾನ್ ಶ್ರೀಕಂಠಯ್ಯನವರು ಅನೇಕ ಕಲಂಗಳ ಬಗ್ಗೆ ಬಹಳ ಸೊಗಸಾಗಿ ಹೇಳಿದ್ದಾರೆ. ಈ ತಿದ್ದುಪಡಿಯಲ್ಲಿ ಟೆನೆಂಟ್ ಮತ್ತು ಡೀಮ್ಡ್ ಟೆನೆಂಟ್ ಅಂತ ಅನ್ನುವುದನ್ನು ಸ್ಪಷ್ಟವಾಗಿ ಹೇಳಿದೆ. ಹೈಕೋರ್ಟಿನವರು ಕೊಟ್ಟ ಆದೇಶದ ಪ್ರಕಾರ ಇವತ್ತಿನ ದಿವಸ ತಿದ್ದುಪಡಿಯನ್ನು ಮಾಡಿದ್ದೇವೆ. ನ್ಯಾಯಾಂಗದಲ್ಲಿ ಸಾವಿರಾರು ಅರ್ಜಿಗಳು ಬರುತ್ತವೆ. ಒಂದು ನಿರ್ಣಯ ತೆಗೆದುಕೊಳ್ಳಲಿಕ್ಕೆ ಒಂದು ಕೋರ್ಟಿಗೆ ಹೋಗಬೇಕು ಮತ್ತು ಅದಕ್ಕೇ ಸಂಬಂಧಿಸಿದ ಇನ್ನೊಂದು ಇಷ್ಯೂ ತೀರ್ಮಾನ ತೆಗೆದುಕೊಳ್ಳಲಿಕ್ಕೆ ಬೇರೆ ಇನ್ನೊಂದು ಕೋರ್ಟಿಗೆ ಹೋಗಬೇಕು ಅಂದರೆ ಬಹಳ ನಿಧಾನವಾಗುತ್ತದೆ ಎಂದು ಹೇಳಿ ಅವು ತೀವ್ರ ವಿಲೇಯಾಗಬೇಕೆಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ಮಾಡಲಾಗಿದೆ ಎಂಬ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಈಗ ಒಂದೊಂದು ಜಿಲ್ಲೆಯಲ್ಲಿ ನಾಲ್ಕಾರು ಮುನ್ಸೀಫ್ ಕೋರ್ಟು ಇರುವುದರಿಂದ ಅವರಿಗೆ ಅಧಿಕಾರ ಕೊಡುವುದರಿಂದ ಜಾಗ್ರತೆ ವಿಲೇ ಆಗುವುದಲ್ಲದೆ, ಖರ್ಚೂ ಕೂಡ ಕಡಿಮೆ ಬರುತ್ತದೆ ಮತ್ತು ಸಿವಿಲ್ ವರ್ಕ್ ಸಂಗಡವೇ ಇದನ್ನೂ ಮಾಡಬಹುದು. ಈ ಪ್ರಕಾರ ಇದರ ಉದ್ದೇಶ ಇದೆಯೇ ಹೊರತು ಬೇರೆ ಅಲ್ಲ. ಇದನ್ನೆಲ್ಲಾ ತೀವ್ರ ಅಮಲಿನಲ್ಲಿ ತರಬೇಕೆಂದು ಹೇಳುತ್ತೇವೆ. ಒಂದುವೇಳೆ ಇವತ್ತಿನದಿವಸ ಯಾವುದಾದರೂ ಒಂದು ತಾಲ್ಲೂಕಿನಲ್ಲಿ ಹೆಚ್ಚು ಅರ್ಜಿಗಳು ಇದ್ದರೆ ಟೆಂಪೊರರಿ ತಹಸೀಲ್ದಾರರನ್ನು ಹಾಕಬಹುದು ಮತ್ತು ಆ ಕೆಲಸವನ್ನು ಮುಗಿಸಬೇಕು ಎಂಬ ಉದ್ದೇಶದಿಂದ ಕೂಡ ಇದ್ದೇವೆ.

ಶ್ರೀ ಎಲ್. ಶ್ರೀಕಂಠಯ್ಯ.—ಆ ತರಹ ಭರವಸೆ ಕೊಡುವುದಾದರೆ ತೃಪ್ತಿಯಾಗುತ್ತದೆ.

Sri H. V. KOUJALGI.—That is the intention of Government. But it is not possible to increase the number of Judges for a temporary period. We cannot do it.

ಕೋರ್ಟ್ ಎಂದರೆ ಯಾರು ಇದರ ಡೆಫನಿಷನ್ ಏನು ಎಂಬ ಮಾತನ್ನು ಶ್ರೀಮಾನ್ ಶ್ರೀಕಂಠಯ್ಯನವರು ಹೇಳಿದ್ದಾರೆ. 112-116 ಕೋರ್ಟಿನ ಡೆಫನಿಷನ್‌ನೊಳಗೆ ಕಾಯಿದೆಯ ದೋಷ ಇದೆ ಎಂಬ ಶಂಕೆ ವ್ಯಕ್ತಪಡಿಸಿದ್ದರಿಂದ ಇದನ್ನು ಡ್ರಾಫ್ಟ್ ಮಾಡುವ ಕಾಲಕ್ಕೆ ಮುಂಚಿತವಾಗಿಯೇ ಹೈಕೋರ್ಟಿಗೆ ತೋರಿಸಿ ಅವರ ಅಭಿಪ್ರಾಯವನ್ನು ಪಡೆದುಕೊಂಡಿದ್ದೇವೆ. ಅವರ ಅಭಿಪ್ರಾಯದ ಪ್ರಕಾರ ಮತ್ತು ಲಾ ಡಿಪಾರ್ಟ್‌ಮೆಂಟಿನ ಅಭಿಪ್ರಾಯದ ಪ್ರಕಾರ ಈಗ ಇದ್ದದ್ದೇ ಸರಿಯಾಗಿದೆ, ಇದರಲ್ಲಿ ಯಾವುದೇ ಲೋಪದೋಷ ಇಲ್ಲ ಎಂಬ ಮಾತನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರ ಶಂಕೆ ಏನಿದೆ ಅದು ಇದರಿಂದ ದೂರವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

Sri K. H. PATIL.—By taking the opinion of the High Court beforehand, are you estopping the High Court from interfering by giving its interpretation of the law subsequently ?

ಶ್ರೀ ಎಚ್. ವಿ. ಕೌಜಲಗಿ.—ಹಾಗೇನೂ ಇಲ್ಲ, ನಮ್ಮ ಪ್ರಾಂತ್ಯದಲ್ಲಿ ಈ ಕಾಯಿದೆ ಅಮಲು ಬಜಾವಣೆ ಮಾಡುವಂತಹ ಅಧಿಕಾರ ಮತ್ತು ಪ್ರೊಸೀಜರಲ್ ಮ್ಯಾಟರ್ ಏನು ಇವೆ, ಆ ಸಂಬಂಧ ಅವರನ್ನು ಕನ್ಸಲ್ಟ್ ಮಾಡಿದ್ದೇವೆ.

7-00 P.M.

ಇನ್ನು ಸೆಕ್ಷನ್ 42ಕ್ಕೆ ತಿದ್ದುಪಡಿ ಅನಾವಶ್ಯಕವಾಗಿದೆ ಎಂದು ಹೇಳಿದರು. ಆರ್ಡಿನೆನ್ಸ್‌ನಲ್ಲಿ ಇದು ಅಂಶ ಕೈಬಿಟ್ಟು ಹೋಗಿತ್ತು ಎಂದು ಶ್ರೀ ನಾಗಪ್ಪನವರು ಹೇಳಿದರು. ಅದು ಅವಶ್ಯಕ

ಎಂದು ಕಂಡು ಬಂದುದರಿಂದ ಅದನ್ನು ಸೇರಿಸಿದೆ. ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಕೆಲವು ಸಾಮಾನ್ಯ ಸೂಚನೆಗಳನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇವೆ. ಅಮಲ ಬಜಾವಣೆ ಮಾಡುವುದರಲ್ಲಿ ರೈತರಿಗೆ ತೊಂದರೆಯಾಗುತ್ತದೆ, ರಿಕಾರ್ಡ್ ಆಫ್ ರೈಟ್ಸ್ ಸರಿಯಾಗಿಲ್ಲ ಎಂದು ಶಂಕೆ ವ್ಯಕ್ತ ಮಾಡಿದ್ದರು. ಹೊಸದಾಗಿ ರವೆನ್ಯೂ ಆಫೀಸರ್‌ರನ್ನು ನೇಮಿಸಿ ರಿಕಾರ್ಡ್ ಆಫ್ ರೈಟ್ಸ್ ಬರೆಸಲಾಗುತ್ತಿದೆ. ರೈತರಿಗೆ ನೋಟೀಸ್ ಕಳಿಸಿ, ತಕರಾರು ಇದ್ದರೆ ಕೇಳಿಕೊಂಡು ಸರಿಯಾಗಿ ರೆಕಾರ್ಡ್ ಆಫ್ ರೈಟನ್ನು ತಯಾರು ಮಾಡಲು ಬರುತ್ತದೆ. 1961ನೇ ಕಾಯಿದೆ ಪ್ರಕಾರ ಟೆನೆಂಟ್‌ಗಳನ್ನು ಬಿಡಿಸಲು ಅವಕಾಶ ಮಾಡಿಕೊಟ್ಟಿದೆ. ಒಂದು ವೇಳೆ ತಪ್ಪು ಮಾಡಿದ್ದಾರೆ ಎಂದು ಕಂಡು ಬಂದರೆ ಅಪೀಲ್ ಮಾಡಲು ಸಾಧ್ಯವಿದೆ. ಈ ಬಗ್ಗೆ ಸರಕಾರದವರು ಹೆಚ್ಚು ಲಕ್ಷ್ಯ ಕೊಟ್ಟಿದ್ದಾರೆ ಎಂದು ಹೇಳುತ್ತೇನೆ.

Sri D. B. KALMANKAR.—For years together the names of the tenants are not written.

Sri H. V. KOUJALGI.—In some parts they are up to date. In some parts they are being correctly written up. ಶ್ರೀಮಾನ್ ಶ್ರೀಕಂಠಯ್ಯನವರು ಮಾತನಾಡುತ್ತಾ 116 ಕಲಮು ಪ್ರಸ್ತಾಪ ಮಾಡಿದರು.

Sri L. SRIKANTAIAH.—There is some mistake in Section 116 of the Act.

Sri H. V. KOUJALGI.—I also consulted about it. There is no mistake in it. ಮಾನ್ಯ ಸದಸ್ಯರು ಅನೇಕ ಸೂಚನೆಗಳನ್ನು ಮಾಡಿದ್ದಾರೆ. ಈಗ ಇರತಕ್ಕ ಕಾಯಿದೆ ಹೆಚ್ಚು ತೀವ್ರವಾಗಿ ಸ್ವಲ್ಪ ಅವಧಿಯಲ್ಲಿ ಅಮಲ ಬಜಾವಣೆ ಮಾಡಿ ಉಳುವವನಿಗೆ ಭೂಮಿಯ ಸ್ವಾಮಿತ್ವ ಕೊಡಿಸಬೇಕೆಂದು ಸರಕಾರ ಪ್ರಯತ್ನ ಮಾಡುತ್ತಿದೆ. ಇದಕ್ಕೆ ನಿರ್ದಿಷ್ಟ ಅವಧಿ ಗೊತ್ತುಮಾಡಲು ಆಗುವುದಿಲ್ಲ. ಯಾವ ರಾಜ್ಯದಲ್ಲೂ ಆ ರೀತಿ ಮಾಡಲು ಸಾಧ್ಯವಾಗಿಲ್ಲ. ಮಹಾರಾಷ್ಟ್ರ ರಾಜ್ಯವನ್ನೇ ತೆಗೆದುಕೊಂಡು ನೋಡಿದರೆ 1937ನೇ ಇಸವಿಯಲ್ಲಿ ಕಾನೂನು ಜಾರಿಗೆ ಬಂದಿದ್ದರೂ ಕೂಡ ಅನೇಕ ಸಲ ಅದಕ್ಕೆ ತಿದ್ದುಪಡಿ ಮಾಡಿದ್ದಾರೆ. ಟೆನೆಂಟ್ಸ್ ಡೇ ಆಚರಣೆ ಮಾಡಿದರೂ ಕೂಡ ಭೂಮಿಯ ಸ್ವಾಮಿತ್ವ ಈ ಒಂದು ದಿನದಿಂದ ಬಂದಿದೆ ಎಂದು ಮಾಡಲು ಆಗಿಲ್ಲ.

Sri V. N. PATIL.—Take for instance Kerala. Why do you take only Maharashtra ?

ಶ್ರೀ ಎಚ್. ವಿ. ಕೌಜಲಗಿ.—ಭೂಮಾಲೀಕನಿಗೆ ಭೂಮಿಯ ಕ್ರಯ ಕೊಡಿಸಬೇಕು ಎಂದು ಮಾಡಿದ್ದೇವೆ. ಈ ರೀತಿ ಮಾಡಿದರೆ ಭೂಮಿಯ ಸ್ವಾಮಿತ್ವ ತೀವ್ರವಾಗಿ ಉಳುವವನಿಗೆ ಸಿಕ್ಕುತ್ತದೆ. ಇಷ್ಟು ಹಣ ಪಡೆಯಲು ರಾಷ್ಟ್ರೀಕೃತ ಬ್ಯಾಂಕಗಳನ್ನು ಅವಲಂಬಿಸಿದ್ದೇವೆ ಎಂದು ಹೇಳಿದರು.

Sri D. B. KALMANKAR.—Do you mean to say there is no uniformity in Maharashtra ? I definitely say there is uniformity.

Sri L. SRIKANTAIAH.—You please read the statement of objects and reasons on page 12. It reads like this :

> "The Bill is intended primarily to expedite the disposal of the accumulation of resumption applications, rent applications and other miscellaneous applications under the Land Reforms Act with the Special Tribunals appointed for the purposes, by enabling all the Munsiff Courts to function as Land Tribunals, and by separating the Judicial from executive functions and transferring the latter to the Tahsildars... .."

Is the Munsiff competent to do so under Section 116 read with Section 42 ?

Sri H. V. KOUJALGI.—This is not so. On the other hand each Munsiff will receive rent applications and all such other applications and dispose of. Surplus executive functions have been transferred to the Tahasildar. He is the executive authority.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೆಂಟ್ ಸೂಟ್ಸ್ ತೀರ್ಮಾನ ಮಾಡಲು ಬಹಳ ತಡವಾಗುತ್ತಿದೆ ಎಂದು ಹೇಳಿದರು. ಇದಕ್ಕೆ ಕಾರಣ ಏನೆಂದರೆ ರೂಲ್ಸ್ ಪ್ರಕಾರ ನೋಟಿಫಿಕೇಶನ್ ಹೊರಡಿಸಬೇಕಾಗುತ್ತದೆ. ನೋಟೀಸ್ ಕೊಟ್ಟದ್ದು ಸರಿಯಿಲ್ಲ ಎಂದು ಹೈಕೋರ್ಟಿನಲ್ಲಿ ರಿಟ್ ಹಾಕಿದರು. ಆ ಅಡಚಣೆ ದೂರವಾಗಬೇಕು ಎಂದು ನೋಟಿಫಿಕೇಷನ್ನಿನಲ್ಲಿ ರಿವಿಜನ್ ಅಧಿಕಾರ ಇಟ್ಟಿದೆ.

Mr. DEPUTY SPEAKER.—The question is :

"That the Mysore Land Reforms (Amendment) Bill, 1970 be taken into consideration."

The motion was adopted.

SECTION 2

Mr. DEPUTY SPEAKER.—The question is :

"That Clause 2 do stand part of the Bill."

There is an amendment to clause 2, by Sriyuths M. Nagappa, D. B. Kalmankar and V. N. Patil, Sri Nagappa may move that.

Sri M. NAGAPPA.—I beg to move :

"That at page 2 in the proposed sub-section (1) for the words and figures '80.94 standard acres' the words and figures '40.47 standard acres' shall be substituted.

"That page 2 in the proposed sub-section (ii) in line 2 for the words and figures '7 standard Hectares and 28.43 standard acres' the words and figures '3 standard hectares and 50 standard acres' shall be substituted.

"And that at page 2 in the proposed sub-section (iv) for the words and figures '2 standard hectares and 42.82 standard acres' the words and figures 'one standard hectare and 21.40 standard acres' shall be substituted."

Mr. DEPUTY SPEAKER,—Amendments moved:

"That at page 2 in the proposed sub-section (1) for the words and figures '80.94 standard acres' the words and figures '40.47 standard acres' shall be substituted.

"That at page 2 in the proposed sub-section (ii) in line 2 for the words and figures '7 standard hectares and 28.43 standard acres' the words and figures '3 standard hectares and 50 standard acres' shall be substituted.

"And that page 2 to in the proposed sub-section (iv) for the words and figures '2 standard hectares and 42.82 standard acres' the words and figures 'one standard hectare and 21.40 standard acres' shall be substituted."

Mr. DEPUTY SPEAKER.—There is also an amendment by hon. Minister for Revenue,

Sri H. V. KOUJALGI.—Sir, there seems to be some confusion in the amendment. I request that I may be permitted to move the same tomorrow after verification.

Sri H. SIDDAVEERAPPA.—Sir, since there is some confusion in the wordings of the amendment, the Hon. Minister may move his amendment tomorrow and the House may be adjourned now.

Mr. DEPUTY SPEAKER.—All right. The House now stands adjourned to meet again at 1-00 P.M. tomorrow.

The House adjourned at Fifteen Minutes past Seven of the Clock to meet again at One of the Clock on Tuesday, the 3rd February 1970.

WD 14642—GPB—520—24-7-1970

ಮೈಸೂರು ವಿಧಾನಸಭೆಯ ನಡೆವಳಿಕೆಗಳು
MYSORE LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ನಾಲ್ಕನೆಯ ವಿಧಾನಸಭೆಯ ಏಳನೆಯ ಅಧಿವೇಶನ
SEVENTH SESSION OF THE FOURTH LEGISLATIVE ASSEMBLY

ಮಂಗಳವಾರ, ೩ನೇ ಫೆಬ್ರವರಿ ೧೯೭೦ [ಮಾಘ ೧೪, ೧೮೯೧ (ಶಕ)]

TUESDAY, 3RD FEBRUARY 1970 [MAGHA 14, 1891 (SAKA)]

ಸಂಪುಟ ೨೩—ಕ್ರಮಾಂಕ ೪

Vol. XXIII—No. 4

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು
Mysore Legislature Secretariat, Bangalore

ಬೆಲೆ: ೨೫ ಪೈಸೆ
Price : 25 Paise

CONTENTS

PAGES

1 (i) Starred Questions and Answers ... 239—261

(ii) Questions for Answers on the day (but not taken up) 261—263

(iii) Request for extension of Question Hour ... 263—264

2 Discussions during Zero Hour ... 264—265

3 Request to allow Sri Vatal Nagaraj to make a Statement on his Talavadi Visit ... 265—266

4 Notice of an adjournment Motion given by Sri Vatal Nagaraj *re* : Excesses by the Police of Talavadi upon Mysoreans engaged in Talavadi agitation—(Consent withheld) ... 266—270

5 Motion to suspend the Services of Sri Vatal Nagaraj from the Session—(Adopted) ... 270—271

6 Calling Attention to a matter of urgent Public Importance—

(i) *re* : Setting Fire to Ragi Heaps and other Farm Produce in Kunigal Taluk ... 271—273

(ii) *re* : incident on 1st February 1970 in some parts of Bangalore City ... 273—274

7 Statement of the Chief Minister *re* : the Arrest of Sri Vatal Nagaraj by Tamil Nadu Police ... 275—281

8 Mysore Land Reforms, (Amendment) Bill, 1970—(Passed as amended) ... 281—295

9 Mysore Village Panchayats and Local Boards (Amendment) Bill, 1970 ...
(i) Statutory Resolution to disapprove the Mysore Ordinance No. 6 of 1969 ...
(ii) Motion to Consider ... } 295—305
—Debate not concluded) ...

10 Recognition of the S. V. D. Party ... 305—306

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 3rd February 1970

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Technical Audit Cell

35. **Sri N. HUTCHMASTHY GOWDA** (Huliyurdurga).—

Will the Chief Minister be pleased to state :—

(*a*) the date on which the work relating to Technical Audit Cell was entrusted to Mysore State Vigilance Commission ;

(*b*) the number of cases so far investigated and sent by the Technical Audit cell to Government ;

(*c*) whether the Government have forwarded them for further investigation after examining whether there is a *prima facie* case or not ;

(*d*) the number of such cases in which enquiry was conducted and punishment inflicted ?

Sri VEERENDRA PATIL (Chief Minister).—

(*a*) From the forenoon of 1st April 1968.

(*b*) 6 cases.

(*c*) Yes.

(*d*) Matter is under examination.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸುಮಾರು 1 ವರ್ಷ 10 ತಿಂಗಳು ಆಗಿದ್ದರೂ ಕೇವಲ 6 ಪ್ರಕರಣಗಳಲ್ಲಿ ತನಿಖೆ ನಡೆಯುವುದಕ್ಕೆ ಕಾರಣ ಏನು ? ಅವರಿಗೆ ಇರುವ ಸಿಬ್ಬಂದಿ ವರ್ಗ ಕಡಿಮೆಯೇ ? ಅಥವಾ ಅಲ್ಲಿರತಕ್ಕಂಥ ಅಧಿಕಾರಿಗಳಿಗೆ ಅತೃಪ್ತಿ ಉಂಟಾಗಿದೆಯೇ ? ಅಥವಾ ಸರ್ಕಾರದ ಹಸ್ತಕ್ಷೇಪ ಇದೆಯೇ ? ಈ ಕಾರಣಗಳಲ್ಲಿ ಯಾವುದು ಎನ್ನುವುದನ್ನು ತಿಳಿಸಬೇಕು.

†ಶ್ರೀ ವೀರೇಂದ್ರ ಪಾಟೀಲ್.—ಇಲ್ಲ. ಯಾವುದಾದರೂ ಕೇಸುಗಳನ್ನು ರೆಫರ್ ಮಾಡಿದರೆ ಅವರು ಇನ್‌ವೆಸ್ಟಿಗೇಟ್ ಮಾಡುತ್ತಾರೆ. ಅವರಿಗೆ ತನಿಖಾಧಿಕಾರಿಗಳು ಇದ್ದಾರೆ. ಇನ್‌ಸ್ಪೆಕ್ಟರು ಹೋಗಿ ತನಿಖೆ ಮಾಡುತ್ತಾರೆ. ಸರ್ಕಾರದ ಗಮನಕ್ಕೆ ತಂದಾಗಲೂ ಕೂಡ ಇನ್‌ವೆಸ್ಟಿಗೇಟ್ ಮಾಡುವುದಕ್ಕೆ ಟೈಮ್ ಆಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರ ಮುಂದೆ ತನಿಖೆ ಆಗಬೇಕಾಗಿರುವ ಅರ್ಜಿಗಳು ಎಷ್ಟು ಸಂಖ್ಯೆಯಲ್ಲಿ ಇವೆ ಎಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—6 ಪ್ರಕರಣಗಳಲ್ಲಿ ಇನ್‌ವೆಸ್ಟಿಗೇಟ್ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಇನ್ನೂ 14 ಪ್ರಕರಣಗಳಲ್ಲಿ ಇರ್ರಿಗ್ಯೊಲ್ಯಾರಿಟೀಸ್ ಅವರ ಗಮನಕ್ಕೆ ಬಂದಿದೆ. ಅದರ ಮೇಲೆ ಸೂಟಬಲ್ ಆಕ್ಷನ್, ಮತ್ತು ಡಿಸಿಪ್ಲಿನರಿ ಅಕ್ಷನ್ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ವರದಿಯಾಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಸ್ವಾಮಿ, ಟೆಕ್ನಿಕಲ್ ಆಡಿಟ್ ಸೆಲ್‌ನ್ನು ರಾಜ್ಯದ ಜಾಗೃತ ಅಯೋಗಕ್ಕೆ ವಹಿಸಿಕೊಡಲು ಕಾರಣ ಏನು ?

ಶ್ರೀ ವೀರೇಂದ್ರ ಪಾಟೀಲ್.—ಮೊದಲು ಈ ಸೆಲ್ ಆಂಟಿಕರಪ್ಷನ್ ಡಿಪಾರ್ಟ್‌ಮೆಂಟ್‌ನಲ್ಲಿತ್ತು. ಯಾವಾಗ ಈ ಡಿಪಾರ್ಟ್‌ಮೆಂಟನ್ನು ಅವರಿಗೆ ವಹಿಸಿದೆವೋ ಈ ಟೆಕ್ನಿಕಲ್ ಆಡಿಟ್ ಸೆಲ್ ಅದರ ಜೊತೆಯಲ್ಲೇ ಇದ್ದುದರಿಂದ ಅದೂ ಕೂಡ ರಾಜ್ಯದ ಜಾಗೃತ ಅಯೋಗಕ್ಕೆ ಹೋಗಬೇಕಾಯಿತು. ಆದುದರಿಂದ ಆಂಟಿ ಕರಪ್ಷನ್ ಜೊತೆಗೆ ಈ ಟೆಕ್ನಿಕಲ್ ಆಡಿಟ್ ಸೆಲ್ ಕೂಡ ಬಂದಿದೆ.

ಶ್ರೀ ಬಿ. ದೊಡ್ಡಬೋರೇಗೌಡ.—ಸ್ವಾಮಿ, ಈ ಟೆಕ್ನಿಕಲ್ ಆಡಿಟ್ ಸೆಲ್‌ನವರು ಸರ್ಕಾರದವರು ವರದಿ ಮಾಡಿದರೆ ಮಾತ್ರ ತೆಗೆದುಕೊಳ್ಳುತ್ತಾರೋ ಅಥವಾ ಸಾರ್ವಜನಿಕರು ಆಯಾಯ ಜಾಗದಲ್ಲಿರುವ ಕುಂದುಕೊರತೆಗಳನ್ನು ಬರೆದು ತಿಳಿಸಿದರೆ ವಿಚಾರಣೆ ಮಾಡುತ್ತಾರೋ ?

ಶ್ರೀ ವೀರೇಂದ್ರ ಪಾಟೀಲ್.—ಸರ್ಕಾರದವರು ಗಮನಕ್ಕೆ ತಂದರೂ ವಿಚಾರಣೆ ಮಾಡುತ್ತಾರೆ. ಮಾನ್ಯ ಸದಸ್ಯರು ಮತ್ತು ಜನಸಾಮಾನ್ಯರು ಅವರ ಗಮನಕ್ಕೆ ತಂದರೂ ಪರಿಶೀಲನೆ ಮಾಡುತ್ತಾರೆ.

ಶ್ರೀ ಎನ್. ಚಿಕ್ಕೇಗೌಡ.—ಸ್ವಾಮಿ, 6 ಪ್ರಕರಣಗಳನ್ನು ಸರ್ಕಾರಕ್ಕೆ ಸಿಪಾರಸ್ಸು ಮಾಡಿದ್ದಾರಲ್ಲಾ ಅದನ್ನು ತಾವು ಇನ್ ಟೋಟೊ ಒಪ್ಪಿಕೊಂಡಿದ್ದೀರಾ ? ಒಪ್ಪಿಕೊಳ್ಳಲಿಕ್ಕೆ ತೊಂದರೆ ಆಗಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅವರು ರಿಪೋರ್ಟ್ ಮಾಡಿದ್ದೇವೆಂದು ಫೈಂಡಿಂಗ್ಸ್ ಕೊಡುತ್ತಾರೆ ಆ ಮೇಲೆ ನಾವು ನಮ್ಮ ಸರ್ವಿಸ್‌ರೂಲ್ಸ್ ಪ್ರಕಾರ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಬೇಕಾಗುತ್ತದೆ. ಅದಾದಮೇಲೆ ಅವರಿಗೆ ಫೈಂಡಿಂಗ್ಸ್ ಪ್ರಕಾರ ಶಿಕ್ಷೆ ವಿಧಿಸಬೇಕಾಗುತ್ತದೆ.

Sri H. SIDDAVEERAPPA.—When are the services of the Technical Audit Cell indented? Are they indented after the ordinary audit is performed?

Sri VEERENDRA PATIL.—I will read out the functions of the Technical Audit Cell. They are: (1) Quality inspection of important works during execution and after completion; (2) Inspection of Departmental works for ensuring no excess use of materials and labour; (3) Checking of concluded contracts; (4) Checking of percentage of bills, and helping Government on technical points; (5) Investigation into allegations against P. W. D. Officers.

These are the principal functions of the Technical Audit Cell.

---

†Indicates that the remarks or speeches have not been revised by the member.

ಶ್ರೀ ಬಿ. ಪಿ. ಗಂಗಾಧರ್.—ಟೆಕ್ನಿಕಲ್ ಆಡಿಟ್ ಸೆಲ್ ಇನ್‌ವೆಸ್ಟಿಗೇಷನ್‌ನಲ್ಲಿ ಬಹಳ ಡಿಲೇ ಆಗುವುದರಿಂದ, ಎವಿಡೆನ್ಸ್ ಡಿಸ್ ಅಪಿಯರ್ ಆಗುವುದಲ್ಲದೆ ಶಿಕ್ಷೆಯೂ ಕೂಡ ಡಿಸ್‌ಅಪಿಯರ್ ಆಗುತ್ತದೆ. ಆದುದರಿಂದ ಇದನ್ನು ಬೇಗ ಎನ್‌ಕ್ವೈರಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಟೆಕ್ನಿಕಲ್ ಆಡಿಟ್ ಸೆಲ್‌ನವರು ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಬೇಕು. ಡಿಲೇ ಆಗುವುದಾದರೆ ಅವರಿಗೇನಾದರೂ ಅವಶ್ಯಕ ಎಂದು ಕಂಡು ಬಂದರೆ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಬೇಕಾಗುತ್ತದೆ. ರೂಲ್ ಪ್ರಕಾರ ಯಾವ ಯಾವ ರೀತಿ ಮಾಡಬೇಕಾಗುತ್ತದೆಯೋ ಅದೇ ರೀತಿ ಮಾಡಬೇಕಾಗುತ್ತದೆ. ಒತ್ತಾಯ ಮಾಡಿ ಮುಗಿಸುವುದಕ್ಕೆ ಸಾಧ್ಯ ಇಲ್ಲ.

Sri N. G. HALAPPA.—Will the Government be pleased to state the stages at which these six cases are ?

Sri VEERENDRA PATIL.—I do not know all the details with regard to them. The six cases which have been gone into by the Technical Audit Cell relate to shortage of stock articles in the Division at Linganmakki, allegations against the Assistant Engineer Sri Anantha Murthy, and some others and the list of cases is furnished to Government. In certan cases it is very difficult for me to straightaway intimate the stage. In the case of Assistant Engineer Sri Anantha Murthy, action under Rule 12 C. C. A. is suggested by the Commission. In the allegations against a Corporation Engineer and another Executive Engineer of a Project, the suggestions are pending disposal.

ಶ್ರೀ ಬಿ. ನಂಜಪ್ಪ.—ಸ್ವಾಮಿ, ಈ 6 ಪ್ರಕರಣಗಳ ವಿವರಗಳನ್ನು ಕೊಡುವುದಕ್ಕೆ ಸಾಧ್ಯವೇ ?

ಶ್ರೀ ವೀರೇಂದ್ರ ಪಾಟೀಲ್.—ಅದರಲ್ಲಿ 2-3 ಆಗಲೇ ಓದಿ ಹೇಳಿದ್ದೇನೆ.

ಶ್ರೀ ಸಿ. ಎಂ. ಎಸ್ ಶಾಸ್ತ್ರಿ.—ಟೆಕ್ನಿಕಲ್ ಆಡಿಟ್ ಸೆಲ್‌ನವರು 6 ಪ್ರಕರಣಗಳಲ್ಲಿ ರಿಪೋರ್ಟ್ ಮಾಡಿ ಕಳುಹಿಸಿದ್ದಾರೆ ಎಂದು ಹೇಳಿದ್ದೀರಿ. ಅದು ಇನ್ನೂ ಪರಿಶೀಲನೆ ಆಗುತ್ತಾ ಇದೆಯೇ? ಎಷ್ಟು ದಿವಸದಲ್ಲಿ ಪರಿಶೀಲನೆ ಮಾಡಿ ಅದು ಅಂತಿಮ ತೀರ್ಮಾನವಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಎಷ್ಟು ದಿವಸ ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಇನ್‌ವೆಸ್ಟಿಗೇಟ್ ಆಗಿದೆ. ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಸ್ಟಾರ್ಟ್ ಮಾಡಬೇಕಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ಹೇಳಿದ್ದೇವೆ. ಡಿಪಾರ್ಟ್‌ಮೆಂಟಲ್ ಪ್ರೊಸೀಜರ್ ಪ್ರಕಾರ ಮಾಡಬೇಕು. ಪ್ರೊಸೀಜರ್ ಪ್ರಕಾರ ಸರಿಯಾಗಿ ಮಾಡದೇ ಹೋದರೆ ಎನ್‌ಕ್ವೈರಿಯೇ ವಿಷಿಯೇಟ್ ಆಗಿಹೋಗುತ್ತದೆ. ಆದಷ್ಟು ಜಾಗ್ರತೆ ಶೀಘ್ರವಾಗಿ ಎನ್‌ಕ್ವೈರಿ ಮಾಡಲಾಗುತ್ತದೆ.

ಶ್ರೀ ಬಾಪೂಗೌಡ.—ವಿಜಿಲೆನ್ಸ್ ಕಮೀಷನ್ ಅಸ್ತಿತ್ವಕ್ಕೆ ಬಂದನಂತರ ಡಿಪಾರ್ಟ್‌ಮೆಂಟ್ ಇನ್‌ಎಫಿಷಿಯೆನ್ಸಿ ಮತ್ತು ಕರಪ್ಷನ್ಸ್ ಜಾಸ್ತಿ ಆಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈ ಟೆಕ್ನಿಕಲ್ ಸೆಲ್ ಮೊದಲು ನಮ್ಮ ಹತ್ತಿರ ಇತ್ತು. ಆಮೇಲೆ ವಿಜಿಲೆನ್ಸ್ ಕಮೀಷನ್‌ಗೆಟ್ರಾನ್ಸ್‌ಫರ್ ಆಯಿತು. ಇದರಿಂದ ಅಧಿಕಾರಿಗಳಿಗೆ ಮತ್ತು ಇತರರಿಗೆ ಒಂದು ಭಯ ಇರುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಲ್ಲಿಯಾದರೂ ಕರ್ತವ್ಯ ಲೋಪವಾಗಿದ್ದರೆ ಕೆಳದರ್ಜೆಯ ಅಧಿಕಾರಿಗಳು ಮೇಲಿನ ದರ್ಜೆಯ ಅಧಿಕಾರಿಗಳ ಬಗ್ಗೆ ವಿಚಾರಣೆ ಮಾಡಲು ಅವಕಾಶವಿಲ್ಲ. ಇದರಿಂದಾಗಿ ಕೆಲವು ವೇಳೆ ಇಲ್ಲಿ ಕೆಲಸ ಮಾಡುವ ಕೆಳದರ್ಜೆಯ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಲು ಹಿಂದುಮುಂದು ನೋಡುತ್ತಾರೆ. ದಕ್ಷವಾಗಿ ಕೆಲಸ ಮಾಡುವ ಅಧಿಕಾರಿಗಳೇನಾದರೂ ಇಂತಹ ಕಾರ್ಯಗಳನ್ನು ಮಾಡಲು ಹೆಚ್ಚಿನ ಅಧಿಕಾರವನ್ನು ಕೊಡುತ್ತೀರಾ ? ಹೀಗೆ ಮಾಡುವುದು ಅಗತ್ಯವಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್ :—ಕೆಳದರ್ಜೆಯ ಅಧಿಕಾರಿಗಳು ಮೇಲಿನ ದರ್ಜೆ ಅಧಿಕಾರಿಗಳ ಬಗ್ಗೆ ವಿಚಾರಣೆ ಮಾಡಲು ಅವಕಾಶವಿಲ್ಲ. ಇಲ್ಲಿ ನೇಮಕ ಮಾಡಿರುವ ಅಧಿಕಾರಿಗಳು

(ಶ್ರೀ ವೀರೇಂದ್ರ ಪಾಟೀಲ್)

ಸೂಪರಿಂಟೆಂಡೆಂಟ್ ಇಂಜನೀಯರಿಂಗ್ ದರ್ಜೆ ಅಧಿಕಾರಿಗಳು. ಇವರ ಕೈಕೆಳಗೆ ಬರುವ ಅಧಿಕಾರಿಗಳ ಬಗ್ಗೆ ಇವರಲ್ಲಿ ವಿಚಾರಣೆಗೆ ಬರುವುದು. ಇವರಿಗೆ ಮೇಲ್ಪಟ್ಟು ಚೀಫ್ ಇಂಜಿನಿಯರ್‌ರವರ ಬಗ್ಗೆ ಏನಾದರೂ ದೂರುಗಳು ಬಂದರೆ ಅಂತಹವುವನ್ನು ವಿಚಾರಣೆ ಮಾಡಲು ಅದಕ್ಕೆ ಬೇರೆ ಅಧಿಕಾರಿಗಳನ್ನು ನೇಮಕ ಮಾಡಬೇಕಾಗುತ್ತದೆಯೆ ಇಲ್ಲವೇ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ.

Seniority List and Promotions of II Division Clerks

118. **Sri B. P. GANGADHAR** (Tumkur).—

Will the Minister for Public Works be pleased to state :—

(*a*) whether the seniority of II Division Clerks were maintained as on 1st November 1956 on Statewide basis ;

(*b*) whether that seniority list has been finalised ;

(*c*) whether it is a fact that the Government has ordered that the seniority list of the above officials are to be maintained on Circle-wise basis during July 1962 ;

(*d*) whether it does not affect the promotion chances of Senior II Division Clerks in certain circles and if so, the remedy suggested by Government ;

(*e*) whether the Superintending Engineer, Mangalore Circle has promoted eleven II Division Clerks during 1965 who are juniors as per the Inter State Seniority list working in other circles ;

(*f*) if so, whether the Superintending Engineer, Mangalore Circle is competent to promote II Division Clerks to the higher cadre of I Division (as officiating) if not, whether any special powers have been delegated to him ;

(*g*) whether it is a fact that the II Division Clerks who have put in 15 to 20 years of service have not been promoted so far as I Division Clerks as per Inter State Seniority list ;

(*h*) whether it is a fact that the Chief Engineer of other zones, have promoted nearly seventy II Division clerks in their respective zones, who are juniors ;

(*i*) whether it is a fact that the II Division Clerks who joined the service during 1951, 1953 and 1955 have been promoted during 1956 1957, 1961 and 1964 ;

(*j*) if so, the policy adopted in giving promotions within short spell of service ;

(*k*) the percentage fixed for Direct Recruitment and also for promotion ;

(*l*) the number of II Division Clerks who have been recruited directly after 1st November 1956 and the number of them that have been promoted after 1st November 1956 ?

SRI K. LAKKAPPA (Minister for Public Works).—

(*a*) and (*b*) Pending decision of Government as to whether the seniority list of II Division Clerks should be Statewise or Circlewise, the Chief Engineer had prepared a working list on Statewise seniority, Government have since decided that the seniority list should be Circlewise and these lists are under finalisation.

(*c*) Yes.

(*d*) As per G. O. No. PWD 1 SAD 62, dated 21st July 1962, promotions of II Division Clerks to the cadre of I Division Clerks are to be made on Circlewise basis from among the seniormost II Division Clerks of the particular circle. The qusestion of seniority of II Division Clerks of other circles, does not arise.

(*e*) The Superintending Engineer, Mangalore Circle has promoted 16 II Division Clerks as per Circlewise list of Seniority in his circle on the basis of seniority-*cum*-merit.

(*f*) Yes.

(*g*) Yes.

(*h*) The Chief Engineer, Irrigation Project (North) promoted them on a temporary basis as they were seniors in that zone. The matter is being reviewed in accordance with the C. and R. Rules and circlewise seniority.

(*i*) and (*j*) Promotions were made up to 7/62 by the Chief Engineers following Statewise seniority, but from 7/62 the Circlewise lists are being followed.

(*k*) For First Division Clerks : 50 per cent by direct recruitment. 50 per cent by promotion.

(*l*) By direct recruitment	...	277
By promotion	...	270

ಶ್ರೀ ಬಿ. ಪಿ. ಗಂಗಾಧರ್.— ಸರ್ಕಲ್‌ವೈಸು ಎಂದು ಈಗ ಮಾಡಿರುವುದರಿಂದ ಬಹಳ ಅನುಕೂಲವಾಗಿದೆ. ಸ್ಟೇಟುವೈಸು ಮಾಡುವುದರಿಂದ ಆಗುವ ತೊಂದರೆಗಳೇನು ?

ಶ್ರೀ ಕೆ. ಲಕ್ಕಪ್ಪ.—ಸ್ಟೇಟುವೈಸು ಮಾಡುವುದರಿಂದ ಕೆಲವು ಅನಾನುಕೂಲಗಳಾಗುತ್ತವೆ ಎಂದು ಸಲಹೆಗಳು ಬಂದುದರಿಂದ ಸರಕಾರ ಇದರ ಬಗ್ಗೆ ಸರ್ಕಲ್‌ವೈಸು ಮಾಡಬೇಕೆಂದು ತೆಗೆದುಕೊಂಡಿದೆ. ಇದರಲ್ಲಿ ಮೊದಲನೆಯದು ಅಡ್ಮಿನಿಸ್ಟ್ರೇಟಿವ್ ಕನ್‌ವೀನಿಯನ್ಸ್, ಎರಡನೆಯದು ಮುಖ್ಯವಾದುದು, ಶಾಸನ ಸಭೆಯ ಸದಸ್ಯರುಗಳಿಂದ ಹಾಗೂ ಸಾರ್ವಜನಿಕರಿಂದ ಒತ್ತಾಯವಾದ ಸೂಚನೆಗಳು ಬಂದುವು ಮತ್ತು ಸಣ್ಣ ಅಧಿಕಾರಿಗಳನ್ನು ಒಂದೇ ಸರ್ಕಲ್ಲಿನಲ್ಲಿರಬೇಕೆಂದು ಮಾಡಬೇಕು, ಒಂದು ಸರ್ಕಲ್ಲಿನಿಂದ ಇನ್ನೊಂದು ಸರ್ಕಲ್ಲಿಗೆ ಇವರನು ವರ್ಗಾಯಿಸಿದರೆ ತೊಂದರೆಯಾಗುತ್ತದೆ ಮತ್ತು ಅನಾನುಕೂಲವಾಗುತ್ತದೆ ಎಂದು ಸರ್ಕಾರಕ್ಕೆ ತಿಳಿದು ಬಂದುದರಿಂದ ಸರಕಾರದವರು ಸರ್ಕಲ್‌ವೈಸು ಮಾಡಬಹುದು ಎಂದು ಈಚೆಗೆ ತೀರ್ಮಾನ ತೆಗೆದುಕೊಂಡು ಇದನ್ನು ಮಾಡುವುದು ಸೂಕ್ತ ಎಂದು ಹಾಗೆ ಮಾಡಲಾಗಿದೆ.

ಶ್ರೀ ಬಿ. ಪಿ. ಗಂಗಾಧರ್.—51, 53, 55 ರಲ್ಲಿ ಇದ್ದ ಅಧಿಕಾರಿಗಳಿಗೆ ಈಗಾಗಲೇ ಪ್ರಮೋಷನ್‌ಗಳು ಆಗಿವೆ, 15-20 ವರ್ಷಗಳಿಂದ ಒಂದೇ ಕಡೆಯಲ್ಲಿ ಕೊಳೆಯುತ್ತಿರುವ ಜನರಿಗೆ ಯಾವ ವಿಧವಾದ ಪ್ರಮೋಷನ್ ಇತ್ಯಾದಿಗಳೂ ಸಿಗುತ್ತಿಲ್ಲ. ಇಂತಹವರಿಗೆ ಸರ್ಕಲ್‌ವೈಸು ಎಂದು ಮಾಡಿದರೆ ಅನ್ಯಾಯವಾಗುವುದಿಲ್ಲವೇ ?

ಶ್ರೀ ಕೆ. ಲಕ್ಕಪ್ಪ.—ಸರ್ಕಲ್‌ವೈಸು ಎಂದು ಮಾಡವಾಗ ಕೆಲವರಿಗೆ ಈ ರೀತಿ ಆಗಿರಬಹುದು. ಆದರೆ ಇಂತಹ ಬದಲಾವಣೆಗಳನ್ನು ಮಾಡುವಾಗ ಕೆಲವರಿಗೆ ಅನಿವಾರ್ಯವಾಗಿ ಅನಾನುಕೂಲವಾಗಿರಬಹುದು.

ಶ್ರೀ ಬಿ. ಎನ್. ಪಾಟೀಲ್.—(ಉ) ಉತ್ತರದಲ್ಲಿ ಮಂಗಳೂರು ವಿಭಾಗದಲ್ಲಿರುವ ಸೂಪರಿಂಟೆಂಡೆಂಟು ಇಂಜನೀಯರ್‌ರವರು 16 ಜನರಿಗೆ ಮುಂಬಡ್ತಿ ಕೊಟ್ಟಿದ್ದಾರೆ ಎಂದು ಹೇಳಿದ್ದೀರಿ. ಇದನ್ನು ಯಾವಾಗ ಮಾಡಲಾಯಿತು ?

ಶ್ರೀ ಕೆ. ಲಕ್ಕಪ್ಪ.—ಸರ್ಕಲ್‌ವೈಸು ಎಂದು ಸರಕಾರ ಈಚೆಗೆ ಮಾಡಿದ್ದು. ಇದನ್ನು ಮಾಡುವ ಮುನ್ನ ಇದನ್ನು ಮಾಡಿರತಕ್ಕದ್ದು. ಇದೂ ಅಲ್ಲವೆ ಮದ್ರಾಸ್ ಸ್ಟೇಟಿನಿಂದ ಕೆಲವರು ಇಲ್ಲಿಗೆ ಬಂದಿದ್ದರು. ಸರಕಾರದ ರೂಲ್ಸ್ ಪ್ರಕಾರ ಅದನ್ನು ಮಾಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಲ್‌ವೈಸು ಎಂದು ಮಾಡುವುದರಿಂದ ಅನೇಕರಿಗೆ ವರ್ಗ ಮಾಡಲು ತೊಂದರೆಯಾಗುತ್ತದೆ. ಇದಕ್ಕಾಗಿ ಒಂದೇ ಸರ್ಕಲ್‌ನಲ್ಲಿದ್ದರೆ ಅಲ್ಲಿಗೆ ವರ್ಗ ಮಾಡಲು ಅನುಕೂಲ ಇದೆ ಎಂದು ಮಂತ್ರಿಗಳು ಹೇಳಿದರು. ಈಗ ಕೆಲವರನ್ನು ಒಂದು ಸರ್ಕಲ್‌ನಿಂದ ಇನ್ನೊಂದು ಸರ್ಕಲ್‌ಗೆ ವರ್ಗ ಮಾಡಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೆ ? ಸರಕಾರ ಇದರ ಬಗ್ಗೆ ಸ್ಪಷ್ಟವಾದ ಭರವಸೆ ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಕೆ. ಲಕ್ಕಪ್ಪ.—ಇದು ನನಗೆ ಗೊತ್ತಿಲ್ಲ. ಈ ತರಹ ಏನಾದರೂ ಆಗಿದ್ದರೆ ಅದನ್ನು ಸರಿಪಡಿಸುವುದಕ್ಕೆ ಆಗುತ್ತದೆ.

ಶ್ರೀ ಎಂ. ನಾಗಪ್ಪ.—ತಾವು ಇಲ್ಲಿ ಪಿ.ಡಬ್ಲ್ಯೂ.ಡಿ. 1 ಎಸ್ ಎ ಡಿ 62ನೇ ಕ್ರಮಾಂಕದ ಜಿ.ಒ. ಪ್ರಕಾರ ಮಾಡಲಾಗಿದೆ ಎಂದರೆ ಇದು ಡಿಸ್‌ಕ್ರಿಮಿನೇಷನ್ ಮಾಡಿದಂತಾಗುವುದಿಲ್ಲವೇ ? ಇಲ್ಲಿ ಇಂತಹ ಸರ್ಕಲ್‌ವೈಸ್ ಮಾಡಬೇಕೆಂದು ತಮಗೆ ಜಿ.ಎ.ಡಿ. ಕಡೆಯಿಂದೇನಾದರೂ ಸೂಚನೆ ಕಳುಹಿಸಿ ಇಂತಹ ಜಿ. ಒ. ಮಾಡಬೇಕೆಂದು ಮಾಡಿದ್ದೀರಾ ಹೇಗೆ ?

ಶ್ರೀ ಕೆ. ಲಕ್ಕಪ್ಪ.—ಬೇರೆ ಡಿಪಾರ್ಟುಮೆಂಟುಗಳಲ್ಲಿ ಹೇಗಿದೆಯೋ ನನಗೆ ಗೊತ್ತಿಲ್ಲ. ನನಗೆ ಪಿ ಡಬ್ಲ್ಯು ಡಿ ಮಾತ್ರ ಗೊತ್ತಿದೆ. ಇದರ ಬಗ್ಗೆ ಮಾತ್ರ ಇಲ್ಲಿ ವಿಚಾರ ಮಾಡುತ್ತಿದ್ದೇನೆ.

Sri D. B. KALMANKAR.—May I know whether this circlewise list prepared, will survive in a court of law ?

Mr. SPEAKER—It is a question of law so it need not be answered.

Sri H. SIDDAVEERAPPA.—May I know whether the public service is one unit for the entire State or we are having circlewise administration unit ? Have you understood the deleterious effect of this kind of thing ? Is not such a thing undermining the morale of the administration ?

Sri K. LAKKAPPA.—Because of the representation of the people and also inconvenience expressed by officers themselves the Government has done that.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಸೀನಿಯಾರಿಟಿ ಲಿಸ್ಟ್ ಮಾಡುವಾಗ ಸ್ಟೇಟುವೈಸಾಗಿ ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಕೆ. ಲಕ್ಕಪ್ಪ.—ಮೊದಲು ಹಾಗೇ ಮಾಡಲಾಗುತ್ತಿತ್ತು, ಇದರಲ್ಲಿ ಅನಾನುಕೂಲಗಳಿವೆ ಎಂದು ಸಲಹೆಗಳು ಬಂದುದರಿಂದ ಸರಕಾರ ಈ ರೀತಿ ಮಾಡಿದೆ.

ಶ್ರೀ ಬಿ. ಪಿ. ಗಂಗಾದರ್.—ಮಂಗಳೂರಿನಲ್ಲಿರುವ ಸೂಪರಿಂಟೆಂಡೆಂಟು ಇಂಜಿನೀಯರ್‌ರವರು ಸರ್ಕಲ್‌ವೈಸು ಸೀನಿಯಾರಿಟಿ ಲಿಸ್ಟ್ ಎಂದು ಮಾಡಿದೆ ಎಂದು ಹೇಳಿದ್ದಾರೆ. ಇದರಿಂದಾಗಿ

ಕೆಲವರು ಸೆಕೆಂಡು ಡಿವಿಜನ್‌ನಲ್ಲಿದ್ದವರು ಫಸ್ಟ್ ಗ್ರೇಡ್‌ಗೆ ಹೋದರು. ಆದರೆ ಬೇರೆ ಸರ್ಕಲ್‌ನಲ್ಲಿ ಈ ರೀತಿ ಆಗಿಲ್ಲ. Should there not be uniformity with regard to promotions throughout the State ?

ಶ್ರೀ ಕೆ. ಲಕ್ಕಪ್ಪ.—ಮಂಗಳೂರಿನಲ್ಲಿರುವ ಸೂಪರಿಂಟೆಂಡಿಂಗ್ ಇಂಜನಿಯರು ಇದನ್ನು ಮಾಡುವಾಗ ಜಿ. ಒ. ಆಗಿರಲಿಲ್ಲ. ಇದಕ್ಕೆ ಮೊದಲು ಅವರೆ) ಮಾಡಿದ್ದರು ಮತ್ತು ಸರ್ಕಾರದ ಸರಕ್ಯೂಲರ್ ಅವರಲ್ಲಿತ್ತು. ಅದರ ಪ್ರಕಾರ ಮಾಡಿದ್ದಾರೆ.

Repair or Construction work of bunds and tanks in Pavagada Taluk

138. **Sri P. ANJANAPPA** (Pavagada).—

Will the Minister of State for Minor Irrigation be pleased to state:—

whether they have contemplated to take up the repair work of the tank bunds or construction work in respect of Siddappanakere, Kanivehallikere, Iralagundi Hosakere and Pothaganahallikere in Pavagada taluk ?

Smt. BASAVARAJESWARI (Deputy Minister for Social Welfare) [On behalf of Sri A. J. DODDAMETI (Minister of State for Minor Irrigation)].—

(i) Not contemplated to take up repair work or construction work in respect of Siddappanakere and Kanivehallikere.

(ii) Due to acquisition of land the work relating to Iralagundikere has been stopped for the present.

(iii) Work relating to Pothaganahallikere is in progress.

ಶ್ರೀ ಪಿ. ಅಂಜನಪ್ಪ.—ಇಲ್ಲಿ ನಾನು ಹೇಳುವ ಕೆರೆಗಳಲ್ಲಿ ನೀರೇ ನಿಂತಿಲ್ಲ. ಇಲ್ಲಿ ಬರುವ ನೀರೆಲ್ಲಾ ಆಂಧ್ರದ ಕಡೆಗೆ ಹರಿದು ಹೋಗುತ್ತಿರುವುದರಿಂದ ಇದರ ಬಗ್ಗೆ ಸರಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ ?

†ಶ್ರೀಮತಿ ಬಸವರಾಜೇಶ್ವರಿ.— ಸಿದ್ದಪ್ಪನ ಕೆರೆ ಬ್ರೀಚ್ ಆಗಿ ಎಷ್ಟೋ ವರ್ಷಗಳಾದರೂ ಇದರ ಬಗ್ಗೆ ಯಾವ ಇನ್‌ವೆಸ್ಟಿಗೇಷನ್ನನ್ನೂ ನಾವು ಮಾಡಿಲ್ಲ.

Seizure of Sandalwood in Madhugiri and Koratagere Forests

138. **Sri G. T. GOVINDA REDDY** (Madhugiri).—

Will the Minister of State for Forests be pleased to state :—

(*a*) the value of sandalwood seized by the forest officers in Madhugiri and Koratagere forests of Tumkur district since three months ;

(*b*) the action taken against the concerned persons ?

Sri ALUR HANUMANTHAPPA (Minister of State for Forests).—

(*a*) In 12 cases sandalwood worth Rs. 1,16,000 has been seized.

(*b*) (i) In eight cases the culprits are absconding and the sandalwood has been confiscated to the Government.

(ii) Three cases have been registered with the police and investigation is in progress.

(iii) One case is under judicial enquiry.

ಶ್ರೀ ಜಿ. ಟಿ. ಗೋವಿಂದರೆಡ್ಡಿ.—ಮಧುಗಿರಿ ಹತ್ತಿರ ಇರುವ ತಿಮ್ಮಲಾಪುರದ ಫಾರೆಸ್ಟ್ ರಾಡ್ಸ್‌ನಲ್ಲಿ 12 ಲಾರಿಗಳ ಗಂಧದ ಮರವನ್ನು ಹಿಡಿದಿದ್ದರು. ಇದರ ಕಳ್ಳತನವನ್ನು ಪತ್ತೆ ಮಾಡಲು ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ?

† **ಶ್ರೀ ಆಲೂರು ಹನುಮಂತಪ್ಪ.**—ನಮ್ಮಲ್ಲಿ ಇದಕ್ಕಾಗಿ ಸ್ಮಗ್ಲಿಂಗ್ ಸ್ಕ್ವಾಡ್ ಇವೆ. ಸ್ಮಗಲಿಂಗನ್ನು ತಡೆಗಟ್ಟಬೇಕೆಂದು ಇದನ್ನು ಮಾಡಲಾಗಿದೆ. ಈಚೆಗೆ ನಾವು ಪ್ರೈವೇಟು ಲ್ಯಾಂಡುಗಳಲ್ಲಿ ಗಂಧದ ಮರಗಳಿದ್ದರೆ ಅಂತಹ ಮಾಲಕರಿಗೆ ಬೋನಸು ಕೊಡಬೇಕೆಂದು ಎಂದರೆ ಶೇಕಡಾ 50ರಷ್ಟು ಬೆಲೆ ಅವರಿಗೆ ಕೊಡಬೇಕೆಂದು ಮಾಡಲಾಗಿದೆ. ಇದರಿಂದ ಸ್ವಲ್ಪಮಟ್ಟಿಗೆ ಕಳ್ಳತನ ಕಡಿಮೆಯಾಗಲು ಸಹಾಯವಾಗುತ್ತದೆ ಎಂದು ಹೀಗೆ ಮಾಡಲಾಗಿದೆ.

Sri K. P CHIKKE GOWDA.—Is it a fact that when the Range Forest Officer launched a case of this sandalwood smuggling he was transferred on the advice of a member of this Houses just because the officer caught hold of the sandalwood smugglers ?

Sri ALUR HANUMANTHAPPA.—It is not so. Transfers are effected on various other grounds. There is no such thing here.

ಶ್ರೀ ಹಾಜಿ ಶಿವಣ್ಣ.—ಇಲ್ಲಿರುವ ಇಲಾಖೆಯವರೇ ಇಂತಹ ಗಂಧದ ಮರದ ಸಾಗಣಿಕೆಯಲ್ಲಿ ಸಹಾಯಮಾಡುತ್ತಿರುವುದರಿಂದ ಇಂತಹವರ ಮೇಲೆ ಸರಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಯಾವುದಾದರೂ ಅಧಿಕಾರಿಗಳ ಮೇಲೆ ದೂರು ಬಂದರೆ ಕೂಡಲೇ ಅವರನ್ನು ಸಸ್‌ಪೆಂಡು ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆ ನಂತರ ಇದರ ಬಗ್ಗೆ ಎನ್‌ಕ್ವೈರಿ ಕೂಡ ಮಾಡಲಾಗುತ್ತಿದೆ. ಮತ್ತು ದೂರುಗಳು ರುಜುವಾತಾದರೆ ಅಂತಹವರನ್ನು ಕೆಲವು ವೇಳೆ ಡಿಸ್‌ಮಿಸ್ ಕೂಡ ಮಾಡಲಾಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ಗಂಧದ ಮರಗಳನ್ನು ಸ್ಮಗಲ್ ಮಾಡುವವರಿಗೆ ಸಹಾಯ ಮಾಡುವವರು ವಿಧಾನಸೌಧದ ಸುತ್ತಲೂ ಮತ್ತು ಚೀಫ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಆಫೀಸಿನ ಸುತ್ತಲೂ ತಿರುಗುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಯಾರು ಯಾರು ತಿರುಗುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಆ ಪ್ರಶ್ನೆಗೆ ಉತ್ತರ ಕೊಡುವುದು ಕಷ್ಟ.

ಶ್ರೀ ಎಂ. ಎನ್. ರಾಮಣ್ಣ.—ಒಟ್ಟು 12 ಕೇಸ್‌ಗಳಲ್ಲಿ 8 ಕೇಸ್‌ಗಳನ್ನು ಪತ್ತೆ ಮಾಡುವುದಕ್ಕಾಗಲಿಲ್ಲವೆಂದು ಹೇಳಿದ್ದೀರಿ. ಕೇಸ್‌ಗಳನ್ನು ಹಿಡಿದು ತನಿಖೆ ಮಾಡಲು ಪೋಲೀಸರಿಗೆ ವಹಿಸುವುದಕ್ಕೆ ಬದಲು ತಾವೇ ಫಾರೆಸ್ಟ್ ಸ್ಕ್ವಾಡನ್ನು ಇಟ್ಟುಕೊಂಡು ಡೈರೆಕ್ಟ್ ಆಗಿ ಕೇಸ್ ಹಾಕುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಅದು ಮಾನ್ಯ ಸದಸ್ಯರ ಅಭಿಪ್ರಾಯ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಗಂಧದ ಮರಗಳನ್ನು ಸ್ಮಗಲ್ ಮಾಡುವವರನ್ನು ಕಂಡು ಹಿಡಿಯುವುದಕ್ಕೆ ಸರ್ಕಾರದ ಬಳಿ ಇಷ್ಟೊಂದು ಸಿಬ್ಬಂದಿವರ್ಗ ಇದ್ದರೂ ಕೂಡ ಸಾಧ್ಯವಾಗುತ್ತಿಲ್ಲ. ಅವರು ಏನು ಟೆಕ್ನಿಕ್ ಉಪಯೋಗಿಸುತ್ತಿದ್ದಾರೆ ಎಂಬುದು ಸರ್ಕಾರಕ್ಕೆ ತಿಳಿದುಬಂದಿಯೇ ?

ಶ್ರೀ ಆಲೂರು ಹನುಮಂತಪ್ಪ.—ಏನು ಟೆಕ್ನಿಕ್ ಉಪಯೋಗಿಸುತ್ತಿದ್ದಾರೆಂಬುದು ಗೊತ್ತಾಗಿಲ್ಲ. ಗಂಧದ ಮರ ಬೆಲೆಬಾಳುವ ಮರವಾಗಿದೆ, ಅದನ್ನು ಕದ್ದು ಮಾರಾಟ ಮಾಡಿದರೆ ಸುಖವಾಗಿ ಜೀವನ ಮಾಡಬಹುದೆಂದು ಆ ರೀತಿ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಲು ಸ್ಪೈಕ್ ಡೆಡ್ ಅಂಡ್ ಡ್ರೈಯಿಂಗ್ ಮತ್ತು ಮೆಚೂರ್ಡ್ ಸ್ಯಾಂಡಲ್ ಟ್ರೀಸನ್ನು ಕಡಿದು ಅಲ್ಲಿ ಬೇರೆ ಗಿಡಗಳನ್ನು ಬೆಳೆಸಬೇಕೆಂದು ವಿಚಾರ ಮಾಡಿದ್ದೇವೆ.

ಶ್ರೀ ಎಸ್. ಎಸ್. ಅರಕೇರಿ.—ತಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಕೂಲಿ ಜನರ ಸಹಾಯದಿಂದ ಸ್ಮಗಲ್ ನಡೆಯುತ್ತಿದೆ ಎಂದು ಜನರು ಹೇಳುತ್ತಿದ್ದಾರೆ. ಈ ಬಗ್ಗೆ ವಿಚಾರಣೆ ನಡೆಸಿ ಸರಿಯಾದಂಥ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಎಲ್ಲಾ ಕೇಸ್‌ಗಳಲ್ಲಿಯೂ ಕೂಡ ಆ ರೀತಿಯಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಇಲಾಖೆಯ ಸಿಬ್ಬಂದಿಯವರು ಸಹಾಯ ಮಾಡಿದ್ದಾರೆಂಬ ವರ್ತಮಾನ ಬಂದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ದೊಡ್ಡಬೋರೇಗೌಡ.—ಮೂರು ತಿಂಗಳಲ್ಲಿ 1 ಲಕ್ಷದ 16 ಸಾವಿರ ರೂಪಾಯಿಗಳ ಮಾಲನ್ನು ಹಿಡಿಯಲಾಗಿದೆ ಎಂದು ಹೇಳಿದ್ದೀರಿ. ಮತ್ತು 8 ಕೇಸ್‌ಗಳಲ್ಲಿ ಅಪರಾಧಿಗಳು ನಾಪತ್ತೆಯಾಗಿದ್ದಾರೆಂದು ಹೇಳಿದ್ದೀರಿ. ಈ 8 ಕೇಸ್‌ಗಳಲ್ಲಿ ಪತ್ತೆಯಾದಂಥ ಮಾಲು ಎಷ್ಟು ಮತ್ತು ಅದರ ಬೆಲೆ ಎಷ್ಟು ಎಂಬುದನ್ನು ಹೇಳುತ್ತೀರಾ !

ಶ್ರೀ ಆಲೂರು ಹನುಮಂತಪ್ಪ.—ಆ ವಿವರ ಈ ರೀತಿ ಇದೆ :

ತಾರೀಖು	ಪೀಸ್‌ಗಳು	ಬೆಲೆ
28-4-1969	29	5 ಸಾವಿರ ರೂಪಾಯಿಗಳು ಕಾನ್‌ಫಿಸ್ಕೇಟಾಗಿದೆ.
9-5-1969	6	1 ಸಾವಿರ ರೂಪಾಯಿಗಳು ಕಾನ್‌ಫಿಸ್ಕೇಟಾಗಿದೆ.
12-6-1969	54	4 ಸಾವಿರ ರೂಪಾಯಿಗಳು ಕಾನ್‌ಫಿಸ್ಕೇಟಾಗಿವೆ.
14-6-1969	42	5 ಸಾವಿರ ರೂಪಾಯಿಗಳು ಕಾನ್‌ಫಿಸ್ಕೇಟಾಗಿವೆ.
24-6-1969	21	10 ಸಾವಿರ ರೂಪಾಯಿಗಳು ಕಾನ್‌ಫಿಸ್ಕೇಟಾಗಿವೆ.
24-6-1969	29	5 ಸಾವಿರ ರೂಪಾಯಿಗಳು ಕಾನ್‌ಫಿಸ್ಕೇಟಾಗಿದೆ.
9-5-1969	10	500 ರೂಪಾಯಿಗಳು

ಈ ಕೇಸ್‌ಗಳಲ್ಲಿ ಅಪರಾಧಿಗಳು ನಾಪತ್ತೆಯಾಗಿದ್ದು ಮಾಲನ್ನು ಸರ್ಕಾರಕ್ಕೆ ವಶಪಡಿಸಿಕೊಳ್ಳಲಾಗಿದೆ.

Supply of Electricity to Irrigation Pumpsets

173. **Sri S. JAYAPRAKASH SHETTY** (Brahmavar).—

Will the Chief Minister be pleased to state :—

(*a*) whether there is any rule that the power should be supplied to irrigation pumpsets within a particular time after the lines are sanctioned and drawn ;

(*b*) the date on which the application requesting supply of power to pumpsets from Uggalbettu, Uppur Village, Udipi Taluk was received and the date on which the line has been sanctioned ;

(*c*) whether it has come to the notice of Government that the poles already erected and wire drawn have fallen down and the wire has been cut and destroyed by naughty children ; the period within which the Scheme is expected to be completed ?

Sri D. PARAMESWARAPPA (Deputy Minister for Major irrigation and Electricity) [On behalf of SRI VEERENDRA PATIL (Chief Minister)].—

(*a*) Yes, the applicants should avail power supply within six months from the date of communication of sanction of power supply by the Board.

(*b*) The applications were received in March, 1967 and the estimate was sanctioned on 24th November 1967.

(*c*) Yes. The work is expected to be completed within a short period.

ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ.—(ಅ) ಪ್ರಶ್ನೆಗೆ ಉತ್ತರವಾಗಿ 6 ತಿಂಗಳೊಳಗಾಗಿ ಅರ್ಜಿದಾರರು ವಿದ್ಯುತ್ ಸರಬರಾಜನ್ನು ಪಡೆದುಕೊಳ್ಳಬೇಕು ಎಂದು ಹೇಳಿದ್ದೀರಿ. ಇದರಲ್ಲಿ ಎಂ.ಎಸ್.ಇ.ಬಿ. ಅವರದ್ದು ಏನೂ ಜವಾಬ್ದಾರಿ ಇಲ್ಲವೇ?

Sri D. PARAMESWARAPPA.—The rule is that the party should avail of the power within 6 months from the date of sanction of the power.

ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ.—ವಿದ್ಯುತ್ ಮಂಡಲಿಯವರು ಸಹ 6 ತಿಂಗಳೊಳಗೇ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕೆಂಬ ಜವಾಬ್ದಾರಿ ಇದೆಯೇ?

Sri D. PARAMESWARAPPA.—Within 6 months. In the meanwhile the party will have to comply with the formalities prescribed.

ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ.—6 ತಿಂಗಳೊಳಗೆ ಅರ್ಜಿದಾರರು ವಿದ್ಯುಚ್ಛಕ್ತಿಯನ್ನು ಪಡೆದುಕೊಳ್ಳಬೇಕೆಂದು ಹೇಳುತ್ತೀರಿ, ಅದರಂತೆ 6 ತಿಂಗಳೊಳಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ವಿದ್ಯುತ್ ಮಂಡಲಿಯವರ ಮೇಲೆ ಏನಾದರೂ ಜವಾಬ್ದಾರಿ ಇದೆಯೇ?

ಶ್ರೀ ಡಿ. ಪರಮೇಶ್ವರಪ್ಪ.—ಎಂ.ಎಸ್.ಇ.ಬಿ. ಅವರು 6 ತಿಂಗಳೊಳಗೆ ಸರ್ವಿಸ್ ಕೊಡಬೇಕೆಂಬ ಜವಾಬ್ದಾರಿ ಇದೆ.

Sri R. G. WALI.—The banks have now advanced money, but the MSEB is not making the supply early with the result that the people in Raichur are put to a lot of hardship. There is no co-ordination between the various agencies. Will the Government take steps to bring about co-ordination and ensure immediate availability of energy to the ryots?

Sri D. PARAMESWARAPPA.—It is a suggestion for consideration.

ಶ್ರೀ ವಿ. ಎನ್. ಪಾಟೀಲ್.—6 ತಿಂಗಳೊಳಗೆ ಎಷ್ಟು ಜನ ಅರ್ಜಿದಾರರು ವಿದ್ಯುಚ್ಛಕ್ತಿಯನ್ನು ಪಡೆದುಕೊಂಡರು ಮತ್ತು 6 ತಿಂಗಳೊಳಗೆ ವಿದ್ಯುಚ್ಛಕ್ತಿ ಮಂಡಲಿಯವರು ಎಷ್ಟು ಜನ ಅರ್ಜಿದಾರರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದರು ಎಂಬ ವಿವರವನ್ನು ಹೇಳುತ್ತೀರಾ?

Sri D. PARAMESWARAPPA.—If the hon. Member puts a separate question, I will get the necessary information and place it on the Table of the House.

ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ.—1967ನೇ ಇಸವಿ ನವೆಂಬರ್ 24 ರಂದು ಅಂದಾಜನ್ನು ಮಂಜೂರು ಮಾಡಲಾಯಿತು ಎಂದು ಹೇಳಿದ್ದೀರಿ. ಮಂಜೂರು ಆದರೂ ಕೂಡ ಇದುವರೆಗೆ ವರ್ಕ್ ಔಟ್ ಏಕೆ ಆಗಲಿಲ್ಲ?

ಶ್ರೀ ಡಿ. ಪರಮೇಶ್ವರಪ್ಪ.—ಆಗಲೇ ಹೇಳಿದೆ, ವರ್ಕ್ಔಟ್ ಆಗದೇ ಇರುವುದಕ್ಕೆ ಕಾರಣ ಏನೆಂದರೆ: 50 per cent of the applicants should come forward and comply with all the formalities like making the necessary deposit and executing the agreement, etc. If the parties do not come forward we cannot help. The delay is not due to any omissions on the part of the Board.

Smuggling of Sandalwood in Khanapur Taluk

189. **Sri L. S. NAIK** (Gokak).—

Will the Minister of State for Forests be pleased to state :—

(*a*) whether it is a fact that two forest guards were murdered this year in Khanapur Taluk in connection with the smuggling of Sandalwood ; if so, the action taken by them in that behalf ;

(*b*) the compensation given to the family of the murdered persons (whether lands, etc., have been given to their wives) ;

(*c*) whether there is a scheme before the Government to supply rifles, etc., to forest officials in such cases ;

(*d*) the action taken by the Government to prevent smuggling of sandalwood in Belgaum District which is in large scale ?

Sri ALUR HANUMANTHAPPA (Minister of State for Forests).—

(*a*) Yes. The two cases have been registered with the police. In one case the offenders have been acquitted. The other case is under police investigation.

(*b*) Compensation has been given to the family of the murdered guards as follows :—

(1) Sri M. R. Honnavar (Forest Guard)—

(a) Two months' salary of Rs. 150 has been given.

(b) Cash of Rs. 200 has been given for funeral rites.

(c) 5 acres and 16 guntas of land has been granted to his family.

(d) Family pension and gratuity (Rs. 866.25) have been sanctioned to his family.

(2) Sri S. N. Mudaligi—

(a) Advance salary of Rs. 120 has been given.

(b) Rs. 250 has been given for funeral rites.

(c) Family pension and gratuity (Rs. 600) have been sanctioned to his family.

(d) The question of granting 5 acres of land to the guard's father is under consideration.

(*c*) This is under consideration.

(*d*) A anti-smuggling squad has been appointed for Belgaum District.

ಶ್ರೀ ಎಲ್. ಎಸ್. ನಾಯಕ್.—(ಈ) ಪ್ರಶ್ನೆಗೆ ಉತ್ತರವಾಗಿ ಒಂದು ಕಳ್ಳ ಸಾಗಾಣಿಕೆ ವಿರೋಧ ಸಿಬ್ಬಂದಿಯನ್ನು ಬೆಳಗಾಂ ಜಿಲ್ಲೆಗೆ ನೇಮಕ ಮಾಡಲಾಗಿದೆ ಎಂದು ಹೇಳಿದ್ದೀರಿ. ಈ ರೀತಿ ನೇಮಕ ಮಾಡಿದ ಮೇಲೆ ಎಷ್ಟು ಕೇಸ್‌ಗಳನ್ನು ಹಿಡಿದಿದ್ದಾರೆ ?

†ಶ್ರೀ ಆಲೂರು ಹನುಮಂತಪ್ಪ.—ಆ ವಿವರ ಇಲ್ಲ.

Sri N. B. SIRDESAI.—May I know whether actual possession of these 5 acres and 16 guntas has been given and when payment of gratuity has been made to the family of the deceased Sri Honnavar and why so much delay was caused by Government in releasing the land to the second Guard Sri Mudaligi?

Sri ALUR HANUMANTHAPPA.—Regarding the first, Government have sanctioned 5 acres and 16 guntas land. As regards possession, the officer concerned will take necessary action to see that possession is handed over to him. Regarding the second case, Government will consider the application and see that land is granted in favour of the family of the deceased.

ಶ್ರೀ ಎಚ್. ಬಿ. ಜ್ವಾಲನಯ್ಯ.—ಕೊಲೆಯಾದ ಒಬ್ಬ ಗಾರ್ಡನ ಸಂಬಂಧಿಕರಿಗೆ 5 ಎಕರೆ 16 ಗುಂಟೆ ಜಮೀನನ್ನು ಮಂಜೂರು ಮಾಡಲಾಗಿದೆ ಎಂದು ಹೇಳಿದ್ದೀರಿ, ಅದೇ ಇನ್ನೊಂದು ಕೇಸ್ ಬಗ್ಗೆ 5 ಎಕರ ಜಮೀನನ್ನು ಕೊಡುವ ಬಗ್ಗೆ ಇನ್ನೂ ವಿಚಾರಣೆಯಲ್ಲಿದೆ ಎಂದು ಹೇಳಿದ್ದೀರಿ. ವಿಚಾರಣೆಯಾಗುವುದಕ್ಕೆ ಇನ್ನು ಎಷ್ಟು ಕಾಲ ಬೇಕಾಗುತ್ತದೆ? ಗಾರ್ಡ್‌ಗಳಿಗೆ ಗನ್ ಕೊಡದಿರುವುದರಿಂದ ಸ್ಮಗಲ್ ಮಾಡುವವರು ತಮ್ಮ ರೈಫಲ್‌ನಿಂದ ಎದುರಿಸಿ ತಮ್ಮ ಕೆಲಸವನ್ನು ಮಾಡಿಕೊಂಡು ಹೋಗುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಎರಡನೆಯವರಿಗೆ ಜಮೀನು ಕೊಡುವ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಹೇಳಲಾಗಿದೆ. ಫಾರೆಸ್ಟ್ ನೌಕರದಾರರಿಗೆ ರೈಫಲ್ ಕೊಡದಿರುವುದರಿಂದ ಇಂತಹ ಕಾರ್ಯಗಳು ನಡೆಯುತ್ತಿವೆ ಎಂಬುದಾಗಿ ಮಾನ್ಯ ಸದಸ್ಯರು ಏನು ಹೇಳಿದರು ಅದನ್ನು ಒಪ್ಪಬೇಕಾಗಿದೆ. ಇದೂ ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಎಚ್. ರಂಗನಾಥ್.—ಒಂದು ಮೊಕದ್ದಮೆಯ ಬಗ್ಗೆ ಪೋಲೀಸರಿಂದ ತಪಾಸಣೆ ನಡೆಯುತ್ತಿದೆ ಎಂದು ಹೇಳಿದ್ದೀರಿ. ಇದು ಎಷ್ಟು ಕಾಲದಿಂದ ನಡೆಯುತ್ತಿದೆ ಮತ್ತು ಇದು ತೀರ್ಮಾನವಾಗುವುದಕ್ಕೆ ಇನ್ನು ಎಷ್ಟು ಕಾಲ ಬೇಕಾಗುತ್ತದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಅದನ್ನು ಈಗಲೇ ಹೇಳುವುದಕ್ಕೆ ಆಗುವುದಿಲ್ಲ, ಏಕೆಂದರೆ ತಾರೀಖು 1೯-2-1969ರಲ್ಲಿ ಕೇಸ್ ಪತ್ತೆಯಾಯಿತು. ಪತ್ತೆಯಾದಾಗ ಬಾಡಿ ಡೀಕಂಪೋಸ ಆಗಿತ್ತು ಈ ಕಾರಣದಿಂದ ಇನ್ನೂ ಪೋಲೀಸರಿಂದ ತಪಾಸಣೆ ನಡೆಯುತ್ತಿದೆ.

ಶ್ರೀ ಎಲ್. ಎಸ್. ನಾಯಕ್.—ಎಸ್. ಎಸ್. ಮೂಡಲಗೆಯತಂದೆಗೆ ಜಮೀನು ಕೊಡುತ್ತೀರೋ ಅಥವಾ ಆತನ ಹೆಂಡತಿಗೆ ಜಮೀನು ಕೊಡುತ್ತೀರೋ?

ಶ್ರೀ ಆಲೂರು ಹನುಮಂತಪ್ಪ.—ಯಾರು ಅಪ್ಲಿಕೇಷನ್ ಹಾಕಿದ್ದಾರೋ ಅವರಿಗೆ ಕೊಡುತ್ತೇವೆ. ಆತನ ತಂದೆ ಅರ್ಜಿ ಹಾಕಿದ್ದರೆ ಆತನ ತಂದೆಗೆ ಜಮೀನು ಕೊಡುತ್ತೇವೆ, ಆತನ ಹೆಂಡತಿ ಅರ್ಜಿ ಹಾಕಿದ್ದರೆ ಹೆಂಡತಿಗೆ ಕೊಡುತ್ತೇವೆ.

Security Officer for the Spun Silk Mills, Channapatna

194. **Sri T. V. KRISHNAPPA** (Channapatna).—

Will the Minister for Agriculture be pleased to state :—

(*a*) whether the Government have taken a decision to post a Security Officer for the Spun Silk Mills, Channapatna;

(*b*) if so, whether a person has been appointed to the said post;

(*c*) his qualifications; the qualifications required for being appointed as a Security Officer;

(*d*) whether he is a local person ?

Sri B. RACHAIAH (Minister for Agriculture).—

(*a*) A post of Security Officer has been sanctioned.

(*b*) At present the post is vacant.

(*c*) An officer of Police Department or an ex-serviceman is considered suitable.

(*d*) Does not arise.

ಶ್ರೀ ಟಿ. ವಿ. ಕೃಷ್ಣಪ್ಪ.—ಸ್ವಾಮಿ, ಚನ್ನಪಟ್ಟಣದ ಸ್ಪನ್ ಸಿಲ್ಕ್ ಕಾರ್ಖಾನೆಯಲ್ಲಿ ರಕ್ಷಣಾ ಅಧಿಕಾರಿಯನ್ನು ನೇಮಕ ಮಾಡುತ್ತೇವೆಂದು ಈಗ ಎರಡು ವರ್ಷಗಳ ಕೆಳಗೆ ತಾವು ಹೇಳಿದ್ದರಿ, ಆದರೆ ಅವರನ್ನು ಇದುವರೆಗೂ ನೇಮಕ ಮಾಡದೇ ಇರುವುದಕ್ಕೆ ರಾಜಕೀಯ ಕಾರಣ ಏನು ?

ಶ್ರೀ ಬಿ. ರಾಚಯ್ಯ.—ಕಮಿಷನರ್ ಅಫೀಸಿನಿಂದ 12 ಜನಗಳ ಹೆಸರನ್ನು ಈ ಹುದ್ದೆಗೆ ಸೆಲೆಕ್ಟ್ ಮಾಡುವುದಕ್ಕೆ ಕಳುಹಿಸಿಕೊಟ್ಟಿದ್ದರು. ಅವರನ್ನು ಇಂಟರ್‌ವ್ಯೂಗೆ ಕರೆದಾಗ ಕೇವಲ ಇಬ್ಬರು ಮಾತ್ರ ಬಂದಿದ್ದರು. ಈ ಹುದ್ದೆ 450 ರೂಪಾಯಿಗಳ ಸಂಬಳದ ಗ್ರೇಡು. ಆದ್ದರಿಂದ ಈ ಹುದ್ದೆಗೆ ಸೂಟಬಲ್ ಆಫೀಸರು ಬಾರದೆ ಇರುವುದರಿಂದ ಆ ಹುದ್ದೆಯನ್ನು ಭರ್ತಿ ಮಾಡಲಿಲ್ಲ.

1-30 P.M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅರ್ಹತೆಯುಳ್ಳ ರಕ್ಷಣಾಧಿಕಾರಿಯನ್ನು ಅಲ್ಲಿ ನೇಮಕ ಮಾಡುವ ಅವಶ್ಯಕತೆ ಬಹಳವಾಗಿದ್ದರೂ ಕೂಡ ಅವರನ್ನು ಇಲ್ಲಿಯವರೆಗೆ ನೇಮಕ ಮಾಡದೆ ಈಗ ಅಲ್ಲಿ ಹಂಗಾಮಿಯಾಗಿ ಕೆಲಸ ಮಾಡುವ ಮನುಷ್ಯನನ್ನೇ ಆ ಕೆಲಸದಲ್ಲಿ ಮುಂದುವರಿಸಬೇಕೆಂಬ ಉದ್ದೇಶದಿಂದ ಆ ಹುದ್ದೆಯನ್ನು ಭರ್ತಿ ಮಾಡದೆ ಹಾಗೆಯೇ ಇಟ್ಟಿರುವುದು ನಿಜವಲ್ಲವೇ ?

ಶ್ರೀ ಬಿ. ರಾಚಯ್ಯ.—ಅಲ್ಲ. ಫೋಲೀಸ್ ಇಲಾಖೆಯಲ್ಲಿ ಈ ಹುದ್ದೆಗೆ ಲಗತ್ತಾದವರು ಸಿಕ್ಕುವುದಿಲ್ಲ. ಅದಕ್ಕಾಗಿ ಈಗ ಎರಡು ವರ್ಷಗಳಿಂದ ಹುದ್ದೆಯನ್ನು ಭರ್ತಿ ಮಾಡುವುದಕ್ಕೆ ನಿಧಾನವಾಯಿತು. 2–12–1968ರಲ್ಲಿ ಎಕ್ಸ್ ಸರ್ವೀಸ್ ಮನ್ ತೆಗೆದುಕೊಳ್ಳಬೇಕೆಂದು ಕಮಿಷನರ್ ಆಫೀಸಿಗೆ ಸರ್ಕಾರ ಆದೇಶವನ್ನು ಕಳುಹಿಸಿಕೊಟ್ಟಿದ್ದರು. ಅವರು ಕಳುಹಿಸಿಕೊಟ್ಟಿದ್ದವರ ಪೈಕಿ ಇಂಟರ್‌ವ್ಯೂಗೆ ಬಂದಿದ್ದವರು ಆ ಹುದ್ದೆಗೆ ಸೂಟಬಲ್ ಆಗಲಿಲ್ಲ. ಆದ್ದರಿಂದ ಈಗ ಮತ್ತೆ ಆ ಹುದ್ದೆಗೆ ರೀ ಅಡ್ವರ್ಟೈಜ್ ಮಾಡಿ ಎಂದು ಹೇಳಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಆ ಹುದ್ದೆಗೆ ಫೋಲೀಸ್ ಡಿಪಾರ್ಟ್‌ಮೆಂಟಿನಲ್ಲಿರತಕ್ಕ ಯಾವ ಗ್ರೇಡಿನ ಆಫೀಸರನ್ನು ನೇಮಕ ಮಾಡಬೇಕೆಂದು ನಿಗದಿ ಮಾಡಿದ್ದೀರಿ ?

ಶ್ರೀ ಬಿ. ರಾಚಯ್ಯ.—1961ನೇ ಇಸವಿಯಲ್ಲಿ ಆ ಹುದ್ದೆಗೆ ಪೋಲೀಸ್ ಡಿಪಾರ್ಟ್‌ಮೆಂಟಿನ ಸಬ್‌ಇನ್‌ಸ್ಪೆಕ್ಟರ್ ಗ್ರೇಡಿನ ಫೋಸ್ಟ್ ಅನ್ನು ಅಲ್ಲಿ ಕ್ರಿಯೇಟ್ ಮಾಡಿ 1968ನೇ ಇಸವಿಯವರೆಗೂ ಸಬ್‌ಇನ್‌ಸ್ಪೆಕ್ಟರು ಆ ಹುದ್ದೆಯಲ್ಲಿ ಡೆಪ್ಯುಟೇಷನ್ ಮೇಲೆ ಇದ್ದರು. ಈಗ ಕೇಂದ್ರ ಸರ್ಕಾರದವರ ಒಂದು ನಿರ್ದೇಶನದಂತೆ ಯಾರಾದರೂ ಒಬ್ಬರು ಎಕ್ಸ್ ಸರ್ವೀಸ್‌ಮನ್ ಅನ್ನು ಆರ್ಮಿಯಿಂದ ರಿಲೀಜ್ ಆಗಿರುವಂತಹ ಆಫೀಸರನ್ನು ಆ ಹುದ್ದೆಗೆ ನೇಮಕ ಮಾಡಬೇಕೆಂಬ ಇರಾದೆ ಸರ್ಕಾರಕ್ಕೆ ಇದೆ. ಈ ದೃಷ್ಟಿಯಿಂದ ಆ ಪೋಸ್ಟಿಗೆ ಅಡ್ವರ್ಟೈಜ್ ಮಾಡಿದೆವು. ಆದರೆ ಅದರಲ್ಲಿ ಸೂಕ್ತವಾದ ಕ್ಯಾಂಡಿಡೇಟ್ ಬರಲಿಲ್ಲ. ಆದಕಾರಣ ಮತ್ತೆ ರೀ ಅಡ್ವರ್ಟೈಜ್ ಮಾಡಿದ್ದೇವೆ. ನಮ್ಮ ಗಮನದಲ್ಲಿ ಬೇರೆ ಯಾರೂ ಇಲ್ಲ.

ಶ್ರೀ ಬಿ. ದೊಡ್ಡಬೋರೇಗೌಡ.—ಆ ಹುದ್ದೆ ಇಷ್ಟು ವರ್ಷಗಳಿಂದ ಖಾಲಿ ಇದೆ. ಫೋಲೀಸ್ ಇಲಾಖೆಯಲ್ಲಿ ಈ ಹುದ್ದೆಗೆ ಸರಿಸಮಾನರಾದ, ದಕ್ಷರಾದ ಆಫೀಸರು ಈ ರಾಜ್ಯದಲ್ಲಿ ಎಲ್ಲೂ ದೊರೆಯಲಿಲ್ಲವೇ ?

ಶ್ರೀ ಬಿ. ರಾಚಯ್ಯ.—ಈಗ ಎಕ್ಸ್ ಸರ್ವೀಸ್‌ಮನ್ ಅನ್ನು ಆ ಕೆಲಸಕ್ಕೆ ತೆಗೆದುಕೊಳ್ಳಬೇಕು, ಅವರಿಗೆ ಉದ್ಯೋಗವನ್ನು ಕಲ್ಪಿಸಬೇಕು ಎಂದು ಆ ಸೆಕ್ಯೂರಿಟಿ ಪೋಸ್ಟ್ ಕ್ರಿಯೇಟ್ ಆಯಿತು. ಹಿಂದೆ ಆ ಪೋಸ್ಟಿಗೆ ಅಡ್ವರ್ಟೈಸ್ ಮಾಡಿದಾಗ ಅದಕ್ಕೆ ಸೂಟಬಲ್ ಕ್ಯಾಂಡಿಡೇಟ್ ಇರಲಿಲ್ಲ. ಆದ್ದರಿಂದ ಮತ್ತೆ ರೀ ಅಡರ್ಟೈಜ್ ಮಾಡಿದ್ದೇವೆ. ಅಲ್ಲಿಯವರೆಗೆ ಡೆಪ್ಯುಟೇಷನ್ ಮೇಲೆ ಬೇರೆಯವರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ.

ಶ್ರೀ ಎಂ. ಎಂ. ಜಾಲಿಸಟ್ಗಿ.—ಈ ಪೋಸ್ಟ್ ಪರ್ಮನೆಂಟ್ ಪೋಸ್ಟೇ, ಇದರ ಸ್ಕೇಲು ಯಾವುದು ಎಂಬುದನ್ನು ದಯಮಾಡಿ ತಿಳಿಸುತ್ತೀರಾ ?

ಶ್ರೀ ಬಿ. ರಾಚಯ್ಯ.—ಈ ಫ್ಯಾಕ್ಟರಿ ಪರ್ಮನೆಂಟ್ ಅಲ್ಲ. ಇದು ಟೆಂಪರರಿ ಪೋಸ್ಟ್. ಇದರ ಗ್ರೇಡು 450 ರೂಪಾಯಿಗಳು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಆ ಹುದ್ದೆಗೆ ಒಬ್ಬರು ಎಕ್ಸ್ ಸರ್ವೀಸ್ ಮನ್ ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ ಎಂದು ಹೇಳಿದ್ದೀರಿ ಹಾಗಾದರೆ ತಾವು ಆ ಹುದ್ದೆಗೆ ಎಕ್ಸ್ ಸರ್ವೀಸ್ ಮನ್ ತೆಗೆದುಕೊಳ್ಳುವುದಕ್ಕೆ ಡಿಸ್ಟ್ರಿಕ್ಟ್ ಸೋಲ್ಜರ್ಸ್ ಬೋರ್ಡ್ ಮತ್ತು ಸ್ಟೇಟ್ ಸೋಲ್ಜರ್ಸ್ ಬೋರ್ಡಿನವರನ್ನು ತಾವು ಕನ್‌ಸಲ್ಟ್ ಮಾಡಿದ್ದೀರಾ, ಈ ಹುದ್ದೆಗೆ ಅಲ್ಲಿ ಅರ್ಹರಾದವರು ಯಾರೂ ಸಿಕ್ಕಲಿಲ್ಲವೇ ?

ಶ್ರೀ ಬಿ. ರಾಚಯ್ಯ.—ಹೌದು ಕನ್‌ಸಲ್ಟ್ ಮಾಡಿದ್ದೇವೆ. ಅವರು 12 ಜನಗಳ ಲಿಸ್ಟ್ ಒಂದನ್ನು ಕಳುಹಿಸಿದ್ದರು. ಅದರಲ್ಲಿ ಇಬ್ಬರು ಮಾತ್ರ ಇಂಟರ್‌ವ್ಯೂಗೆ ಬಂದಿದ್ದರು. ಅವರು ಆ ಹುದ್ದೆಗೆ ಸೂಟಬಲ್ ಆಗಿರಲಿಲ್ಲ. ಆದ್ದರಿಂದ ಹೆಚ್ಚು ಜನ ಬಂದರೆ ಯೋಗ್ಯರಾಗಿರುವವರನ್ನು ಸೆಲೆಕ್ಟ್ ಮಾಡಿಕೊಳ್ಳಬಹುದು ಎನ್ನುವ ದೃಷ್ಟಿಯಿಂದ ಮತ್ತೆ ಅದಕ್ಕೆ ರೀ ಅಡ್ವರ್ಟೈಜ್ ಮಾಡಿದ್ದೇವೆ.

Sri H. SIDDAVEERAPPA.—The Hon. Minister just now said this factory is not a permanent one. So far as I know the factory is in existence for more than 30 years. I want to know whether this factory will be transferred to somebody of your choice in private sector.

ಶ್ರೀ ಬಿ. ರಾಚಯ್ಯ.—ಅದು ಪ್ರೈವೇಟ್ ಕಂಪೆನಿ. ಸರ್ಕಾರ ಅದನ್ನು ತೆಗೆದುಕೊಂಡ ಮೇಲೆ ಇವೊತ್ತಿನವರೆಗೂ ಅಲ್ಲಿ ಕೆಲಸಮಾಡತಕ್ಕ ನೌಕರರು ಯಾರು ಇದ್ದಾರೆ ಅವರು ಖಾಯಂ ಆಗಿ ಇಲ್ಲ. ಆ ಒಂದು ಅರ್ಥದಲ್ಲಿ ನಾನು ಹೇಳಿದ್ದೇನೆ.

ಶ್ರೀ ಟಿ. ವಿ. ಕೃಷ್ಣಪ್ಪ.—ರಕ್ಷಣಾಧಿಕಾರಿ ಆ ಕಾರ್ಖಾನೆಯಲ್ಲಿ ಇರಬೇಕು ಎಂದು ಕಾನೂನು ಇರುವಾಗ ಈಗ ಆ ಕೆಲಸವನ್ನು ಯಾರು ನೋಡುತ್ತಿದ್ದಾರೆ ?

ಶ್ರೀ ಬಿ. ರಾಚಯ್ಯ.—ಕಾನೂನೇನೂ ಇಲ್ಲ. ಈಗ ಒಬ್ಬ ವಾಚ್‌ಮನ್ ಆ ಕೆಲಸವನ್ನು ನೋಡಿಕೊಳ್ಳುತ್ತಿದ್ದಾನೆ. ಚನ್ನಪಟ್ಟಣದ ಜನಗಳು ಅನುಸರಿಸಿಕೊಂಡು ಬರುತ್ತಾ ಇರುವುದರಿಂದ ಅದು ಸ್ವಲ್ಪ ನಿಧಾನವಾದರೂ ಚಿಂತೆಯಿಲ್ಲ.

Munsiff-Magistrate Court Building at Laxmeshwar Town

205. **Sri SIDDAIAH KASHIMATH** (Shirhatti).—

Will the Minister for Law, Labour and Parliamentary Affairs be pleased to state :—

(*a*) the year in which the Munsiff-Magistrate Court was sanctioned to Laxmeshwar in Dharwar District ;

(*b*) the year of continuation of the said court ;

(*c*) the building in which the court is now being located ;

(*d*) whether the Bar Association, Laxmeshwar has represented to Government for construction of new building for the said court ?

(*e*) whether there is any proposal before Government to sanction construction of court building and official quarters at Laxmeshwar during 1969-70 ?

Sri K. PUTTASWAMY (Minister for Law, Labour and Parliamentary Affairs).—

(*a*) and (*b*) The Munsiff-Magistrate, Savanur was itenerating to Laxmeshwar during the second and fourth weeks of every month since the year 1949 and an independent Munsiff-Magistrate's Court was established at Laxmeshwar in the year 1966. This is a permanent Court.

(*c*) The Court is temporarily located at present in the Library building of the Laxmeshwar Town Municipality.

(*d*) No.

(*e*) No. A proposal to exchange the Municipal Building at Laxmeshwar which is centrally situated, with the old court building for locating the court, is under consideration.

ಶ್ರೀ ಸಿದ್ದಯ್ಯ ಕಾಶೀಮಠ್.—ಸ್ವಾಮಿ, ಲಕ್ಷ್ಮೇಶ್ವರ ಟೌನಿನಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟಿನ ಸಿಬ್ಬಂದಿವರ್ಗದವರಿಗೆ ಕಟ್ಟಡವನ್ನು ಕಟ್ಟುವುದಕ್ಕೆ ಹಿಂದಿನ ಬಡ್ಜೆಟ್ಟಿನಲ್ಲಿ ಒಂದು ಲಕ್ಷ 70 ಸಾವಿರ ರೂಪಾಯಿಗಳು ಮಂಜೂರಾದದ್ದು ನಿಜವೇ, ಅದನ್ನು ಕೈಬಿಡಲು ಕಾರಣವೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಲಕ್ಷ್ಮೇಶ್ವರದಲ್ಲಿ ಕಟ್ಟಡವನ್ನು ಕಟ್ಟುವುದಕ್ಕೆ ಯಾವ ಹಣವನ್ನೂ ಮಂಜೂರು ಮಾಡಿಲ್ಲ.

ಶ್ರೀ ಸಿದ್ದಯ್ಯ ಕಾಶಿಮಠ್.—ಶ್ರೀಮಾನ್ ತುಕೋಳ್ ಅವರು ನ್ಯಾಯಾಧೀಶರ ಗಿದ್ದಾಗ ಲಕ್ಷ್ಮೇಶ್ವರದಲ್ಲಿರತಕ್ಕ ಮುನ್ಸೀಫ್ ಕೋರ್ಟು ಕಟ್ಟಡ ಸರಿಯಾಗಿಲ್ಲ, ಅಲ್ಲಿ ಹೊಸದಾಗಿ ಸರ್ಕಾರದವರು ಕಟ್ಟಡವನ್ನು ಕಟ್ಟಿಸಬೇಕೆಂದು ಅವರು ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದು ಮತ್ತು ಅವರು ಸರ್ಕಾರಕ್ಕೆ ತಿಳಿಸಿದ್ದು ನಿಜವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಅಲ್ಲಿರತಕ್ಕ ಹಳೆಯ ಬಿಲ್ಡಿಂಗ್ ಯೋಗ್ಯವಾಗಿಲ್ಲ, ಆದ್ದರಿಂದ ಅಲ್ಲಿ ಒಂದು ಹೊಸದಾಗಿ ಕಟ್ಟಡಕಟ್ಟಬೇಕು ಎಂದು ಹೈಕೋರ್ಟಿನವರ ಅಭಿಪ್ರಾಯ ಇದೆ. ಈಗ ಅಲ್ಲಿ ಹಾಲಿ ಮುನ್ಸೀಫ್ ಕೋರ್ಟು ನಡೆಯುತ್ತಿರುವ ಲೈಬ್ರರಿ ಬಿಲ್ಡಿಂಗ್ ಸರಿಯಿಲ್ಲ. ಅದ್ದರಿಂದ ಈಗ ಅದನ್ನು ಪುರಸಭೆಯ ಕಟ್ಟಡಕ್ಕೆ ವರ್ಗ ಮಾಡಿಕೊಳ್ಳಿ ಎನ್ನುವ ಒಂದು ಸಲಹೆ ಇದೆ. ಆ ಸಲಹೆಯನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಸಿದ್ದಯ್ಯ ಕಾಶಿಮಠ್.—ಅಲ್ಲಿರತಕ್ಕ ಮುನ್ಸೀಫ್ ಕೋರ್ಟಿಗೆ ಸರಿಯಾದ ಜಾಗವಿಲ್ಲದೆ ಇರುವುದರಿಂದ ಅಲ್ಲಿ ಹೊಸದಾಗಿ ಕಟ್ಟಡವನ್ನು ಕಟ್ಟುವುದಕ್ಕೆ ಮನಸ್ಸು ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಅಲ್ಲಿ ವರ್ಗಾವರ್ಗಿ ಮಾಡಬೇಕೆಂಬ ಒಂದು ಸಲಹೆ ಇದೆ. ಈಗ ಹಾಲಿ ಅಲ್ಲಿ ಮುನ್ಸೀಫ್ ಕೋರ್ಟು ನಡೆಯುತ್ತಿರತಕ್ಕ ಲೈಬ್ರರಿ ಬಿಲ್ಡಿಂಗ್ ಅದು ಸಂಪೂರ್ಣವಾಗಿ ನಮ್ಮ ಕೋರ್ಟಿನ ಅವಶ್ಯಕತೆಯನ್ನು ಪೂರೈಸುವುದಿಲ್ಲ ಎನ್ನುವ ವಿಚಾರವನ್ನು ಪರಿಶೀಲನೆ ಮಾಡಿ, ಅವಶ್ಯಕತೆ ಕಂಡು ಬಂದರೆ ಹೊಸಕೋರ್ಟು ಕಟ್ಟಡವನ್ನು ಕಟ್ಟಬೇಕಾಗುತ್ತದೆ.

ಶ್ರೀ ಎಂ. ಎಂ. ಜಾಲಿಸಟ್ಗಿ.—ಅದನ್ನು ವರ್ಗಾವಣೆ ಮಾಡುತ್ತೇನೆ ಎಂದರೆ ಈಗ ತಾವು ಯಾವ ಕಟ್ಟಡಕ್ಕೆ ಈ ಕೋರ್ಟನ್ನು ವರ್ಗಾವಣೆ ಮಾಡುತ್ತೀರೋ ಅದನ್ನು ಖರೀದಿ ಮಾಡುತ್ತೀರಾ, ಅಥವಾ ಬಾಡಿಗೆಗೆ ತೆಗೆದುಕೊಳ್ಳುತ್ತೀರಾ, ಬಾಡಿಗೆಗೆ ತೆಗೆದುಕೊಳ್ಳುವುದಾದರೆ ಎಷ್ಟು ವರ್ಷಗಳಿಗೆ ಬಾಡಿಗೆಗೆ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಲಕ್ಷ್ಮೇಶ್ವರದಲ್ಲಿ ಪುರಸಭೆಗೆ ಸೇರಿದಂತಹ ಲೈಬ್ರರಿ ಕಟ್ಟಡ ಸುಮಾರು 73 ಸಾವಿರ ರೂಪಾಯಿಗಳ ಬೆಲೆ ಬಾಳುತ್ತದೆ ಎಂದು ಅಂದಾಜು ಮಾಡಿದ್ದಾರೆ. ಹಳೆಯ ಬಿಲ್ಡಿಂಗ್ ಒಂದು ಲಕ್ಷ 72 ಸಾವಿರ ರೂಪಾಯಿಗಳ ಬೆಲೆ ಬಾಳುತ್ತದೆ ಎಂದು ಅಂದಾಜು ಮಾಡಿದ್ದಾರೆ. ಅಲ್ಲಿ ಬಿದ್ದಿರುವ ಗೋಡೆಗೆ 28 ಸಾವಿರ ರೂಪಾಯಿಗಳ ಬೆಲೆಯನ್ನು ಅಂದಾಜು ಮಾಡಿದ್ದಾರೆ. ಅಲ್ಲಿರತಕ್ಕ ಹಳೆಯ ಕೋರ್ಟ್ ಬಿಲ್ಡಿಂಗ್ ನಮ್ಮ ವರದಿಯ ಪ್ರಕಾರ ಒಡೆದು ಹೋಗಿದೆ ಎಂದು ವರದಿ ಬಂದಿದೆ.

Distribution of lands amongst the Harijans and Girijans in Bidar District

223. **Sri V. N. PATIL** (Humnabad).—

Will the Minister for Revenue be pleased to state :—

(*a*) the number of acres of uncultivated land distributed amongst the Harijans and Girijans and landless Agricultural workers throughout the State from January 1969 to the end of November, 1969 ;

(*b*) the extent of land distributed in Bidar District amongst Harijans and Girjans and landless workers (the figures for each Taluk may please be given, the figures of the entire villages where lands so distributed and its extent in Humnabad Taluk may please be given separately) ;

(*c*) whether it has not come to the notice of the Government that in Bidar District, major portion of the parampoke has been occupied since the last 10 to 15 years by landless persons and they are paying Shivai Jamabandi to the Government ;

(*d*) whether the Government is going to distribute the land to those who are already in possession of the land for more than 10 years and are regularly paying Shivai Jamabandi ;

(*e*) if not, the difficulty in allotting land to those genuine landless persons who are occupying the same and are in possession for years ;

(*f*) whether there was any representation by way of a memorandum to the Chief Minister during his visit to Bidar District by the District Council of Communists of Bidar for the distribution of the lands to the landless persons ;

(*g*) if so, the steps the Government has taken for distribution of the land to the landless persons ?

Sri H. V. KOUJALGI (Minister for Revenue).—

(*a*) 20,386 acres.

(*b*) Area distributed in the following Taluka :—

1.	Basawakalyan ...	338 acres

2.	Humnabad Taluka ...	332 acres
	(a) Dhumansur village ...	44 acres
	(b) Madergi village ...	44 ,,
	(c) Udbal village ...	244 ,,
	Total ...	332 acres

(*c*) Yes.

(*d*) There is no provision in the M.L.R. Act, 1964 to regularise such unauthorised occupation of Government lands. The question of making suitable provision is engaging attention.

(*e*) Does not arise in view of reply to clause (*d*).

(*f*) A memorandum addressed to the Chief Minister in the matter has been received by the Deputy Commissioner, Bidar.

(*g*) The Mysore Land Grant Rules, 1968 have been simplified and revised Land Grant Rules, *viz.*,. the Mysore Land Grant Rules, 1969 have come into force. In order to ensure speedy disposal of Government waste lands a Consultative Committee for each taluk is being formed.

Sri V. N. PATIL.—Answer to (*c*) is 'Yes'. May I know whether the Government will take a decision to bring in an amendment at the earliest, *i.e.*, in the coming Budget Session so that these people are sanctioned the land and their position is not disturbed ?

Sri H. V. KOUJALGI.—An amendment to Section 94 of the Mysore Land Revenue Act has already been issued.

ಶ್ರೀ ಎಸ್. ಎಸ್. ಅರಕೇರಿ.—1969ನೇ ಇಸವಿಯಲ್ಲಿ ಸುಮಾರು 20 386 ಎಕರೆ ಜಮೀನುಗಳನ್ನು ಹರಿಜನ ಗಿರಿಜನರಿಗೆ ಮತ್ತು ಲ್ಯಾಂಡ್‌ಲೆಸ್ ಕೆಲಸಗಾರರಿಗೆ ಕೊಟ್ಟಿದ್ದಾರೆಂದು ಹೇಳಿದ್ದೀರಿ. ಇವರಲ್ಲಿ ಹರಿಜನರಿಗೆ ಎಷ್ಟು ಕೊಟ್ಟಿದ್ದೀರಿ, ಗಿರಿಜನರಿಗೆ ಮತ್ತು ಲ್ಯಾಂಡ್‌ಲೆಸ್ ಇತರ ಜನರಿಗೆ ಎಷ್ಟು ಕೊಟ್ಟಿದ್ದೀರೆಂದು ಹೇಳಬಹುದೇ ?

ಶ್ರೀ ಎಚ್. ವಿ. ಕೌಜಲಗಿ.—ಆ ವಿವರ ನಮ್ಮ ಕಡೆ ಇಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈಗ 20,386 ಎಕರೆಗಳನ್ನು ಭೂಹೀನರಿಗೆ ಮತ್ತು ನಿರ್ಗತಿಕ ಬಡವರಿಗೆ ಕೊಟ್ಟಿದ್ದಾರೆಂದು ಹೇಳಿದ್ದೀರಿ. ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಕೊಟ್ಟಿದ್ದಾರೆಂದು ಹೇಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಬೆಂಗಳೂರು ಜಿಲ್ಲೆ 441 ಎಕರೆ, 35 ಗುಂಟೆ. ಬೆಳಗಾಂ-238 ಎಕರೆ, ಬಳ್ಳಾರಿ-1520, ಬಿದಾರ್-620, ಬಿಜಾಪುರ-107, ಕೂರ್ಗ್-1020, ಚಿಕ್ಕಮಗಳೂರು-1285, ಚಿತ್ರದುರ್ಗ-925, ಧಾರವಾರ-118, ಗುಲ್ಬರ್ಗ-269, ಹಾಸನ-1082, ಕೋಲಾರ-1393, ಮಂಡ್ಯ-1 00, ಮೈಸೂರು-4,498, ಉತ್ತರ ಕನ್ನಡ-133 ಶಿವಮೊಗ್ಗ-1031, ದಕ್ಷಿಣ ಕನ್ನಡ-1414, ತುಮಕೂರು-1621, ಮತ್ತು ರಾಯಚೂರು-1578.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಉತ್ತರದಲ್ಲಿ ತಾವು ಜಮೀನುಗಳನ್ನು ಹಂಚುವುದಕ್ಕೆ ಒಂದು ಕನ್‌ಸಲ್ಟೇಟಿವ್ ಕಮಿಟಿ ಮಾಡುತ್ತೇವೆಂದು ಹೇಳಿದ್ದೀರಿ. ಈ ಕಮಿಟಿ ಯಾವ ಆಧಾರದ ಮೇಲೆ ಮಾಡುತ್ತೀರಿ? ಮತ್ತು ಅದರಲ್ಲಿ ಎಲ್ಲಾ ಪಕ್ಷದವರನ್ನು ಸೇರಿಸುವುದಕ್ಕೆ ತೀರ್ಮಾನ ಕೈಗೊಳ್ಳುತ್ತೀರಾ, ಕೈಗೊಂಡಿದ್ದೀರಾ ?

ಶ್ರೀ ಎಚ್. ವಿ. ಕೌಜಲಗಿ.—ಸರ್ವೇಸಾಮಾನ್ಯವಾಗಿ ಆ ತಾಲ್ಲೂಕಿನ ಎಂ.ಎಲ್.ಎ. ಟಿ.ಡಿ.ಬಿ ಪ್ರೆಸಿಡೆಂಟ್, ಟಿ.ಡಿ.ಬಿ. ಯ ಒಬ್ಬ ಹರಿಜನ ಸದಸ್ಯ ಅಥವಾ ಕೌನ್ಸಿಲ್ ಮೆಂಬರನ್ನು ತೆಗೆದುಕೊಳ್ಳಬೇಕೆಂಬ ವಿಚಾರ ಇದೆ.

Sri G. CHANDRAKANTH.—May I know the extent of uncultivated land in Bidar and the number of applications which require early disposal ?

Sri H. V. KOUJALGI.—It does not arise out of this question.

ಶ್ರೀ ಕೆ. ಎಚ್. ರಂಗನಾಥ್.—(ಇ) ಕಳೆದ 10–15 ವರ್ಷಗಳಿಂದ ಬೀದರ್ ಜಿಲ್ಲೆಯ ಪರಮಬೋಕಿನ ಹೆಚ್ಚಿನ ಭಾಗವನ್ನು ಭೂಹೀನರು ವಶಪಡಿಸಿಕೊಂಡಿದ್ದು ಅವರು ಸರ್ಕಾರದವರಿಗೆ ಶಿವಾಯಾ ಜಮಾಬಂದಿ ಕೊಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ, ಹೌದು ಎಂದು ಹೇಳಿದ್ದೀರಿ. ಹಾಗಾದರೆ ಅದಕ್ಕೆ ಏನು ಅರ್ಥ ಎಂದು ಹೇಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಹೌದು, ಅವರು ಸರ್ಕಾರಕ್ಕೆ ಶಿವಾಯಾ ಜಮಾಬಂದಿ ಕೊಡುತ್ತಿದ್ದಾರೆ.

ಶ್ರೀ ಬಿ. ಪಿ. ಗಂಗಾಧರ್.—ಡಿಸ್ಪೋಸಲ್ ಆಫ್ ವೇಸ್ಟ್ ಲ್ಯಾಂಡ್ ಮಾಡಬೇಕೆಂದು ಹೇಳಿದ್ದೀರಿ. ಬಿದಾರ್ ಜಿಲ್ಲೆ ಮತ್ತು ಇತರ ಜಿಲ್ಲೆಗಳಲ್ಲಿ ಎಷ್ಟು ಲ್ಯಾಂಡ್ ಇದೆ, ಎಷ್ಟು ಜನರಿಗೆ ಹೀಗೆ ಕೊಟ್ಟಿದ್ದೀರಿ ಮತ್ತು ಜಮೀನು ಇಲ್ಲದಿರತಕ್ಕ ಬಡ ಜನರು ಎಷ್ಟು ಇದ್ದಾರೆ ಎಂದು ಸ್ಟಾಟಿಸ್ಟಿಕ್ ಗ್ಯಾದರ್ ಮಾಡಿದ್ದೀರಾ, ಹೇಳುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಎಷ್ಟು ಜಮೀನು ಇದೆ ಎಂದರೆ, ಸುಮಾರು 11 ಲಕ್ಷ ಎಕರೆ ಇದೆಯೆಂದು ಕಾಣುತ್ತದೆ. ಅದರೊಳಗೆ ಕಲ್ಟಿವೇಬಲ್ ಎಷ್ಟು ಎಂದು ಲೆಕ್ಕ ತೆಗೆದುಕೊಳ್ಳುವುದಕ್ಕೆ ಹಚ್ಚಿದ್ದೇವೆ ಎಷ್ಟು ಬಡಜನರು ಇದ್ದಾರೆಂದು ಗೊತ್ತಿಲ್ಲ. ಇನ್ನು ಮೇಲೆ ಅರ್ಜಿಗಳು ಬಂದಾಗ ತಿಳಿಯುತ್ತದೆ.

ಶ್ರೀ ಬಾಪು ಗೌಡ.—ಈಗ ಭೂಮಿ ಇಲ್ಲದವರಿಗೆ ಸಾವಿರಾರು ಎಕರೆ ಕೊಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಇವುಗಳನ್ನು ಹರಿಜನ ಗಿರಿಜನರು ಪಡೆದುಕೊಂಡು ಬೇರೆ ಜಮೀನುದಾರರಿಗೆ ಕೆಲವರು ಮಾರುತ್ತಾರೆ. ಹೀಗೆ ಇದನ್ನು ಮಾರಿದರೆ, ಜಮೀನ್ದಾರರು ಕೊಂಡುಕೊಳ್ಳದ ಹಾಗೆ ಸರ್ಕಾರದವರು ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಈಗ ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ಆ ಪ್ರೊವಿಜನ್ ಇದೆ. ಭೂಮಿ ಕೊಟ್ಟ ನಂತರ 15 ವರ್ಷಗಳ ಒಳಗೆ ಅದನ್ನು ಯಾರಿಗೂ ಸರ್ಕಾರದ ಪರವಾನೆ ಇಲ್ಲದೆ ವಿಲೇವಾರಿ ಮಾಡಬಾರದು ಎಂದು ಎದೆ.

ಶ್ರೀ ಎಂ. ನಾಗಪ್ಪ.—ತಾವು ಉತ್ತರದಲ್ಲಿ ಶಿವಾಯಾ ಜಮಾಬಂದಿ ಕೊಡುತ್ತಿದ್ದಾರೆಂದು ಜಮೀನು ಅವರ ಸ್ವಾಧೀನದಲ್ಲಿದೆಯೆಂದೂ ಹೇಳಿದ್ದೀರಿ. ಈ ರೀತಿ ಎಷ್ಟು ಕುಟುಂಬಗಳು ಇದ್ದಾವೆ, ಎಷ್ಟು ಜಮೀನು ಅವರ ಸ್ವಾಧೀನದಲ್ಲಿವೆ ಎಂಬುದನ್ನು ತಿಳಿಸಬೇಕು. ಅದಲ್ಲದೆ ಲ್ಯಾಂಡ್ ಗ್ರಾಂಟ್ಸ್ ರೂಲ್ಸಿನಲ್ಲಿ 15 ವರ್ಷದವರೆಗೆ ಸರ್ಕಾರದ ಪರವಾನೆ ಇಲ್ಲದೆ ಮಾರಕೂಡದು ಎಂದು ಹೇಳಿದ್ದೀರಿ. ಅಂದರೆ ಸರ್ಕಾರ ಪರವಾನೆ ಕೊಡಬೇಕೆಂದು ಉದ್ದೇಶ ಇಟ್ಟುಕೊಂಡಿದ್ದಾರೆಯೇ! ಆ ಉದ್ದೇಶ ಇಲ್ಲದಿದ್ದರ ಆ ಕ್ಲಾಸಿಗೆ ತಿದ್ದುಪಡಿ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಇವರು ಎಷ್ಟು ಮಂದಿ ಇದ್ದಾರೆ ಎಂಬುದರ ವಿವರ ಇಲ್ಲ. 2ನೇ ಪ್ರಶ್ನೆ ಸರ್ಕಾರ ಪರವಾನೆ ಯಾಕೆ ಕೊಡುತ್ತದೆ ಎಂದು. ಒಮ್ಮೊಮ್ಮೆ ಬಡವರಾದ ಜನಕ್ಕೆ ಜಮೀನು ಮಾರಾಟ ಮಾಡಿ ಬೇರೆ ತೆಗೆದುಕೊಳ್ಳುವುದರ ಆವಶ್ಯಕತೆ ಬೀಳುತ್ತದೆ. ಅದು ಸರ್ಕಾರೀ ಕಾಯಿದೆಯ ಪ್ರಕಾರ ಜಿನ್ಯೂಯಿನ್ ಆಗಿದ್ದರೆ, ಅಂಥವರಿಗೆ ಪರವಾನೆ ಕೊಡುತ್ತೇವೆ.

ಶ್ರೀಮತಿ ಚಂಪಾಬಾಯಿ ಭೋಗಳೆ.—ರಾಜಕೀಯ ಸಂತ್ರಸ್ತರಿಗೆ ಎಷ್ಟು ಎಕರೆ ಭೂಮಿ ಕೊಟ್ಟಿದ್ದೀರಿ ?

ಶ್ರೀ ಎಚ್. ವಿ. ಕೌಜಲಗಿ.—ಅದು ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು.

ಶ್ರೀ ವಿ. ಎನ್. ಪಾಟೀಲ್.—(ಎಫ್)ನಲ್ಲಿ ನಾನು ಕೇಳಿದ್ದು ಬಿದಾರ್ ಜಿಲ್ಲೆಯ ಕಮ್ಯುನಿಸ್ಟ್ ಸಮಿತಿಯವರು ಏನಾದರೂ ಮನವಿಯನ್ನು ಸಲ್ಲಿಸಿದ್ದರೇ ಎಂದು. ಅದಕ್ಕೆ ಉತ್ತರದಲ್ಲಿ ಒಂದ

ಕನ್‌ಸ್ಟ್ರಕ್ಟಿವ್ ಕಮಿಟಿ ಮಾಡುತ್ತೇವೆಂದು ಹೇಳಿದ್ದೀರಿ. ಅದಕ್ಕೆ ಧನ್ಯವಾದಗಳು. ಆದರೆ ಎಷ್ಟು ದಿವಸಗಳಲ್ಲಿ ಇದನ್ನು ಮಾಡುತ್ತೀರಿ? ಮತ್ತು ನಾನು ಹುಮ್ನಾಬಾದ್ ತಾಲ್ಲೂಕಿನ ಮಾಹಿತಿ ಕೇಳಿದ್ದು. ನೀವು ಜಿಲ್ಲಾವಾರು ಕೊಟ್ಟಿದ್ದೀರಿ.

ಶ್ರೀ ಎಚ್. ವಿ. ಕೌಜಲಗಿ.—ಕಮಿಟಿಗಳನ್ನು ಆದಷ್ಟು ಜಾಗ್ರತೆ ಮಾಡುತ್ತೇವೆ.

Misappropriation of Funds of Relief, Works in Arkalgud

229. **Sri H. N. NANJE GOWDA** (Arkalgud).—

Will the Minister for Revenue be pleased to refer to his replies given to Starred question No. 106 of the Sixth list on 21st August 1969 and state :—

(*a*) whether the investigation in the matter by the Technical Audit cell of the Vigilance Commission has been completed ;

(*b*) if so, the recommendations of the Vigilance Commission in the matter ;

(*c*) whether any of the officials are kept under suspension or dismissed from service for misappropriating the funds of the relief works by drawing the amount on bogus and fantastic bills ?

Sri H. V. KOUJALGI (Minister for Revenue).—

(*a*) No.

(*b*) and (*c*) Do not arise in view of reply to clause (*a*).

ಶ್ರೀ ಎಚ್. ಎನ್. ನಂಜೇಗೌಡ.—ಡಿವಿಜನಲ್ ಕಮಿಷನರ್ ಸರ್ಕಾರಕ್ಕೆ ಕೊಟ್ಟಂತಹ ವರದಿಯಲ್ಲಿ ಯಾರನ್ನಾದರೂ ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕೆಂದು ತಿಳಿಸಿದ್ದಾರೆಯೇ?

ಶ್ರೀ ಎಚ್. ವಿ. ಕೌಜಲಗಿ.—ಆ ವರದಿ ಇನ್ನೂ ನಮ್ಮ ಕಡೆ ಬಂದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ತಾವು ವರದಿ ಬಂದಿಲ್ಲವೆಂದು ಹೇಳುತ್ತೀರಿ,... ... ...

Sri H. V. KOUJALGI.—It has not come to my notice ; I will enquire into it.

Sri H. N. NANJE GOWDA.— Have you not disclosed to this House on a previous occasion that the Report from the Divisional Commissioner was received by the Government ?

Sri H. V. KOUJALGI.—I do not know the contents of it at this stage.

ಶ್ರೀ ಎಚ್. ಬಿ. ಜ್ವಾಲನಯ್ಯ.—ಮೈಸೂರು ಡಿವಿಜನಲ್ ಕಮಿಷನರ್ ಅವರು ಈ ವ್ಯವಹಾರದಲ್ಲಿ ತೊಡಗಿದ್ದಂಥ ಅಧಿಕಾರಿಗಳು ಅನ್ಯಾಯ ಮಾಡಿದ್ದಾರೆ. ಇದರಲ್ಲಿ ಮೋಸ ಇದೆಯೆಂದು ತಿಳಿದುಬಂದುದರಿಂದ ಅವರನ್ನು ಸಸ್‌ಪೆಂಡ್ ಮಾಡಬೇಕೆಂದು ವರದಿಯನ್ನು ಕಳುಹಿಸಿದ್ದಾರೆಯೇ?

Sri H. V. KOUJALGI.—I do not exactly remember its contents.

Sri K. H. PATIL.—Are you in a position to deny the fact that you received a communication from the Divisional Commissioner recommending the suspension and is it not a fact that the Government is intentionally hiding the fact?

Sri H. V. KOUJALGI.—I have neither denied the fact nor admitted it.

Sri H. N. NANJE GOWDA.—May I know the stage of the enquiry by the Vigilance Commission whether they have submitted any interim report recommending for suspension of officers?

Sri H. V. KOUJALGI.—No such interim report has been received from the Vigilance Commission.

Afforestation work for growing Bamboos

231. **Sri R. G. WALI** (Hubli).—

Will the Minister of State for Forests be pleased to state:—

(*a*) whether the work of afforestation has been taken up in the State during the year 1969-70;

(*b*) if so, the extent of land in which the work is taken up (in acres);

(*c*) whether any special efforts are being made to grow more bamboos as there is heavy demand for the same from paper factories and also from traditional workers—*i.e.*, Medars;

(*d*) the procedure followed for the distribution of bamboos?

Sri ALUR HANUMANTHAPPA (Minister of State for Forests) —

(*a*) Yes.

(*b*) 44,167.80 acres.

(*c*) No.

(*d*) The bamboos are distributed to paper and pulp industry on quantity basis by the Government fixing the price. Bamboos are also released on permit basis in small quantities for local consumption, for small scale and cottage industries of the Medars. The permit rate is fixed by the Government from time to time.

Sri R. G. WALI.—It is stated that this year they have taken up the work in 44,167.80 acres of land. Is it taken only during this year or has it been continuing since previous years? Secondly, you have flatly denied that you are not making any efforts to grow bamboos although there is heavy demand for it. Is the Government thinking of conducting any research and see that bamboo growth is increased or is it the policy of the Government to completely stop growing of bamboos?

† **Sri AULR HANUMANTHAPPA.**—Regarding afforestation works this year's figures I have furnished. During the Second and Third plan also we had undertaken afforestation work. In regard to growing of more bamboos we are not making any efforts since we are having adequate quantity of bamboos in the State.

Sri R. G. WALI.—In reply to (d) you have stated that bamboos are also released on permit basis in small quantities for local consumption, for small scale and cottage industries of the Medars. Is it not a fact that permits are being given for hundreds of tonnes of bamboos being distributed to particular co-operative societies and not to others?

Sri ALUR HANUMANTHAPPA.—Due to flowering of bamboos we have encouraged only few co-operative societies through which basket makers and others may obatain these bamboos.

Sri C. K. RAJAIAH SHETTY.—May I know whether the afforestation work you have undertaken is in proportion to exploitation and if so what is the rate of exploitation and afforestation?

Sri ALUR HANUMANTHAPPA.—There is no question of exploitation when compared to afforestation. Generally according to area and labour charges it may work out to 200 to 300 rupees per acre of afforestation.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪಲ್ಪ್ ತಯಾರುಮಾಡುವುದಕ್ಕೆ ಕೊಟ್ಟಿರತಕ್ಕ ಬೊಂಬುಗಳ ಬೆಲೆ ಎಷ್ಟು? ಸಣ್ಣ ಸಣ್ಣ ಮೇದರುಗಳಿಗೆ ಕೊಟ್ಟಿರತಕ್ಕ ಬೊಂಬುಗಳ ಬೆಲೆಯೆಷ್ಟು?

ಶ್ರೀ ಆಲೂರು ಹನುಮಂತಪ್ಪ.—ಮೇದರುಗಳಿಗೆ ಕೊಟ್ಟಿರತಕ್ಕ ಗ್ರೀನ್ ಬೊಂಬುಗಳಲ್ಲಿ ಸಣ್ಣದು ಒಂದು ಟನ್ನಿಗೆ 15 ರೂಪಾಯಿಗಳು ದೊಡ್ಡದು ಒಂದು ಟನ್ನಿಗೆ 20 ರೂಪಾಯಿಗಳು. ಒಣಗಿರುವುದು ಟನ್ನಿಗೆ $7\frac{1}{2}$ ರೂಪಾಯಿಗಳು.

ಶ್ರೀ ಆರ್. ಜಿ. ವಾಲಿ.—ಮೇದರುಗಳಿಗೆ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದರು. ಆದ್ದರಿಂದ ಇವನ್ನು ಕಾರ್ಖಾನೆಗಳಿಗೆ ಕೊಡುತ್ತಾ ಇರುವುದನ್ನು ಕಡಿಮೆ ಮಾಡಿ ಮೇದರುಗಳಿಗೆ ಕೊಡುವ ವಿಚಾರವನ್ನು ಯೋಚನೆ ಮಾಡುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಸರ್ಕಾರದವರು ಸಣ್ಣ ಕೈಗಾರಿಕೆ ಉದ್ಯಮದಲ್ಲಿರುವವರಿಗೆ ತೊಂದರೆಯಾಗದಂತೆ ಮಾಡುವುದಕ್ಕೋಸ್ಕರ ಇವುಗಳ ಎಕ್ಸ್‌ಪೋರ್ಟ್ ತಡೆಗಟ್ಟಿದ್ದೇವೆ. ಮೇದರುಗಳು ಯಾವ್ಯಾವ ವಿಧವಾದ ಕೈಗಾರಿಕೆಗಳನ್ನು ನಡೆಸುತ್ತಾರೋ ಅವನ್ನು ನಡೆಸಲು ಸಾಧ್ಯವಾದಷ್ಟು ಅವರಿಗೆ ಬೊಂಬುಗಳನ್ನು ಕೊಡಬೇಕೆಂದು ಸರ್ಕಾರ ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದಾರೆ.

Sri A. R. BADRINARAYAN.—Is the Government aware that the bamboo forest has become completely depleted and there is need for special efforts to grow more bamboos and when such is the case why you have stated in answer to (c) that no special efforts are made to grow more bamboos?

Sri ALUR HANUMANTHAPPA.—Hitherto Government had sufficient quantity of bamboos. For increased demand we are thinking of taking afforestation work for growing bamboos also.

ಶ್ರೀ ಬಿ. ಎಂ. ಇದಿನಬ್ಬ.—ಈ ರಾಜ್ಯದಲ್ಲಿ ಬೆಳೆದಂಥ ಬೊಂಬುಗಳು ಕೇರಳಾಕ್ಕೆ ಹೆಚ್ಚಿಗೆ ಹೋಗುತ್ತಿವೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೋ?

ಶ್ರೀ ಆಲೂರು ಹನುಮಂತಪ್ಪ.—ಅಲ್ಲಿನ ಕಾರ್ಖಾನೆಗಳಿಗೆ ಕೊಟ್ಟಿದ್ದೇವೆ.

Model Schools in Bijapur District

238. **Sri K. P. NADGOUDA** (Mudhol).—

Will the Minister for Education be pleased to state :—

(*a*) the names of Taluks in Bijapur District provided with Model Schools in place of Taluk schools ;

(*b*) the reasons for not providing Model Schools to Bagalkot, Badami and Mudhol taluka in Bijapur District ;

(*c*) (i) whether the Head Masters of these three Taluka Schools are trained graduate teachers ;

(ii) if not, their qualifications ?

Sri N. M. KOTRABASIAH SOGI (Deputy Minister for Education).—

(*a*) The names of the taluks are as under :

(1) Bagewadi,
(2) Bijapur (Darga),
(3) Indi,
(4) Sindgi,
(5) Muddebihal,
(6) Bilgi,
(7) Jamakhandi and
(8) Hungund.

(*b*) Providing of Model schools with Graduate Headmasters to these three Taluks is held in abeyance till the end of the academic year on administrative considerations. The question of providing Model schools with Graduate Headmasters to these three Taluks also will be taken up before the commencement of the next academic year.

(*c*) (i) No.

(ii) Their qualifications are as follows :—

(1) Bagalkot :—Shri D. V. Balulad.

P. T. C.	1949
S. S. C.	1952
Kan. Jana	1949

(2) Badami :—Shri R. S. Hiremath.

II year trained	1947
S. S. C.	1960

(3) Mudhol :—Shri G. V. Belvalmath.

P. T. C.	1956.

ಶ್ರೀ ಕೆ. ಪಿ. ನಾಡಗೌಡ.—(ಆ)ಗೆ ಉತ್ತರವಾಗಿ ಅಡ್ಮಿನಿಸ್ಟ್ರೇಟಿವ್ ಕನ್‌ಸಿಡರೇಷನ್ಸ್ ಎಂದು ಹೇಳಿದ್ದೀರಿ. ಹಾಗಂದರೇನು ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆಡಳಿತಾತ್ಮಕವಾದ ತೊಂದರೆಗಳಿವೆ. ಈಗ ಕೆಲವು ಪ್ರೊಸೀಜರಲ್ ತೊಂದರೆಗಳಿವೆ. ಆದ್ದರಿಂದ ಮುಂದಿನ ಶೈಕ್ಷಣಿಕ ವರ್ಷದಿಂದ ಅಲ್ಲಿಯೂ ಕೂಡ ಗ್ರಾಜ್ಯುಯೇಟ್ ಟೀಚರ್ಸನ್ನು ಅಪಾಯಿಂಟ್ ಮಾಡುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಪಿ. ನಾಡಗೌಡ.—ಮುಧೋಳ್ ಮಿಡಲ್ ಸ್ಕೂಲಿಗೆ ಗ್ರಾಜ್ಯುಯೇಟ್ ಟೀಚರ್ಸ್‌ನ ಹಾಕಬೇಕು ಅಂತ ಆರ್ಡರ್ ಆಗಿದ್ದರೂ ಕೂಡ ಸಿದ್ದೋಲ್‌ಕರ್ ಅಂತ ಮಾಸ್ತರನ್ನು ಅಲ್ಲಿಗೆ ಪೋಸ್ಟ್ ಮಾಡಿದ್ದಾಗ್ಯೂ ಕೂಡ ಈ ಆರ್ಡರನ್ನು ವಿತ್‌ಹೋಲ್ಡ್ ಮಾಡುವುದಕ್ಕೆ ಏನು ಕಾರಣ, ಸ್ವಾಮಿ ? ಈ ಕೋ-ಆಪರೇಷನ್ ಮಿನಿಸ್ಟರ್ ಮತ್ತು ಎಜುಕೇಷನ್ ಮಿನಿಸ್ಟರ್ ಇವರೆಲ್ಲಾ ಸಿಂಡಿಕೇಟ್ ಸರಕಾರಕ್ಕೆ ಸೇರಿದವರು ಎಂತಲೇ ?

2–00 P.M.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮುಂದಿನ ಅಕಾಡಮಿಕ್ ಇಯರ್‌ನಿಂದ ನಾವು ಅಲ್ಲಿ ಗ್ರಾಜ್ಯುಯೇಟ್ ಟೀಚರ್ಸ್‌ನ ಪೋಸ್ಟ್ ಮಾಡುತ್ತೇವೆ. ಈ ವರ್ಷದ ಮಧ್ಯದಲ್ಲಿ ಮಾಸ್ತರುಗಳನ್ನು ಬದಲಾವಣೆ ಮಾಡುವುದು ಅಷ್ಟು ಉಚಿತವೂ ಅಲ್ಲ ಅನುಕೂಲವೂ ಅಲ್ಲ. ಆದುದರಿಂದ ಮುಂದಿನ ಅಕಾಡೆಮಿಕ್ ಇಯರ್‌ನಿಂದ ನಾವು ಟ್ರೈನ್ಡ್ ಟೀಚರ್ಸ್‌ನ್ನು ಪೋಸ್ಟ್ ಮಾಡುತ್ತೇವೆ.

ಶ್ರೀ ಕೆ. ಪಿ. ನಾಡಗೌಡ.—ಮುಂದಿನ ವರ್ಷವಾದರೂ ಹಾಕುತ್ತೇವೆ ಎಂದು ಆಶ್ವಾಸನೆ ಕೊಡುತ್ತೀರಾ, ಸ್ವಾಮಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮುಂದಿನ ವರ್ಷ ನಾವು ಖಂಡಿತವಾಗಿ ಗ್ರಾಜುಯೇಟ್ ಟೀಚರ್ಸ್‌ನ ಅಪಾಯಿಂಟ್ ಮಾಡುತ್ತೇವೆ.

Mr. SPEAKER.—Question Hour is over.

QUESTIONS FOR ANSWERS ON THE DAY

(but not taken up)

Payment of full compensation to the people of Hesarur Village

183. **Sri C. M. CHURCHIHALMATH** (Mundargi).—

Will the Minister for Revenue be pleased to state :—

(*a*) the reasons for not giving 25 per cent compensation, due to the people of Hesarur village, Mundargi taluk, even though the said village has been acquired ;

(*b*) whether it is a fact that people of the said village went on strike earlier at the time of receiving 75 per cent compensation ;

(*c*) whether the position of Kolagahalli and Shingapalur villages is the same ?

Sri H. V. KOUJALGI (Minister for Revenue).—

(*a*) Award has not been sanctioned.

(*b*) No.

(*c*) Award in respect of these two villages also has not been sanctioned.

Payment of compensation for acquisition of land under Murthubinakere in Chamarajnagar

216. **Sri S. PUTTASWAMY** (Chamarajnagar).—

Will the Minister for Revenue be pleased to state:—

(*a*) the dates on which the estimates for the construction of "Muruthubinakere" in Chamarajnagar Taluk was sanctioned;

(*b*) the extent of lands coming under submersion, Channel excavation, Waste Weir, draft clearance, has been acquired (with the details as to the nature of the land whether wet or dry land, under each item);

(*c*) the extent of lands in respect of which crop compensation has been paid and the extent of land in respect of which crop compensation has not yet been paid;

(*d*) the reason for such discrimination in paying crop compensation;

(*e*) the stage at which the acquisition proceedings of the said land stands;

(*f*) the period within which the Government would finalise the acquisition proceedings and pay full compensation to the land owners?

Sri H. V. KOUJALGI (Minister for Revenue).—

(*a*) 19-11-1960.

(*b*)	1.	Lands coming under submersion	21 acres 5 guntas (Dry Land)
	2.	Lands for Waste Weir and draft clearance	2 acres 15 guntas (Dry Land)
	3.	Lands for channel excavation	Yet to be taken up
		Total extent :	26 acres 20 guntas

(*c*) Crop compensation has been paid for the entire extent taken over.

(*d*) Does not arise.

(*e*) The Acquisition Proceedings have reached the award stage.

(*f*) Awards have been passed and compensation will be paid soon.

Site donated to late Dr. Ambedkar

524. **Sri S. S. ARAKERI** (Balloli).—

Will the Minister of State for Municipal Administration be pleased to state:—

(*a*) whether the Ex-Maharaja of the old Mysore State had donated 5 acres of land in Rajmahal Extension, Bangalore to late Dr. Ambedkar;

(*b*) if so, whether the City Improvement Trust Board has reserved it to execute the wish of the donee for the purpose of starting Buddhist International University;

(*c*) whether the Government has any proposal before it to hand over 5 acres of this land to Sri B. Ambedkar, the son of late Dr. Ambedkar, the President of the Buddhist Institute of India, Bombay;

(*d*) whether it is a fact that the Chairman, City Improvement Trust Board is trying to form sites in this land, the property of late Dr. Ambedkar;

(*e*) whether the Government is aware of this fact?

Sri B. M. PATIL (Minister of State for Municipal Administration).—

(*a*) Yes.

(*b*) No.

(*c*) No.

(*d*) Yes.

(*e*) Only now.

Request for extension of question hour

Sri S. S. ARAKERI.—There is one more question of mine which is the last in the series. It is very important. Please permit me to put the question by extending the time.

Mr. SPEAKER.—It is my practice not to extend the time. It is also against parliamentary convention.

Sri S. S. ARAKERI.—Sir, there is a convention. You have extended time so many times.

Mr. SPEAKER.—I am sorry I cannot extend time. But if notice of half-an-hour discussion is given. I shall permit it.

Sri S. S. ARAKERI.—Sir, in half-an-hour discussion, I cannot put questions and elicit the information that I want. Please, therefore, at least hold over the question.

Mr. SPEAKER.—I am sorry it cannot be done. If the hon. member considers the question important, then let him give notice immediately and I shall permit half-an-hour discussion.

(*At this stage Hon. Member Sri Bheemanna was standing on his seat*)

Mr. SPEAKER.—It is something wonderful! This is the first time I have noticed a Member standing upon the seat!

(*Sri S. Bheemanna rose*)

Mr. SPEAKER.—I request the hon. member to first express regret for standing on the seat before he begins to speak.

Sri S. BHEEMANNA.—I express regret, Sir. I want to know whether there is any procedure to draw the Speaker's attention towards Members occupying back benches, If there is any procedure for this, it may be made known to us. That is the idea with which I had to stand on the bench. I know it is not proper to stand on the bench. It is only to draw the attention of the Chair, I stood on the bench.

Mr. SPEAKER.—I shall bear that point in mind.

Sri S. S. ARAKERI.—Sir, under half-an-hour discussion I will not be able to put counter questions.

Mr. SPEAKER.—I cannot go against the Rules- If a notice for half-an-hour discussion is given I shall consider it very sympathetically.

Sri S. S. ARAKERI.—Will you give me an assurance ?

Mr. SPEAKER.—It is not proper to ask for an assurance from the Chair. I shall consider it sympathetically.

Discussions during Zero Hour

ಶ್ರೀ ಎಂ. ರಾಮಪ್ಪ (ಹೊಸದುರ್ಗ).—ಈ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗುವುದಕ್ಕೆ ತಾವು ಪ್ರತ್ಯಕ್ಷವಾಗಿ ಜವಾಬ್ದಾರರು. ಈ ಸಭೆಯ ಕಾರ್ಯಕಲಾಪಗಳು ಏನು ನಡೆಯುತ್ತಾ ಇದೆ ಇದು ಯಾವ ಪ್ರಕಾರ ನಡೆಯುತ್ತಾ ಇದೆ? ನಿಯಮಾವಳಿಗಳ ಪ್ರಕಾರ ಕಾರ್ಯಕಲಾಪಗಳು ನಡೆಯುತ್ತಾ ಇದೆಯೇ ಬಿಸಿನೆಸ್ ಅಡ್ವೈಸರಿ ಕಮಿಟಿ ಇದೆಯೇ? ಅದರಲ್ಲಿ ಯಾವಯಾವ ಸಬ್ಜೆಕ್ಟ್ ಎಷ್ಟು ಗಂಟೆ ಅಲಾಟ್ ಮಾಡಿದ್ದಾರೆ, ಎಷ್ಟು ದಿವಸ ಚರ್ಚೆಯಾಗುತ್ತದೆ, ಯಾವತ್ತು ಸಭೆ ಮುಕ್ತಾಯವಾಗುತ್ತದೆ ಎಂಬ ವಿಷಯ ಈ ಸಭೆಯ ಸದಸ್ಯರಿಗೆ ಅನೇಕರಿಗೆ ಗೊತ್ತಿಲ್ಲ. ಟ್ರೆಜರಿ ಬೆಂಚಸ್‌ರವರು ಅಪೋಸಿಷನ್ ಲೀಡರ್‌ರವರು ಕುಳಿತುಕೊಂಡು ಒಮ್ಮತದಿಂದ ನಡೆಸಿಕೊಂಡು ಹೋಗುತ್ತಾ ಇದ್ದಾರೆಯೆ? ತಾವು ಎರಡು ಪಕ್ಷದವರನ್ನೂ ಸಮಾಲೋಚನೆ ಮಾಡಿ ನಡೆಸುತ್ತಾ ಇದ್ದೀರಾ? ಹೇಗೆ ನಡೆಸುತ್ತಾ ಇದ್ದೀರಿ ಅಂತ ಅನ್ನುವುದು ನಮಗೆ ಗೊತ್ತಾಗುತ್ತಾ ಇಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇಂಥ ಸಬ್ಜೆಕ್ಟ್ ಇಷ್ಟು ಗಂಟೆಗಳ ಕಾಲ ಚರ್ಚೆಯಾಗಬೇಕೆಂದು ಇದೆ. ಜೀರೊ ಅವರ್‌ಗೆ ರೂಲ್ಸ್‌ನಲ್ಲಿ ಅವಕಾಶ ಇಲ್ಲ, ಆದರೂ ತಾವು ಪರ್ಮಿಟ್ ಮಾಡಿದ್ದೀರಿ. ಇದನ್ನು ಮಾಡಕೂಡದು. ಮಾಡಿದರೂ ಕೂಡ ಅತಿ ಶೀಘ್ರವಾಗಿ ತೀರ್ಮಾನವಾಗಬೇಕೆ ಹೊರತು ಒಂದು ಗಂಟೆ ಎರಡು ಗಂಟೆಗಳ ಕಾಲ ಚರ್ಚೆ ನಡೆಯುವುದು ಸೂಕ್ತವಲ್ಲ. ಈ ಸಭೆಯ ಕಾರ್ಯಕಲಾಪಗಳನ್ನು ಹತೋಟಿಯಲ್ಲಿಟ್ಟುಕೊಂಡು ತಾವು ನಡೆಸಬೇಕು. ಆ ರೀತಿ ಯಶಸ್ವಿಯಾಗಿ ನಡೆಸುತ್ತಿಲ್ಲ ಎಂದು ಬಹಳ ವಿಷಾದದಿಂದ ಹೇಳುತ್ತಾ ಇದ್ದೇನೆ.

Mr. SPEAKER.—The hon. Member wanted to know whether there is zero hour. I definitely say that there is no zero hour. Zero hour is not permitted under the Rules, and I am required to carry on the business in accordance with the Rules and the recommendation of the Business Advisory Committee.

As regards the assertion that the Chair is not properly conducting the proceedings, I think it is rather improper on the part of the hon. Member to say so. I never permit zero hour. Hon. Members talk without my permission and that should not be interpreted as my permission. I have taken steps on many occasions to see that zero hour proceedings are not recorded. To say that the Chair is not conducting the proceedings properly is highly improper.

Request to allow Sri Vatal Nagaraj to make a Statement on his Talavadi Visit

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಸಭೆಯ ಸದಸ್ಯರಾದ ವಾಟಾಳ್ ನಾಗರಾಜ್ ರವರು ತಾಳವಾಡಿಯಿಂದ ಈಗ ಬಂದಿದ್ದಾರೆ. ಅವರನ್ನು ಕರ್ನಾಟಕದ ಅನೇಕ ಜನ ಬಂಧುಗಳು ಮೆರವಣಿಗೆಯಲ್ಲಿ ತಂದು ಈ ಮನೆಗೆ ಬಿಟ್ಟಿದ್ದಾರೆ. ತಾವು ಅವರಿಗೆ ಏನಾದರೂ ಹೇಳುವುದಕ್ಕೆ ಅವಕಾಶ ಕೊಡುವುದಾದರೆ ನಾವೆಲ್ಲಾ ಕೇಳೋಣ. ಮತ್ತು ಅವರನ್ನು ಈ ಮನೆಯ ಸದಸ್ಯರು ಹೃತ್ಪೂರ್ವಕವಾಗಿ ಸ್ವಾಗತಿಸೋಣ ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

Mr. SPEAKER.—I shall act acording to the Rules. This item is not on the agenda and the Chair, of course, cannot allow that.

ಶ್ರೀ ಎಸ್. ಗೋಪಾಲಗೌಡ.—ತಾವು ನಿನ್ನೆ ಭರವಸೆ ಕೊಟ್ಟಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳೂ ಕೊಟ್ಟಿದ್ದಾರೆ. ಕರುಣಾನಿಧಿಯವರು ಅವರಿಗೆ ಪತ್ರ ಬರೆದಿದ್ದಾರೆಯಂತೆ ಇಲ್ಲಿರತಕ್ಕ ತಮಿಳುಜನತೆಯನ್ನು ಕಾಪಾಡಬೇಕೆಂದು. ಅದರ ಬಗ್ಗೆ ಅವರು ಏನಾದರೂ ಹೇಳುವುದು ಇದ್ದರೆ ತಾವು ಅನುಮತಿ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುವುದಕ್ಕೆ ಮುಂಚಿತವಾಗಿ ನನಗೆ ಮಾತನಾಡಲು ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು.—ಏಕೆ ?

ಶ್ರೀ ವಾಟಾಳ್ ನಾಗರಾಜ್.—ನಾನು ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿದ್ದೆ.

ಅಧ್ಯಕ್ಷರು.—ಅದನ್ನು ಡಿಸ್‌ಅಲೋ ಮಾಡಿದೆ, ಅದಕ್ಕೆ ಕನ್‌ಸೆಂಟ್ ಕೊಟ್ಟಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ಹಸಿದ ಹುಲಿ ಬಂದ ಹಾಗೆ ಬಂದಿದ್ದೇನೆ, ದಯವಿಟ್ಟು ನನಗೆ ಮನ್ನಣೆ ಕೊಡಬೇಕು, ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಕೊಡುವುದಿಲ್ಲ ಎಂದರೆ ನಾನು ಕೇಳುವುದಕ್ಕೆ ತಯಾರಾಗಿಲ್ಲ.

ಅಧ್ಯಕ್ಷರು.—ಅವಕಾಶ ಕೊಡುವುದಕ್ಕಾಗುವುದಿಲ್ಲ, ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಹಸಿದ ಹುಲಿ ಬಂದ ಹಾಗೆ ಬಂದಿದ್ದೇನೆ, ಅವಕಾಶ ಕೊಡವುದಿಲ್ಲ ಎಂದರೆ ಹೇಗೆ ?

ಅಧ್ಯಕ್ಷರು.—ಕೊಡುವುದಿಲ್ಲ ಎಂದರೆ ಖಂಡಿತವಾಗಿಯೂ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ಅದನ್ನು ವಿರೋಧ ಮಾಡುವುದಕ್ಕೆ ಸಿದ್ಧವಾಗಿದ್ದೇನೆ, ಖಂಡಿತವಾಗಿ ಅವಕಾಶ ಕೊಡಬೇಕು. ಕೊಡುವುದಿಲ್ಲ ಎಂದರೆ ಈ ಸಭೆಯಲ್ಲೇ ಸತ್ಯಾಗ್ರಹ ಮಾಡುತ್ತೇನೆ. ಅಲ್ಲಿ ಏನಾಗಿದೆ ಎಂಬುದರ ಅನುಭವ ನನಗೆ ಇದೆ. ಅದನ್ನು ಹೇಳಲೇಬೇಕು. ಕೊಡುವುದಿಲ್ಲ ಎಂದರೆ ಅರ್ಥವೇನು ?

Mr. SPEAKER.—I must act according to the Rules. I hade disallowed the privilege motion concerning the arrest of the hon. Member. There is nothing new and so I am not going to permit him to make a statement.

Sri M. N. RAMANNA.—On a point of order, Sir. You were good enough to say that no zero hour is allowed. It seems zero hour is allowed. Which is correct?

Mr. SPEAKER.—I have not allowed it.

ಶ್ರೀ ಎಂ. ರಾಮಪ್ಪ.—ಅಧ್ಯಕ್ಷರ ಅನುಮತಿ ಇಲ್ಲದ ಮಾತನಾಡುವ ವಿಚಾರಗಳನ್ನು ರಿಕಾರ್ಡ್ ಮಾಡಬಾರದು ಎಂದು ತಾವು ಹೇಳಬೇಕು. ಇಲ್ಲದೆ ಇದ್ದರೆ ಪಬ್ಲಿಸಿಟಿ ಆಗುತ್ತದೆ. ಈಗ ಮಾನ್ಯ ಗೋಪಾಲಗೌಡರು ಮತ್ತು ವಾಟಾಳ್ ನಾಗರಾಜ್ ಅವರು ಏನೋ ಹೇಳಿದರು......

Mr. SPEAKER.—I am not allowing Zero Hour activities.

Sri K. PUTTASWAMY (Minister for Law, Labour and Parliamentary Affairs).—Sir, there can be no point of order in a vacuum. When the House is not transacting any business, how can there be any point of order?

* * * *

Notice of an adjournment Motion given by Sri Vatal Nagaraj *re*: Excesses by the Police of Talavadi upon Mysoreans engaged in Talavadi agitation

Sri B. P. GANGADHAR.—Sri Nagaraj told us that he has sent a motion to you.

Mr. SPEAKER.—That is disallowed.

Sri B. P. GANGADHAR.—On previous occasions, you have heard all of us in this House and given opportunity to every one of us to make a brief statement on the motion before giving a ruling. An opportunity is being given to the concerned Member who has sent the motion to make a brief explanatory statement to substantiate his motion. Sri Vatal Nagaraj has also sent one such privilege motion. So I request you kindly to give him time to make an explanatory statement so that it may be easy for you to consider its admission.

Mr. SPEAKER.—Yesterday this point was considered. After discussion it has been decided yesterday that all these matters may be disposed of in my Chambers and not here; and according to that procedure, I am not going to hear anybody.

Sri H. SIDDAVEERAPPA.—I want to say a word about your observation. If I remember correctly what I said was that so far as these motions are concerned, it is better that they are thrashed out in your Chambers. If they have to come here, we must at least have the knowledge of the subject that will come before us, so that we may be in a position to intelligently follow what the motion and objections are. Yesterday when all these things came in the House, we did not know what they were about. We were able to simply know that some hon. Members on this side raised something and for that some reply was given. The hon. Member Sri Nanje Gowda came and told me "Is this what you gentleman said ?" I only stated : if you come to some understadning in the Chambers well and good. If you permit the subject to be opened here, we must know what the subject that will come before the House is. That is what we stated.

---

* * * * Matter not recorded as ordered by the Chair.

With regard to the matter that is now agitating the mind of this House, I respectfully submit that I know that the Speaker has to follow the rules here. But some times in the interests of the smooth working, rules will have to be suspended or kept in abeyance. There is no Hour called Zero Hour. But by convention, by custom and by habit that has come into vogue. Only we can limit the time for it so that within that time all these things may be over. Now the hon. Member Sri Vatal Nagaraj says that he wants only a very short time. I feel that if his request had been complied with, the whole thing would have been over. I am making a request to you; I am appealing to you to have a pragmatic approach and see that you permit him to speak. Let him say whatever he has got to say with your permission; he can speak only with your permission. Sri Vatal Nagaraj may be permitted to speak for a while so that what the Leader of the House has to say in the matter, may be intelligently followed. This is my humble request.

ಶ್ರೀ ಎಚ್. ಎಂ. ಚನ್ನಬಸಪ್ಪ (ಪೆರಿಯಾಪಟ್ಟಣ).—ತಾವು ನನ್ನ ಹೆಸರು ಹೇಳಿದ್ದರಿಂದ ಒಂದು ವಿಚಾರವನ್ನ ಹೇಳಬೇಕಾಗಿದೆ. ನಿನ್ನೆಯ ದಿವಸ ನಾನು, ಶ್ರೀ ಸಿದ್ದವೀರಪ್ಪನವರು ಎಲ್ಲ ನಿಲುವಳಿ ಸೂಚನೆ ಮುಂತಾದುವು ಬಂದಾಗ ತಮ್ಮ ಛೇಂಬರಿನಲ್ಲಿ ತೀರ್ಮಾನ ಮಾಡಿ ಎಂಬುದಾಗಿ ನಾವು ಹೇಳಿದೆವು ಎಂದು ತಾವು ತಿಳಿಸಿದಿರಿ. ನಾನು ಆ ರೀತಿ ಹೇಳಲಿಲ್ಲ ಎಂದು ಬಹಳ ನಮ್ರತೆಯಿಂದ ಅರಿಕೆ ಮಾಡಿಕೊಳ್ಳುತ್ತೇನೆ.

ಎರಡನೆಯದು ನಾವು ಹೇಳಿದ್ದು ನಿಲುವಳಿ ಸೂಚನೆ, ಹಕ್ಕುಬಾಧ್ಯತೆ ಸೂಚನೆ ಇಂಥವು ಬಂದರೆ ಯಾರು ಅದನ್ನು ಕೊಡುತ್ತಾರೆಯೋ ಅವರು ಏನು ಹೇಳುತ್ತಾರೆ ಎಂಬುದನ್ನು ತಿಳಿದುಕೊಂಡು, ಯಾರ ಮೇಲೆ ಅದು ಇದೆ, ಅವರು ಏನು ಹೇಳುತ್ತಾರೆ ಎನ್ನುವುದನ್ನೂ ತಿಳಿದುಕೊಂಡು, ಆಮೇಲೆ ತೀರ್ಮಾನ ಮಾಡಿ ಎಂದು.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸಿದ್ದವೀರಪ್ಪನವರು ಹಾಗೂ ಮಾನ್ಯ ಚನ್ನಬಸಪ್ಪನವರು ಏನು ಹೇಳಿದರು ಎನ್ನುವುದು ಸಭೆಗೆಲ್ಲ ಗೊತ್ತಿದೆ. ಅವರೇನೂ ಅರ್ಥ ವಿವರಣೆಯನ್ನು ಕೊಡಬೇಕಾಗಿಲ್ಲ. ಮಾನ್ಯ ಸಿದ್ದವೀರಪ್ಪನವರು, ಇಂಗ್ಲೀಷ್‌ನಲ್ಲಿ ಹೇಳುವುದಾದರೆ, 'ಬ್ರೀತಿಂಗ್ ಹಾಟ್ ಅಂಡ್ ಕೋಲ್ಡ್' ಎರಡೂ ಒಂದೇ ಸಾರಿ ಹೇಳಿದ್ದಾರೆ. ಈ ಹೊತ್ತು ಏನು ಹೇಳಿದರೋ ಅದನ್ನು ನಿನ್ನೆಯೂ ಹೇಳಿದ್ದಾರೆ. ಅದಕ್ಕನುಗುಣವಾಗಿಯೇ ಇದೆ ನಮ್ಮ ನಿಯಮಗಳು. ನಿಲುವಳಿ ಸೂಚನೆ ಅಥವಾ ಹಕ್ಕುಬಾಧ್ಯತೆ ನಿರ್ಣಯ, ಇಂಥ ಪ್ರಶ್ನೆಗಳು ಬಂದಾಗ ತಮ್ಮ ಛೇಂಬರಿನಲ್ಲಿ ಆ ವಿಚಾರವನ್ನು ಸಂಬಂಧಪಟ್ಟವರಿಂದ ವಿವರಣೆಯನ್ನು ಕೇಳಿ ತೀರ್ಮಾನ ಮಾಡತಕ್ಕದ್ದು. ಮತ್ತು ಸಭೆಗೆ ಬರುವುದಾದರೆ ಸಭೆಗೆ ತಿಳುವಳಿಕೆ ಇರಬೇಕು ಎಂದು ಶ್ರೀಮಾನ್ ಸಿದ್ದವೀರಪ್ಪನವರೂ ಹೇಳಿದರು. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ, ಸಭೆಯ ತಿಳುವಳಿಕೆಗೆ ಬರಬೇಕಾದರೆ ಅದನ್ನು ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಬೇಕು. ಕಾರ್ಯಕ್ರಮ ಪಟ್ಟಿಯಲ್ಲಿ ಯಾವ ವಿಷಯ ಅಡಕವಾಗಿರುವುದಿಲ್ಲವೋ ಆ ವಿಷಯವನ್ನು ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಕ್ಕೆ ನಿಯಮಗಳು ಅವಕಾಶ ಕೊಡುವುದಿಲ್ಲ. ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದ ಅಭಿಪ್ರಾಯಗಳೇ ನಮಗೂ ಕೂಡ ಇವೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಪುಟ್ಟಸ್ವಾಮಿಯವರು ಕುಸಿದು ಬಿದ್ದು ತೀರಿ ಹೋದರೆ ಆವಾಗ ಏನು ಮಾಡುತ್ತಾರೆ !

ಶ್ರೀ ಕೆ. ಪುಟ್ಟಸ್ವಾಮಿ.—ಆವಾಗ ಏನು ಮಾಡಿದರೂ ನನಗೆ ಗೊತ್ತಾಗುವುದಿಲ್ಲ.

2-30 P.M.

Mr. SPEAKER.--The constitutional position is this. When a notice of a particular motion is given and when that motion requires prior consent of the Speaker for the purpose of being brought before the House, only when consent is given the matter comes up before the House and when consent is not given the matter should not come before the House. The question of giving consent to motions is always decided in my chambers which is a public office and that is the practice in the House of Commons and even in the Lok Sabha. When requests were made by hon. Member that I should permit them to say something, I thought they wanted to ventilate the grievances pertaining to their constituency. I permitted them and I find that permission had been abused. Therefore I have come to the conclusion that I should not permit members to speak on a subject which is not on the agenda. I want that the time of the House should be properly utilised to consider the business on the agenda and therefore I want to proceed according to rules. Such matters should always be considered in my chambers. After giving an opportunity to the hon. Member to explain his point of view I would consider the question of giving or withholding my consent. I request the hon. Members to co-operate with the Chair.

Some hon. Members pointed that Sri Vatal Nagaraj would have said within a minute what he wanted to say. That is not the consideration. We should not create precedents. It is not a question of giving some time. Under the guise of points of order so many things are said. That is not proper. It is very desirable that everybody should be guided by rules and conventions.

Sri M. S. KRISHNAN.—I am on a point of order.

Mr. SPEAKER.—Nothing has happened for raising a point of order. Let us do business.

Sri M. S. KRISHNAN.—My point of order is, the hon. member Sri Vatal Nagaraj stood up and requested that he be allowed to make a submission in regard to the events that have taken place, etc. But you were very angry and emotional.

Mr. SPEAKER.—I am never angry ; and never emotional.

Sri M. S. KRISHNAN.—For me you looked to be angry and emotional, and you said 'no, no, I am not going to allow.' The hon. Member stood up and said that you must allow or else he would not allow business to take place. The position is this. Rule 293 states that by way of personal explanation if any member requests you to permit him to speak and offer explanation, generally the convention, in the Parliament as well as in the legislatures, is that the Speaker will be pleased to permit such members to offer their explanations. Here a big thing has taken place. He was arrested. In the circumstances I would have been very much happy if Sri Vatal Nagaraj had been permitted to speak under the rules. I want to know the ruling of the Chair in this regard.

Mr. SPEAKER.—There is no such request before me. It requires notice. Hon. member's request was for permission to raise a question of breach of privilege and I have disallowed it.

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, ಎಲ್ಲ ಕಾರ್ಯಕ್ರಮ ಲಿಸ್ಟ್ ಆಫ್ ಬಿಜಿನಸ್‌ನಲ್ಲಿ ಹಾಕಬೇಕಾಗುತ್ತದೆ ಎಂದು ಹೇಳಿದಿರಿ. ಹಾಗಿದ್ದರೆ ಪ್ರಶ್ನೋತ್ತರ ಕಾಲದ ನಂತರ ಇಂಥ ಪ್ರಶ್ನೆ ಎತ್ತಬೇಕು ಎಂದು ರೂಲ್ಸ್‌ನಲ್ಲಿ ಇರುತ್ತಿರಲಿಲ್ಲ. ಆದುದರಿಂದ ಈ ಕ್ರಮ ತಾವು ತೆಗೆದುಕೊಳ್ಳಬಾರದು. 293 ರೂಲ್ ಪ್ರಕಾರ ಪರ್ಸನಲ್ ಎಕ್ಸ್‌ಪ್ಲನೇಷನ್ ಮಂತ್ರಿಗಳು ಕೂಡ ಮಾಡಬಹುದು. ಸದಸ್ಯರಿಗೂ ಅದೇ ರೀತಿ ಅವಕಾಶ ಇರಬೇಕು. ಆದುದರಿಂದ ತಾವು ದಯವಿಟ್ಟು ತಮ್ಮ ರೂಲಿಂಗನ್ನು ಪುನರ್ ವಿಮರ್ಶಿಸಿ ಈಗ ಹೇಳುವುದಕ್ಕೆ ಅವಕಾಶ ಇರುವ ಹಾಗೆ ತೀರ್ಮಾನ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

Mr. SPEAKER.—I do not see any reason why I should change my ruling. I find there is no merit in the point of order.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧ್ಯಕ್ಷರೇ. ಶ್ರೀ ವಾಟಾಳ್ ನಾಗರಾಜ ಅವರು ಸಭೆಗೆ ಬಂದಿದ್ದಾರೆ. ಅವರನ್ನು ಸ್ವಾಗತಿಸಬೇಕಾದುದು ನಮ್ಮ ಕರ್ತವ್ಯ. ಈ ರಾಜ್ಯದಲ್ಲಿ ಇರತಕ್ಕಂಥ ಕನ್ನಡೇತರರನ್ನು ಕಾಪಾಡತಕ್ಕಂಥಾದ್ದು ಮುಖ್ಯ ಮಂತ್ರಿಗಳ ಜವಾಬ್ದಾರಿ ಇದೆ. ಅದೇ ರೀತಿ ತಮಿಳುನಾಡಿನಲ್ಲಿ ಅವರ ಜವಾಬ್ದಾರಿ ಇದೆ. ಇದು ಗಂಭೀರವಾದ ವಿಷಯ. ಉದ್ರೇಕಕ್ಕೆ ಅವಕಾಶ ಕೊಡದೆ ವಾಟಾಳ್ ನಾಗರಾಜರವರು ವಾಸ್ತವಾಂಶ ತಿಳಿಸುವ ಎರಡು ಮಾತು ಹೇಳಿದರೆ ಅದಕ್ಕೆ ಅವಕಾಶ ಕೊಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈ ವಿಷಯ ಹೇಳುವುದನ್ನು ಅವರು ಎರಡು ನಿಮಿಷದಲ್ಲಿ ಮುಗಿಸಬಹುದು ಎಂದು ಹೇಳುತ್ತೇನೆ.

Mr. SPEAKER.—I am sorry. I have already stated that. Since it is not on the agenda I cannot allow it.

I shall read the letter of Sri Vatal Nagaraj which is as follows :

> "ಈ ಕೆಳಕಂಡ ಹಕ್ಕುಬಾಧ್ಯತಾ ನಿರ್ಣಯವನ್ನು ಇಂದು ಸಭೆಯಲ್ಲಿ ಮಂಡಿಸಲು ಅನುಮತಿ ನೀಡಬೇಕೆಂದು ವಿನಂತಿಸುತ್ತೇನೆ.
>
> ಸೂಚನೆ, ದಿನಾಂಕ 28-1-1970ನೇ ಬುಧವಾರ ತಾಳವಾಡಿ ಚಳುವಳಿ ಸಂಬಂಧದಲ್ಲಿ ನಮ್ಮ ಗಡಿಯೊಳಕ್ಕೆ ನುಗ್ಗಿ ತಾಳವಾಡಿ ಪೋಲಿಸಿನವರು ಒತ್ತಾಯದಿಂದ ನಮ್ಮನ್ನು ದಸ್ತಗಿರಿ ಮಾಡಿರುವುದು."

I have said that I have recorded an order on it saying that this does not amount to breach of privilege in the light of the ruling that I had given yesterday in similar circumstances. Under these circumstances I have disallowed it. If he wants to make a statement, let him send a notice in writing to me and I will certainly consider it. Now Call-Attention motion may be taken up.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ........

ಅಧ್ಯಕ್ಷರು.—ನಾನು ಮಾನ್ಯ ಸದಸ್ಯರಿಗೆ ಅವಕಾಶ ಕೊಡುವುದಿಲ್ಲ. ನೋಟೀಸ್ ಕೊಟ್ಟರೆ ವಿಚಾರ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಡಬೇಕು.* * *

Mr. SPEAKER.—I do not permit the hon. member ; he will please resume his seat. Will you resume your seat ?

---

* * * Matter not recorded as ordered by the Chair.

Sri VATAL NAGARAJ.—No.

Mr. SPEAKER.—I direct the hon. Member Sri Vatal Nagaraj to withdraw from the House and not participate in the proceedings of the House for the the day.

ಶ್ರೀ ವಾಟಾಳ್ ನಾಗರಾಜ್.—ನಾನು ಹೋಗುವುದಿಲ್ಲ. ತಾವು ಏನು ಬೇಕಾದರೂ ಮಾಡಿಕೊಳ್ಳಬಹುದು.

Mr. SPEAKER.—I name the member for suspension from the service of the House.

Motion to suspend the Services of Sri Vatal Nagaraj from the Session

Sri K. PUTTASWAMY.—I move :

> "That the Hon. Member Sri Vatal Nagaraj be suspended from the service of the House for the rest of the current session."

(Several members stood up)

Mr. SPEAKER.—Unless he withdraws, I shall put the motion to the vote of the House.

(Sri Vatal Nagaraj did not withdraw)

Sri S. GOPALA GOWDA.—I rise to a point of order. ಕ್ರಿಯಾಲೋಪ ಏನೆಂದರೆ ಈ ವಿಷಯು ಅಜೆಂಡಾದಲ್ಲಿ ಇದೆಯೋ, ಎಂದು ನಾನು ಮುಖ್ಯ ಮಂತ್ರಿಗಳನ್ನು ಕೇಳುತ್ತೇನೆ...... ..

Mr. SPEAKER.—I have directed the hon. Member to withdraw. He has refused to withdraw. Then I had to name him. Even now if he withdraws the Hon. Minister may not press his motion. Sri Gopala Gowda may ask him whether he is going to withdraw or not.

ಶ್ರೀ ಎಸ್. ಗೋಪಾಲಗೌಡ.—ನಾನು ತಮ್ಮ ಪರವಾಗಿ ನಾನು ವಾಟಾಳ್ ನಾಗರಾಜರವರನ್ನು ಕೇಳುತ್ತೇನೆ. ತಾವು ಹೊರಗೆ ಹೋಗಬೇಕು ಎಂದರೆ ಹೋಗುತ್ತೇವೆ. ಈಗ ತಮ್ಮಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ........

Mr. SPEAKER.—I do not want permit him to speak. Even now if he withdraws I think the Hon. Minister may not press his motion.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ನಾನು ಭಾಷಣ ಮಾಡುವುದಿಲ್ಲ. ಮಾನ್ಯ ಮಂತ್ರಿಗಳು ತಮ್ಮ ಒಂದು ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಮಾತನಾಡುವುದಕ್ಕೆ ಎರಡು ನಿಮಿಷ ಅವಕಾಶ ಕೊಡಿ.

Mr. SPEAKER.—I am sorry I cannot agree to it. I have made it quite clear. If the Hon. Member gives notice under proper rule I shall certainly consider it. At this stage I cannot permit him to make a statement.

(Sri Vatal Nagaraj did not withdraw)

Mr. SPEAKER.—The question is :

"That the hon. Member Sri Vatal Nagaraj be suspended from the service of the House for the rest of the current session."

The motion was adopted.

(Several members stood up)

Mr. SPEAKER.—I adjourn the House for 15 minutes.

The House rose at Fifty Minutes past Two of the Clock and reassembled at Ten Minutes past Three of the Clock.

[MR. DEPUTY SPEAKER in the Chair]

Calling Attention to matters of urgent Public Importance :

re : Setting Fire to Ragi Heaps and other Farm Produce in Kunigal Taluk

Sri G. T. GOVINDA REDDY (Madhugiri).—Sir, I call the attention of the Hon. Chief Minister to setting fire to ragi heaps and other farm produce belonging to families of Kuthurahally village, Kasaba Hobli, Kunigal Taluk.

† **Sri VEERENDRA PATIL** (Chief Minister).—On 6th December 1969, Sri Venkata Revanaiah, V. P. Chairman, Sri Hombale Thimmiah and Sri Nadakeraiah of Kutharahally complained to the Kunigal Police about burning of ragi haystack on 5th December 1969 by one Balegowda and others causing damage to the tune of Rs. 11,000. Four cases were registered under section 435 I.P.C. against 8 persons including Sri Balegowda. They were arrested and produced before the First Class Magistrate, Tumkur on 7th December 1969 for being remanded to judicial custody. As 7th December 1969 was a Sunday, the Magistrate returned the accused with a direction to enlarge them on bail as offence under section 435 I.P.C. was bailable. They were therefore enlarged on bail.

On 29th December 1969, the V. P. Chairman again presented a complaint that in the midnight Sri Rangaiah and Sri Thimmarayappa, set fire to his ragi haystack causing loss of about Rs. 800. A case was registered under section 435 I. P. C. and the accused arrested and remanded to judicial custody. However, the Court enlarged them on bail the same day. All the five cases have been charge-sheeted and taken on file in the Court of the First Class Magistrate, Tumkur.

On 13th January 1970 and 20th January 1970 again the V. P. Chairman and Sri Javaraiah complained to Police regarding another fire incident.

(SRI VEERENDRA PATIL)

In view of these complaints action has been take under section 107 Cr. P. C. also against all the accused. Men have been posted in the village regularly, The Circle Inspector and Police Sub-Inspector are frequently visiting the village and making night halts. The Superintendent of Police also visited the village on 5th January 1970. The parties in the village have been suitably warned and the Police are taking all precautionary measures to ensure peace.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯಾರುದುರ್ಗ).—ಸ್ವಾಮಿ, ಕುದೇರಹಳ್ಳಿ ಗ್ರಾಮದಲ್ಲಿ ಪೋಲೀಸ್ ಪಟೇಲರು ಒಂದು ರಿಪೋರ್ಟ್ ಕಳುಹಿಸಿದ್ದಾರೆ. ಆ ರಿಪೋರ್ಟಿನಲ್ಲಿ ಯಾರ ಯಾರ ಮೇಲೆ ಅನುಮಾನ ಇದೆಯೋ ಅಂಥವರ ಹೆಸರನ್ನು ಸೇರಿಸಿದ್ದಾರೆ. ಆದರೂ ಕೂಡ ಯಾರ ಮೇಲೆ ಅನುಮಾನ ಇದೆಯೋ ಅಂಥವರನ್ನು ವಿಚಾರಣೆ ಮಾಡುವುದಕ್ಕೆ ಅವಕಾಶವಾಗಿಲ್ಲ.

ಎರಡನೆಯದು ಅಲ್ಲಿ ಅಧಿಕಾರಿಗಳು ಯಾರು ತಪ್ಪಿತಸ್ಥರು ಇದ್ದಾರೆಯೋ ಅವರನ್ನು ತನಿಖೆ ಮಾಡಿ ಹೆಚ್ಚು ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಅಲ್ಲಿರತಕ್ಕ ಸಬ್ ಇನ್‌ಸ್ಪೆಕ್ಟರು, ಇನ್‌ಸ್ಪೆಕ್ಟರು, ಮತ್ತು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿನ್‌ಟೆಂಡೆಂಟರು ಅಲ್ಲಿ ಸ್ಥಳಕ್ಕೆ ಹೋಗಿ ಅಜಮಾಯಿಷಿ ಮಾಡಿ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವನ್ನು ಕೊಡದೆ ನಮ್ಮ ತಾಲ್ಲೂಕಿನಿಂದ ಬಂದಿರತಕ್ಕ ಉಪ ಮಂತ್ರಿಗಳು ಪೋಲೀಸಿನವರ ಕೆಲಸಕಾರ್ಯಗಳಲ್ಲಿ ಕೈ ಹಾಕಿ ಅಲ್ಲಿರತಕ್ಕ ಅಲ್ಪಸಂಖ್ಯಾತರ ಊರಿನಲ್ಲಿ ಭಯವನ್ನುಂಟುಮಾಡಿ ನಿರಪರಾಧಿಗಳ ಮೇಲೆ ಕ್ರಮತೆಗೆದುಕೊಳ್ಳಬೇಕೆಂದು ಪೋಲೀಸಿನವರನ್ನು ಒತ್ತಾಯ ಮಾಡುತ್ತಿದ್ದಾರೆ. ಅನೇಕ ಸಾವಿರ ರೂಪಾಯಿಗಳ ಮಾಲು ಸುಟ್ಟು ಹೋಗಿದೆ. ಅಪರಾಧಿಗಳು ಯಾರು ಎಂಬುದನ್ನು ಕಂಡುಹಿಡಿಯುವುದಕ್ಕೆ ಅವಕಾಶವಾಗಿಲ್ಲ. ಇದನೆಲ್ಲಾ ಮಾನ್ಯ ಮುಖ್ಯಮಂತ್ರಿಗಳು ಪೂರ್ಣವಾಗಿ ವಿಚಾರಣೆ ಮಾಡಬೇಕು. ಆ ಸ್ಥಳದಲ್ಲಿ ನಿರಪರಾಧಿಗಳಾಗಿರುವವರು ಒಂದು ಮನವಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ಮನವಿಯ ಮೇಲೆ ಸಿ. ಐ. ಡಿಗಳನ್ನು ಕಳುಹಿಸಿ ತನಿಖೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಅವರ ಕ್ಷೇತ್ರದ ಊರಿನಲ್ಲಿರುವವರು ತಮಗೆ ವಿರುದ್ಧವಾಗಿ ವೋಟು ಕೊಟ್ಟರು ಎಂದು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಮಾನ್ಯ ಉಪಮಂತ್ರಿಗಳು ಪೋಲೀಸಿನವರನ್ನು ಒತ್ತಾಯ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಿ ನ್ಯಾಯವನ್ನು ದೊರಕಿಸಿಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಈ ಮೂಲಕ ಸೂಚನೆ ಮಾಡುತ್ತೇನೆ.

ಶ್ರೀ ಎಂ. ಎನ್. ರಾಮಣ್ಣ.—ಪೋಲೀಸ್ ಪಟೇಲರು ರಾಜಕೀಯ ಮಾಡಿ ಅಲ್ಲಿಯ ಕೆಲವು ನಿರಪರಾಧಿಗಳ ಹೆಸರನ್ನು ಬರೆದು ಅವರಿಗೆ ಶಿಕ್ಷೆಯನ್ನು ವಿಧಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಪೋಲೀಸ್ ಪಾಟೀಲರ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೀರಾ ? ಅಲ್ಲಿ ನಿರಪರಾಧಿ ಜನಗಳಿಗೆ ಒಂದು ರಕ್ಷಣೆ ಕೊಡುವ ವ್ಯವಸ್ಥೆ ಮಾಡುತ್ತೀರಾ ?

Mr. DEPUTY SPEAKER.—The House will adjourn for 10 Minutes as there is electricity failure.

The House rose at Twenty Minutes past Three of the Clock and reassembled at Forty Minustes past Three of the Clock.

[MR. DEPUTY SPEAKER in the Chair]

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಉಪಾಧ್ಯಕ್ಷರೇ, ಶ್ರೀಮಾನ್ ಬಿ. ಎನ್. ರಾಮೇಗೌಡ. ಶ್ರೀಮಾನ್ ಗೋವಿಂದ ರೆಡ್ಡಿ, ಶ್ರೀಮಾನ್ ಗಂಗಣ್ಣ, ಶ್ರೀಮಾನ್ ಹುಚ್ಚಮಾಸ್ತಿ ಗೌಡರು, ಶ್ರೀಮಾನ್ ಎಂ. ಎನ್. ರಾಮಣ್ಣ ಮತ್ತು ಶ್ರೀಮಾನ್ ಚಿಕ್ಕೇಗೌಡರು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದಾರೆ. ನಾನು ಸ್ಟೇಟ್‌ಮೆಂಟ್ ಮಾಡಿದೆ. ಅದರ ಮೇಲೆ ಪ್ರಶ್ನೆಗಳನ್ನು ಹಾಕಿದ್ದಾರೆ. ಕಾಲ್ ಅಟೆನ್‌ಷನ್ ಸ್ಟೇಟ್‌ಮೆಂಟಿನಲ್ಲಿ ನಾನು ಕ್ಲೀಯರ್ ಆಗಿ ಹೇಳಿದ್ದೇನೆ. ಆ ಐದು ಕೇಸುಗಳಿಗೆ ಚಾರ್ಜ್‌ಶೀಟ್ ಆಗಿ ಅವು ಕೋರ್ಟಿನ ಮುಂದೆ ಇವೆ. ಅವು ಸಬ್ ಜುಡಿಸ್ ಆದುದರಿಂದ ಅವು

ಗಳ ಫಾಕ್ಟ್ಸ್ ಬಗ್ಗೆ ನಾನು ಏನೂ ಹೇಳುವ ಹಾಗೆ ಇಲ್ಲ, ಮತ್ತು ಹೇಳುವುದು ಸಮಂಜಸವೂ ಅಲ್ಲ. ಶ್ರೀಮಾನ್ ಹುಚ್ಚಮಾಸ್ತಿಗೌಡರು ಯಾರೋ ಪೋಲೀಸಿನವರು ಯಾರಯಾರದೋ ಹೆಸರುಗಳನ್ನು ಬರೆದಿದ್ದಾರೆ ಎಂಬ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಮತ್ತು ನಮ್ಮ ಒಬ್ಬ ಡೆಪ್ಯುಟಿ ಮಂತ್ರಿಗಳು ಹಳ್ಳಿಯಲ್ಲಿ ಜನಗಳ ಮೇಲೆ ಯಾವುದೋ ಒಂದು ಎಲೆಕ್ಷನ್ ಸ್ಟಂಟ್ ಎಂದು ಈ ರೀತಿ ಮಾಡಿಸುತ್ತಾ ಇದ್ದಾರೆ ಎನ್ನತಕ್ಕಂಥ ವಿಚಾರವನ್ನು ಹೇಳಿದರು. ಈ ವಿಚಾರ ಸಬ್‌ಜುಡಿಸ್ ಆದುದರಿಂದ ನಾನು ಮೊದಲೇ ಹೇಳಿರುವಂತೆ ಏನೂ ಹೇಳುವ ಹಾಗಿಲ್ಲ. ಇಷ್ಟು ಮಾತ್ರ ಹೇಳಬಲ್ಲೆ. ಪಾರ್ಟಿ ಫ್ರಿಕ್ಷನ್, ರೈವಲ್‌ರೀಸ್ ಬಹಳ ಇವೆ. ಮತ್ತು ಈಗ ಯಾರು ಯಾರು ಗುಡಿಸಲುಗಳಿಗೆ ಮತ್ತು ಹೇ ಸ್ಟ್ಯಾಕ್‌ಗಳಿಗೆ ಬೆಂಕಿ ಹಚ್ಚಿ ಅನಾಹುತ ಮಾಡಿದ್ದಾರೋ ಅವರನ್ನು ಬಂಧಿಸಿ ಅವರ ಮೇಲೆ ಕೇಸ್ ರಿಜಿಸ್ಟರ್ ಆಗಿದೆ. ಇಂತಹವರೇ ಮಾಡಿದ್ದಾರೆಂದು ಇನ್‌ವೆಸ್ಟಿಗೇಟ್ ಆಗಿ ಅವರ ಮೇಲೆ ಚಾರ್ಜ್ ಷೀಟ್ ಹಾಕಲಾಗಿದೆ. ಅದು ಕೋರ್ಟಿನಲ್ಲಿರುವುದರಿಂದ ಈವೊತ್ತು ಈ ಫ್ಯಾಕ್ಟ್ಸ್ ಬಗ್ಗೆ ಏನೂ ಹೇಳುವುದಕ್ಕಾಗುವುದಿಲ್ಲ. ನಮ್ಮ ಡೆಪ್ಯುಟಿ ಮಿನಿಷ್ಟರ್ ಮೇಲೆ ಶ್ರೀಮಾನ್ ಹುಚ್ಚಮಾಸ್ತಿ ಗೌಡರು ಅವರು ಹಸ್ತಕ್ಷೇಪ ಮಾಡಿದ್ದಾರೆ ಎಂದು ಹೇಳಿದ್ದಾರೆ. ನಾನು ಅವನ್ನು ಒಪ್ಪುವುದಕ್ಕಾಗುವುದಿಲ್ಲ. ಹಳ್ಳಿಗಳಲ್ಲಿ ಇನ್ನು ಏನು ಅನಾಹುತಗಳಾಗದಂತೆ ನೋಡಿಕೊಳ್ಳಲು ಈಗಾಗಲೇ ಮೇಲಿಂದಮೇಲೆ ಪೋಲೀಸ್ ಡಿಪಾರ್ಟ್‌ಮೆಂಟಿನಿಂದ ಎಸ್. ಪಿ., ಡಿ. ಎಸ್. ಪಿ. ಸರ್ಕಲ್ ಇನ್ಸ್ಪೆಕ್ಟರ್ ಅವರು ಹೋಗುತ್ತಿದ್ದಾರೆ ಮತ್ತು 107ನೇ ಕಲಂ ಪ್ರಕಾರ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಏರ್ಪಾಡುಮಾಡಿದ್ದಾರೆ. ಅದಕ್ಕಾಗಿ ಸರಕಾರವಾಗಲಿ, ನನ್ನ ಮಂತ್ರಿಮಂಡಲದಲ್ಲಿರುವ ಯಾವುದೇ ಸದಸ್ಯರಾಗಲಿ, ಯಾರದೂ ಹಸ್ತಕ್ಷೇಪ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಂ. ಎನ್. ರಾಮಣ್ಣ.—ಸರ್ಕಾರದವರು ಸಾವಿರಾರು ರೂಪಾಯಿಗಳು ನಷ್ಟವಾಗಿದೆ ಎಂದು ಹೇಳಿದ್ದಾರೆ. ನಷ್ಟ ಆದವರಿಗೆ ಏನಾದರೂ ಕಾಂಪನ್ಸೇಷನ್ ಕೊಡಲಾಗಿದೆಯೆ?

ಶ್ರೀ ವೀರೇಂದ್ರ ಪಾಟೀಲ್.—ಯಾರು ಬೆಂಕಿ ಹಚ್ಚಿದರು, ಯಾರು ಅನಾಹುತಕ್ಕೆ ಕಾರಣರು ಎಂಬ ಪ್ರಶ್ನೆಗಳು ಕೋರ್ಟಿನ ಮುಂದೆ ಇವೆ. ಅವು ಕೋರ್ಟಿನಲ್ಲಿರುವುದದರಿಂದ ಈ ದಿಶೆಯಲ್ಲಿ ನಾನು ಏನೂ ಹೇಳುವ ಪರಿಸ್ಥಿತಿಯಲ್ಲಿ ಇಲ್ಲ. ಕಾಂಪನ್‌ಸೇಷನ್ ಕೊಡಬೇಕೇ, ಹೇಗೆ ಕೊಡಬೇಕು, ಯಾತಕ್ಕೆ ಕೊಡಬೇಕು, ಯಾವ ಬಾಬಿನಿಂದ ಕೊಡಬೇಕು ಎಂಬ ಪ್ರಶ್ನೆ ಕೋರ್ಟಿನಲ್ಲಿ ನಿರ್ಣಯವಾದ ಮೇಲೆ ಉದ್ಭವಿಸುತ್ತದೆ.

re : incidents on 1st February 1970 in some parts of Bangalore City

ಶ್ರೀ ಎಸ್. ಆರ್. ಷಣ್ಮುಗಂ (ಕೆ. ಜಿ. ಎಫ್.).—ತಾ. 1-2-1970 ರಲ್ಲಿ ಬೆಂಗಳೂರು-ಸಿಟಿಯ ಕೆಲವು ಭಾಗಗಳಲ್ಲಿ ಈ ಕನ್ನಡ ಚಳುವಳಿಗಾರರು ಗುಡಿಸಲುಗಳಿಗೆ ಬೆಂಕಿ ಹಚ್ಚುವುದು, ಅಂಗಡಿಗಳಿಗೆ ಮತ್ತು ಬಸ್ಸುಗಳಿಗೆ ಕಲ್ಲು ಹೊಡೆಯುವುದು ಮುಂತಾದ ಕೆಟ್ಟ ಚಟುವಟಿಕೆಗಳನ್ನು ಮಾಡಿರುವುದರಿಂದ ತಮಿಳರಿಗೆ ಬಹಳ ಅನ್ಯಾಯವಾಗಿ ಗಾಬರಿ ಆಗಿದೆ. ಆ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ತಕ್ಕ ಹೇಳಿಕೆ ಕೊಡಬೇಕು.

† **Sri VEERENDRA PATIL.**—Sir, to protest against the arrest of Tamil Nadu Police, of Sri Vatal Nagaraj, M.L.A., at Talavadi, Coimbatore District, various Kannada Associations in the City held demonstrations and took out processions on 1st February 1970.

On the morning of 1st February 1970 about 1,000 persons went in a procession from Mysore Bank Circle with an effigy of the Chief Minister of Tamil Nadu. As they proceeded on the Avenue Road and Narasimharaja Road some of the processionists pulled out calendars with photographs of Tamil Nadu leaders and tore them to pieeces. City and Naaz Cinema Theatres were pelted at. An attempt was made to pull down a banner near a petrol bunk. Wherever the crowd showed a tendency to indulge in mischief, they were chased away by the Police. Finally, the procession reached Shivaji Nagar Stadium at about 12 noon and set fire to

(SRI VEERENDRA PATIL)

the effigy and started dispersing. But few urchins among them pulled out a cinema poster of Sri M. G. Ramachandran and set fire to the same. The Police party chased away the crowd there also.

Another batch began to assault a sugarcane vendor near the Secretariat Circle and a few of them got into the Press Canteen and tilted a pan of hot oil. Two persons got burn injuries as a result and were admitted to the hospital. The Police rushed to the spot and prevented further trouble.

At 2-00 p.m. a few persons collected near Geetha Talkies and began to pelt stones at the Tamil posters. The crowd was cleared. In Binnypet some persons set fire to a portrait of the Tamil Nadu Chief Minister and others. A portrait of Sri Vatal Nagaraj was set fire to, in retaliation by some others. When the crowd was chased, some of them pelted stones at Anjan Theatre and broke a few panes.

At about 4-00 p.m. nearly 2,000 boys assembled near Mysore Bank Circle and went in a procession to some of the areas in the neighbourhood and returned to the Mysore Bank Circle. On the way, Super Talkies and a few Tamil Cinema posters were pelted at. The miscreants were cleared from the place. Some of them also attempted to pull down baskets belonging to Tamilian coolies near the Market when they were dispersed. A crowd went near Sangam Theatre and pelted stones. Another group went to the Subhashnagar Bus Stand and started pelting stones at a bus of Tamil Nadu State. The police rushed to the place and chased away the crowd. Some of them went to the Railway track to obstruct the movement of trains and they were dispersed. Some boys set fire to two huts in the Railway Station compound. The Police and the Fire Birgade put out the fire and chased away the crowd. A few boys also set fire to the D.M.K. Flag near the Bus Stand. Some of the persons in the crowd rushed towards Okalipuram and set fire to two huts belonging to Tamilians. The Police and Fire Brigade put out the fire and averted the further trouble. Stones were also pelted at Vijayalakshmi Talkies in Chickpet and stray cases of stone throwing near the Railway Overbridge, Kempe Gowda Road, Balepet and Chowdeswari Temple Street were also reported. In the evening, some miscreants also resorted to throwing stones at moving cars on Kempe Gowda Road and in Gandhinagar. Eight cases under Section 143 I.P.C. etc., and two cases under Section 435 IPC have been registered and so far 10 persons have been arrested.

It is unfortunate that unsocial elements took law into their own hands and took advantage of the situation in order to create panic. I strongly deprecate the action of the miscreants. However, it will be realised that but for the timely action of the Police in all the affected areas, the situation would have gone completely out of control and considerable damage would have been caused to person and property. Recrudescence of trouble will be firmly dealt

with. All possible protection has been and is being given to all residents of the State irrespective of whether they belong to the majority language group or the Minority groups.

Just now I have received a message that some urchins near the Under Bridge, City Railway Station, and Seshadripuram, pelted stones and set fire to a hut near the Railway Station. Our Police Officers are on the spot handling the situation. This is the latest position at 3-15. P. M. today.

Statement of the Chief Minister *re*: the Arrest of Sri Vatal Nagaraj by Tamil Nadu Police

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಅಧ್ಯಕ್ಷರೇ, ಶ್ರೀಮಾನ್ ವಾಟಾಳ್ ನಾಗರಾಜರವರು ತಮಿಳುನಾಡಿನ ಪ್ರದೇಶದಲ್ಲಿ ಹೋಗಿ ಅಲ್ಲಿ ಇರುವಂಥ ಕಾನೂನನ್ನು ಉಲ್ಲಂಘನೆ ಮಾಡಿರುವುದರಿಂದ ಅವರನ್ನು ಬಂಧಿಸಲಾಯಿತು. ಅದರ ಮೇಲೆ ಈ ಮಾನ್ಯಸಭೆಯಲ್ಲಿ ಪ್ರಶ್ನೋತ್ತರಕಾಲವಾದ ಮೇಲೆ ಬಹುಶಃ ಎರಡು ಮೂರು ದಿವಸಗಳಿಂದ ಮೇಲಿಂದ ಮೇಲೆ ಇದರ ಮೇಲೆ ಚರ್ಚೆ ನಡೆಯುತ್ತಾ ಇದೆ. ಅವರನ್ನು ಬಂಧಿಸಿದ ಮಾರನೇ ದಿವಸ ಇಲ್ಲಿ ಕೆಲವು ಮಾನ್ಯಸದಸ್ಯರ ಮನಸ್ಸಿನಲ್ಲಿ ಒಂದು ಇಂಪ್ರೆಷನ್ ಇರಬಹುದು. ಅದೇನೆಂದರೆ, ತಮಿಳುನಾಡಿನ ಪೋಲೀಸಿನವರು ಮೈಸೂರಿನ ಜೂರಿಸ್‌ಡಿಕ್ಷನ್‌ನೊಳಗೆ ಬಂದು ಬಂಧಿಸಿದರು ಮತ್ತು ತಮಿಳುನಾಡಿನ ಜೂರಿಸ್‌ಡಿಕ್ಷನ್‌ಗೆ ಅವರು ಹೋಗದೇ ಇದ್ದರೂ ಅವರನ್ನು ಬಡಿದು ಒಯ್ದು ಹೆರಾಸ್‌ಮೆಂಟ್ ಮಾಡಿದ್ದಾರೆ ಎಂಬ ಇಂಪ್ರೆಷನ್ ಇದ್ದಂತೆ ಕಾಣುತ್ತದೆ. ಇದರಲ್ಲಿ ಅರ್ಥ ಏನೂ ಇಲ್ಲ. ಸುಮಾರು 200–300 ಜನ ಅಥವಾ ಬಹಳಷ್ಟು ಜನ ಅವರ ಜೊತೆಯಲ್ಲಿ ಹೋಗಿದ್ದರು. ಚಾಮರಾಜ ನಗರದಿಂದ ತಾಳವಾಡಿಗೆ ಬಹುಶಃ 12–13 ಮೈಲಿ ಆಗುತ್ತದೆ. 9ನೇ ಮೈಲಿಯಿಂದ ಡೀವಿಯೇಷನ್ ರೋಡ್ ಬರುತ್ತದೆ ಅಲ್ಲಿಂದ ಒಂದೂವರೆ ಮೈಲಿಯಲ್ಲಿ ನಮ್ಮ ಬಾರ್ಡರ್ ಮತ್ತು ತಮಿಳುನಾಡು ಬಾರ್ಡರ್ ಸೇರುತ್ತದೆ. ತಮಿಳುನಾಡು ಬಾರ್ಡರ್‌ನಲ್ಲಿ ಒಂದೂವರೆ ಫರ್ಲಾಂಗ್ ಒಳಗಡೆ ಅವರೆಲ್ಲರೂ ಹೋಗಿದ್ದರು. ಅವರು ಹೋದ ಮೇಲೆ 144, 145 ಸೆಕ್ಷನ್ ಇದೆ, ಹೊರಟು ಹೋಗಿ ಎಂದು ಅನೇಕ ರೀತಿಯಿಂದ ಹೇಳಿದ್ದಾರೆ. ಆದರೆ ಅದನ್ನು ಕೇಳಲಾರದಂತೆ ಘೋಷಣೆ ಮಾಡಿಕೊಂಡು, ಮತ್ತೊಂದು ಮಾಡಿಕೊಂಡು ಯಾರ್ಯಾರು ಹೋಗಿದ್ದರೋ ಅವರು ಕಲ್ಲು ಹೊಡೆಯುವುದಕ್ಕೆ ಪ್ರಾರಂಭ ಮಾಡಿದರು. ಅಲ್ಲಿನ ಕೆಲವು ಆಫೀಸರುಗಳಿಗೂ ಜಖಂ ಆಗಿದೆ. ಅದರ ಬಗ್ಗೆ ಇವತ್ತು ಹೇಳಬೇಕಾಗಿಲ್ಲ. ಏಕೆಂದರೆ ಈ ಘಟನೆ ಆಗಿದ್ದು ತಮಿಳುನಾಡು ಏರಿಯಾದಲ್ಲಿ ಆಗಿದೆಯೇ ಹೊರತು ಮೈಸೂರು ಏರಿಯಾದಲ್ಲಿ ಆಗಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ನಮ್ಮ ಅಧಿಕಾರಿಗಳೂ ಕೂಡ ಈ ಅಜಿಟೇಟರ್ಸ್ ಜೊತೆಯಲ್ಲಿ ನಮ್ಮ ಬಾರ್ಡರ್‌ವರೆಗೂ ಕೂಡ ಹೋಗಿದ್ದರು. ಏಕೆಂದರೆ ಅಲ್ಲಿ ಇಲ್ಲಿ ಏನಾದರೂ ಮಾಡಿಯಾರು ಅನ್ನುವ ದೃಷ್ಟಿಯಿಂದ. ಅದನ್ನು ನೋಡುವುದಕ್ಕೆ ಕಾವಲು ಇದ್ದರು. ಆ ರೀತಿಯಿಂದ ಈ ಘಟನೆ ಏನು ಆಗಿದೆ ಇದು ತಮಿಳುನಾಡಿನ ಏರಿಯಾದಲ್ಲಿ ಆಗಿದೆಯೇ ಹೊರತು ಮೈಸೂರು ಏರಿಯಾದಲ್ಲಿ ಆಗಿಲ್ಲ. ಇದು ಆದಮೇಲೆ ಕಳೆದ ಎರಡು ದಿವಸಗಳಿಂದ ಬೆಂಗಳೂರು ನಗರದಲ್ಲಿ ಆದಂಥ ಘಟನೆಗಳು ಬಹುಶಃ ಯಾರಿಗೂ ಅದರಲ್ಲೂ ಕನ್ನಡಿಗರಿಗೆ ಕೀರ್ತಿ ತರುವಂತಹ ಘಟನೆ ಆಗಿಲ್ಲ ಎಂಬ ಮಾತನ್ನು ಬಹಳ ವಿಷಾದದಿಂದ ಹೇಳುತ್ತೇನೆ. ಬೆಂಗಳೂರಿನಲ್ಲಿ ತಮಗೆಲ್ಲರಿಗೂ ಗೊತ್ತಿದೆ, ಇದು ಕಾಸ್ಮಾಪಾಲಿಟನ್ ಸಿಟಿ. ಆ ಲೆಕ್ಕದಿಂದ ಬೆಂಗಳೂರು ಸಿಟಿ ಪಾಪ್ಯುಲೇಷನ್ ನೋಡಿದರೆ ಇಲ್ಲಿ ತಮಿಳು ಪಾಪ್ಯುಲೇಷನ್ ಸಾಕಾದಷ್ಟು ಇದೆ. ಆ ದೃಷ್ಟಿಯಿಂದ ಈ ತರಹದ ಘಟನೆಗಳು ಇಲ್ಲಿ ಆಗಬಾರದಾಗಿತ್ತು. ಇದು ಬೆಂಗಳೂರು ನಗರಕ್ಕೆ ಒಂದು ಕುಂದು ಬಂದಂತಾಗಿದೆ. ನಗರದ ಕೀರ್ತಿಗೆ ಕುಂದು ಬಂದಂತೆ ಆಗಿದೆಯೆಂದು ಬಹಳ ವಿಷಾದದಿಂದ ಹೇಳುತ್ತೇನೆ. ಕಳೆದ ಎರಡು ದಿವಸಗಳಲ್ಲಿ ಏನು ಘಟನೆ ಆಗಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಒಂದು ಮಾತನ್ನು ಮರೆತೆ. ಯಾವಾಗ ಅವರನ್ನು ಬಂಧಿಸಿದರೋ ತಮಿಳುನಾಡು ಸರ್ಕಾರದವರು ಅದೇ ದಿವಸ ಅಥವಾ ಮಾರನೇ ದಿವಸ ನಾನು ಕರುಣಾನಿಧಿಯವರಿಗೆ ಕಾಗದ ಬರೆದು ಈ ರೀತಿಯಿಂದ ಬಂಧಿಸಿದ್ದಾರೆ, ಇದೇನೂ ಅಂತಹ ದೊಡ್ಡ ಅಫೆನ್ಸ್ ಅಲ್ಲ ಅವರಿಗೆ ಯಾವ

(ಶ್ರೀ ವೀರೇಂದ್ರ ಪಾಟೀಲ್)

ರೀತಿಯಿಂದ ಹ್ಯರ್ರ್ಯಾಸ್‌ಮೆಂಟ್ ಆಗದಂತೆ ನೋಡಿಕೊಳ್ಳಬೇಕೆಂದು ಹೇಳಿದೆ. ಮಾನ್ಯ ಸದಸ್ಯರು ಹೇಳುತ್ತಾ ಇದ್ದರು ಹಾಗೆ ಮಾಡುತ್ತಾರೆ ಹೀಗೆ ಮಾಡುತ್ತಾರೆ ಚೆನ್ನಾಗಿ ಹೊಡೆಯುತ್ತಾರೆ ಅಂತ. ಅದನ್ನು ಕೂಡ ಮುಖ್ಯಮಂತ್ರಿಯಾಗಿ ನಾನು ಅವರಿಗೆ ತಿಳಿಸಿ, ಆ ರೀತಿಯಿಂದ ಏನಾದರೂ ಮಾಡಿದರೆ ಬಹುಶಃ ಅವರ ರಿಪರ್ಕಷನ್ಸ್, ರೀ ಆಕ್ಷನ್ ಇಲ್ಲಿ ಆಗುತ್ತದೆ ಆದ್ದರಿಂದ ಹ್ಯಾರ್ರ್ಯಾಸ್‌ಮೆಂಟ್ ಆಗಲಾರದಂತೆ ನೋಡಿಕೊಳ್ಳಿ. ಇದು ಮೈನರ್ ಅಫೆನ್ಸ್, 15 ದಿವಸದವರೆಗೂ ಜೈಲಿನಲ್ಲಿ ಇಟ್ಟುಕೊಳ್ಳುವ ಪ್ರಮೇಯ ಇಲ್ಲ ಎಂದು ಹೇಳಿದೆ. ಅದರ ಮೇಲೆ ಒಂದು ಟೆಲಿಗ್ರಾಂ ಬಂದಿದೆ. ನಿಮ್ಮ ಪತ್ರ ಮುಟ್ಟಿತು, ಅವರನ್ನು ಬಿಡುಗಡೆ ಮಾಡಿದ್ದೇವೆ. ಕಲೆಕ್ಟರು ಇಲ್ಲಿಂದ ಒಂದು ಕಾರು ಕೊಟ್ಟು ಅವರನ್ನು ಕಳುಹಿಸಿದ್ದಾರೆ ಎಂದು ಹೇಳುವುದಲ್ಲದೆ ನಿಮ್ಮ ಬೆಂಗಳೂರಿನಲ್ಲಿ ಈ ರೀತಿ ಘಟನೆಯಾಗುತ್ತಾ ಇರುವುದು ದುರ್ದೈವ. ಏಕೆಂದರೆ ಅನೇಕ ವರ್ಷಗಳಿಂದ ನಿಮ್ಮಲ್ಲಿರುವಂತಹ ಕನ್ನಡಿಗರು ಮತ್ತು ತಮಿಳರೂ ಸಹ ಬಹಳ ಸಂಯಮದಿಂದ ಜೀವನ ಮಾಡುತ್ತಾ ಇದ್ದಾರೆ. ಆ ರೀತಿ ಸಂಯಮದಿಂದ ಸೇರಿ ಕೆಲಸ ಮಾಡದಿದ್ದರೆ ಧಕ್ಕೆ ಬರುತ್ತದೆ ಆದ್ದರಿಂದ ಬೆಂಗಳೂರಿನಲ್ಲಾಗಲಿ, ಎರಡನೆ ಭಾಗದಲ್ಲಾಗಲಿ, ತಮಿಳರ ಹಿತರಕ್ಷಣೆಯಾಗಬೇಕೆಂದು ಟೆಲಿಗ್ರಾಂ ಮಾಡಿದ್ದಾರೆ, ಕನ್‌ಫರ್ಮೇಷನ್ ಲೆಟರ್ ಬರುತ್ತಾ ಇರಬಹುದು. ಈ ವಿಚಾರಗಳನ್ನು ಮುಖ್ಯಮಂತ್ರಿಯಾಗಿ ಹೇಳಬೇಕಾದರೆ ನನ್ನ ಧೋರಣೆ ಏನೆಂದರೆ ಮೈಸೂರಿನಲ್ಲಿರುವಂತಹ ಎರಡೂವರೆ ಕೋಟಿ ಜನರೆಲ್ಲರೂ ಮೈಸೂರಿಯನ್ಸ್, ಇದರಲ್ಲಿ ಕೆಲವರು ತಮಿಳಿಯನ್ಸ್ ಇರಬಹುದು, ಕೆಲವರು ಮಹಾರಾಷ್ಟ್ರಿಯನ್ಸ್ ಇರಬಹುದು. ಅಂದಮಾತ್ರಕ್ಕೆ ಅವರನ್ನು ಮೈಸೂರಿಯನ್ಸ್ ಅಲ್ಲ ಅಂತ ಹೇಳುವ ಹಾಗಿಲ್ಲ. ತಮಿಳಿಯನ್ಸ್ ಆಗಿದ್ದರೂ ಕೂಡ ಅವರು ಮೈಸೂರಿಯನ್ಸ್. ಅವರ ಮಾತೃಭಾಷೆ ಕನ್ನಡ ಅಲ್ಲ, ಆದ್ದರಿಂದ ಯಾರ ಮಾತೃಭಾಷೆ ಕನ್ನಡವೋ ಅವರಿಗೆ ಮಾತ್ರ ಇಲ್ಲಿ ಸ್ಥಾನ ಇದೆ, ಬಾಕಿಯವರಿಗೆ ಇಲ್ಲ ಅಂತ ಅನ್ನುವ ಧೋರಣೆ ನನ್ನದಲ್ಲ. ಆದ್ದರಿಂದ ಮೈಸೂರಿನಲ್ಲಿ ಯಾರು ಇದ್ದಾರೆ, ಅವರು ತಮಿಳರಾಗಲಿ, ಮಹಾರಾಷ್ಟ್ರದವರಾಗಲಿ, ಅವರೆಲ್ಲರೂ ಮೈಸೂರಿಯನ್ಸ್ ಇದ್ದಾರೆ, ಅವರ ಮಾತೃಭಾಷೆಯಾವುದೇ ಇರಲಿ, ಎಲ್ಲರು ಮೈಸೂರಿಯನ್ಸ್ ಎಂಬ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ತಮಿಳಿಯನ್ಸ್ ಬಗ್ಗೆ ಹೇಳಬೇಕಾದರೆ ಇದೀಗ ಹೇಳಿದ ಹಾಗೆ ಬೆಂಗಳೂರು ಸಿಟಿ ಕಾಸ್ಮಾಪಾಲಿಟನ್ ಸಿಟಿ. ಮೈಸೂರಿನಲ್ಲಿ ದಿವಾನರು ತಮಿಳಿಯನ್ ಇದ್ದರು. ಜಡ್ಜಸ್ಸ್ ತಮಿಳಿಯನ್ಸ್ ಇದ್ದರು. ದೊಡ್ಡ ದೊಡ್ಡ ಅಧಿಕಾರಿಗಳು ತಮಿಳಿಯನ್ಸ್ ಇದ್ದರು. ಮೈಸೂರಿನಲ್ಲಿ ಕಟ್ಟಿರುವ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳು ಶರಾವತಿ ಪ್ರಾಜೆಕ್ಟ್ ಆಗಲಿ ಮತ್ತೊಂದು ಪ್ರಾಜೆಕ್ಟ್ ಆಗಲಿ ಅನೇಕ ಜನ ತಮಿಳಿಯನ್ಸ್ ಬಂದು ಕಟ್ಟಿದ್ದಾರೆ. ಅವರು ಕೇವಲ ತಮಿಳು ಮಾತನಾಡುತ್ತಾರೆ ಅದಕ್ಕೆ ಅವರು ಮೈಸೂರಿನವರು ಅಲ್ಲ ಅಂತ ಹೇಳುವುದಕ್ಕಾಗುವುದಿಲ್ಲ. ಮೈಸೂರಿನವರಿಗೆ ಯಾವ ಸ್ಥಾನಮಾನ ಇದೆ, ಅದೇ ಸ್ಥಾನಮಾನ ಎಲ್ಲರಿಗೂ ಇದೆ. ಇದರಲ್ಲಿ ಮೈನಾರಿಟಿ, ಮೆಜಾರಿಟಿ ಅನ್ನುವ ಪ್ರಶ್ನೆ ಇಲ್ಲ, ಯಾರೂ ಮೈನಾರಿಟಿ ಅಲ್ಲ. ಯಾರೂ ಮೆಜಾರಿಟಿ ಅಲ್ಲ. ಎರಡೂವರೆ ಕೋಟಿ ಜನಸಂಖ್ಯೆಗೆ ಇಲ್ಲಿ ಪೂರ್ತಿ ಅಧಿಕಾರ ಇದೆ. ನಮ್ಮ ರಾಜ್ಯದಲ್ಲಿ ಯಾರಿಗೂ ಹೆಚ್ಚಿನ ಅಧಿಕಾರ ಇಲ್ಲ, ಯಾರಿಗೂ ಕಡಮೆಯಾದಂತಹ ಅಧಿಕಾರ ಇಲ್ಲ. ಈಗ ಪ್ರಶ್ನೆ ತಾಳವಾಡಿ ಫಿರ್ಕಾದಲ್ಲಿ ಏನೋ ಆಯಿತು ಅಂತ ಇಲ್ಲಿ ಗಲಾಟೆ ಶುರುವಾಯಿತು. ಒಂದು ವಿಷಯ ಬಹಳ ಕಳಕಳಿಯಿಂದ ಹೇಳುತ್ತೇನೆ. ಯಾವ ಸರ್ಕಾರವೇ ಆಗಲಿ ತನ್ನ ಒಂದು ಏರಿಯಾದಲ್ಲಿ 144-145 ಸೆಕ್ಷನ್ ಜಾರಿಯಲ್ಲಿದೆ. ಅಲ್ಲಿ ಯಾರು ಗುಂಪಾಗಿ ಬರಬಾರದು, ಯಾರಾದರೂ ಬಂದರೆ ಬಂಧಿಸುತ್ತೇವೆ ಅಂತ ಹೇಳಿದಾಗ, ಯಾರು ಕಾನೂನು ಉಲ್ಲಂಘನೆ ಮಾಡುತ್ತಾರೋ ಅವರನ್ನು ಬಂಧಿಸಬೇಕಾಗುತ್ತದೆ. ಬಂಧಿಸದೆ ಮೆರವಣಿಗೆಯಲ್ಲಿ ಹಾರತುರಾಯಿ ಹಾಕಿ ಯಾವ ಸರ್ಕಾರವೂ ಅವರನ್ನು ಕರೆದುಕೊಂಡು ಹೋಗುವುದಿಲ್ಲ. ವಾಟಾಳ್ ನಾಗರಾಜ್ ಅವರನ್ನು ಅಲ್ಲಿ ಬಂಧಿಸಿದ್ದಾರೆ ಅಂತ ಅನ್ನುವುದಕ್ಕೆ ಇಲ್ಲಿ ಏನಾದರೂ ಮಾಡಬೇಕು ಅದಕ್ಕೇ ಮಾಡಿದ್ದೇವೆ ಅಂತ ಅನ್ನುವುದು ಅಷ್ಟೊಂದು ಒಳ್ಳೆಯದಲ್ಲ ಎಂದು ಅನಿಸುತ್ತದೆ. ವಾಟಾಳ್ ನಾಗರಾಜ್‌ರವರಾಗಲಿ, ಅವರ ಪಕ್ಷದವರಾಗಲಿ ಯಾರೇ ಆಗಲಿ ಕಾನೂನು ಉಲ್ಲಂಘನೆ ಮಾಡಿದರೆ ಶಿಕ್ಷೆ ಆಗಬೇಕಾಗುತ್ತದೆ ಮತ್ತು ಪೋಲೀಸ್‌ನವರು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲಿ ಆಗಿದ್ದಕ್ಕೆ ಇಲ್ಲಿ ರೀ ಆಕ್ಷನ್ ಏನು ಅಂತ ಪ್ರಶ್ನೆ? ಇವತ್ತು 3 ನೇ ದಿವಸ ಆದದ್ದನ್ನು ಹೇಳಿದ್ದೇನೆ. ಎರಡು ದಿವಸದಿಂದ ಬಹಳಷ್ಟು ಸಣ್ಣ ಸಣ್ಣ ಹುಡುಗರು ಸೇರಿಕೊಂಡು ಸಿಕ್ಕ ಕಡೆ, ಎಲ್ಲಿ ಕಲ್ಲು ಸಿಕ್ಕಿತೋ ಅಲ್ಲಿ ಹೊಡೆಯುವುದು, ಓಡುವುದು ಈ ರೀತಿ ನಡೆಯುತ್ತಾ ಇವೆ. ಇದರಿಂದ ಬಹಳ ಜನತೆಗೆ ಅನಾನುಕೂಲತೆಯಾಗಿದೆ. ಕೆಲವರ ಗುಡಿಸಲುಗಳು ಸುಟ್ಟು ಹೋಗಿವೆ, ಮತ್ತು ತಮಿಳು ನಾಡಿನ ಟೂರಿಸ್ಟ್ ಬಸ್‌ಗೆ ಕಲ್ಲು ಹೊಡೆದು ಗ್ಲಾಸ್ ಪೇನ್ಸ್‌ಗಳು ಒಡೆದು ಹೋಗಿವೆ.

ಈ ಸಮಯದಲ್ಲಿ ಒಂದು ವಿಷಯ ಕಳಕಳಿಯಿಂದ ವಿನಂತಿಸಿಕೊಳ್ಳುವುದೇನೆಂದರೆ ಈ ತರಹದ ಘಟನೆ ಆದಾಗ ಪೋಲೀಸ್ ಆಗಲಿ, ಸರ್ಕಾರ ಆಗಲಿ ಎಷ್ಟು ಫರ್ಮ್ ಆಗಿರಬೇಕೋ ಅಷ್ಟು ಫರ್ಮ್ ಆಗಿರುತ್ತದೆ. ಅದು ಪ್ರಶ್ನೆ ಅಲ್ಲ. ಫರ್ಮ್ ಆಗಿ ವರ್ತನೆ ಮಾಡಿದರೆ ಸಣ್ಣ ಸಣ್ಣ ಮಕ್ಕಳನ್ನು ಸಿಕ್ಕಾಪಟ್ಟೆ ಹೊಡೆದರು, ಮಲಗಿಸಿಬಿಟ್ಟರು ಎಂದು ದೂರು ಬರುತ್ತದೆ. ಸಣ್ಣ ಹುಡುಗರು ಪರವಾಗಿಲ್ಲ, ಹೆಚ್ಚು ಕಮ್ಮಿ ನೋಡಿಕೊಳ್ಳೋಣ ಎಂದರೆ ಬಡವರ ಗುಡಿಸಲನ್ನು ಸುಟ್ಟು ಹಾಕಿದರೂ ಕೂಡ ಪೋಲೀಸರು ದೂರ ನಿಂತುಕೊಂಡು ನೋಡುತ್ತಾ ಇದ್ದರು ಏನೂ ಮಾಡಲಿಲ್ಲ ಅಂತ ದೂರು ಬರುತ್ತದೆ. ಈ ತರಹದ ಘಟನೆಗಳನ್ನು ಎಲ್ಲಾ ಕಡೆಗಳಿಂದಲೂ ಖಂಡಿಸುವುದು ಅವಶ್ಯಕ. ಇದು ಕನ್ನಡ ನಾಡಿಗೆ ಆಗಲಿ, ಬೆಂಗಳೂರು ನಗರಕ್ಕೆ ಆಗಲಿ ನಮ್ಮ ಸಂಸ್ಕೃತಿಗೇ ಆಗಲಿ ಅಪಕೀರ್ತಿ ತರತಕ್ಕ ಘಟನೆಯಾಗಿದೆ, ಯಾರೂ ಸಹನೆ ಮಾಡುವುದಕ್ಕೆ ಸಾಧ್ಯವಿಲ್ಲ. ಕೆಲವರು ಟೆಲಿಫೋನ್ ಮಾಡಿ ಹೇಳುತ್ತಾ ಇದ್ದರು, ಪೋಲೀಸರು ಇಂತಹ ಘಟನೆ ಆಗುತ್ತಾ ಇದ್ದರೂ ಸಹ ಏನೋ ತಮಾಷೆ ನಡೆದಂತೆ ನೋಡುತ್ತಾ ಇದ್ದರು ಏನೂ ಮಾಡುತ್ತಿಲ್ಲ, ಮನಸ್ಸಿಗೆ ಬಂದ ಹಾಗೆ ಹುಡುಗರು ಕಲ್ಲು ಹೊಡೆಯುತ್ತಾ ಇದ್ದಾರೆ ಅಂತ, ಆಹಾರ ಇಲಾಖೆ ಮಂತ್ರಿಗಳ ಮನೆಗೂ ಕೂಡ ಕಲ್ಲು ಹೊಡೆದು ಹುಡುಗರು ಓಡಿ ಹೋಗಿದ್ದಾರೆ, ಗ್ಲಾಸ್‌ಪೇನ್ಸ್ ಒಡೆದುಹೋಗಿರಬಹುದು. ಹುಡುಗರಿಗೆ ಏನು ಗೊತ್ತು? ತಮಿಳಿಯನ್ಸ್ ಯಾರು ಅಂತ ಅವರಿಗೆ ಗೊತ್ತಿಲ್ಲ, ಮತ್ತೊಬ್ಬರು ಯಾರು ಅಂತ ಅವರಿಗೆ ಗೊತ್ತಿಲ್ಲ. ಇಂತಹ ಸಮಯದಲ್ಲಿ ಆಂಟಿಸೋಷಿಯಲ್ ಎಲಿಮೆಂಟ್ಸ್‌ನ ಮೇಲಿನ ಕೈ ಇರುತ್ತದೆ ಅವರಿಗೆ ಬಹಳ ಅನುಕೂಲವಾಗುತ್ತದೆ. ಅದು ಏನೇ ಆಗಲಿ ಕಾನೂನು ಮತ್ತು ಲಾ ಅಂಡ್ ಆರ್ಡರ್ ಇಲ್ಲಿ ಇರುವಂತಹದು, ಇರುವಂತೆ ನೋಡಿಕೊಳ್ಳುವ ಪೂರ್ತಿ ಜವಾಬ್ದಾರಿ ನನ್ನದಾಗಿದೆ. ಅಷ್ಟೇ ಅಲ್ಲದೇ ಬೆಂಗಳೂರು ನಗರದಲ್ಲಿ ಯಾವ ಜಾತಿಯವರೇ ಇರಲಿ, ಯಾವ ಭಾಷೆ ಮಾತನಾಡತಕ್ಕವರೇ ಆಗಲಿ ಅವರೆಲ್ಲರೂ ನಮ್ಮವರು ಅವರ ಆಸ್ತಿ, ಪಾಸ್ತಿ, ಅವರ ಜೀವಕ್ಕೆ ಅಪಾಯ ಬರದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ನಮ್ಮ ಮೇಲೆ ಇದೆ. ನಾನು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ, ಇದು ಜನಸಾಮಾನ್ಯರ ಮತ್ತು ಹುಡುಗರ ತಂದೆತಾಯಿಗಳ ಜವಾಬ್ದಾರಿಯೂ ಕೂಡ ಆಗಿದೆ. ಆದ್ದರಿಂದ ಯಾರು ನಮ್ಮ ದೇಶದ ವಾತಾವರಣ, ಬೆಂಗಳೂರಿನ ವಾತಾವರಣ ಕಲುಷಿತ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೋ ಅವರ ಮೇಲೆ ಬಹಳ ಫರ್ಮ್ ಆಗಿ ಡೀಲ್ ಮಾಡಬೇಕೆಂದು ಪೋಲೀಸರಿಗೆ ಆದೇಶ ಕೊಟ್ಟಿದ್ದೇನೆ. ಯಾವ ರೀತಿಯಿಂದ ದೂರು ಬರದಂತೆ ಕೆಲಸ ಮಾಡಬೇಕು, ಈ ತರಹದ ಘಟನೆ ಆಗದಂತೆ ನಿಲ್ಲಿಸಬೇಕು ಮತ್ತು ಇಂತಹ ಘಟನೆಯಿಂದ ಏನು ಕಳಂಕವಾಗುತ್ತದೆ ಅದನ್ನು ತಪ್ಪಿಸುವುದಕ್ಕೆ ನಾವೆಲ್ಲರೂ ಒಂದುಗೂಡಿ ಪ್ರಯತ್ನ ಮಾಡಬೇಕು, ಅಂತಹ ಒಂದು ವಾತಾವರಣವನ್ನು ತಯಾರು ಮಾಡಬೇಕೆಂದು ನಾನು ಬಹಳ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ.

4-00 P.M.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಸ್ವಾಮಿ, ಮಾನ್ಯ ಸಭಾ ನಾಯಕರು ಈ ವರೆಗೆ ಹೇಳಿದಂಥ ಮಾತನ್ನು ನಾನು ಬಹಳ ಕುತೂಹಲದಿಂದ ಕೇಳಿದೆ. ಮತ್ತು ಅವರು ಹೇಳಿದ ಕೆಲವು ವಿಷಯಗಳನ್ನು ಯೋಚನೆ ಮಾಡಿ ನೋಡಿದರೆ ನನಗನ್ನಿಸುತ್ತದೆ, ಅವರು ಏನು ಕೆಲವು ಅಂಶಗಳನ್ನು ಹೇಳಿದರು ಅದರಲ್ಲಿ ನಮ್ಮ ಸಹಾನುಭೂತಿ ಇದೆ, ನಮ್ಮ ವಿಶ್ವಾಸವಿದೆ ಎನ್ನುವುದನು ಹೇಳಲೇಬೇಕು. ಕಾರಣವಿಷ್ಟೆ. ಬಾಕಿ ವಿಷಯಕ್ಕೆ ನಾನು ಹೋಗುವುದಿಲ್ಲ. ಪೋಲೀಸ್ ಅಧಿಕಾರಿಗಳು ಇಂಥದ್ದು ಏನಾದರೂ ನಡೆದರೆ ಫರ್ಮ್ ಆಗಿ ಡೀಲ್ ಮಾಡಬೇಕು ಎನ್ನುವಂಥದ್ದು ಸರಿ. ಆದರೆ ಒಂದುಮಾತು ಮಾತ್ರ ಹೇಳುತ್ತೇನೆ. ಎಂಥ ಸಂದರ್ಭ ಬರಲಿ, ಎಂಥ ಕಠಿಣ ಪ್ರಶ್ನೆ ಬರಲಿ, ಏನು ಅನ್‌ಸೋಷಿಯಲ್ ಎಲಿಮೆಂಟ್ಸ್ ಎಂದು ಹೇಳುತ್ತಾರೆ ಅವರ ವಿಚಾರದಲ್ಲಿ ಫರ್ಮ್ ಆಗಿ ಇರಬೇಕಾದ್ದು ಸರ್ಕಾರದ ಕರ್ತವ್ಯ. ಆದರೆ ಮಕ್ಕಳ ವಿಚಾರದಲ್ಲಿ ಸ್ವಲ್ಪ ಹುಷಾರಾಗಿ ನೋಡಿಕೊಳ್ಳಬೇಕಾಗುತ್ತದೆ. ಏಕೆಂದರೆ ಇದು ಬಹಳ ಡೆಲಿಕೇಟ್ ಪೊಸಿಷನ್. ದುರ್ದೈವದಿಂದ ಯಾವರೀತಿ ಹೋಗುತ್ತದೆ ಎಂದು ನಮ್ಮ ಕಣ್ಣಿಗೆ ಕಾಣುತ್ತಿಲ್ಲ. ನಮಗೆ ಬಂದಿರುವ ವರ್ತಮಾನದ ಪ್ರಕಾರ ಬಹಳ ಭಯಾನಕವಾದ ದೃಶ್ಯಗಳನ್ನು ಕೆಲವರು ನಮ್ಮ ಕಣ್ಣ ಮುಂದೆ ಇಟ್ಟಿದ್ದಾರೆ. ಬೆಂಗಳೂರು ನಗರದ ಚರಿತ್ರೆಯನ್ನು ನೋಡಿದರೆ ಇಂತಹ ಕಾಸ್ಮಾಪಾಲಿಟನ್ ನಗರ ಬೇರೆ ಯಾವುದೂ ಇಲ್ಲ, ಬೊಂಬಾಯಿಗಿಂತ ಒಂದು ಕೈ ಮೇಲೆ ಇದೆ ಎಂದರೂ ತಪ್ಪಾಗಲಾರದು. ಬೆಂಗಳೂರು ನಗರದಲ್ಲಿರತಕ್ಕ ಜನಸಂಖ್ಯೆಯನ್ನು ಭಾಷಾವಾರು ಹಂಚಿದರೆ ಈ ಹೊತ್ತಿನ ದಿವಸ ತಮಿಳರು ಎಲ್ಲರಿಗಿಂತ ಹೆಚ್ಚಾಗಿದ್ದಾರೆ ಎನ್ನುವ ಅಂಶವನ್ನು ನಾವು ನೋಡಬಹುದು. ಸೌಹಾರ್ದದಿಂದ, ಪ್ರೀತಿಯಿಂದ, ಪ್ರೇಮದಿಂದ ನಾವೆಲ್ಲ ನಡೆದುಕೊಂಡು ಬಂದಿದ್ದೇವೆ.

(ಶ್ರೀ ಎಚ್. ಸಿದ್ದವೀರಪ್ಪ)

ಕೇವಲ ಮದ್ರಾಸಿಗೆ ಮತ್ತು ಇಲ್ಲಿಗೆ ಇದ್ದಂಥ ದೊಡ್ಡ ದೊಡ್ಡ ಸಮಸ್ಯೆಗಳೆಲ್ಲ ಬಗೆಹರಿದು ಇನ್ನೊಂದು ಉಳಿದಿದೆ, ಅದು ತಾಳವಾಡಿ ಫಿರ್ಕಾದ ಪ್ರಶ್ನೆ. ಇದೇ ರೀತಿ ಹೊಸೂರು ಮುಂತಾದ ಕೆಲವು ಭಾಗಗಳಿವೆ. ರಾಜ್ಯಗಳ ಪುನರ್ವಿಂಗಡಣೆಯಾಗಿ 10 ವರ್ಷಗಳ ಕಾಲವಾಯಿತು. ಇಷ್ಟರೊಳಗೆ ಇದನ್ನು ಬಗೆಹರಿಸಬಹುದಾಗಿತ್ತು. ಈಗ ಸರ್ಕಾರದಲ್ಲಿ ತಪ್ಪು ಕಂಡು ಹಿಡಿಯುವುದಕ್ಕೆ ನಾನು ಹೇಳುತ್ತಿಲ್ಲ. ರಾಜ್ಯಗಳ ಪುನರ್ವಿಂಗಡಣೆಗೆ ಸಂಬಂಧಪಟ್ಟಂತೆ ಒಂದು ಆಕ್ಟ್ ಇದೆ. ಸಣ್ಣಪುಟ್ಟ ಹೊಂದಾಣಿಕೆಗಳು ಎಂದು ಏನು ಹೇಳುತ್ತಾರೆ ಬಾರ್ಡರ್ ಅಜಸ್ಟ್‌ಮೆಂಟ್ಸ್ ಎನ್ನತಕ್ಕದನ್ನು ಜೋನಲ್ ಕೌನ್ಸಿಲ್‌ನಲ್ಲಿ ತಂದು ಇಷ್ಟರೊಳಗೆ ಅದನ್ನು ಬಗೆಹರಿಸಿದ್ದರೆ ಈ ಪ್ರಶ್ನೆ ನಮ್ಮ ಮುಂದೆ ಬರುತ್ತಿದ್ದಿಲ್ಲ ಎಂದು ನನ್ನ ಭಾವನೆ. ಈಗ ಯಾರು ಈ ಚಳುವಳಿಯನ್ನು ಮಾಡುತ್ತಾರೆ, ರಾಜ್ಯದಲ್ಲಿ ಈಗ ಫ್ರೀಡಂ ಆಫ್ ಸ್ಪೀಚ್, ಫ್ರೀಡಂ ಆಫ್ ಆಕ್ಷನ್, ಎಲ್ಲ ಇರಬೇಕಾದರೆ, ಸಂಯಮದಿಂದ, ಅಹಿಂಸಾ ಮಾರ್ಗದಿಂದ ಮಾಡಬೇಕೇ ಹೊರತು ಹಿಂಸಾ ಮಾರ್ಗಕ್ಕೆ ಇಳಿಯುವುದು ಒಳ್ಳೆಯದಲ್ಲ ಎನ್ನತಕ್ಕದನ್ನು ನಾವೆಲ್ಲರೂ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳಬೇಕು. ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ಜವಾಬ್ದಾರಿ ಬಹಳವಿದೆ. ಈಗಿರತಕ್ಕ ಪರಿಸ್ಥಿತಿಯಲ್ಲಿ ತಮಿಳುನಾಡು ನಮ್ಮ ರಾಜ್ಯದ ನೆರೆಹೊರೆಯ ರಾಜ್ಯ. ಅಲ್ಲಿ ಬೇರೆ ಒಂದು ಪಕ್ಷದ ಆಡಳಿತ ನಡೆಯುತ್ತಿದೆ. ಈಗ ಪ್ರಜಾಪ್ರಭುತ್ವದಲ್ಲಿ ಒಬ್ಬರಿಗೊಬ್ಬರಿಗೆ ಹೊಂದಾಣಿಕೆ ಇರಬೇಕಾದ ಕಾಲ ಬಂದಿರಬೇಕಾದರೆ ಕಲುಷಿತ ವಾತಾವರಣಕ್ಕೆ ಯಾರೂ ಅವಕಾಶ ಕೊಡಬಾರದು. ಇಂಥ ಸಂದರ್ಭದಲ್ಲಿ ನಮ್ಮ ಮುಖ್ಯ ಮಂತ್ರಿಗಳು ತಮಿಳುನಾಡಿನ ಮುಖ್ಯ ಮಂತ್ರಿಗಳಿಗೆ ಕಾಗದವನ್ನು ಬರೆದುದು ಸ್ತುತ್ಯವಾದುದು.

ನಾನು ಆಗಲೇ ಹೇಳಿದಂತೆ ಬೆಂಗಳೂರು ನಗರ ಎಲ್ಲ ಭಾಷೆಗಳ ನಗರ. ನನ್ನ ದೃಷ್ಟಿಯಲ್ಲಿ ವಿವಿಧ ಭಾಷೆಗಳ ಜನರ ಮುಖಂಡರನ್ನೆಲ್ಲ ಕರೆಸಿ ಒಂದು ಸಭೆ ಮಾಡಿ. ತಮಿಳು ಭಾಷೆ ಆಡತಕ್ಕ ಜನರ ಮುಖಂಡರಿದ್ದಾರೆ, ಕನ್ನಡ ಭಾಷೆ ಆಡತಕ್ಕ ಜನರ ಮುಖಂಡರಿದ್ದಾರೆ, ಚಳುವಳಿಯಲ್ಲಿ ವಹಿಸಿರತಕ್ಕ ಮುಖಂಡರಿದ್ದಾರೆ, ಅವರನ್ನೆಲ್ಲ ಬೇರೆ ಬೇರೆಯಾಗಲೀ ಅಥವಾ ಒಟ್ಟಿಗೇ ಆಗಲೀ ಸೇರಿಸಿ ಒಂದು ಶಾಂತ ವಾತಾವರಣ ಬರುವುದಕ್ಕೆ ಪ್ರಯತ್ನ ಮಾಡಬೇಕು.

ಪೋಲೀಸರ ಮುಖಾಂತರ ಡೀಲ್ ಮಾಡುತ್ತೇನೆಂದು ಹೇಳಿದ್ದಾರೆ; ಅದರ ವಿಚಾರದಲ್ಲಿ ಮಕ್ಕಳ ತಂದೆತಾಯಿಗಳ ಹೊಟ್ಟೆ ಉರಿಯದ ರೀತಿ ಕೆಲಸ ಮಾಡಬೇಕು. ನಾನು ಗೃಹ ಮಂತ್ರಿಯಾಗಿದ್ದಾಗ ಅನೇಕ ಸಾರಿ ಫೈರಿಂಗ್ ಓಪನ್ ಮಾಡತಕ್ಕ ಸಂದರ್ಭಗಳು ಬಂದಾಗ, ಇದೇ ಭಾಷಾವಾರು ಪ್ರಾಂತ ರಚನೆ ವಿಚಾರಗಳು ಬಂದಾಗ ಸಂಯಮದಿಂದ ವರ್ತಿಸಿದ್ದೇನೆ. ನಮ್ಮ ಪೋಲೀಸಿನವರು, ಫರ್ಮ್ ಆಗಿ ಡೀಲ್ ಮಾಡುವುದಕ್ಕೆ, ಬೇರೆ ರೀತಿಯಾಗುವುದಕ್ಕೆ ಮಾನ್ಯ ಮುಖ್ಯ ಮಂತ್ರಿಯವರು ಅವಕಾಶ ಕೊಡಬಾರದೆಂದು ಪ್ರಾರ್ಥನೆ ಮಾಡಿ, ಅವರ ಹೇಳಿಕೆಯನ್ನು ಸ್ಥೂಲವಾಗಿ ಗ್ರಹಿಸಿ, ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಸ್ವಾಮಿ, ನಿನ್ನೆ ಪತ್ರಿಕೆಯನ್ನು ಓದಿದ ಮೇಲೆ ನನಗೆ ಸ್ವಲ್ಪ ಶಂಕೆ ಷುರುವಾಯಿತು. ನಾನು ಈ ದಿವಸ ಬೆಳಿಗ್ಗೆ ಸ್ವತಃ ಓಕಳಿಪುರಕ್ಕೆ ಹೋಗಿ ನೋಡಿ ಬಂದೆ. ಒಂದು ವಿಷಾದದ ಸಂಗತಿಯನ್ನು ಸಭೆಯ ಮುಂದೆ ಇಟ್ಟು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒಂದು ವಿಷಯವನ್ನು ಕೇಳಿಕೊಳ್ಳಬೇಕೆಂದು ಬಯಸುತ್ತೇನೆ. ಬೆಂಗಳೂರು ನಗರದಲ್ಲಿ ಏನು ಕೊಳಚೆ ಪ್ರದೇಶಗಳಿವೆ, ಅಲ್ಲಿ ನೂರಕ್ಕೆ 70 ಭಾಗ ವಾಸ ಮಾಡುವವರು ಅಸ್ಪೃಶ್ಯರು. ಈ ಹೊತ್ತಿನ ದಿವಸ ಬೆಂಕಿಗೆ ಆಹುತಿಯಾಗಿರತಕ್ಕ ಮನೆಗಳು ಎರಡು ಎಂದು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದರು. ಆದರೆ ನಾನು ಸ್ವತಃ ಹೋಗಿ ನೋಡಿ ಬಂದಿರುವುದರಲ್ಲಿ 5 ಮನೆಗಳು ಬೆಂಕಿಗೆ ಆಹುತಿಯಾಗಿವೆ. ಗೋರಿಪಾಳ್ಯದಲ್ಲಿ ಕೆಲವು ಮನೆಗಳಿಗೆ ಬೆಂಕಿ ಹಾಕಿದ್ದಾರೆಂದು ಕೇಳಿದೆ. ರೈಲ್ವೆ ಸ್ಟೇಷನ್ ಹತ್ತಿರ ಎರಡು ಮನೆಗಳು ಬೆಂಕಿಗೆ ಆಹುತಿಯಾಗಿವೆ ಎಂದು ಹೇಳಿದ್ದಾರೆ. ಅದು ಕೂಡ ಅಸ್ಪೃಶ್ಯರದೇ. ನಾನು ಮೊದಲೇ ಹೇಳಿದ ಹಾಗೆ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವ ಜನರಲ್ಲಿ ನೂರಕ್ಕೆ 60-70 ಭಾಗ ಕೂಲಿಗೋಸ್ಕರ ನೆರೆಯ ರಾಜ್ಯವಾದ ತಮಿಳನಾಡಿನಿಂದ ಬಂದಂಥ ಅಸ್ಪೃಶ್ಯರು. ಮೊದಲು ಬೆಂಕಿಗೆ ಆಹುತಿಯಾಗತಕ್ಕವು ಗುಡಿಸಲುಗಳು. ಅದರ ಒಡೆಯರು ಎಂದರೆ ಅಸ್ಪೃಶ್ಯರು. ಇವರ ಬಗ್ಗೆ ಕನಿಕರದಿಂದ ನೋಡಬೇಕು. ನಾನೂ ಕನ್ನಡಾಭಿಮಾನಿ, ಆದರೆ ಭಾಷಾಭಿಮಾನದ ಅಂಧತೆಯಲ್ಲಿ ಚಳುವಳಿ ಮಾಡುವುದಕ್ಕೆ ಹೋಗಿ ಬಡವರ ಮನೆ ಸುಡುವುದಾದರೆ, ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ

ಅದು ಚಳುವಳಿ ಎನ್ನಿಸಿಕೊಳ್ಳಲಾರದೆಂದು ನಾನು ಒತ್ತಾಯದಿಂದ ಘಂಟಾಘೋಷವಾಗಿ ಈ ಸಭೆಯಲ್ಲಿ ಹೇಳುವುದಕ್ಕೆ ಪ್ರಯತ್ನ ಪಡುತ್ತಿದ್ದೇನೆ. ಚಳುವಳಿಯ ಬೇಗೆಗೆ ಆಹುತಿಯಾಗಿರತಕ್ಕ ಜನ ಸಮಾಜದಲ್ಲಿ ಅತಿ ಕನಿಷ್ಠ ದರ್ಜೆಯಲ್ಲಿರುವ ಅಸ್ಪೃಶ್ಯರು. ನಾನು 312ನೇ ನಿಯಮದ ಪ್ರಕಾರ ಅಧ್ಯಕ್ಷರಿಗೆ ಒಂದು ನೋಟೀಸ್ ಕೊಟ್ಟಿದ್ದೇವೆ. ಸ್ಟೇಟ್‌ಮೆಂಟ್ ಮಾಡುವುದಾದರೆ ಮಾಡಿ ಎಂದು ಹೇಳಿದರು. ಆದುದರಿಂದ ಸ್ವಾಮಿ, ನಾನು ಅತಿ ಕಳಕಳಿಯಿಂದ ಈ ಸಭೆಯಲ್ಲಿ ನಾನು ಬಿನ್ನೈಸಿಕೊಳ್ಳುತ್ತೇನೆ, ಇಂಥ ಪ್ರಸಂಗಗಳು ನಡೆಯದಂತೆ ಕೊಳಚೆ ಪ್ರದೇಶಗಳನ್ನು ಮೊದಲು ಪೋಲೀಸ್ ಬಂದೋಬಸ್ತಿನಿಂದ ಕಾಯುತಕ್ಕದ್ದು ಸರ್ಕಾರದ ಆದ್ಯ ಕರ್ತವ್ಯವಾಗಿದೆ, ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಇಲ್ಲದೆ ಹೋದರೆ ರಾಗದ್ವೇಷಗಳಿಗೆ ಎಡೆಕೊಟ್ಟು, ಅದನ್ನು ದುರುಪಯೋಗ ಮಾಡುವುದಕ್ಕೆ ಪ್ರಯತ್ನ ಪಡುವುದಾದರೆ ನಾವು ಬೇರೆ ರೀತಿ ಯೋಚನೆ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಆದುದರಿಂದ ಅಧ್ಯಕ್ಷರೇ, ನಾನು ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳತಕ್ಕದ್ದು ಏನು ಎಂದರೆ ಗುಡಿಸಲುಗಳನ್ನು ಏನು ಸುಟ್ಟು ಹಾಕಿದ್ದಾರೆ ಆ ಗುಡಿಸಲುಗಳವರಿಗೆ ಸೂಕ್ತ ಪರಿಹಾರವನ್ನು ಕೊಡಬೇಕು; ಮುಂದೆ ಇಂಥ ಅನಾಹುತಗಳಾಗಬಹುದು. ಸ್ವತಂತ್ರಪಾಳ್ಯದಲ್ಲಿ ಅಗಿದೆ ಎಂದು ಕೇಳುತ್ತೇನೆ. ಕೊಳಚೆ ಪ್ರದೇಶಗಳಲ್ಲಿ ಪೋಲೀಸ್ ಬಂದೋಬಸ್ತು ಕಾಯುತಕ್ಕ ವ್ಯವಸ್ಥೆ ಮಾಡುವುದಲ್ಲದೆ ಫೈರ್ ಬ್ರಿಗೇಡ್ ಸಹ ಇರುವುದು ಒಳ್ಳೆಯದು. ದಿನಕ್ಕೆ ಎಂಟಾಣೆ ದುಡಿದು, ಅದರಲ್ಲಿ ಎರಡಾಣೆ ಉಳಿಸಿ ಗುಡಿಸಲುಗಳನ್ನು ಕಟ್ಟಿಕೊಂಡಿರುತ್ತಾರೆ. ಅದನ್ನು ಸುಟ್ಟು ಹಾಕುವುದಾದರೆ ಇಡೀ ಜೀವನ ಪರ್ಯಂತ ಆ ಜನರು ಕಷ್ಟ ಪಡಬೇಕಾಗುತ್ತದೆ. ಯಾವ ಮತ ಭೇದವನ್ನೂ ಉಂಟುಮಾಡುವುದಕ್ಕೂ ಹೇಳುತ್ತಿಲ್ಲ. ಅಗಿರತಕ್ಕ ವಾಸ್ತವಾಂಶ ಇದು. ಇದನ್ನು ಸರ್ಕಾರದ ಗಮನಕ್ಕೆ ತಂದು ಸಾರ್ವಜನಿಕ ಹಿತದೃಷ್ಟಿಯಿಂದ ಮುಂದೆ ಅಗಬಹುದಾದ ಅನಾಹುತಗಳನ್ನು ತಡೆಗಟ್ಟಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ವಿರೋಧ ಪಕ್ಷದ ನಾಯಕರು ಮತ್ತು ಈ ಸಭಾ ನಾಯಕರು ಈಗಾಗಲೇ ಮಾತನಾಡಿ ಒಂದು ಒಳ್ಳೇ ಉತ್ತಮ ವಾತಾವರಣದ ಪರಿಸ್ಥಿತಿ ಉಂಟು ಮಾಡಿದ್ದಾರೆ. ನಮ್ಮ ರಾಜ್ಯದ ಜನರ ಮೇಲೆ ಹಾಗು ಪ್ರತಿಯೊಬ್ಬರ ಮೇಲೆ ಈ ಭಾಷಣ ಉತ್ತಮ ಪರಿಣಾಮ ಉಂಟು ಮಾಡುತ್ತದೆ. ಆದುದರಿಂದ ಈ ಮಾನ್ಯ ಸಭೆಯಲ್ಲಿ ಇಷ್ಟಕ್ಕೇ ಈ ಚರ್ಚೆ ಮುಕ್ತಾಯ ಮಾಡಿದರೆ ಒಳ್ಳೆಯದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—ನಾನು ಕಾಲ್ ಅಟೆನ್‌ಷನ್ ನೋಟೀಸ್ ಕಳಿಸಿದ್ದೇನೆ. ಒಂದು ನಿಮಿಷದಲ್ಲಿ ಎರಡು ಮಾತು ಹೇಳುವುದಕ್ಕೆ ನನಗೆ ಅವಕಾಶ ಕೊಡಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಒಂದೇ ಒಂದು ಪಾಯಿಂಟನ್ನು ನಿಮಿಷದಲ್ಲಿ ನಾನು ಹೇಳುತ್ತೇನೆ. ದಯವಿಟ್ಟು ಅವಕಾಶ ಕೊಡಬೇಕು.

ಅಧ್ಯಕ್ಷರು.—ಈಗ ವೇಳೆ ಇಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಮಾನ್ಯ ಮುಖ್ಯ ಮಂತ್ರಿಗಳು ವಿವರಣೆ ಕೊಟ್ಟಿದ್ದಾರೆ ನಿಜವಾಗಿಯೂ ನಾನು ಅವನ್ನು ಸ್ವಾಗತ ಮಾಡುತ್ತೇನೆ. ಒಕಳೀಪುರದಲ್ಲಿ ನಡೆದದ್ದನ್ನು ನೋಡಲು ನಾನು ಸ್ವತಃ ಹೋಗಿದ್ದೆನು. ಅಲ್ಲಿ ಹರಿಜನರ ಮನೆ ಸುಟ್ಟು ಹೋಗಿವೆ. ಅಲ್ಲಿ ವಾಸ ಮಾಡತಕ್ಕಂಥವರು ನೂರಕ್ಕೆ ಅರವತ್ತರಷ್ಟು ಜನ ತಮಿಳು ಹರಿಜನರು, ಅವರು ರಿಪಬ್ಲಿಕನ್ ಪಾರ್ಟಿ ಫಾಲೋಯರ್ಸ್ ಆಗಿದ್ದಾರೆ. ಇಲ್ಲಿ ಪಾರ್ಟಿ ಮುಖ್ಯ ಅಲ್ಲ. ನಾನು ಮಹಾರಾಷ್ಟ್ರದಲ್ಲಿ ಚಳವಳಿ ಮಾಡಿ ಹೊಡೆತ ತಿಂದಿದ್ದೇನೆ. ಕನ್ನಡ ನಾಡನ್ನು ಉಳಿಸಿಕೊಳ್ಳಬೇಕಾದರೆ ಏನು ಬೇಕಾದರೂ ಮಾಡಬಹುದು ಎನ್ನುವ ಸಂದರ್ಭ ಬರುತ್ತದೆ. ಆದುದರಿಂದ ಅಲ್ಲಿ ಶಾಂತಿ ರಕ್ಷಣೆ ಸುವ್ಯವಸ್ಥೆಗಾಗಿ 80 ಜನ ಪೋಲೀಸರನ್ನು ಕೂಡಲೇ ಪೋಸ್ಟ್ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಒಕಳಿಪುರದಲ್ಲಿ ಮನೆ ಸುಟ್ಟುಹೋದವರಿಗೆ ಪರಿಹಾರ ಧನ ಕೊಡಬೇಕು.

† **Sri M. A. AMALORPAVAM** (Bharatingar).—I would be failing in my duty if I do not express the sincere thanks of the Tamilian community to the Chief Minister for his most magnificent and magnanimous statement made in reply to the calling attention. He has proved beyond a

(Sri M. A. Amalorpavam)

shadow of doubt that he is a leader worthy of being followed by all people irrespective of caste and community. Fortunately or unfortunately I happen to be a Tamilian. There has been a certain amount of panic in the minds of the people ever since this trouble started here in Bangalore after Talawadi incident. There has been sporadic incidence. The poor Tamilians of middle class, labour class and Harijans have been attacked. I was hesitating to speak on the floor because I am a Tamilian. When the Hon. Chief Minister made that magnanimous statement, I feel proud to speak one or two words on this subject. All the members of this House have expressed that adequate protection should be given to all class of people. Excepting one or two all are in favour of giving protection to all class of people whether Tamilians or Telugu Speaking people. We the Tamilians and the Telugu speaking people have been living here as brothers of Kannadigas for centuries. We have been mixed up with the Kannadigas, I am really very thankful to the Chief Minister for his very open and very frank forthright speech that he has made. We are really assured that the Police authorities would co operate with the Government in creating a good atmosphere in places where we the Tamilians are living. These Tamilians who have come here about 200 years ago have settled here as workers and have become Mysoreans now. We are living in Mysore and we continue to strive for unity of Mysore.

When I was addressing a meeting at Ulsoor about two days back where about 80 per cent of the people were Tamilians, a Kannada gentleman came straight to me and said 'you should address in Kannada, otherwise I will stone you'. If the representatives of the people do like this, what would happen in the case of other ordinary people ? I once again thank adequately the Chief Minister because it was not a political statement and more so it was not a statement just to express the feelings to the Tamilians. It was a sincere statement. As a member of the Treasury Bench I can go with my head erect with the feeling that there will be no fear whatsoever to ths minorities as long as such a decent Chief Minister, and such an opposition leader and also the members of this House are there, ready to protect the minorities who are ready to die for Mysore and continue to be here. This is a magnainmous assurance given to the minorities who are actually living in great fear and panic.

Sri K. PUTTASWAMY.—I am very sorry there is no time. We have to proceed with the next subject.

Sri V. N. PATIL (Humnabad).—Sir, I express my deepest sympathy for the down-trodden class that has suffered in the hands of hooligans and anti-social elements. Protection of human beings does not require any political organisation and no political organisation can afford to support such hooligans. Those who have developed our culture just like brothers and are living with us, were beaten mercilessly. There is a fundamental defect in our handling of such situations. If we take a cautious approach to settle the border problem with discussion we can bypass such incidents. Let us not give scope to such incidents. We must condemn the attitude of our people beating mercilessly the weaker sections and the down-trodden, because they are living with us like brothers to whatever language they may belong. They are a poor class and working class, but some huts of theirs were burnt. We must see that the weaker sections are protected.

What is it we have done for those who have suffered in these incidents ? We owe a duty to those who have suffered. Instead of showing lip sympathy, there should be positive action. The Government should make arrangements to construct huts for them.

Thank you, Sir.

ಶ್ರೀ ವೀರೇಂದ್ರ ಪಾಟೀಲ್.—ಯಾರ ಗುಡಿಸಲು ಸುಟ್ಟವೆ, ಮನೆಗಳು ಸುಟ್ಟವೆ ಅವರಿಗೆ ಪರಿಹಾರ ಕೊಡಬೇಕು ಎನ್ನುವ ಸೂಚನೆ ನನ್ನ ಸ್ಟೇಟ್‌ಮೆಂಟ್‌ನಲ್ಲಿ ಹೇಳದೆ ಇದ್ದರೂ ಅದರಲ್ಲಿ ನನಗೆ ಸಂಪೂರ್ಣ ಸಹಾನುಭೂತಿ ಇದೆ. ಅವರಿಗೆ ಏನು ಹಾನಿಯಾಗಿದೆ ಅದಕ್ಕೆ ಪರಿಹಾರ ಕೊಡುವುದಕ್ಕೆ ನಾನು ವಿಶ್ವ ಪ್ರಯತ್ನ ಮಾಡುತ್ತೇನೆ.

Land Reforms (Amendment) Bill, 1970

CLAUSE 2

Mr. SPEAKER.—The question is :

"That clause 2 do stand part of the Bill".

Sri H. V. KOUJALGI (Minister for Revenue).—Sir, I was to move my amendment yesterday. I am not moving it. Sri M. R Patil is moving an amendment.

Sri M. R. PATIL.—Sir, I move :

"That for clause 2 the following clause shall be substituted, namely :

'2. Amendment to section 2.—In section 2 of the Mysore Land Reforms Act, 1961 (Mysore Act 10 of 1962) (hereinafter referred to as the principal Act), in sub-section (A),—

(i) after clause (9), the following clause shall be inserted namely :

"(9a) 'Court' means the Court of Munsiff within the local limits of whose jurisdiction the land is situate ;"

(ii) clause (35) shall be omitted'."

Mr. SPEAKER.—Amendment moved:

"That for clause 2 the following clause shall be substituted, namely:

'2. Amendment to section 2.—In section 2 of the Mysore Land Reforms Act;, 1961 (Mysore Act 10 of 1962) (hereinafter referred to as the principal Act), in sub-section (A),—

(i) after clause (9), the following clause shall be inserted, namely:

"(9a) 'Court' means the Court of Munsiff within the local limits of whose jurisdiction the land is situate";

(ii) clause (35) shall be omitted."

Sri M. R. PATIL.—Sir, this amendment intends only to substitute the clause except the clause which related to the hectares and ares. Instead of recasting the clause, I request that my amendment may be substituted to the existing clause and thereby the provisions relating to the hectares would be omitted.

Sri V. N. PATIL.—Sir, my amendments have been moved yesterday which are self explanatory. The first one thus, runs as:—"in Sub-Section (1) for the words and figures '80.94 standard acres'" the words and figures "40.47 standard acres" shall be substituted. I have moved this amendment with a view to see that the limit must be lesser so that we could have more land for distribution. The amendment that has been officially brought does not serve any purpose in getting the surplus land. Therefore I have suggested this amendment.

My other amendments are that at page 2 in the proposed sub-section (ii) in line 2 for the words and figures "7 standard Hectares and 28.43 Standard acres" the words and figures "3 Standard Hectares and 50 Standard acres" shall be substituted.

And that at page 2 in the proposed sub-section (iv) for the words and figures "2 Standard Hectares and 42.81 standard acres" the words and figures "one Standard Hectare and 21.40 Standard acres" shall be substituted.

The purpose of my amendments is only to have more and more land for distribution. If the Hon. Minister were to agree to my amendments, then there will be no surplus land at all. My amendments are very necessary in order to have more land for distribution among the landless.

Sri H. V. KOUJALGI.—Sir, I am accepting the amendment moved by Sri M. R. Patil, for some hon. Member and especially the Leader of the Opposition yesterday stated that the Hectares business is impracticable and would cause much inconvenience if that is applied now. The main object of this amending Bill is to have uniformity all over as per the instructions of the Central Government and to see that the implementation is done expeditiously.

As such I am accepting all the amendments moved by hon. Member Sri M. R. Patil. So far as the amendments moved by hon. Member Sri V. N. Patil and others, I am not going to accept them.

4-30 P.M.

Mr. SPEAKER.—I shall now put to the House the amendments given notice of by hon. Members Sri M. Nagappa, moved by Sri V. N. Patil.

The question is :

"(1) That at page 2 in the proposed sub-section (i) for the words and figures '80.94 standard acres' the words and figures '40.47 standard acres' shall be substituted ;

"That at page 2 in the proposed sub-section (ii) in line 2 for the words and figures '7 Standard Hectares and 28.43 Standard acres' the words and figures '3 Standard Hectares and 50 Standard acres' shall be substituted ;

And

"That at page 2 in the proposed sub-section (iv) for the words and figures '2 Standard Hectares and 42.81 standard acres' the words and figures 'one standard Hectare and 21.40 Standard acres' shall be substituted."

The amendments were negatived.

Now, I shall put the amendments moved by hon. Member Sri M. R. Patil, to vote of the House.

The question is :

"That for clause 2, the following clause shall be substituted ; *viz.*,—

'2. Amendment of section 2.—In section 2 of the Mysore Land Reforms Act, 1961 (Mysore Act 10 of 1962) hereinafter referred to as the principal Act), in sub-section (A),—

(i) after clause (9), the following clause shall be inserted, namely :

"(9a) 'Court' means the Court of Munsiff within the local limits of whose jurisdiction the land is situate" ;

(ii) clause (35) shall be omitted."

The amendment was adopted.

Now I shall put clause 2, as amended, to the vote of the House.

The Question is :

"That clause 2, as amended, do stand part of the Bill."

The motion was adopted.

Clause 2, as amended, was added to the Bill.

CLAUSE 3

Mr. SPEAKER.– The question is :

" That clause 3 do stand part of the Bill."

The motion was adopted.

Clause 3 was added to the Bill.

CLAUSE 4

Mr. SPEAKER.—There is an amendment tabled by hon. Member Sri L. Srikantiah to clause 4. The hon. Member is not present.

The question is :

" That clause 4 do stand part of the Bill."

The motion was negatived.

Clause 4 was deleted from the Bill.

CLAUSE 5

Mr. SPEAKER.—The question is :

" That clause 5 do stand part of the Bill."

The motion was adopted.

Clause 5 was added to the Bill.

CLAUSE 6

Mr. SPEAKER.—There is an amendment to clause 6 by hon. Member Sri L. Srikantiah. Since he is not present, I shall put the clause to vote:

The question is :

" That clause 6 do stand part of the Bill."

The motion was adopted.

Clause 6 was added to the Bill.

CLAUSE 7

Mr. SPEAKER.—The question is :

" That clause 7 do stand part of the Bill."

There is an amendment by hon. Member Sri Kalmankar to clause 7, I request him to move his amendment.

Sri D. B. KALMANKAR.—I move:

"That at page 3 in the proposed amendment to the proviso to sub-section (1) of section 63 of the Principal Act, for the words and figures 'additional 2 Standard Hectares and 42.81 Standard acres' the words and figures 'one standard Hectare and 21.41 standard acres' shall be substituted.

"That at page 3 in the proposed amendment to sub-section (2) of section 63 of the Principal Act, for the words and figures '10 standard Hectares and 92.65 standard acres' the words and figures '5 standard Hectares and 46.33 standard acres' shall be substituted.

And:

"That at page 4 in the proposed amendment to sub-section (3) of section 63 of the principal Act and figures '19 Hectares and 40.05 acres' the words and figures '9 Hectares and 52.1 acres' shall be substituted."

Mr. SPEAKER.—Amendments moved:

"That at page 3 in the proposed amendment to the proviso to sub-section (1) of section 63 of the Principal Act, for the words and figures 'additional 2 Standard Hectares and 42.81 standard acres' the words and figures 'one standard Hectare and 21.41 standard acres' shall be substituted;

"That at page 3 in the proposed amendment to sub-section (2) of section 63 of the Principal Act, for the words and figures '10 standard Hectares and 92.65 standard acres' the words and figures '5 standard Hectares and 46.33 standard acres' shall be substituted;

And:

"That at page 4 in the proposed amendment to sub-section (3) of section 63 of the principal Act and figures '10 Hectares and 40.05 acres' the words and figures '9 Hectares and 52.1 acres' shall be substituted."

†**Sri D. B. KALMANKAR.**—The intention of my amendment is to make available lands that may be given to the tenants and other agricultural labourers who are likely to get under chapter III of the Mysore Land Reforms (Amendment) Act. The present ceiling is too big and if that is retained I think the benefit of the Land Reforms Act will not go to the tenants. Therefore the intention of the amendment is that the ceiling may be brought down to half the ceiling area. In the changed circumstances of the country, the Government should not hesitate to take progressive measures and therefore I appeal to the Hon. Minister to accept this amendment.

Sri H. V. KOUJALGI.—I do not accept the amendments.

Mr. SPEAKER.—I shall now put the amendment to the House.

The question is:

"That at page 3 in the proposed amendment to the proviso to sub-section (1) of section 63 of the principal Act, for the words and figures 'additional 2 standard Hectares and 42.81 standard acres' the words and figures 'one standard Hectare and 21.41 standard acres' shall be substituted;

"that at page 3 in the proposed amendment to sub-section (2) of section 63 of the Principal Act, for the words and figures '10 standard Hectares and 92.65 standard acres' the words and figures '5 standard Hectares and 46.33 standard acres' shall be substituted;

And:

"That at page 4 in the proposed amendment to sub-section (3) of section 63 of the Principal Act and figures '10 Hectares and 40.05 acres' the words and figures '9 Hectares and 52.1 acres' shall be substituted."

The amendments were negatived.

Mr. SPEAKER.—Now I shall put the clause to the vote of the House.

The question is:

"That clause 7 do stand part of the Bill."

The motion were negatived.

Clause 7 was deleted from the Bill.

CLAUSES 8 TO 12

Mr. SPEAKER.—There are amendments tabled by Sri Srikantiah but he is not here. Therefore I will put the clauses to vote. The question is:

"That clauses 8 to12, both inclusive, do stand part of the Bill."

The motion was adopted.

Clauses 8 to 12 both inclusive, were added to the Bill.

CLAUSES 13 to 24

Mr. SPEAKER.—There are no amendments. The question is:

"That clauses 13 to 24, both inclusive, do stand part of the Bill."

The motion was adopted.

Clauses 13 to 24, both inclusive, were added to the Bill.

CLAUSES 25 to 28

Mr. SPEAKER.—Sri Srikantiah has proposed amendment but he is not here. I therefore put these clauses to vote of the House. The question is:

"That clauses 25 to 28, both inclusive, do stand part of the Bill."

The motion was adopted.

Clauses 25 to 28, both inclusive, were added to the Bill.

CLAUSE 29

Mr. SPEAKER.—The question is:

"That clause 29 do stand part of the Bill."

There is an amendment by Sri M. R. Patil.

Sri M. R. PATIL.—Sir, I beg to move:

"That for sub-clause (i), the following sub-clause shall be substituted, namely:—

"(i) for the words 'the tribunal', the words 'the Court' shall be substituted."

Mr. SPEAKER.—Amendment moved:

"That for sub-clause (i), the following sub-clause shall be substituted, namely:—

"(i) for the words 'the Tribunal', the words 'the Court' shall be substituted."

Sri H. V. KOUJALGI.—I accept the amendment, Sir.

Mr. SPEAKER.—The question is:

"That for sub-clause (i), the following sub-clause shall be substituted, namely:—

"(i) for the words 'the Tribunal', the words 'the Court' shall be substituted."

The amendment was adopted.

Now, clause as amended. The question is:

"That clause 29, as amended, do stand part of the Bill.

The motion was adopted.

Clause 29 as amended was added to the Bill.

CLAUSES 30 and 31

Mr. SPEAKER.—There are no amendments. The question is :

"That clauses 30 and 31 do stand part of the Bill."

The motion was adopted.

Clauses 30 and 31, were added to the Bill.

CLAUSE 32

Mr. SPEAKER.—There are no amendments. The question is :

"That clause 32 do stand part of the Bill."

The motion was adopted.

Clause 32 was added to the Bill.

CLAUSE 33

Mr. SPEAKER.—The question is :

"That clause 33 do stand part of the Bill.".

The motion was negatived

Clause 33 was deleted from the Bill.

CLAUSES 34 to 36

Mr. SPEAKER.— The question is :

"That clauses 34 to 36, both inclusive do stand part of the Bill."

The motion was adopted.

Clauses 34 to 36, both inclusive, were added to the Bill.

CLAUSE 37

Mr. SPEAKER.—The question is :

"That clause 37 do stand part of the Bill."

There is an amendment by Sri M. R. Patil.

Sri M. R. PATIL.—Sir, I beg to move :

"That for clause 37, the following clauses shall be substituted namely :

"37. Certain provisions of Mysore Ordinance No. 1 of 1970 not to have effect :—The amendments to clauses (6), (7), (13) and (32) of section 2, Section 42, sub-section (1), (2) and (3) of section 63 and Schedule 1 to the Principal Act, made by the

Mysore Land Reforms (Amendment) Ordinance. 1970, (Mysore Ordinance No. 1 of 1970) shall be deemed never to have been made and the provisions of sections 2, 42, 63 and Schedule I to the principal Act as they stood prior to the said amendments shall and shall be deemed to continue to be in force. "

Mr. SPEAKER.—Amendment moved :

"That for clauses 37, the following clauses shall be substituted namely :

" *37. Certain provisions of Mysore Ordinace No. 1 of 1970 not to have effect* :—The amendments to clauses (6), (7), (13) and (32) of section 2, section 42 sub-sections (1), (2) and (3) of section 63 and Schedule I to the principal Act, made by the Mysore Land Reforms (Amendment) Ordinance, 1970 (Mysore Ordinance No. 1 of 1970) shall be deemed never to have been made and the provisions of sections 2, 42, 63 and schedule I to to the Principal Act as they stood prior to the said amendments shall and shall be deemed to continue to be in force."

† **Sri M. R. PATIL.**—Now we have accepted amendments to certain clauses of the Bill. We have also voted down certain clauses. As the Ordinance has already come into force and has been there, clauses relating to the hectares and all these items have to be deemed to be in force up till now. Therefore we have to move this amendment so that the original clauses as they existed before the Ordinance should continue hereafter. It is with that intention that this clause has been proposed by way of an amendment.

Sri H. V. KOUJALGI.—I accept the amendment, Sir.

Mr. SPEAKER.—The question is :

" That for clause 37, the following clauses shall be substituted, namely :—

37. *Certain provisions of Mysore Ordinance No. 1 of 1970 not to have effect* :—The amendments to clauses (6),(7),(13) and (32) of section 2, section 42, sub-sections (1),(2) and (3) of section 63 and schedule 1 to the principal Act, made by the Mysore Land Reforms (Amendment) Ordinance, 1970 (Mysore Ordinance No. 1 of 1970) shall be deemed never to have been made and the provisions of section 2, 42, 63 and Schedule I to the principal Act as they stood prior to the said amendments shall and shall be deemed to continue to be in force."

The amendments were adopted.

Mr. SPEAKER.—The question is :

" That clause 37, as amended, do stand part of the Bill."

The motion was adopted.

Clause 37, as amended, was added to the Bill.

CLAUSE 38

Mr. SPEAKER.—The question is:

"That clause 38 do stand part of the Bill."

† **Sri M. R. PATIL.**—Sir, for the existing clause 37 we have substituted another clause which was absolutely necessary. Clause 37 in the Bill before the House has been numbered as clause 38. There is no material alteration because of the change in the number of the clause. Therefore I move:

"That clause 38: *Repeal of Mysore Ordinance No. 1 of 1970* The Mysore Land Reforms (Amendment) Ordinance, 1970 (Mysore Ordinance No. 1 of 1970) is hereby repealed:

"Provided that anything done or any action taken under the principal Act as amended by the said Ordinance shall be deemed to have been done or taken under the Principal Act as amended by this Act."

Mr. SPEAKER.—Amendment moved:

"That causes 38: *Repeal of Mysore Ordinance No. 1 of 1970.* The Mysore Land Reforms (Amendment) Ordinance, 1970 (Mysore Ordinance No. 1 of 1970) is hereby repealed:

"Provided that anything done or any action taken under the principal Act as amended by the said Ordinance shall be deemed to have been done or taken under the Principal Act as amended by this Act."

Sri H. V. KOUJALGI.—I accept the amendment, Sir.

Mr. SPEAKER.—The question is:

"That clause 38: *Repeal of Mysore Ordinance No. 1 of 1970.* The Mysore Land Reforms (Amendment) Ordinance, 1970 (Mysore Ordinance No. 1 of 1970) is hereby repealed:

"Provided that anything done or any action taken under the principal Act as amended by the said Ordinance shall be deemed to have been done or taken under the Principal Act as amended by this Act."

The amendment was adopted.

I put clause 38, as amended. The question is:

"That clause 38 as amended do stand part of the Bill."

The motion was adopted.

Clause 38 was added to the Bill. As regards the minor changes in this clause from clause 33 to 37 may be made consequent to the deletion of clause 37.

CLAUSE 1, etc.

Mr. SPEAKER :—The question is :

" That clause 1, the long title and the Enacting Formula do stand part of the Bill."

The motion was adopted.

Clause 1, the long title and the Enacting Formula were added to the Bill.

Motion to pass

Sri H. V. KOUJALGI :—Sir, I beg to move :

"That the Mysore Land Reforms (Amendment) Bill, 1970, as amended, be passed."

Mr. SPEAKER.—The question is :

"That the Mysore Land Reforms (Amendment) Bill, 1970, as amended, be passed."

† **Sri H. SIDDAVEERAPPA** :—Sir, I do hope and trust that this will be the last amendment that the Hon. Minister is bringing forward. It is most unfortunate that he had to do a number of somersaults during the last two days. How all this could happen ? Because there is lot of thinking necessary to begin with. I am thankful to him for having accepted my suggestion. Otherwise, the results could have been disastrous. It would have again ended in endless litigation. I only expect him to see that before he lays down his office as Revenue Minister, at least the purpose for which this Bill is introduced is fulfilled.

ಶ್ರೀ ಡಿ. ದೇವರಾಜ ಅರಸ್ :—ಸ್ವಾಮಿ, ಈಗ ನಮ್ಮ ಮುಂದೆ ಒಪ್ಪಿಗೆಗಾಗಿ ತಂದಿರತಕ್ಕ 1970 ನೆಯ ಇಸವಿಯ ಮೈಸೂರು ಲ್ಯಾಂಡ್ ರಿಫಾರಮ್ಸ್ ಅಮೆಂಡ್‌ಮೆಂಟ್ ಬಿಲ್ಲನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಮಾನ್ಯ ರೆವಿನ್ಯೂ ಮಂತ್ರಿಗಳು ಈ ಬಿಲ್ಲನ್ನು ತಂದಿರತಕ್ಕ ಉದ್ದೇಶ ಏನು ಎಂದರೆ ಈಗ ದೇಶವಲ್ಲ ಹಾಲಿ ಟ್ರಿಬ್ಯುನಲ್ ಮುಂದೆ ಇರತಕ್ಕಂಥ 30–40 ಸಾವಿರ ಕೇಸುಗಳು ಬಾಕಿ ಇವೆ. ಅವುಗಳನ್ನೆಲ್ಲಾ ಇತ್ಯರ್ಥ ಮಾಡಬೇಕು ಎನ್ನತಕ್ಕ ಸದುದ್ದೇಶ ಮಾನ್ಯ ಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಇದೆಯೆಂದು ನನ್ನ ಭಾವನೆ. ಈ ಸದುದ್ದೇಶದಿಂದ ಮಾಡುತ್ತಾ ಇರುವುದರ ಪರಿಣಾಮ ಈಗ ತಂದಿರತಕ್ಕ ತಿದ್ದುಪಡಿಯಿಂದ ಪರಿಣಾಮಗಳು ಏನಾಗುತ್ತವೆ ಎಂದರೆ ಅವರು ಯಾವ ಸದುದ್ದೇಶವನ್ನು ಇಟ್ಟುಕೊಂಡು ಈ ತಿದ್ದುಪಡಿಯನ್ನು ತಂದಿದ್ದಾರೆಯೋ ಅದಕ್ಕೆ ವ್ಯತಿರಿಕ್ತವಾದ ಪರಿಣಾಮ ಬೇಗ ಬೇಗ ಕೇಸುಗಳು ಇತ್ಯರ್ಥವಾಗಬೇಕು ಎಂಬ ಭಾವನೆಗೆ ವ್ಯತಿರಿಕ್ತವಾದ ಕಾರ್ಯದಲ್ಲಿ ಅವು ಪರ್ಯವಸಾನವಾಗುತ್ತವೆ. ಒರಿಜಿನಲ್ ಆಕ್ಟಿನಲ್ಲಿ ಇದ್ದದ್ದು ಇದಕ್ಕೆ ಸ್ಪೆಷಲ್ ಟ್ರಿಬ್ಯುನಲ್ ಮಾಡಬೇಕು ಎಂದು. ಜಮೀನನ್ನು ಗುತ್ತಿಗೆಗೆ ಮಾಡಿರುವವರಿಗೆ ಲ್ಯಾಂಡ್ ಎಷ್ಟು ಹಚ್ಚಿಗೆ ಇದೆ, ಅದನ್ನು ಸರ್ಕಾರದವರು ತೆಗೆದುಕೊಂಡು ಗುತ್ತಿಗೆದಾರನಿಗೆ ಎಷ್ಟು ಕೊಡಬೇಕು. ಮಾಲೀಕನಿಗೆ ಎಷ್ಟು ಕೊಡಬೇಕು ಎಂಬುದನ್ನೆಲ್ಲಾ ಇತ್ಯರ್ಥ ಮಾಡುವುದಕ್ಕೆ ಟ್ರಿಬ್ಯೂನಲ್ ಮುಂದೆ ಹೋಗಬೇಕೆಂದು ಒರಿಜನಲ್ ಕಾನೂನಿನಲ್ಲಿ ಇತ್ತು. ಈಗ ಅದನ್ನು ಬದಲಾವಣೆ ಮಾಡಿದ್ದಾರೆ. ಈಗ ಭೂಸುಧಾರಣೆಗೆ ಸಂಬಂಧಪಟ್ಟ ಕೇಸುಗಳನ್ನೂ ಎಲ್ಲಾ ಮುನ್ಸೀಫ್ ಕೋರ್ಟುಗಳಿಗೂ ಕಳುಹಿಸುವಂಥಾ ವ್ಯವಸ್ಥೆಯನ್ನು ಮಾಡಿದ್ದಾರೆ. ಈಗ ದೇಶದಲ್ಲಿ ರತಕ್ಕ 134 ಕೋರ್ಟುಗಳಿಗೂ ಈ ಭೂಸುಧಾರಣೆಗೆ ಸಂಬಂಧಪಟ್ಟ ಕೇಸುಗಳನ್ನು ರಫರ್ ಮಾಡುವುದಾದರೆ ಅವು ಬೇಗ ಬೇಗ ಇತ್ಯರ್ಥವಾಗುತ್ತವೆ; ಸ್ಪೆಷಲ್ ಲ್ಯಾಂಡ್ ಟ್ರಿಬ್ಯುನಲ್‌ಗಳ

(ಶ್ರೀ ಡಿ. ದೇವರಾಜ ಅರಸ್)

ಕೇವಲ 70 ಚಿಲ್ಲರೆ ಇವೆ; ಈ ಟ್ರಿಬ್ಯುನಲ್‌ಗಳಿಂದ ಎಲ್ಲಾ ಕೇಸುಗಳನ್ನು ಜಾಗ್ರತೆಯಾಗಿ ಇತ್ಯರ್ಥ ಮಾಡುವುದಕ್ಕಾಗುವುದಿಲ್ಲ ಎಂದು ಆಲೋಚನೆ ಮಾಡಿ ಈ ತಿದ್ದುಪಡಿಯಿಂದ ಮುನ್ಸೀಫ್ ಕೋರ್ಟುಗಳಿಗೂ ಲ್ಯಾಂಡ್ ಟ್ರಿಬ್ಯೂನಲ್‌ನಂತೆ ಕೇಸುಗಳನ್ನು ನಡೆಸುವುದಕ್ಕೆ ಅವಕಾಶ ಮಾಡಿದ್ದೇವೆ. ಇದರಿಂದ ಭೂಸುಧಾರಣೆಯ ಕೇಸುಗಳು ಬೇಗ ಬೇಗ ಇತ್ಯರ್ಥವಾಗುತ್ತವೆ ಎಂದು ಹೇಳುತ್ತಾರೆ. ನಾನಾದರೂ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ, ಈ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ದೇಶದಲ್ಲಿರತಕ್ಕ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಡಿಸ್ಟ್ರಿಕ್ಟ್ ಕೋರ್ಟುಗಳಲ್ಲಿ ಮುನ್ಸೀಫ್ ಕೋರ್ಟುಗಳಲ್ಲಿ ಎಷ್ಟೆಷ್ಟು ಕೇಸುಗಳು ಯಾವ ಯಾವ ತಾಲ್ಲೂಕಿನಲ್ಲಿ ಬಾಕಿ ಇವೆ, ಯಾವ ಯಾವ ಕೋರ್ಟಿನಲ್ಲಿ ಕೇಸುಗಳು ಹೆಚ್ಚಾಗಿವೆ, ಎಷ್ಟು ಕೇಸುಗಳು ಎಷ್ಟು ವರ್ಷಗಳಿಂದ ಇತ್ಯರ್ಥವಾಗದೇ ನಿಂತಿವೆ, ಯಾವ ಯಾವ ಕೋರ್ಟುಗಳಲ್ಲಿ ಕಡಿಮೆ ಕೇಸುಗಳು ಇವೆ, ಸಂಪೂರ್ಣವಾಗಿ ಕೆಲಸ ಇಲ್ಲದೆ ಇರುವ ಕೋರ್ಟುಗಳು ಎಷ್ಟು ಎನ್ನುವುದನ್ನು ಗಮನಕ್ಕೆ ತೆಗೆದುಕೊಂಡಂತೆ ಕಾಣುವುದಿಲ್ಲ. ಮುನ್ಸೀಫ್ ಕೋರ್ಟುಗಳು ಹೆಚ್ಚಾಗಿವೆ, ಸ್ಪೆಷಲ್ ಲ್ಯಾಂಡ್ ಟ್ರಿಬ್ಯುನಲ್‌ಗಳು ಕಡಿಮೆ ಇವೆ, ಆದ್ದರಿಂದ ಈ ಭೂಸುಧಾರಣೆಗೆ ಸಂಬಂಧಪಟ್ಟ ಕೇಸುಗಳನ್ನೆಲ್ಲಾ ಮುನ್ಸೀಫ್ ಕೋರ್ಟಿಗೆ ವಹಿಸಿದರೆ ಕೇಸುಗಳು ಬಹಳ ಬೇಗ ಇತ್ಯರ್ಥವಾಗುತ್ತವೆ ಎಂದು ಇವರು ಭಾವನೆ ಮಾಡಿಕೊಂಡಿದ್ದಾರೆ. ಆದರೆ ಅನೇಕ ಕೋರ್ಟುಗಳಲ್ಲಿ ಬೇರೆ ಬೇರೆ ವಿಧವಾದ ಕೇಸುಗಳ ಸಂಖ್ಯೆ ಬಹಳ ಇವೆ. ಮೈಸೂರು ಡಿಸ್ಟ್ರಿಕ್ಟ್‌ನಲ್ಲಿರತಕ್ಕ ಕೋರ್ಟುಗಳಲ್ಲಿ ಸಾವಿರಾರು ಕೇಸುಗಳು ಇತ್ಯರ್ಥವಾಗದೇ ಹಾಗೆಯೇ ಉಳಿದಿವೆ. ಎಲೆಕ್ಷನ್ನಿಗೆ ಸಂಬಂಧಪಟ್ಟ ಕೇಸುಗಳು ಇತ್ಯರ್ಥವಾಗಬೇಕಾದರೆ 6 ತಿಂಗಳು ಬೇಕು. ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಗಳ ಚುನಾವಣೆ ಸಂಬಂಧಪಟ್ಟ ಕೇಸುಗಳು ಇನ್ನೂ ಇತ್ಯರ್ಥವಾಗಿಲ್ಲ. ಕೆಲವು ಕೇಸುಗಳು 5 ವರ್ಷ 6 ವರ್ಷಗಳಿಂದ ತೀರ್ಮಾನವಾಗದೆ ಅವು ಹಾಗೆಯೇ ಉಳಿದಿವೆ. ಅನೇಕ ಕ್ರಿಮಿನಲ್ ಕೇಸುಗಳು ಹಾಗೆಯೇ ಉಳಿದಿವೆ. ಹೀಗಿರುವಾಗ ಜಮೀನಿಗೆ ಸಂಬಂಧಪಟ್ಟ ಕೇಸುಗಳನ್ನೆಲ್ಲಾ ಈ ಕೋರ್ಟುಗಳಿಗೆ ತೀರ್ಮಾನಕ್ಕೆ ಕಳುಹಿಸುವುದಾದರೆ ಅವು ತೀರ್ಮಾನವಾಗಬೇಕಾದರೆ ಎಷ್ಟು ವರ್ಷ ಕಾಯಬೇಕಾಗುತ್ತದೆಯೋ ಗೊತ್ತಿಲ್ಲ. ಈ ಪರಿಸ್ಥಿತಿಯಲ್ಲಿ ಸರ್ಕಾರ ಮುನ್ಸೀಫ್ ಕೋರ್ಟುಗಳಿಗೆ, ಡಿಸ್ಟ್ರಿಕ್ಟ್ ಕೋರ್ಟುಗಳಿಗೆ ಮತ್ತು ಸಿವಿಲ್ ಕೋರ್ಟುಗಳಿಗೆ ಈ ಕಾನೂನನ್ನು ಒಳಪಡಿಸಬೇಕು ಎಂದು ಏತಕ್ಕೆ ಮಾಡಿದರೋ ಇದರ ವಿಚಾರ ನನಗೆ ಅರ್ಥವಾಗುವುದಿಲ್ಲ. ಇದು ಪ್ರಗತಿಪರ ಹೆಜ್ಜೆ ಅಲ್ಲ. ಬೇಗ ಬೇಗ ಜಮೀನುಗಳಿಗೆ ಸಂಬಂಧಪಟ್ಟ ತಕರಾರುಗಳನ್ನು ತೀರ್ಮಾನಮಾಡತಕ್ಕ ದಿಶೆಯಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ಬದಲಾಗಿ ಅವನ್ನು ಹಿಂದಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ. ಮಾನ್ಯ ಮಂತ್ರಿಗಳು ಇದೇ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರ ಹೇಳುತ್ತಾ ಈ ಭೂಸುಧಾರಣೆಯನ್ನು ಜಾರಿಗೆ ತರಬೇಕಾದರೆ ಸುಮಾರು 4–5 ವರ್ಷಗಳು ಬೇಕು ಎಂದು ಹೇಳಿದ್ದಾರೆ. 4-5 ವರ್ಷಗಳಲ್ಲಿ ಇದು ಇತ್ಯರ್ಥವಾಗುವುದಾದರೆ ನಾನು ಸಂತೋಷಪಡುತ್ತೇನೆ. 4-5 ವರ್ಷಗಳಲ್ಲಿ, 10 ವರ್ಷಗಳಾದರೂ ಇದನ್ನು ಆಖೈರು ತೀರ್ಮಾನ ಮಾಡಿ ಜಮೀನನ್ನು ಹಂಚಿಕೆ ಮಾಡತಕ್ಕ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಇದು ಪ್ರಗತಿಪರವಾದ ಕಾನೂನು ಅಲ್ಲ. ಜಮೀನಿಗೆ ಸಂಬಂಧಪಟ್ಟ ತಕರಾರುಗಳನ್ನು ಇತ್ಯರ್ಥಮಾಡುವುದಕ್ಕೆ ಟ್ರಿಬ್ಯುನಲ್‌ನಿಂದ ಮುನ್ಸೀಫ್ ಕೋರ್ಟುಗಳಿಗೆ ಕೊಟ್ಟಿದ್ದಾರೆ ಎಂದರೆ ಈ ಬಗ್ಗೆ ನನಗೆ ಬೇಸರವಾಗುತ್ತದೆ. ಹಿಡುವಳಿದಾರರಿಗೆ, ಗೇಣಿದಾರರಿಗೆ ಸಂಬಂಧಪಟ್ಟ ಹಾಗೆ ಭೂಸುಧಾರಣೆಯ ಕಾಯಿದೆ ವಿಷಯದಲ್ಲಿ ಬಡವರಿಗೆ ಹೆಚ್ಚು ತೊಂದರೆಯಾಗತಕ್ಕಂಥ ವಿಚಾರ ಇದೆಯೆಂದರೆ ಅಂಥಾ ಕೇಸುಗಳನ್ನು ತೀರ್ಮಾನ ಮಾಡುವುದಕ್ಕೆ ತಹಶೀಲ್ದಾರರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಇವರಿಗೆ ಯಾವ ಅಧಿಕಾರವನ್ನು ಕೊಟ್ಟಿದ್ದಾರೆ ಎಂದರೆ ಗೇಣಿದಾರನಿಗೂ ಜಮೀನ್ದಾರನಿಗೂ ಜಮೀನಿನ ವಿಷಯದಲ್ಲಿ ತಕರಾರು ಬಂದಾಗ ಗೇಣಿದಾರನ ಹತ್ತಿರ ಇರತಕ್ಕ ಜಮೀನಿನಲ್ಲಿ ಎಷ್ಟು ಜಮೀನನ್ನು ರೆಸ್ಯೂಮ್ ಮಾಡಬೇಕು, ಎಷ್ಟು ಜಮೀನನ್ನು ಜಮೀನ್ದಾರನಿಗೆ ಕೊಡಬೇಕು, ಎಷ್ಟು ಜಮೀನನ್ನು ಗೇಣಿದಾರನಿಗೆ ಕೊಡಬೇಕು ಎನ್ನುವ ವಿಚಾರವನ್ನು ತೀರ್ಮಾನ ಮಾಡತಕ್ಕ ಅಧಿಕಾರವನ್ನು ಕೊಟ್ಟಿದ್ದಾರೆ. ಇವರ ದೃಷ್ಟಿಯಲ್ಲಿ ಜಮೀನಿಗೆ ಸಂಬಂಧಪಟ್ಟ ತಕರಾರುಗಳನ್ನು ತೀರ್ಮಾನ ಮಾಡುವುದಕ್ಕೆ ತಹಶೀಲ್ದಾರರಿಗೆ ಅಧಿಕಾರ ಕೊಡುವುದಾದರೆ ಆ ಕೇಸುಗಳನ್ನು ಬೇಗ ಬೇಗ ಇತ್ಯರ್ಥ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಇವರು ಹೇಳಿದ್ದಾರೆ.

5-00 P.M.

ಬೇಗ ಬೇಗ ಇತ್ಯರ್ಥವಾಗುತ್ತಾ ಇಲ್ಲ ಎನ್ನುವುದರಲ್ಲಿ ನನಗೆ ಒಂದು ಶಂಕೆ ಇದೆ. ಎಲ್ಲಿ ಎಲ್ಲರಿಗೂ ಸಮಾಧಾನಕರವಾದಂತಹ ತೀರ್ಮಾನ ಬರುತ್ತದೆ, ಅಲ್ಲಿ ಬೇಗ ಇತ್ಯರ್ಥವಾಗುತ್ತದೆ.

ಇವತ್ತು ದೇಶದಲ್ಲಿ ವಾತಾವರಣ ಹೇಗೆ ಇದೆ ಎಂಬುದನ್ನು ನಾವು ನೋಡಬೇಕು. ತಾಲ್ಲೋಕು ಮಟ್ಟದಲ್ಲಿರತಕ್ಕಂತಹ ಗೇಣಿದಾರ ಏನಿದ್ದಾನೆ, ಇವನ ಪರ ವಾದ ಮಾಡತಕ್ಕವರು, ಮತ್ತು ಇವರ ಪರ ಕೆಲಸ ಮಾಡತಕ್ಕ ಸಂಘಸಂಸ್ಥೆಗಳು ಮತ್ತು ಮುಖಂಡರು ಇರತಕ್ಕದ್ದು ಬಹಳ ಕಡಿಮೆ. ಜಮೀನ್ದಾರರು ಯಾರು ಇದ್ದಾರೆ, ಅವರ ಪರ ಕೆಲಸ ಮಾಡುವವರು, ವಾದಮಾಡುವವರೂ ಬಹಳ ಜನ ಇದ್ದಾರೆ. ಯಾಕೆಂದರೆ ಅವರು ಸ್ವಲ್ಪ ದೊಡ್ಡ ಮನುಷ್ಯರಾಗಿರುತ್ತಾರೆ. ಇಂಥವರ ಪ್ರಭಾವ ಅಧಿಕಾರಿಗಳ ಮೇಲೂ ಇದೆ, ಮತ್ತು ಸಂದರ್ಭಾನುಸಾರವಾಗಿ ಸರ್ಕಾರದ ಮೇಲೂ ಬೀಳುತ್ತದೆ. ಚುನಾವಣೆಯಲ್ಲಿ ಸ್ಥಳೀಯ ಜನರು ಅಧಿಕಾರದಲ್ಲಿರುವ ಪಕ್ಷಗಳಿಗೆ ಸಹಾಯ ಮಾಡಿದಂತಹ ಜನರಾಗಿದ್ದರೆ, ಅಂಥವರಿಗೆ ಸಹಾಯ ಮಾಡುತ್ತಾರೆ. ಮತ್ತು ಮಂತ್ರಿಯವರು, ಉಪಮಂತ್ರಿಯವರು ಆ ಸ್ಥಳಗಳಿಗೆ ಹೋಗತಕ್ಕ ಕಾಲದಲ್ಲಿ, ಇವರ ಒಂದು ಆಶ್ರಯದಲ್ಲಿ ಮರ್ಯಾದೆ ಪಡೆಯತಕ್ಕ ವಿಚಾರ ಇದೆ. ಆದ್ದರಿಂದ ಸ್ಥಳೀಯ ಅಧಿಕಾರಿಗಳೂ ಸಹ ಈ ಜಮೀನ್ದಾರರಿಗೆ, ದೊಡ್ಡಮನುಷ್ಯರಿಗೆ ಹೆಚ್ಚಿನ ಗಮನ ಕೊಡುತ್ತಾರೆ ಮತ್ತು ಇವರನ್ನು ಕಂಡರೆ ಈ ಅಧಿಕಾರಿಗಳಿಗೆ ಹೆದರಿಕೆ,—ಎಲ್ಲಿ ಇವರು ಟ್ರಾನ್ಸ್‌ಫರ್ ಮಾಡಿಸುತ್ತಾರೋ, ಮತ್ತು ಇತರ ತೊಂದರೆ ಕೊಡುತ್ತಾರೋ, ಎಂದು. ಇದನ್ನು ನಮ್ಮ ಮಾನ್ಯ ಮಂತ್ರಿಗಳಿಗೆ ಒತ್ತಿ ಒತ್ತಿ ಹೇಳುತ್ತಿದ್ದೇನೆ. ಯಾಕೆಂದರೆ ಇವತ್ತು ತಾಸೀಲ್ದಾರರ ಪ್ರಮೋಷನ್ ಬಗ್ಗೆ, ಟ್ರಾನ್ಸ್‌ಫರ್ ಬಗ್ಗೆ ಎಲ್ಲಾ ಎಷ್ಟೋ ಸನ್ನಿವೇಶಗಳು ಈ ರೀತಿಯಲ್ಲಿ ಬರುತ್ತಿವೆ. ಎಷ್ಟೋ ಜನ ಸ್ಥಳೀಯ ಮುಖಂಡರು ಬಂದು, ಇವರನ್ನು ಅಲ್ಲಿಂದ ತೆಗೆಯಬೇಕು, ಇವರನ್ನು ಅಲ್ಲಿ ಹಾಕಬೇಕು ಇವರು ಇದ್ದರೆ ನಮಗೆ ಉತ್ತಮ, ನಮಗೆ ಈ ಜಾತಿಯವರು ಬೇಕು ಆ ಜಾತಿ ಬೇಕೆಂದು ಹೇಳುತ್ತಿದ್ದಾರೆ. ಅವನ್ನೆಲ್ಲಾ ಗಮನಿಸಿದರೆ ನಾನು ಹೇಳತಕ್ಕದ್ದು ಅರ್ಥವಾಗುತ್ತದೆ. ರಿಸಮ್‌ಶನ್ ಎಷ್ಟು ಭಾಗ ತೆಗೆದುಕೊಳ್ಳಬೇಕು, ಬಿಡಬೇಕೆಂಬುದನ್ನೆಲ್ಲಾ ತಾಹಸೀಲ್ದಾರ್‌ರವರಿಗೆ ಕೊಟ್ಟದ್ದೇ ಆದರೆ, ಅವರು ಹೆಚ್ಚು ಈ ತರಹ ಒತ್ತಡಕ್ಕೆ ಮಣಿಯತಕ್ಕ ಅವಕಾಶ ಇದೆ. ಆದರೆ ಟ್ರಿಬ್ಯೂನಲ್ ಮುಂದು ಹೋದಾಗ, ಯಾವ ಒಬ್ಬ ವ್ಯಕ್ತಿಗೆ ನ್ಯಾಯ ದೊರಕಬೇಕೋ ಅದು ದೊರಕುವಂತಹ ಅವಕಾಶ ಇದೆ. ಅಂಥ ಅವಕಾಶವನ್ನು ತೆಗೆದು ಬೇಗ ಇತ್ಯರ್ಥ ಮಾಡುತ್ತೇವೆಂದು, ತಾಹಸೀಲ್ದಾರರಿಗೆ ಅಧಿಕಾರವನ್ನು ಕೊಟ್ಟಿರತಕ್ಕಂತದ್ದು ಸರ್ವಥಾ ನ್ಯಾಯವಲ್ಲ, ಸಾಧುವಾದುದಲ್ಲ ಮತ್ತು ಇದರಿಂದ ಬಡವರಿಗೆ ನ್ಯಾಯ ದೊರಕುವುದಿಲ್ಲ. ಇದು ಕೂಡ ಒಂದು ರಿಟ್ರೋಗ್ರೇಡ್ ಸ್ಟೆಪ್ ಆಗಿದೆ. ಈ ಎರಡು ದೃಷ್ಟಿಯಿಂದ ನಾವು ಪಾಸು ಮಾಡತಕ್ಕ ಅಮೆಂಡ್‌ಮೆಂಟ್ ಬಿಲ್ ಏನಿದೆ, ಇದರಿಂದ ನಮ್ಮ ಒಂದು ತತ್ವ ಏನಿದೆ, ದೇಶದಲ್ಲಿ ಎಷ್ಟೋ ವರ್ಷಗಳಿಂದ ಭೂಸುಧಾರಣೆ ಮಾಡಬೇಕೆಂದು ಹೇಳಿ, ಅದನ್ನು ಪ್ರತಿಪಾದನೆ ಮಾಡಿ, ಆಕ್ಟ್ ಮಾಡಿ, ಈ ಆಕ್ಟ್ ಇನ್ನೂ ಜಾರಿಗೆ ಬರದೆ, ಇನ್ನೂ ನಾಲ್ಕು ವರ್ಷ ಆಗುತ್ತದೆಂದು ಹೇಳುವುದಾದರೆ, ಇದು ಆ ತತ್ವಕ್ಕೆ ವಿರೋಧವಾಗುತ್ತದೆ. 1972ನೇ ಇಸವಿಯೊಳಗೆ ಈ ಭೂಸುಧಾರಣೆ ಕಾನೂನು ಸಂಪೂರ್ಣವಾಗಿ ದೇಶಾದ್ಯಂತ ಜಾರಿಗೆ ತರಬೇಕಾದರೆ, ಅದಕ್ಕೆ ಸ್ಪೆಶಲ್ ಟ್ರಿಬ್ಯೂನಲ್ ಇರಬೇಕಾದದು ಸರಿ. ಇರತಕ್ಕ ಕಾನೂನಿನಲ್ಲಿ ಸ್ಪೆಶಲ್ ಟ್ರಿಬ್ಯೂನಲ್ ಮಾಡತಕ್ಕಂತಹ ಅಧಿಕಾರ ತೆಗೆದು ಮತ್ತೆ ಮುನ್ಸೀಫ್ ಕೋರ್ಟಿಗೆ, ಕೊಟ್ಟರೆ, ತಾಹಸೀಲ್ದಾರರಿಗೆ ಜುಡಿಶಿಯಲ್ ಟ್ರಿಬ್ಯುನಲ್ ಪವರ್ಸ್ ಕೊಟ್ಟರೆ, ಇದರಿಂದ ಬಹಳ ತೊಂದರೆಯಾಗುತ್ತದೆ. ಇದರಿಂದ ಏನಾಗುತ್ತದೆ ಅಂದರೆ, ಒಂದು ದಿವಸ ಇವರದ್ದೇ ಸರ್ಕಾರ ಇದ್ದರೆ, ಪುನಃ ಬೇರೆ ರೀತಿಯಾದಂತಹ ಅಮೆಂಡ್‌ಮೆಂಟ್ ತಂದು ಹಿಂದೆ ಇದ್ದದ್ದೇ ಇರಲಿ ಎಂದು ಹೇಳುವುದರಲ್ಲಿ ನನಗೆ ಏನೂ ಅನುಮಾನವಿಲ್ಲ. ಇದರಿಂದ ಕೇಸುಗಳೆಲ್ಲಾ ನಿಧಾನವಾಗುತ್ತದೆಂಬು ನನ್ನ ಅಭಿಪ್ರಾಯ. ಈ ಎಲ್ಲಾ ಕಾರಣಗಳಿಂದ ತಂದಿರತಕ್ಕಂತಹ ಈ ಅಮೆಂಡ್‌ಮೆಂಟ್‌ನ್ನು ನಾನು ಸಂಪೂರ್ಣವಾಗಿ ಪ್ರತಿಭಟಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬೋಳಾ ರಘುರಾಮ ಶೆಟ್ಟಿ (ಕಾರ್ಕಳ).—ಮಾನ್ಯ ಅಧ್ಯಕ್ಷರೆ, ಇವತ್ತು ಬಂದಂತಹ ಭೂಮಸೂದೆಯ ತಿದ್ದುಪಡಿ ಮಸೂದೆಯನ್ನು ಕೆಲವು ಕಾರಣಗಳಿಂದ ವಿರೋಧಿಸುತ್ತೇನೆ. ಭೂಮಸೂದೆ ಬೇಡವೆಂದು ನಾನು ಹೇಳುವವನಲ್ಲ. ಆದರೆ ಈ ಭೂಮಸೂದೆಗೆ ಸಂಬಂಧಪಟ್ಟ ಎಲ್ಲಾ ಜನರಿಗೆ ನ್ಯಾಯವಾಗಬೇಕೆಂದು ನನ್ನ ಅಭಿಪ್ರಾಯ. ಹಾಗೆ ಈ ಮಸೂದೆ ಬಂದು 5 ವರ್ಷವಾಯ್ತು ಈ 5 ವರ್ಷಗಳಲ್ಲಿ ಇದನ್ನು ಯಾಕೆ ಸರಿಯಾಗಿ ಜಾರಿಗೆ ತರಲಿಲ್ಲ ಮತ್ತು ಇದರಲ್ಲಿ ಈಗಿರುವಂತೆ ಹೇಗೆ ಅನ್ಯಾಯವಾಗುತ್ತದೆಂಬುದನ್ನು ನಾನು ಸ್ವಲ್ಪ ಹೇಳುತ್ತೇನೆ. ಈ ಮಸೂದೆಯಲ್ಲಿ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿದ್ದಂತಹ ಮೊಕದ್ದಮೆಗಳನ್ನು ಮುನ್ಸೀಫ್ ಕೋರ್ಟಿಗೆ ಟ್ರಾನ್ಸ್‌ಫರ್ ಮಾಡುತ್ತಾರೆ. ಇದರಿಂದ ನಮ್ಮ ಸಮಸ್ಯೆ ಪರಿಹಾರವಾಗಬಹುದೆಂದು ಮಂತ್ರಿಯವರು ಅಭಿಪ್ರಾಯ ಪಟ್ಟರೆ, ಅದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಲ್ಯಾಂಡ್ ಟ್ರಿಬ್ಯೂನಲ್ ಇದ್ದರೂ ಕೂಡ ಅದರ ಮುಂದೆ ಬರುವಂತವುಗಳು ಗೇಣಿ ಮೊಕದ್ದಮೆಗಳು. ಗೇಣಿ ಮೊಕದ್ದಮೆಗಳು ತೀರ್ಮಾನವಾಗಬೇಕಾದರೆ, ಈ ಮುನ್ಸೀಫ್ ಕೋರ್ಟಿನ ಕೆಲಸ ಕೇವಲ ಒಂದು ಲೆಕ್ಕವನ್ನು ಹಾಕುವಂತದ್ದು ಮಾತ್ರ. ಅದೇನೆಂದರೆ,

(ಶ್ರೀ ಬೋಳಾ ರಘುರಾಮ ಶೆಟ್ಟಿ)

ನ್ಯಾಯ ಗೇಣಿ ತೀರ್ಮಾನಕ್ಕೆ ಉತ್ಪತ್ತಿ ಎಷ್ಟು ಎಂದು ನಿರ್ಣಯ ಮಾಡಬೇಕು. ಉತ್ಪತ್ತಿಯನ್ನು ಈ ಕ್ಲಾಸಿನ ಪ್ರಕಾರ ತಹಸೀಲ್ದಾರರು ಮತ್ತು ಅಸಿಸ್ಟೆಂಟ್ ಕಮಿಷನರ್ ಅವರು ತಮ್ಮ ಕ್ಷೇತ್ರದಲ್ಲಿರುವ ಲ್ಯಾಂಡುಗಳ ಇರಿಗೇಶನ್ ಸೌಕರ್ಯ, ಮತ್ತಿತರ ಮಣ್ಣಿನ ಗುಣವನ್ನೆಲ್ಲಾ ನೋಡಿ ತೀರ್ಮಾನ ಮಾಡಬೇಕಾಗುತ್ತದೆ. ಹೀಗೆ ಅವರು ಬೇರೆ ಬೇರೆ ತರಗತಿಯ ಭೂಮಿಗಳಲ್ಲಿ, ಬೇರೆ ಬೇರೆ ತರದ ಉತ್ಪತ್ತಿ ಇರುತ್ತದೆ ಎಂಬುದನ್ನು ನೋಡಿ ನಿರ್ಣಯ ಮಾಡಬೇಕಾಗುತ್ತದೆ. ಇದರ ಬಗ್ಗೆ ಹೈಕೋರ್ಟಿನಲ್ಲಿ ಒಂದು ರಿಟ್ ಕೂಡಾ ಹೋಗಿತ್ತು. ಅವರ ತೀರ್ಮಾನ ಕೂಡ ಕೊಟ್ಟಿದ್ದಾರೆ. ಉತ್ಪತ್ತಿ ನಿರ್ಣಯ ಮಾಡುವಾಗ ಸ್ಥಳದಲ್ಲಿರತಕ್ಕ ಎಲ್ಲಾ ಬೆಳೆಗಳನ್ನು ಗಮನಕ್ಕೆ ತೆಗೆದುಕೊಂಡು ಸ್ಥಳದ ಮಣ್ಣಿನ ಪರೀಕ್ಷೆ ಮಾಡಿ ಇತ್ಯರ್ಥ ಮಾಡಬೇಕೆಂದು ಹೇಳಿದ್ದಾರೆ. ಅದೇ ಅಭಿಪ್ರಾಯವನ್ನು ತಜ್ಞರೂ ಕೂಡ ಹೇಳುತ್ತಿದ್ದಾರೆ. ಹೀಗೆ ಸ್ಥಳಕ್ಕೆ ಹೋಗಿ ತೀರ್ಮಾನ ಮಾಡಬೇಕಾಗಿರುವುದರಿಂದ ತಹಸೀಲ್ದಾರರಿಗೆ ಬಹಳ ಕಷ್ಟವಾಗುತ್ತದೆ. ಮತ್ತು ಇವನ್ನು ಮುನ್ಸೀಫ್ ಕೋರ್ಟಿಗೆ ಟ್ರಾನ್ಸ್‌ಫರ್ ಮಾಡಿದ ಕೂಡಲೇ ಈಗ ಇದ್ದ ಸಮಸ್ಯೆ ಪರಿಹಾರವಾಗುವುದಿಲ್ಲ. ತಹಸೀಲ್ದಾರರು ಎಷ್ಟು ಪ್ರಯತ್ನಪಟ್ಟರೂ ಕೂಡ ತಮ್ಮ ತಾಲ್ಲೂಕು ಕ್ಷೇತ್ರದಲ್ಲಿರುವ ಭೂಮಿಗಳನ್ನು ಸಂದರ್ಶನ ಮಾಡಿ ಬೇರೆ ಬೇರೆ ಭೂಮಿಯ ಉತ್ಪತ್ತಿಯನ್ನು ನಿರ್ಣಯ ಮಾಡುವುದಕ್ಕಾಗುವುದಿಲ್ಲ. ಹಾಗೆ ಮಾಡದೆ, ಅವರು ಏನಾದರೂ ನೋಟಿಫಿಕೇಶನ್ ಕೊಟ್ಟರೆ, ಆ ನೋಟಿಫಿಕೇಶನ್ ಮೇಲೆ ಯಾರಾದರೂ ರಿಟ್ ಹೋಗಬಹುದು ಮತ್ತು ಆ ನೋಟಿಫಿಕೇಶನ್ ಮೇಲೆ ಡೆಪ್ಯೂಟಿ ಕಮೀಷನರಿಗೆ ಅಪೀಲ್‌ಕೂಡ ಮಾಡಬಹುದು. ಹಾಗೆ ಮಾಡಿದಾಗ ಸಂಬಂಧಪಟ್ಟ ಎಲ್ಲರಿಗೂ ನೋಟೀಸ್ ಕೊಡಬೇಕಾಗುತ್ತದೆ. ಹೀಗೆ ಯಾವುದಾದರೂ ಲ್ಯಾಂಡ್ ಉತ್ಪತ್ತಿ ಸರಿಯಿಲ್ಲ ಎಂದು ಡೆಪ್ಯೂಟಿ ಕಮಿಷನರಿಗೆ ಅಪೀಲ್ ಹೋಗುವಾಗ, ಅದಕ್ಕೆ ಸಂಬಂಧಪಟ್ಟ ಎಲ್ಲರಿಗೂ ನೋಟೀಸ್ ಕೊಡಬೇಕಾಗುತ್ತದೆ. ಒಂದು ತಾಲ್ಲೂಕಿನಲ್ಲಿ ಅದಕ್ಕೆ ಸಂಬಂಧಪಟ್ಟವರು ಎಷ್ಟು ಜನರು ಇರಬಹುದೆಂದು ತಾವೇ ಊಹಿಸಬಹುದು. ಒಂದುವೇಳೆ ಹಾಗೆ ನೋಟೀಸ್ ಕೊಡದೆ ತೀರ್ಮಾನಮಾಡಿದ್ದರೆ, ಆ ಒಂದೇ ಕಾರಣದಿಂದ ರಿಟ್‌ಗೆ ಹೋದರೆ ಅದು ಕ್ಯಾನ್ಸಲ್ ಆಗುವ ಸಂದರ್ಭ ಉಂಟು. ಹೀಗಾಗಿ ನ್ಯಾಯ ಗೇಣೀ ಕೂಡ ಯಾವ ಕೋರ್ಟಿನಲ್ಲಿಯೂ ತೀರ್ಮಾನವಾಗುವುದಿಲ್ಲ. ಈ ಸಮಸ್ಯೆ ಪರ್ಮನೆಂಟಾಗಿ ಉಳಿಯುತ್ತದೆ. ಆದ್ದರಿಂದ ಇದಕ್ಕೆ ಸರಿಯಾದ ಆಧಾರ ಇಟ್ಟುಕೊಂಡು ತಿದ್ದುಪಡಿಯನ್ನು ತಂದಿದ್ದರೆ ಬಹಳ ಚೆನ್ನಾಗಿತ್ತೆಂದು ಹೇಳುತ್ತೇನೆ.

ಇನ್ನು ರಿಸೆಂಪ್ಷನ್ ವಿಷಯ. ಆಸ್ತಿ ಸ್ವಾಧೀನ ಬಗ್ಗೆ ಅನೇಕ ಮೊಕದ್ದಮೆಗಳು ಈಗ ಕೋರ್ಟಿನಲ್ಲಿ ತೀರ್ಮಾನವಾಗುತ್ತಿಲ್ಲ. ಇವತ್ತಿನ ದಿವಸ ಎಲ್ಲಾ ಕೋರ್ಟುಗಳಲ್ಲಿಯೂ ಗೇಣೀ ಮೊಕದ್ದಮೆಗಳು ಕಳೆದ ಐದು ವರ್ಷಗಳಿಂದಲೂ ಬಾಕಿ ಇವೆ. ಕೋರ್ಟುಗಳಲ್ಲಿ ಜಾಗ್ರತೆಯಾಗಿ ಈ ಕೇಸುಗಳನ್ನು ತೀರ್ಮಾನಮಾಡುವುದಿಲ್ಲ. ನ್ಯಾಯಾಧೀಶರಾದವರು ಅವರ ಚೇಂಬರ್‌ಗಳಲ್ಲಿ ಕೂತುಕೊಂಡೇ ಕೇಸುಗಳಿಗೆ ವಾಯಿದೆಗಳನ್ನು ಕೊಡುತ್ತಾರೆ. ಓಪನ್ ಕೋರ್ಟುಗಳಲ್ಲಿ ಅವನ್ನು ಕನ್ಸಿಡರ್ ಮಾಡುತ್ತಾ ಇಲ್ಲ. ಇಷ್ಟರವರೆಗೂ ಅನೇಕ ಕೋರ್ಟಿನಲ್ಲಿ ಇಂತಹ ಸಮಸ್ಯೆಗಳು ಪರಿಹಾರವಾಗುತ್ತಾ ಇಲ್ಲ. ರಿಸೆಂಪ್ಷನ್ ಕೇಸ್‌ಗಳಲ್ಲಿ ತೊಂದರೆಗಳು ಇರುತ್ತವೆ. ಆದ್ದರಿಂದ ಜಾಗ್ರತೆಯಾಗಿ ಕೇಸುಗಳನ್ನು ವಿಲೇವಾರಿ ಮಾಡುವುದಕ್ಕಾಗುವುದಿಲ್ಲ. ಈ ವಿಷಯವನ್ನು ಅನೇಕ ಸಾರಿ ಮಾನ್ಯ ಮಂತ್ರಿಗಳ ಗಮನಕ್ಕೆ ತಂದರೂ ಸಹ ಅದನ್ನು ಜಾಗ್ರತೆ ವಿಮರ್ಶೆಮಾಡದೆ ಇದ್ದಾರೆ. ಆದ್ದರಿಂದ ಇಂತಹ ತಿದ್ದುಪಡಿಗಳಿಂದ ರೈತರ ಸಮಸ್ಯೆಗಳು ಏನೂ ಪರಿಹಾರವಾಗುವುದಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ದೇವರಾಜ್ ಅರಸ್ ಅವರು ಕೆಲವು ಅಂಕಿ ಅಂಶಗಳನ್ನು ಅವರ ಭಾಷಣದಲ್ಲಿ ಹೇಳಿದ್ದಾರೆ. ಈಗಿರುವ ತಿದ್ದುಪಡಿ ಪ್ರಕಾರ ಸ್ಪೆಷಲ್ ಟ್ರಿಬ್ಯೂನಲ್ ತೆಗೆದು ಕೆಲವು ಅಧಿಕಾರಗಳನ್ನು ತಹಸೀಲ್ದಾರರಿಗೆ ಕೊಡುವುದರಿಂದ ಇನ್ನೂ ಹೆಚ್ಚಿಗೆ ವಿಳಂಬವಾಗುತ್ತಿದೆ ಇದರ ಇಂಪ್ಲಿಮೆಂಟೇಷನ್ ಸರಿಯಾಗಿ ಆಗುವುದಿಲ್ಲ ಎಂದು ಹೇಳಿದ್ದಾರೆ. ನಿನ್ನೆ ದಿವಸ ಶ್ರೀಮಾನ್ ಅರೇಗೌಡ ಅವರು ಮತ್ತು ಶ್ರೀಮಾನ್ ನಾಗಪ್ಪನವರು ಕೋರ್ಟುಗಳಿಗೆ ಬರತಕ್ಕ ಅರ್ಜಿಗಳು ಬೇಗ ತೀರ್ಮಾನವಾಗಬೇಕೆಂದು ಹೇಳಿದ್ದಾರೆ. ಇನ್ನು ಮುಂದೆ ಹೊಸದಾಗಿ ಅರ್ಜಿಗಳು ರಿಸಂಪ್ಷನ್ನಿಗಾಗಿ ಹೆಚ್ಚಿಗೆ ಬರುವುದರಿಂದ ಅದಕ್ಕಾಗಿ ಈಗ ಕೋರ್ಟುಗಳನ್ನು ಎಲ್ಲಾ ಕಡೆಗಳಲ್ಲಿಯೂ ಹೆಚ್ಚುಮಾಡುತ್ತಿರುವುದರಿಂದ, ಕೋರ್ಟಿನಲ್ಲಿದ್ದ ಅರ್ಜಿಗಳೆಲ್ಲಾ ಜಾಗ್ರತೆಯಾಗಿ ತೀರ್ಮಾನವಾಗುತ್ತವೆ. ಅದರಿಂದ ಜನರಿಗೂ ಅನುಕೂಲ ಆಗುತ್ತದೆ. ಒಂದೇ ತಾಲ್ಲೂಕಿನವರು ಸ್ಥಳದಲ್ಲಿ ಮುನ್ಸೀಫ್ ಕೋರ್ಟುಗಳು ಇದ್ದರೂ ಸಹ, ಅವರು ಬೇರೆ ಕಡೆಗೆ ಹೋಗು

ತ್ತಿದ್ದರು. ಇನ್ನು ಮುಂದೆ ಆ ಅಡಚಣೆಗಳು ತಪ್ಪುತ್ತವೆ. ಅವರ ಫಂಕ್ಷನನ್ನು ವಿಭಾಗ ಮಾಡಿದ್ದು ಆಗಿದೆ. ಜಮೀನು ಪಟ್ಟಾ ಡಿಸ್ಟ್ರಿಬ್ಯೂಟ್ ಮಾಡುವ ಕೆಲಸಗಳನ್ನು ಯಾವಾಗಲೂ ತಹಸೀಲ್ದಾರರು ಮಾಡುವುದಕ್ಕಾಗುತ್ತದೆಯೇ ಹೊರತು ಕೋರ್ಟಿನವರು ಮಾಡುವುದಕ್ಕಾಗುವುದಿಲ್ಲ. ಸಾಧ್ಯವಾದರೆ ತಹಸೀಲ್ದಾರರ ಸಂಖ್ಯೆಯನ್ನು ಹೆಚ್ಚು ಮಾಡುವುದಕ್ಕೆ ಅವಕಾಶವಿದೆ. ಆ ರೀತಿ ಮಾಡುವ ಪ್ರಸಂಗ ಬಂದರೆ ಅದನ್ನೂ ಮಾಡುತ್ತೇವೆ. ಈ ದೃಷ್ಟಿಯಿಂದ ಮಾನ್ಯ ಸದಸ್ಯರು ಈಗ ತೆಗೆದಿರುವ ಶಂಕೆ ಸರಿಯಾಗಿ ಕಾಣುವುದಿಲ್ಲ. ತೀವ್ರವಾಗಿ ಅದನ್ನು ಇಂಪ್ಲಿಮೆಂಟ್ ಮಾಡುವ ಉದ್ದೇಶವಿರುವುದರಿಂದ ಆದಷ್ಟು ಮಟ್ಟಿಗೆ ಅವನ್ನು ಸುಧಾರಣೆ ಮಾಡಿದ್ದೇವೆಂದು ನಾನು ಈಗಾಗಲೇ ಹೇಳಿದ್ದೇನೆ. ಈ ದೃಷ್ಟಿಯಿಂದ ಇದನ್ನು ಮಾನ್ಯ ಸದಸ್ಯರೆಲ್ಲರೂ ಪಾಸ್ ಮಾಡಬೇಕೆಂದು ಹೇಳುತ್ತೇನೆ. ಇನ್ನು ಮಾನ್ಯ ಶ್ರೀ ಬೋಳ ರಘುರಾಮಶೆಟ್ಟಿಯವರು ಹೇಳಿದ ವಿಚಾರ ಅದು ಫಂಡಮೆಂಟಲ್ಲಿಗೆ ಸಂಬಂಧಪಟ್ಟದ್ದು. ಫಂಡಮೆಂಟಲ್ಸ್ ಇನ್ನೂ ದುರಸ್ತು ಮಾಡಲಿಲ್ಲ. ವಿಶೇಷವಾಗಿ ಕಾನೂನಿನಲ್ಲಿ ಏನಾದರೂ ಅಡಚಣೆಗಳು ಬಂದಿದ್ದರೆ ಅವನ್ನು ಸರಿಮಾಡಲು ಪ್ರಯತ್ನ ಮಾಡಿದ್ದೇವೆ. ಇನ್ನು ಗೇಣಿ ವಗೈರೆ ಬಗ್ಗೆ ಹೊರಡಿಸಿದ ನೋಟಿಫಿಕೇಷನ್ನಿನಲ್ಲಿ ಏನಾದರೂ ತಪ್ಪುಗಳು ಇದ್ದರೆ, ಮೊದಲಿಗಿಂತಲೂ ಈಗ ಮಾಡಿರುವ ತಿದ್ದುಪಡಿಗಳಿಂದ ಹೆಚ್ಚಿಗೆ ಅನುಕೂಲವಾಗುತ್ತದೆಂದು ಹೇಳಿ, ಇದನ್ನು ಎಲ್ಲಾ ಮಾನ್ಯ ಸದಸ್ಯರು ಪಾಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The quetion is :

> "That the Mysore Land Reforms (Amendment) Bill, 1970 as amended be passed."

The motion was adopted.

MYSORE VILLAGE PANCHAYATS AND LOCAL BOARDS (AMENDMENT) BILL, 1970

(i) Statutory Resolution to disapprove Mysore Ordinance No 6 of 1969.

(ii) Motion to Consider the. Bill.

Mr. SPEAKER.—Now Sri M. Nagappa to move the Statutory Resolution.

Sri M. NAGAPPA.—I beg to move:

> "That this Assembly disapproves the Ordinance No. 6 of 1969 namely 'The Mysore Village Panchayats and Local Boards (Amendment) Ordinance, 1969' promulgated on 16th day of October 1969 by the Governor of Mysore."

Mr. SPEAKER.—Statutory Resolution moved :

> "That this Assembly disapproves 'the Ordinance No. 6 of 1969 namely the Mysore Village Panchayats and Local Boards (Amendment) Ordinance, 1969' promulgated on 16th day of October 1969 by the Governor of Mysore."

Now the Hon Minister to move the Bill.

Sri H. N. NANJE GOWDA.—On a point of order. I have some objection for the consideration of the Bill. A similar Bill was introduced on 1st September 1969 and the same was moved for consideration by the Minister on 8th September 1969. Though many members

(SRI H. N. NANJE GOWDA)

took objection that it was a financial Bill and recommendation of the Governor was necessary, the Chair was pleased to say that the recommendation was not necessary and consideration was going on. Some of us moved many amendments to that Bill and the debate was inconclusive. It was discussed on 18th September 1969. Now if this Bill is taken into consideration, it may defeat the spirit of the original Bill which is already seized by the House. You may say that because of the introduction and consideration of this Bill, that bill would lapse.

I shall explain how it would defeat the principle of the original Bill. We are to consider here certain amending provisions which are listed in the original Bill seized by the House. There is difference between the present Bill and the original Bill. Where is the guarantee that this Bill would not be taken into consideration again ? My submission is unless the previous Bill is completely discussed and disposed of, this Bill cannot be taken up.

MR. SPEAKER.—Regarding the point whether recommendation of the Governor has been obtained or not I may say that it would have been better if the hon. Member had enquired cerlier. It is the function of the Speaker to satisfy himself whether all requirements under the rules are fulfilled. In this case the Speaker has taken care to see that recommendation is there. It is dated 20th January 1970 and it runs thus :

> " In pursuance of the provisions of Article 207 (1) and (3) of the Constitution of India, I, Dharma Veera, Governor of Mysore, hereby recommend the consideration of the Mysore Village Panchayats and Local Boards (Amendment) Bill, 1970, to the Mysore Legislative Assembly."

So it is there and on that account I am unable to uphold the point raised by the hon. Member.

The second point raised is that there is already a Bill under consideration and now another Bill has been introduced. Here I would like to draw his attention to rule 70. It reads as follows :

> ' (1) Whenever a Bill seeking to replace an ordinance with or without modifications is given notice, it shall be accompanied by a statement explaining the circumstances which necessitated immediate legislation by ordinance.''

This is another Bill to replace that ordinance and, therefore, whether that Bill was considered or not, it does not matter.

The hon. Member referred to sub-rule (2) of rule 70. It reads thus :

> "(2) Whenever an Ordinance, which embodies wholly or partly or with modification the provisions of a Bill pending

> before the House, is promulgated, a statement explaining the circumstances which necessitated immediate legislation by Ordinance shall be laid on the Table at the commencement of the session following the promulgation of the Ordinance."

This too has been done and the necessary statement by the Government has been made. I therefore, hold that there is no force in the point of order.

Sri M. S. KRISHNAN.—With due respect to the ruling of the Chair, I want to point out that there was already a Bill which had been introduced ..

Mr. SPEAKER.—The hon. Member has not followed my ruling. The ordinance was issued in lieu of the old Bill and this is a Bill to replace the Ordinance. So what the hon. Member says does not hold good.

Sri M. S. KRISHNAN.—Can we take it that the other Bill has been withdrawn ?

Mr. SPEAKER.—There is no necessity to withdraw it. Now the Hon. Minister may move the consideration motion.

Sri B. L. GOWDA (Deputy Minister for Co-operation)—I beg to move :

> "That the Mysore Village Panchayats and Local Boards (Amendment) Bill, 1970, be taken into consideration."

Mr. SPEAKER.—Motion moved :

> "That the Mysore Village Panchayats and Local Boards (Amendment) Bill, 1970, be taken into consideration."

Both the Statutory Resolution and the Consideration Motion are before the House for debate.

† ಶ್ರೀ ಬಿ. ಎಲ್. ಗೌಡ.—ಮಾನ್ಯ ಸಭಾಪತಿಯವರೇ, ನಮ್ಮ ಸರಕಾರದವರು 1-4-1969 ರಿಂದ ಈಚೆಗೆ ಭೂಕಂದಾಯದ ಎಲ್ಲಾ ಭಾಗವನ್ನೂ ಸಹ ಸ್ಥಳೀಯ ಸಂಸ್ಥೆಗಳಿಗೆ ಅಂದರೆ ಗ್ರಾಮ ಪಂಚಾಯಿತಿಗಳಿಗೆ ಮತ್ತು ತಾಲ್ಲೂಕು ಮಂಡಲಿಗೆ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡರು. ಈಗ ಇರತಕ್ಕಂಥ ಮೈಸೂರು ವಿಲೇಜ್ ಪಂಚಾಯಿತ್ ಅಂಡ್ ಲೋಕಲ್ ಬೋರ್ಡ್ಸ್ ಆಕ್ಟ್‌ನಲ್ಲಿ ಇದಕ್ಕೆ ಸಾಕಾದಷ್ಟು ಅವಕಾಶ ಇರಲಿಲ್ಲ. ಆದುದರಿಂದ ಇದಕ್ಕೆ ಅವಕಾಶ ಮಾಡಿಕೊಡಲು ಈ ಮಸೂದೆಯನ್ನು ಈ ಮಾನ್ಯ ಸಭೆಯಲ್ಲಿ ಮಂಡಿಸಲಾಗಿತ್ತು. ಕಾಲಾವಕಾಶ ಇಲ್ಲದೆ ಆ ಮಸೂದೆ ಲ್ಯಾಪ್ಸ್ ಆಯಿತು. ಲ್ಯಾಪ್ಸ್ ಆದ ತಕ್ಷಣ ಅಭಿವೃದ್ಧಿ ಕಾರ್ಯಗಳಿಗೆ ಭೂಕಂದಾಯವನ್ನು ಶೀಘ್ರವಾಗಿ ವರ್ಗಾವಣೆ ಮಾಡುವ ಉದ್ದೇಶದಿಂದ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಲಾಯಿತು. ಆ ಸುಗ್ರೀವಾಜ್ಞೆಯನ್ನು ರೀಪ್ಲೇಸ್ ಮಾಡುವುದಕ್ಕೆ ಮತ್ತೆ ಇತರೇ ಕೆಲವಾರು ತಿದ್ದುಪಡಿಗಳನ್ನು ಮಾಡುವುದಕ್ಕೆ ಸಹ ಈ ಒಂದು ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸಲಾಗಿದೆ. ಮೈಸೂರು ವಿಲೇಜ್ ಪಂಚಾಯತ್ ಅಂಡ್ ಲೋಕಲ್ ಬೋರ್ಡ್ಸ್ ಆಕ್ಟ್‌ನ ಸೆಕ್ಷನ್ 10 ರ ಪ್ರಕಾರ ತಾಲ್ಲೂಕು ಮಂಡಲಿಗೆ ಶೇಕಡಾ 20 ಪರ್ಸೆಂಟ್ ಮತ್ತು ಪಂಚಾಯಿತಿಗಳಿಗೆ 30 ಪರ್ಸೆಂಟ್ ಅನುದಾನವನ್ನು ಕೊಡುವ ಅವಕಾಶವಿದೆ. ಅದರ ಜೊತೆಗೆ ತಾಲ್ಲೂಕು ಅಭಿವೃದ್ಧಿ ಮಂಡಲಿಗೆ 5 ಪರ್ಸೆಂಟ್ ಡಿಸ್‌ಕ್ರಿಷನರಿ ಗ್ರಾಂಟ್ ಮತ್ತು ವಿಲೇಜ್ ಪಂಚಾಯಿತಿಗೆ 5 ಪರ್ಸೆಂಟ್ ಡಿಸ್‌ಕ್ರಿಷನರಿ ಗ್ರಾಂಟ್ ಕೊಡುವ ಅವಕಾಶವಿದೆ. ಈಗ ಇರುವ ಬದಲಾಣೆ ಪ್ರಕಾರ ತಾಲ್ಲೂಕು ಅಭಿವೃದ್ಧಿ ಮಂಡಲಿಗೆ 10 ಪರ್ಸೆಂಟ್ ಡಿಶ್‌ಕ್ರಿಷನರಿ ಗ್ರಾಂಟ್. ಅದೇ ರೀತಿ ಪಂಚಾಯಿತಿಗೂ ಹತ್ತು ಪರ್ಸೆಂಟ್

(ಶ್ರೀ ಬಿ. ಎಲ್. ಗೌಡ)

ಡಿಸ್‌ಕ್ರಿಷನರಿ ಗ್ರ್ಯಾಂಟ್ ಕೊಡಬಹುದು ಎಂದು ಮಸೂದೆಯಲ್ಲಿ ನಾವು ಅಳವಡಿಸಿದ್ದೇವೆ. ಅದರಿಂದ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಮತ್ತು ಪಂಚಾಯಿತಿಗಳ ಆರ್ಥಿಕಾಭಿವೃದ್ಧಿಗೆ ಸಹಾಯವಾಗುತ್ತದೆ. ಮತ್ತು ಅದರ ಅಭಿವೃದ್ಧಿ ಕಾರ್ಯಗಳಿಗೆ ಅನುಕೂಲವಾಗುತ್ತದೆ ಎಂದು ಈ ಬದಲಾವಣೆಗಳನ್ನು ಸೂಚನೆ ಮಾಡಿದ್ದೇವೆ. ಇದರ ಜೊತೆಗೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಅಭಿವೃದ್ಧಿ ಕಾರ್ಯಗಳನ್ನು ಹೆಚ್ಚು ಮಾಡಲಿಕ್ಕೆ ಅಡಿಷನಲ್ ಲೋಕಲ್ ಸೆಸ್ಸನ್ನು ಲ್ಯಾಂಡ್ ರೆವಿನ್ಯೂ ಮೇಲೆ ಹಾಕಬಹುದು ಎಂದು ತಿದ್ದುಪಡಿಯನ್ನು ಸೂಚನೆ ಮಾಡಿದ್ದೇವೆ. ಇದರ ಜೊತೆಗೆ ಈಗ ಇರತಕ್ಕಂಥ ಕಾನೂನಿನಲ್ಲಿ ಸ್ಥಳೀಯ ಸಂಸ್ಥೆಗಳಾದ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಮತ್ತು ಗ್ರಾಮ ಪಂಚಾಯಿತಿಗಳು ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಬೋರ್ಡಿನಿಂದ ಸಹಾಯ ತೆಗೆದುಕೊಳ್ಳುವುದಕ್ಕೆ ಅವಕಾಶ ಇರಲಿಲ್ಲ, ಈ ಸಂಸ್ಥೆಗಳಿಗೆ ಫೈನಾನ್ಸ್ ಸಿಗುವ ಉದ್ದೇಶದಿಂದ ಈ ಕಾನೂನನ್ನು ತಿದ್ದುಪಡಿ ಮಾಡಲಾಗುತ್ತಿದೆ. ಮತ್ತು ಈಗ ಜಾತ್ರೆ, ಉರುಸ್ ಏರ್ಪಡಿಸುವ ಸಂದರ್ಭದಲ್ಲಿ ಯಾತ್ರಿಕರಿಗೆ ಅನುಕೂಲ ಪಡಿಸುವ ಉದ್ದೇಶದಿಂದ 12 ವರ್ಷಗಳ ಮೇಲ್ಪಟ್ಟ ಯಾತ್ರಿಕರಿಗೂ ಸಹ 50 ಪೈಸೆ ಟ್ಯಾಕ್ಸ್ ಹಾಕುವ ಅವಕಾಶ ಮಾಡಿಕೊಡಬೇಕೆಂದು ಕಾನೂನಿನಲ್ಲಿ ಸೂಚಿಸಿಸಲಾಗಿದೆ. ಇಂತಹ ಕಾನೂನು ಇತರ ರಾಜ್ಯಗಳಲ್ಲಿಯೂ ಇದೆ. ಮಹಾರಾಷ್ಟ್ರ ಮತ್ತು ಗುಜರಾತಿನಲ್ಲಿ ಇದೆ. ಅಲ್ಲದೆ ಜಮ್ಮು ಅಂಡ್ ಕಾಶ್ಮೀರ್, ಬಿಹಾರ್, ವೆಸ್ಟ್ ಬೆಂಗಾಲ್ ಆಂಧ್ರ ಪ್ರದೇಶಗಳ ಮುನಿಸಿಪಲ್ ಆಕ್ಟಿನಲ್ಲಿ ಈ ಅಧಿಕಾರ ಇದೆ. ಇದೇ ಅಧಿಕಾರವನ್ನು ಟೌನ್ ಮತ್ತು ಪಂಚಾಯಿತಿಗಳಲ್ಲಿ ಅಳವಡಿಸಬೇಕೆಂದು ತಿದ್ದುಪಡಿಯನ್ನು ಸೂಚನೆ ಮಾಡಿದ್ದೇವೆ. ಅದಾದ ಮೇಲೆ ಬಹಳ ಮುಖ್ಯವಾದ ತಿದ್ದುಪಡಿ ಎಂದರೆ ಪ್ರಥಮವಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ 1960 ನೇ ಇಸವಿಯಲ್ಲಿ ಚುನಾವಣೆ ನಡೆಯಿತು. ಎರಡನೇ ಸಾರಿ 1968 ನೇ ಇಸವಿಯಲ್ಲಿ ಚುನಾವಣೆ ನಡೆಯಿತು. ಅನೇಕ ಕಾರಣಗಳಿಂದ ಏಳು ತಾಲ್ಲೂಕು ಬೋರ್ಡ್‌ಗಳಲ್ಲಿ ಚುನಾವಣೆ ನಡೆದಿಲ್ಲ. ಅಲ್ಲೆಲ್ಲಾ ಚುನಾವಣೆ ಕ್ಯಾಲೆಂಡರ್ ಹಾಕಿದ್ದೇವೆ. ಆದರೆ ಅಲ್ಲಿ ಕೆಲವಾರು ಜನ ಕೋರ್ಟಿಗೆ ಹೋಗಿ ರಿಟ್ ಹಾಕಿ ಸ್ಟೇ ಆರ್ಡರ್ ತಂದಿದ್ದಾರೆ. ಇಂತಹ ಸಂದರ್ಭದಲ್ಲಿ ಪುನಃ ಚುನಾವಣೆಯಾಗಿ ಹೊಸದಾಗಿ ತಾಲ್ಲೂಕು ಬೋರ್ಡ್ ಬರುವವರೆಗೆ ಅಲ್ಲಿ ಹಳೆಯ ಸದಸ್ಯರುಗಳನ್ನು ಮುಂದುವರಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಕೆಲವರು ಈಗಾಗಲೇ ಚುನಾವಣೆಯಲ್ಲಿ ಸೋತು ಹೋಗಿದ್ದಾರೆ. ಕೆಲವರು ಸ್ಪರ್ಧೆ ಮಾಡಲಿಲ್ಲ. ಆ ದೃಷ್ಟಿಯಿಂದ ಅವರು ಅಭಿವೃದ್ಧಿ ಮಂಡಲಿಯ ಕಾರ್ಯಕಲಾಪಗಳಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಾ ಇಲ್ಲ. ಸ್ಟೇ ಆರ್ಡರ್ ಆಗಿ ಚುನಾವಣೆ ನಡೆಯದೆ ಇರುವ ಸಂದರ್ಭದಲ್ಲಿ ಅಡ್ಮಿನಿಸ್ಟ್ರೇಟರ್ ನೇಮಕ ಮಾಡಬೇಕು ಎಂದು ತಿದ್ದುಪಡಿಯನ್ನು ಸೂಚನೆ ಮಾಡಿದ್ದೇವೆ. ಈ ತಿದ್ದುಪಡಿ ಗ್ರಾಮ ಪಂಚಾಯಿತಿಗೆ ಒಳಪಟ್ಟಂತೆ ನಮ್ಮ ಕಾನೂನಿನಲ್ಲಿ ಅಳವಡಿಸಿದೆ. ಎಲ್ಲೆಲ್ಲಿ ಚುನಾವಣೆ ನಡೆಯುವುದಿಲ್ಲವೋ ಎಲ್ಲೆಲ್ಲಿ ರಿಟ್ ಹೋಗಿ ಕೋರ್ಟಿನಿಂದ ಚುನಾವಣೆ ಸ್ಟೇ ಆರ್ಡರ್ ತಂದಿದ್ದಾರೋ ಅಂಥ ಕಡೆಗಳಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡುವ ಸೂಚನೆ ಮಾಡಿದ್ದೇವೆ. ಆದಾದ ಮೇಲೆ ಪಂಚಾಯಿತಿಗಳಲ್ಲಿ ಸಾಕಷ್ಟು ವಸೂಲಾತಿ ಆಗುತ್ತಾ ಇಲ್ಲ. ಆ ದೃಷ್ಟಿಯಿಂದ ವಿಲೇಜ್ ಅಕೌಂಟೆಂಟ್ ಕಂದಾಯ ವಸೂಲು ಮಾಡಬಹುದು. ಅಮಲ್‌ದಾರರೂ ಸಹ ಒಟ್ಟು ಡಿಮ್ಯಾಂಡ್ ತೆಗೆದುಕೊಂಡು ಪಂಚಾಯಿತಿಗಳಿಂದ ಏನೂ ಆದೇಶ ಬಾರದೆ ವಸೂಲು ಮಾಡುವ ಅವಕಾಶ ತೆಗೆದುಕೊಳ್ಳಲು ತಿದ್ದುಪಡಿ ಸೂಚನೆ ಮಾಡಿದೆ. ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿದೆ, ಬೀದಿ ದೀಪಗಳಿದ್ದರೂ ಅದಕ್ಕೆ ಕಟ್ಟಬೇಕಾದ ಫೀಸನ್ನು ಎಲೆಕ್ಟ್ರಿಸಿಟಿ ಬೋರ್ಡಿಗೆ ಕಟ್ಟದೆ ಇರುವುದು ಮತ್ತು ನೀರು ಸರಬರಾಜು ಮಾಡುವ ಕಾಲದಲ್ಲಿ ನೀರಿನವರ ಕಟ್ಟದೆ ನಾಗರೀಕರಿಗೆ ಎಲೆಕ್ಟ್ರಿಸಿಟಿ ಮತ್ತು ನೀರು ಸರಬರಾಜಿನ ಸೌಕರ್ಯ ನಿಂತುಹೋಗಿದೆ. ಯಾವ ಯಾವ ಪಂಚಾಯಿತಿಗಳು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲವೋ ಅಂಥಾ ಕಡೆ ರಾಜ್ಯ ಸರಕಾರಕ್ಕೆ ಮತ್ತು ಎಲೆಕ್ಟ್ರಿಸಿಟಿ ಬೋರ್ಡಿಗೆ ಬರತಕ್ಕ ಭಾಗವನ್ನು ತಾವೇ ತೆಗೆದುಕೊಳ್ಳುವ ಅವಕಾಶ ಮಾಡುವ ತಿದ್ದುಪಡಿಯನ್ನು ಮಸೂದೆಯಲ್ಲಿ ಅಳವಡಿಸಿದೆ. ಕೆಲವಾರು ಗ್ರಾಮಾಂತರ ಪ್ರದೇಶದಲ್ಲಿ ಸಂತೆ ನಡೆಯುತ್ತದೆ. ಈ ಸಂತೆಯಿಂದ ಬರತಕ್ಕ ವರಮಾನವನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ತೆಗೆದುಕೊಂಡು ಗ್ರಾಮ ಪಂಚಾಯಿತಿಗಳಿಗೆ ಯಾವ ವಿಧವಾದ ಭಾಗವನ್ನೂ ಕೊಡುತ್ತಾ ಇಲ್ಲ ಗ್ರಾಮ ಪಂಚಾಯಿತಿಗಳಿಗೂ ಸಹ ಸಂತೆಗಳನ್ನು ನಡೆಸುವುದಕ್ಕೆ ಬೇಕಾದ ಅನುಕೂಲಗಳನು ಒದಗಿಸುವ ಜವಾಬ್ದಾರಿ ಇದೆ. ಆದುದರಿಂದ ಗ್ರಾಮಪಂಚಾಯಿತಿಯವರು ಸಂತೆಯಿಂದ ಬರತಕ್ಕ ಆದಾಯವನ್ನು ಕೊಡಿಸಿಕೊಡಬೇಕೆಂದು ರಾಜ್ಯಸರಕಾರವನ್ನು ಒತ್ತಾಯ ಮಾಡುತ್ತಿದ್ದಾರೆ. ಅವರು ಮಾಡುತ್ತಿರುವ ಒತ್ತಾಯ ನ್ಯಾಯವೆಂದು ಮನಗಂಡು ಸಂತೆಗಳಿಂದ ಬರತಕ್ಕ ಆದಾಯದಲ್ಲಿ ಶೇಕಡಾ 25 ಭಾಗವನ್ನು ತಾಲ್ಲೂಕು ಮಂಡಲಿಗಳಿಂದ ಗ್ರಾಮ ಪಂಚಾಯಿತಿಗೆ ವರ್ಗ ಮಾಡುವ ತಿದ್ದುಪಡಿಯನ್ನು ಈ

ಮಸೂದೆಯಲ್ಲಿ ಅಳವಡಿಸಿದೆ. ಆದಾದ ಮೇಲೆ ಅನೇಕ ಸಂದರ್ಭಗಳಲ್ಲಿ ರಾಜ್ಯದಲ್ಲಿ ತಾಲ್ಲೂಕುಗಳನ್ನೂ ಪುನರ್ರಚನೆ ಮಾಡಬೇಕಾಗಿದೆ. ಹಾಗೆ ತಾಲ್ಲೂಕು ಪುನರ್ರಚನೆ ಮಾಡುವ ಸಂದರ್ಭದಲ್ಲಿ ಈ ತಾಲ್ಲೂಕು ಅಭಿವೃದ್ಧಿ ಮಂಡಲಿ ಸದಸ್ಯರನ್ನು ಈಗ ಇರತಕ್ಕ ಕಾನೂನು ಪ್ರಕಾರ ಒಂದು ವರ್ಷದವರೆಗೂ ನಾಮಕರಣ ಮಾಡುವ ಅವಕಾಶ ಇದೆ. ಹೊಸ ತಿದ್ದುಪಡಿ ಪ್ರಕಾರ ಒಂದು ವರ್ಷದಿಂದ ನಾಲ್ಕು ವರ್ಷಗಳವರೆಗೆ ನಾಮಕರಣ ಮಾಡಬಹುದೆಂದು ಅವಕಾಶಕೊಟ್ಟಿದೆ. ಕಾರಣ ಇಷ್ಟೆ. ಅನೇಕ ಸಂದರ್ಭಗಳಲ್ಲಿ ತಾಲ್ಲೂಕು ಮಂಡಲಿಯಲ್ಲಿ ಮಾನ್ಯ ಸದಸ್ಯರು ಆಗ ತಾನೇ ಚುನಾಯಿತರಾಗುತ್ತಾರೆ. ಚುನಾವಣೆ ಆಗಿರುವ ಸಂದರ್ಭದಲ್ಲಿ ಕೆಲವೇ ತಿಂಗಳಲ್ಲಿ ತಾಲ್ಲೂಕು ಪುನರ್‌ರಚನೆಯಾದಾಗ ಒಂದು ವರ್ಷದಿಂದ ಅವಧಿಯನ್ನು ನಾಲ್ಕು ವರ್ಷಗಳವರೆಗೆ ಸರಕಾರದ ಇಷ್ಟ ಪ್ರಕಾರ ಹೆಚ್ಚಿಸಲು ಅವಕಾಶ ಮಾಡಿದೆ. ಹೋದ ಅಸೆಂಬ್ಲಿಯಲ್ಲಿ ಮೈಸೂರು ವಿಲೇಜ್ ಪಂಚಾಯಿತ್ ಮತ್ತು ಲೋಕಲ್ ಬೋರ್ಡುಗಳ ತಿದ್ದುಪಡಿ ಮಸೂದೆಯನ್ನು ತಂದಿದ್ದೆವು. ಆ ಮಸೂದೆಯಲ್ಲಿ ಇರತಕ್ಕ ಎಲ್ಲಾ ವಿಷಯಗಳನ್ನೂ ಮತ್ತು ಇನ್ನೂ ಕೆಲವು ಬದಲಾವಣೆಗಳನ್ನು ಮಾಡಿ ಈ ಒಂದು ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದೆ ಮಂಡಿಸಿದ್ದೇವೆ. ಈಗ ತಮಗೆಲ್ಲ ಗೊತ್ತಿರುವ ಹಾಗೆ ರಾಜ್ಯ ಸರಕಾರದವರು ಈಗಾಗಲೇ ಒಂದು ಪರಿಪೂರ್ಣವಾದ ಸ್ಥಳೀಯ ಸಂಸ್ಥೆಗಳ ಮಸೂದೆಯನ್ನು ಜಿಲ್ಲಾ ಬೋರ್ಡ್‌ಗಳ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟು ತರಬೇಕೆಂದು ಯೋಚನೆ ಮಾಡಿದ್ದಾರೆ. ಅದರ ಬಗ್ಗೆ ತೀವ್ರವಾದ ಆಲೋಚನೆ ನಡೆಯುತ್ತಾ ಇದೆ. ಬಹುಶಃ ಮುಂದಿನ ಬಜೆಟ್ ಅಧಿವೇಶನವಲ್ಲಿ ಅಂತಹ ಮಸೂದೆಯನ್ನು ಮಂಡಿಸಲಿದ್ದೇವೆ. ಈ ಒಂದು ತಿದ್ದುಪಡಿ ತಾತ್ಕಾಲಿಕವಾದುದು ಎಂದು ತಮಗೆ ತಿಳಿಯಪಡಿಸುತ್ತಾ ಇದನ್ನು ತಾವು ಒಪ್ಪಿಕೊಂಡು ಪಾಸ್ ಮಾಡಬೇಕೆಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಈ ಒಂದು ವರ್ಷದ ನಾಮಿನೇಷನ್ ಅವಧಿಯನ್ನು ನಾಲ್ಕು ವರ್ಷಕ್ಕೆ ಏರಿಸಿದ್ದಾರೆ. ಇದಕ್ಕೆ ಏನು ಕಾರಣ ಎಂದು ಅರ್ಥವಾಗಲಿಲ್ಲ.

ಶ್ರೀ ಬಿ. ಎಲ್. ಗೌಡ.—ಚುನಾವಣೆ ನಡೆದ ತಕ್ಷಣ ತಾಲ್ಲೂಕು ಪುನರಚನೆ ಆಗವೆ ಇರುವ ಸಂದರ್ಭ ಇದೆ. ಸವಣೂರು ತಾಲ್ಲೂಕು ರಚನೆ ಮಾಡಿದಾಗ ಆಗತಾನೇ ತಾಲ್ಲೂಕು ಬೋರ್ಡ್ ಚುನಾವಣೆ ಆಗಿತ್ತು. ಚುನಾವಣೆ ಆದ ತಾಲ್ಲೂಕು ಬೋರ್ಡ್ ಸದಸ್ಯರಿಗೆ ನಾಲ್ಕು ವರ್ಷದ ಅವಧಿ ಇತ್ತು. ಚುನಾವಣೆ ಆಗಿದ್ದರೂ ಈಗಿರುವಂತೆ ಅವರ ಅವಧಿ ಹೋಗುತ್ತದೆ. ಆದುದರಿಂದ ಒಂದರಿಂದ ನಾಲ್ಕು ವರ್ಷದ ಅವಧಿವರೆಗೆ ಏರಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ವರ್ಷ ಕಾಲದ ಅವಧಿಯೊಳಗೆ ಪುನಃ ಚುನಾವಣೆ ಮಾಡಿ ಬೋರ್ಡ್ ರಚಿಸಬಹುದು. ನಾಮಿನೇಟ್ ಮಾಡಿ ನಾಲ್ಕು ವರ್ಷಗಳ ಅವಧಿ ಹೆಚ್ಚಿಸುವುದು ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವಲ್ಲವೇ ?

ಶ್ರೀ ಬಿ. ಎಲ್. ಗೌಡ.—ನಾಲ್ಕು ವರ್ಷಗಳವರೆಗೂ ನಾಮಿನೇಟ್ ಮಾಡುವುದಕ್ಕೆ ಅವಕಾಶ ಇಟ್ಟುಕೊಂಡಿದ್ದೇವೆ.

ಶ್ರೀ ಎಂ. ನಾಗಪ್ಪ.—ಸ್ವಾಮಿ, ನಾನು ಈಗಾಗಲೇ ಈ ಸಭೆಯ ಮುಂದೆ ಒಂದು ಸ್ಟ್ಯಾಚ್ಯುಟರಿ ಸೂಚನೆಯನ್ನು ತಂದಿದ್ದೇನೆ. ಅದರ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿ ಅನಂತರ ತಿದ್ದುಪಡಿ ಮಸೂದೆಮೇಲೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ಇಚ್ಛೆಪಡುತ್ತೇನೆ.

5-30 P.M.

ನಮ್ಮ ರಾಜ್ಯದಲ್ಲಿ ಒಂದು ವರ್ಷದಲ್ಲಿ ಸಾಧಾರಣ 8 ಅಥವಾ 9 ಆರ್ಡಿನೆನ್ಸ್‌ಗಳನ್ನು ಹೊರಡಿಸಲಾಗಿದೆ. ನನಗೆ ಇದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಮಾನ್ಯ ಮಂತ್ರಿಗಳು ಈಗಾಗಲೇ ಹೇಳಿದರು. ಇದರಲ್ಲಿ ಬಹಳಷ್ಟು ವ್ಯತ್ಯಾಸ ಇದೆ. ಮೊದಲು ತಂದಂತಹ ತಿದ್ದುಪಡಿಯಲ್ಲಿ ಸಾಧಾರಣ 18 ಕಲಂಗಳು ಇದ್ದವು ಇದರಲ್ಲಿ 19 ಕಲಂಗಳು ಇವೆ. ಹಿಂದೆ ತಂದಂತಹ ತಿದ್ದುಪಡಿ ಮಸೂದೆಯ ಮೇಲೆ ಸಾಧಾರಣವಾಗಿ ಚರ್ಚೆ ನಡೆದಿವೆ. ಅಂತಹ ಸಂದರ್ಭದಲ್ಲಿ ಆರ್ಡಿನೆನ್ಸ್ ತರಬೇಕಾದ ಪರಿಸ್ಥಿತಿ ಇರಲಿಲ್ಲ. ಆದ್ದರಿಂದ ನಮ್ಮ ಮೈಸೂರು ರಾಜ್ಯ ಆರ್ಡಿನನ್ಸ್‌ಗಳ ರಾಜ್ಯ ಎಂದರೂ ತಪ್ಪಾಗಲಾರದು ಎಂದು ಹೇಳುತ್ತೇನೆ. ಇದರ ಬಗ್ಗೆ ನಾನು ಅಧ್ಯಕ್ಷರನ್ನು ಕೇಳುತ್ತೇನೆ, ಅಧ್ಯಕ್ಷರ ಕಾರ್ಯವ್ಯಾಪ್ತಿಗೂ ಸಹ ಇದು ಸಂಬಂಧಪಡುತ್ತದೆ. ತಾವು ಇಂತಹ ಒಂದು ಮಾರ್ಗವನ್ನು ಹಾಕಿಕೊಡಬಾರದಾಗಿತ್ತು. ಆರ್ಡಿನನ್ಸ್‌ಗಳನ್ನು ತರುವುದಕ್ಕೆ ತಾವು ಡಿಸ್ಕರೇಜ್ ಮಾಡಬೇಕು. ಅನೇಕ ಸಲ ಇಂತಹ ಒಂದು ಪ್ರಸಂಗಗಳು ಪಾರ್ಲಿಮೆಂಟಿನಲ್ಲೂ ಕೂಡ ಬಂದಿದೆ. ತಮ್ಮ ಗಮನಕ್ಕೆ ಒಂದೆರಡು ವಿಷಯಗಳನ್ನು ತಂದುಕೊಡಬೇಕೆಂದು ಇಚ್ಛೆಪಡುತ್ತೇನೆ. ಈಗ ಇರತಕ್ಕ ಕಾಯಿದೆ

(ಶ್ರೀ ಎಂ. ನಾಗಪ್ಪ)

ಯಲ್ಲಿ ಅಥವಾ ರೂಲ್ಸ್ ಪ್ರಕಾರ ಆ ರೀತಿ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರಿಗೆ ಯಾವ ಒಂದು ಅಧಿಕಾರವೂ ಇಲ್ಲ ಎಂದು ತಾವು ಭಾವಿಸಬಹುದು. ಆದರೆ ನಾವು ಕಸ್ಟಂ ಅಥವಾ ಪ್ರಿಸಿಡೆಂಟ್ ಅಂತ ಏನು ಹೇಳುತ್ತೇವೆ ಅದನ್ನು ಹಾಕದೇ ಹೋದರೆ ಸರ್ಕಾರ ತಂದಂತಹ ಪ್ರತಿಯೊಂದು ಅರ್ಡಿನೆನ್ಸ್‌ಗೂ ರಬ್ಬರ್ ಸ್ಟ್ಯಾಂಪ್ ಹಾಕಬೇಕೆಂಬ ಅಭಿಪ್ರಾಯ ಬರುತ್ತದೆ. ಆದ್ದರಿಂದ ಇಂತಹ ಒಂದು ಪ್ರಸಂಗವನ್ನು ತಪ್ಪಿಸಬೇಕಾದರೆ ಏನು ಮಾಡಬೇಕು ಅಂತ ಅನ್ನುವುದಕ್ಕೆ ಲೋಕಸಭಾಧ್ಯಕ್ಷರಾಗಿದ್ದ ದಿವಂಗತ ಮಾವಲಂಕರ್‌ರವರು ಪ್ರೈಂ ಮಿನಿಸ್ಟರ್‌ರವರು ಅವರಿಗೆ ಒಂದು ಕಾಗದ ಬರೆದದ್ದನ್ನು ತಮ್ಮ ಗಮನಕ್ಕೆ ತಂದುಕೊಡುತ್ತೇನೆ. ಇದನ್ನು ತಾವು ನೋಡಬೇಕು.

Sri Mavalankar, Ex-Speaker of Lok Sobha, wrote a letter to the Prime Minister on November 25, 1950. The contents of that letter is as follows :

> "The procedure of the promulgation of Ordinances is inherently undemocratic. Whether an Ordinance is justifiable or not, the issue of a large number of Ordinances has psychologically a bad effect. The people carry an impression that Government is carried on by Ordinances. The House carries a sense of being ignored, and, the Central Secretariat perhaps get into the habit of slackness, which necessitates Ordinances, and an impression is created that it is desired to commit the House to a particular legislation as the House has no alternative but to put its seal on matters that have been legislated upon by Ordinances. Such a state of things is not conducive to the development of the best parliamentary traditions".

ಇಂಥ ಒಂದು ತತ್ವವನ್ನು ಅವರು 1950 ರಲ್ಲಿ ಹಾಕಿ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರಿಗೆ ಬರೆದಿದ್ದಾರೆ. ನಾವು 22 ವರ್ಷ ಸತತವಾಗಿ ರಾಜ್ಯವಾಳಿದ ಮೇಲೆ ಮತ್ತೆ ರಾಜ್ಯವನ್ನು ಆರ್ಡಿನೆನ್ಸ್‌ಗಳ ಮೂಲಕ ಆಳಬೇಕೆಂಬ ಅಭಿಪ್ರಾಯ ಈ ಸರ್ಕಾರಕ್ಕೆ ಇದ್ದರೆ ಇಂಥ ಸರಕಾರ ವಾಸ್ತವಿಕವಾಗಿ ಇರುವುದು ಸರಿಯಲ್ಲ. ಆರ್ಡಿನೆನ್ಸ್‌ಗೆ ಬದಲಾಗಿ ಒಂದು ಕಾಯಿದೆಯನ್ನು ಮಾಡಬೇಕೆಂದು ಒಂದು ಬಿಲ್ ತಂದು ಸಭೆಯ ಮುಂದೆ ಇಟ್ಟಿದ್ದಾರೆ. ಇದನ್ನು ಕನ್‌ಸಿಡರೇಷನ್ನಿಗೆ ತೆಗೆದುಕೊಳ್ಳತಕ್ಕ ಪರಿಸ್ಥಿತಿಯಲ್ಲಿ ಈ ಅರ್ಡಿನೆನ್ಸ್ ಹೊರಡಿಸಿ, ಈ ಸಭೆಗೆ ಇರತಕ್ಕ ಅಧಿಕಾರವನ್ನು ಕಿತ್ತು ಹಾಕಿ ಮತ್ತೂ ಒಂದ ಆರ್ಡಿನೆನ್ಸ್ ತೆಗೆಯು, ಇಂಥ ಬಿಲ್ ತರುವುದು ಅಸಮಂಜಸ ಎಂದು ನಾನು ತಿಳಿದುಕೊಂಡಿದ್ದೇನೆ.

ಕೆಲವು ಸದಸ್ಯರು ಪಾರ್ಲಿಮೆಂಟಿನಲ್ಲಿ ಹೇಳಿದಂಥ ಒಂದೆರಡು ವಿಷಯಗಳನ್ನು ನಾನು ಹೇಳುತ್ತೇನೆ ಹಿಂದೆ ಲೋಕಸಭೆಯ ಸ್ಪೀಕರ್ ಆಗಿದ್ದವರು ಈ ಪ್ರಕಾರವಾಗಿ ಅಭಿಪ್ರಾಯ ಪಟ್ಟಿದ್ದಾರೆ.

> "I myself do not like promulgation of Ordinances. It is only in extreme cases that an Ordinance should be issued ; the ordinary rule should be 'No Ordinance".

1953 ರಲ್ಲಿ ಸರ್ಕಾರದವರು ಆರು ಆರ್ಡಿನೆನ್ಸ್‌ಗಳನ್ನು ಹೊರಡಿಸಿದರು. ಆ ಪರಿಸ್ಥಿತಿಯಲ್ಲಿ ಸರ್ಕಾರಕ್ಕೆ ಈ ಶಬ್ದಗಳಲ್ಲಿ ಹೇಳಿದ್ದಾರೆ:

> "Legislation by Ordinance was a question of vital constitutional and legislative importance and that it constituted an invasion of the rights and privileges of this House as the only sovereign legislative body in the country.... A remedy must be

found because if we allow this routine ordinance making power to the Executive, it is just as well that Parliament winds up its schedule of work for its legislative programme ".

ಇಂತಹ ಕಟುವಾವ ಶಬ್ದಗಳಲ್ಲಿ ಸ್ಪೀಕರ್ ಆಗಿದ್ದ ಮಾವಲಂಕರ್ ಅವರು ಟೀಕಿಸಿದ್ದಾರೆ. ಅದಾದನಂತರ 1954 ರಲ್ಲಿ ಇನ್ನಷ್ಟು ಕಟುವಾದ ಶಬ್ದಗಳಲ್ಲಿ ಹೇಳಿದ್ದಾರೆ :

"In 1954, the issue of Ordinances by the Government was termed by a member as 'a calculated affront to the dignity and the privileges of the House'."

Speaker Mavalankar, in his letter of July 17, 1954, to the Prime Minister stated :

" The issue of an Ordinance is undemocratic and cannot be justified except in cases of extreme urgency or emergency.

...We, as first Lok Sabha, carry a responsibility of laying down traditions. It is not a question of present personnel in the Government but a question of precedents; and if this Ordinance issuing is not limited by convention only to extreme and very urgent cases, the result may be that, in future, The Government may go on issuing Ordinance giving Lok Sabha no option but to rubber stamp the Ordinance.

I may invite your attention to one more aspect, namely, the financial aspect involved in the amendment to the Indian Income Tax Act, 1922. It is not directly a taxation measure, but it is intended for the purpose of collection of taxes. Indirectly it affects the finances and it would be a wrong precedent to have an Ordinance for such a purpose ".

Sri K. PUTTASWAMY.—Please read the reply of Sri Nehru also.

Sri M. NAGAPPA.—If the Hon. Minister wants, I will read that also :

The Prime Minister in reply on July 19, 1954, wrote :

" We have been reluctant to issue Ordinances and it is only when we have felt compelled to do so by circumstances that we have issued them. You will appreciate that it is the responsibility of the Government to decide what steps should be taken in a particular contingency. The Constitution itself has provided for the issue of Ordinances where such necessity arises, and that discretion has to be exercised by Government.

We have issued in the past a very limited number of Ordinances and we have always placed before Parliament the reasons for having issued each one of them.

(SRI M. NAGAPPA)

> I am myself unable to see why this should be considered undemocratic. Of course, this power, like any other power, may be abused and Parliament will be the ultimate judge as to whether the use of this power has been right or wrong ".

Sri K. PUTTASWAMY.—That may be taken as the reply.

Sri K. H. RANGANATH.—Let us not quote Shri Nehru when it suits us !

Sri K. PUTTASWAMY.—In this context this is our reply.

ಶ್ರೀ ಎಂ. ನಾಗಪ್ಪ.—ಸರ್ಕಾರದವರು ಈ ರೀತಿ ಉತ್ತರವನ್ನು ಕೊಡಬಹುದು, ಕೇಂದ್ರದಲ್ಲಿ ಆರು ಆರ್ಡಿನೆನ್ಸ್‌ಗಳು ಹೊರಡಿಸಿದಷ್ಟು ಪ್ರಮಾದ ರಾಜ್ಯದಲ್ಲಿ ಆಗಿಲ್ಲ ಎಂದು. ಸಭೆಯನ್ನು ಕರೆದು ಅದರ ಮುಂದೆ ಮಸೂದೆಯನ್ನು ಮಂಡಿಸಬಹುದಾಗಿತ್ತು. ಬಹುಶಃ ಅವರು ಒಂದು ತಪ್ಪು ಕಲ್ಪನೆಯಲ್ಲಿ ಇರಬಹುದು. ಆದರೆ ಒಂದು ದಿವಸ ಪಾಠ ಕಲಿಸತಕ್ಕ ಸಂದರ್ಭ ಬರುತ್ತದೆ ಎನ್ನುವುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಆರ್ಡಿನೆನ್ಸ್ ಹೊರಡಿಸಿದವರು ಯಾರು ? ಇದರಲ್ಲಿ ಗವರ್ನರ್ ಆಫ್ ಮೈಸೂರು ಎಂದು ಇದೆ. ಶ್ರೀ ಎ. ಆರ್. ಸೋಮನಾಥ ಅಯ್ಯರ್ ಅವರು ಗವರ್ನರ್ ಆಗಿದ್ದರೇ ? "whether he was discharging the functions of a Governer or he was actually a Governor." ಇದರಲ್ಲಿ ಏನಾದರೂ ಡಿಸ್ಟಿಂಕ್ಷನ್ ಇದೆಯೋ ಎನ್ನುವುದನ್ನು ತಾವು ದಯವಿಟ್ಟು ನೋಡಬೇಕು. ಆರ್ಟಿಕಲ್ 159ರಲ್ಲಿ ಹೇಳಿರುವುದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. Article 159 says :

> "Every Governor and every person discharging the functions of the Governor shall, before entering upon his office, make and subscribe in the presence of the Chief Justice of the High Court exercising jurisdiction in relation to the State, or, in his absence, the seniormost Judge of that Court available, an oath or affirmation in the following form, that is to say—"......

ಗವರ್ನರ್ ಅಥವಾ every person discharging the functions of the Governor ಎಂದು ಇದರಲ್ಲಿದೆ. ಗವರ್ನರ ನೇಮಕಕ್ಕೆ ಸಂಬಂಧಪಟ್ಟ ಚಾಪ್ಟರಿನಲ್ಲಿ ನೋಡಿದರೆ ಅಲ್ಲಿ ಎರಡು ತರಹ ಗವರ್ನರ ನೇಮಕವಾಗುತ್ತದೆ. ಪರ್ಮನೆಂಟ್ ಗವರ್ನರ್ ಮತ್ತು every person discharging the function of Governor. ಅದಕ್ಕಾಗಿ ಶ್ರೀ ಸೋಮನಾಥ ಅಯ್ಯರ್ ಅವರು ಗವರ್ನರಾಗಿ ನೇಮಕವಾಗದೆ, a person who has been invested with powers to discharge the functions of the Governor' ರೀತಿ ನೇಮಕವಾಗಿದ್ದರು. ಇಂಥ ಒಂದು ಪ್ರಶ್ನೆ ಸಹಿತ ಲೋಕಸಭೆಯ ಮುಂದೆ ಮೊನ್ನೆ ಬಂದಿತ್ತು. ಈಗ ರಾಷ್ಟ್ರಾಧ್ಯಕ್ಷರಾಗಿರುವ ಮಾನ್ಯ ವಿ. ವಿ. ಗಿರಿ ಅವರು ಉಪರಾಷ್ಟ್ರಾಧ್ಯಕ್ಷರಾಗಿ ಕೆಲವು ಬಿಲ್ಲುಗಳಲ್ಲಿ ರಾಷ್ಟ್ರಾಧ್ಯಕ್ಷರು ಎಂದು ಸಹಿ ಮಾಡಿದ್ದರು. ಆ ಸಂದರ್ಭದಲ್ಲಿ ಶ್ರೀ ನಾಥಪೈ ಅವರು ಇಂಥ ಒಂದು ಪ್ರಶ್ನೆಯನ್ನು ತಂದಿದ್ದರು. ಅದನ್ನು ಯಾವ ಸಂದರ್ಭದಲ್ಲಿ ತಂದರು ಎನ್ನುವುದು ತಮಗೆ ಗೊತ್ತಿದೆ. Every Governor and every person discharging the functions of the Governor ಎನ್ನತಕ್ಕ ಶಬ್ದಗಳಲ್ಲಿ ಬೇಧವಿದೆ. ಶ್ರೀಮಾನ್ ಎ. ಆರ್. ಸೋಮನಾಥ ಅಯ್ಯರ್ ಅವರು ಗವರ್ನರಾಗಿ ಇರಲಿಲ್ಲ. He was only a person discharging the functions of the Governor. ಅದಕ್ಕಾಗಿ ನಾನು ಇಂಥ ಒಂದು ಅಧಿಕಾರ ಅವರಿಗೆ ಇತ್ತೇ ಎನ್ನುವುದನ್ನು ಪ್ರಶ್ನಿಸುತ್ತಿದ್ದೇನೆ. ಗವರ್ನರ್ ಅಧಿಕಾರಗಳು ಯಾವುವು, ಗವರ್ನರ್ ಕಾರ್ಯಗಳನ್ನು ನಿರ್ವಹಣೆ ಮಾಡುತ್ತ ಇರುವವರಿಗೆ ಅಂಥ ಅಧಿಕಾರಗಳಿವೆಯೋ ಇಲ್ಲವೇ ಎನ್ನುವುದನ್ನು ನೋಡಬೇಕಾಗಿದೆ. ದಯವಿಟ್ಟು ತಾವು ಆರ್ಟಿಕಲ್ 213 ನೋಡಿ. ಅದರಲ್ಲಿ ಹೀಗೆ ಹೇಳಿದೆ :

> " If at any time, except when the Legislative Assembly of a State is in session, or where there is a Legislative Council in a

> State, except when both Houses of the Legislature are in session, the Governor is satisfied that circumstances exist which render it necessary for him to take immediate action, he may..."

ಇಲ್ಲಿ ಗವರ್ನರ್ ಎನ್ನುವ ಶಬ್ದ ಉಪಯೋಗವಾಗಿದೆ. ಆದರೆ ಆರ್ಟಿಕಲ್ 159 ರಲ್ಲಿ ಹೇಳಿರುವ Every Governor and every person discharging the functions of the Governor ಎರಡೂ ಶಬ್ದಗಳಲ್ಲಿ ಅರ್ಥ ವ್ಯತ್ಯಾಸವಿದೆ. The person discharging the functions of the Governor ಆರ್ಡಿನೆನ್ಸ್ ಹೊರಡಿಸಬಹುದೇ ಎನ್ನುವುದು ಈ ಹೊತ್ತು ಮುಖ್ಯವಾದ ಪ್ರಶ್ನೆ. ಅದಕ್ಕಾಗಿ 213ನೇ ಆರ್ಟಿಕಲ್ ಪ್ರಕಾರ ಗವರ್ನರ ಕೆಲಸಗಳನ್ನು ನಿರ್ವಹಣೆ ಮಾಡತಕ್ಕವರಿಗೆ ಮತ್ತು ಅಂಥ ಕೆಲಸಗಳನ್ನು ನಿರ್ವಹಿಸಲು ಗವರ್ನರಾಗಿ ನೇಮಕವಾಗಿರುವವರಿಗೆ ಆರ್ಡಿನೆನ್ಸ್ ಹೊರಡಿಸುವ ಅಧಿಕಾರವಿರುವುದಿಲ್ಲ. ಆದರೆ ಅದೇ ಚಾಪ್ಟರಿನಲ್ಲಿ ಕೊಟ್ಟಂಥ ಕೆಲವು ಅಧಿಕಾರಗಳನ್ನು ಮಾತ್ರ ಅವರು ನಡೆಸಬಹುದು ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇನ್ನು ಆರ್ಟಿಕಲ್ 160 ನೋಡಬೇಕು. It reads as follows :

> "160. The President may make such provision as he thinks fit for the discharge of the functions of the Governor of a State in any contingency not provided for in this Chapter."

ಈ ರೀತಿ ಅಧಿಕಾರ ಚಲಾಯಿಸಬಹುದು ಎಂದು ಇದ್ದರೂ ಕೂಡ ಸ್ಪೆಷಲ್ ನೋಟಿಫಿಕೇಷನ್ ಹೊರಡಿಸಿದರು. 213 ರಲ್ಲಿ ಕೊಟ್ಟಿರುವ ಅಧಿಕಾರದ ಪ್ರಕಾರ ಪ್ರಮಲ್ಗೇಷನ್ ಮಾಡಿದ್ದರೆ ಮತ್ತು ಸಭೆಯ ಮುಂದೆ ಇಟ್ಟರೆ, ನಮ್ಮ ಅಬ್ಜೆಕ್ಷನ್ ವಾಪಸ್ಸು ತೆಗೆದುಕೊಳ್ಳಲು ಸಿದ್ಧರಿದ್ದೇವೆ. ಆದುದರಿಂದ ಅಂಥ ಅಧಿಕಾರ ಕೊಡದೆ ಇದನ್ನು ಪ್ರಮಲ್ಗೇಟ್ ಮಾಡಲು ಬರುವುದಿಲ್ಲ ಎಂದು ಸ್ಪಷ್ಟಪಡಿಸುತ್ತೇನೆ.

ಇನ್ನು ಈಗ ತಂದಂಥ ಮಸೂದೆಯ ಬಗ್ಗೆ ಕೆಲವು ಅಭಿಪ್ರಾಯ ವ್ಯಕ್ತಪಡಿಸಲು ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಇದೊಂದು ಸರಿಯಾದಂಥ ತಿದ್ದುಪಡಿ ಮಸೂದೆಯಲ್ಲವೆಂದು ನಾನು ಭಾವಿಸಿದ್ದೇನೆ. ಕ್ಲಾಜ 15 ರಲ್ಲಿ 202 ಎ, 202 ಬಿ, ಈ ಸೆಕ್ಷನ್ ಹೆಚ್ಚು ಮಾಡಬೇಕೆಂಬ ದೊಡ್ಡ ಉದ್ದೇಶದಿಂದ ಈ ತಿದ್ದುಪಡಿ ಮಸೂದೆ ತಂದಿದ್ದಾರೆ. 202-ಎ ಬಗ್ಗೆ ಹೆಚ್ಚು ಹೇಳುವುದಿಲ್ಲ. ಆದರೆ 202-ಬಿ ಇದು ಬಹು ಮುಖ್ಯವಾದುದು. ಜನರಲ್ ಎಲೆಕ್ಷನ್ ಆಗದೇ ಇದ್ದರೆ, ಹಳೆಯ ಸದಸ್ಯರನ್ನು ತೆಗೆಯಬೇಕಾದರೆ ಅಧಿಕಾರ ಪಡೆಯಲು ಅಡ್ಮಿನಿಸ್ಟ್ರೇಟರ್ ನೇಮಕ ಮಾಡಬಹುದು ಎಂಬುದನ್ನು ಇದರಲ್ಲಿ ಹೇಳಿದ್ದಾರೆ. ಇದರ ಉದ್ದೇಶ ಇಷ್ಟೇ ಆಗಿದ್ದರೆ ನಾವು ಇದನ್ನು ಸ್ವಾಗತ ಮಾಡುತ್ತಿದ್ದೆವು. ಅಡ್ಮಿನಿಸ್ಟ್ರೇಟರ್ ಇರಬೇಕಾದ ಅವಧಿ ಎಷ್ಟು ಎನ್ನುವುದನ್ನು ಯಾವುದೂ ಸ್ಪಷ್ಟಪಡಿಸಿಲ್ಲ. ಈ ಒಂದು ಪರಿಸ್ಥಿತಿಯಲ್ಲಿ ಈ ತಿದ್ದುಪಡಿ ಒಪ್ಪಿಕೊಂಡರೆ ಜನತಂತ್ರ ಶಾಶ್ವತವಾಗಿ ಈ ದೇಶದಲ್ಲಿ ಬೆಳೆಯುತ್ತದೆಯೇ ಇಲ್ಲವೇ ಎನ್ನುವುದು ಸ್ಪಷ್ಟವಾಗುತ್ತದೆ. ತಾಲ್ಲೂಕುಗಳಲ್ಲಿ ಮಾರ್ಕೆಟಿಂಗ್ ಸೊಸೈಟಿಗಳು ಇವೆ, ಜಿಲ್ಲೆಗಳಲ್ಲಿ ಮಾರ್ಕೆಟಿಂಗ್ ಸೊಸೈಟಿಗಳು ಇವೆ, ಮುನಿಸಿಪಾಲ್ಟಿಗಳಿವೆ, ಎಲ್ಲ ಕಡೆಗೂ ಅಡ್ಮಿನಿಸ್ಟ್ರೇಟರ್ ರೂಲ್ ಬರತಕ್ಕಂತ ಒಂದು ವ್ಯವಸ್ಥೆ ಇದರಲ್ಲಿ ಕಾಣುತ್ತದೆ. ತಮ್ಮ ಮೇಲೆ ಇರತಕ್ಕಂಥ ಜವಾಬ್ದಾರಿ ತಪ್ಪಿಸಿಕೊಳ್ಳಲಿಕ್ಕೆ ಈ ತಿದ್ದುಪಡಿ ತಂದಿದ್ದಾರೆ ಎಂದು ಹೇಳಿದರೆ ಅದು ತಪ್ಪಾಗಲಾರದು.

ಇನ್ನು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಮತ್ತು ವಿಲೇಜ್ ಪಂಚಾಯತಿಗಳಿಗೆ ಕಂದಾಯದಲ್ಲಿಯ 5 ಪರ್ಸೆಂಟ್ 10 ಪರ್ಸೆಂಟ್ ಡಿಸ್ಕ್ರೀಶನರಿ ಗ್ರ್ಯಾಂಟ್ ಹೆಚ್ಚು ಮಾಡುತ್ತೇವೆ ಎಂದು ಹೇಳಿದ್ದಾರೆ. ಇಂದು ಬೆಂಗಳೂರಿನಂಥ ನಗರಗಳು ದೊಡ್ಡದಾಗಿ ಬೆಳೆದಿವೆ. 100 ಕ್ಕೆ 70 ರಷ್ಟು ಇರುವ ಹಳ್ಳಿಗಳಿಂದ ಹಣವನ್ನು ಟ್ಯಾಕ್ಸ್ ರೂಪದಲ್ಲಿ ವಸೂಲ್ಮಾಡಿ ಪಟ್ಟಣಗಳಿಗೆ ನಗರಗಳಿಗೆ ಉಪಯೋಗಿಸಲು ಸವಲತ್ತು ಕೊಡುತ್ತೀರಿ. ಹಳ್ಳೀ ಜನರಿಗೆ 5 ಪರ್ಸೆಂಟ್ ಮಾತ್ರ ಕೊಡುತ್ತೀರಿ. ಇದು ನಾಚಿಕಗೇಡು ಎಂದು ಹೇಳುತ್ತೇನೆ. 100 ಕ್ಕೆ 75 ರಷ್ಟು ಹಳ್ಳಿಗಳಿಗೆ ಕೊಟ್ಟರೆ ಸಂತೋಷಪಡುತ್ತೇವೆ. 10 ಪರ್ಸೆಂಟ್ ಕೊಡುತ್ತೇವೆ ಎಂದು ಹೇಳುವುದು ಯಾವ ದೊಡ್ಡ ತಿದ್ದುಪಡಿಯಲ್ಲ. ಇದರಲ್ಲಿ ಯಾವ ಪುರುಷಾರ್ಥವಿಲ್ಲ.

ಒಬ್ಬ ಸದಸ್ಯರು.—ಲ್ಯಾಂಡ್ ರೆವಿನ್ಯೂ ಸರಕಾರದ ದುಡ್ಡು ಅಲ್ಲ.

ಶ್ರೀ ಎಂ. ನಾಗಪ್ಪ.—ಈ ರೀತಿ ಮಾಡತಕ್ಕಂಥ ವ್ಯವಸ್ಥೆ ಮಾಡಿದವರು ಯಾರು ? 5 ಪರ್ಸೆಂಟ್ ಏತಕ್ಕೆ ಕೊಡುತ್ತೀರಿ ! ಅದನ್ನು ನೀವೇ ತೆಗೆದುಕೊಳ್ಳಿ. ಒರಿಜಿನಲ್ ಸೆಕ್ಷನ್ 78ರಲ್ಲಿ ಹೀಗೆ ಇದೆ :

> "78. Grant by the Government :—
>
> (2) The Government shall also assign to the Panchayats in the State an amount equal to five percent of the land revenue collection of the State, the amount to be allotted to any Panchayat being such as the Government may from time to time determine, to be expended on such purposes as the Government may, from time to time, direct."

ಲ್ಯಾಂಡ್ ರೆವಿನ್ಯೂ ಕಲೆಕ್ಷನ್ ಆಫ್ ದಿ ಸ್ಟೇಟ್ ಎಂದು ಇದರಲ್ಲಿ ಹೇಳಿದ್ದೀರಿ. ಇನ್ನು ಬೇರೆ ಸೆಕ್ಷನ್ನಿನಲ್ಲಿ ಅಂದರೆ 165 ರಲ್ಲಿ ಹೀಗೆ ಇದೆ :

> "165. Government to assign to Taluk Boards certain revenues.—(1) The Government shall make annually a grant to every Taluk Board of an amount equal to twenty per cent of the land revenue collection of the taluk."

ಒಂದು ತಾಲ್ಲೂಕಿನಲ್ಲಿ ಬಂದಂಥ ಒಟ್ಟು ಕಲಕ್ಷನ್ನಿನ 20 ಪರ್ಸೆಂಟ್ ಕೊಡುತ್ತೇವೆ ಎಂಬುದು ಇದರಲ್ಲಿ ಇದೆ. ಅಲ್ಲಿ ತಾಲ್ಲೂಕಿನ ಕಲಕ್ಷನ್ ಮೇಲೆ ಪರ್ಸಂಟೇಜ್ ಕೊಡುತ್ತೇವೆ ಎಂದು ಇದೆ. ಆದರೆ ಪಂಚಾಯತಿಗಳಿಗೆ ಇಡೀ ಸ್ಟೇಟ್‌ನಲ್ಲಿ ಕಲೆಕ್ಟ್ ಆಗುವುದರಲ್ಲಿ 10 ಪರ್ಸೆಂಟ್ ಕೊಡುತ್ತೇವೆ ಎಂದು ಇದೆ. ಸ್ಟೇಟ್‌ನಲ್ಲಿ ಎಷ್ಟು ಪಂಚಾಯತಿಗಳಿವೆ, ಯಾವ ರೀತಿ ಹಂಚುತ್ತೀರಿ ? ತಾಲ್ಲೂಕು ಬೋರ್ಡಿಗೆ ಯಾವ ರೀತಿ ಹಂಚುತ್ತೀರಿ ಎಂಬುದಕ್ಕೆ ಸ್ಪಷ್ಟವಾದ ಲೆಕ್ಕ ತೆಗೆದುಕೊಂಡರೆ ಇದರಲ್ಲಿ ಎಷ್ಟು ಸತ್ಯಾಂಶ ಇದೆ, ಸಹಾಯ ಯಾವ ರೀತಿ ಮಾಡುತ್ತೀರಿ ಎನ್ನುವುದು ಗೊತ್ತಾಗುತ್ತದೆ.

ಇನ್ನೊಂದು ವಿಷಯ. ಪಂಚಾಯತಿಯವರು ಜಾತ್ರೆ ಉರುಸುಗಳಿಗೆ ಬರುವ ಜನರಿಂದ ಟ್ಯಾಕ್ಸ್ ಅಂದರೆ ತಲೆಗಂದಾಯ ತೆಗೆದುಕೊಳ್ಳಬಹುದು ಎಂದು ಹೇಳಿದ್ದೀರಿ. 12 ವರ್ಷ ಆದವರಿಂದ ಈ ತಲೆಗಂದಾಯ ತೆಗೆದುಕೊಳ್ಳಬೇಕು ಎಂದಿದೆ. ಹನ್ನೆರಡು ವರುಷ ಆಗಿದೆ ಎಂದು ಹೇಗೆ ಹೇಳುವುದು ? ವಯಸ್ಸು ಹನ್ನೆರಡು ವರ್ಷ ಆಗಿದೆ ಅಥವಾ ಇಲ್ಲ ಎನ್ನುವುದಕ್ಕೆ ಸ್ಕೂಲ್ ಸರ್ಟಿಫಿಕೇಟ್ ತರಬೇಕೇ ? ಮೆಡಿಕಲ್ ಸರ್ಟಿಫಿಕೇಟ್ ತರಬೇಕೇ ! ಇಂಥ ಪರಿಸ್ಥಿತಿ ಉಂಟಾಗುವುದರಿಂದ ಇದರಲ್ಲಿ ಅನ್ಯಾಯವಾಗುತ್ತದೆ.

ಈಗ ಕೆಲವರು ಹೇಳಬಹುದು. ಒಬ್ಬ ಎತ್ತರ ಇದ್ದಾನೆ, 12 ವರ್ಷವಾಗಿದೆ ಎಂದು. ಅವನಿಗೆ 12 ವರ್ಷಕ್ಕಿಂತ ಹೆಚ್ಚಾಗಿದೆ ಎಂದು ನಿರ್ಧಾರ ಮಾಡತಕ್ಕಂಥ ಅಧಿಕಾರಿ ಯಾರು ? ಹೀಗೆ ಮಾಡುವುದರಿಂದ ಅನ್ಯಾಯವಾಗುತ್ತದೆ ಎಂದು ಹೇಳುತ್ತೇನೆ. ಅಡಲ್ಟ್ಸ್ ಎಂದರೆ ಗೊತ್ತಾಗುತ್ತದೆ. ಆದುದರಿಂದ 12 ವರ್ಷ ಎಂದು ಇಟ್ಟರೆ ಕಷ್ಟವಾಗುತ್ತದೆ.

6-00 P.M.

ಶ್ರೀ ಬಿ. ಎಲ್. ಗೌಡ.—ಬೇಕಾದರೆ 16 ವರ್ಷ ಎಂದು ನಿಗದಿ ಮಾಡಿ.

ಶ್ರೀ ಎಂ. ನಾಗಪ್ಪ.—ಅದರ ಬದಲಾಗಿ ಅನೇಕ ಮಾರ್ಗಗಳು ಇವೆ. 12 ವರ್ಷ, 13 ವರ್ಷ, 10 ವರ್ಷ ಎಂದು ಇಡುವುದಕ್ಕೆ ಬದಲಾಗಿ ಆಡಲ್ಟ್ಸ್ ಎಂದು ಹೇಳುವುದು ಸರಿ. ಈಗ ತಂದಿರುವ ತಿದ್ದುಪಡಿ ಬಹಳ ಅಸಮಂಜಸ ಎಂದು ನಾನು ತಿಳಿದುಕೊಂಡಿದ್ದೇನೆ.

ಕೊನೆಯದಾಗಿ 13 ನೇ ಕ್ಲಾಸ್ ಬಗ್ಗೆ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಇದರಿಂದ ತಾಲ್ಲೂಕು ಬೋರ್ಡುಗಳಿಗೆ ಸಂತೆಗಳಿಂದ, ಜಾತ್ರೆಗಳಿಂದ ಇನ್ನೂ ಇತರ ಬಾಬುಗಳಿಂದ ಆದಾಯ ಬರುತ್ತದೆ. ಹಾಗೆ ಬರುವ ಆದಾಯದಲ್ಲಿ ಆ ತಾಲ್ಲೂಕು ಬೋರ್ಡಿಗೆ

ಒಳಪಟ್ಟಿರುವ ಪಂಚಾಯಿತಿಗಳಿಗೆ ಶೇಕಡ 25 ರಷ್ಟು ಕೊಡಬೇಕು ಎಂದು ಹೇಳಿದ್ದಾರೆ. ಆದರೆ ಗ್ರಾಮದಲ್ಲಿ ವಸೂಲಿ ಆಗತಕ್ಕಂಥಾದ್ದು ಅಲ್ಲಿ ಇಟ್ಟಿರುವ ಸಿಬ್ಬಂದಿಗೇ ಖರ್ಚಾಗುತ್ತದೆ. ಗ್ರಾಮದ ಅಭಿವೃದ್ಧಿ ಕಾರ್ಯಗಳಿಗೆ ಹಣ ಇರುವುದಿಲ್ಲ. ಆದುದರಿಂದ 25 ಪರ್ಸೆಂಟು ಬದಲಾಗಿ 50 ಪರ್ಸೆಂಟು ಮಾಡಿದರೆ ಆ ಗ್ರಾಮದ ಅಭಿವೃದ್ಧಿ ಕಾರ್ಯಕ್ರಮ ಮಾಡಲು ಅನುಕೂಲವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಈ ಆರ್ಡಿನೆನ್ಸ್ ತಂದಿರುವುದನ್ನು ವಿರೋಧಿಸಿ ಈ ಬಿಲ್ಲಿನಮೇಲೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Recognition of S. V. D. Party

Mr. SPEAKER.—Before adjourning the House for the day, I have to say one or two things.

I have received at 5.30 p.m., a representation under the signature of hon. Member Sri L. Srikantiah as Acting Chairman of the Samyukta Vidhayak Dal and hon. Member Sri Sharan Gowda Inamdar as Secretary, S. V. D. for granting recognition. The list consists the names of 43 members with their signatures. I will examine the matter carefully.

Sri H. N. NANJE GOWDA.—I would like the Hon. Speaker to disclose the names of the members who have signed. I have a doubt that signatures might have been forged.

Mr SPEAKER.—I do not know what will be the position. All the documents will be in my Secretariat and I hope there should be no objection for any member to come and see that. It is not the practice to give out names. It is the duty of the Speaker of this Hon'ble House to examine them and I assure the Hon'ble Members that I would examine the matter very closely critically. There need not be any anxiety on the part of the hon' Members.

Now probably, hon. Members are entitled to know how long we are sitting. The Business Advisory Committee which met earlier agreed that all the Bills that are introduced and which are before the House should be passed before we adjourn. And it is the genuine hope entertained that it should be done as far as possible tomorrow, and if it is not possible to go through them tomorrow, there would be a morning session day after tomorrow. I know many hon. members are anxious to go back to their constituencis. If they finish all the business tomorrow, it will be possible for them to go tomorrow and for me to adjourn the House *sine die*.

With this information, I request the hon'ble Members to be strictly business-like in this matter.

Sri L. SRIKANTIAH.—What about the Question Hour?

Mr. SPEAKER.—Tomorrow and day after if necessary, there would be no question hour.

HON. MEMBER.—Tomorrow the Chair will have to be strict.

Mr. SPEAKER.—Instead of requesting me to be strict, may I request the hon. Member to practise some sort of self-regulation in this matter ? Since time at our disposal is very short, I would be giving 5 to 10 minutes for each member and there will be very small number of participants in this debate. I shall make a selection of members to see that the various parties and groups are properly represented. I request the hon. Members not to embarrass me with requests which are pouring in now.

With these remarks, I adjourn the House now to meet tomorrow at 1-00 P.M.

The House adjourned at Six Minutes past Six of the Clock to meet again at One of the Clock on Wednesday, the 4th February 1970.

W.) 14643—GPB—520—21-7-1970

ಮೈಸೂರು ವಿಧಾನಸಭೆಯ ನಡವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಏಳನೆಯ ಅಧಿವೇಶನ

SEVENTH SESSION OF THE FOURTH LEGISLATIVE ASSEMBLY

೪ನೇ ಬುಧವಾರ, ಫೆಬ್ರುವರಿ ೧೯೭೦ [ಮಾಘ ೧೫, ೧೮೯೧ (ಶಕ)]

WEDNESDAY, 4TH FEBRUARY 1970 [MAGHA 15, 1891 (SAKA)]

ಸಂಪುಟ ೨೩—ಕ್ರಮಾಂಕ ೫

Vol. XXIII—No. 5

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price 25 : Paise

CONTENTS

PAGES

1 Business of the House ... 307—310

2 Mysore Village Panchayats and Local Boards (Amendment) Bill, 1970—
  (i) Statutory Resolution to disapprove the Ordinance of 1969—(Negatived) ... 310—340
  (ii) Motion to refer to a Select Committee—(Negatived) 341
  (iii) Motion to consider the Bill —(Bill passed) ... 341—359

3 Mysore Agricultural Produce Marketing (Regulation) (Amendment) Bill, 1970—
  (i) Statutory Resolution to dis approve Ordinance No. 7 of 1969—(Negatived) ... 359—360
  (ii) Motion to consider the Bill —(Passed as amended)... 360—372

4 Business of the House ... 372—373

5 Calling attention to Matters of Urgent Public Importance
  (i) *re*: Stoppage of works at Raichur Regulated Market by hamals ... 373—374
  (ii) *re*: Curtailment of certain rights under the Mysore Forest Rules, 1969 ... 375
  (iii) *re*: Damage of Jawar Crops in Bidar, Gulbarga and Raichur Districts ... 376—377
  (iv) *re*: the detection of a Wireless Transmitter (Russian Make) at the Mangalore Railway Station ... 378
  (v) *re*: Strike by the President of the B.B.C. Aluminium Factory Workers Union, Belgaum ... 379—380
  (vi) *re*: Collection of Land Revenue at new rates in ... Tarikere—(Postponed) ... 380

6 Half-an-Hour Discussion arising out of Replies to Starred Question No. 524 *re*: formation of sites by the C.I.T.B. in the Rajamahal Extension ... 380—391

ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Welnesday, 4th February 1970

The House met in the Assembly Chamber, Vidhana Soudha Bangalore, at One of the Clock.

Mr. SPEAKER (SRI S. D. KOTHAVALE) in the Chair

Business of the House

Mr. SPEAKER.—I wish to remind the hon. Member that there was a consensus of opinion amongst the hon. Members that the business before the House, namely, four Bills should be finished as far as possible today and if not today, at least tomorrow. So, restricting the time for speeches though I have no intention to stifle the debate. I request the hon. Members to press into their speeches as much reasoning as possible within a few words, so that the time allotted may be better utilised. I shall try to give opportunities to representatives of various groups and parties but it may not be possible to accommodate every member who wishes to participate in the Debate. Therefore, I request the hon. Members to co-operate with me so that we can finish the business in accordance with the consensus of the House. The maximum time that would be permitted to each member would be ten minutes and not more than that.

ಶ್ರೀ ಎಂ. ನಾಗಪ್ಪ (ರಾಯಚೂರು).—ಸ್ವಾಮಿ, ನಾನು ಒಂದು ಅಡ್‌ಜರ್ನ್‌ಮೆಂಟ್ ಮೋಷನ್ ತಮ್ಮ ಕಡೆಗೆ ಕಳುಹಿಸಿಕೊಟ್ಟಿದ್ದೆ. ಮಾನ್ಯ ಕಂದಾಯ ಮಂತ್ರಿಗಳು ಸಭೆಯಲ್ಲಿರುವಾಗ ಇದರ ಬಗ್ಗೆ ನಾನು ಪ್ರಸ್ತಾಪ ಮಾಡಿದರೆ ರೆವಿನ್ಯೂ ಮಂತ್ರಿಗಳ ಕಡೆಯಿಂದ ಹೇಳಿಕೆ ಕೊಡಿಸುತ್ತೇನೆ ಎಂದು ತಾವು ನನಗೆ ಭರವಸೆ ಕೊಟ್ಟಿದ್ದೀರಿ. ಮಾನ್ಯ ರೆವಿನ್ಯೂ ಮಂತ್ರಿಗಳು ಈಗ ಇಲ್ಲಿದ್ದಾರೆ. ಬಸವನ ಪಾಳ್ಯದಲ್ಲಿರುವ ಹರಿಜನರಿಗೆ ಸರಕಾರಿ ಜಮೀನು ಕೊಡುವುದರ ಬಗ್ಗೆ ಪರಿಶೀಲನೆ ಮಾಡಿ ಇಲ್ಲಿ ಒಂದು ಸ್ಟೇಟ್‌ಮೆಂಟ್ ಕೊಡಬೇಕೆಂದು ನಾನು ಅವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

Mr. SPEAKER.—I think the hon. Minister will make a statement at the end. In the meanwhile let us proceed with the Debate.

Sri H. V. KOUJALGI.—The Chief Minister was to make a statement. Today he is not keeping well. Tomorrow he will make.

ಶ್ರೀ ಬಿ. ಎನ್. ಪಾಟೀಲ್ (ಹುಮ್ನಾಬಾದ್).—ಸ್ವಾಮಿ, ಬೀದರ್‌ನಲ್ಲಿರುವ ಸ್ಟೂಡೆಂಟ್ಸ್ ಅಟ್ಯಾಕ್ ಮಾಡಿದ ಬಗ್ಗೆ ಒಂದು ಅಡ್‌ಜರ್ನ್‌ಮೆಂಟು ಮೋಷನ್ ತಮ್ಮ ಕಡೆಗೆ ಕಳುಹಿಸಿದ್ದೆ. ಇದರ ಬಗ್ಗೆ ಮಾನ್ಯ ಗೃಹಶಾಖೆ ಉಪಮಂತ್ರಿಗಳು ಇಲ್ಲಿ ಸ್ಟೇಟ್‌ಮೆಂಟ್ ಕೊಡಲಿಕ್ಕೆ ತಮ್ಮ ಮೂಲಕ ಕೇಳುತ್ತಿದ್ದೇನೆ.

Mr. SPEAKER.—The Chief Minister is not here. He has sent a note to me stating that his throat is bad. I shall take it up tomorrow, or towards the end of today's work.

Sri N. A. CHANNE GOWDA.—In the List of Business we do not find the questions for answers. It amounts to infringing on the rights of the members. The Question Hour is the only period when we can know......

Mr. SPEAKER.—The hon. Member will remember that yesterday I made an announcement that today and tomorrow there would be no Question hour as decided by the Business Advisory Committee. In accordance with that I have omitted Questions from today's list of Busines. There is no intention on my part to deprive the hon. Members of the question Hour. I assure the hon. Member that I shall always endeavour to protect their rights.

Sri M. S. KRISHNAN.—I had sent a short notice question long time back.

Mr. SPEAKER.—I have already said that admission of Questions, calling attention motions, short notice questions, etc., will be disposed of in my Chamber and not in the open House. The hon. Member may please come to my chamber and I shall consider his request.

ಶ್ರೀ ಅಜೀಜ್‌ಸೇಟ್.—ಸ್ವಾಮಿ, ನಾನೂ ಸಹ ಒಂದು ಕಾಲ್ ಅಟೆನ್‌ಷನ್ ನೋಟೀಸನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಪ್ರಸ್ತಾಪ ಮಾಡಲು ತಮ್ಮಲ್ಲಿಗೆ ಮೂರು ಸಲ ಬಂದಿದ್ದೆ. ತಾವು ಊಟಕ್ಕೆ ಹೋಗಿದ್ದಿರಿ.

Mr. SPEAKER.—I invite the hon. Member to come to my Chambers immediately.

Sri H. N. NANJE GOWDA.—Yesterday I gave notice of a privilege question regarding the statement made by the Chief Minister...

Mr. SPEAKER.—I have disallowed it. I have told you in my chamber itself that I am not allowing it.

Sri H. N. NANJE GOWDA.—You wanted me to show some similar case.

Mr. SPEAKER.—Then he ought to have come to me again with that.

Sri H. N. NANJE GOWDA.—I shall cite the authorities to you.

Mr. SPEAKER.—If the hon. Member comes to my Chamber and shows the authority I shall consider it.

ಶ್ರೀ ಎಚ್. ಎನ್. ನಂಜೇಗೌಡ.—ನನ್ನ ಪ್ರಿವಿಲೇಜ್ ಮೋಷನ್ ಏನಿದೆ ಎಂಬುದನ್ನು ಇಲ್ಲಿ ಒದಿದರೆ ಸಭೆಗೆ ಗೊತ್ತಾಗುತ್ತದೆ.

Mr. SPEAKER.—Unless consent is given the matter cannot be raised in the House. That is my firm decision and I am going to stick to it. I assure the hon. Member that I shall look into the authorities shown by him and then give the ruling.

ಶ್ರೀ ಎಚ್. ಎನ್. ನಂಜೇಗೌಡ.—ನನ್ನ ಹತ್ತಿರ ಅಥಾರಿಟೀಸ್ ಇದೆ. ಜಾನ್ ಪ್ರೊಪ್ರ್ಯೂಮಾ ಕೇಸ್ ಇದೆ, ಜಮ್ಮು ಅಂಡ್ ಕಾಶ್ಮೀರ್ ಕೇಸ್ ಇದೆ, ಎಂ. ಎನ್. ಕೌಲ್ ಬರೆದ ಪಾರ್ಲಿಮೆಂಟರಿ ಪ್ರೊಸೀಜರ್‌ನ ಪೇಜ್ 216ರಲ್ಲಿ ಈ ಬಗ್ಗೆ ಹೇಳಿರುವುದು ಇದೆ. ಮುಂಬೈ ಲೆಜಿಸ್ಲೇಟೀವ್ ಅಸೆಂಬ್ಲಿ ಕೇಸ್ ಇದೆ, ಪ್ರಿವಿಲೇಜ್ ಕಮಿಟಿ ರಿಪೋರ್ಟ್-64 ಇದೆ.

ಅಧ್ಯಕ್ಷರು.—ಆ ರೀತಿ ಹೇಳಿದರೆ ಪ್ರಯೋಜನವಾಗುವುದಿಲ್ಲ. ತಾವು ಆ ರಫರೆನ್ಸನ್ನು ನನ್ನ ಹತ್ತಿರ ತೆಗೆದುಕೊಂಡು ಬನ್ನಿ.

Sri H. N. NANJE GOWDA.—My silence over the matter would amount to consent to whatever the Chief Minister said about Basanna and Keni and it would mean that I have made a false allegation. I have got all the evidence to show that they are relatives.

Mr. SPEAKER.—Hon. Member stated that he will show authorities to me. Let him come to me with the authorities. If I am satisfied, I would not hesitate to revise my opinion. The hon. Member cannot compel the Chair to follow a particular procedure. All the same, I shall look into the authorities, if they are shown to me.

Sri H. N. NANJE GOWDA.—You give me in writing that you have disallowed my notice.

Mr. SPEAKER.—It is in my discretion.

Sri H. N. NANJE GOWDA.—You treat this as a special case.

Mr. SPEAKER.—I have already requested the hon. Member to come to me with all the authorities and I shall certainly look into them.

Sri H. N. NANJE GOWDA.—I am appealing to you to allow this as you have allowed such cases previously.

Mr. SPEAKER.—I am sorry I cannot do that.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸ್ವಾಮಿ, ನಾನು 146ನೇ ರೂಲ್ಸ್ ಪ್ರಕಾರ ಅಡ್ಜರ್ನ್‌ಮೆಂಟ್ ಮೋಷನ್ನನ್ನು ಚೆಂಡರ್ ವಿಚಾರದಲ್ಲಿ ಕಳಿಸಿದ್ದೆ.

Mr. SPEAKER.—Have I given consent to it?

Sri C. K. RAJAIAH SHETTY.—No.

Mr. SPEAKER.—I am not going to allow it to be raised here before I give consent to it.

Sri H. N. NANJE GOWDA.—I rise to a point of order. If any member gives a notice of a privilege motion and if he refuses to go and meet the Speaker in his Chamber, is it your ruling that because the member has not met you in your Chamber the member loses his right to move the privilege motion in the House?

Mr. SPEAKER.—With respect to the point raised by the hon. Member, whenever an hon. Member sends notice of a motion, before disposing of the notice one way or the other, I have to give an opportunity to the member to convince me about it. It is in the

(MR. SPEAKER)

interest of natural justice and I will do it. I shall call the member orally or in writing. But if the member does not find time to meet me or refuses to meet me, I cannot be blamed for that. But Hon. Members should take it as a firm procedure laid down by the Chair.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ನಾನು 309ನೇ ವಿಧಿ ಪ್ರಕಾರ ಒಂದು ಸೂಚನೆಯನ್ನು ಕೊಟ್ಟಿದ್ದೆ. ಅದರ ಪ್ರಕಾರ ತಮ್ಮ ಅಪ್ಪಣೆ ಪಡೆದು ಮಾನ್ಯ ಮಂತ್ರಿಯವರನ್ನು ವಿನಂತಿ ಮಾಡಿಕೊಳ್ಳುತ್ತೇನೆ, ಏನೆಂದರೆ.....

Mr. SPEAKER.—It came to my notice only this morning. I did not have sufficient time to apply my mind. I wanted to discuss it with the member and in fact, I sent word to him, but he was not available. Only after hearing him I shall consider whether I can give consent or not. Till consent is given the matter should not be raised here. I shall consider the question of giving consent after I retire to my Chambers after the commencement of the business here.

ಶ್ರೀ ಎಸ್. ಗೋಪಾಲಗೌಡ.—ನಾನು ವಿನಂತಿ ಮಾಡಿಕೊಳ್ಳುವುದು ಇಷ್ಟು: ಮಾನ್ಯ ವಾಟಾಳ್‌ನಾಗರಾಜ್ ಅವರನ್ನು ಈ ಅಧಿವೇಶನದ ಅವಧಿಯುವರೆಗೆ ಸೆಸ್ಪೆಂಡ್ ಮಾಡಿದ್ದೀರಿ.

ಅಧ್ಯಕ್ಷರು.—ನಾನು ಮಾಡಿಲ್ಲ, ಹೌಸ್ ಮಾಡಿದೆ.

ಶ್ರೀ ಎಸ್. ಗೋಪಾಲಗೌಡ.—ಅದನ್ನು ಪುನರ್ವಿಮರ್ಶೆ ಮಾಡಿ ಅವರು ಈ ಸಭೆಗೆ ಪುನಃ ಬರುವಂತೆ ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ನನಗೆ ಆರೋಗ್ಯ ಚೆನ್ನಾಗಿಲ್ಲದಿದ್ದರಿಂದ ಆಸ್ಪತ್ರೆಗೆ ಹೋಗಿದ್ದೆ. ಅದಕ್ಕೋಸರ ತಮ್ಮನ್ನು ಭೇಟಿ ಮಾಡಲು ಆಗಲಿಲ್ಲ. ಮತ್ತೆ ತಮ್ಮ ಛೇಂಬರ್‌ನಲ್ಲಿ ಬಂದು ನೋಡುತ್ತೇನೆ. ನೆನ್ನೆ ನಾನು ಮಾನ್ಯ ಮಂತ್ರಿಗಳಾದ ಶ್ರೀಮಾನ್ ಪುಟ್ಟಸ್ವಾಮಿಯವರ ಬಗ್ಗೆ ಏನು ಮಾತನಾಡಿದೆ ಆ ಬಗ್ಗೆ ನಾನು ವಿಷಾದಪಡುತ್ತೇನೆ. ಮಾನ್ಯ ಮಂತ್ರಿಯವರು ಯಾವ ರೀತಿ ನಡೆದುಕೊಳ್ಳಬೇಕು ಎಂಬುದನ್ನು ಅಜೆಂಡಾದಲ್ಲಿ ಇಲ್ಲದಿರುವ ವಿಷಯದ ಬಗ್ಗೆ ಹೇಳಿದಾಗ ನಾನು ಆ ರೀತಿ ಮಾತನಾಡಿದೆ. ನಾನು ಆ ರೀತಿ ಮಾತನಾಡಿದ್ದು ಅವರ ಮನಸ್ಸಿಗೆ ನೋವಾಗಿದ್ದರೆ ನಾನು ವಿಷಾದಪಡುತ್ತೇನೆ.

Mr. SPEAKER.—That is good.

Mysore Village Panchayats and Local Boards (Amendment) Bill, 1970.

(i) Statutory Resolution to disapprove the Ordinance of 1969.

(ii) Motion to Consider the Bill.

(*Debate Contd.*)

Mr. SPEAKER.—As indicated by me already, not more than 10 minutes should be taken by each member. The hon. Member Sri Srikantaiah will speak.

† **Sri L. SRIKANTAIAH** (Nanjangud).—The time at our disposal is very short. I do not know what to say in regard to this Bill. For various reasons I am convinced that the way in which the Government

---

† Indicates that remarks or speeches have not been revised by the member concerned.

is proceeding in bringing these amendments is making a mockery of the whole theory of legislation. In my opinion, the Hon. Member Sri Nagappa has rightly summarised the situation. We are in a fix. We have to rush through 4 Bills by tomorrow. Certain important amendments have been brought in the form of Bills and we are asked to give our assent within two or three hours. I do not know what justice can be done to this Bill. I do not know whether we are in a position to express our opinion at all. The Congress Party is in majority and they want to rush through the Bills. If that is the attitude of the Congress Party, where is the necessity to summon the Assembly? They could have done it for themselves. Panchayat Bill is a very important Bill. The Land Revenue (Amendment) Bill is also coming up. One hour time has been given for each. We have been asked to discuss and pass within a short time. I do not know what to say about this. As the Minister said the Zilla Parishad Bill is an important Bill. Whether we are going to give our consent or not is a different question. Assuming for arguments sake that this House is going to give assent to the Village Panchayat and Local Boards Bill, has the Government considered how to co-ordinate these amendments with the proposed Bill of Panchayati Raj Parishad? Under the amendment Bill, for instance, the revenue of the Panchayats or Local Boards is proposed to be raised. In the case of Taluk Board, it is about 28 to 50 per cent and in the case of Panchayats it is about 30 per cent and so far as the discretionery grants are concerned, it is from 5 to 10 per cent and the total comes to 80 per cent. Therefore I take it that the Government is giving about 20 per cent of the land Revenue to the Zilla Parishads. When everything is in uncertain condition, I really wonder in what haste the Government is bringing a second amendment to the Panchayat Raj Bill. What is the necessity that the Government finds to bring this piece of legislation overnight when this Bill of Zilla Parishad is pending before the House?

In a hurry they have brought forward this Local Boards Bill just to finance them. What was that mortal hurry to bring this amendment Bill? I would concede so far as the appointment of Administrators are concerned, there was some necessity. I would like to know from the Hon. Minister what was the Government doidng all along when the High Court held about two years back that the elections should be held for Taluk Boards within a year? It means the Government might have felt there was no urgency for holding elections. The other important suggestion made is about the appointment of Village Accountants and giving extra concessions to the Panchayats. Sri Nagappa was suggesting about concessions to be given to the boys of 12 years of age. These are all very simple matters. The Government could have waited for six months more and nothing would have been lost. When the Taluk Boards could be continued for two years, where is the necessity to bring the Bill immediately? Even if the Bill is adopted, does it solve the problem? Of course we are going to give assent. But what is the use? The Zilla Parishad Bill is coming. There should be co-ordination

(SRI L. SRIKANTAIAH)

between these two Institutions. The Government's intention is to confer 100 per cent land Revenue to the Taluk Board and Panchayat Institution. We know what proportion of revenue was being given to the local bodies prior to the Land Revenue Act, 1954. All lands were divided into three categories—wet, dry and Bagayet. I would like to know from the Hon. Minister what was the revenue that was being allotted prior to the Act of 1964 to these Panchayats, and what is the excess revenue that is being given according to the new definition of this Bill? My apprehension is according to my assessment, very little percentage of revenue is being given to these Institutions. I want to know what is the surplus tax that has been given to the Panchayats and Taluk Boards? As a matter of fact in Village Panchayats and Local Boards, there is absolutely no provision for supervision over these Panchayats and Local Boards. Some of the Panchayats have not been manned for years. In some of the Panchayats, no meetings were held. Taluk Boards have no control over these institutions. Even the Deputy Commissioner or the Divisional Commissioner has no power to ask the Panchayats to take any measures to tone up the administration of these institutionss. When that is the position where was the necessity to bring such a legislation for these democratic Local self-Government institutions? I am sorry to say that the Minister for Local Self-Government has no knowledge of Local Self-Government. Sri Nagappa has rightly pointed out that this Ordinance has been brought according to the whims of the Government and the Government has been made a target for this. Therefore there is no use of taking up this Bill and this may be dropped.

1-30 P.M.

ಶ್ರೀ ಎಸ್. ರುದ್ರಪ್ಪ (ಚಿತ್ತಾಪುರ)—ಮಾನ್ಯ ಅಧ್ಯಕ್ಷರೇ, ಈಗ ತಂದಿರುವ ತಿದ್ದುಪಡಿ ಏನೆಂದರೆ, ತಾಲ್ಲೂಕು ಬೋರ್ಡುಗಳಿಗೆ ಕೊಡತಕ್ಕ ಗ್ರಾಂಟನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಕೊಡಬೇಕು ಮತ್ತು ಅದೇ ರೀತಿಯಲ್ಲಿ ಗ್ರಾಮ ಪಂಚಾಯಿತಿಗೂ ಕೊಡಬೇಕೆನ್ನುವ ಉದ್ದೇಶದಿಂದ ತಂದಿದ್ದಾರೆ. ಇದುವರೆಗೂ ತಾಲ್ಲೂಕು ಬೋರ್ಡುಗಳಿಗೆ ಭೂಕಂದಾಯದ 20 ಪರ್‌ಸೆಂಟ್ ಕೊಡುತ್ತಿದ್ದರು, ಈಗ ಅದನ್ನು 50 ಪರ್‌ಸೆಂಟಿಗೆ ಏರಿಸಿದ್ದಾರೆ. ಅದೇ ರೀತಿ ಡಿಸ್ಕ್ರಿಶನರಿ ಗ್ರಾಂಟ್ 5 ಪರ್‌ಸೆಂಟ್ ಇದ್ದುದನ್ನು ಈಗ 10 ಪರ್‌ಸೆಂಟಿಗೆ ಏರಿಸಿದ್ದಾರೆ. ಈಗಾಗಲೇ ಸರ್ಕಾರದವರು ನಿರ್ಣಯಿಸಿದಂತೆ ಭೂಕಂದಾಯದ ಕೆಲವು ಭಾಗವನ್ನು ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ, ಅವರ ಅಭಿವೃದ್ಧಿ ಕೆಲಸಗಳಿಗೆ ಕೊಡಲು ಈ ತಿದ್ದುಪಡಿಯನ್ನು ತಂದಿದ್ದಾರೆ. ಮೊದಲು ಸರ್ಕಾರದವರು ಕೊಡಬೇಕಾದಂತಹ ಗ್ರಾಂಟನ್ನೂ ಕೊಡಲು ಕೂಡ ಮಸೂದೆಯಲ್ಲಿ ಪ್ರೊವಿಜನ್ ಇರಲಿಲ್ಲ, ಆದ್ದರಿಂದ ಈ ಅಮೆಂಡ್‌ಮೆಂಟನ್ನು ತಂದಿರುವುದು ಬಹಳ ಅಗತ್ಯವಾದುದೆಂದು ಹೇಳುತ್ತೇನೆ. ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಈಗಾಗಲೇ ಅನೇಕ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡುತ್ತಿವೆ. ಗ್ರಾಮ ಪಂಚಾಯಿತಿಗಳ ಮತ್ತು ತಾಲ್ಲೂಕು ಬೋರ್ಡುಗಳ ರಸ್ತೆ ಮುಂತಾದ ಕೆಲಸಗಳಲ್ಲದೆ, ಮುಖ್ಯವಾದ ಅಗ್ರಿಕಲ್ಚರಲ್ ಪ್ರೊಡಕ್ಷನ್, ವಕ್ಕಲುತನ ಹಿಡುವಳಿ, ಮತ್ತು ವೆಟರಿನರಿ ಇಲಾಖೆಯವರಲ್ಲಿರತಕ್ಕಂತಹ ಕಾರ್ಯಕ್ರಮಗಳಲ್ಲೂ ಇವರು ಭಾಗವಹಿಸುತ್ತಿದ್ದಾರೆ. ಇದರಿಂದ ತಾಲ್ಲೂಕು ಬೋರ್ಡುಗಳ ಕೆಲಸಕಾರ್ಯಗಳು ಹೆಚ್ಚಾಗಿವೆ ಮತ್ತು ಜವಾಬ್ದಾರಿ ಹೆಚ್ಚಾಗಿವೆ. ಇದರಿಂದ ಈಗ ತಿದ್ದುಪಡಿಯಲ್ಲಿ ಗ್ರಾಂಟನ್ನು ಹೆಚ್ಚು ಮಾಡಿರುವುದು ಸಮಂಜಸವಾಗಿದೆ. ಇನ್ನೊಂದು ಈ ಮನೆಯಲ್ಲಿ ಹೆಚ್ಚು ಟೀಕೆಗೆ ಗುರಿಯಾದ ಅಂಶವೇನೆಂದರೆ, ಈ ಸೆಸ್ 20–25 ಪೈಸೆ ಹಾಕತಕ್ಕಂತ ಅಧಿಕಾರ ಏನಿದೆ, ಅದು ಕೊಡ

ಬಾರದು, ಇದರಿಂದ ಜನಗಳ ಮೇಲೆ ಬಹಳ ಭಾರ ಬೀಳುತ್ತದೆ ಎಂದು ಹೇಳಿದ್ದಾರೆ. ನನಗನಿಸುತ್ತದೆ, ಈ ಸೆಸ್ ಏನಿದೆ, ಒಂದು ರೂಪಾಯಿಯಲ್ಲಿ 25 ಪೈಸೆ ಸೆಸ್ ಹಾಕತಕ್ಕ ಅಧಿಕಾರ ಬಹಳ ಉತ್ತಮವಾದುದು. ನಾನು ಮೊದಲೇ ಹೇಳಿದಂತೆ ಈ ಸಂಸ್ಥೆಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕಾದರೆ, ತಾಲ್ಲೂಕು ಬೋರ್ಡುಗಳು ತಮ್ಮ ತಾಲ್ಲೂಕಿನಲ್ಲಿ ಸೆಸ್ ಹಾಕತಕ್ಕದ್ದು ಅವರ ಕರ್ತವ್ಯವಾಗಿದೆ. ಅಲ್ಲಿಯ ಸದಸ್ಯರು ಕೂಡ ಜನರಿಂದಲೇ ಆರಿಸಿ ಬಂದಂತವರು. ನಾವು ಇಲ್ಲಿ ಹೇಗೆ ಒಂದು ಲಕ್ಷ ಚಿಲ್ಲರೆ ಜನರಿಂದ ಆರಿಸಿ ಬರುತ್ತೇವೋ, ಹಾಗೆಯೇ ಅವರು ಕೂಡ 8 ಸಾವಿರ, 10 ಸಾವಿರ ಜನರಿಂದ ಆರಿಸಿ ಬಂದಿದ್ದಾರೆ. ಅವರಿಗೂ ಹೆಚ್ಚಿನ ಜವಾಬ್ದಾರಿ ಇದೆ. ಅವರೂ, ಅವರ ಕ್ಷೇತ್ರದ ಜನರ ಕುಂದುಕೊರತೆಗಳನ್ನು ಕೇಳಬೇಕಾಗುತ್ತದೆ. ಜನರು ಯಾವಾಗ ಸೆಸ್ ಬೇಡ ಅಂದರೆ, ಅವರು ಸೆಸ್ ಹಾಕಲು ಹೋಗುವುದಿಲ್ಲ. ಅದನ್ನು ಹಾಕಬೇಕಾದರೂ ಕೂಡ ಎಲ್ಲಾ ಸದಸ್ಯರು ಒಮ್ಮತದಿಂದ ಗೊತ್ತುವಳಿಯನ್ನು ಪಾಸು ಮಾಡಿದರೆ ಮಾತ್ರ ಸರ್ಕಾರದವರು ಅದನ್ನು ಒಪ್ಪುತ್ತಾರೆ, ಇಲ್ಲದಿದ್ದರೆ ಇಲ್ಲ. ಆದ್ದರಿಂದ ನಾವು ಅದನ್ನು ಇವೊತ್ತಿನ ದಿವಸ ವಿರೋಧ ಮಾಡುವುದು ಸರಿಯಲ್ಲ, ಮತ್ತು ಸಮಂಜಸವಲ್ಲವೆಂದು ಕಾಣುತ್ತದೆ. ತಾಲ್ಲೂಕು ಬೋರ್ಡು ಸದಸ್ಯರೆಲ್ಲಾ ಜವಾಬ್ದಾರಿಯುಳ್ಳವರಾಗಿದ್ದಾರೆ. ಮತ್ತು ಅವರು ಹೆಚ್ಚಿನ ಕೆಲಸಕಾರ್ಯಗಳನ್ನು ಮಾಡಬೇಕಾಗಿದೆ. ಮತ್ತು ಹೀಗೆ ಹಾಕುವುದರಿಂದ ಅಲ್ಲಿ ಹೆಚ್ಚಿನ ಕೆಲಸಗಳಾಗುತ್ತವೆ, ಅಭಿವೃದ್ಧಿಯಾಗುತ್ತದೆ ಮತ್ತು ಅವರು ಸ್ವಾವಲಂಬಿಗಳಾಗುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಈ ಸೆಸ್ ಹಾಕತಕ್ಕ ಏನೊಂದು ಪ್ರೊವಿಜನ್ ಇದೆ, ಅದನ್ನು ನಾನು ಅನುಮೋದಿಸುತ್ತೇನೆ.

ಇದುವರೆಗೂ ಖಾದಿ ಬೋರ್ಡಿನಿಂದ ಗ್ರಾಂಟ್ ಅಥವಾ ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶ ಇರಲಿಲ್ಲ. ಈಗ ಆ ಒಂದು ಪ್ರೊವಿಜನ್ ಕೂಡ ಮಾಡಿದ್ದಾರೆ. ಇದು ಬಹಳ ಉತ್ತಮವಾಗಿದೆ ಎಂದು ಹೇಳಬೇಕಾಗಿದೆ. ಇಲ್ಲಿಯವರೆಗೆ ಸರ್ಕಾರದವರು ಕೊಡತಕ್ಕ ಭೂಕಂದಾಯದ ಹಣ ಮತ್ತು ಇನ್ನಿತರ ಸೆಸ್‌ಗಳಿಂದ ತಮ್ಮ ಕೆಲಸಗಳನ್ನು ಮಾಡಬೇಕಾಗಿತ್ತು. ಈಗ ಖಾದಿ ಬೋರ್ಡಿಂದ ಗ್ರಾಂಟ್ ಅಥವಾ ಸಾಲ ತೆಗೆದುಕೊಂಡು ಇನ್ನೂ ಹೆಚ್ಚು ಹೆಚ್ಚು ಸಣ್ಣ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಮತ್ತು ಪ್ರೋತ್ಸಾಹಿಸುವುದಕ್ಕೆ ಅನುಕೂಲವಾಗುತ್ತದೆ. ಇನ್ನು ಗ್ರಾಮ ಪಂಚಾಯಿತಿಯ ವಿಸ್ತರಣೆಯಲ್ಲಿ ಏನಾದರೂ ಜಾತ್ರೆ ಉತ್ಸವಗಳು ಆದರೆ, ಅಲ್ಲಿಯೂ ಸಣ್ಣ ಟ್ಯಾಕ್ಸ್ ಹಾಕತಕ್ಕ ಅವಕಾಶ ಇದೆ. ಇದರಿಂದೆಲ್ಲಾ ಗ್ರಾಮ ಪಂಚಾಯಿತಿಗೆ ತನ್ನ ಸಂಪನ್ಮೂಲಗಳನ್ನು ಹೆಚ್ಚಿಸಲು ಅನುಕೂಲವಾಗುತ್ತದೆ. ಮತ್ತು ಜಾತ್ರೆ ನಡೆಸುವ ದಿವಸ ನೀರಿನ ವ್ಯವಸ್ಥೆ, ಸ್ಯಾನಿಟರಿ ವ್ಯವಸ್ಥೆ ಎಲ್ಲಾ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ಎಲ್ಲಾ ದೃಷ್ಟಿಗಳಿಂದ ಈ ತಿದ್ದುಪಡಿಯನ್ನು ಸ್ವಾಗತಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri H. SIDDAVEERAPPA (Harihar).—Sir, while opposing this Bill I would like to say a few words as to the causes that prompted me to oppose this measure. I do not see any provision in this Bill which is of so compelling urgency as to cause the Government to bring an Ordinance. I want the Hon. Deputy Minister to say as to what were the compelling reasons to bring an Ordinance. After all, under the Constitution, power of legislation by Ordinance can be used only under very special circumstances, and that too when the Legislature is not in Session and when the Government finds that such a measure is absolutely necessary. I saw every provision here. I do not see any reason as to why they want to increase the land revenue from 20 to 50 per cent to these bodies. Heavens would not have fallen if they had brought this legislation when the Assembly was in Session.

Sir, the reason why these gentlemen are fond of legislation by Ordinance may be this: if the Bill is introduced it would be subjected to all kinds of criticisms and modifications, and we may even ask for a Select Committee to examine it so that it is brought in a manner acceptable to the entire House. Now what happens? On account of the overwhelming majority they enjoy for the time being, they get it passed.

(SRI H. SIDDAVEERAPPA)

Why this rush-through business, I cannot understand. That is the reason why we find so many writ petitions and so many other legal proceedings in the High Court and other Courts. I find there is something radically wrong in the legislative wing of the Government. Probably, some idea prompts them and they ask for the issue of an Ordinance. Otherwise, it could have been examined with greater care thorughly and then it could have been brought. I think it is a very hasty measure. They want to introduce Khadi and Gramodyog industries. We have seen how our Khadi and Gramodyog industries have done in Mysore State. It is a by *purana* itself. Now you want the Village Panchayats, some of your smaller luminaries at the village level to enjoy some facilities. This will lead to misuse of funds. You want to build your party at the lower level and therefore you are trying to give some financial power to your people at the village level. This is one way of attracting the Village Panchayats to put your roots in the village level.

Now you have stated that the Town Panchayat may levy a fee not exceeding fifty paise per capita on persons resorting to Shrine, Jatra, Urs, etc. How can they do it ? We have seen in Saundatti where they levied some entrance fees. As far as I know, if you allow them to levy this fees it is likely to put great hardship to people who go to places of worship.

Then Sir, the most objectionable clause is to have nominations for four years in place of one year. I want to ask whether they are not satisfied with one year period for nominations ? As it is even without nominations you have been carrying on. This increase in the period of nominations from one year to four years is most objectionable. That is reactionary and should not be allowed.

Then Sir, the Government wants to give enhanced land revenue to the Village Panchayats. I want to know what happened to your various schemes ? You wanted to abolish land revenue altogether. If you go through the proceedings of the Legislature during the last two to three years the Government has introduced various schemes. The Hon. Minister for Finance has stated that he wants to abolish the land revenue and introduce it by a scientific method. But the Hon. Revenue Minister says that land revenue will continue for all time to come. Is it perhaps you knew that land revenue would not be collected or is this one of the ways of asking the villagers to pay the land revenue under the guise and temptation that half of it will be given to the Village Panchayats ? I feel that this legislation ought not to have been introduced. I know they will get it passed because they enjoy the majority. But I must register my protest that it ought not to have come in the form in which it has come. With these remarks, I oppose the present Amendment Bill.

† ಶ್ರೀ ಆರ್. ಮುನಿಸ್ವಾಮಯ್ಯ.—ಸ್ವಾಮಿ, ನಮ್ಮ ಮುಂದೆ ಇಟ್ಟಿರತಕ್ಕ ಈ ವಿಧೇಯಕವನ್ನು ಒಪ್ಪಬೇಕು ಎಂದು ನಾನು ಮಾತನಾಡುತ್ತಿದ್ದೇನೆ. ಕಾರಣ ಏನೆಂದರೆ ಬಹಳ ವರ್ಷಗಳಿಂದ

ಈ ಭೂಮಿ ಹಂಚಿಕೆ ವಿಷಯ, ಮತ್ತು ಭೂಗುಣ ಪರೀಕ್ಷೆ ಮೊದಲಾದ ವಿಷಯಗಳನ್ನು ಜನರು ಬಹಳ ಆತುರವಾಗಿ ಕಾಯುತ್ತಾ ಇದ್ದಾರೆ. ಈ ಭೂಗುಣವನ್ನು ಅನುಸರಿಸಿ, ಭೂಸಾರವನ್ನು ಅನುಸರಿಸಿ ಹೆಚ್ಚಿನ ಕಂದಾಯವನ್ನು ವಸೂಲುಮಾಡಬಹುದು ಎಂದು ನಿರೀಕ್ಷಣೆ ಮಾಡಿ ಅನೇಕ ಕಡೆ ಭೂಮಿ ಸರ್ವೆ ನಡೆದು ಭೂಮಿ ಸಾರ ಪರೀಕ್ಷೆ ಮಾಡಿ ಅದಕ್ಕೆ ಅನುಸಾರವಾಗಿ ಕಂದಾಯವನ್ನು ಗೊತ್ತು ಮಾಡಿದ್ದಾರೆ. ಹಲವಾರು ಕಡೆ, ಈ ಸರ್ವೆ ಮಾಡಿದ ಮೇಲೆ ಕಡಿಮೆ ಆಗಿರುವ ನಿದರ್ಶನಗಳು ಬೇಕಾದಷ್ಟು ಇವೆ. ಹಳೆಯ ಮೈಸೂರು ಭಾಗದಲ್ಲಿಯೂ ಮತ್ತು ಹೊಸ ಮೈಸೂರು ಭಾಗದಲ್ಲಿಯೂ ಈ ಬದಲಾವಣೆ ಆಗಿರತಕ್ಕ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ರೈತರು ಈಗಿರುವ ಬದಲಾವಣೆಗಳನ್ನು ಸ್ವಾಗತಿಸುತ್ತಾರೆ. ಆರ್ಡಿನೆನ್ಸ್ ಮೂಲಕ ಬಂದಿರುವ ಈ ಮಸೂದೆಯನ್ನು ಸರ್ಕಾರದವರು ಮಾನ್ಯ ಸಭೆಯ ಒಪ್ಪಿಗೆಗೆ ಇಟ್ಟಿದ್ದಾರೆ. ಈ ತಿದ್ದುಪಡಿ ಮಸೂದೆಗೆ ನಾವೆಲ್ಲರೂ ಬೆಂಬಲವನ್ನು ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನ ಹಳ್ಳಿ).—ಈ ವಿಧೇಯಕವನ್ನು ಆರ್ಡಿನೆನ್ಸ್ ಮೂಲಕ ತಂದಿರುವುದನ್ನು ನೋಡಿದರೆ It is a mockery of ordinance ಎಂದು ಹೇಳಿದರೆ ತಪ್ಪಾಗಲಾರದು. ಈಚೆಗೆ ಸರಕಾರದವರು ಪ್ರತಿಯೊಂದು ವಿಧೇಯಕವನ್ನೂ ಆರ್ಡಿನೆನ್ಸ್ ಮೂಲಕ ಜಾರಿ ಮಾಡಿ ಈ ಸಭೆಯ ಮತ್ತು ಗೌರ್ನರ್‌ರವರ ಅನುಮೋದನೆಯನ್ನು ಮಾಡುವ ಹಾಗೆ ಒಂದು ಸಂದಿಗ್ಧ ಪರಿಸ್ಥಿತಿಯನ್ನು ತಂದು ಇಡುತ್ತಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಅದರಲ್ಲಿ ಹೊಸದಾಗಿ ಅನೇಕ ಕಾಲಂಗಳನ್ನು ಸೇರಿಸಿದ್ದಾರೆ. ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ ಆದಾಯ ಜಾಸ್ತಿ ಮಾಡಬೇಕು ಎನ್ನುವುದೇ ಈ ವಿಧೇಯಕದ ಉದ್ದೇಶ. ಆದರೆ ನಿಜವಾಗಿ ನೋಡಿದರೆ ಮೂರು ಕಾಸೂ ಜಾಸ್ತಿ ಬರುವ ಸ್ಥಿತಿಯಲ್ಲಿ ಇಲ್ಲ. ಈವೊತ್ತಿನ ದಿವಸ ಒಂದು ವಿಧೇಯಕವನ್ನು ತಂದು 30 ಲಕ್ಷ ಎಕರೆ ತರಿ ಜಮೀನಿಗೆ ಕುಷ್ಕಿ ಕಂದಾಯ ಮತ್ತು ವಾಟರ್ ರೇಟ್ ಬೇರೆ ಬೇರೆ ಮಾಡಿ, ಕುಷ್ಕಿ ಜಮೀನನ್ನಾಗಿ ಪರಿವರ್ತಿಸಿ ಮೂರು ನಾಲ್ಕು ಕೋಟಿ ರೂಪಾಯಿ ಕಡಿಮೆ ಕಂದಾಯ ಬರುವಹಾಗೆ ಮಾಡಿದ್ದಾರೆ. ಆದುದರಿಂದ ಮೂರು ಕಾಸೂ ಜಾಸ್ತಿ ಆದಾಯ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ ಬರುವುದಿಲ್ಲ. ಇದಕ್ಕೆ ಬೇರೆ ರೂಪು ಕೊಟ್ಟು ಜನಗಳಿಗೆ ಆಶಾಭಾವನೆಯನ್ನು ತೋರಿಸಿ ಪಂಚಾಯಿತಿ ತಾಲ್ಲೂಕು ಬೋರ್ಡುಗಳಿಗೆ ಹೆಚ್ಚಿನ ಹಣವನ್ನು ಕೊಡುತ್ತೇವೆ ಎಂದು ಹೇಳಿರುವುದು ಮೋಸವೇ ಹೊರತು ಮತ್ತೇನೂ ಅಲ್ಲ. ಹಾವಾಡಿಗನು ಡೋಲು ಬಜಾಯಿಸಿ ಖಾಲಿ ಬುಟ್ಟಿಯನ್ನು ಬಿಸಾಡಿ ನಾಟಕ ತೋರಿಸುವ ಹಾಗೆ ಈ ಕಲಂಗಳನ್ನು ಮಾಡಿರುವುದನ್ನು ನೋಡಿದರೆ ಖಂಡಿತವಾಗಿಯೂ ಕೂಡ ಈ ಸ್ಥಳೀಯ ಸಂಸ್ಥೆಗಳಿಗೆ ಯಾವ ವಿಧದಲ್ಲಿಯೂ ಮೂರು ಕಾಸೂ ಆದಾಯ ಜಾಸ್ತಿ ಕೊಡುವುದಕ್ಕೆ ಸರಕಾರಕ್ಕೆ ಅವಕಾಶವಿಲ್ಲ. ಸುಮ್ಮನೆ ಪರ್ಸೆಂಟೇಜ್ ಜಾಸ್ತಿ ಮಾಡಿದ್ದಾರೆ.

ಶ್ರೀ ಬಿ. ಎಲ್. ಗೌಡ.—20 ಪರ್ಸೆಂಟ್ ಇರುವುದನ್ನು 50 ಪರ್ಸೆಟ್ ಮಾಡಿದ್ದು ಮೋಸವೇ?

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಹಣ ಜಾಸ್ತಿ ಇಲ್ಲ. 30 ಲಕ್ಷ ಎಕರೆಗೆ 10 ರಿಂದ 20 ರೂಪಾಯಿ ಇರುವ ತರೀ ಕಂದಾಯಕ್ಕೆ ಒಂದು ರೂಪಾಯಿ, ಎರಡು ರೂಪಾಯಿನಂತೆ ಕುಷ್ಕೀ ಕಂದಾಯ ಮಾಡಿದ್ದೀರಿ. ವಾಟರ್ ರೇಟ್ ವಿಂಗಡಿಸಿ ಪಿ.ಡಬ್ಲ್ಯೂ.ಡಿ. ಇಲಾಖೆಗೆ ಹೋಗುವ ಹಾಗೆ ಮಾಡಿದ್ದೀರಿ.

ಶ್ರೀ ಎಲ್. ಶ್ರೀಕಂಠಯ್ಯ.—1966 ನೇ ಇಸವಿಗೆ ಮುಂಚೆ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ ಎಷ್ಟು ಹಣ ಕೊಟ್ಟಿದ್ದೀರಿ ಎಂಬುದಕ್ಕೆ ಫಿಗರ್ಸ್ ಕೊಡಿ. ವಾಟರ್‌ರೇಟ್ ಸಪರೇಟ್ ಅದರಮೇಲೆ ಎಷ್ಟು ಕೊಟ್ಟಿದ್ದೀರಿ ಎಂದು ಹೇಳಿ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಅದಕ್ಕಿಂತಲೂ ಉತ್ತಮವಾದ ವಿಧೇಯಕ ತರಬಹುದಾಗಿತ್ತು. ತಾಲ್ಲೂಕು ಬೋರ್ಡು ಆದಾಯ ನೋಡಿದರೆ 50 ಸಾವಿರ ರೂಪಾಯಿಂದ ಹಿಡಿದು 5 ಲಕ್ಷ ರೂಪಾಯಿಯುವರೆಗೆ ಆದಾಯ ಬರುತ್ತದೆ. ಕೆಲವು ತಾಲ್ಲೂಕು ಬೋರ್ಡುಗಳಲ್ಲಿ ಸಾಗು ಭೂಮಿ ಜಾಸ್ತಿ ಇದ್ದು ಇತರೇ ಬಾಬುಗಳಿಂದ ಆದಾಯ ಬರುತ್ತದೆ. ಅಂತಹ ತಾಲ್ಲೂಕು ಬೋರ್ಡುಗಳು ಕೆಲವು ಇವೆ. ಬಾಗೇಪಲ್ಲಿ, ಗುಡಿಬಂಡೆ ಮುಂತಾದ ತಾಲ್ಲೂಕುಬೋರ್ಡುಗಳಿಗೆ 50 ಸಾವಿರ ರೂಪಾಯಿ ಬರುವುದಿಲ್ಲ. ಸಿಬ್ಬಂದಿ ಖರ್ಚುಕೂಡ ಬರುವುದಿಲ್ಲ. ನೀರಿನ ಸರಬರಾಜು ಮಾಡುವುದು, ಬೆಳಕನ್ನು ಒದಗಿಸುವುದು, ನೈರ್ಮಲ್ಯ ಕಾಪಾಡುವುದು ಪಂಚಾಯಿತಿ ಮತ್ತು ತಾಲ್ಲೂಕುಬೋರ್ಡುಗಳ ಜವಾಬ್ದಾರಿ ಕೆಲಸವಾಗಿದೆ. ಅಂತಹ ಜವಾಬ್ದಾರಿ ಕೆಲಸವನ್ನು ದೇಶದ ಎಲ್ಲಾ ಪ್ರಜೆಗಳು ಹೊರಬೇಕಾದದ್ದು ಅವಶ್ಯಕ. ಈಗ ತಾಲ್ಲೂಕು ಬೋರ್ಡುಗಳಿಗೆ 50 ಸಾವಿರ ರೂಪಾಯಿಗಳಿಂದ 5 ಲಕ್ಷ ರೂಪಾಯಿಗಳ ವರೆಗೆ ಆದಾಯ ಬರುವ ಅವಕಾಶ ಇರುವಾಗ ಕೆಲವು

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ತಾಲ್ಲೂಕು ಬೋರ್ಡುಗಳಲ್ಲಿ ಬೇಕಾದಷ್ಟು ಹಣ ಇರುತ್ತದೆ ಕೆಲವು ಕಡೆ ಇರುವುದಿಲ್ಲ. ಆದುದರಿಂದ ಹಣವು ಎಲ್ಲಾ ಒಟ್ಟಿಗೆ ಪೂಲ್ ಮಾಡಿ ಪಾಪ್ಯುಲೇಶನ್ ಬೇಸಿಸ್ ಮೇಲೆ ಹಂಚಿದರೆ ನಿಜವಾಗಿಯೂ ಅದು ನೀವು ಸೋಷಲಿಸ್ಟಿಕ್ ಸೆಟಪ್ ತೆಗೆದುಕೊಂಡಿದ್ದೀರಿ ಎಂದು ಹೆಮ್ಮೆ ಪಡಬಹುದು, ಈವೊತ್ತಿನ ದಿವಸ ಸಿಬ್ಬಂದಿ ಮೇನ್‌ಟೇನ್ ಮಾಡುವುದಕ್ಕೆ ಬರುವ ಆದಾಯ ಸಾಕಾಗುತ್ತದೆ. ಮೂರು ಕಾಸೂ ರಚನಾತ್ಮಕ ಕೆಲಸಗಳಿಗೆ ಸಾಕಾಗುತ್ತಾ ಇಲ್ಲ. ಆದುದರಿಂದ ಅಭಿವೃದ್ಧಿ ಕಾರ್ಯ ಕಲಾಪಗಳನ್ನು ಮಾಡುವುದಕ್ಕೆ ಆಗುತ್ತಾ ಇಲ್ಲ. ಅನೇಕ ತಾಲ್ಲೂಕು ಬೋರ್ಡುಗಳಿಗೆ ಈಗ ಯಾವ ವಿಧವಾದ ಅನುಕೂಲವೂ ಸಿಕ್ಕುತ್ತ ಇಲ್ಲ. ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕೆಲವು ತಾಲ್ಲೂಕುಗಳಿಗೆ ಕಳೆದ ಮೂರು ನಾಲ್ಕು ವರ್ಷಗಳಿಂದ ಕಂದಾಯದ ರಿಯಾಯಿತಿಯನ್ನು ಕೊಟ್ಟಿದ್ದಾರೆ. ಅಂತಹ ತಾಲ್ಲೂಕು ಬೋರ್ಡುಗಳಿಗೆ ಪರ್ಸೆಂಟೇಜ್ ಜಾಸ್ತಿ ಮಾಡಿದರೆ ಅದರಿಂದ ಏನು ಪ್ರಯೋಜನಮಾಡಿದಂತಾಯಿತು ? ಕೆಲವು ಕಡೆ ಕಂದಾಯ ಜಾಸ್ತಿ ಬಂದಿದೆ ಕೆಲವು ಕಡೆ ಬಂದಿಲ್ಲ. ಆದುದರಿಂದ ಎಲ್ಲಾ ಕಂದಾಯವನ್ನು ಪೂಲ್ ಮಾಡಿ ಹಂಚಿದರೆ ಎಲ್ಲರಿಗೂ ಅನುಕೂಲ ಮಾಡಿ ಕೊಡುವುದಕ್ಕೆ ಅವಕಾಶವಾಗುತ್ತದೆ. ಅಂತಹ ಅವಕಾಶವನ್ನು ಈ ವಿಧೇಯಕದಲ್ಲಿ ಮಾಡಿಲ್ಲ. ಪಾಪ್ಯುಲೇಷನ್ ಬೇಸಿಸ್ ಮೇಲೆ ಹಂಚುವುದು ರಾಷನಲ್ ಬೇಸಿಸ್ ಆಫ್ ಡಿಸ್ಟ್ರಿಬ್ಯೂಷನ್ ಆಫ್ ಲ್ಯಾಂಡ್ ರೆವಿನ್ಯೂ ಎಂದು ಧೈರ್ಯವಾಗಿ ಹೇಳಬಹುದು. ಅಂತಹ ಅವಕಾಶ ಮಾಡಿದರೆ ಚೆನ್ನಾಗಿತ್ತು ಎಂದು ಹೇಳುತ್ತೇನೆ.

ಇನ್ನು ಪಂಚಾಯತಿಯವರು ಎಕ್ಸಿಬಿಷನ್ನಲ್ಲಿ ಭಾಗವಹಿಸುವ ವಿಚಾರ ಸ್ವಲ್ಪ ಹೇಳಬೇಕಾಗಿದೆ. ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ ಆಬ್ಲಿಗೇಟರಿ ಡ್ಯೂಟೀಸನ್ನು ನಿರ್ವಹಿಸಲು ಹಣದ ಕೊರತೆಯ ದೆಸೆಯಿಂದ ಶಕ್ತಿ ಇಲ್ಲದೆ ಇರುವಾಗ, ಹೊಸಹೊಸ ಕೆಲಸಗಳನ್ನು ಅವುಗಳಿಗೆ ವಹಿಸುವುದು ಸಾಧುವಾದುದಲ್ಲ. ಸಿಂಡಿಕೇಟಿನವರು ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಕಾಂಗ್ರೆಸ್ ಎಕ್ಸಿಬಿಷನ್ ಮಾಡಬೇಕೆಂದು ತೀರ್ಮಾನಿಸಿದ್ದಾರೆಂದು ಕೇಳಿದ್ದೇನೆ. ಅಂತಹ ಎಕ್ಸಿಬಿಷನ್ನಿನಲ್ಲಿ ಡೆಪ್ಯೂಟಿಕಮೀಷನರು ಪ್ರತಿಯೊಂದು ಇಲಾಖೆಯ ಒಂದೊಂದು ಸ್ಟಾಲನ್ನು ತೆರೆದು ಸಹಕರಿಸಬಹುದು ಮತ್ತು ಪಂಚಾಯಿತಿಗಳಿಗೆ ಒಂದು ಸರ್ಕ್ಯೂಲರ್ ಕಳುಹಿಸಿ ಪ್ರತಿಯೊಂದು ಪಂಚಾಯಿತಿಯಿಂದ 25 ರೂಪಾಯಿಗಳನ್ನು ಕೊಡಿಸಿಕೊಟ್ಟರೆ ಒಂದು ಜಿಲ್ಲೆಯಲ್ಲಿ ಸುಮಾರು ಒಂದು ಸಾವಿರ ಪಂಚಾಯಿತಿಗಳು ಇರುತ್ತವೆ. ಅವುಗಳಿಂದ 25 ರೂಪಾಯಿನಂತೆ ಎಷ್ಟೋ ಆದಾಯ ತೆಗೆದುಕೊಳ್ಳುವುದಕ್ಕೆ ಪರೋಕ್ಷವಾಗಿ ಇದು ದಾರಿ ಆಯಿತು ಎಂದು ನಾನಾದರೂ ಹೇಳಬೇಕಾಗಿದೆ.

ಇನ್ನು ಜಾತ್ರೆ ತೆರಿಗೆ ವಿಚಾರ. ಇದು ತಲೆಗಂದಾಯ ಹಾಕುವಹಾಗೆ ಜಾತ್ರೆಗೆ ಬರುವ ಜನರು ತೆರಿಗೆ ಕೊಡಬೇಕೆಂದು ಹೇಳುವುದು ಅರ್ಥವಿಲ್ಲ. ಈವೊತ್ತಿನ ದಿವಸ ದೇವಸ್ಥಾನದ ಆಜೂಬಾಜೂ ಜಾಗದಲ್ಲಿರುವ ಜನರು ದೇವಸ್ಥಾನಕ್ಕೆ ಸಂಬಂಧಪಟ್ಟ ಎಲ್ಲಾ ಕೆಲಸಗಳನ್ನು ಬಂದು ಮಾಡುತ್ತಾ ಇದ್ದಾರೆ. ಈಗ ನೀವು ಅವರಿಂದ ತೆರಿಗೆ ವಸೂಲು ಮಾಡಿ ಸಾನಿಟೇಷನ್, ವಾಟರ್‌ಸಪ್ಲೈ ಮಾಡಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ. ಜಾತ್ರೆಯಲ್ಲಿ ಒಂದು ಸಿನಿಮಾ ಬಂದರೂ ಅದರಿಂದ ಹಣ ವಸೂಲುಮಾಡುತ್ತಾರೆ. ಹೀಗೆ ಬೇರೆ ಬೇರೆ ರೀತಿಯಿಂದ ಸಾವಿರಾರು ರೂಪಾಯಿ ಆದಾಯ ಬರುತ್ತದೆ. ದೇವರನ್ನು ನೋಡುವುದಕ್ಕೆ ಬಂದರೆ ಅವರಿಗೆ ತಲೆಗಂದಾಯ ಹಾಕಿ ವಸೂಲು ಮಾಡುತ್ತಾರೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಮತ್ತು ಈ ರೀತಿ ವಸೂಲು ಮಾಡುವುದಕ್ಕೆ ಕಷ್ಟ ಇದೆ. ಯಾರು ಟ್ಯಾಕ್ಸ್ ಕೊಟ್ಟರು ಯಾರು ಕೊಟ್ಟಿಲ್ಲ ಎಂದು ನೋಡಿಕೊಳ್ಳುವುದು ಕಷ್ಟ. ಸಂತೆಯಿಂದ ವಸೂಲು ಆದ ಸುಂಕದಲ್ಲಿ ಶೇಕಡ 25 ಭಾಗವನ್ನು ಪಂಚಾಯಿತಿಗಳಿಗೆ ಕೊಡಿ ಎಂದು ಹೇಳಿರುತ್ತೀರಿ. ಇದು ಅನ್ಯಾಯ. ಎಲ್ಲಾ ಕೆಲಸವನ್ನು ಪಂಚಾಯಿತಿಯವರೇ ಮಾಡಬೇಕು. ಸ್ಕ್ಯಾವೆಂಜರ್ಸ್‌ನ್ನು ಪಂಚಾಯಿತಿಯವರೇ ಕಳುಹಿಸಿಕೊಡಬೇಕು. ತಾಲ್ಲೂಕು ಬೋರ್ಡಿನವರು ಹರಾಜುಹಾಕಿ ದುಡ್ಡು ತೆಗೆದುಕೊಂಡು ಮೂರು ಕಾಸಿನ ಕೆಲಸವನ್ನೂ ಮಾಡದೆ ಇರುವ ದೃಶ್ಯ ಕಾಣುತ್ತದೆ. ಆದುದರಿಂದ ತಾಲ್ಲೂಕು ಬೋರ್ಡಿನವರಿಗೆ ಸಂತೆಯಿಂದ ಬರುವ ಹಣವನ್ನು ಕೊಡುವುದು ಸರಿಯಲ್ಲ. ಇದೆಲ್ಲ ಪಂಚಾಯಿತಿಗಳಿಗೆ ಹೋಗಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—I shall call upon Mr. Channabasappa to speak. I hope he will keep within his time limit.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಾನು ತಮ್ಮಲ್ಲಿ ಒಂದು ಕ್ಲಾರಿಫಿಕೇಷನ್ ಕೇಳಬೇಕೆಂದು ಎದ್ದು ನಿಂತಿದ್ದೇನೆ. ಶಾಸನ ಮಾಡುವ ಕಾಲದಲ್ಲಿ ಇಷ್ಟು ನಿಮಿಷದಲ್ಲಿ ಮಾತನಾಡಬೇಕೆಂದು ಹೇಳುವುದಕ್ಕೆ ಯಾವ ರೂಲ್ಸ್ ಇದೆ ಎಂದು ತಾವು ತಿಳಿಸಬೇಕು.

Mr. SPEAKER.—Under Rule 296, the Speaker is empowered to prescribe time-limit for speeches on motions.

Sri H. M. CHANNABASAPPA.—In regard to Bills there is no time limit prescribed for a member to speak on Bills because Bills have far reaching consequence on the Country and we should have freedom to express how we feel about it.

Mr. SPEAKER.—The Business Advisory Committee has fixed time for this Bill and the House has approved of it. Rule 296 applies to all motions.

Sri H. M. CHANNABASAPPA.—I wish you give your considered opinion a little later. For the present let us obey your ruling.

Mr. SPEAKER.—I shall consider.

2–00 P.M.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಈ ಅಧಿವೇಶನದಲ್ಲಿ 6 ಸುಗ್ರೀವಾಜ್ಞೆಗಳ ಬದಲಾಗಿ ತಿದ್ದುಪಡಿ ಮಸೂದೆಗಳನ್ನು ತಂದು ಬಹಳ ಕ್ಷಿಪ್ರ ಕಾಲದಲ್ಲಿ ಅವುಗಳನ್ನು ಅಂಗೀಕಾರ ಮಾಡಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಸುಗ್ರೀವಾಜ್ಞೆಯನ್ನು ತಂದಿರತಕ್ಕ ಸರ್ಕಾರವನ್ನು ಖಂಡಿಸಿ, ಅವರ ಈ ಕೆಟ್ಟ ಪ್ರವೃತ್ತಿಯನ್ನು ತೀವ್ರವಾಗಿ ಪ್ರತಿಭಟಿಸಿ ಈ ತಿದ್ದುಪಡಿ ಮಸೂದೆಯನ್ನು ಇಷ್ಟು ಅವಸರದಲ್ಲಿ ತರಬಾರದಾಗಿತ್ತು ಎಂದು ಹೇಳುತ್ತೇನೆ. ಇದರಲ್ಲಿ ಅಂತಹ ಆಕಾಶ ಕಳಚಿಬೀಳುವಂತಹ ವಿಷಯ ಯಾವುದೂ ಇಲ್ಲ. ನಿಧಾನವಾಗಿ ಸಮಗ್ರವಾಗಿ ಆಲೋಚನೆ ಮಾಡಿ ಒಂದು ಸಮಗ್ರ ಮಸೂದೆಯನ್ನು ತರಬಹುದಾಗಿತ್ತು. ಅವಸರ ಅವಸರವಾಗಿ ತಿದ್ದುಪಡಿ ಮಸೂದೆಯನ್ನು ತಂದು ಅವಸರ ಅವಸರವಾಗಿ ಮಸೂದೆಯನ್ನು ಪಾಸ್ ಮಾಡಿಸಿ ಮತ್ತೆ ಇದಕ್ಕೆ ತಿದ್ದುಪಡಿಗಳನ್ನು ಮಾಡುವಂತಹ ಪ್ರಸಂಗವನ್ನು ಉದ್ಭವ ಮಾಡುತ್ತಾ ಇದ್ದಾರೆ ಎಂದು ಹೇಳುತ್ತೇನೆ. ಇಲ್ಲಿ ತಂದಿರತಕ್ಕ ಮಹಾಪ್ರಬಲವಾದ ತಿದ್ದುಪಡಿ ಎಂದರೆ ಸೆಕ್ಷನ್ 3 (ಎ). ಇದು ಅಷ್ಟು ಪ್ರಾಮುಖ್ಯವಾಗಿರಲಿಲ್ಲ. ಜಿಲ್ಲಾ ಪ್ರದೇಶದಲ್ಲಿ ಜಿಲ್ಲಾ ಕಾನ್ಫರೆನ್ಸ್, ಸೆಮಿನಾರು ಅಥವಾ ಎಕ್ಸಿಬಿಷನ್ ನಡೆದರೆ ಪಂಚಾಯ್ತಿಯವರು 25 ರೂಪಾಯಿಗೆ ಮೀರದಂತೆ ಕಾಂಟ್ರಿಬ್ಯೂಷನ್ ಕೊಡಬಹುದು ಎಂಬ ತಿದ್ದುಪಡಿಯನ್ನು ತಂದಿದ್ದೀರಿ. ಇದರಿಂದ ಆಡಳಿತ ಪಕ್ಷದವರು ಸಮಾರಂಭಗಳನ್ನು ನಡೆಸಿ ತಮ್ಮ ಪಕ್ಷದ ಪ್ರಭಾವವನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಈ ರೀತಿ ಒಂದು ಅವಕಾಶವನ್ನು ಮಾಡಿಕೊಂಡಿದ್ದಾರೆ ಎಂದು ಹೇಳದೇ ವಿಧಿ ಇಲ್ಲ. ಹಣವನ್ನು ವಸೂಲು ಮಾಡುವ ಕೆಲಸವನ್ನೂ ಕೂಡ ವಿಲೇಜ್ ಅಕೌಂಟೆಂಟ್ಸ್‌ಗೆ ಕೊಡಬೇಕೆಂದು ತಿದ್ದುಪಡಿ ತಂದಿದ್ದಾರೆ, ಈ ವಿಷಯ ಬೇಕಾದಷ್ಟು ಚರ್ಚೆಯಾಗಿದೆ. ಅವರಿಗೆ ಡ್ಯೂಯಲ್ ರೆಸ್‌ಪಾನ್ಸಿಬಿಲಿಟೀಸ್ ಬರುತ್ತದೆ. ಅವರು ಒಂದು ಕಡೆ ಬಿ ಡಿ ಒ ಕೈಕೆಳಗೆ ಕೆಲಸ ಮಾಡಬೇಕು ಮತ್ತೊಂದು ಕಡೆ ತಹಸೀಲ್ದಾರರ ಕೈಕೆಳಗೆ ಕೆಲಸ ಮಾಡಬೇಕು ಆದ್ದರಿಂದ ಸುಗಮವಾಗಿ ಕೆಲಸ ನಡೆಯುವುದಿಲ್ಲ ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತೇನೆ. ಇದನ್ನು ಸರ್ಕಾರದವರು ಗಮನದಲ್ಲಿ ಇಟ್ಟುಕೊಂಡಿಲ್ಲ ಎಂಬುದನ್ನು ಹೇಳಬಯಸುತ್ತೇನೆ. ಕಂದಾಯದ ಶೇಕಡ ಹತ್ತು ಭಾಗವನ್ನು ಪಂಚಾಯ್ತಿಗಳಿಗೆ, ಶೇಕಡ 20 ಭಾಗವನ್ನು ತಾಲ್ಲೂಕು ಬೋರ್ಡುಗಳಿಗೆ ಕೊಡುತ್ತೇವೆ ಎಂದು ಹೇಳಿದ್ದಾರೆ ಇದು ಎಷ್ಟು ವಿರೋಧಾಭಾಸದಿಂದ ಕೂಡಿದೆ ಎಂಬುದನ್ನು ಶ್ರೀಮಾನ್ ನಾಗಪ್ಪನವರು ಚೆನ್ನಾಗಿ ಹೇಳಿದ್ದಾರೆ. ಮೊದಲು ಖುಷ್ಕಿ, ತರಿ, ಬಾಗಾಯ್ತು ಕಂದಾಯ ಅಂತ ಮಾಡಿದ್ದನ್ನು ನೀರಾವರಿ ಪ್ರದೇಶದಲ್ಲಿ ಈಗ ಖುಷ್ಕಿ ಕಂದಾಯ ಮತ್ತು ವಾಟರ್ ರೇಟ್ ಅಂತ ವಿಂಗಡಿಸಿರುವುದರಿಂದ ಕೆಲವು ಪಂಚಾಯ್ತಿಗಳಿಗೆ ಮೊದಲು ಬರುತ್ತಾ ಇದ್ದುದಕ್ಕಿಂತಲೂ ಕಡಿಮೆ ಆದಾಯ ಬರುತ್ತಿದೆ. ಆದ್ದರಿಂದ ಅಂತಹ ಪಂಚಾಯ್ತಿಗಳಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಟೌನ್ ಮತ್ತು ಪಂಚಾಯ್ತಿ ಏರಿಯಾದಲ್ಲಿ ಉತ್ಸವ, ಜಾತ್ರೆ

(ಶ್ರೀ ಎಸ್. ಎ. ಚನ್ನೇಗೌಡ)

ಉರುಸ್ ನಡೆದರೆ 12 ವರ್ಷಕ್ಕೆ ಮೇಲ್ಪಟ್ಟ ಪ್ರತಿಯೊಬ್ಬ ವಯಸ್ಕನಿಗೂ 50 ಪೈಸೆಗೆ ಮೀರದಂತೆ ತಲೆಗಂದಾಯ ಹಾಕಿದ್ದಾರೆ. ಮೊಗಲರ ಔರಂಗಜೇಬನ ಕಾಲದಲ್ಲಿ "ಜಿಸಿಯಾ" ಕಂದಾಯ ಹಾಕಿದ್ದು ಜ್ಞಾಪಕ ಬರುತ್ತಾ ಇದೆ. ಇಂತಹ ಒಂದು ಕಂದಾಯವನ್ನು ಹಾಕಬೇಕಾದರೆ ಯಾವ ಒಂದು ನಿರ್ದೇಶಿತವಾದ ಕಾರ್ಯ ಇರುತ್ತದೆಯೋ ಅದಕ್ಕೆ ಮಾತ್ರ ಆ ಹಣವನ್ನು ಖರ್ಚು ಮಾಡಬೇಕೆಂದು ರಾಜ್ಯಾಂಗದಲ್ಲಿ ನಿರೂಪಿಸಲ್ಪಟ್ಟಿದೆ. ಸಣ್ಣ ಸಣ್ಣ ಪಂಚಾಯ್ತಿಯವರು ಈ ತರಹ ಅಂಕಿ ಅಂಶಗಳನ್ನು ಇಟ್ಟುಕೊಳ್ಳುವುದಕ್ಕೆ ಕಷ್ಟವಾಗುತ್ತದೆ ಆದ್ದರಿಂದ ಈ ಒಂದು ವಿಧಿಯನ್ನು ಸರ್ಕಾರದವರು ತರಬಾರದಾಗಿತ್ತು ಎಂದು ಹೇಳುತ್ತೇನೆ.

ತಾಲ್ಲೂಕು ಬೋರ್ಡಿನವರು 25 ಪರ್ಸೆಂಟ್‌ನವರೆಗೂ ಲೋಕಲ್ ಸೆಸ್ ಹಾಕಬಹುದು ಅಂತ ಎಂದು ರೆಸಲ್ಯೂಷನ್ ಮಾಡಲಿಕ್ಕೆ ಅಧಿಕಾರವನ್ನು ಕೊಡಲು ಈ ತಿದ್ದುಪಡಿಯಲ್ಲಿ ಸೂಚನೆ ಮಾಡಿದ್ದಾರೆ. ಈಗಾಗಲೇ ರೈತರ ಮೇಲೆ ಬೇಕಾದಷ್ಟು ಸೆಸ್ಸುಗಳನ್ನು ಹಾಕಿದ್ದಾರೆ. ನೀರಿನ ತೆರಿಗೆ ಹೆಚ್ಚು ಮಾಡಿದ್ದಾರೆ. ಆದ್ದರಿಂದ ಇಂತಹ ಒಂದು ಅವಕಾಶವನ್ನು ಅವರಿಗೆ ಮಾಡಿಕೊಡುವುದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಭಾರತದಲ್ಲಿ ರೈತರು ಪ್ರಪಂಚದಲ್ಲೇ ಎಲ್ಲೂ ಇಲ್ಲದಷ್ಟು ಕರಭಾರವನ್ನು ಹೊರುತ್ತಾ ಇದ್ದೇವೆ. ಇನ್ನೂ ಹೆಚ್ಚು ಹೊರೆ ಹೊರಿಸುವುದು ನ್ಯಾಯ ವಲ್ಲ ಎಂದು ಹೇಳುತ್ತೇನೆ. ಮತ್ತು ಸಂತೆ ನಡೆಯುವ ಪ್ರದೇಶದಲ್ಲಿ ಆಯಾಯಾ ಪಂಚಾಯ್ತಿಗಳಿಗೆ ಶೇಕಡ 25 ರಷ್ಟನ್ನು ಮಾತ್ರ ಕೊಡಬೇಕೆಂದು ತಿದ್ದುಪಡಿ ತಂದಿದ್ದಾರೆ. ತಾಲ್ಲೂಕು ಬೋರ್ಡಿಗೆ ಹೆಚ್ಚು ವರಮಾನ ಪಡೆಯುವುದಕ್ಕೆ ಅವಕಾಶ ಮತ್ತು ಪ್ರಭಾವ ಇದೆ. ಪಂಚಾಯ್ತಿಗಳಲ್ಲಿ ಆಗುವುದು ಸಂತೆ ಒಂದೇ. ಸುತ್ತುಮುತ್ತಲ ಗ್ರಾಮದವರು ಭಾಗವಹಿಸಿ ಸಂತೆ ನಡೆಸುತ್ತಾರೆ. ಅಲ್ಲಿ ನಡೆಯುತಕ್ಕ ವ್ಯಾಪಾರದ ಮೇಲೆ ಹಾಕತಕ್ಕ ಸುಂಕದಲ್ಲಿ ತಾಲ್ಲೂಕು ಬೋರ್ಡಿಗೆ 75 ಪರ್ಸೆಂಟ್ ಕೊಟ್ಟು ಪಂಚಾಯ್ತಿಗೆ 25 ಪರ್ಸೆಂಟ್ ಕೊಡುವುದು ನ್ಯಾಯವಲ್ಲ. ಪಂಚಾಯ್ತಿಗೇ ಪೂರ್ಣ ಹಣವನ್ನು ಕೊಟ್ಟು ಅಲ್ಲಿ ಬೇಕಾಗುವಂತಹ ಸಾರ್ವಜನಿಕ ಕೆಲಸ ಕಾರ್ಯಗಳನ್ನು ಮಾಡಲು ಸೂಕ್ತವಾದ ಅನುಕೂಲಗಳನ್ನು ಮಾಡಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†**ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).**—ಮಾನ್ಯ ಅಧ್ಯಕ್ಷರೇ, ಮಾನ್ಯ ಪಂಚಾಯ್ತಿ ರಾಜ್ಯದ ಸಚಿವರು ಮಂಡಿಸಿರತಕ್ಕ ಈ ಮಸೂದೆಯನ್ನು ಅನಿವಾರ್ಯವಾಗಿ ವಿರೋಧಿಸಬೇಕಾಗಿದೆ. ಆಶ್ಚರ್ಯಪಡಬಹುದು. ಪಂಚಾಯಿತಿಗಳಿಗೆ ಹಣ ಕೊಡುವ ಮಸೂದೆಯನ್ನು ಏಕೆ ವಿರೋಧಿಸುತ್ತಾನೆ ಎಂದು, ವಿರೋಧಿಸುವುದಕ್ಕಾಗಿಯೇ ವಿರೋಧಿಸುತ್ತಾ ಇರಬಹುದು ಎನ್ನುವ ಅಭಿಪ್ರಾಯವಾದರೂ ಮೂಡಬಹುದು. ಇದರಲ್ಲಿ ಒಂದು ವಿಷಯ ಭೂಕಂದಾಯವನ್ನು ರದ್ದು ಮಾಡುವುದಕ್ಕೆ ಆಗದೆ ಅದನ್ನು ಪುನರಾಲೋಚನೆ ಮಾಡುತ್ತೇವೆ ಎಂದು ಹೇಳಿ ಒಂದು ಭಾಷಣದಲ್ಲಿ ತಾವೇ ಈ ಸದನಕ್ಕೆ ಕೊಟ್ಟ ಆಶ್ವಾಸನೆಯನ್ನು ಈಡೇರಿಸಲಿಲ್ಲ. ಅದಕ್ಕೆ ಏನು ಮಾಡಿದಿರಿ ಎಂದರೆ ಭೂ ಕಂದಾಯ ಇರಬಾರದು ಅಂತ ಅನ್ನುವ ಜನರನ್ನು ಅವರವರ ಪಂಚಾಯ್ತಿಯವರೇ ವಿರೋಧಿಸಲಿ ಅನ್ನುವ ಒಂದು ಉಪಾಯ ಉದ್ದೇಶ ಇದರಲ್ಲಿದೆ. ಆದ್ಯಾದೇಶದ ಮೂಲಕ ಈ ಮಸೂದೆಯನ್ನು ತಂದಿರುವುದು ಉಚಿತವಲ್ಲ. ಹಿಂದೆ ಕೊಂಡಜ್ಜಿ ಬಸಪ್ಪನವರ ಕಮಿಟಿ ಆಗಿ, ಪಂಚಾಯ್ತಿ, ತಾಲ್ಲೂಕು ಬೋರ್ಡು, ಜಿಲ್ಲಾ ಪರಿಷತ್ತು ಎಲ್ಲಾ ಆಗಬೇಕೆಂದು ಹೇಳಿ ಅಷ್ಟೆಲ್ಲಾ ಆದಮೇಲೂ ಇದರಲ್ಲಿ ಏನು ರಾಜಕೀಯ ಇದೆಯೋ ಗೊತ್ತಿಲ್ಲ, ಬಹಳ ದಿವಸದಿಂದಲೂ ಇದು ಹಾಗೆಯೇ ಉಳಿದಿದೆ. ಚರ್ಚೆಗೆ ಕೂಡ ಅದು ಬರುತ್ತಿಲ್ಲ, ಈ ಸ್ಥಿತಿಯಲ್ಲಿ ಇದೆ. ತಾವು ಹೇಳಿರುವ ಉದ್ದೇಶ ಸುಮಾರು 7-8 ಇವೆ. ಇದರಲ್ಲಿ ವಿಳಂಬ ನೀತಿ ಏನು ಮಾಡಿದ್ದೀರಿ ? 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದರೂ ಆಗಿದ್ದಂತಹ ಪಂಚಾಯ್ತಿ, ತಾಲ್ಲೂಕು ಬೋರ್ಡುಗಳು ರದ್ದಾದವು, ಶ್ರೀಮಾನ್ ಹುಚ್ಚೇಗೌಡರು, ಇಲ್ಲ, ಧರ್ಮಪ್ಪನವರು ಇಲ್ಲ ಅವುಗಳ ಸ್ಥಿತಿ ಏನಾಗಿತ್ತು ಅಂತ ಹೇಳುವುದಕ್ಕೆ. ನಂತರ ಚುನಾವಣೆಗಳನ್ನು ಮಾಡಿದರು. ಅದಾದಮೇಲೆ ಚುನಾವಣೆ ಮಾಡುವುದಕ್ಕೆ ತಮಗೆ 8 ವರ್ಷ ಬೇಕಾಯಿತು. ಪಾಕಿಸ್ತಾನ ಆಕ್ರಮಣ ಮಾಡಿವೆ, ಚೀನಾ ಆಕ್ರಮಣ ಮಾಡಿದೆ, ಬರಗಾಲ ಬಂದಿದೆ ಅಂತ ಹೇಳಿ ಕಾರಣಗಳನ್ನು ಕೊಟ್ಟು ಪಂಚಾಯ್ತಿಗಳಿಗೆ ಚುನಾವಣೆಗಳನ್ನು ಮಾಡಲೇ ಇಲ್ಲ. ಇದರ ಜೊತೆಗೆ ಪಂಚಾಯ್ತಿಗಳು, ಟೌನ್ ಪಂಚಾಯ್ತಿಗಳು, ದೊಡ್ಡ ದೊಡ್ಡ ಪಂಚಾಯ್ತಿಗಳು ಎಂಬ ಭೇದವಿಲ್ಲದೆ ಅಡ್ಮಿನ್‌ಸ್ಟ್ರೇಟರ್ಸನ್ನು ಹಾಕುತ್ತೇನೆ ಅಂತ ಅನ್ನುವುದು ಇದು ಬಹಳ ದೂರ ಹೋಗುತ್ತದೆ, ಪ್ರಜಾಪ್ರಭುತ್ವದ ನೀತಿಗೇ ವಿರೋಧವಾಗುತ್ತದೆ. ಒಂದು ವರ್ಷ ಸಾಲದು ಅಂತ 4 ವರ್ಷ ಮಾಡಿದ್ದೀರಿ.

ಶ್ರೀ ಎ. ಆರ್. ಗೌಡ (ಸಹಕಾರ ಶಾಖೆಯ ಉಪಮಂತ್ರಿಗಳು).—ಅಡ್ಮಿನಿಸ್ಟ್ರೇಟರಿಗೆ ನಾಲ್ಕು ವರ್ಷ ಅವಧಿಗೆ ನೇಮಕ ಮಾಡಬೇಕೆಂದಲ್ಲ. ಎಲ್ಲಿ ಹೊಸ ತಾಲ್ಲೂಕು ರಚನೆಯಾಗುತ್ತದೆ ಅಲ್ಲಿ ನಾಮಕರಣ ಮಾಡಿದಂಥವರಿಗೆ ನಾಲ್ಕು ವರ್ಷ ಅವಧಿ ಇರಬೇಕು ಎಂದು ಹೇಳಲಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಅಡ್ಮಿನಿಸ್ಟ್ರೇಟರಿಗಲ್ಲ, ಹೊಸದಾಗಿ ಮಾಡಿರುವ ತಾಲ್ಲೂಕಿನಲ್ಲಿ ತಾಲ್ಲೂಕು ಬೋರ್ಡುಗಳಿಗೆ ಒಂದು ವರ್ಷ ಅವಧಿ ಸಾಲದು, ನಾಲ್ಕು ವರ್ಷ ಇರಬೇಕು ಎಂದು ಮಾಡಿದ್ದೇವೆಂದು ಹೇಳಿದರು. ಒಂದು ವರ್ಷದಲ್ಲಿ ಚುನಾವಣೆಗಳನ್ನು ಮಾಡುವುದಕ್ಕೆ ಏನು ಕಷ್ಟವಿದೆ ?

ಭೂಕಂದಾಯದಲ್ಲಿ ಸೇಕಡ 20ರಷ್ಟು ಕೊಡುತ್ತಿರುವ ಸಹಾಯ ಧನವನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ 50 ಪರ್ಸೆಂಟಿಗೆ ಏರಿಸುತ್ತಾರೆ, ಮತ್ತು ವಿವೇಚನೆಯ ಸಹಾಯ ಧನವನ್ನು 5 ಪರ್ಸೆಂಟಿನಿಂದ 10 ಪರ್ಸೆಂಟಿಗೆ ಏರಿಸುತ್ತಾರೆ. ಅಲ್ಲದೆ ಸ್ಥಳೀಯ ಅಭಿವೃದ್ಧಿ ಮಂಡಲಿಯವರು ಆಸೆ ಪಟ್ಟರೆ 25 ಪೈಸೆ ಸ್ಥಳೀಯ ಸೆಸ್ ಹಾಕಬಹುದು ಎಂದು ಹೇಳಿದ್ದಾರೆ.

12 ವರ್ಷಕ್ಕೆ ಮೇಲ್ಪಟ್ಟಿರುವವರಿಗೆಲ್ಲ ಸಂತೆ, ಜಾತ್ರೆ, ದನಗಳ ಜಾತ್ರೆ ಇಂಥ ಕಡೆ ಹೋದರೆ ಅವರ ತಲೆ ಮೇಲೆ 50 ಪೈಸೆ ಸುಂಕ ಹಾಕುತ್ತಾರೆ. ಇದು ಒಂದು ಹೊಸ ನಮೂನೆಯ ಸುಂಕ. ಅಂತೂ ಇವರು ಜೇನು ಗೂಡಿಗೆ ಕೈ ಹಾಕಿದ್ದಾರೆ. ಜನರು ಇವರ ಬಗ್ಗೆ ಸಂತೋಷಪಡುವುದಿಲ್ಲ, ಇವರಿಗೆ ಬೆಂಬಲ ಕೊಡುವುದಕ್ಕಾಗುವುದಿಲ್ಲ.

ಇನ್ನು ವಿಲೇಜ್ ಅಕೌಂಟೆಂಟ್. ಇದು ಬಹಳ ವಿಚಿತ್ರವಾದ ವಿಷಯ. ಹಳೇ ಶ್ಯಾನುಭೋಗರನ್ನು ಬಿಟ್ಟರು, ಆನುವಂಶಿಕ ಪದ್ಧತಿ ರದ್ದಾಗಿದೆ. ಶ್ಯಾನುಭೋಗರು ಯಾರ ಪಹಣಿಯನ್ನು ಯಾರಿಗೋ ಬರೆದಿರುತ್ತಾರೆ. ಅನೇಕ ಗ್ರಾಮಗಳಿಗೆ ಒಬ್ಬ ಅಕೌಂಟೆಂಟರನ್ನು ನೇಮಕ ಮಾಡುತ್ತೀರಿ. ಅನೇಕ ಕಡೆ ಕಾಗದ ಪತ್ರಗಳನ್ನು ಬರೆಯದೆ ಇರುವಂಥ ಪರಿಸ್ಥಿತಿ ಇರುತ್ತದೆ ಶ್ರೀಮಾನ್ ಕೌಜಲಗಿ ಅವರಿಗೆ ಸಂಬಂಧಪಟ್ಟ ಪತ್ರಗಳನ್ನೇ ಬರೆದಿರುವುದಿಲ್ಲ. ಇಂಥ ದುಃಸ್ಥಿತಿ ಇದೆ. ಇದನೆಲ್ಲ ಹೇಗೆ ಪರಿಹರಿಸುತ್ತಾರೆ ? ತೀರ್ಥಹಳ್ಳಿಯಲ್ಲಿ ಪಂಚಾಯಿತಿ ಅಧ್ಯಕ್ಷರುಗಳು ಸೇರಿದ ಸಭೆಯಲ್ಲಿ ಆದಂಥ ಒಂದು ತೀರ್ಮಾನವನ್ನು ತಮಗೆ ಕೊಡುತ್ತೇನೆ. ಅವರು ಏನೇನೋ ಕೇಳಿಕೊಂಡಿದ್ದಾರೆ. ಹೊಸನಗರ ತಾಲ್ಲೂಕಿನಲ್ಲಿಯೂ ಆಗಿದೆ. ನಾನು ಅಧ್ಯಕ್ಷತೆ ವಹಿಸಿದ್ದೆ. ಅಧ್ಯಕ್ಷರ ಮೂಲಕ ಈ ಕಾಗದಗಳನ್ನು ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಅವರು ಅದನ್ನು ಪರಿಶೀಲನೆ ಮಾಡಬೇಕು.

ಮೈಸೂರು ರಾಜ್ಯದಲ್ಲಿ 25 ಸಹಸ್ರ ಹಳ್ಳಿಗಳಿವೆ. ಪಂಚಾಯಿತಿಗಳು, ಸಣ್ಣ ಪಂಚಾಯಿತಿಗಳು ಎಷ್ಟಿವೆ ಎಂದು ನಾನು ಲೆಕ್ಕ ಮಾಡಿಲ್ಲ. ಅವುಗಳಿಗೆ ಯಾವ ರೀತಿಯಿಂದ ಅಡಳಿತ ವ್ಯವಸ್ಥೆಯನ್ನು ನಿರ್ವಹಿಸಿಕೊಡಬೇಕು ಎಂದು ಹೇಳಿಲ್ಲ ಇನ್ನೊಂದು ಕಷ್ಟಕರವಾದ ವಿಷಯವೆಂದರೆ, ಸರ್ಕಾರದವರು ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯ ಜವಾನರಾಗಿ ಅವರ ದುಡ್ಡನ್ನು ವಸೂಲು ಮಾಡಿಕೊಡುತ್ತೇವೆಂದು ಈ ಕಾನೂನಿನಲ್ಲಿ ಸೇರಿಸಿದ್ದಾರೆ. ಪಂಚಾಯಿತಿಗಳಲ್ಲಿ ಕೊಡುವುದಕ್ಕೆ ದುಡ್ಡಿಲ್ಲದೆ ಹೋದರೆ ಕೊಟ್ಟಿರುವುದಿಲ್ಲ. ಆಗ ವಿದ್ಯುಚ್ಛಕ್ತಿ ಮಂಡಲಿಯವರು ಕರೆಂಟ್ ನಿಲ್ಲಿಸುತ್ತಾರೆ. ಮೊದಲೇ ಕತ್ತಲಲ್ಲಿ ಇದ್ದವರು, ಹಳ್ಳಿಗಳಲ್ಲಿ ಮಿಣುಕು ದೀಪ ಹಾಕಿರುತ್ತಾರೆ, ಸರಿಯಾಗಿ ಕಾಣಿಸುವುದೇ ಇಲ್ಲ. ಸರ್ಕಾರದವರು ಪಂಚಾಯಿತಿಯಿಂದ ಎಲೆಕ್ಟ್ರಿಸಿಟಿ ಬೋರ್ಡಿಗೆ ಕೊಡಬೇಕಾದ ಹಣವನ್ನು ವಸೂಲಿ ಮಾಡುವುದು, ಆಡಳಿತಗಾರರನ್ನು ನೇಮಿಸುವುದು ಎಲ್ಲವನ್ನೂ ಹೇಳಿದ್ದಾರೆ.

ಸ್ಥಳೀಯ ಸಂಸ್ಥೆಗಳಿಗೆ ನೂರಕ್ಕೆ ನೂರರಷ್ಟು ಕಂದಾಯವನ್ನು ಕೊಡುತ್ತೇವೆ, ಅದನ್ನು ಸ್ವಾಗತಿಸಿ ಎಂದು ಹೇಳಿದ್ದಾರೆ. ಮೇಲೆ ನೋಡುವುದಕ್ಕೆ ಸ್ವಾಗತಾರ್ಹವಾದ ವಿಷಯವೇ. ಭೂಕಂದಾಯವನ್ನು ತೆಗೆದುಹಾಕುತ್ತೇವೆಂದು ಹೇಳಿದ್ದರು ಅಥವಾ ಒಪ್ಪಿಕೊಂಡಿದ್ದರು. ಅದನ್ನು ಮಾಡುತ್ತಿದ್ದಾರೆ.

ಕೊನೆಯದಾಗಿ ಒಂದು ಸಲಹೆ ಕೊಡುತ್ತೇನೆ. ರಾಜ್ಯದಲ್ಲಿ 25 ಸಾವಿರ ಹಳ್ಳಿಗಳಿವೆ. 140 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಸುಮಾರು ಒಂದು ಹಳ್ಳಿಗೆ 556 ರೂಪಾಯಿಗಳೋ ಏನೋ ಬರುತ್ತದೆ, ಗ್ರೂಪ್ ಪಂಚಾಯಿತಿ ಎಂದರೆ ಮೂರು ನಾಲ್ಕು ಹಳ್ಳಿಗಳಿರಬಹುದು. ಎಂದರೆ ಒಂದೊಂದು ಪಂಚಾಯಿತಿಗೆ ಸುಮಾರು ಒಂದು ಸಾವಿರ ರೂಪಾಯಿ ಬರಬಹುದು. ಅಕೌಂಟೆಂಟ್ ಸಂಬಳ ಕೊಡುವುದಕ್ಕೇ ಅಷ್ಟಾಗುತ್ತದೆ. ಅಕೌಂಟೆಂಟ್ ಸಂಬಳ ನಾವೇ ಕೊಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ ಹಾಗೆ, ಅಕೌಂಟೆಂಟ್ ಸಂಬಳ ಸರ್ಕಾರವೇ ಕೊಡಲಿ, ಕಾಗದ, ಪುಸ್ತಕ, ಪೆನ್ಸಿಲ್ ಸರ್ಕಾರದವರೇ ಒದಗಿಸಲಿ, ಗ್ರಾಮ ಪಂಚಾಯಿತಿ ಕಟ್ಟಡ ಅವರೇ ಕಟ್ಟಿಸಿ

(ಶ್ರೀ ಎಸ್. ಗೋಪಾಲಗೌಡ)

ಕೊಡಲಿ, ದೀಪದ ವ್ಯವಸ್ಥೆಯನ್ನೂ ಸರ್ಕಾರವೇ ವಹಿಸಿಕೊಳ್ಳಲಿ. ಎಕ್ಸೈಸ್‌ನಿಂದ 20 ಕೋಟಿ ರೂಪಾಯಿ ಆದಾಯ ಬಂದರೆ ಅದರಲ್ಲಿ ಎರಡು ಕೋಟಿ ರೂಪಾಯಿ, ಮಾರಾಟ ತೆರಿಗೆಯಿಂದ ಬರುವ 30 ಕೋಟಿ ರೂಪಾಯಿಗಳಲ್ಲಿ ಮೂರು ಕೋಟಿ ರೂಪಾಯಿ ತೆಗೆದಿಟ್ಟರೆ ಐದು ಕೋಟಿ ರೂಪಾಯಿ ಆಯಿತು. ಬೇರೆ ಎಲ್ಲ ಬಾಬುಗಳಲ್ಲಿಯೂ ಒಂದೊಂದು ಕೋಟಿ ರೂಪಾಯಿ ತೆಗೆದಿಟ್ಟು, ಅದನ್ನು ಗ್ರಾಮ ಪಂಚಾಯತಿಗಳಿಗೆ ಎಂದು ಮೀಸಲಾಗಿಡಲಿ, ಇಯರ್ ಮಾರ್ಕ್ ಮಾಡಲಿ. ಅದನ್ನು ಯಾವ ಯಾವ ಬಾಬಿಗೆ ಕೊಡಬೇಕೆಂದು ಒಂದು ತೀರ್ಮಾನವನ್ನು ಈ ಮಂತ್ರಿ ಮಂಡಲದವರು ತೆಗೆದುಕೊಳ್ಳಬೇಕು. ಒಂದೊಂದು ಪಂಚಾಯಿತಿಗೆ 10 ಸಾವಿರ ರೂಪಾಯಿಗಳಾದರೂ ಇಲ್ಲದೆ ಇದ್ದರೆ ಅವರು ಏನೂ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಐ.ವಿ.ಸಿ. ರಸ್ತೆಗಳಿವೆ. ಅವುಗಳಿಗೆ ಅಮ್ಮ ಅಪ್ಪ ಯಾರೂ ಇಲ್ಲ, ಆ ರಸ್ತೆಗಳನ್ನು ಕೇಳುವವರು ಯಾರೂ ಇಲ್ಲ. ಅಲ್ಲಿ ನಡೆಯುವುದೇ ಕಷ್ಟವಾಗಿದೆ. ಅನೇಕ ಕೆಲಸಗಳು ಬಾಕಿ ಇವೆ.

ಮಹಾತ್ಮ ಗಾಂಧಿಯವರ ಜನ್ಮ ಶತಾಬ್ಧಿ ಎಂದು ಬಹಳ ಪ್ರಚಾರ ನಡೆದಿದೆ. ಎಷ್ಟು ಬೇಕಾದರೂ ಬಾವಿಗಳನ್ನು ತೋಡಿ, ಎಷ್ಟು ಬೇಕಾದರೂ ಮನೆ ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ, ಅಸ್ಪೃಶ್ಯತೆಯ ಕಳಂಕ ತಪ್ಪಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ ಎನ್ನುವ ಪ್ರಚಾರ ನಡೆದಿದೆ. ಬಾವಿ ತೋಡುವುದಕ್ಕೆ ಬಂದಿದೆ.

ಯಾವ ಹಳ್ಳಿಯಲ್ಲಿಯೂ ಕೂಡ ಕುಡಿಯುವ ನೀರಿನ ಭಾವಿ ಇಲ್ಲದೇ ಇರಬಾರದು ಎನ್ನುವ ಅಭಿವಚನ ಕೊಟ್ಟಿದ್ದಾರೆ. ಶಿವಮೊಗ್ಗ ಜಿಲ್ಲೆಯ ಒಂದು ವಿಚಾರ ಹೇಳುತ್ತೇನೆ. ಬೆಂಗಳೂರು ಡಿವಿಜನ್ನಿಗೆ ಏಳು ಲಕ್ಷ ಕೊಟ್ಟಿದ್ದೀರಿ. ಅವರು ಕೇಳಿದ್ದು ಹದಿಮೂರು ಲಕ್ಷ. ಶಿವಮೊಗ್ಗ ಡಿವಿಜನ್ನಿಗೆ ನಾಲ್ಕು ಲಕ್ಷ ಕೊಟ್ಟಿದ್ದೀರಿ. ಅವರು ಏಳು ಲಕ್ಷ ಕೇಳಿದ್ದರು. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಬಾವಿ ಮಾಡಿಸಿರುವ ಬಿಲ್ಲು ಕೊಡುವುದಕ್ಕೆ ತಾಲ್ಲೂಕ್ ಬೋರ್ಡಿನಲ್ಲಿ ದುಡ್ಡು ಇಲ್ಲ. ಹಿಂದಿನ ಬಾಕಿ ಕೊಡದೆ ಹೊಸದಾಗಿ ಬಾವಿ ಮಾಡುವ ಹಾಗೆ ಇಲ್ಲ. ಕೆಲಸ ಮಾಡಿದ ಕಂಟ್ರಾಕ್ಟರರಿಗೆ ಕೊಡುವುದಕ್ಕೆ ಇವರ ಹತ್ತಿರ ದುಡ್ಡು ಇಲ್ಲ. ಶಾನುಭೋಗರಿಗೆ ಪೋಟಗಿ ಪಾವತಿ ಇನ್ನೂ ಆಗಿಲ್ಲ. ಪಟೇಲರ ಸ್ಥಿತಿ ಏನಾಗಿದೆ ನನಗೆ ಗೊತ್ತಿಲ್ಲ. ಕೊಟ್ಟಿರತಕ್ಕಂಥ ವಚನ ಸಾಧಿಸುವಷ್ಟು ಮಟ್ಟಿಗೆ ಸುಧಾರಣೆಗಳನ್ನು ಮಾಡಿ ವಚನ ಪರಿಪಾಲನೆ ಮಾಡಲಿ. ನುಡಿದಂತೆ ನಡೆದಿಲ್ಲ. ಎಂದು ಹೇಳುತ್ತೇನೆ. ಅಧ್ಯಾದೇಶ ಹೊರಡಿಸಿ ಇಂಥ ಮಸೂದೆ ತಂದದ್ದಕ್ಕೆ ವಿಷಾದಪಟ್ಟು ಈ ಮಸೂದೆಯನ್ನು ವಿರೋಧಿಸುತ್ತೇನೆ.

† ಶ್ರೀ ಎಚ್. ಎಂ. ಚನ್ನಬಸಪ್ಪ (ಪೆರಿಯಾಪಟ್ಟಣ).—ಸ್ವಾಮಿ, ಶ್ರೀಮಾನ್ ಸಿದ್ಧವೀರಪ್ಪನವರು ಶ್ರೀಮಾನ್ ಗೋಪಾಲಗೌಡರು ಮಾತನಾಡಿ ಈ ತಿದ್ದುಪಡಿ ಶಾಸನದ ಮಹತ್ತರವಾದ ಲೋಪದೋಷಗಳನ್ನು ತಿಳಿಸಿದ್ದಾರೆ. ಸರಕಾರ ತಿಳಿಸಿದ ಉದ್ದೇಶ ನೋಡಿದರೆ ದೇಶದಲ್ಲಿ ಇರತಕ್ಕಂಥ ಬಡ ಹಳ್ಳಿಗರ ಕಣ್ಣಿಗೆ ಮಣ್ಣು ಎರಚುವ ಮೋಸ ಮಾಡತಕ್ಕಂಥ ಶಾಸನವಲ್ಲದೆ ಇದು ಬೇರೆಯಲ್ಲ. ನೂರಕ್ಕೆ ನೂರರಷ್ಟು ಕೊಡುತ್ತೇವೆ ಎಂದು ಹೇಳಿ ಮೋಸ ಮಾಡತಕ್ಕಂಥಾದ್ದಾಗಿದೆ. ಎಷ್ಟು ಕೊಡಬೇಕಾದ ಅವಶ್ಯಕತೆ ಇದೆ ಎನ್ನುವುದು ಗೊತ್ತಿದೆ ಮತ್ತು ಅದರ ಜವಾಬ್ದಾರಿ ನಿಮ್ಮ ತಲೆಯ ಮೇಲೆ ಇದೆ. ಶಾಸನ ಪ್ರಕಾರ ರಸ್ತೆ ಬಾವಿ ಕೆಲಸ ಮಾಡುವುದು ಯೋಗಕ್ಷೇಮ ನೋಡಿಕೊಳ್ಳುವುದು ಪಂಚಾಯಿತಿ ತಾಲ್ಲೂಕು ಬೋರ್ಡಿಗೆ ವಹಿಸಿಬಿಟ್ಟು ಹಣ ಎಷ್ಟು ಇದೆ ಅಷ್ಟಕ್ಕೆ ಮಾಡಿಕೊಳ್ಳಿ ಎಂದು ಹೇಳಿ ಹಣದ ಕೊರತೆ ಕ್ರಿಯೇಟ್ ಮಾಡಿದ್ದೀರಿ. ಅನಾವಶ್ಯಕವಾದ ಇತರ ಬಾಬುಗಳಿಗೆ ಲೀಲಾಜಾಲವಾಗಿ ಹಣ ಖರ್ಚು ಮಾಡಿ ಹಳ್ಳಿಗಳ ಪ್ರಗತಿಗೆ ಧಕ್ಕೆ ಬರತಕ್ಕಂಥ ಕ್ರಮ ಇದಾಗಿದೆ. ಭೂಕಂದಾಯ ವಸೂಲ್ಮಾಡುವುದು ಅನೂಚಾನವಾಗಿ ಬಂದಿರತಕ್ಕಂಥದ್ದು ಎಂದು ಹೇಳುವುದು ನ್ಯಾಯವಲ್ಲ. ಅದು ನೀತಿಗೆ ವಿರೋಧವಾಗಿದೆ. ಭೂ ಕಂದಾಯ ರದ್ದು ಮಾಡಬೇಕು ಎಂದು ಹೇಳುತ್ತೇನೆ. ಯಾಕಂದರೆ ಭೂ ಕಂದಾಯ ರದ್ದು ಮಾಡುತ್ತೇವೆ ಎಂದು ಹೇಳಿದ ಮಾತು ಆಡಿದ ಮಾತು, ನೀವು ಅನುಷ್ಠಾನಕ್ಕೆ ತಂದಿಲ್ಲ. ಇದನ್ನು ತೋರಿಸಿಕೊಟ್ಟಂಥ ಕೃತಿ ನಿಮ್ಮದು. ಭೂ ಕಂದಾಯ ಇರಬೇಕು ಎಂದು ಯಾರು ಹೇಳಿದ್ದಾರೆ ? ಹಳ್ಳಿಗಾಡಿನ ಜನರ ಮೇಲೆ ನಿಮ್ಮ ಅಧಿಕಾರ ಭದ್ರಪಡಿಸುವುದಕೋಸ್ಕರ ಈ ಶಾಸನ ತಂದಿದ್ದೀರಿ. ಭೂಕಂದಾಯ ರದ್ದು ಮಾಡಿಬಿಟ್ಟರೆ ಹಣವಿಲ್ಲ ಏನು ? ಇದೆಂಥ ಮೋಸ ? ನಿಮ್ಮಲ್ಲಿ ಸತ್ಯ ಧರ್ಮ ಇದ್ದರೆ ಆತ್ಮದ ಮೇಲೆ ಕೈ ಇಟ್ಟು ಹೇಳಿ ನಿಮಗೆ ಆತ್ಮವೇ ಇಲ್ಲ. ಹುಡುಕಿಯಾದರೂ ನೋಡಿ. ನಿಮಗೆ ಆತ್ಮ ಇದ್ದರೆ ಹೇಳುತ್ತೇನೆ. ಭೂಕಂದಾಯ ರದ್ದು ಮಾಡಬೇಕು ಎಂದು ದೇಶದ ಮುಂದೆ ಕಳಕಳಿಯಿಂದ ವಾದಿಸಿದ್ದೇವೆ. ಈಗ ಈ ರೀತಿ ಮಾಡುವುದು ಸರಿಯಲ್ಲ, ಇದು ನ್ಯಾಯವಲ್ಲ, ನೀತಿಯಲ್ಲ. ದಯವಿಟ್ಟು ಭೂಕಂದಾಯ ರದ್ದು ಮಾಡಿ. ಇದರ ಸಂಪೂರ್ಣವಾದ ಜವಾಬ್ದಾರಿ ಸರಕಾರದ ಮೇಲೆ ಇದೆ. ಎಷ್ಟು ಹಣ

ಬೇಕು ಎನ್ನುವುದನ್ನು ಲೆಕ್ಕಾ ಹಾಕಿ ಎಷ್ಟು ಹಣ ಅದಾಯ ನಾನಾ ಭಾಗಗಳಿಂದ ಬರುತ್ತದೆ ಅದರಲ್ಲಿ ತಾಲ್ಲೂಕ್ ಬೋರ್ಡ್ ಪಂಚಾಯಿತಿಗಳಿಗೆ ಕರ್ತವ್ಯ ನಿರ್ವಹಣೆಗೆ ಅವಶ್ಯಕತೆ ಇರುವಷ್ಟು ಹಣವನ್ನು ಮುಡುಪಾಗಿ ಇಡಬೇಕು. ಕಂದಾಯದ ಹಣ ಕೊಡುತ್ತೇವೆ ಎಂದು ಹೇಳಿ ಮೋಸ ಮಾಡಲಾಗಿದೆ.

ಎರಡನೇಯದು ಗ್ರಾಂಟ್ಸ್ ಡಿಸ್ಕ್ರೀಷನ್. ಡಿಸ್ಕ್ರೀಷನ್ ನಿಮ್ಮ ಕೈಯಲ್ಲಿ ಇರಬೇಕು. ಏತಕ್ಕೆ ಇರಬೇಕು ? ನಿಮ್ಮ ಕೈವಾಡ ಇರತಕ್ಕಂಥಾದ್ದು ಎಷ್ಟೂ ಸರಿಯಲ್ಲ. ಪಂಚಾಯತಿ ತಾಲ್ಲೂಕ ಬೋರ್ಡ್ ಪರಿಸ್ಥಿತಿ ಇಂದು ಏನು ಇದೆ ವಿಚಾರ ಮಾಡಲಿಕ್ಕೆ ಹೋಗಲಿಲ್ಲ. ತಲೆಗಂದಾಯ ಹಾಕಬೇಕು ಎನ್ನುವ ತೀರ್ಮಾನಕ್ಕೆ ಬಂದಿದ್ದೀರಿ. ಇದರಂಥ ವಿರೋಧಿ ಶಾಸನ ಬೇರೆ ಯಾವುದೂ ಇಲ್ಲ. ದೇವರ ಪೂಜೆಗೆ ಹೋದರೆ ತಲೆ ಕಂದಾಯ ಹಾಕುವಂಥ ಪ್ರಚೋದನೆ ಮಾಡತಕ್ಕಂಥಾದ್ದು ಎಷ್ಟರ ಮಟ್ಟಿಗೆ ನ್ಯಾಯಸಮ್ಮತವಾದುದು ? ನಿಮಗೆ ಧೈರ್ಯ ಇದ್ದರೆ ನೈತಿಕ ಶಕ್ತಿ ಇದ್ದರೆ ನೀವೇ ಕಂದಾಯ ಹಾಕಿ. ಪ್ರತಿಯೊಂದು ತಲೆಗೆ 10 ರೂಪಾಯಿ ಕಂದಾಯ ಹಾಕಿ ಧೈರ್ಯವಾಗಿ ಇಲೆಕ್ಷನ್ನಿಗೆ ಬನ್ನಿ. ಪಂಚಾಯಿತಿ ತಾಲ್ಲೂಕ ಬೋರ್ಡು, ಸಣ್ಣ ಜಾತ್ರೆಯಲ್ಲಿ ತಲೆಗೆ 50 ಪೈಸೆ ಹಾಕುವುದು ಬೇಡ. ಹಳ್ಳಿಗಾಡಿನ ಜನಕ್ಕೆ ಕಿರುಕಳ ಕೊಡತಕ್ಕಂಥದ್ದು ಸರಿಯಲ್ಲ. ಜಾತ್ರೆಗಳಲ್ಲಿ ದನಗಳಿಗೆ ತಲೆಗಂದಾಯ ಹಾಕುತ್ತಾರೆ. ಜನಗಳಿಗೆ ಅದೇ ರೀತಿ ತಲೆಗಂದಾಯ ಹಾಕುವುದು ಸರಿಯಲ್ಲ. 12 ವರ್ಷ ವಯಸ್ಸು ಆದವರಿಗೆ ಈ ತಲೆಗಂದಾಯ ಹಾಕಬೇಕು ಎಂದಿದೆ. ಇದರಲ್ಲಿ ಇನ್ನೂ ಹೆಚ್ಚಾಗಿದೆ. ಪಶುಗಳಿಗೆ ಬಾಲಕ್ಕೆ ಎಂಟಾಣೆ ಕಂದಾಯ ಹಾಕುತ್ತಾರೆ. ಒಬ್ಬ ಹುಡುಗನ ವಯಸ್ಸು 8 ಇರಬಹುದು 10 ವರ್ಷ ಇರಬಹುದು 15 ವರ್ಷ ಇರಬಹುದು 12 ವರ್ಷ ಆಗಿದೆ ಎಂದು ಹೇಗೆ ಹೇಳುತ್ತೀರಿ ? ಅವನ ಹಲ್ಲು ಹಿಡಿದು ನೋಡಬೇಕೇನು ? ಈ ಕಂದಾಯ ಹಾಕುವುದಕ್ಕೆ ನಿಮಗೆ ಯಾರು ಸಲಹೆ ಮಾಡಿದರು ? ಇದು ನಿಮ್ಮ ಬುದ್ಧಿಯಿಂದ ಬಂದಿದೆಯೇ ? ಅಧಿಕಾರಿಗಳನ್ನು ಕೇಳಿದ್ದರೆ ಅವರು ವಿಚಾರ ಮಾಡಿ ಹೇಳುತ್ತಿದ್ದರು.

ಶ್ರೀ ಬಿ. ಎಲ್. ಗೌಡ.—ಮಹಾರಾಷ್ಟ್ರ, ಕಾಶ್ಮೀರ, ರಾಜಸ್ಥಾನ, ಗುಜರಾತ ಈ ರಾಜಗಳಲ್ಲಿ ಈ ಕಂದಾಯ ಇದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರದು ಹುಚ್ಚು ಸರಕಾರ ಇದೆ ಎಂದು ನಾನೂ ಹುಚ್ಚನಾಗುತ್ತೇನೆ ಎಂದು ಹೇಳುತ್ತಿದ್ದೀರಾ ?

ಇದನ್ನು ಹುಚ್ಚು ಸರಕಾರ ಮಾಡಿದೆ ಎಂದು ಆಗುತ್ತದೆಯೇ ಹೊರತು ಬೇರೆ ಏನೂ ಆಗುವುದಿಲ್ಲ. ಬೇರೆ ರಾಜ್ಯಗಳಲ್ಲಿ ಅವರು ಮಾಡಿದ್ದಾರೆ ಎಂದರೆ ಇಲ್ಲೂ ಇರಬೇಕೇ ? ಪ್ರಗತಿದಾಯಕವಾದ ಮೈಸೂರಿನಲ್ಲಿ ಅಂದರೆ ಮಾದರಿ ಮೈಸೂರಿನಲ್ಲಿ ನಿಮ್ಮ ಕೆಲಸ ಇತರರಿಗೆ ಮಾದರಿಯಾಗಬೇಕೇ ಹೊರತು ಆಂಧ್ರದವರು, ಮಹಾರಾಷ್ಟ್ರದವರು ಮಾಡಿದ್ದಾರೆ ಎಂದರೆ ......

2-30 P. M.

Sri K. PUTTASWAMY (Minister for Law, Labour and Parliamentary Affairs).—Such a provision existed in one of the Municipal Acts even during the time when Mr. Channabasappa was a Minister of this State. I just want to ask him : why he did not take steps to amend it ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಒಂದುವೇಳೆ ನಾನು ತಪ್ಪು ಮಾಡಿದ್ದರೆ ನೀವು ಏತಕ್ಕೆ ತಪ್ಪು ಮಾಡುತ್ತೀರಿ ? ಒಂದು ವೇಳೆ ನಾನು ಹುಚ್ಚು ಸರಕಾರ ನಡೆಸಿದ್ದೇ ಆದರೆ ನೀವು ಏತಕ್ಕೆ ಅದನ್ನೇ ಹಿಂಬಾಲಿಸುತ್ತೀರಿ ಎಂದು ನಾನು ಕೇಳುತ್ತೇನೆ. You should have commonsense to avoid it and tell me : "Well, Mr. Channabasappa you have committed this mistake." ಈಗ ನೀವು ನಮ್ಮ ಹಿಂಬಾಲಕರಾಗುತ್ತಿದ್ದೀರಿ. ಸರಕಾರ ಭೂಕಂದಾಯ ಹೆಚ್ಚು ಮಾಡಿ ಸ್ಥಳೀಯ ಸಂಸ್ಥೆಗಳಿಗೆ 100ಕ್ಕೆ 100ರಷ್ಟು ಕೊಡುತ್ತೇವೆ ಎನ್ನುವುದು, ರೈತರಿಗೆ ಮೋಸ ಮಾಡತಕ್ಕದ್ದು ಸರಿಯಲ್ಲ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕಾಗಿತ್ತು.

ಇನ್ನು ಎರಡನೆಯದಾಗಿ ತಲೆಗಂದಾಯ ಹಾಕುವುದು ಹುಚ್ಚು ಸರಕಾರದ ಹುಚ್ಚು ದರಬಾರೇ ವಿನಃ ಇನ್ನು ಏನೂ ಇಲ್ಲ. ಇದು ಯಾರಿಗೂ ಒಳ್ಳೆಯದಲ್ಲ. ಈ ಹುಚ್ಚು ಸರಕಾರದ ಕೈಯಲ್ಲಿ ಏನು ಮಾಡಬೇಕಾದರೂ ಸಾಧ್ಯ.

(ಶ್ರೀ ಎಚ್. ಎಂ. ಚನ್ನಬಸಪ್ಪ)

ಇನ್ನು ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಬೋರ್ಡ್ ವಿಷಯ. ಯಾವುದಾದರೂ ಪಂಚಾಯಿತಿಗಳಲ್ಲಿ ಗ್ರಾಮೋದ್ಯೋಗಿಗಳಿಗೆ ಎನ್‌ಕರೇಜ್‌ಮೆಂಟ್ ಕೊಡುವುದಕ್ಕೆ ಅವಕಾಶ ಇದೆ. ಈ ಖಾದಿ ಗ್ರಾಮೋದ್ಯೋಗದ ಕರ್ಮಕಾಂಡ ಬರೀ ಸಿಟಿಗಳಲ್ಲಿ ಇತ್ತು, ಈಗ ಹಳ್ಳಿಗಳಲ್ಲಿ ನೀವೂ ಹಂಚಿಕೊಳ್ಳಿರಿ, ಇದರಲ್ಲಿ ನೀವೂ ಭಾಗಿಯಾಗಿರಿ ಎಂದು ಪ್ರಚೋದನೆ ಮಾಡುತ್ತಿದ್ದೀರಿ. ನನಗೆ ಗೊತ್ತು. ಹಿಂದಿನಿಂದಲೂ ಈ ಸರ್ಕಾರದ ಆಡಳಿತದ ವ್ಯವಸ್ಥೆ ನೋಡಿದ್ದೇನೆ. ಈಗಿನ ಆಡಳಿತದ ವ್ಯವಸ್ಥೆ ಹೇಗೆ ನಡೆಯುತ್ತಾ ಇದೆ ಎಂದು ತಿಳಿದುಕೊಂಡಿದ್ದೇನೆ. ನೀವು ನನಗೆ ಹೇಳುವುದನ್ನು ನೋಡಿದರೆ ಎಂದೂ ಹೆರಿಗೆಯಾಗದ ಹೆಂಗಸು ಹೆರಿಗೆ ನೋವು ಎಂದಂತೆ ಆಗಿದೆ.

Sri K. PUTTASWAMY.—I wanted the hon. Member to ascertain from the Leader of the Opposition whether the activities of the Khadi and Village Industries Board were confined only to cities and not to villages.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಅವರೂ ನೀವೂ ಭಾಗಸ್ಥರಾಗಿ ಈ ಗ್ರಾಮದ ಗೊಂದಲಕ್ಕೆ ಹೋಗುವುದು ಬೇಡ ಎಂದು ನಾನು ಇದನ್ನು ವಿರೋಧ ಮಾಡುತ್ತೇನೆ.

ಇನ್ನು ಸ್ಥಳೀಯ ತೆರಿಗೆಯನ್ನು ಭೂಕಂದಾಯದಲ್ಲಿ ರೂಪಾಯಿಗೆ 25 ಪೈಸೇಗೆ ಮೀರದಂತೆ ನೀವೇ ಹಾಕಿಕೊಳ್ಳಿರಿ ಎಂದು ಹೇಳಿದ್ದೀರಿ. ಈಗ ಇರತಕ್ಕಂಥ ಕಂದಾಯವೇ ಹೆಚ್ಚು. ಈಗ ಹೆಚ್ಚು ಮಾಡಿರತಕ್ಕಂಥ ಕಂದಾಯದ ಜೊತೆಗೆ ಶ್ರೀಮಾನ್ ಹೆಚ್.ವಿ. ಕೌಜಲಗಿಯವರು 25 ಪರ್ಸೆಂಟ್ ನೀವೇ ಹಾಕಿಕೊಳ್ಳಿ ಎಂದು ಹೇಳಿರುವುದು, ಅವರು ಬೇಕಾದರೆ ಇಂತಹ ತೆರಿಗೆಗಳನ್ನು ಅವರೇ ಹಾಕಿಕೊಂಡು ತಮ್ಮ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಿಕೊಳ್ಳಿ ಎಂದು ಈ ರೀತಿ ಅವರ ಮೇಲೆ ಹೇರುವುದು ಇದು ಎಂತಹ ಉದಾರಭಾವನೆ. ಇಂತಹ ಸೆಸ್ಸನ್ನು ತರಬಾರದಾಗಿತ್ತು. ಇದನ್ನು ಆರ್ಡಿನೆನ್ಸ್ ಮುಖಾಂತರ ತಂದಿದ್ದರಿಂದ ದೇಶದಲ್ಲಿ ಆಡಳಿತ ಹದಿಗೆಟ್ಟಿದೆ ಎಂದು ಜನಗಳು ಅಭಿಪ್ರಾಯ ಪಡುತ್ತಾರೆ. ಆದುದರಿಂದ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕು. ಇದಕ್ಕೆ ಜನಾಭಿಪ್ರಾಯ ಇರಬೇಕು ಎಂದು ತಿಳಿದುಕೊಂಡಿದ್ದರೂ ಕೂಡ ಮತ್ತು ಅಸೆಂಬ್ಲಿ ಇನ್ನು 10—15 ದಿವಸದಲ್ಲಿ ಸೇರುತ್ತದೆ ಎಂದು ಗೊತ್ತಿದ್ದು ಈ ಆರ್ಡಿನೆನ್ಸ್ ತಂದಿದ್ದೀರಲ್ಲಾ, ಏತಕ್ಕೆ ತಂದಿರಿ ? ಆದುದರಿಂದ ತಾವು ಈ ಶಾಸನವನ್ನು ವಾಪಸ್ಸು ತೆಗೆದುಕೊಳ್ಳಿ. ನಿಮಗೆ ಏನು ಗೌರವ ಕೊಡಬೇಕು ಅದನ್ನು ಕೊಡೋಣ. ಇದು 2½ ಕೋಟಿ ಜನರ ಪ್ರಶ್ನೆ. ನೀವು ಬಡ್ಜೆಟ್ ಸೆಷನ್‌ನಲ್ಲಿ ತೆಗೆದುಕೊಂಡು ಬನ್ನಿ ಆಗ ಇದನ್ನು ಚರ್ಚಿಸೋಣ. ದೇಶದಲ್ಲಿ ಜನಗಳ ಅಭಿಪ್ರಾಯವನ್ನು ಕ್ರೋಢೀಕರಿಸೋಣ. ಇದು ನ್ಯಾಯಸಮ್ಮತವಾಗಿದೆ ಎಂದು ಜನ ಒಪ್ಪಿದರೆ ನೀವು ಅರ್ಥಮಾಡಿಕೊಳ್ಳಿ. ಇದರ ಮೇಲೆ ಜನಾಭಿಪ್ರಾಯವನ್ನು ತೆಗೆದುಕೊಳ್ಳೋಣ. ನಾನು ಒಪ್ಪಿಕೊಳ್ಳುತ್ತೇನೆ. ಬಡಜನತೆಮೇಲೆ ಈ ಮೋಸದ ಶಾಸನಕ್ಕೆ ನಮ್ಮನ್ನೂ ಗುರಿಮಾಡಬೇಡಿ. ಇದು ದೇಶಕ್ಕೆ ಮೋಸ ಎಂದು ಗೊತ್ತಾಗುತ್ತದೆ. ಹಳ್ಳಿಗಾಡಿನ ಜನರ ಮೇಲೆ ಕೆಟ್ಟ ಪರಿಣಾಮ ಉಂಟುಮಾಡತಕ್ಕದ್ದು ಒಳ್ಳೆಯದಲ್ಲ ಎಂದು ನಾನು ಹೇಳುತ್ತೇನೆ. ಆದುದರಿಂದ ಇದನ್ನು ವಿರೋಧಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†**ಶ್ರೀ ಹೆಚ್.ಎನ್. ನಂಜೇಗೌಡ.**—ಮಾನ್ಯ ಸಭಾಧ್ಯಕ್ಷರೇ, ಮೊದಲನೆಯದಾಗಿ 16-10-69 ರಂದು ಏನು ಒಂದು ತುರ್ತು ಆಜ್ಞೆಯನ್ನು ಹೊರಡಿಸಿದಿರಿ ಅದಕ್ಕೆ ಅವಶ್ಯಕತೆ ಇರಲಿಲ್ಲ ಎಂದು ನಾನು ಹೇಳುತ್ತೇನೆ. ರಾಜ್ಯಾಂಗದ 213 ನೇ ಆರ್ಟಿಕಲ್ ಪ್ರಕಾರ ಇಂತಹ ತುರ್ತುಶಾಸನವನ್ನು ಹೊರಡಿಸಬೇಕಾದರೆ ರಾಜ್ಯಪಾಲರಿಗೆ He has no discretionary power in such matters except to follow the advice of the Minister under the provisions of Art.213. ಬಹುಶಃ ನನಗೆ ಅನಿಸುತ್ತದೆ ಅವರಿಗೇನಾದರೂ ವಿವೇಚನೆ ಇದ್ದರೆ ಈ ಶಾಸನವನ್ನು ಅವರು ಒಪ್ಪುತ್ತಾ ಇರಲಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಯಾವಾಗ ಗಂಡಾಂತರಕಾರಿ ಪರಿಸ್ಥಿತಿ ನಮ್ಮ ದೇಶಕ್ಕೆ ತುರ್ತಾಗಿ ಬರುತ್ತದೋ, ಅದನ್ನು ಎದುರಿಸುವುದಕ್ಕೆ ಇಂತಹ ತುರ್ತು ಶಾಸನವನ್ನು ಮಾಡುವ ಪದ್ಧತಿ ಇದೆ. ಈ ವಿವೇಚನೆಯನ್ನು ಮನಸ್ಸಿಗೆ ತಂದುಕೊಳ್ಳಬೇಕು. ನಮ್ಮ ಸರ್ಕಾರದ ನೀತಿ ಏನಾಗಿದೆ ಎಂದರೆ ಶೆಟ್ಟರ ಅಂಗಡಿಗೆ ಹೋದರೆ ಒಳ್ಳೆಣ್ಣೆ ಇವೆಯೇ ಎಂದು ಕೇಳಿದರೆ ಉಪ್ಪು ಇದೆ ಎಂದು ಹೇಳುತ್ತಾನೆ. 3-4 ಸಾರಿ ಕೇಳಿದರೂ ನಾವು ಏನು ಕೇಳುತ್ತೇವೋ ಅದನ್ನು ಹೇಳುವುದಿಲ್ಲ. ಬೇರೆ ಹೇಳುತ್ತಾರೆ. ಅದೇ ರೀತಿ ಇಂತಹ ಕೆಲಸಗಳನ್ನು

ಮಾಡಬೇಡಿರಿ. ಈಗ ಕಾನೂನಿನಲ್ಲಿರುವ ತಪ್ಪುಗಳನ್ನು ಸರಿಪಡಿಸುವ ಮಸೂದೆಗಳನ್ನು ತನ್ನಿರಿ ಎಂದು ಪದೇ ಪದೇ ಹೇಳಿದರೂ ಅವರವರ ಇಷ್ಟ ಬಂದ ಹಾಗೆ ತರುತ್ತಿದ್ದಾರೆಯೇ ಹೊರತು ರಾಜ್ಯಕ್ಕೆ ಬೇಕಾದಂಥ, ಜನಗಳು ನೆಮ್ಮದಿಯಿಂದ ಇರತಕ್ಕಂಥ ಕಾಯಿದೆಗಳನ್ನು ಮಾಡುವುದಿಲ್ಲ. ನಾನು ಇದನ್ನು ಸರ್ಕಾರದ ಗಮನಕ್ಕೆ ಅನೇಕವೇಳೆ ತಂದಿದ್ದೇನೆ.

ಇನ್ನು ವಿಲೇಜ್ ಪಂಚಾಯಿತಿ ಬಗ್ಗೆ ಈ ತುರ್ತು ಶಾಸನದ ತಿದ್ದುಪಡಿಯನ್ನು ತರಬೇಕಾದಂಥ ಅವಶ್ಯಕತೆ ಇದ್ದರೆ ಇದನ್ನು 37 ನೇ ಸೆಕ್ಷನ್‌ನಲ್ಲಿ ತಂದಿದ್ದರೆ ಒಪ್ಪಬಹುದಾಗಿತ್ತು. ಅನೇಕ ಪಂಚಾಯಿತಿಗಳು ಎಸೆನ್ಸಿಯಲ್ ಸರ್ವಿಸಸ್‌ಮಾಡುತ್ತಾ ಇಲ್ಲ. ಕುಡಿಯುವ ನೀರಿನ ವ್ಯವಸ್ಥೆ, ಸೂಯರೇಜ್ ವ್ಯವಸ್ಥೆ ಕೆಲವು ಗ್ರಾಮಗಳಲ್ಲಿ 5-6 ಸಾವಿರ ಪಾಪ್ಯುಲೇಷನ್ ಇದ್ದ ಕಡೆಯೂ ಪಂಚಾಯಿತಿಗಳು ಮಾಡಿಕೊಡುವುದಕ್ಕೆ ಅವಕಾಶವಾಗುವುದಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಎಸೆನ್ಸಿಯಲ್ ಸರ್ವಿಸಸ್ ಮಾಡುವುದರಲ್ಲಿ ಅವರು ಮುಂದಾಗಿಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ.—ನಮ್ಮಲ್ಲಿ ಒಂದು ಗಾದೆ ಇದೆ. ಅದು ಹುಚ್ಚು ಬಿಟ್ಟ ಹೊರತು ಮದುವೆ ಆಗುವುದಿಲ್ಲ, ಮದುವೆ ಆದ ಹೊರತು ಹುಚ್ಚು ಬಿಡುವುದಿಲ್ಲ ಎಂಬಂತೆ ಅರ್ಧಕ್ಕಿಂತ ಹೆಚ್ಚುಭಾಗ ಇರದ ಹೊರತು ಛೇರ್ಮನ್ ಮೀಟಿಂಗ್ ಕಂಡಕ್ಟ್ ಮಾಡುವುದಿಲ್ಲ. ⅔ ಭಾಗ ಸೇರಿದ ಹೊರತು ಛೇರ್ಮನ್ ತೀರ್ಮಾನ ತೆಗೆದುಕೊಳ್ಳುವ ಹಾಗಿಲ್ಲ. ಈ ರೀತಿ ಛೇರ್ಮನ್ ಕೋರಂ ಇಲ್ಲದೆ ಏನು ಕೆಲಸವನ್ನೂ ಮಾಡುವ ಹಾಗಿಲ್ಲ. ಅನೇಕಬಾರಿ ಇದನ್ನು ನಮ್ಮ ಮಂತ್ರಿ ವರ್ಗದವರ ಗಮನಕ್ಕೆ ತಂದಿದ್ದೇನೆ. ಈವೊತ್ತು ತಂದಿರತಕ್ಕಂಥ ತುರ್ತುಶಾಸನ ಏನು ಹೊರಡಿಸಿದ್ದಾರೆ ಅದು ರಾಜ್ಯಾಂಗದಲ್ಲಿರತಕ್ಕಂಥ ಒಂದು ಅಧಿಕಾರವನ್ನು ಉಪಯೋಗಿಸಿಕೊಂಡು, ಆ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಆದುದರಿಂದ ಇಂತಹ ಆರ್ಡಿನೆನ್ಸ್‌ಗಳನ್ನು ನಾವು ಒಪ್ಪಬಾರದು ಎಂದು ಇಲ್ಲಿ ಹೇಳಬೇಕಾಗಿದೆ. ಇನ್ನು ಕೆಲವು ವಿಧಿಗಳನ್ನು ಇದರಲ್ಲಿ ಉಲ್ಲೇಖಿಸಿದ್ದಾರೆ. ಭೂಕಂದಾಯವನ್ನು ರದ್ದು ಮಾಡಬೇಕು ಎಂದು ಹೇಳುತ್ತಿದ್ದರೂ, ಯಾವ ಪ್ರಯತ್ನವನ್ನೂ ಮಾಡದೆ, ಇರುವ ಭೂಕಂದಾಯವನ್ನು ಇನ್ನೂ ಹೆಚ್ಚು ಮಾಡಲು ಅನುಕೂಲವಾಗುವಂತೆ ಕೆಲವು ಚಾರ್ಜುಗಳನ್ನು ವಸೂಲು ಮಾಡಬೇಕು ಎಂದು ಹೇಳುತ್ತಾರೆ. ಇದನ್ನು ತಾಲ್ಲೂಕ್ ಬೋರ್ಡು ವಸೂಲು ಮಾಡುವುದರಿಂದ ಅವರಿಗೂ ಇದರಲ್ಲಿ ಶೇಕಡ ಐವತ್ತರಷ್ಟು ಬರುತ್ತದೆ. ತಾಲ್ಲೂಕ್ ಬೋರ್ಡಿನವರು ಮಾಡಿ ವಸೂಲು ಮಾಡಿದರೆ ಅದರಲ್ಲಿ ಅರ್ಧದಷ್ಟು ಪಾಲು ತಮಗೂ ಸಿಗುತ್ತದೆ ಎಂದು ಇದರಲ್ಲಿ ಮಾಡುತ್ತಿದ್ದಾರೆ. ಲೋಕಲ್ ಸೆಸ್ ಎನ್ನುವ ಹೆಸರಿನಲ್ಲಿ ಅವರ ಪಕ್ಷದವರೇ ತಾಲ್ಲೂಕು ಬೋರ್ಡಿನಲ್ಲಿರುವುದರಿಂಧ ಪ್ರತಿಯೊಂದು ರೂಪಾಯಿನಲ್ಲೂ ಶೇಕಡಾ 25 ರಷ್ಟು ಸೆಸ್ ಕೊಡಬೇಕೆಂದು ಹೇಳಿ ವಸೂಲು ಮಾಡುವ ಅವಕಾಶವನ್ನು ಇದರಲ್ಲಿ ಮಾಡಿದ್ದಾರೆ. ಬರೀ ಬಾಯಲ್ಲಿ ಮಾತ್ರ ಭೂಕಂದಾಯವನ್ನು ಏರಿಸಿಲ್ಲ ಎಂದು ಹೇಳಬಹುದು. ಆದರೆ ಬೇರೆ ರೀತಿಯಲ್ಲಿ ಭೂಕಂದಾಯ ಏರಿಸಲು ಪ್ರಯತ್ನ ಮಾಡುತ್ತಾರೆಯೋ ಎನ್ನುವ ಒಂದು ಅನುಮಾನ ಇದರಲ್ಲಿ ಬರುತ್ತದೆ. ಇನ್ನು 163 ನೇ ಸೆಕ್ಷನ್ನಿಗೆ ಒಂದು ತಿದ್ದುಪಡಿ ತಂದು ಇದರಲ್ಲಿ ಮೊದಲು ಭೂಕಂದಾಯದ ವಸೂಲಿಯಲ್ಲಿ ಒಂದು ರೂಪಾಯಿಗೆ 12 ಪೈಸೆಯಂತೆ ಸೆಸ್ ವಸೂಲು ಮಾಡುತ್ತಿರುವುದನ್ನು ಒಂದು ರೂಪಾಯಿಗೆ 25 ಪೈಸೆಯಂತೆ ವಸೂಲು ಮಾಡಬಹುದು ಎಂದು ಇಲ್ಲಿ ತಿದ್ದುಪಡಿ ತರುತ್ತಿದ್ದಾರೆ. ಹೀಗೆ ಇವನ್ನೆಲ್ಲಾ ತರಬೇಕಾದರೆ ಸರಕಾರ ಜನತೆಯ ಅಭಿಪ್ರಾಯವನ್ನು ತಿಳಿದುಕೊಳ್ಳದೇ ಈ ರೀತಿ ತರುವುದು ಎಂದರೆ ಇದು ಪ್ರಜಾಪ್ರಭುತ್ವಕ್ಕೆ ಅಪಚಾರ ಎಂದು ಹೇಳಬೇಕಾಗುತ್ತದೆ.

ಇನ್ನು ಇದೇ ಬಿಲ್ಲಿನಲ್ಲಿ ಸೆಕ್ಷನ್ 73 ನ್ನು ತಿದ್ದುಪಡಿ ಮಾಡಿ ತಲೆಗಂದಾಯ ಹಾಕಬಹುದು ಎಂದು ಇದರಲ್ಲಿ ಮಾಡಿದ್ದಾರೆ. Under the Civil Procedure Code, on every head you have a right to tax including the child in the womb. ನೀವು ಇಷ್ಟು ಪುಣ್ಯವನ್ನಾದರೂ ಕಟ್ಟಿಕೊಳ್ಳಬಾರದೇ ಎಂದು ನಮ್ಮ ರಾಜ್ಯದ ಆಡಳಿತ ಮಾಡುತ್ತಿರುವ ಸಿಂಡಿಕೇಟು ಕಾಂಗ್ರೆಸ್ ಪಕ್ಷದವರಿಗೆ ಹೇಳುತ್ತಿದ್ದೇನೆ. ಯಾವಾಗಲೂ ಒಂದು ಸಾರಿ ರಾವಣನಂತೆ ಕೆಲಸ ಮಾಡಬೇಕು ಎಂದು ಮನುಸ್ಸು ಬಂದರೆ ರಾವಣನಂತೆಯೇ ಅನುಕರಿಸಿಕೊಂಡು ರಾವಣನ ಹಾಗೆ ಕೆಲಸ ಮಾಡಬೇಕು. ಹೇಗಿದ್ದರೂ ಸರಕಾರ ಇಂದು ಅಧರ್ಮದ ಹಾದಿಗೇ ಹೋಗಬೇಕೆಂದು ಹೋಗುತ್ತಿರುವುದರಿಂದ ಅದೇ ದಾರಿಯಲ್ಲೇ ಹೋಗಿ ಎಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಇಂತಹ ಒಂದು ಕಾನೂನನ್ನು ಬಹಳ ವಿವೇಚನೆ ಮಾಡಿ ತರಬೇಕೆಂದು ಪಂಚಾಯಿತಿಯವರು ತಾಲ್ಲೂಕು ಬೋರ್ಡುಗಳವರು ಎಲೆಕ್ಟ್ರಿಸಿಟಿ ಬೋರ್ಡಿಗೆ ಎಲೆಕ್ಟ್ರಿಸಿಟಿ ಚಾರ್ಜುಗಳನ್ನು ಕೊಡುವುದರ ಬಗ್ಗೆ ಇದರಲ್ಲಿ ಒಂದು ತಿದ್ದುಪಡಿ ತಂದಿದ್ದಾರೆ. ಹಳ್ಳಿಗಾಡಿನ ಜನಕ್ಕೆ ದೀಪದ ಸೌಕರ್ಯ ಮಾಡಿಕೊಡ

(ಶ್ರೀ ಎಚ್. ಎನ್. ನಂಜೇಗೌಡ)

ಬೇಕಾದುದು ಅಗತ್ಯವಾಗಿರುವುದರಿಂದ ಅಲ್ಲಿರುವ ಪಂಚಾಯತಿಗಳವರು ಇಲ್ಲವೇ ತಾಲ್ಲೂಕು ಬೋರ್ಡಿನವರು ಅದರ ಚಾರ್ಜುಗಳನ್ನು ಕೊಡಲೇ ಬೇಕಾಗುತ್ತದೆ. ಆದರೆ ಇದರಲ್ಲಿರುವ ಕೆಲವು ವಿಧಿಗಳು ಎಂದರೆ 73 ಮತ್ತು 239 ಮಾಡಿರುವುದು ಸರಿಯಲ್ಲ. ಇದರಲ್ಲಿ ಇರುವ ಸೆಕ್ಷನ್ 43ನ್ನು ತಿದ್ದುಪಡಿ ಮಾಡಲೇಕೂಡದು ಎಂದು ಹೇಳುತ್ತೇನೆ. ಒಂದು ಜಾತ್ರೆಗೆ ಬರುವ ಜನರ ಮೇಲೆ ತಲೆಗಂದಾಯ ಹಾಕಿದರೆ ಸಾವಿರಾರು ರೂಪಾಯಿಗಳು ಬರುತ್ತವೆ. ನೀವು ಅಲ್ಲಿ ಬರುವ ಜನರಿಗೆ ಅನುಕೂಲಗಳನ್ನು ಏನು ಮಾಡಿ ಕೊಡುತ್ತೀರಿ ? ಜನರಿಗೆ ಸ್ವಲ್ಪ ಕುಡಿಯುವ ನೀರಿಗೆ ಸಹಾಯ ಮಾಡಬಹುದು. ಇದನ್ನು ವಸೂಲು ಮಾಡುವುದು ಸರಿಯಲ್ಲ. ಇವನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಿ ತರಬೇಕು. ಮತ್ತು ಸೆಲೆಕ್ಟ್ ಕಮಿಟಿಯವರು ಇದರ ಬಗ್ಗೆ ಗಮನ ಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

SRI N. B. SIRDESAI.—Mr. Speaker Sir, I was inclined to support this Bill. But now I cannot help opposing these provisions of this Bill because if this Bill is passed and if these provisions are brought into force, certainly they will cut at the very root of the people and the democratic rights of the people will come to an end. The very principles of democracy will be in danger if these provisions are brought into force. The laws are meant for the people, They should protect and promote the welfare of the people. They must promote the economic conditions of the people. The Government is not a saviour and protector of democracy. In spite of all this, this Government have brought this Bill and wants to get it passed.

The Government have introduced a new Section 202 B and according to this Section the Government wants to continue the administrator for such a period as may be specified in the notification. Sir, it is unwise on the part of the Government to bring such a provision because in the democratic set up powers must be decentralised. But the Government is centralising the powers and they are making local bodies policy making bodies. It is strange that the Administrator is to exercise the powers of the elected persons under this provision. I am sure the Government is bound to misuse the powers. It is bound to take revenge against the people who contest elections. There is no provision in the old Act for determining the constituency. They are determining the constituencies according to their sweet will under the new provisions. They may dissolve the local bodies and they may appoint administrators. They may extend the time limit up to 4 years. It would be improper to curtail or extend the period of such appointment as per sub-clause (3) of clause 202 B. Sub-clause (3) of the same section 202 B, says like this :

> "(3) The Government may, if it thinks fit, appoint an Advisory Council to advise and assist the Administrator appointed under Sub-Section (1) in the exercise of the powers and the performance and discharge of the duties and functions conferred or imposed on him under this Act, or any other law. The members of the Advisory Council shall hold office during the pleasure of the Government."

I think, the Government should not be given unfettered freedom and if such unfettered freedom is given, the people would be deprived of their legitimate right in the democratic set up. Actually in the democratic set up such powers should not be vested with the Government. They must delegate powers to the local bodies and the period must be one year only and after the expiry of the period of one year, election must be held. Section 163 of the principal Act provides for the levy of local cess on all items of land revenue at the rate of 12 paie per rupee. There is already a provision to levy 12 paise in a rupee on all items of land revenue and also on every rupee of water rate.

But, here, the water-rate is excluded, and as per clause 2 of the same section a new provision is made to the effect that local cess may be increased not exceeding 25 paise, which would be a very heavy burden on the common man. I suggest that it should be 10 paise only. I feel that the Government have not thought of common people and their conditions. They cannot afford to pay even the regular taxes on account of their poverty.

Regarding the taxes and fees, as per the amendment, it is stated that provision is made to levy a fee not exceeding 50 paise per capita on persons of 12 years age. I think this kind of per capita tax was in vogue during Moghal times known as jizia tax. It is unjust. If at all the Government wants to augment it, they may make a provision for the levy of tax on the vehicles visiting the fairs and jatras.

Amendment to Section 43—regarding discretionary powers of the Panchayat—says :

> "implementation of schemes for the development of village industries and cottage industries, formulated by the Khadi and Village Industries Commission or by the Mysore Khadi and Village Industries Board."

Sir, I lay stress on the word 'formulated'. I do not know why the schemes should be formulated by the Khadi and Village Industries Commission or the Mysore Khadi and Village Industries Board. They must be formulated by the local bodies and not by the Khadi industries which is not functioning properly and where corruption has reached the climax, and it has become a grazing land to the Ruling Party people. In sub-section (3) (b) (i) of the same section there is provision for making contribution which should not exceed fifty rupees in the case of a Town Panchayat and twenty-five rupees in the case of a Village Panchayat by a resolution passed at its meeting and supported by two-thirds of its total number of members. In the original Act the limitation was up to Rs. 25 only. Of course, it is a good provision, but I am doutbtful about the availability of funds from the Khadi and Village Industries Board.

With regard to the amendment of Section 78, provision has been made to increase the land Revenue grant to Taluk Boards and not to

(SRI N. B. SIRDESAI)

Panchayats. I suggest that the Land Revenue grant to Panchayats should be increased to 50 per cent.

With these words, I conclude and thank the Chair.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಪತಿಗಳೇ, ಈ ಗ್ರಾಮಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡ್ ತಿದ್ದುಪಡಿ ಮಸೂದೆಯನ್ನು ನಾನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಾಲ್ಲೂಕ್ ಬೋರ್ಡ್ ಮತ್ತು ಗ್ರಾಮಪಂಚಾಯಿತಿಗಳಿಗೆ ಸಂಬಂಧಪಟ್ಟಂತೆ ಯಾವುದೇ ಒಂದು ಶಾಸನವನ್ನು ತೆಗೆದುಕೊಂಡು ಬಂದರೂ ಕೂಡ ಅದರಲ್ಲಿ ಮುಖ್ಯವಾಗಿ ಎರಡು ಅಂಶಗಳು ಇರಬೇಕು. ಒಂದನೆಯದು ಎಂದರೆ ಆದಷ್ಟುಮಟ್ಟಿಗೆ ಪ್ರಜಾಪ್ರಭುತ್ವದ ಹಕ್ಕುಗಳನ್ನು ಈ ಗ್ರಾಮಪಂಚಾಯಿತಿಗಳಿಗೆ ಹೆಚ್ಚು ಹೆಚ್ಚು ಕೊಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇರಬೇಕು, ಎರಡನೆಯದು ಎಂದರೆ ಗ್ರಾಮಪಂಚಾಯಿತಿಗಳ ಕಾರ್ಯಚಟುವಟಿಕೆಗಳನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಅವುಗಳಿಗೆ ಬೇಕಾದ ಸೌಲಭ್ಯಗಳನ್ನು ಧನಸಹಾಯವನ್ನು ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು ಎಂಬುದು. ಈಗ ತಂದಿರುವ ತಿದ್ದುಪಡಿಯನ್ನು ನೋಡುವುದಾದರೆ ಇದರಲ್ಲಿ ನಾನು ಹೇಳಿದ ಎರಡು ಅಂಶಗಳು ಇಲ್ಲ. ಈ ಕಾರಣದಿಂದ ಈ ತಿದ್ದುಪಡಿಯಿಂದ ಏನೂ ಸಫಲವಾಗುವುದಿಲ್ಲವೆನ್ನುವುದು ನನ್ನ ಅಭಿಪ್ರಾಯ. ಇದೇ ವಿಚಾರದಲ್ಲಿ ನನ್ನ ಅನೇಕ ಮಿತ್ರರೂ ಕೂಡ ಈಗಾಗಲೇ ಹೇಳಿದ್ದಾರೆ. ಒಂದು ಗಹನವಾದ ಮತ್ತು ಗಾಢವಾದ ಪ್ರಶ್ನೆ ಎಂದರೆ 202(ಬ)ನಲ್ಲಿ ಹೇಳಿರುವಂತೆ ಈ ದಿನ ಕೆಲವು ನಿಬಂಧನೆಗೆ ಒಳಪಟ್ಟು ಆಡಳಿತಾಧಿಕಾರಿಯವರನ್ನು ನೇಮಕ ಮಾಡಬಹುದು ಎಂದು ಹೇಳಿ ಅದಕ್ಕೆ ಕೆಲವು ಕಾರಣಗಳನ್ನು ಸಹ ಕೊಟ್ಟಿದ್ದಾರೆ. ಈ ಕಾರಣಗಳು ಕೆಲವು ಸಮಂಜಸವಾಗಿ ಕಂಡರೂ ಕೂಡ ಮೂಲಭೂತವಾದಂಥ ಈ ಒಂದು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಈ ತರಹದ ಆಡಳಿತವನ್ನು ತೆಗೆದುಕೊಂಡು ಬರುವುದು ಸರಿಯೇ ಎಂಬುದು ಒಂದು ಮುಖ್ಯವಾದ ಪ್ರಶೆಯಾಗಿದೆ. ಇದೇ ಪದ್ಧತಿಯನ್ನು ಮುಂದುವರಿಸಿಕೊಂಡು ಹೋದರೆ ಪ್ರಜಾಪ್ರಭುತ್ವದ ಬೆಳವಣಿಗೆಯನ್ನು ಕುಂಠಿತಗೊಳಿಸಿದಂತಾಗುತ್ತದೆಂದು ಹೇಳುತ್ತೇನೆ. ಈಗಾಗಲೇ ಬೆಂಗಳೂರು ಕಾರ್ಪೋರೇಷನ್‌ಗೆ ಆಡಳಿತಾಧಿಕಾರಿಯವರನ್ನು ನೇಮಕ ಮಾಡಿದ್ದಾರೆ. ಇನ್ನು ಮುಂದೆ ಆಡಳಿತಾಧಿಕಾರಿಯವರನ್ನು ಗ್ರಾಮಪಂಚಾಯಿತಿಗಳಿಗೂ ಮತ್ತು ತಾಲ್ಲೂಕು ಬೋರ್ಡ್‌ಗಳಿಗೂ ಕೂಡ ನೇಮಕ ಮಾಡುವುದಕ್ಕೆ ಹೊರಟಿದ್ದಾರೆ. ಇದರಿಂದ ಪ್ರಜಾಪ್ರಭುತ್ವ ಕುಸಿದು ಬೀಳುವುದಕ್ಕೆ ಅವಕಾಶವಾಗುತ್ತದೆ. ಈ ಒಂದು ಕೆಟ್ಟ ಯೋಚನೆಯನ್ನು ಸರ್ಕಾರ ಮಾಡಿರುವುದು ಇದರಲ್ಲಿ ಸ್ಪಷ್ಟವಾಗಿ ಗೊತ್ತಾಗಿದೆ. 202(ಬ) ಸಬ್ ಕ್ಲಾಸ್ (ಡಿ)ನಲ್ಲಿ ಈ ರೀತಿ ಹೇಳಿದ್ದಾರೆ :

> "the seats of more than two-thirds of the elected members of the Taluk Board have become vacant by their resignation or otherwise,"

ಈ ಒಂದು ಕ್ಲಾಸ್‌ನಿಂದ ಪ್ರಜಾಪ್ರಭುತ್ವಕ್ಕೆ ತಿಲಾಂಜಲಿ ಕೊಟ್ಟಂತಾಗಿದೆ. ಕೋರ್ಟಿಗೆ ಯಾರಾದರು ಹೋಗಿ ಚುನಾವಣೆ ನಡೆಯುವುದಕ್ಕೆ ತಡೆ ಆಜ್ಞೆ ತಂದಿದ್ದರೆ, ಚುನಾವಣೆ ಸರಿಯಾಗಿ ಆಗಿಲ್ಲ ಎಂದು ಕೋರ್ಟಿನಿಂದ ತಡೆಯಾಜ್ಞೆ ಕೊಟ್ಟಿದ್ದರೆ ಮತ್ತು ತಾಲ್ಲೂಕ್ ಬೋರ್ಡಿನ ಅವಧಿ ಮುಗಿದಿದ್ದರೆ ಆಡಳಿತಾಧಿಕಾರಿಯವರನ್ನು ನೇಮಕ ಮಾಡುವುದು ಒಂದು ಕ್ರಮ. ಆದರೆ ಇಲ್ಲಿ ಕ್ಲಾಸ್ (ಡಿ)ನಲ್ಲಿ ಹೇಳಿರುವುದನ್ನು ಯಾವ ರೀತಿಯಲ್ಲೂ ಒಪ್ಪಿಕೊಳ್ಳುವುದಕ್ಕೆ ನಾನು ತಯಾರಿಲ್ಲ. ಇದರ ಪ್ರಕಾರ ರಾಜೀನಾಮೆ ಕೊಟ್ಟರೆ ಆಡಳಿತಾಧಿಕಾರಿಯವರನ್ನು ನೇಮಕ ಮಾಡಬೇಕು ಎಂದು ಇದೆ. ರಾಜೀನಾಮೆ ಕೊಟ್ಟರೆ ಮತ್ತೆ ಚುನಾವಣೆ ಮಾಡುವುದಕ್ಕೆ ಸಾಧ್ಯವಿಲ್ಲವೇ ? ಸರ್ಕಾರದವರು ಅಂತಹ ಪ್ರಸಂಗ ಬಂದಾಗ ಚುನಾವಣೆಯನ್ನು ಮತ್ತೆ ಏತಕ್ಕೆ ಮಾಡಬಾರದು ಎಂದು ಕೇಳುತ್ತೇನೆ. ಈ ಒಂದು ವಿಧಿಯನ್ನು ಗ್ರಾಮಪಂಚಾಯಿತಿಗಳಿಗೂ ಕೂಡ ಏತಕ್ಕೆ ಅನ್ವಯ ಮಾಡಬೇಕೆಂದು ಸರ್ಕಾರವನ್ನು ಕೇಳುತ್ತೇನೆ.

3-00 P.M.

ಇದು ನಿಜವಾಗಿಯೂ ಪ್ರಜಾಪ್ರಭುತ್ವಕ್ಕೆ ಸರಿಯಾದ ಶುಭಲಕ್ಷಣವಲ್ಲ. ಅವರು ರಾಜೀನಾಮೆ ಕೊಟ್ಟರು ಎಂಬ ಕಾರಣದ ಮೇಲೆ ಆಡಳಿತಾಧಿಕಾರಿಯನ್ನು ನೇಮಿಸುವುದು ಪ್ರಜಾಪ್ರಭುತ್ವಕ್ಕೆ ತಿಲಾಂಜಲಿಯನ್ನು ಕೊಟ್ಟಂತಾಗುತ್ತದೆ.

ಕ್ಲಾಜ್ 2 ಮತ್ತು ಕ್ಲಾಜ್ 3 ಇದರಲ್ಲಿಯೂ ಸಹ ಈಗ ಏನು ತಿದ್ದುಪಡಿಯನ್ನು ತಂದಿದ್ದಾರೆ ಅದಕ್ಕೂ ಮತ್ತು ಮೊದಲು ಇದ್ದಂಥಾದ್ದಕ್ಕೂ ವ್ಯತ್ಯಾಸ ಇದೆ. ಈ ವಿಧಿಗಳಲ್ಲಿ :

> "(3) A Panchayat may, by a resolution passed at its meeting and supported by two-thirds of its total number of members,—
>
> (*a*) make provision for or make contribution towards any exhibition, conference or seminar within or outside the village but within the district ; or
>
> (*b*) make contribution to any medical, educational or charitable institution or any other institution of public utility, within or outside the village, whether such institution is under public or private management :
>
> Provided that except with the previous sanction of the Government, such provision or contribution shall not exceed,—
>
> (i) fifty rupees in the case of a Town Panchayat ;
>
> (ii) twenty-five rupees in the case of a Village Panchayat."

ಎಂದು ಹೇಳಿದ್ದಾರೆ. ಗ್ರಾಮಪಂಚಾಯಿತಿಗಳಿಗೆ ಹೆಚ್ಚು ಹಕ್ಕುಗಳನ್ನು ಕೊಡಬೇಕು ಎಂದು ಹೇಳುತ್ತಾರೆ. ಆದರೆ ಅವರಿಗೆ ಯಾವ ಹಕ್ಕನ್ನು ಕೊಟ್ಟಿಲ್ಲ. ಅವರ ಹಕ್ಕನ್ನು ಕಸಿದುಕೊಳ್ಳುತ್ತಿದ್ದಾರೆ. ಗ್ರಾಮದೊಳಗೆ ಅಥವಾ ಹೊರಗೆ ಸಾರ್ವಜನಿಕ ಉಪಯುಕ್ತತೆಯ ಯಾವುದೇ ವೈದ್ಯಕೀಯ, ಶೈಕ್ಷಣಿಕ ಅಥವಾ ಧಾರ್ಮಿಕ ಸಂಸ್ಥೆಗಳಿಗೆ 50-25 ರೂಪಾಯಿಗಳ ಕಾಂಟ್ರಿಬ್ಯೂಷನ್ ಕೊಡಬೇಕಾದರೆ ಗ್ರಾಮಪಂಚಾಯಿತಿಗಳಿಗೆ ಹಕ್ಕು ಇಲ್ಲ, ಅವರು ಸರ್ಕಾರದವರನ್ನು ಕೇಳಿ ಮಾಡಬೇಕು ಎಂದು ಹೇಳಿದ್ದಾರೆ. ಹೀಗಿರುವಾಗ ಅವರಿಗೆ ಏನು ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದಾರೆ ಎಂದು ನಾನು ಕೇಳಬೇಕಾಗಿದೆ. ಅಧಿಕಾರ ವಿಕೇಂದ್ರೀಕರಣ ಮಾಡಿ ಕೆಲವು ಅಧಿಕಾರಗಳನ್ನು ಗ್ರಾಮ ಪಂಚಾಯಿತಿಗೆ ಕೊಡಬೇಕೆಂಬುದು ಮೂಲ ಉದ್ದೇಶವೆಂಬುದಾಗಿ ಇರಬೇಕಾದಲ್ಲಿ ಈ ಮಸೂದೆಯಲ್ಲಿ ಹೇಳಿರುವುದನ್ನು ನೋಡಿದರೆ ಗ್ರಾಮಪಂಚಾಯಿತಿಗೆ ಇರತಕ್ಕ ಅಧಿಕಾರವನ್ನು ಕಸಿದುಕೊಳ್ಳುವ ಪರಿಸ್ಥಿತಿ ಉಂಟಾಗಿದೆ ಎಂದು ನನ್ನ ಅಭಿಪ್ರಾಯ. ಇದು ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವಾದ ಒಂದು ಶಾಸನವಾಗಿದೆ. ಆದ್ದರಿಂದ ಇದನ್ನು ತೀವ್ರವಾಗಿ ಕಟುವಾಗಿ ವಿರೋಧಿಸ ಬೇಕಾಗಿದೆ.

ಸೆಕ್ಷನ್ 79(ಎ) ಇದರ ಪ್ರಕಾರ ಖಾದಿ ಮತ್ತು ಗ್ರಾಮ ಉದ್ಯಮಗಳ ಆಯೋಗದಿಂದ ಮತ್ತು ಮೈಸೂರು ಖಾದಿ ಮತ್ತು ಗ್ರಾಮ ಉದ್ಯಮಗಳ ಮಂಡಲಿಯಿಂದ ಅನುದಾನಗಳು, ಧನಸಹಾಯಗಳು ಇತ್ಯಾದಿ ಸರ್ಕಾರದವರ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು ಒಂದು ಪಂಚಾಯಿತಿಯು 1956 ನೇ ಇಸವಿಯ ಖಾದಿ ಮತ್ತು ಗ್ರಾಮ ಉದ್ಯಮಗಳ ಆಯೋಗದ ಸಂಬಂಧವಾದ 1956 ನೇ ಇಸವಿಯ ಕೇಂದ್ರದ ಅಧಿನಿಯಮದ ಮೇರೆಗೆ ಏರ್ಪಡಿಸಲ್ಪಟ್ಟ ಖಾದಿ ಮತ್ತು ಗ್ರಾಮೋದ್ಯಮಗಳ ಆಯೋಗದಿಂದ ಮತ್ತು 1956ನೇ ಇಸವಿಯ ಮೈಸೂರು ಖಾದಿ ಮತ್ತು ಗ್ರಾಮ ಉದ್ಯಮಗಳ ಸಂಬಂಧವಾದ 1956ನೇ ಇಸವಿಯ 7ನೇ ಮೈಸೂರು ಅಧಿನಿಯಮದ ಮೇರೆಗೆ ಏರ್ಪಡಿಸಲ್ಪಟ್ಟ ಮೈಸೂರು ಖಾದಿ ಮತ್ತು ಗ್ರಾಮ ಉದ್ಯಮಗಳ ಮಂಡಲಿಯಿಂದ ಅನುದಾನಗಳನ್ನು ಧನಸಹಾಯಗಳನ್ನೂ ಮತ್ತು ಸಾಲಗಳನ್ನು ಪಡೆಯಬಹುದು ಎಂದು ಹೇಳಿದ್ದಾರೆ. ಇದರಿಂದ ಪಂಚಾಯಿತಿಗಳಿಗೆ ಹಣ ಬರುತ್ತದೆ ಎನ್ನುವ ಉದ್ದೇಶದಿಂದ ಈ ಒಂದು ಹಕ್ಕನ್ನು ಅವರಿಗೆ ಕೊಟ್ಟಿದ್ದಾರೆ. ಇದರಲ್ಲಿ ಕೆಲವೇ ಜನರು ಖಾದಿ ಬೋರ್ಡಿನ ಹಣವನ್ನು ಲೂಟ್ ಮಾಡುತ್ತಿದ್ದಾರೆ. ಈಗ ಈ ಮಸೂದೆಯ ಪ್ರಕಾರ ಖಾದಿ ಬೋರ್ಡಿನಲ್ಲಿ ಮೇಲಿನಿಂದ ಕೆಳಗಿನವರೆಗೂ ಹಣವನ್ನು ಲೂಟಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಆಳುವ ಪಕ್ಷದವರಿಗೆ ಅನುಕೂಲವಾಗುವ ಅವಕಾಶವನ್ನು ಇದರಲ್ಲಿ ಮಾಡಿಕೊಟ್ಟಿದ್ದಾರೆ. ಇದರಿಂದ ಕೆಲವು ಪಂಚಾಯಿತಿಗಳಿಗೆ ಅನಾನುಕೂಲವೂ ಆಗಬಹುದು ಎಂದು ನನ್ನ ಅಭಿಪ್ರಾಯ. ಇಂಥಾ ಒಂದು ಅನ್ಯಾಯದ ಶಾಸನವನ್ನು ಇವೊತ್ತು ಇಲ್ಲಿ ತೆಗೆದು ಕೊಂಡು ಬಂದಿದ್ದಾರೆ. ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ.

ಇನ್ನೊಂದು ವಿಷಯ. ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುವಂತಹ ಒಂದು ವಿಚಾರವನ್ನು ಈ ಮಸೂದೆಯಲ್ಲಿ ತಂದಿದ್ದಾರೆ. ಅದೇನೆಂದರೆ ತಾಲ್ಲೂಕು ಬೋರ್ಡಿನ ಆಡಳಿತವು ಪೂರ್ಣಾವಧಿಯ

(ಶ್ರೀ ಎಂ. ಎಸ್. ಕೃಷ್ಣನ್)

ವರೆಗೆ ನಿರಾತಂಕವಾಗಿ ನಡೆಯಲು ಅನುಕೂಲವಾಗುವಂತಹ ಪುನರ್ರಚಿತ ತಾಲ್ಲೂಕುಗಳಿಗೆ ತಾಲ್ಲೂಕುಬೋರ್ಡುಗಳ ಸದಸ್ಯರನ್ನು ನಾಮನಿರ್ದೇಶನ ಮಾಡತಕ್ಕ ಪರಮಾವಧಿಕಾಲವನ್ನು ಒಂದು ವರ್ಷದಿಂದ ನಾಲ್ಕು ವರ್ಷಗಳವರೆಗೆ ಮುಂದುವರಿಸಬೇಕೆಂದು ಹೇಳಿದ್ದಾರೆ. ಇದು ತೀರಾ ಅಸಹನೀಯ. 4 ವರ್ಷಗಳವರೆಗೆ ಮುಂದುವರಿಸಬೇಕೆಂದು ಹೇಳಿರುವುದು ಪ್ರಜಾಪ್ರಭುತ್ವ ತತ್ವಕ್ಕೆ ತೀರಾ ವಿರೋಧವಾಗಿದೆ. ಇದು ಕಾಂಗ್ರೆಸ್‌ನಲ್ಲಿ ಸಿಂಡಿಕೇಟ್ ಕಾಂಗ್ರೆಸ್ ಮಾಡಿರುವ ಹಾಗೆ ಕಾಣುತ್ತದೆ. ಇಷ್ಟು ಹೇಳಿ ಈ ಮಸೂದೆಯನ್ನು ನಾನು ವಿರೋಧಿಸುತ್ತೇನೆ.

†ಶ್ರೀ ಪಿ. ತಿಮ್ಮಯ್ಯ (ಬಸವನಗುಡಿ).—ಸ್ವಾಮಿ, ಈಗ ಈ ಸಭೆಯ ಮುಂದೆ ಮಾನ್ಯ ಮಂತ್ರಿಗಳು ತಂದಿರತಕ್ಕಂಥ ಮೈಸೂರು ಗ್ರಾಮಪಂಚಾಯಿತಿಗಳ ಮತ್ತು ಸ್ಥಳೀಯ ಮಂಡಲಿಗಳ ಸಂಬಂಧವಾದ ತಿದ್ದುಪಡಿ ಮಸೂದೆಗೆ ಸಂಬಂಧಪಟ್ಟ ಹಾಗೆ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಸಾಮಾನ್ಯವಾಗಿ ನಾನು ಯಾವಾಗಲೂ ಮಾತನಾಡುವುದಿಲ್ಲ. ಸ್ವಲ್ಪ ನೋವಾದಾಗ ನಾನು ಮಾತನಾಡುತ್ತೇನೆ. ಮತ್ತು ನಾನು ನ್ಯಾಯವಾಗಿ ಕಂಡದ್ದನ್ನು ಸಭೆಯ ಮುಂದೆ ಇಡುತ್ತೇನೆ. ಮಾನ್ಯ ಮಂತ್ರಿಗಳು ಪಂಚಾಯಿತಿ ರಾಜ್ಯವನ್ನು ಮಾಡಿದರೂ ಕೂಡ ಹಳ್ಳಿಗಳಲ್ಲಿ ಹೋದರೆ ಇದು ಪಂಚಾಯಿತಿ ರಾಜ್ಯ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಈ ಪಂಚಾಯಿತಿ ರಾಜ್ಯದಿಂದ ಮನೆಮನೆಗೂ ಪಂಚಾಯಿತಿ ಆಗಿದೆ. ಈ ಪಂಚಾಯಿತಿ ಬೆಂಗಳೂರಿಗೂ ಸಹ ಬಂದಿದೆ. ಇವೊತ್ತು ಬೆಳಿಗ್ಗೆ ಆದಂತಹ ಒಂದು ಪ್ರಸಂಗವನ್ನು ನಾನು ಹೇಳುತ್ತೇನೆ. 10-12 ಜನ ಹೆಣ್ಣು ಮಕ್ಕಳು ಎಂದರೆ ತಮಿಳುನಾಡಿನ ಗಡಿಯಲ್ಲಿ ಬಂಧಿತರಾಗಿರುವ ಹುಡುಗರ ತಾಯಂದಿರು ನನ್ನ ಆಫೀಸಿಗೆ ಬಂದು ಗೋಳಿಟ್ಟರು. ಅತ್ತರು, ಅವರು ಎಷ್ಟರಮಟ್ಟಿಗೆ ಅತ್ತರು ಎಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಕನ್ನಡ ಚಳುವಳಿಗಾರರು ಅನೇಕ ಹುಡುಗರನ್ನು ಬೆಂಗಳೂರಿನಿಂದ ಕರೆದುಕೊಂಡು ತಮಿಳುನಾಡಿನ ಗಡಿಗೆ ಹೋಗಿ ಚಳುವಳಿಯನ್ನು ನಡೆಸಿದಾಗ ಅವರನ್ನು ಅಲ್ಲಿ ಅರೆಸ್ಟ್ ಮಾಡಿದ್ದಾರೆ. ಆದ್ದರಿಂದ ಆ ಹುಡುಗರ ತಾಯಂದಿರು ಗೋಳಾಡುತ್ತಿದ್ದಾರೆ. ಇದೇ ಪಂಚಾಯಿತಿ. ಇದೂ ಒಂದು ಪಂಚಾಯಿತಿ. ಆ ಹೆಣ್ಣುಮಕ್ಕಳು ಅತ್ತದ್ದನ್ನು ನೋಡಿ ನನ್ನ ಮನಸ್ಸಿಗೆ ನೋವಾಯಿತು. ವಿದ್ಯಾಭ್ಯಾಸ ಮಾಡತಕ್ಕ ಮಕ್ಕಳನ್ನು ಚಳುವಳಿಗಾರರು ಕರೆದುಕೊಂಡು ಹೋಗಿ ಅವರನ್ನು ಹಾಳುಮಾಡುತ್ತಿದ್ದಾರೆ. ಆ ಕನ್ನಡ ಚಳುವಳಿಯನ್ನು ಸರ್ಕಾರದವರು ಸಪೋರ್ಟ್ ಮಾಡುತ್ತಾರೋ ಗೊತ್ತಿಲ್ಲ. ಇಂಥಾ ಚಳುವಳಿಗೆ ನಮ್ಮ ಪತ್ರಿಕೆಗಳವರೂ ಪ್ರೋತ್ಸಾಹ ಕೊಡುತ್ತಾರೆಯೋ ಎನ್ನುವಂತಾಗಿದೆ. ಏತಕ್ಕೆಂದರೆ ಬೆಳಿಗ್ಗೆ ಎದ್ದಕೂಡಲೇ ಪತ್ರಿಕೆಗಳಲ್ಲಿ ಅಲ್ಲಿ ಕನ್ನಡ ಚಳುವಳಿ ಆಯಿತು, ಇಲ್ಲಿ ಕನ್ನಡ ಚಳುವಳಿ ಆಯಿತು, ಎಂದು ಹುಡುಗರು ಪತ್ರಿಕೆಯಲ್ಲಿ ಓದುತ್ತಾರೆ, ಆಗ ಇವರ ಮನಸ್ಸಿನಲ್ಲಿ ಒಂದು ವಿಧವಾದ ಪ್ರಚೋದನೆ ಉಂಟಾಗುತ್ತದೆ. ಈ ದೃಷ್ಟಿಯಿಂದ ನಾನು ನಮ್ಮ ಪತ್ರಿಕಾ ಪ್ರತಿನಿಧಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಇಂಥಾ ಚಳುವಳಿಗೆ ಪ್ರಚಾರವನ್ನು ನೀಡಬೇಡಿ ಎಂದು. ಈ ಪಂಚಾಯಿತಿ ರಾಜ್ಯದಲ್ಲಿ ಈ ಚಳುವಳಿ ಪಂಚಾಯಿತಿ ಆಗುತ್ತಿರುವುದು ಬಹಳ ಅನ್ಯಾಯ. ಸರ್ಕಾರದವರು ಈ ಪಂಚಾಯಿತಿಗೆ ಎಂದರೆ ಚಳುವಳಿಗೆ ಪ್ರೋತ್ಸಾಹ ಕೊಡುವುದಾದರೆ ನಿಜವಾಗಿಯೂ ಮಕ್ಕಳು ಉಳಿಯುವುದಕ್ಕೆ ಆಗುವುದಿಲ್ಲ. ವಿಧಾನ ಸೌಧದಲ್ಲಿ ಈ ಸಭೆಯಲ್ಲಿ ನಾವು ಇರುವುದಕ್ಕೆ ಆಗುವುದಿಲ್ಲ. ದಾರಿಯಲ್ಲಿ ಹೋಗುತ್ತಿದ್ದರೆ ಈ ಚಳುವಳಿಗೆ ಸಂಬಂಧಪಟ್ಟವರು ದುಡ್ಡು ಕೇಳುತ್ತಾರೆ. ಗುಂಪು ಗುಂಪಾಗಿ ಹುಡುಗರು ಬಂದು ದುಡ್ಡನ್ನು ವಸೂಲು ಮಾಡುತ್ತಾರೆ. ಸರ್ಕಾರದವರು ಈ ಪಂಚಾಯಿತಿಯನ್ನು ಕಂಟ್ರೋಲ್ ಮಾಡದಿದ್ದರೆ ಪಂಚಾಯಿತಿ ರಾಜ್ಯ ಉಳಿಯುವುದಿಲ್ಲ. ಪಂಚಾಯಿತಿ ರಾಜ್ಯ ಬರುತ್ತಿದೆ ಎಂದು ಊರು ಕೇರಿಗಳಲ್ಲೆಲ್ಲಾ ಪಂಚಾಯಿತಿ ಜಾಸ್ತಿಯಾಗುತ್ತಿದೆ. ಸ್ವಾಮಿ, ನಾನು ಒಂದು ಮಾತು ಹೇಳುತ್ತೇನೆ, ಜಾತಿ ಮತ್ತು ಭಾಷೆಗೆ ಸಂಬಂಧಪಟ್ಟ ಹಾಗೆ ನಾನು ಏನೂ ಹೇಳುವುದಿಲ್ಲ. ಒಂದು ಊರು ಎಂದರೆ ಎಲ್ಲಾ ಜಾತಿಯವರೂ ಇರುತ್ತಾರೆ. ಈ ದೃಷ್ಟಿಯಿಂದ ಬಡವರಿಗೆ ಯಾರಿಗೂ ಯಾವರೀತಿಯಲ್ಲಿಯೂ ಅನ್ಯಾಯವಾಗಬಾರದು. ರಾಜ್ಯದಲ್ಲಿ ಅನೇಕ ಕಡೆ ಚಳುವಳಿ ನಡೆಯುವುದರ ಜೊತೆಗೆ ನಮ್ಮ ರಾಜ್ಯದ ರಾಜಧಾನಿಯಾದ ಬೆಂಗಳೂರು ನಗರದಲ್ಲಿ ಈ ಕನ್ನಡ ಚಳುವಳಿಯ ಹೆಸರಿನಲ್ಲಿ ಮಕ್ಕಳು ಪೋಲಾಗುತ್ತಿದ್ದಾರೆ. ಸರ್ಕಾರದವರು ಮೊದಲು ಈ ಪಂಚಾಯಿತಿಯನ್ನು ನಿವಾರಣೆ ಮಾಡಬೇಕು. ಮೈಸೂರು ರಾಜ್ಯ ಚಳುವಳಿಯ ಗೂಂಡಾರಾಜ್ಯವಾಗುತ್ತದೆ ಎಂದು ಅನೇಕರು ವ್ಯಾಜ್ಯ ಮಾಡುತ್ತಿದ್ದಾರೆ. ನಮ್ಮ ದೇಶದ ಅಭಿಮಾನದಿಂದ ನಾವೆಲ್ಲರೂ ಒಗ್ಗಟ್ಟಾಗಿ ತಪ್ಪು ಮಾಡಿದಂತಹ ಮಕ್ಕಳನ್ನು ತಿದ್ದಬೇಕು. ಈ ರೀತಿ ಚಳುವಳಿ ನಡೆಯುತ್ತಿದ್ದರೆ ಇವನ್ನು ಜನತೆ ಸಹಿಸುವುದಿಲ್ಲ. ಚಳುವಳಿ ಮಿತಿಮೀರಿ ನಡೆದರೆ ಇದರಿಂದ ದೇಶ ಹಾಳಾಗುತ್ತದೆ. ಮಹಾರಾಷ್ಟ್ರದಲ್ಲಿ ಮೊನ್ನೆ ಶಿವಸೇನೆಯವರ ಗತಿ ಏನಾಯಿತು ಎಂಬುದನ್ನು ತಾವು ಯೋಚನೆ ಮಾಡಬೇಕು. ಆದ್ದರಿಂದ ಪಂಚಾಯಿತಿ

ಯನ್ನು ಸರಿಪಡಿಸದಿದ್ದರೆ ಹೇಗೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಆದ್ದರಿಂದ ನಾನು ಹೇಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಯವರು ಹೇಗೆ ದಿಟ್ಟ ಮನಸ್ಸಿನಿಂದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರೋ, ಅದೇ ರೀತಿ ದಿಟ್ಟ ಮನಸ್ಸಿನಿಂದ ನಡೆದುಕೊಳ್ಳಬೇಕು. ಯಾವಾಗ ನೋಡಿದರೂ ನಾವು ತಯಾರಾಗಿರಬೇಕು, ಮಿಲಿಟರಿಯವರ ಹಾಗೆ. ನಾವೆಲ್ಲರೂ ನಮ್ಮ ದೇಶದ ಹಿತದೃಷ್ಟಿಯಿಂದ, ನಮ್ಮ ನಿಮ್ಮ ಹಿತದೃಷ್ಟಿಯಿಂದ, ಈ ಶಾಸನಸಭೆಯ ಹಿತದೃಷ್ಟಿಯಿಂದ ಇಂಥ ವ್ಯವಹಾರಗಳನ್ನು ಮಾಡಬೇಕು ಮತ್ತು ದಿಟ್ಟತನದಿಂದ, ನಮ್ಮ ಮಕ್ಕಳನ್ನು ನೋಡಿಕೊಳ್ಳಬೇಕಾಗಿದೆ. ಇಲ್ಲದಿದ್ದರೆ, ನಮ್ಮ ದೇಶಕ್ಕೆ ಒಂದು ಕೆಟ್ಟ ಹೆಸರು ಬರುತ್ತದೆ. ಅದೇ ರಿತಿ ನನ್ನ ಒಂದು ಪ್ರಾರ್ಥನೆ ಪೇಪರಿನವರಿಗೂ ಕೂಡ. ತಾವು ಅಂಥ ಕೆಟ್ಟ ಘಟನೆಗಳನ್ನು ಹೆಚ್ಚು ಪ್ರಚಾರ ಮಾಡಬಾರದು. ಅದನ್ನೆಲ್ಲಾ ಸಣ್ಣಸಣ್ಣ ಮಕ್ಕಳು ಬೆಳಿಗ್ಗೆ ನೋಡಿ ಬಿಟ್ಟು ಚಳವಳಿ ಚಳವಳಿ ಎಂದು ತಮ್ಮ ಪ್ರಾಣಗಳನ್ನು ಕೊಡುತ್ತಿದ್ದಾರೆ. ಇದರಿಂದ ಒಂದು ರೀತಿಯ ಗೂಂಡಾಗಿರಿಯೇ ನಮ್ಮ ದೇಶದಲ್ಲಿ ಬರಬಹುದು ಮತ್ತು ಅದು ನಂತರ ಒಂದು ಬೇರೆಯೇ ಪಂಚಾಯಿತಿಯಾಗುತ್ತದೆ. ಇವತ್ತು ಸರ್ಕಾರ ಒಂದು ತಂದೆ ತಾಯಿಗಳು ಇದ್ದಹಾಗೆ. ಅದು ಸರಿಯಾಗಿ ಎಲ್ಲರನ್ನೂ ನೋಡಿಕೊಳ್ಳಬೇಕು. ರೇಸಿನಲ್ಲಿ ಕುದುರೆಗೆ ಇಂಜೆಕ್ಷನ್ ಕೊಟ್ಟು ಓಡಿಸಿದ ಹಾಗೆ, ಮಕ್ಕಳು ಈ ರೀತಿಯ ಪ್ರಚಾರ ಬಂದರೆ, ಓಡುತ್ತಾರೆ. ಇದರಿಂದ ನಮ್ಮ ಬೆಂಗಳೂರಿನದ್ದೇ ಅಲ್ಲ, ಇಡೀ ಮೈಸೂರು ದೇಶದ ಗೌರವ ಹಾಳು ಆಗುತ್ತದೆ. ಆದ್ದರಿಂದ ಯಾರೇ ಆಗಲಿ, ತಮ್ಮ ಮಕ್ಕಳನ್ನು ತಾವು ಸರಿಯಾಗಿ ನೋಡಿಕೊಂಡು, ಇರಬೇಕು. ಅವರು ಶಾಸಕರಾಗಲಿ, ಪೇಪರಿನವರಾಗಲಿ ಸರ್ಕಾರದವರಾಗಲಿ, ಎಲ್ಲರೂ ಜವಾಬ್ದಾರಿಯುಳ್ಳವರು ಇದನ್ನು ಮನಸ್ಸಿಟ್ಟು ಮಾಡಿ, ಒಬ್ಬರು ಕೆಟ್ಟ ದಾರಿಯಲ್ಲಿ ಹೋಗುವಾಗ ಅದನ್ನು ತಿದ್ದುಪಾಟು ಮಾಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ದೊರೆಗೆ 10) ವರ್ಷ ಆಯುಷ್ಯವಾಗಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri D. B. KALMANKAR (Aland).—Mr. Speaker Sir, I am really sorry that the Mysore Local Boards and Panchayats (Amendment) Bill has come before this House to replace the ordinance.

Now, as already said by some Hon'ble Members of this House, there is nothing to show that any of the provisions of this Bill was so necessary, was so essential to justify the bringing of an ordinance. The provisions of article 213 are to be very rarely used and only if the Governor is satisfied that there is necessity, absolute necessity for making a law through ordinance. I am sorry to say that by bringing so many ordinances even on very normal matters, the Government is trying to circumscribe and limit the functions of the legislature. I could have understood if there was something very urgent and emergent as in the case of the Land Reforms Bill. Of course, the present Land Reforms Bill also was not so much necessary for which an ordinance was issued. What I find from this Bill is that very normal items are put into the ordinance. Instead of 20 per cent, it is intended to increase 50 per cent. Some more discretionary grants are to be increased. And then 50 paise is imposed whenever a person of over 12 years attends any fair or jatra or urs. There are some other similar matters such as the appointment of administrators and such other things that are incorporated.

Sir, it was rightly said by Sri H. N. Nanje Gowda that today, supposing there are 13 members in a Panchayet, the Chairman does not function properly. In the case of removal of the Chairman, at least nine members are to be present to constitute the quorum at a Panchayat meeting. Sir, I say from experience in my taluk that more than fifty per cent of the village panchayets are not at all functioning. They are not at all calling their monthly or two monthly meetings and no work is

(SRI D. B. KALMANKAR)

done. So I thought that some of provisions were introduced in the present Bill in order to remedy that kind of a situation but it is not done. In the Bill, mendment of section 43, sub-clause (3) it is said :

> "43 (3) A panchayet may, by a resolution passed at its meeting and supported by two thirds of its total number of members,—
>
> (*a*) make provision for or make contribution towards any exhibition, conference or seminar within or outside the village but with the district ;"

I oppose this provision, Sir. As it is, the Panchayet has no funds. It cannot find enough money to do its very basic duties, namely supplying water or keeping the streets clean or providing lighting, etc. It is no also in a position to pay its staff-Secretary and others. When this is the case, I do not understand why they are to make a contribution for such thing as a seminar or exhibition ? Ultimately, as I see, from the trend of the party in power, they want an exhibition to be organised in every district to propagate their party. They want to compel every panchayet to give money by virtue of this provision. Therefore, I oppose it. I oppose it not only on this ground, but also on the ground that the panchayets will have no funds for their very normal functions.

Secondly Sir, under section 73, the Town Panchayet is going to be given power to impose fifty paise per capita above 12 years of age. That is very arbitrary. If that power is to be given to town panchayets, why the village panchayets are to be excluded from this, because there are so many small villages where jatras and fairs on a large scale take place. Why such power is not given to village panchayets and why it is given only to town panchayets ? If you want to make a provision, you may include the gram panchayets also. For sanitation and other things, they require extra amounts. That is also necessary. Because, as I already stated, it is impossible for them to do any work under their normal activities. If you want to give the benefit of this section to town panchayets, you may include also village panchayets. So I submit the Minister concerned will take note of this fact.

Under the proposed section 4 A, the Panchayat is given powers to compound in cases panchayat taxes are due from some persons. If this provision comes into play, it will open the floodgates for compounding such cases. What will happen is that a type of discrimination will come in because at the village level we know what type of discrimination goes on. There are already groups. A Panchayat which is in power may make a discrimination and the benefit of it may go to a particular group of people. Not only that, the already meagre funds that the Panchayat has got may also not be available if this particular clause is passed.

Then, I come to section 77. I am happy that the collection of taxes is being entrusted to Village Accountants. It has been said that the Gram Panchayat cannot collect it because of local influence. It is very apparent that they canot collect and that is why this function is given to the Village Accountant. It is all right; but my only doubt is whether the Village Accountant can do both the work *viz.*, collection of taxes and also of land revenue. For that I submit some arrangement may be made.

Then, it is provided that the Tahsildar can make collection suo-motu. I oppose it. On the request of the Panchayat he may take proceedings for collection. So, that may be deleted.

Coming to the amount collected by way of shandy and all that, we see that the Taluk Boards are not at all discharging their functions properly. In our State where there are 35,000 villages, even after so many years of the coming into force of this Act, the villages are where they are; there is no improvement. So, in these shandies 50 per cent collection may go to the Panchayats.

Regarding the extension of the period from one year to four years, I oppose it. There is no need to have the Administrators. There also I find something fishy. With these observations I thank the Chair and conclude my speech.

Sri K. PUTTASWAMY (Minister for Law, Labour and Parliamentary Affairs).—Sir, I may kindly be permitted to intervene in the debate to explain two points that have been made out during the course of this debate.

Most of the hon. members of the Opposition who have participated in this debate have questioned the propriety of the Government in issuing the ordinance. The House is aware that this Bill had been placed before this House during the last session. It was unfortunate that it was not possible to find time for discussing and passing it. In the explanation attached to the Bill, under Rule 71 in the Statement of Objects and Reasons and also in the explanatory statement placed under Rule 72 of the Rules of Procedure, the urgency has been made very clear. Under the existing Act, only 60 per cent of the land revenue had to be shared between the Taluk Board and Village Panchayat. It was decided long ago that with effect from 1-4-69 hundred per cent of the land revenue should be assigned to the Taluk Boards and Village Panchayats in certain proportion. As hon. Members are aware, as the accounting year of 1969-70 is fast running out, it was the anxiety of the Government to make funds available to the Village Panchayats so that they may meet their commitments on development works. It was that anxiety which made the Government to issue this ordinance.

As far as the other provisions are concerned, they could have waited; but the Government made use of that opportunity to also include those provisions in the ordinance. A question has been

(Sri K. Puttaswamy)

pertinently asked whether the House is not indirectly compelled to accord sanction to the ordinance that has been issued. If we go through the constitutional provisions, I do not think there would be any such compulsion on this House. The discretion of this House is unfettered. This House can throw out the Bill that is placed before this House and can also suggest amendments. The Hon. the Leader of the Opposition pointed out yesterday that inconvenience is going to be caused to the registered occupants of the land if suddenly during a transition stage like this *viz.*, measurement in terms of acres is changed to measurement in terms of hectares. This House appreciated the point made by him and Government itself brought forward an official amendmedt to drop from the Bill the reference to hectares and restore the original measurement in terms of acres. I am only pointing out that there is absolutely no compulsion on this House or that the discretion of this House is in no way fettered. Yesterday my hon. Friend Sri Nagappa read to this House in some details and also explained when exactly Government should take recourse to this extraordinary provision of issuing an ordinance. I straightaway concede that it is only in extraordinary circumstances that the Government should take recourse to the issue of ordinances. I might point out humbly to this House that Government have been making all efforts to see that the administration functions smoothly and effectively and with that anxiety Government took a decision to make over hundred per cent of land revenue to the Taluk Boards and Village Panchayats. Thereafter, they brought an amendment also as early as in August-September. It was unfortunate that this House could not find time to pass it and therefore it became necessary to issue an Ordinance and this enables the Government to pay from the Exchequer to the Taluk Boards and the Village Panchayats the amount that they intended to give by the decision that they have taken.

3-30 P.M.

Therefore, I submit that Government have not misused the right that they have under the Constitution. Yesterday when the hon. Member Sri Nagappa was speaking, I made a request to him to read the letter of the late Prime Minister Pandit Jawaharal Nehru. He was good enough to read it. But I would like to read it over again. I do not think I would be taking the time of this House by so doing. It explains the stand of the Government and the criterion for the Government to take recourse to Ordinance and when exactly the Government should take recourse to ordinance. I have already stated that ordinance must not be issued very frequently if we can wait for the Session to meet, consider and pass any measure. Government, I am sure, is in duty bound to wait. That is the respect to be shown to this House. I am sure that this Government would not lag behind in showing the respect that is due to the House. On July 19, 1954, the late Prime Minister Jawaharlal Nehru wrote to the late Speaker Mavalankar as follows :

> " We have been reluctant to issue Ordinances and it is only when we have felt compelled to do so by circumstances that we have issued them. You will appreciate that it is the responsibility of the Government to decide what steps should be taken in a particular contingency. The Constitution itself has provided for the issue of Ordinances where such necessity arises, and that direction has to be exercised by Government.
>
> " We have issued in the past a very limited number of Ordinances and we have always placed before Parliament the reasons for having issued each one of them.
>
> " I am myself unable to see why this should be considered undemocratic. Of course, this power, like any other power, may be abused and Parliament will be the ultimate judge as to whether the use of this power has been right or wrong."

I do not want to add anything more to what has been stated in the letter of Pandit Jawaharlal Nehru, our former Prime Minister. The judge on this ordinance is this House; the House will judge whether it is right or wrong.

As regards the question whether the circumstances necessitated the issue of ordinance, I may humbly submit that it is the responsibility of the Government to consider whether the situation needed this ordinance. I do not want to say anything more on this point.

One other thing which the hon. Member Sri Nagappa made out was with reference to Articles 155, 160 and 213.

Sri M. NAGAPPA.—Please read Art. 159 first and then quote Art. 160 and 155.

Sri K. PUTTASWAMY.—I am very thankful to the hon. Member for reminding me to refer to Art. 159. He pointed out that the then Acting Governor or the person who was discharging the functions of the Governor, namely, Chief Justice Sri A.R. Somanath Iyer, was not a Governor but he was only a person discharging the functions of the Governor. I am now making reference to four Articles one by one. Article 155 states :

> "The Governor of a State shall be appointed by the President by warrant under his hand and seal."

Art. 159 states :

> "Every Governor and every person discharing the functions of the Governor shall, before entering upon his office, make and subscribe in the presence of the Chief Justice of the High Court exercising jurisdiction in relation to the State, or, in his absence, the seniormost Judge of that Court available, an oath or affirmation in the following form,......"

(Sri K. Puttaswamy)

This refers to the taking of oath of office. The point that the hon. member was making out was that the Governor then in office of the Governor was a person discharging the functions of the Governor and whether such a person could issue ordinance. He also pointed out that he had signed as Governor. I will meet that point later.

I submit that one of the functions of the Governor is to issue ordinance. So whoever may be in the office of the Governor validly, he has the right to discharge the functions attached to that office. The issuing of ordinance is a function attached to the office of the Governor. So the Chief Justice who was then functioning as Governor and who discharged the functions of the Governor, had the Constitutional right to issue ordinance.

Then 160 article which reads :

> "The President may make such provision as he thinks fit for the discharge of the functions of the Governor of a State in any contingency not provided for in this Chapter."

I do not think it would be necessary for me to make a reference to Art. 213 which deals with the procedure for promulgating Ordinances.

Sri M. NAGAPPA.—With due respect to the Chair, I wish to know for what purpose Art. 160 of the Constitution was added in this particular Chapter ? Where was the necessity for adding it ?

Sri K. PUTTASWAMY.—I was just explaining that particular point. I have gone through the several Articles in the Constitution. Nowhere is there any provision relating to the appointment of a person to discharge the functions attached to the office of the Governor or to the appointment of an Acting Governor whenever there is a vacancy. It is exactly under Rule 160 that such a power is exercised. I will just refer to the Notification that has been issued appointing Sri Somnath Iyer, Acting Chief Justice of the Mysore High Court, to discharge the functions of the Governor of Mysore. The Warrant of Appointment is as follows :

> "By virtue of the power vested in me by Articles 155 and 160 of the Constitution of India. I, Varahagiri Venkata Giri, President of India, hereby appoint Mr. JUSTICE ARNI RAMASWAMY SOMNATH IYER, Acting Chief Justice of the Mysore High Court, to discharge the functions of the Governor of Mysore during the vacancy in the Office of the Governor.
>
> "Given at Rashtrapati Bhavan, New Delhi, this Thirtieth day of August in the year One Thousand Nine Hundred and Sixty-Nine (8th Bhadra 1891) in the Twentieth year of the Republic of India.
>
> V. V. GIRI,
> President of India."

I submit that the President of India has power to appoint a person temporarily to discharge the functions of the Governor and that power is exercised under Art. 160. It is made amply clear in Art. 160. That is why I made a reference to Art. 160 earlier. Art. 155 relates to the appointment of the Governor. It is only under Art. 160 that the Acting Cheif Justice was appointed to discharge the functions attached to the office of the Governor. Therefore, It is quite in order.

The Deputy Commissioner, Gulbarga, has reported that there was a bumper Kharif crop in the whole of Gulbarga District, as a result of which the prices had come down considerably. The Rabi crop is however reported to have been affected to an extent of about 30 per cent due to adverse seasonal conditions and pest attacks. The local authorities of the Department of Agriculture has been asked to take urgent remedial measure to deal with the pests. At any rate the Rabi crop forecast, according to the Deputy Commissioner, is about 60 to 70 per cent throughout the district. Present conditions do not warrant suspension of collection of land revenue or postponement of takavi and other arrears or levy procurement.

BIDAR :

Major Kharif crops like Kharif jowar and groundnut have been adversely affected in some areas of the district by untimely rains at the time of harvest. According to the eye estimate, the yield of Kharif jowar in the affected areas may be between 25 per cent to 37 per cent. The Rabi crops like Rabi jowar and gram have also been adversely affected in some areas due to cold weather and sugar disease. The eye estimate of Rabi jowar in the affected areas may also be between 25 per cent to 37 per cent. The actual annewari will be determined carefully with reference to the crop cutting experiments. At present, there are no definite proposals for suspension of land revenue of current demand. The question of suspension or remission of land revenue and other Government dues including arrears will be examined by the local officers with reference to the actual results of the crop cutting experiments.

RAICHUR :

Kharif crops have been affected only in 22 villages of Sindhanur Taluk covering an area of 18,515 acres. Proposals for remission of Land Revenue in respect of these villages are under the consideration of the subordinate officers. No coercive measures will be adopted for recovery of land revenue and Takavi arrears in these villages. In the rest of the district, Kharif crops were average and no reports of sugar disease have been received. Some plots of Rabi jowar are reported to have been affected by mild sugar disease. Final position of Rabi jowar will be known after results of the crop cutting experiments now in progress are received and examined by the local officers.

As regards levy procurement, only paddy and jowar are being procured under the respective Levy orders under a slab system of levy determined with reference to the area of the grower's holding and its source of irrigation. There is provision under the Levy orders for the determination of the net assessed surplus with a grower. There is no provision under the levy orders to stop collection of levy. However, there is provision to grant remission in the quantum of levy in respect of drought affected and flood affected areas based on the "Annewari" according to the scales noted below :—

(*a*) Total remission — If the 'Annewari' is below 4 annas.

(*b*) 50% ,, — If the 'Annewari' is between 4 annas and 6 annas.

(*c*) 25% ,, — If the 'Annewari' is between 6 annas and 8 annas.

Remission can be granted at the above scale.

Sri V. N. PATIL.—I want to know whether grant of remission in quantum of levy applies to all the three districts of Gulbarga, Bidar and Raichur. Even according to the Government estimate, the present yield of crop is 30 per cent. So, is it not justifiable to stop collection of land revenue arrears for those areas where crops are in a bad condition ? In Bidar District the method adopted to determine the crop yield, is very cumbersome. Several people have received notices for payment of their dues and takavi loans. This is a question pertaining to 20 lakhs of people. I wish to know whether the Government will be lenient to them, ensure justice to them and not insist upon the collection of takavi and other arrears ? About policy matters, will Government itself decide them instead of entrusting that responsibility to the Deputy Commissioners ?

Sri H. V. KOUJALGI.—So far as this levy procurement is concerned, this order is applicable throughout the State. The quantum of levy depends upon the Annewari and the scales prescribed for remission. As regards the second question, I may State that in some villages according to the crop-cutting experiment, the yield is below 25 per cent. In such cases there are standing orders for giving total remission. If the yield is bove 25 per cent and below certain percentage, it is 50 per cent. There is a scale in the standing orders for granting remission. Regarding the third point, I may say that policy matters are not left to the Deputy Commissioners and so they cannot be arbitrary. They are carrying out the Standing Orders. The policy has been laid down by the Government under certain rules.

Sri V. N. PATIL.—What about the collection of Takavi loans ?

Sri H. V. KOUJALGI.—The Land Revenue Code is quite clear on it.

(*iii*) The detection of a Wireless Transmitter Russian Make at the Mangalore Railway Station.

Sri I. SOMASEKHARAPPA (Hosanagar).—I call the attention of the Chief Minister to the detection of a wireless transmitter (Russian make) at the Mangalore Railway Station.

Sri MANIK RAO PATIL (Deputy Minister. for Home).—Sir, it is reported that on 20th January 1970 at 5-30 P.M. the Railway Police, Mangalore, who were on the look-out for rice smuggling at the Railway Station found one Coolie of Mangalore Port in possession of a Set of Wireless Transmitter No. APK. 14-3-4649 (Russian Make) concealed in a box. He was arrested and a case in Cr. No. 13/70 under section 54-550 Cr.P.C. was registered against him. The Police are on the look-out for the two associates of the above said accused as they took to their heels at the time of arrest of the accused.

The investigation in the matter so far made, has disclosed that it is only a case of pilferage by the accused and his two associates from a Russian ship which docked in Mangalore Port in December 1969. The equipment that has been seized is only a part of a transmitting set and it cannot be put to use by itself. Further investigation continues.

[Mr. DEPUTY SPEAKER in the chair]

ಶ್ರೀ ಐ. ಸೋಮಶೇಖರಪ್ಪ.—ಆ ಕೂಲಿಯ ಹೆಸರು ಏನು ? ಈಗ ಅಲ್ಲಿ ಸಿಕ್ಕಿರತಕ್ಕ ಎಕ್ವಿಪ್‌ಮೆಂಟ್ ಏನಿದೆ ಅದನ್ನು ಸೀಜ್ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೋ ಹೇಗೆ ? ನಮ್ಮ ರಾಜ್ಯದಲ್ಲಿರತಕ್ಕ ಎಕ್ಸ್‌ಟ್ರಾ ಟೆರಿಟೋರಿಯಲ್ ಜನ ಏನು ಇದ್ದಾರೆ ಅವರದು ಇದರಲ್ಲಿ ಏನಾದರೂ ಕೈವಾಡ ಇದೆಯೋ ?

Sri MANIK RAO PATIL.—The name of the person from whom this part has been recovered is K. Prabhakaran, son of Challappan and the name of the other accused is Narayan. The name of the third person is not known. They were all coolies at bunder. Regarding the part which has been recovered, I can say that it is only a part of the transmitter. I do not know the exact name of it. Regarding the point whether the person had any extra-territorial loyalty, the investigation done so far discloses that no attempt has been made by any person having extra territorial loyalty.

Sri G. CHANDRAKANT.—Is it a fact that this was done through the members of Communist Party of India ?

Sri V. N. PATIL.—Sir, I take strong objection to this slanderous accusation of the Jan Sangh member. There should not be any accusation of the Communist Party. I want the member to withdraw it. We are not here to pocket such silly insults. He needs to be pulled up.

Mr. DEPUTY SPEAKER.— Order order.

(iv) *re* : **Strike by the President of the B.B.C. Aluminium factory works in Belgaum.**

Sri P. B. NANDIHALI.—I call the attention of the Minister for Law, Labour and Parliamentary Affairs to the hunger strike by Shri Ram Apte, the President of the Workers Union of B.B.C. (Alluminium factory), Belgaum.

Sri K. PUTTASWAMY (Minister for Law Labour and Parliamentary Affairs).—The Hon. Member has given Notice to call my attention to the hunger strike by Shri Ram Apte, the President of the Workers Union of B. B. C. Company Private Limited (Aluminium Factory) Belgaum along with other workers.

Messrs. Bengal Bihar Construction Co., (P) Ltd., having their Headquarters at Calcutta have undertaken the Plant Fabrication work of M/s. Indian Aluminium Co. Ltd., Belgaum. The work is going on since the middle of 1967 and is likely to be completed within the next 2—3 months. They are getting the work done through 8 sub-contractors and there are about 500 to 600 workers.

The President of the Engineering Foundry Kamgar Sangha, Belgaum, sent a charter of demands on 5th December 1969 to M/s Bengal Bihar Construction Co., Pvt., Ltd., and tothe 8 Sub-contractors demanding increase in wages, bonus, festival holidays, leave with wages etc. Since there was no response from the employers the workmen numbering about 150 went on strike with effect from 24th December 1969. Shri Ram Apte, President of the Union started hunger strike before the residence of Shri K. K. Das Gupta, Project Manager of Indian Alumium Co., Ltd., Belgaum. Some batches of striking workers were also made to resort to hunger strike.

Though the Union and the workers resorted to direct action without evolving the conciliation machinery, nevertheless the Conciliation Officer took up the dispute for conciliation. On 24th January 1970 a draft Settlement as suggested by the Deputy Labour Commissioner, Belgaum Division was agreed to both by the management and the workers. However, at the time of signing the Agreement the management raised objections for signing the Agreement by the two workers authorised by the President of the Engineering and Foundry Kamgar Sangha. The employers stated that they would have no objection to sign the Settlement with the five representatives duly elected by their workmen, as the Union had no locus standi and its representative character was doubtful.

The Conciliation Officer continued his efforts for getting the settlement signed both by the management and the workers. As per the telephonic message received on 31st January 1970, the dispute has been settled amicably and Shri Ram Apte has called off hunger strike. Now the Labour situation at Belgaum is peaceful.

Sri P. B. NANDIHALI.—It is stated that the dispute has been settled amicably and Sri Apte has called off the hunger strike. It is learnt that criminal cases have been filed against the workers. Now that the strike is amicably settled, may I request the Government to withdraw all cases against the workers ?

Sri K. PUTTASWAMY.—I do not know what the cases are and what offences were committed and what cases have been filed. As far as that matter is concerned, I think the Government will have to allow the law to take its own course.

(vi) *re* : Collection of Land Revenue at new rates in Tarikere

Sri HANJI SHIVANNA.—I call the attention of the Minister for Revenue to the collection of Land Revenue at new rates in Tarikere Taluk by coercive methods.

Sri H. V. KOUJALGI.—I am sorry. I request this may be taken up tomorrow.

Mr. DEPUTY SPEAKER.—Sri Arakeri to raise half an hour discussion.

Half-an-hour Discussion arising out of Replies given to Starred Question No. 524 *re* : formation of sites by the C.I.T.B. in the Rajamahal Extension.

Sri S. S. ARAKERI.—I raise a half an hour discussion on the points arising out of answers to starred question No. 165 (524) of Eleventh list regarding formation of sites by the City Improvement Trust Board on the land at Rajamahal Extension donated to late Dr. Ambedkar by the ex-Maharaja of Mysore.

I request Sri Siddaveerappa to speak on my behalf.

Sri K. PUTTASWAMY.—I have absolutely no objection. But according to rules Sri Arakeri has to speak and the hon. member Sri Siddaveerappa may obtain certain clarifications.

Sri H. SIDDAVEERAPPA.—I want your ruling. The Hon. Minister says I cannot do it. I am under the impression that although I am not one of the signatories I can speak ?

Mr. DEPUTY SPEAKER.—It is mentioned as Sri Arakeri and 22 others. I thought the hon Member is also one of the signatories. So he can speak. Any way this will not become a precedent.

6-30 P.M.

Sri H. SIDDAVEERAPPA.—Sir, this is a subject which should have alerted the Government of the day and they should have seen what the ramifications of it would be if the matter is known to the outside world. The fact is this. A piece of land in Palace Orchard measuring 5 acres and 244 square yards was donated by His Highness the Maharaja of Mysore to the late Dr. Ambedkar in view of his philanthropic work in view of his educational activities, in view of his great eminence as a patriot and as an Indian who drafted the Indian Constitution. His object was not to take it for his personal use, but to use that site for founding a Budhist society. This land today is worth not less than Rs 10 lakhs. One acre of land in Palace Orchard, very near Sir C. V. Raman's Institute is worth not less than Rs. 2 lakhs. This land was donated as a munificent donation by the owner of the property. What these people have done is most deplorable. No Government could have done this. Instead of encouraging Dr. Ambedkar or his successors to fulfil the desire with which he had taken that site, these gentlemen once tried to acquire that land on the ostensible plea that it was needed by the Government of India for having a Power Research Institute at Bangalore. The Government of India said : We do not want it." Probably, they knew that this was donated to Dr. Ambedkar for a laudable object. Then they seem to have acquired this land. All illegal notifications have been issued ; no notice has been served. I crave your indulgence to take you to what has happened here.

The preliminary notification is said to have been issued on 31st March 1959. In the official Gazette, On 7th May 1959 there is a record to show that they have complied with section 5 (a) of the Land Acquisition Act, but it has not been followed up and no notice has been served to the successors of Dr. Ambedkar. What all they have done is to issue the various notifications under various provisions like Sections 4, 5 (a), 6, 9 and 10 of the Land Acquisition Act, but no notice has been served on the persons or persons who are entitled to notice of these acquisition proceedings. These acquisition proceedings, in my humble opinion, are initiated with a view to deprive the owners of these lands. What they have done is this. Having said that all these notifications have been served, they have taken them as having been served and they have given an award. The award itself is dated 10th May 1960. The compensation that they have set apart for acquiring this 5 acres and 244 square yards is Rs. 33,650-89. The very same people who were prepared to give Ramapriya about Rs. 18 lakhs, an area much less than 5 acres, have set apart only Rs. 33,650-89 for this land of 5 acres and 244 square yards. This itself is sufficient to condemn these people and ask them to vacate. I ask a question to the Parliamentary Affairs Minister, if this land had belonged to any one of the dominant communities who have a voice in the administrative machinery of the country, would they have kept quiet, would they have allowed such a thing to happen and would they have been satisfied with this grand award of

(SRI H. SIDDAVEERAPPA)

Rs. 33,650-89? Simply because they are Dr. Ambedkar's successors, are you justified in taking away this land for this paltry sum? Simply because the hon. Members about 22 or 23 of them who are in this House including 2 of them who are adorning the Treasury Benches, slept over the whole thing, can this become just? Simply because they have not exercised their right, can this injustice be tolerated? After all, it is not their property; it is the property belonging to the Maharaja; the Maharaja was gracious enough to donate this land and these gentlemen non-chalantly say that they have acquired this property. Similarly, they have taken 14 sites belonging to the Maharaja without giving him a single paisa. They did not probably apply that test here. Mr. Subramanya was here as Minister when Palace Orchard was taken up. Then the Minister was entitled to have 14 sites for his personal use. All those 14 sites belonging to the Maharaja have been taken over by them. The poor Maharaja kept quiet because he did not like to complain. He said, "all right, let them do what they like".

In this case the land that was given was over 5 acres and these people have taken away all that land. Is it fair? Is it just? Is there rule of law? I really do not know how these hon. Members, 22 of them, kept quiet when such valuable land was taken away, snatched away from their hands. I feel it is a very grave injustice. I am requesting the Hon. Minister for Parliamentary Affairs, who is reputed for his impartiality and his fairmindedness not to proceed further with this acquisition. I want him not to get away with this land. I am told they are already marking sites so that they may distribute them amongst themselves or among those in whom they are interested. So I would request him not to proceed further with this acquisition. I would request him to see that the acquisition proceedings are quashed and that the amount that you have set apart for compensation is not taken away. And in order to do justice, give this land to the trustees of Dr. Ambedkar and let them do whatever they like provided the purpose for which the land was donated by the donor is fulfilled. I knew Dr. Ambedkar personally. He was one of our respected elders. I had occasion to stay with him for some period. He was one of those who fought fearlessly for the downtrodden, for those who are oppressed and suppressed in this country. In order to perpetuate the name of that great man I have suggested twice that his photo must adorn somewhere here in this Chamber area but they have not cared to do that. If they want to perpetuate his name in Bangalore, let them see that this acquisition of land which is said to have been completed, is quashed and the land is given back to those for whom it was meant.

† ಎಂ. ಎಚ್. ಜಯಪ್ರಕಾಶ ನಾರಾಯಣ್ (ಸಿರ್ಸಿ).—ಸ್ವಾಮಿ ಅಧ್ಯಕ್ಷರೇ, ರಾಜ ಮಹಲನಲ್ಲಿ 5 ಎಕರೆ ಭೂಮಿಯನ್ನು ಶ್ರೀಮಾನ್ ದಿವಂಗತ ಅಂಬೇಡ್ಕರ್ ಹೆಸರಿಗೆಕೊಟ್ಟಂತಹದ್ದರ ಮೇಲೆ ಈ ರಾಜ್ಯ ಸರ್ಕಾರದವರು ಒಂದು ದುರಂತ ನಾಟಕವನ್ನು ಆಡಿದ್ದಾರೆ. ಇದರಿಂದ

ನಿಮ್ನವರ್ಗ ಮತ್ತು ನಿಮ್ನ ಸಂಗಡದ 40 ಲಕ್ಷ ಜನರಿಗೆ ಮಾತ್ರವಲ್ಲದೆ, ರಾಷ್ಟ್ರದಲ್ಲಿರತಕ್ಕಂತಹ ಐದನೇ ಒಂದು ಭಾಗದ ಜನರಿಗೆ, ಈ ಒಂದು ದುರಂತ ನಾಟಕವನ್ನು ಆಡಿ ಈ ಜನರನ್ನು ಒಂದು ಕೊಲೆ ಮಾಡತಕ್ಕಂತಹ ಪರಿಸ್ಥಿತಿಯನ್ನು ತಂದಿದ್ದಾರೆ. ಈ ಮಹಾಪುರುಷನಿಗೆ, ಈ ರಾಷ್ಟ್ರ ಭಕ್ತನಿಗೆ, ಮತ್ತು ಆಧುನಿಕ ಮನು ಎನ್ನತಕ್ಕ ಮನುಷ್ಯನಿಗೆ ಮಹಾರಾಜರು ಯಾವ ಒಂದು ಉದ್ದೇಶಕ್ಕಾಗಿ ಈ ನಿವೇಶನವನ್ನು ಕೊಟ್ಟರೋ, ಅದನ್ನು ಆ ಒಂದು ಉದ್ದೇಶಕ್ಕಾಗಿ ಉಪಯೋಗಿಸದೆ ಹೋದರೆ, ಆ ಒಂದು ನೀತಿಯನ್ನು ಪಾಲಿಸದೇ ಹೋದರೆ, ಈ ಮನೆಯಲ್ಲಿರತಕ್ಕಂತಹ 31 ಜನ ನಿಮ್ನವರ್ಗದ ಪ್ರತಿನಿಧಿಗಳು ಏನಿದ್ದಾರೆ, ಅವರು ಈಗಿನಿಂದಲೇ ರಾಜಿನಾಮೆ ಕೊಡಬೇಕಾದ ಪರಿಸ್ಥಿತಿ ಬಂದು, 40 ಲಕ್ಷ ಜನರು ಇದಕ್ಕಾಗಿ ಒಂದು ಚಳವಳಿಯನ್ನೆ ಮಾಡಬೇಕಾಗುತ್ತದೆ.

ಅಧ್ಯಕ್ಷರೇ, 1926ರಲ್ಲಿ ಸುಲ್ತಾನ್‌ಪೇಟೆಯಲ್ಲಿ ಕೋಮುವಾರು ಗಲಾಟೆ ಆಯಿತು. ಇದು ಸಾಮಾನ್ಯ ವಿಷಯವೆಂದು ತಿಳಿದುಕೊಳ್ಳಬೇಡಿ. ನನ್ನ ಮಾನ್ಯ ಮಿತ್ರರು ಮತ್ತು ಹಿರಿಯರಾಗಿರತಕ್ಕ ಶ್ರೀ ಸಿದ್ಧವೀರಪ್ಪನವರು ಅಧಿಕಾರ ಬಲದಿಂದ ಎಷ್ಟರಮಟ್ಟಿಗೆ ಮೋಸವನ್ನು ಮಾಡಿ ಆಡಳಿತ ವರ್ಗ ಈ ಒಂದು ಸನ್ನಿವೇಶವನ್ನು ಹಾಳುಮಾಡಿದ್ದಾರೆಂದು ಹೇಳಿದ್ದಾರೆ. ಪ್ರಿಲಿಮಿನರಿ ನೋಟಿಫಿಕೇಷನ್ ಮಾಡುವಾಗ ಕೊಟ್ಟಿರತಕ್ಕ ನೋಟೀಸ್ ಯಾರಿಗೆ ! ಅಲ್ಲಿ ಬುದ್ಧಿಸ್ಟ್ಸ್ ಸೊಸೈಟಿ ಎಂದು ನ್ಯೂ ಡೆಲ್ಲಿಗೆ ಕೊಟಿದ್ದಾರೆಯೇ ಹೊರತು ಡಾ. ಅಂಬೇಡ್ಕರ್ ಸೊಸೈಟಿಗೆ ಎಂದು ಕೊಟ್ಟಿಲ್ಲ. ಅದನ್ನು ಮುಖ್ಯಮಂತ್ರಿಗಳು ಪರಿಶೀಲನೆಮಾಡಬಹುದು. 1955ರಲ್ಲಿ ಇದರ ಬಗ್ಗೆ ಪ್ರೊಸೀಡಿಂಗ್ಸ್ ಆಗಿದೆ. 1964ರಲ್ಲಿ ಬರೆದಂಥ ಪತ್ರಕ್ಕೆ ನೀವೇ ಉತ್ತರವನ್ನು ಕೊಟ್ಟಿದ್ದೀರಿ. ಇದನ್ನು ಕೇಂದ್ರ ಸರ್ಕಾರ ತೆಗೆದುಕೊಳ್ಳುವುದಿಲ್ಲ, ಅವರಿಗೆ ಬಿಟ್ಟುಕೊಡುತ್ತೇವೆ ಎಂದು ಹೇಳಿದ್ದೀರಿ. ಮೋಸದಿಂದ ಈ ಕೆಲಸ ನಡೆದಿದೆ. ಇದರಿಂದ ಇಡೀ ರಾಜ್ಯದ ಹರಿಜನ ಗಿರಿಜನರಿಗೆ ಮಾತ್ರವಲ್ಲ. ಬಡವರಿಗೆ ಕೂಲಿಗಾರರಿಗೆ ಮತ್ತು ನಿರ್ಗತಿಕರಿಗೆ ಅವಮಾನವಾಗಿದೆ. ರಾಷ್ಟ್ರದ ನಾಯಕರ ಭಾವಚಿತ್ರವನ್ನು ತುಳಿದರೆ ಎಷ್ಟು ಸಂಕಟವಾಗುತ್ತದೊ ಅದಕ್ಕಿಂತಲೂ ಹೆಚ್ಚಿನ ಸಂಕಟವಾಗತಕ್ಕ ಕಾರ್ಯವನ್ನು ಸರ್ಕಾರ ಮಾಡಿದೆ. ಅದನ್ನು ತಡೆಗಟ್ಟಬೇಕು. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಪರಿಶೀಲನೆಮಾಡಿ ಯಾವ ಒಂದು ಉದಾರ ಧ್ಯೇಯಕ್ಕಾಗಿ ನಿವೇಶನವನ್ನು ಕೊಟ್ಟರೋ ಅದಕ್ಕಾಗಿ ಅದನ್ನು ಉಪಯೋಗಿಸಿ ಸಾರ್ವಜನಿಕ ಸ್ಮಾರಕವಾಗಿ ಮಾಡಬೇಕೆಂದು ಈ ಸಭೆಯಲ್ಲಿ ಪ್ರಾರ್ಥನೆ ಮಾಡಿಕೊಂಡು, ಇದನ್ನು ಅಂಗೀಕರಿಸುವ ಬಗ್ಗೆ ಅಭಯ ಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri V. N. PATIL.—It is unfortunate that in this Gandhi centenary year, our so-called followers of Gandhi have not only forgotten the principles of Gandhiji but are saying quite contrary to what Gandhiji thought of doing.

Mr DEPUTY SPEAKER.—I want to know whether the hon. member has signed the adjournment motion.

Sri V. N. PATIL.—Yes, Sir.

Sri K. PUTTASWAMY.—I am on a point of order Sir. You may kindly read the rule. According to the rule only one member has to partcipate. After the Government's reply, the other members who have signed may obtain clarifications. The scope for discussion is very much limited. That is the spirit of the rule. If I tried to point out rules, because it does not suit the Hon. Members on the otherside, they find fault with me. If certain things are done in a formal way, they find fault and point out rules. If things of this nature come up, why should they not conform to the rule?

Sri V. N. PATIL.—The very purpose of acquiring this land is only for construction of some more houses. There is specific motive of the Government not to allow the Ambedkar Education Trust to come up. The aim of Dr. Ambedkar was that there should be fraternity among

(SRI V. N. PATIL)

all sections of the Nation. The teachings of Dr. Ambedkar was intolerable to the ruling class. The teachings of Dr. Ambedkar were vital. He did not belong merely to depressed class. He belonged to the entire Nation. What Dr. Ambedkar wanted to do has been frustrated by this Government. He wanted to do something here for the entire nation. He wanted to establish Budhist Society through which he wanted to establish equality and socialism. The acquiring of the land by Government shows the narrow outlook of the Government. Therefore it is necessary for the Government to see that the land is given to the Trust.

(Sri S. S. Arakeri Stood up to speak)

Mr. DEPUTY SPEAKER.—Members are allowed to ask some clarifications after the Minister gives his reply.

Sri S. S. ARAKERI.—I want to know whether the Minister has agreed to reply to all the clarifications.

Mr. DEPUTY SPEAKER.—Yes. I have asked him to do so. If the members go on disturbing the proceedings of the House, I will adjourn the House exact at 7 O' Clock.

Sri K. H. PATIL.—Sir, on several occassions time was extended. We are prepared to sit for some more time.

Mr. DEPUTY SPEAKER.—If the members do not want Minister's reply, I have no odjection. I will adjourn the House at 7 P. M.

Sri K. PRABHAKAR.—Sir, when I have raised the discussion, I have a right to speak.

ಶ್ರೀ ಎಸ್. ಎಸ್. ಅರಕೇರಿ.—ಪ್ರಜಾಪ್ರಭುತ್ವ ಹೆಸರಿನಲ್ಲಿ ಕೊಲೆ ನಡೆಯುತ್ತಿರುವಾಗ, ನನಗೆ ಸಹಿಸುವುದಕ್ಕಾಗುವುದಿಲ್ಲ. ನನಗೆ ಮಾತನಾಡಲು ಅವಕಾಶ ಕೊಡಬೇಕು.

Mr. DEPUTY SPEAKER.—Hon. Member Sri Jayaprakash Narayan has already spoken. This will be come a very bad precedent. The hon. Member may please resume his seat.

Sri M. S. KRISHNAN.—Sir, I rise to a point of order. Sir, Rule 322 says that any member may, with the consent of the Speaker, move that any rule may be suspended in its application to a particular motion. Since my friend Sri Arakeri has raised the discussion and he is actually concerned with the matter you could permit him to speak and then the Hon'ble Minister may reply. The rule may be supended.

Sri S. CHANDRAKANTH.—Sir, I appeal to you to kindly allow Sri Arakeri to speak for a few minutes.

ಶ್ರೀ ಕೆ. ಪ್ರಭಾಕರ್.—ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

Sri S. S. ARAKERI.—As a protest I walk out.

(Sri S. S. Arakeri withdrew)

Sri H. SIDDAVEERAPPA.—Hon. Member Sri Krishnan has moved for the suspension of the Rule. If you feel that he has not moved, I move that the relevant Rule may be suspended and the discussion permitted.

Mr. DEPUTY SPEAKER.—The question is :

"That Rule 49 be suspended and further discussion permitted ?"

HON'BLE MEMBERS.—Yes.

Mr. DEPUTY SPEAKER.—Rule 49 is suspended and further discussion is permitted.

7-00 P. M.

† **ಶ್ರೀ ಕೆ. ಪ್ರಭಾಕರ್.**—ಸ್ವಾಮಿ, ಇದಕ್ಕೆ ಸಂಬಂಧಪಟ್ಟಂತೆ ಎರಡು ವಿಚಾರಗಳನ್ನು ಹೇಳಬೇಕೆಂದು ಇದ್ದೇನೆ. 5 ಚಿಲ್ಲರೆ ಎಕರೆ ಜಮೀನನ್ನು ಹಿಂದಿನ ಮಹಾರಾಜರು ಒಂದು ಧರ್ಮ ಕಾರ್ಯಕ್ಕಾಗಿ ಕೊಟ್ಟಿದ್ದರು, ಅದನ್ನು ಮತ್ತೆ ಟ್ರಸ್ಟ್ ಬೋರ್ಡಿನವರು ಅಕ್ವೈರ್ ಮಾಡಿಕೊಂಡು ಬಿಟ್ಟಿದ್ದಾರೆ, ಅದನ್ನು ಮಾಡಬಾರದಾಗಿತ್ತು, ಇದು ಮೊದಲನೆಯ ಅನ್ಯಾಯ. ಡಾಕ್ಟರ್ ಅಂಬೇಡ್ಕರ್‌ರವರ ವ್ಯಕ್ತಿತ್ವ, ಅವರ ಹಿರಿಮೆ, ಕೀರ್ತಿ ವಿದ್ವತ್ತು, ಪಾಂಡಿತ್ಯ ಇದನ್ನೆಲ್ಲಾ ಹೇಳುತ್ತಾ ಹೋದರೆ ಗಂಟೆಗಟ್ಟಲೆ ಆದರೂ ಸಾಲುವುದಿಲ್ಲ. ಅದು ದೇಶಕ್ಕೆಲ್ಲಾ ಗೊತ್ತು. ಅದನ್ನು ಹೇಳುವುದರಿಂದ ಈಗ ಪ್ರಯೋಜನವಾಗುವುದಿಲ್ಲ. ಹಿಂದೆ ಇದ್ದ ಮಹಾರಾಜರು ಧರ್ಮಾತ್ಮರು, ಧರ್ಮ ಕಾರ್ಯಗಳಿಗೆ ಉಪಕಾರಮಾಡತಕ್ಕ ಮನೋಧರ್ಮವುಳ್ಳವರಾಗಿದ್ದರು. ಡಾಕ್ಟರ್ ಅಂಬೇಡ್ಕರ್‌ರವರಿಗೂ ಮತ್ತು ನಮ್ಮ ಮಹಾರಾಜರಿಗೂ ಇದ್ದಂಥ ಸ್ನೇಹದ ಸಲುವಾಗಿ ಡಾಕ್ಟರ್ ಅಂಬೇಡ್ಕರ್ ಅವರು ಗತಿಸಿದ ನಂತರ ಬುದ್ಧಿಸ್ಟ್ ಎಜ್ಯುಕೇಷನ್ ಸೊಸೈಟಿ ಅಂತ ಅನ್ನುವವರಿಗೆ ಆ ಜಾಗವನ್ನು ಡೊನೇಟ್ ಮಾಡಿದ್ದರು. ಹಾಗೇನಾದರೂ ಆ ಜಾಗ ಬೇಕಾಗಿದ್ದಲ್ಲಿ ಯಾರು ಅದನ್ನು ದಾನವಾಗಿ ಕೊಟ್ಟಿದ್ದರೋ ಅವರೇ ಅದನ್ನು ವಾಪಸು ತೆಗೆದುಕೊಳ್ಳಬಹುದಾಗಿತ್ತು. ಒಂದು ರೀತಿಯಲ್ಲಿ ಅದು ಸರಿ ಅಂತ ಒಪ್ಪಿಕೊಳ್ಳತಕ್ಕ ವಿಚಾರವಾಗಿದೆ. ಆದರೆ ಈಗ ಅಂತಹ ಕ್ರಮ ನಡೆದಿಲ್ಲ. ಅಕ್ವಿಸಿಷನ್ ಕ್ರಮ ನಡೆಸಿದ್ದಾರೆ. ದುಡ್ಡನ್ನು ತೆಗೆದು ಯಾವ ದಾನಿಗಳಿಗೆ ಕೊಟ್ಟಿದ್ದರೋ ಅವರ ಹೆಸರಿನಲ್ಲಿ ಎಂದರೆ ಬುದ್ಧಿಸ್ಟ್ ಎಜ್ಯುಕೇಶನ್ ಸೊಸೈಟಿಯವರ ಲೆಕ್ಕದಲ್ಲಿ ಇಟ್ಟಿದ್ದಾರೆ. ಇಲ್ಲಿ ಅನ್ಯಾಯವಾಗಿದೆ ಅಂತ ಭಾವಿಸತಕ್ಕ ಅಂಶ ಮೂರು ಇವೆ. ಒಂದನೆಯದು ಆ ಆಸ್ತಿಯನ್ನು ಅವರು ಅಕ್ವೈರ್ ಮಾಡಿಕೊಳ್ಳಬೇಕಾದ ಪ್ರಮೇಯವೇ ಇರಲಲ್ಲ. ಎರಡನೇಯದು ಇದು ಲಕ್ಷಾಂತರ ರೂಪಾಯಿ ಬೆಲೆ ಬಾಳತಕ್ಕ ಸ್ವತ್ತು, ಇದಕ್ಕೆ 33 ಸಾವಿರ ಚಿಲ್ಲರೆ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದು ಅನ್ಯಾಯ. ಟ್ರಸ್ಟ್ ಬೋರ್ಡಿನವರು ಆ ಆಸ್ತಿಗೆ ನಾರ್ಮಲ್ ಆಗಿ ನಿಗದಿ ಮಾಡತಕ್ಕ ರೇಟು ಎಕರೆಗೆ 12 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಇದೆ. ಆದ್ದರಿಂದ 60 ಸಾವಿರ ರೂಪಾಯಿಗಳನ್ನಾದರೂ ಕೊಡಬಹುದಾಗಿತ್ತು. ಹರಿಜನರನ್ನು ಇವತ್ತು ಯಾರೂ ಕೇಳುವವರೇ ಇಲ್ಲದಂತೆ ಆಗಿದೆ. ಈ ರೀತಿ ಮಾಡಿರತಕ್ಕದ್ದು ಧರ್ಮಕ್ಕೆ ವಿರುದ್ಧವಾದ ಕಾರ್ಯ, ಖಂಡಿತ ಇದು ತಪ್ಪು ಅಂತ ಹೇಳುವ ಧೈರ್ಯ ನಮಗೆ ಬರಬೇಕು. ಇಂತಹ ಕೆಚ್ಚು ನಮ್ಮಲ್ಲಿ ಅಡಗಿದೆ. ಅಂಬೇಡ್ಕರ್‌ರವರಿಗೆ ಕೊಟ್ಟಂಥ ಸ್ವತ್ತನ್ನು ಅಕ್ವೈರ್ ಮಾಡತಕ್ಕ ಸನ್ನಿವೇಶ ಏಕೆ ಬಂತು ಎಂದು ಪ್ರಶ್ನೆ ಮಾಡುತ್ತೇನೆ. ಪ್ಯಾಲೇಸ್ ಆರ್ಚರ್ಡ್‌ನಲ್ಲಿ ಸೈಟ್ ಎಲ್ಲಾ ಮುಗಿದುಹೋಯಿತು, ಡಾಕ್ಟರ್ ಅಂಬೇಡ್ಕರ್‌ರವರ ಪ್ರಾಪರ್ಟಿ ಒಂದು ಮಾತ್ರ ಇದೆ. ಅದನ್ನು ಅಕ್ವೈರ್ ಮಾಡಿಕೊಂಡರೆ ನಿಮಗೆಲ್ಲಾ ಸೈಟ್ ಕೊಡಬಹುದು ಅಂತ ಟ್ರಸ್ಟ್ ಬೋರ್ಡಿನವರು ಯಾರಾದರು ಪ್ರಭಾವಯುತ ಜನರಿಗೆ ಹೇಳಿರಬಹುದೋ ಏನೋ ಎಂದು ಶಂಕೆ ಬರುತ್ತದೆ. ಇಲ್ಲದೇ ಇದ್ದರೆ ಧರ್ಮವಾಗಿ ಕೊಟ್ಟ ಈ ಸ್ವತ್ತನ್ನು ಏಕೆ ಅಕ್ವೈರ್ ಮಾಡಿಕೊಳ್ಳುವುದಕ್ಕೆ ಹೋಗುತ್ತಾ ಇದ್ದರು? ಪ್ರಜಾಸರ್ಕಾರದಲ್ಲಿ ಒಬ್ಬರು ಮಾಡಿದ್ದನ್ನು ಇನ್ನೊಬ್ಬರು ಕಿತ್ತು ಹಾಕುತ್ತಾರೆ ಅಂತ ಹೇಳುವ ಭಾವನೆ ಜನರಲ್ಲಿ ಬರುತ್ತದೆ. ಇಂತಹ ಕಾರ್ಯಗಳನ್ನು ಮಾಡುವುದು ಸರಿಯಲ್ಲ ಎಂದು ನಾನು ಹೇಳುತ್ತೇನೆ. ಇದನ್ನು ನೋಡಿದರೆ ಧರ್ಮಾರ್ಥಕಾರ್ಯಗಳಿಗೆ ಬೆರಕೊಡತಕ್ಕ ಮನೋಧರ್ಮ ಸರ್ಕಾರಕ್ಕೆ ಹೋಗಿದೆ ಅಂತ ಅನ್ನುವುದಕ್ಕೆ ಇದು ಬೆಸ್ಟ್ ಎಂಕ್ಸಾಂಪಲ್ ಅಂತ ಇಟ್ಟುಕೊಳ್ಳಬಹುದು. ವ್ಯಕ್ತಿಗತವಾದ ಭಾವನೆಗಳನ್ನು ಇಟ್ಟುಕೊಂಡು ಕೆಲಸಕಾರ್ಯಗಳನ್ನು ಮಾಡತಕ್ಕ ಗೋಜಿಗೆ ಹೋಗಬಾರದು ಎಂದು

(ಶ್ರೀ ಕೆ. ಪ್ರಭಾಕರ್)

ಹೇಳುತ್ತೇನೆ. ಮೈಸೂರು ದೇಶದಲ್ಲಿ ಆ ಪ್ರಾಪರ್ಟಿ ಏಜೆಂಟ್ಸ್, ರೆಪ್ರಸೆಂಟೇಟೀವ್ಸ್ ಯಾರಿದ್ದಾರೋ ಅವರಿಗೂ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ನಡೆಸುತ್ತಾ ಇರತಕ್ಕವರಿಗೂ ಸ್ವಲ್ಪ ವಿರಸ ಇದೆ ಎಂದು ನನ್ನ ಭಾವನೆ. ಅದಕ್ಕೋಸ್ಕರವೇ ಈ ರೀತಿಯ ಒಂದು ಬೇರೆ ನಿಗದಿ ಮಾಡಿದ್ದಾರೆ ಎಂದು ನಾನು ಅಂದುಕೊಳ್ಳುತ್ತೇನೆ. ಧರ್ಮಾರ್ಥವಾಗಿ ಕೊಟ್ಟಂಥ ಒಂದು ಸ್ವತ್ತಿಗೆ ಕೈ ಹಾಕಿ ಈ ರೀತಿ ಯದ್ವಾತದ್ವಾ ಮಾಡತಕ್ಕ ಮನೋಧರ್ಮ ಹೋಗಬೇಕು ಅಂತ ಅನ್ನುವುದು ನನ್ನ ವಾದ. 33 ಸಾವಿರ ರೂಪಾಯಿ ಸಾಲದು ಎಂದರೆ ಒಂದು ಲಕ್ಷ ರೂಪಾಯಿ ಕೊಡಿ ಅಂತ ಹೇಳಿ ರಿವಿಜನ್‌ಗೆ ಹಾಕಿಕೊಳ್ಳಿ ಎಂದು ಹೇಳುವುದು ಸರಿಯಲ್ಲ. ಆ ಭೂಮಿಯನ್ನು ಆ ಸಂಸ್ಥೆಯವರಿಗೇ ರೆಸ್ಟೋರ್ ಮಾಡಬೇಕು ಮತ್ತು ಯಾವ ಒಂದು ಉದ್ದೇಶಕ್ಕಾಗಿ ಅದನ್ನು ಆ ಸಂಸ್ಥೆಯವರಿಗೆ ಕೊಡಲಾಗಿತ್ತೊ ಆ ಉದ್ದೇಶ ನೆರವೇರಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಅಧ್ಯಕ್ಷರೇ, ಮಾನ್ಯ ಸಭೆಯನ್ನು ಕೆಲವು ನಿಮಿಷಗಳು ಮುಂದುವರಿಸಿದ್ದರಿಂದ ನಾನು ಅಧ್ಯಕ್ಷರಿಗೆ ಮತ್ತು ಮಾನ್ಯ ಕೆ. ಪುಟ್ಟಸ್ವಾಮಿ, ಶ್ರೀ ಬಿ. ಎಂ. ಪಾಟೀಲ ಇವರು ಈರ್ವರು ಮಂತ್ರಿಗಳಿಗೆ ನಾನು ಆಭಾರ ಮನ್ನಿಸುತ್ತೇನೆ. ಮುಖ್ಯವಾಗಿ ಬಾಬಾ ಸಾಹೇಬರು ವಿಶ್ವ ವಿಖ್ಯಾತವಾದ ಬೌದ್ಧ ಇನ್‌ಸ್ಟಿಟ್ಯೂಷನ್ ಇಲ್ಲಿ ಮಾಡಬೇಕು ಎನ್ನುವಂಥ ಮಹಾ ಉದ್ದೇಶವನ್ನಿಟ್ಟುಕೊಂಡಿದ್ದರು. ಅದರ ಸಲುವಾಗಿ ಮೈಸೂರು ಮಹಾರಾಜರು ಭೂಮಿಯನ್ನು ಕೊಡ ಮಾಡಿದ್ದರಿಂದ ಅಂಥ ಪವಿತ್ರವಾದ ಈ ಸಂಸ್ಥೆಯನ್ನು ಕಟ್ಟಲು ಈ ಘನ ಸರ್ಕಾರದವರು ಸಹಾಯ ಮಾಡಬೇಕು, ಮತ್ತು ದೊಡ್ಡ ಮನಸ್ಸು ಮಾಡಬೇಕು ಅಂತಾ ವಿನಂತಿಯನ್ನು ಮಾಡಿಕೊಳ್ಳುತ್ತ ಎರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ.

1959ನೇ ಇಸವಿಯಲ್ಲಿ ಅಕ್ವಿಜಿಷನ್ ಮಾಡಿಕೊಂಡಿದ್ದಾರೆ, ಅಕ್ವಿಜಿಷನ್ ನೋಟೀಸ್ ಜಾರಿ ಆಗಿದೆ ಎಂದು ಸರಕಾರದವರು ಹೇಳುತ್ತಿದ್ದಾರೆ. ಅದು ಯಾರ ಮೇಲೆ ಜಾರಿ ಮಾಡಿದರು ಎನ್ನುವುದು ಬಹಳ ಮಹತ್ವದ ವಿಷಯ. ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ ನಿಯಮವನ್ನು ಸರ್ಕಾರ ಈ ವಿಷಯದಲ್ಲಿ ಉಲ್ಲಂಘನೆ ಮಾಡಿದೆ. ದಿಲ್ಲಿಯಲ್ಲಿ ಭೂದಾನ ಇನ್‌ಸ್ಟಿಟ್ಯೂಟಿಗೆ ಆ ನೋಟೀಸನ್ನು ಕಳುಹಿಸಿದರು. ಅದರೆ ಅದು ಅಂಬೇಡ್ಕರ ಭವನದ ಜವಾನನಿಗೆ ಜಾರಿ ಆಗಿದೆ, ಜವಾನ ಅದನ್ನು ತೆಗೆದುಕೊಂಡಿದ್ದಾನೆ. He is not a legally competent man to receive the notice. ಲೀಗಲ್ ಒಪಿನಿಯನ್ ತೆಗೆದುಕೊಂಡರೂ ಕೂಡ ನೋಟೀಸ್ ಯಾರಿಗೋ ಸರ್ವ್ ಮಾಡಿರುವುದು ಕ್ರಮಬದ್ಧವಾಗುವುದಿಲ್ಲ. ಬಾಬಾ ಸಾಹೇಬರು ಒಂದು ಮಹಾ ಉದ್ದೇಶವನ್ನು ಸಾಧನೆ ಮಾಡುವುದಕ್ಕಾಗಿ ಪಡೆದಿದ್ದ ಜಮೀನನ್ನು ಈದಿನ ಟ್ರಸ್ಟ್ ಬೋರ್ಡಿನವರು ಸೈಟುಗಳನ್ನು ಮಾಡುವುದಕ್ಕೆ ಅಕ್ವೈರ್ ಮಾಡಿ ಕೊಂಡಿರುವುದು ನಿಜವಾಗಿಯೂ ಬಹಳ ದುಃಖದ ವಿಷಯ.

ಡಾಕ್ಟರ್ ಅಂಬೇಡ್ಕರರು ತಮ್ಮ ಇಚ್ಛೆಯನ್ನು ಕಾರ್ಯಗತಮಾಡುವ ಮೊದಲೇ ತೀರಿಕೊಂಡರು. ಈಗ ಅವರ ಮಗ ಶ್ರೀ ಯಶವಂತರಾವ್ ಅಂಬೇಡ್ಕರ್ ಇದ್ದಾರೆ. He is the President of Buddhist Institute of India, Bombay. ಇದಲ್ಲದೆ ಪೀಪಲ್ಸ್ ಎಜುಕೇಷನ್ ಸೊಸೈಟಿ, ಬಾಂಬೆ, ಇಲ್ಲಿ ಒಂದು ಟ್ರಸ್ಟ್ ಇದೆ. ಈ ಜಮೀನು ಬುದ್ಧಿಸ್ಟ್ ಇನ್‌ಸ್ಟಿಟ್ಯೂಷನ್ನಿಗೆ ಕೊಡಬೇಕೆ ಅಥವಾ ಪೀಪಲ್ಸ್ ಎಜುಕೇಷನ್ ಸೊಸೈಟಿಯವರಿಗೆ ಕೊಡಬೇಕೇ, ಯಾರಿಗೆ ಕೊಡಬೇಕು ಎನ್ನುವ ವಿಚಾರ ನನಗೆ ಮುಖ್ಯವಿಲ್ಲ. ಇವರಲ್ಲಿ ಯಾರಿಗಾದರೂ ಕೊಡಬಹುದು. ಅದರೆ ಅದು ಡಾ. ಬಾಬ ಸಾಹೇಬರ Buddhist ಟ್ರಸ್ಟಾಗಿ ಉಳಿಯಬೇಕು.

ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯ ಮಂತ್ರಿಯವರಾಗಿದ್ದಾಗ 1964ನೆ ಇಸವಿಯಲ್ಲಿ ಅವರೇ ಅಲ್ಲಿ ಡಾಕ್ಟರ್ ಅಂಬೇಡ್ಕರ್ ಅವರ ಪ್ರಾಪರ್ಟಿ ಎಂದು ಬೋರ್ಡ್ ಹಾಕಿದ್ದರು. ನಿಜಲಿಂಗಪ್ಪನವರು ಜನನಾಯಕರು ಎಂದು ಹೇಳುವವರು, ಅವರ ಹೆಸರಿನಲ್ಲಿ ರಾಜ್ಯಭಾರ ಮಾಡುತ್ತಿರುವವರು, ಈಗ ಇಂಥ ಅನ್ಯಾಯ ಕೆಲಸವನ್ನು ಮಾಡಿರುವುದು ಎಂಥ ನ್ಯಾಯವೆಂದು ಕೇಳುತ್ತೇನೆ. ಡಾಕ್ಟರ್ ಅಂಬೇಡ್ಕರ್ ಅವರಿಗೆ ದಾನವಾಗಿ ಕೊಟ್ಟಿದ್ದ ಜಮೀನಿನಲ್ಲಿ ಈಗ ಸೈಟುಗಳನ್ನು ಮಾಡಿ ಕೆಲವು ಪೊಲಿಟಿಕಲ ಇಂಟರೆಸ್ಟೆಡ್ ಜನರಿಗೆ ಜಾಗ ಕೊಡಬೇಕು ಎನ್ನುವ ಉದ್ದೇಶದಿಂದ ಅಕ್ವೈರ್ ಮಾಡಿಕೊಂಡಿದ್ದಾರೆ. ಅಂತರರಾಷ್ಟ್ರೀಯ ವ್ಯಕ್ತಿಯ ಆಸ್ತಿಯನ್ನು ಕಾಂಗ್ರೆಸ್ಸಿನವರು ಹಂಚಿಕೊಂಡರೆ ಇನ್ನು ಅವರು ಮುಂದೆ ಭಿಕಾರಿಗಳು ಆಗುವರು ಎಂದು ಹೇಳುತ್ತೇನೆ.

ಮಾನ್ಯ ಮಂತ್ರಿಯವರಾದ ಬಿ. ಎಂ. ಪಾಟೀಲರು ಹರಿಜನರ ಬಗ್ಗೆ ಬಹಳ ಕಳಕಳಿ ಇರುವವರು. ಶ್ರೀಮಾನ್ ಕೆ. ಪುಟ್ಟಸ್ವಾಮಿಯವರೂ ಹರಿಜನರ ಬಗ್ಗೆ ಬಹಳ ಕಳಕಳಿಯಿಂದ ಇದ್ದಾರೆ.

ಅಕ್ವಿಜಿಷನ್ ಪ್ರೊಸೀಡಿಂಗ್ಸ್ ನಡೆದಿರುವುದು ಸರ್ಕಾರಕ್ಕೆ ಗೊತ್ತಿಲ್ಲವೆಂದೂ, ಈಗತಾನೇ ಗೊತ್ತಾಯಿತೆಂದೂ ಹೇಳುತ್ತಾರೆ. ಸರ್ಕಾರಕ್ಕೆ ತಿಳಿಯಲಾರದೆ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಹೇಗೆ ನಡೆಯಿತು. 1964ರಲ್ಲಿ ಈ ಜಮೀನಿನ ಅಕ್ವಿಜಿಷನ್ ಡ್ರಾಫ್ಟ್ ಮಾಡಿರುವ ಬಗ್ಗೆ ಸರ್ಕಾರದಿಂದ ಒಂದು ಎಂಡಾರ್ಸ್‌ಮೆಂಟ್ ಸಹ ಕೊಟ್ಟಿದ್ದಾರೆ. ಶ್ರೀ ಕೃಷ್ಣ ಅವರು ಟ್ರಸ್ಟ್ ಬೋರ್ಡಿನ ಛೇರ್‌ಮನ್ ಆಗಿದ್ದಾಗ್ಗೆ ಅವರೇ ಈ ಅನ್ಯಾಯ ಮಾಡಿದ್ದಾರೆ. ಈಗ ತಾನೇ ಅಕ್ವಿಜಿಷನ್ ನಡೆದಿರುವುದು ಗೊತ್ತಾಯಿತು ಎಂದು ಹೇಳಿದರೆ ಸರ್ಕಾರ ಇದೆಯೋ ಇಲ್ಲವೋ ಎಂದು ಸಂಬಂಧಪಟ್ಟ ಮಂತ್ರಿಗಳನ್ನು ಕೇಳುತ್ತೇನೆ. ಅದಕ್ಕಾಗಿ ನ್ಯಾಯ ದೊರಕಿಸಿ, ಮಂತ್ರಿಗಳು ಇದರ ಬಗ್ಗೆ ಅಭಯ ಕೊಡಬೇಕೆಂದು ಹೇಳುತ್ತ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಸ್ವಾಮಿ, ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಮೂಲ ಪ್ರಶ್ನೆಯಲ್ಲಿ (ಡಿ) ಭಾಗದಲ್ಲಿ whether it is a fact that the Chairman, City Imporvement Trust Board is trying to form sites in this land, the property of late Dr. Ambedkar ಎಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು 'Yes' ಎಂದು ಉತ್ತರ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಒಂದು ಅಂಶವನ್ನು ನಾನು ತಮ್ಮ ಮೂಲಕ ಸಭೆಯ ಮತ್ತು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ದಿವಂಗತ ಡಾಕ್ಟರ್ ಅಂಬೇಡ್ಕರ್ ಅವರು 1954ರಲ್ಲಿ ಬೆಂಗಳೂರಿಗೆ ಬಂದಾಗ ಶ್ರೀಮಾನ್ ಜಯಚಾಮರಾಜ ಒಡೆಯರ್ ಅವರನ್ನು ಭೇಟಿಯಾಗಿ ವಿಶ್ವದ ಎಲ್ಲ ಧರ್ಮಗಳನ್ನು ಬೋಧನೆ ಮಾಡತಕ್ಕ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡುತ್ತೇನೆ, ಅದರಲ್ಲಿ ಎಲ್ಲ ಧರ್ಮಗಳೂ ಬೋಧಿಸಲ್ಪಡಬೇಕು' ಹೆಚ್ಚಾಗಿ ಬೌದ್ಧ ಮತವನ್ನು ಪ್ರಚಾರ ಮಾಡಲು ಅವಕಾಶವಾಗತಕ್ಕ ಒಂದು ಸಂಸ್ಥೆಯನ್ನು ಮಾಡತಕ್ಕುದು ನನ್ನ ಉದ್ದೇಶ, ತಾವು ಜಮೀನನ್ನು ಕೊಡಬೇಕು ಎಂದು ಕೇಳಿದಾಗ ಜಯಚಾಮರಾಜ ಒಡೆಯರ್ ಅವರು ಈ ಭೂಮಿಯನ್ನು ಡಾಕ್ಟರ್ ಬಾಬಾಸಾಹೇಬರಿಗೆ ಕೊಟ್ಟಿದ್ದಾರೆ. ಡಾಕ್ಟರ್ ಅಂಬೇಡ್ಕರ್ ಅವರು ಒಂದು ಸಂಸ್ಥೆಯನ್ನು ಮಾಡುವುದಕ್ಕೆ ಟ್ರಸ್ಟ್ ಮಾಡಬೇಕೆಂದು ಇದ್ದ ಸಮಯದಲ್ಲಿ ಅವರು ತೀರಿ ಹೋದರು. ಆದ್ದರಿಂದ ಅವರ ಉದ್ದೇಶ ಈಡೇರದೆ ಹಾಗೆಯೇ ಉಳಿದಿದೆ. ಬೆಂಗಳೂರಿನಲ್ಲಿ ಒಂದು ಸಂಸ್ಥೆಯನ್ನು ಮಾಡಿ ಎಲ್ಲ ಧರ್ಮಗಳನ್ನೂ ಬೋಧಿಸಲು ಅವಕಾಶ ಮಾಡಬೇಕು ಎನ್ನುವ ಉದ್ದೇಶ ಡಾಕ್ಟರ್ ಅಂಬೇಡ್ಕರ್ ಅವರದು ಇತ್ತು. ಅದನ್ನು ನೆರವೇರಿಸಬೇಕು ಎನ್ನುವ ಅಭಿಪ್ರಾಯವನ್ನು ಬೊಂಬಾಯಿ ಪೀಪರ್ಸ್ ಎಜುಕೇಷನ್ ಸೊಸೈಟಿಯವರು ಇಟ್ಟುಕೊಂಡಿದ್ದಾರೆ. ಆದರೆ ಟ್ರಸ್ಟ್ ಬೋರ್ಡಿನವರ ಕಣ್ಣು ಈ ಜಾಗದ ಮೇಲೆ ಏಕೆ ಬಿತ್ತೋ ಗೊತ್ತಿಲ್ಲ. ಈ ಜಾಗ ಡಾಕ್ಟರ್ ಅಂಬೇಡ್ಕರ್ ಅವರಿಗಾಗಲೀ, ಅಥವಾ ಅವರ ಮಕ್ಕಳಿಗಾಗಲೀ ಅಥವಾ ಮೈಸೂರು ರಾಜ್ಯದಲ್ಲಿರುವ ಹರಿಜನರಿಗಾಗಲೀ ಸೇರುವುದಿಲ್ಲ. ಇದು ಒಂದು ಸಂಸ್ಥೆಗೆ ಸೇರುವುದಾಗಿದೆ. ಆ ಸಂಸ್ಥೆಯಲ್ಲಿ ಎಲ್ಲ ಧರ್ಮಗಳನ್ನೂ ಬೋಧನೆ ಮಾಡತಕ್ಕ ವ್ಯವಸ್ಥೆಯಾಗುತ್ತದೆ. ಹೆಚ್ಚಾಗಿ ಬೌದ್ಧ ಮತವನ್ನು ಶಾಸ್ತ್ರೀಯವಾಗಿ ತಿಳಿಸತಕ್ಕ ವ್ಯವಸ್ಥೆ ಮಾಡಬೇಕು ಎನ್ನುವುದು ದಿವಂಗತ ಅಂಬೇಡ್ಕರ್ ಅವರ ಉದ್ದೇಶವಾಗಿತ್ತು. ಅದು ನೆರವೇರಬೇಕು ಎನ್ನುವ ಉದ್ದೇಶವಿದ್ದರೆ ಟ್ರಸ್ಟ್ ಬೋರ್ಡಿನವರು ಅಕ್ವಿಜಿಷನ್ ಹಿಂದಕ್ಕೆ ತೆಗೆದುಕೊಂಡು ಜಮೀನನ್ನು ಆ ಸಂಸ್ಥೆಗೆ ವಾಪಸು ಕೊಡುವುದಕ್ಕೆ ಸಾಧ್ಯವಿದೆ. ಟ್ರಸ್ಟ್ ಬೋರ್ಡ್ ಆಕ್ಟಿನ 48ನೇ ಸೆಕ್ಷನ್ ಪ್ರಕಾರ ಅಥವಾ ಟ್ರಸ್ಟ್ ಬೋರ್ಡ್ ಯಾವುದೇ ಕಾಲದಲ್ಲಿ ಅಕ್ವೈರ್ ಆಗಿರತಕ್ಕುದನ್ನು ವಿತ್‌ಡ್ರಾ ಮಾಡಿ ಪುನಃ ಅದರ ಮಾಲೀಕರಿಗೆ ಸ್ವಾಧೀನಕ್ಕೆ ಕೊಡಲು ಸಾಧ್ಯವಿದೆ.

ಮೇಲಾಗಿ ಮಾನ್ಯ ಅರಕೇರಿ ಅವರು ಹೇಳಿದ ಹಾಗೆ ಲೀಗಲ್ ಕಾಂಪ್ಲಿಕೇಷನ್ಸ್ ಬಹಳವಿವೆ. ಯಾರಿಗೆ ನೋಟೀಸ್ ಸರ್ವ್ ಆಗಬೇಕಾಗಿತ್ತೋ ಅವರಿಗೆ ಆಗಿಲ್ಲ. ಮೈಸೂರು ರಾಜ್ಯದಲ್ಲಿರತಕ್ಕ 42 ಲಕ್ಷ ಹರಿಜನರಿಗೆ ಈ ಆಸ್ತಿ ಹೋಗುತ್ತದೆ ಎಂದು ಯಾರೂ ತಿಳಿಯಬಾರದು. ಇದು ಒಂದು ಸಂಸ್ಥೆಗೆ ಉಳಿಯುತ್ತದೆ. ಒಂದು ವೇಳೆ ಸರ್ಕಾರ ತಪ್ಪು ಮಾಡಿದ್ದರೆ ಅಪಖ್ಯಾತಿಗೆ ಗುರಿಯಾಗುತ್ತದೆ. ಯಾವುದೇ ಸಂಘ ಸಂಸ್ಥೆಗಳಿಗೆ ಸೇರಿದಂಥ ಜಾಗಗಳನ್ನು ಇಲ್ಲಿಯವರೆಗೂ ಕೂಡ ಸರ್ಕಾರ ಅಕ್ವೈರ್ ಮಾಡಿಕೊಂಡಿಲ್ಲ. ಶಂಕರಾಚಾರ್ಯರಿಗೆ ಸೇರಿದ್ದು, ಮುಸಲ್ಮಾನರಿಗೆ ಸೇರಿದ್ದು, ಕ್ರಿಶ್ಚಿಯನ್ನರಿಗೆ ಸೇರಿದ್ದು ಅಥವಾ ಬೇರೆ ಯಾರಿಗೆ ಸೇರಿದ್ದು ಆಗಲಿ, ಗೊತ್ತಿದ್ದೂ, ಗೊತ್ತಿದ್ದೂ ಬುದ್ಧಿಪೂರ್ವಕವಾಗಿ ಅಕ್ವೈರ್ ಮಾಡಿಕೊಂಡಿಲ್ಲ. ಒಂದು ವೇಳೆ ಈ ಜಮೀನನ್ನು ಅಕ್ವೈರ್ ಮಾಡುವುದಾದರೆ ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಇದು ಸರ್ಕಾರಕ್ಕೆ ಯಾವ ವಿಧವಾದ ಗೌರವವನ್ನೂ ತರತಕ್ಕುದಲ್ಲ. ಈಗಲಾದರೂ ಕಾಲ ಮಿಂಚಿ ಹೋಗಿಲ್ಲ. ದಯಮಾಡಿ ಸರ್ಕಾರ

(ಶ್ರೀ ಕೆ. ಹೆಚ್. ರಂಗನಾಥ್)

ದವರು, ಈ ವಿಚಾರದಲ್ಲಿ ಟ್ರಸ್ಟ್ ಬೋರ್ಡಿನವರು ಮಾಡಿರತಕ್ಕ ಅಕ್ವಿಜಿಷನ್‌ನ್ನು ವಿತ್‌ಡ್ರಾ ಮಾಡಿ, ಜಮೀನನ್ನು ಈ ಒಂದು ಸಂಸ್ಥೆಯ ಸ್ವಾಧೀನಕ್ಕೆ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಈಗ ಇನ್ನೊಂದು ನೋವಾಗುವುದಕ್ಕೆ ಅವಕಾಶ ಮಾಡಿದ್ದಾರೆ ಆ ನೋವು ಆಗದ ಹಾಗೆ ಅದನ್ನು ನಿವಾರಣೆ ಮಾಡಬೇಕೆಂದು ನಾನು ಸರ್ಕಾರವನ್ನು ತಮ್ಮ ಮೂಲಕ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ ನ್ಯಾಯ ಧರ್ಮ ಎಲ್ಲರಿಗೂ ಸಂಬಂಧಪಟ್ಟ ವಿಷಯ, ಇದು ಸಾರ್ವಜನಿಕರಿಗೆ ಸಂಬಂಧಪಟ್ಟ ವಿಷಯವಾಗಿದೆಯೇ ಹೊರತು ಕೇವಲ ಹರಿಜನ ಗಿರಿಜನರಿಗೆ ಸಂಬಂಧಪಟ್ಟದ್ದಲ್ಲ. ಇದು ಪ್ರಪಂಚದಲ್ಲಿಯ ಸರ್ವ ಧರ್ಮ ಸಂಸ್ಥೆಯಾಗಿದೆ ಎನ್ನುವುದು ಸ್ಪಷ್ಟವಾಗಿದೆ. ಅಕ್ವಾಯರ್ ಮಾಡುವುದಕ್ಕೆ ಸರಕಾರಕ್ಕೆ ಅಧಿಕಾರ ಇದೆ. ಆದರೆ ಈ ಸಂದರ್ಭದಲ್ಲಿ ಇದು ನ್ಯಾಯವೇ? ಧರ್ಮವೇ? ಆಳುವ ಮಹಾ ಸ್ವಾಮಿಗಳವರ ದಾನಕ್ಕೂ ಕೂಡ ಅಪಚಾರ ಮಾಡಿದಂತಾಗುತ್ತದೆ, ಅಂಬೇಡ್ಕರ್ ಸಂಸ್ಥೆಗೆ ಅಗೌರವ ಸೂಚಿಸಿದಂತಾಗುತ್ತದೆ. ಆದುದರಿಂದ ಇದು ನ್ಯಾಯವಲ್ಲ, ಧರ್ಮವಲ್ಲ. ಇದರಿಂದ ಸಾರ್ವಜನಿಕರು ಸಂತೋಷಪಡುವುದಿಲ್ಲ. ದಯವಿಟ್ಟು ವಿಶಾಲ ಹೃದಯದಿಂದ ಅಕ್ವಾಯರ್ ಮಾಡಿರುವುದನ್ನು ರದ್ದು ಪಡಿಸಿ, ಈ ಸಂಸ್ಥೆಯನ್ನು ಉಳಿಸಬೇಕು. ಇದೊಂದು ಸಾರ್ವಜನಿಕ ಸಂಸ್ಥೆ ಎಂದು ಭಾವಿಸಿ, ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳು ಬಡವರಿಗೆ ಸಹಕಾರ ನೀಡುತ್ತೇವೆ, ಅವರ ಉದ್ಧಾರ ಆಗುವುದಕ್ಕೆ ಸಹಾಯ ಮಾಡುತ್ತೇವೆ ಎಂದು ಭರವಸೆ ಕೊಟ್ಟು ಸೂಕ್ತವಾದ ರೀತಿಯಲ್ಲಿ ವರ್ತಿಸಲಿ ಎಂದು ಕೇಳಿಕೊಳ್ಳುತ್ತೇನೆ.

† ಶ್ರೀ ಬಿ. ಎಂ. ಪಾಟೀಲ್ (ನಗರಾಡಳಿತ ಶಾಖೆಯ ರಾಜ್ಯ ಮಂತ್ರಿಗಳು).—ಸನ್ಮಾನ್ಯ ಸಭಾಪತಿಗಳೇ, ಅರ್ಧ ಗಂಟೆಯ ಚರ್ಚೆಯಲ್ಲಿ ಭಾಗ ವಹಿಸಿದ ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಶ್ರೀ ಸಿದ್ಧವೀರಪ್ಪನವರು ಇನ್ನಿತರ ಸನ್ಮಾನ್ಯ ಮಿತ್ರರು ಅನೇಕರು ಮಾತನಾಡಿದ್ದಾರೆ. ಶ್ರೀಮಾನ್ ಸಿದ್ಧವೀರಪ್ಪನವರು ಮಾತನಾಡುವಾಗ ಡಾಕ್ಟರ್ ಅಂಬೇಡಕರ್ ಅವರ ವ್ಯಕ್ತಿತ್ವ, ವೈಶಾಲ್ಯ ಘನತೆ. ಹಿರಿಮೆ ಬಗ್ಗೆ ಮಾತನಾಡಿದ್ದಾರೆ. ಅದಷ್ಟೂ ಅಪ್ರಸ್ತುತ, ಅದರ ಬಗ್ಗೆ ನಾನು ಈಗ ಹೇಳಲಾರೆ. ಆದರೆ ಒಂದು ಮಾತು ಮಾತ್ರ ಹೇಳಲು ನಾನು ಇಷ್ಟಪಡುತ್ತೇನೆ. ಅದೇನೆಂದರೆ ಇಲ್ಲಿಯವರೆಗೆ ವಿರೋಧ ಪಕ್ಷದ ನಾಯಕರಾಗಲಿ ಇನ್ನಿತರ ಸನ್ಮಾನ್ಯ ಮಿತ್ರರಾಗಲಿ, ಅವರೆಲ್ಲರಿಗೂ ಡಾಕ್ಟರ್ ಅಂಬೇಡ್ಕರರ ವ್ಯಕ್ತಿತ್ವದ ಬಗ್ಗೆ ಎಷ್ಟೊಂದು ಅಭಿಮಾನ ಗೌರವ ಇದೆಯೋ ಅಷ್ಟೇ ಅಭಿಮಾನ ಗೌರವ ನಮಗೆಲ್ಲರಿಗೂ ಇದೆ ಎಂದು ನಾನು ಅವರಿಗೆ ಹೇಳುತ್ತೇನೆ. ಈಗ ಈ ಪ್ರಶ್ನೆಗೆ ಸಂಬಂಧಪಟ್ಟಂಥ ಅನೇಕ ಮಾತುಗಳನ್ನು ಆಡಿದ ಮಾನ್ಯ ಮಿತ್ರರು ವಿವರವಾಗಿ ಹೇಳಿರುವುದು ಅಷ್ಟೊಂದು ಸರಿಯಾದ ಮಾತಲ್ಲ ಎಂಬ ಭಾವನೆ ಬರುತ್ತದೆ. ಇನ್ನೊಂದು ಮಾತು ಹೇಳುತ್ತೇನೆ. ಹೆಸರಾಂತ ರಾಜಕೀಯ ಶಾಸನ ತಜ್ಞರಾದ ಹೆರಾಲ್ಡ್ ಲಾಸ್ಕೀಯವರು ಒಂದು ಮಾತು ಹೇಳಿದರು.

> "Whatever has been achieved by the art of education in the nineteenth century is being effaced and undone by the art of propaganda in the twentieth century. It is one thing to persuade a fellow man by deafening noise and another thing to educate him to make him ponder and take decisions democratically."

ಆ ಮಾತು ಈ ದಿವಸ ನೆನಪಾಗುತ್ತಿದೆ. ವಿರೋಧ ಪಕ್ಷದ ನಾಯಕರು ಯಾವ ದೃಷ್ಟಿಯಿಂದ ಈ ಒಂದು ಸಮಸ್ಯೆಯನ್ನು ನೋಡುತ್ತಾರೋ ನನಗೆ ತಿಳಿದಿಲ್ಲ. ಪ್ರತಿಯೊಂದಕ್ಕೂ ಬೇರೆ ಬೇರೆ ದೃಷ್ಟಿಕೋಣ ಇರುತ್ತದೆ. ಇದನ್ನು ರಾಜಕೀಯವಾಗಿ ನೋಡಬಾರದು ಎಂದು ಈ ದಿನ ಅವರನ್ನು ಕೇಳಿಕೊಳ್ಳುತ್ತೇವೆ. ಈ ಒಂದು ಭೂಮಿ ಯಾವಾಗ ಅಕ್ವಾಯರ್ ಆಯಿತು, ಸರಕಾರ ಹಿಂದುಳಿದವರ ಸಲುವಾಗಿ, ಹರಿಜನರ ಸಲುವಾಗಿ ಸಹಾನುಭೂತಿ ಇಲ್ಲವೇನೋ ಎನ್ನುವ ಭಾವನೆ ಜನತೆಯಲ್ಲಿ ಮೂಡುವ ಹಾಗೆ, ಅದೇ ರೀತಿ ಸಾರ್ವಜನಿಕ ಅಭಿಪ್ರಾಯ ತಪ್ಪು ದಿಕ್ಕಿಯಲ್ಲಿ ಬರುವ ಹಾಗೆ ಮತ್ತು ಅವರ ಮನಸ್ಸನ್ನು ಬೇರೆ ದಿಶೆಯಲ್ಲಿ ಎಳೆದುಕೊಂಡು ಹೋಗುವ ಹಾಗೆ ಮಾನ್ಯ ಸದಸ್ಯರಿಂದ ಮಾತು ಬರಬಾರದಾಗಿತ್ತು ಎಂದು ನಾನು ತಿಳಿದುಕೊಂಡಿದ್ದೇನೆ. ಈ ಅಕ್ವಿಜಿಷನ್ ನಡೆದದ್ದು ಸುಮಾರು 10 ವರ್ಷಗಳ ಹಿಂದೆ. 1959-60 ರಲ್ಲಿ ಅಕ್ವಿಜಿಷನ್ ಪೂರ್ತಿಯಾಗಿ ಮುಗಿದು ಹೋಗಿದೆ. ಆಗ ಸರಕಾರದಲ್ಲಿ ಮಂತ್ರಿಗಳು ಯಾರು ಇದ್ದರು? ಮಾನ್ಯ ಸದಸ್ಯರಾದ ಪ್ರಭಾಕರ್ ಅವರು ಈ ಬಗ್ಗೆ

ಈಗಾಗಲೇ ಮಾತನಾಡಿದ್ದಾರೆ. ಈ ಸ್ಥಳ ಗಿಫ್ಟ್ ಡೀಡ್ ಪ್ರಕಾರ ಅಂಬೇಡ್ಕರ ಅವರಿಗೆ ಕೊಟ್ಟ ನಂತರ, ಈ ಬಗ್ಗೆ ದೂರು ಹೋದ ನಂತರ ಹಕ್ಕುದಾರರು ಯಾರು ಎನ್ನುವ ವಿವಾದ ಸಿವಿಲ್ ಕೋರ್ಟಿನಲ್ಲಿ ನಡೆಯುತ್ತಿದೆ ಅಷ್ಟು ಮಾತ್ರ ಹೇಳಲು ಇಚ್ಛೆಪಡುತ್ತೇನೆ. ಶ್ರೀಮಾನ್ ಪ್ರಭಾಕರ್ ಅವರು ಈ ಭೂಮಿ ಎಜ್ಯುಕೇಷನ್ ಸೊಸೈಟಿಯದು, ಅವರು ಹಕ್ಕುದಾರರು ಅವರಿಗೆ ಸೇರುತ್ತದೆಂದು ಹೇಳಿದರು. ಆದರೆ ಶ್ರೀ ಅರಕೇರಿಯವರು ಈ ಭೂಮಿ ಆ ಬುದ್ಧಿಸ್ಟ್ ಇನ್‌ಸ್ಟಿಟ್ಯೂಷನ್ನಿಗೆ ಕೊಡಬೇಕು, ಈ ಸಂಸ್ಥೆಯ ಹಕ್ಕುದಾರರು ಅವರಿಗೆ ಸೇರಿದ್ದು ಈ ಭೂಮಿ ಅವರಿಗೆ ಹೋಗಬೇಕು, ಎಂದು ಹೇಳಿದ್ದಾರೆ. ಇದನ್ನು ಹೇಳಿದ ಮಾನ್ಯ ಮಿತ್ರರು ಯಾರೇ ಇರಲಿ, ಇದರಲ್ಲಿ ವಿವಾದ ಇದೆ. ಈ ವಿವಾದ ಕೋರ್ಟಿನಲ್ಲಿ ನಡೆಯುತ್ತಿದೆ.

ನಾನು ಈಗಾಗಲೇ ಹೇಳಿದ್ದೇನೆ. 1954 ರಲ್ಲಿ ಮೈಸೂರು ಮಹಾರಾಜರವರು ಒಂದು ಗಿಫ್ಟ್ ಡೀಡ್ ಮಾಡಿ ಬುದ್ಧಿಯಿಸ್ಟ್ ಇನ್‌ಸ್ಟಿಟ್ಯೂಷನ್ನಿಗೆ ಕೊಟ್ಟಿದ್ದರು. ಶ್ರೀ ಅಂಬೇಡ್ಕರರು ಅದರ ಪ್ರತಿನಿಧಿಯಾಗಿದ್ದರು. 1959-60 ರಲ್ಲಿ ಅಕ್ವಿಜಿಷನ್ ಕಾರ್ಯ ಪೂರ್ತಿಯಾದ ನಂತರ ಅದನ್ನು ತೆಗೆದುಕೊಳ್ಳುವ ಅಧಿಕಾರ ಟ್ರಸ್ಟ್ ಬೋರ್ಡಿಗೆ ಕೊಟ್ಟಿದ್ದಾರೆ. ಇದರಿಂದ ಸರಕಾರಕ್ಕೂ ಟ್ರಸ್ಟ್ ಬೋರ್ಡಿಗೂ ಯಾವ ಸಂಬಂಧ ಇದೆ ಎನ್ನುವುದು ಗೊತ್ತಾಗುತ್ತದೆ. ಅಕ್ವಿಜಿಷನ್ ಸರಕಾರ ಮಾಡುವುದಿಲ್ಲ, ಇದು ಟ್ರಸ್ಟ್ ಬೋರ್ಡ್ ಕೆಲಸ. ಲ್ಯಾಂಡ್ ಅಕ್ವಿಜಿಷನ್ ಅಕ್ಟ್ ಪ್ರಕಾರ ಯಾವ ಯಾವ ಪ್ರೊಸೀಜರ್‌ನ್ನು ಯಾವ ಯಾವ ಪ್ರೋಗ್ರಾಂನ್ನು ಅನುಸರಿಸಬೇಕು ಅಥವಾ ಬಿಡಬೇಕು ಎನ್ನುವುದು ಲ್ಯಾಂಡ್ ಅಕ್ವಿಜಿಷನ್ ಆಫೀಸರಿಗೆ ಸಂಬಂಧಪಟ್ಟ ವಿಷಯ. ಆಫೀಸರು ಅವಾರ್ಡ್ ಕೊಟ್ಟ ನಂತರ ಅದನ್ನು ಚಾಲೆಂಜ್ ಮಾಡಲು ಕೋರ್ಟಿಗೆ ಹೋಗಬೇಕು ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ ಎಂದು ನಾನು ಭಾವಿಸಿದ್ದೇನೆ ಟ್ರಸ್ಟ್ ಬೋರ್ಡ್ ಕ್ರಮ ಕೈಕೊಳ್ಳುವಾಗ ಅದು ಸರಕಾರದ ತಪ್ಪು ಆಗುವುದಿಲ್ಲ. ಒಂದು ಯೋಜನೆ ಮಂಜೂರು ಆದ ಮೇಲೆ ಅದರ ವ್ಯವಹಾರವನ್ನು ಕಾರ್ಯರೂಪಕ್ಕೆ ತರುವುದನ್ನು ಸರಕಾರ ನಡೆಸುವುದಿಲ್ಲ. ಟ್ರಸ್ಟ್ ಬೋರ್ಡಿಗೆ ಸಂಪೂರ್ಣವಾಗಿ ಅಧಿಕಾರ ಇದೆ. 1960 ರಲ್ಲಿ ಅದು ಮುಗಿದು ಹೋಗಿದೆ. ಸರಕಾರಕ್ಕೆ ಇದು ಸಂಬಂಧಪಟ್ಟಿದ್ದು ಅಲ್ಲ ಎಂದು ಹೇಳಬಯಸುತ್ತೇನೆ.

7-30 P.M.

ಶ್ರೀ ಕೆ. ಹೆಚ್. ರಂಗನಾಥ್.—ಸರ್ಕಾರ ಎಂದರೆ ತಮ್ಮ ನೇತೃತ್ವದಲ್ಲಿ ನಡೆಯುತ್ತಾ ಇರತಕ್ಕಂಥ ಸರಕಾರ ಅಂತಲ್ಲ. ಯಾರು ಇದ್ದರೂ ಅದು ಕಂಟಿನ್ಯೂಯಿಂಗ್ ಬಾಡಿ.

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸಿದ್ಧವೀರಪ್ಪನವರು ಮಾತನಾಡುವಾಗ ಹೇಳಿದರು ನಾವು ಇದನ್ನು ಮಾಡುತ್ತಿದ್ದೇವೆ ಎಂದು ಇದರಲ್ಲಿ ನಿಜವಾದ ಸಂಗತಿ ಏನು ಎನ್ನುವುದನ್ನು ತಿಳಿದುಕೊಳ್ಳಲಿ ಎಂದು ಹೇಳುತ್ತೇನೆ. ನನಗೆ ತಿಳಿದಮಟ್ಟಿಗೆ ಮಾನ್ಯ ಬಸವಲಿಂಗಪ್ಪನವರು ಆಗಿನ ಸರ್ಕಾರದಲ್ಲಿ ಇದ್ದಿರಬೇಕು. ಆದುದರಿಂದ ಟ್ರಸ್ಟ್ ಬೋರ್ಡ್ ಒಂದು ಸ್ಟ್ಯಾಚ್ಯೂಟರಿ ಬಾಡಿ. ಟ್ರಸ್ಟ್‌ಬೋರ್ಡ್ ಮಾಡುವ ಕೆಲಸದಲ್ಲಿ ಸರ್ಕಾರ ಯಾವ ರೀತಿಯಿಂದಲೂ ಹಸ್ತಕ್ಷೇಪ ಮಾಡಿಲ್ಲ. ಟ್ರಸ್ಟ್ ಬೋರ್ಡ್‌ಗೆ ಯಾವ ಸೂಚನೆಯನ್ನೂ ಮಾಡಿಲ್ಲ. ಮತ್ತು ಯಾವ ಆದೇಶವನ್ನೂ ಕೊಟ್ಟಿಲ್ಲ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಶ್ರೀ ಎಂ. ಹೆಚ್. ಜಯಪ್ರಕಾಶ್‌ನಾರಾಯಣ್.—1964 ರಲ್ಲಿ ಲೆಟರ್ ಏನು ಇದೆ ಅದನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು 1964 ರಲ್ಲಿ ಲೆಟರ್ ಏನು ಇದೆ ಎಂದು ಹೇಳಿದರು. ಆ ಲೆಟರ್‌ನ್ನಾಗಲಿ ಇನ್ನೂ ಏನಾದರೂ ಮಾಹಿತಿ ಇದ್ದರೆ ಅವುಗಳನ್ನು ತಂದು ಸರ್ಕಾರದ ಮುಂದೆ ಇಟ್ಟರೆ, ಸರ್ಕಾರ ಅದನ್ನು ಪರಿಶೀಲಿಸುತ್ತದೆ ಎಂದು ಹೇಳುತ್ತೇನೆ. ಅದಲ್ಲದೆ ಇದಕ್ಕೆ ಸಂಬಂಧಪಟ್ಟ ಕಂಪನ್ಸೇಷನ್ ಒಮ್ಮೆ ಅವಾರ್ಡ್ ಆದನಂತರ ಇದರ ಹಕ್ಕುದಾರರು ಯಾರು, ಯಾರಿಗೆ ಈ ಕಾಂಪನ್ಸೇಷನ್ ಹೋಗಬೇಕು ಎನ್ನುವ ಪ್ರಶ್ನೆ ಬರುತ್ತದೆ. ಲ್ಯಾಂಡ್ ಅಕ್ವಿಸಿಷನ್ ಆಕ್ಟ್ ಪ್ರಕಾರ 4,5,6 ನೇ ಕಲಂ ಮತ್ತು 9 ನೇ ಕಲಂ ಆಗಿನ ಲ್ಯಾಂಡ್ ಅಕ್ವಿಜಿಷನ್ ಆಫೀಸರು ಅನುಸರಿಸದೆ ಇದ್ದರೆ, ಅದನ್ನು ಸಂಬಂಧಪಟ್ಟ ಹಕ್ಕುದಾರರು ಇದ್ದರೆ ಕೋರ್ಟಿನಲ್ಲಿ ಚಾಲೆಂಜ್ ಮಾಡಬಹುದು. ಅವರಿಗೆ ಹಕ್ಕು ಇದೆಯೋ ಇಲ್ಲವೋ ಎನ್ನುವ ನಿರ್ಧಾರವನ್ನು ಕೋರ್ಟಿನವರು ತೆಗೆದುಕೊಳ್ಳುತ್ತಾರೆ.

Sri H. SIDDAVEERAPPA.—I request the Hon. Minister to yield for a minute. I feel there is some fraud in this case. Government should instruct the Trust Board. It can do it under the law as a corrective process. In the interest of the State, let not one section of the people feel that some grave injustice has been done and that even though it is brought to their notice they are impervious. You satisfy yourself about the rightful owner and get it to him only. Until then, please see that the sites are not distributed and sold away. 33 ಸಾವಿರ ರೂಪಾಯಿ ಬೆಲೆ ಬಾಳುವ ಜಮೀನನ್ನು ಸೈಟುಗಳಾಗಿ ಹಂಚದೇ ಇರುವ ಹಾಗೆ ಟ್ರಸ್ಟುಬೋರ್ಡ್‌ಗೆ ಆದೇಶ ನೀಡಬೇಕು.

Sri K. PUTTASWAMY.—I am sorry that the Hon'ble the Leader of the Opposition is using certain words which do not fit in to the facts of the case. Acquisition took place according to law. He said that fraudulant transaction has taken place. I do not think it is correct.

Sri H. SIDDAVEERAPPA.—It is absolutely fraudulant. The proper word that can be used is nothing but 'fraud'.

Sri B. M. PATIL.—I am not going to discuss whether it is fraudulant or not. ಇದನ್ನು ನ್ಯಾಯ ರೀತಿಯಲ್ಲಿ ಮಾಡುವುದಕ್ಕೆ ಏನು ಸಾಧ್ಯ ಇದೆ ಅದನ್ನು ಸರ್ಕಾರ ಪರಿಶೀಲಿಸುವುದು. ಆ ಜವಾಬ್ದಾರಿಯನ್ನು ಸರ್ಕಾರದ ಮೇಲೆ ಹಾಕಿ ಸರ್ಕಾರದ ಮೇಲೆ ದೂಷಣೆ ಮಾಡುವುದು ಸಮಂಜಸವಾದುದಲ್ಲ ಮಾನ್ಯ ಸದಸ್ಯರು ಅನೇಕರು ಮಾತನಾಡಿದ್ದಾರೆ. ಅವರುಗಳ ಹತ್ತಿರ ಏನಾದರೂ ವಿವರಗಳು ಇದ್ದರೆ ಕೊಡಿ. ಅದನ್ನು ಸರ್ಕಾರ ಸೂಕ್ತ ಪರಿಶೀಲನೆ ಮಾಡುತ್ತದೆ ಎಂದು ಹೇಳುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri K. H. RANGANATH.—We are not concerned with the Trust Board; we do not have documents. The Hon'ble Minister knows that it is a gift. If so, the Government should inform the Trust Board to withdraw. Our only concern is that it should be used for the purpose for which it was given by the Maharaja. It was a gift by the Maharaja to the Peoples Education Society.

Sri D. B. KALMANKAR.—Sir, there is one more letter dated 16th July 1964 addressed from the Revenue Department to the Chairman, Peoples Education Society, Anand Bhavan, D.N. Road, Fort, Bombay-1, wherein they have stated that it was required to be acquired for power Research Institute and since the Government of India have said that they do not want it, that is withdrawn. I will pass on the letter to you, Sir.

Sri S. S. ARAKERI.—Trust Board knows that there is a Gift Deed of 1964. How is it that the Trust Board entrusted the Acquisition Officer to proceed with the acquisition of this entire land? What is the legal sanctity behind it?

Sri B. M. PATIL.—I cannot say why they have taken a decision.

Sri K. H. RANGANATH.—Our only request is that the Government should see that it is withdrawn. Personally speaking, we are not interested in it.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಯಾವ ಘನ ಉದ್ದೇಶದಿಂದ ಈ ಸಂಸ್ಥೆಗೆ ಕೊಟ್ಟಿದ್ದಾರೋ ಅದು ಸಫಲವಾಗಲಲ್ಲ. ಈಗ ಇದನ್ನು ಸೈಟುಗಳನ್ನಾಗಿ ಮಾಡಿ ಹಂಚುತಿದ್ದಾರೆ.

ಶ್ರೀ ಬಿ. ಎಂ. ಪಾಟೀಲ್.—ಪರಿಶೀಲನೆ ಮಾಡಲು ಮಾನ್ಯ ಸದಸ್ಯರ ಅಭಿಪ್ರಾಯ ಏನು ಇದೆ ಎನ್ನುವುದನ್ನೆಲ್ಲಾ ಸರಕಾರ ಗಮನದಲ್ಲಿಟ್ಟುಕೊಳ್ಳುತ್ತದೆ.

Mr. DEPUTY SPEAKER.—The House now stands adjourned to meet at 8-30 A.M. tomorrow.

The House adjourned at Forty Minutes past Seven of the Clock to meet again at Thirty minutes past eight of the Clock on Wednesday, the 5th February 1970.

WD 14650--GPB - 520—24-7-1970

ಮೈಸೂರು ವಿಧಾನಸಭೆಯ ನಡವಳಿಕೆಗಳು
MYSORE LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ನಾಲ್ಕನೆಯ ವಿಧಾನಸಭೆಯ ಏಳನೆಯ ಅಧಿವೇಶನ
SEVENTH SESSION OF THE FOURTH LEGISLATIVE ASSEMBLY

ಽನೇ ಗುರುವಾರ, ಫೆಬ್ರುವರಿ ೧೯೭೦ [ಮಾಘ ೧೬, ೧೮೯೧ (ಶಕ)]
THURSDAY, 5TH FEBRUARY 1970 [MAGHA 16, 1891 (SAKA)]

ಸಂಪುಟ ೨೩—ಕ್ರಮಾಂಕ ೬

Vol. XXIII—No. 6

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು
Mysore Legislature Secretariat, Bangalore

ಬೆಲೆ : ೨೫ ಪೈಸೆ
Price 25 : Paise

CONTENTS

PAGES

1 City of Bangalore Improvement (Amendment) Bill, 1970—

(i) Statutory Resolution to disapprove the Ordinance No. 5 of 1969—(Negatived) ... 393—405

(ii) Motion to consider ... 405—410
—(Bill Passed)

2 Mysore Land Revenue (Amendment) Bill, 1970—

(i) Statutory Resolution to disapprove the Ordinance No. 8 of 1969 –(Negatived) ... 410—141

(ii) Motion to refer to a Joint Select Committee—(withdrawn) ... 441—443

(iii) Motion to consider ... 443—454
–(Bill Passed)

3 Calling attention to a matters of Urgent Public importance

(i) Collection of Land Revenue at new Rates in Tarikere Taluk ... 454—455

(ii) *re*: Irregular Supply of Electricity for Kaup, etc., in South Kanara District ... 455—456

(iii) *re*: Spread of flue in Bangalore City ... 456—457

(iv) *re*: Atrocities committed by the Bidar Police on the Students ... 457—458

4 Discussion on a matter *re*: disturbances in Bangalore City 458—462

5 House adjourned *sine die* ... 462

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, the 5th February, 1970.

The House met in the Assembly Chamber, Vidhana Soudha, Bangalore, at Forty-three Minutes past Eight of the Clock.

MR. SPEAKER (SRI S. D. KOTHAVALE) in the Chair.

Sri M. NAGAPPA.—I want to know what has happened to my adjournment motion on Basavandurg Harijan Problem. The Hon'ble Minister is also here.

Mr. SPEAKER.—It will be taken up after completing the Business on the Agenda.

CITY OF BANGALORE IMPROVEMENT (AMENDMENT) BILL, 1970

(*i*) Statutory Resolution to disapprove the ordinance (1969).

(*ii*) Motion to consider the Bill.

Sri M. NAGAPPA (Raichur).—I beg to move :

> "That this Assembly disapproves Ordinance No. 5 of 1969 namely, 'The City of Bangalore Improvement (Amendment) Ordinance, 1969' promulgated on 14th day of October 1969 by the Governor of Mysore,"

Mr. SPEAKER.—Motion moved :

> "That this Assembly disapproves Ordinance No. 5 of 1969 namely, 'The City of Bangalore Improvement (Amendment) Ordinance, 1969' promulgated on 14th day of October 1969 by the Governor of Mysore."

Sri B. M. PATIL (Minister of State for Municipal Administration).—I beg to move :

> "That the City of Bangalore Improvement (Amendment) Bill, 1970 be taken into consideration."

Mr. SPEAKER.—Motion moved :

> "That the City of Bangalore Improvement (Amendment) Bill, 1970 be taken into consideration."

Both the Statutory Resolution and the Consideration motion are open for discussion.

†**Sri B. M. PATIL.**—Mr. Speaker Sir, the City of Bangalore Improvement (Amendment) Bill, 1970 is a simple Bill. At present there is no provision in the Improvement Trust Board Act to raise loans and float debentures. The Improvement Trust Board is constituted for the purpose of taking up many improvement schemes and executing many lay outs. Because of the paucity of funds, the Trust Board has not been able to take many of these schemes up to the expectation of the people and also it is not in a position to implement such schemes expeditiously. In the Institutions like Housing Board and Housing Corporation, there is a provision to enable those Institutions to raise loans. Therefore this amending Bill seeks to empower the Bangalore City Improvement Board to raise loans, to implement schemes and to take up some improvement schemes. Therefore I commend this simple amending Bill for the acceptance of the House.

†**ಶ್ರೀ ಎಂ. ನಾಗಪ್ಪ.**—ಅಧ್ಯಕ್ಷರೇ, ಈ ಮಸೂದೆ ಎರಡು ಮೂರು ಕ್ಲಾಜುಗಳಿಂದ ಕೂಡಿದ್ದರೂ ಸಹಿತ ಕ್ಲಾಜ್ 2 ಬಹಳ ಮುಖ್ಯವಾದುದು. ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಆಕ್ಟಿಗೆ 29(ಎ) ಸೆಕ್ಷನ್ ಸೇರಿಸಬೇಕು ಎನ್ನುವ ತಿದ್ದುಪಡಿಯನ್ನು ತಂದಿದ್ದಾರೆ. ಈ ಬೋರ್ಡಿಗೆ ಸಾಲ ತೆಗೆದುಕೊಳ್ಳತಕ್ಕ ಅಧಿಕಾರ ಕೊಡಬೇಕು, ಅದಕ್ಕೆ ಸರ್ಕಾರ ನಿಯಮಗಳನ್ನು ಮಾಡಿ, ಆ ನಿಯಮಗಳ ಪ್ರಕಾರ ಹಣ ತೆಗೆದುಕೊಳ್ಳತಕ್ಕ ಹಕ್ಕು ಇರಬೇಕು ಎನ್ನುವ ತಿದ್ದುಪಡಿಯನ್ನು ತಂದಿದ್ದಾರೆ. ಇಂಥ ಒಂದು ಅಧಿಕಾರವನ್ನು ನಾವು ಬೋರ್ಡಿಗೆ ಕೊಡಬೇಕಾದ ಪರಿಸ್ಥಿತಿಯಲ್ಲಿ ಕೆಲವು ವಿಷಯಗಳನ್ನು ಗಮನಿಸಬೇಕು. ಈಗಾಗಲೇ ಕೇಂದ್ರದ ಒಂದು ಕಾಯಿದೆಯಲ್ಲಿ ಎಲೆಕ್ಟ್ರಿಸಿಟಿ ಬೋರ್ಡಿಗೆ ಸಾಲ ತೆಗೆದುಕೊಳ್ಳತಕ್ಕ ಅಧಿಕಾರ ಕೊಡಲಾಗಿದೆ. ಅದರಲ್ಲಿ ಸಹಿತ ಒಂದು ಮಿತಿಯನ್ನು ಇಟ್ಟಿದ್ದಾರೆ. ಎಷ್ಟು ಹಣ ತೆಗೆದುಕೊಳ್ಳಬೇಕು, ಹೆಚ್ಚು ಹಣ ಬೇಕಾದರೆ ಯಾವ ರೀತಿಯಾಗಿ ತೆಗೆದುಕೊಳ್ಳಬೇಕು ಎನ್ನುವ ಕೆಲವು ಕಟ್ಟಳೆಗಳನ್ನು ಆ ಕಾಯಿದೆಯಲ್ಲಿ ನಾವು ನೋಡುತ್ತೇವೆ. ಅದೂ ಅಲ್ಲದೆ ಈ ಸಭೆ ಸರ್ಕಾರಕ್ಕೆ ಅಧಿಕಾರ ಕೊಟ್ಟರೆ, ಸರ್ಕಾರ ಎಷ್ಟು ಹಣ ಕೊಟ್ಟಿತು, ಬೋರ್ಡ್ ಎಷ್ಟು ಹಣ ಉಪಯೋಗಿಸಿಕೊಂಡಿತು ಎನ್ನುವುದು ಗೊತ್ತಾಗುವುದಿಲ್ಲ. ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್ ಸಭೆಯ ಮುಂದೆ ಇಡುತ್ತೇವೆಂದು ಸರ್ಕಾರ ಹೇಳಬಹುದು. ಕೇಂದ್ರದ ಕಾಯಿದೆಯ ಪ್ರಕಾರ ಎಲೆಕ್ಟ್ರಿಸಿಟಿ ಬೋರ್ಡಿಗೆ ಸಾಲ ಎತ್ತಲು ಅಧಿಕಾರವನ್ನು ಕೊಟ್ಟಿದ್ದರೂ ಹೆಚ್ಚು ಹಣ ಬೇಕಾದರೆ ಈ ಲೆಜಿಸ್ಲೇಚರ್ ಮಂಜೂರಾತಿ ಬೇಕು ಎನ್ನುವ ಮಾತು ಆ ಕಾಯಿದೆಯಲ್ಲಿದೆ. ಅಂಥ ಒಂದು ನಿಯಮವನ್ನು ಈ ಕಾಯಿದೆಗೂ ಸಹ ಅನ್ವಯಿಸಬೇಕು. ಏಕೆಂದರೆ ಲೆಜಿಸ್ಲೇಚರ್ ಕಂಟ್ರೋಲ್ ಉಳಿಯತಕ್ಕ ವ್ಯವಸ್ಥೆ ಈಗ ತಂದಿರುವ ತಿದ್ದುಪಡಿ ಕಾಯಿದೆಯಲ್ಲಿ ಇಲ್ಲ. ಸಾಲವನ್ನು ಪಡೆಯುವುದಕ್ಕೆ ಒಂದು ಮಿತಿ ಇದ್ದೂ ಕೂಡ, ಅದಕ್ಕೆ ಕಟ್ಟಳೆ ಇದ್ದರೂ ಸಹಿತ ಎಲೆಕ್ಟ್ರಿಸಿಟಿ ಬೋರ್ಡ್ 50 ಕೋಟಿ ರೂಪಾಯಿವರೆಗೆ ಸಾಲ ಮಾಡಿತು. ಆದರೆ ಅವರಿಗೆ ಸ್ಯಾಂಕ್ಷನ್ ಮಾಡಿದ್ದು 30 ಕೋಟಿ ರೂಪಾಯಿ ಮಾತ್ರ. 20 ಕೋಟಿ ರೂಪಾಯಿಗಳವರೆಗೆ ಹಣವನ್ನು ಹೆಚ್ಚಾಗಿ ಸಾಲ ತೆಗೆದುಕೊಳ್ಳುವವರೆಗೆ ಸರ್ಕಾರದ ಗಮನಕ್ಕೇ ಅಂಥ ವಿಷಯ ಬರಲಿಲ್ಲ. ಈಗ ಸರ್ಕಾರಕ್ಕೆ ಇಂಥ ಒಂದು ಅಧಿಕಾರವನ್ನು ಕೊಟ್ಟರೆ ಬೋರ್ಡಿನವರು ಸಹಿತ ಅಂಥ ವ್ಯವಹಾರ ಮಾಡಬಹುದು. ಸರ್ಕಾರಕ್ಕೆ ಸಹಿತ ಅಂಥ ವಿಷಯ ತಿಳಿಯದೆ ಇರಬಹುದು. ಅದಕ್ಕಾಗಿ ಪ್ರತಿಯೊಂದು ಸಲ ಅವರಿಗೆ ಬೇಕಾದಾಗಲೂ ಆ ವಿಷಯವನ್ನು ಈ ಸಭೆಯ ಗಮನಕ್ಕೆ ತಂದು, ಸಭೆಯ ಅಪ್ಪಣೆ

---

† Indicates that the remarks or speeches have not been revised by the member concerned.

ಯನ್ನು ಪಡೆದು ಬೇಕಾದರೆ ತೆಗೆದುಕೊಳ್ಳಬಹುದು. ಈ ಕ್ಲಾಜ್ ಸಣ್ಣದು ಎಂದು ಕಾಣಬಹುದು. ಇದು ಮನಿ ಬಿಲ್ ಎನ್ನುವುದನ್ನು ನಾವು ಗಮನದಲ್ಲಿ ಇಡಬೇಕು. ಸರ್ಕಾರ ಬೋರ್ಡಿನವರು ಎತ್ತುವ ಸಾಲಕ್ಕೆ ಷ್ಯೂರಿಟಿಯಾಗಿ ನಿಂತು ಸೆಕ್ಯೂರಿಟಿ ಕೊಡಬೇಕಾಗುತ್ತದೆ. ಆದಕ್ಕಾಗಿ ಇದು ಒಂದು ಮಹತ್ವವಾದ ಬಿಲ್ ಇದ್ದ ಕಾರಣ, ಇದನ್ನು ತಾವು ಸರಿಯಾಗಿ ತಿದ್ದುಪಡಿ ಮಾಡಿ ಬೋರ್ಡಿಗೆ ಸಾಲ ಎತ್ತಲು ಅವಕಾಶ ಕೊಡುವುದಕ್ಕೆ ಒಂದು ಮಿತಿಯನ್ನು ಹಾಕಿಕೊಳ್ಳಲೇಬೇಕು. ಎಷ್ಟು ದುಡ್ಡಿನವರೆಗೆ ಸ್ಯಾಂಕ್ಷನ್ ಕೊಡಬೇಕು, ಹೆಚ್ಚಿನ ಸಾಲ ತರಬೇಕಾದ ಪರಿಸ್ಥಿತಿಯಲ್ಲಿ ಈ ಮಾನ್ಯ ಸಭೆಯ ಅನುಮತಿ ಇಲ್ಲದೆ, ಸ್ಯಾಂಕ್ಷನ್ ಇಲ್ಲದೆ ತೆಗೆದುಕೊಳ್ಳಬಾರದು ಎನ್ನುವ ತಿದ್ದುಪಡಿಯನ್ನು ತಂದರೆ ಯಾವತ್ತಿಗೂ ಇಂಥ ತಿದ್ದುಪಡಿಯನ್ನು ಸ್ವಾಗತಿಸುವುದಕ್ಕೆ ಸಿದ್ಧನಾಗಿದ್ದೇನೆ. ಸರ್ಕಾರಕ್ಕೇ ಎಲ್ಲ ಅಧಿಕಾರವನ್ನೂ ಇಟ್ಟುಕೊಳ್ಳಲಾಗುತ್ತದೆ, ರೂಲ್ಸ್ ಸಹಿತ ಸರ್ಕಾರದವರೇ ಮಾಡುತ್ತಾರೆ, ಎಷ್ಟು ಹಣ ತರಬೇಕು, ಯಾವರೀತಿಯಿಂದ ತರಬೇಕು ಎನ್ನುವುದನ್ನು ನಿಯಮಗಳಲ್ಲಿ ನೋಟಿಫೈ ಮಾಡಿ ಕ್ರಮ ತೆಗೆದುಕೊಳ್ಳಲು ಅಧಿಕಾರವನ್ನು ಡೆಲಿಗೇಟ್ ಮಾಡಿ, ಲೆಜಿಸ್ಲೇಚರ್‌ಗೆ ಯಾವ ರೀತಿಯ ಹತೋಟಿಯೂ ಇರಬಾರದು ಎನ್ನುವಂಥ ತಿದ್ದುಪಡಿಯನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಆದರ ಬದಲಾಗಿ ಮಾನ್ಯ ಮಂತ್ರಿಗಳು ಇಷ್ಟು ಹಣ ಸಾಲ ಪಡೆಯಲು ಈ ಸಭೆಯ ಅಪ್ಪಣೆ ಬೇಕು, ಅದರ ಮೇಲೆ ಹೆಚ್ಚಾಗಿ ಬೇಕಾಗಿದ್ದರೆ ಲೆಜಿಸ್ಲೇಚರ್ ಮುಂದೆ ತರುತ್ತೇವೆ ಮತ್ತು ಅವರ ಅಭಿಪ್ರಾಯದ ಪ್ರಕಾರ ಸಾಲ ತರುತ್ತೇವೆ ಎನ್ನುವ ಮಾತನ್ನು ಒಪ್ಪಿದರೆ ನಾನು ಇದನ್ನು ಸ್ವಾಗತಿಸಬಹುದು. ಇಲ್ಲದೆ ಇದ್ದರೆ ನಾನು ತೀವ್ರವಾಗಿ ವಿರೋಧಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಪತಿಗಳೇ, ಈ ಒಂದು ತಿದ್ದುಪಡಿ ಮಸೂದೆ, ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಒಂದು ಸಾಧಾರಣವಾದ ಮಸೂದೆ; ಅಂಥ ಒಂದು ಮೂಲಭೂತವಾದ ಮಸೂದೆ ಅಲ್ಲ ಎನ್ನುವಷ್ಟು ಮಾತನಾಡಿದ್ದಾರೆ. ಅಷ್ಟೇ ಅಲ್ಲ, ಬೆಂಗಳೂರು ನಗರ ಟ್ರಸ್ಟ್ ಬೋರ್ಡ್ ಇನ್ನೂ ಹೆಚ್ಚು ತನ್ನ ಚಟುವಟಿಕೆಗಳನ್ನು ವಿಸ್ತರಿಸುವುದಕ್ಕೋಸ್ಕರವಾಗಿ ಹಣವನ್ನು ಸಾಲ ಪಡೆಯುವುದಕ್ಕೆ ಈ ಮಸೂದೆಯನ್ನು ತರಲಾಗಿದೆ, ಆ ರೀತಿ ಸಾಲ ತರುವುದಕ್ಕೆ ಅವಕಾಶವಿಲ್ಲದೆ ಇರುವುದರಿಂದ ಈ ಮಸೂದೆಯನ್ನು ತೆಗೆದುಕೊಂಡು ಬಂದಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ನಾನಾದರೂ ಇವತ್ತು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಹೆಚ್ಚು ಹಣ ಕೊಡಬೇಡಿ ಎಂದು ಹೇಳುತ್ತಾ ಇಲ್ಲ. ಇಲ್ಲಿ ಹಣ ಕೊಡುವುದು ಮೂಲಭೂತವಾದ ಪ್ರಶ್ನೆಯಲ್ಲ. ಪ್ರಶ್ನೆ ಏನೆಂದರೆ, ಈ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಏನಿದೆ, ಅದು ಯಾವ ರೀತಿ ನಡೆಯುತ್ತಿದೆ, ಮತ್ತು ಯಾವ ರೀತಿ ಅಲ್ಲಿ ಆಡಳಿತ ನಡೆಯುತ್ತಿದೆ ಎನ್ನುವುದನ್ನು ಸ್ವಲ್ಪ ಮಟ್ಟಿಗೆ ವಿಮರ್ಶೆ ಮಾಡಿದರೆ, ಈ ಮಸೂದೆಯನ್ನು ತರಬೇಕಾಗಿತ್ತೇ ಎನ್ನುವ ಸಂಶಯ ಬರುತ್ತದೆ, ಮತ್ತು ಇದನ್ನು ತರಬೇಕಾಗಿಲ್ಲವೆನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಆದರೂ ಸಹ ಇದನ್ನು ತಂದ ಮೇಲೆ ಆದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳದಿದ್ದರೆ, ಅದು ಔಚಿತ್ಯವಾಗುವುದಿಲ್ಲ ಎನ್ನುವ ದೃಷ್ಟಿಯಿಂದ ಮಾತನಾಡುತ್ತೇನೆ. ಇವರಿಗೆ ಏತಕ್ಕೋಸ್ಕರ ಹಣ ಬೇಕಾಗುತ್ತದೆ ಅಂದರೆ ಬೆಂಗಳೂರಿನ ಸುತ್ತಮುತ್ತಲೂ ಲೇ ಔಟ್ ಮಾಡುವುದಕ್ಕೋಸ್ಕರ ಹಣ ಬೇಕಾಗುತ್ತದೆ ಮತ್ತು ಅದರಿಂದ ಸೈಟ್‌ಗಳನ್ನು ಮಾಡಿ, ಕಡಿಮೆ ಬೆಲೆಯಲ್ಲಿ ವಿತರಣೆ ಮಾಡುವುದಕ್ಕೆ ಹಣ ಬೇಕಾಗುತ್ತದೆ. ಆಡ್ಮಿನಿಸ್ಟ್ರೇಷನ್ನಿಗೆ ಹಣ ಬೇಕಾಗುತ್ತದೆ ಎಂದೆಲ್ಲಾ ಕೇಳುತ್ತಿದ್ದಾರೆ, ನಾನು ತಿಳಿದುಕೊಂಡ ಹಾಗೆ, ಇಲ್ಲಿ ನಿಜವಾಗಿಯೂ ಆಗುತ್ತಿರುವುದು ಏನೆಂದರೆ, ಈ ಲೇ ಔಟ್‌ಗಳನ್ನು ಮಾಡುವುದಕ್ಕೆ ಕಂಟ್ರಾಕ್ಟರುಗಳಿಗೆ ಅಧಿಕಾರ ಕೊಟ್ಟುಬಿಟ್ಟು, ಅಲ್ಲಿ ಒಂದು ಕಂಟ್ರಾಕ್ಟರುಗಳ ರಾಜ್ಯವೇ ಆಗಿದೆ. ಆದರೆ ಅವರು ಮಾಡಿದಂತಹ ಕೆಲಸಗಳು ಎಲ್ಲಾ ಅರ್ಧಂಬರ್ಧ. ಲೇ ಔಟ್ ಸರಿಯಾಗಿಲ್ಲ, ಡ್ರೈನೇಜ್ ಸರಿಯಾಗಿಲ್ಲ, ಯಾವುದೂ ಸರಿಯಾಗಿಲ್ಲ. ಉದಾಹರಣೆಗೆ ಹೇಳುವುದಾದರೆ ಸುಬ್ರಹ್ಮಣ್ಯ ನಗರ, ರಾಜಾಜಿನಗರ 2ನೇ ಸ್ಟೇಜ್ ಇವುಗಳನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ, ಅವರು ಮಾಡಿರುವುದು ಸರಿಯೋ, ತಪ್ಪೋ ಎಂದು. ಮಾನ್ಯ ಮಂತ್ರಿಯವರು ಒಂದು ದಿವಸ ಅಲ್ಲಿಗೆ ಬಂದರೆ ಗೊತ್ತಾಗುತ್ತದೆ. ಅಲ್ಲಿ ಕೊಳಚೆ ನೀರು ಹರಿಯುತ್ತಾ ಇದೆ. ಇವತ್ತು ನೀವು, ತಮಗೆ ಬೇಕಾದವರಿಗೆ ಈ ಕಂಟ್ರಾಕ್ಟ್‌ಗಳನ್ನು ಕೊಟ್ಟು, ಈ ರೀತಿಯ ಒಂದು ಅವ್ಯವಸ್ಥೆಯನ್ನು ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೀರಿ. ಹೀಗಿದ್ದರೆ, ನಾವು ಯಾಕೆ ಇದಕ್ಕೆ ಹಣ ಕೊಡಬೇಕು ? ಇದರಿಂದ ಏನಾಗುತ್ತದೆ ಅಂದರೆ, ಕೆಲವರು ಬೇಕಾದಷ್ಟು ದುಡ್ಡು ಮಾಡಿಕೊಳ್ಳುತ್ತಿದ್ದಾರೆ. ಕಂಟ್ರಾಕ್ಟರು ಮಾತ್ರವಲ್ಲದೆ, ಇವರ ಜೊತೆಗೆ ಕೆಲವು ಅಧಿಕಾರಿಗಳೂ ಸಹ ದುಡ್ಡು ಮಾಡಿಕೊಳ್ಳುತ್ತಿದ್ದಾರೆ. ನಿನ್ನೆಯ ದಿವಸ ಏನೂ ಇಲ್ಲದಿದ್ದ ಜನರು ಈ ಹೊತ್ತಿನ ದಿವಸ ನೋಡಿದರೆ. ಎರಡು, ಮೂರು ಲಕ್ಷ ರೂಪಾಯಿಯ ಆಸ್ತಿಯನ್ನು ಮಾಡಿಕೊಂಡಿದ್ದಾರೆ, ಈ ಅಧಿಕಾರಿಗಳು. ಈ ರೀತಿಯಾಗಿದೆ ಇವತ್ತು ಈ ಟ್ರಸ್ಟ್ ಬೋರ್ಡಿನ ವಿಚಾರ. ಈ ತರಹ ಮಾಡಿಕೊಳ್ಳುವುದಕ್ಕೆ

(ಶ್ರೀ ಎಂ. ಎಸ್. ಕೃಷ್ಣನ್)

ಯಾಕೆ ಹಣ ಕೊಡಬೇಕೆಂದು ಕೇಳುತ್ತಿದ್ದೇನೆ. ಮೂಲಭೂತವಾದ ಉದ್ದೇಶವೇನು ? ಟ್ರಸ್ಟ್ ಬೋರ್ಡಿನವರು ಲೇ ಔಟ್ ಮಾಡಿ ಕಡಿಮೆ ಬೆಲೆಗೆ ಸೈಟ್ ಮಾಡತಕ್ಕಂತದ್ದು. ಒಂದೆರಡು ವರ್ಷಗಳ ಹಿಂದೆ 10-12 ರೂಪಾಯಿ ಚದರ ಗಜಕ್ಕೆ ದರ ಇದ್ದರೆ, ಇವತ್ತು ರೂ 15-20-25ರ ವರೆಗೆ ಹೋಗಿದೆ. ಇನ್ನು ಮುಂದೆಯೂ ಯಾವ ಬಡಾವಣೆಯಲ್ಲಿಯೂ ಸೈಟ್ ಮಾಡಿದರೆ, ಅದರ ದರ ಚದರ ಗಜಕ್ಕೆ 25 ರೂಪಾಯಿಂದ ಕಡಿಮೆಯಾಗುವುದಿಲ್ಲವೆಂದು ಮೊನ್ನೆ ತಾನೇ ಅದರ ಛೇರ್‌ಮನ್‌ರವರು ನನಗೆ ಹೇಳಿದರು, ಅದು ಕೂಡ, ನಗರದಿಂದ 2-3-4 ಮೈಲಿ ದೂರವಿರುತ್ತದೆ. ಅಲ್ಲಿ ಯಾವನಾದರೂ ಒಬ್ಬ ಕಾರ್ಮಿಕನೋ ಸರ್ಕಾರಿ ನೌಕರನೋ ಅಥವಾ ಇತರ ಬಡ ಜನರೋ ಸೈಟ್ ತೆಗೆದುಕೊಂಡು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿದೆಯೋ ? ಇನ್ನೊಂದು ಏನೆಂದರೆ, ಒಂದು ವೇಳೆ ಹಾಗೆ ಮನೆ ಮಾಡಿಕೊಂಡರೂ, ಅವರಿಗೆ ಸಿಟಿಗೆ ಬರುವುದಕ್ಕೆ ಸರಿಯಾದ ಅನುಕೂಲ ಇಲ್ಲವಾಗಿದೆ. ಹೀಗೆ ಇರುವಾಗ ಸೈಟಿನ ದರ ಚದರ ಗಜಕ್ಕೆ 12-15 ಇದ್ದದ್ದು 25 ರೂಪಾಯಿ ಏಕೆ ಮಾಡಬೇಕಾಗಿತ್ತು ? ಅದಕ್ಕೆ ಕಾರಣರು, ಈ ಕಂಟ್ರಾಕ್ಟರುಗಳೇ. ಇವರ ಹಾವಳಿಯಿಂದ ಎಸ್ಟಿಮೇಟ್ ಪುನರ್ ವಿಮರ್ಶೆಯಾಗುತ್ತದೆ ಮತ್ತು ಅದಕ್ಕೆ ಬೇಕಾದಂತಹ ಬಿಲ್ಲನ್ನು ಇವರು ಸ್ಯಾಂಕ್ಷನ್ ಮಾಡುತ್ತಾರೆ. ಅದರಿಂದ ಸೈಟಿನ ಬೆಲೆ ಜಾಸ್ತಿಯಾಗುತ್ತದೆ ಮತ್ತು ಬಡ ಜನರಿಗೆ ಕೊಂಡುಕೊಳ್ಳಲು ಬಹಳ ದುಬಾರಿಯಾಗುತ್ತದೆ. ಛೇರ್‌ಮನ್ ಸಾಹೇಬರೇ ಒಪ್ಪಿಕೊಳ್ಳುತ್ತಾರೆ, ಏನೆಂದರೆ, ಈ ರೀತಿ ಕಂಟ್ರಾಕ್ಟರುಗಳ ರೇಟ್ ಜಾಸ್ತಿಯಾಗಿರುವುದರಿಂದ, ಸೈಟಿನ ದರ ಕೂಡ ಜಾಸ್ತಿಯಾಗುತ್ತದೆಂದು. ಇನ್ನು ಕೆಲವು ಸೈಟುಗಳನ್ನು ಹರಾಜು ಮಾಡುತ್ತೀರಿ. ಅದನ್ನು ಕೆಲವು ಜನರು ಕೊಂಡುಕೊಳ್ಳುತ್ತಿದ್ದಾರೆ, ಈ ಹರಾಜಿನಲ್ಲಿ ಕೊಂಡುಕೊಳ್ಳುವವರು ಯಾರು ? ಅವರು ಸಾಮಾನ್ಯ ತರಗತಿಯ ಜನರಲ್ಲ. ಯಾರು ಬೇಕಾದಷ್ಟು ಮನೆ ಮಠಗಳನ್ನು, ಸೈಟುಗಳನ್ನು ಇಟ್ಟುಕೊಂಡು ಇರುತ್ತಾರೋ ಅಂಥವರೇ ಈ ಹರಾಜಿನ ಸೈಟುಗಳನ್ನು ಕೊಂಡುಕೊಂಡು, ಇನ್ನೂ ಹೆಚ್ಚು ಬೆಲೆಗೆ ಮಾರುತ್ತಾರೆ, ಇಲ್ಲವೇ ಮನೆಗಳನ್ನು ಕಟ್ಟಿಸಿಕೊಂಡು ಬಾಡಿಗೆಗಳನ್ನು ಸಂಪಾದಿಸುತ್ತಾರೆ. ಇದರಿಂದ ಶ್ರೀಮಂತರಾದ ಜನರಿಗೆ ಅನುಕೂಲವಲ್ಲದೆ, ಮಧ್ಯಮ ತರಗತಿ ಅಥವಾ ಬಡ ಜನರಿಗೆ ಯಾವ ಪ್ರಯೋಜನವೂ ಇಲ್ಲ. ಶ್ರೀಮಂತ ನ್ನು ಇನ್ನೂ ಶ್ರೀಮಂತರನ್ನಾಗಿ ಮಾಡುತ್ತಿದ್ದೀರಿ. ಈ ಪರಿಸ್ಥಿತಿ ಇರಬೇಕಾದರೆ, ನಾವು ಯಾಕೆ ಅನ್ಯಾಯ ರೀತಿಯಲ್ಲಿ ನಡೆಯುತಕ್ಕ ಇಂಥ ಕಾರ್ಯಗಳಿಗೆ ಹಣ ಕೊಡಬೇಕೆಂದು ಕೇಳುತ್ತೇನೆ.

ಇನ್ನೊಂದು ಅಂಶವೇನೆಂದರೆ, ತಮಗೆಲ್ಲಾ ಗೊತ್ತಿರುವ ಹಾಗೆ ಟ್ರಸ್ಟ್ ಬೋರ್ಡಿನವರು ಸೈಟು ಮಾಡುತ್ತಾರೆ, ಲೇ ಔಟ್ ಮಾಡುತ್ತಾರೆ. ಆಮೇಲೆ ಅದನ್ನು ಕಾರ್ಪೋರೇಶನ್ನಿಗೆ ಕೊಡಬೇಕೆಂದು ಇದೆ. ಕೆಲವು ಕಡೆ ಕೊಡುತ್ತಿದ್ದಾರೆ. ಆದರೆ ಹೆಚ್ಚಾಗಿ ಏನಾಗಿದೆ ಅಂದರೆ, ಟ್ರಸ್ಟ್ ಬೋರ್ಡ್ ಲೇ ಔಟ್ ಹಾಗೆಯೇ ಉಳಿದಿದೆ. ಇವತ್ತಿನ ವರಗೆ ಅದನ್ನು ಕಾರ್ಪೋರೇಶನ್ನಿಗೆ ಕೊಟ್ಟಿಲ್ಲ. ಇವತ್ತು ದುಡ್ಡು ಬೇಕೆಂದು ಕೇಳುವಾಗ ನಾವು ಇದನ್ನೆಲ್ಲಾ ಹೇಳಬೇಕಾಗುತ್ತದೆ. ಸಾಲ ಮಾಡಬೇಕೆಂದಿದ್ದರೆ, ಅದು ಒಳ್ಳೆಯ ಕಾರಣಗಳಿಗಾಗಿ ಆಗಬೇಕಾಗುತ್ತದೆ. ಹಾಗಿದ್ದರೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಇವರು ಇಲ್ಲಿ ಮಾಡುತ್ತಿರುವುದು ಸರಿಯಾದ ಕೆಲಸವಲ್ಲ, ಮತ್ತು ಇದರಿಂದ ಸಾಮಾನ್ಯ ಜನರಿಗೆ ಅನುಕೂಲವಿಲ್ಲ. ಇಲ್ಲಿ ಅನೀತಿ, ಅನಾಚಾರ, ಭ್ರಷ್ಟಾಚಾರ, ನೌಕರಶಾಹಿವರ್ತನೆ ಇವು ಎಲ್ಲಾ ತುಂಬಿ ತುಳುಕಾಡುತ್ತಿವೆ. ಇವತ್ತು 6-7 ಲೇ ಔಟುಗಳನ್ನು ಇನ್ನೂ ಕಾರ್ಪೋರೇಶನ್ನಿಗೆ ಬಿಟ್ಟುಕೊಟ್ಟಿಲ್ಲ. ಅಲ್ಲಿ ಸರಿಯಾದ ನೀರಿಲ್ಲ, ರೋಡುಗಳು ಇಲ್ಲ, ಮತ್ತು ಡ್ರೈನೇಜ್ ಇಲ್ಲ. ಇಂಥ ಪರಿಸ್ಥಿತಿ ಬೆಂಗಳೂರು ನಗರದ ಒಳಗಡೆ ಇರಬೇಕಾದರೆ, ನಮಗೆ ಹಣ ಬೇಕು, ಎಂದು ಶಾಸನಸಭೆಯನ್ನು ಕೇಳಿದರೆ ಯಾಕೆ ಕೊಡಬೇಕು ? ಮೊದಲು ಇವನ್ನೆಲ್ಲಾ ಸರಿಪಡಿಸಬೇಕು, ಆಮೇಲೆ ಕೊಡುತ್ತೇವೆ.

ಇನ್ನು ಸಾಲ ಮಾಡುವುದು ಕೂಡ ಹೇಗೆ ! ಮಾನ್ಯ ನಾಗಪ್ಪನವರು ಹೇಳಿದ ಹಾಗೆ ಸ್ಟೇಟ್ ಸಾಲ ಮಾಡುವುದು ಹೇಗೆ ? ಘಟನಾವಳಿಯ ಆರ್ಟಿಕಲ್ 293ರ ಪ್ರಕಾರ ಸ್ಟೇಟ್ ಸಾಲ ಮಾಡಬೇಕಾದರೆ, ಅಲ್ಲಿ ಈ ರೀತಿ ಹೇಳುತ್ತದೆ :

> "subject to the provisions of this article, the executive power of a State extends to borrowing within the territory of India upon the security of the Consolidated Fund of the State within such limits, if any, as may from time to time be fixed

> by the Legislature of such State by law and to the giving of guarantees with such limits, if any, as may be so fixed."

ಅಂದರೆ ರಾಜ್ಯ ಸರ್ಕಾರ ಲೋನ್ ಪಡೆಯಬೇಕಾದರೆ, ಇವರು ಸ್ಟೇಟ್ ಲೆಜಿಸ್ಲೇಚರನ್ನು ಕೇಳಿ ಪಡೆಯಬೇಕು. ಆದರೆ ಇಲ್ಲಿ ಇವರು ಪಡೆಯುವಂತ ರೀತಿಯಲ್ಲಿ ಸರ್ಕಾರ ತಾನೇ ತೀರ್ಮಾನ ಮಾಡಿ ಎಷ್ಟು ಬೇಕಾದರೂ ಲೋನ್ ರೈಸ್ ಮಾಡಬಹುದು. ಇದಕ್ಕೆ ಬಡ್ಡಿ ಎಷ್ಟು ಏನೆಂದು ಗೊತ್ತಿಲ್ಲ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಹೇಳುತ್ತಾರೆ:

> "The City Improvement Trust Board, Bangalore, desires to borrow money from Schedule Banks, Life Insurance Corporation, etc......"

ಅಂದರೆ ಸಿಂಧಿಯವರಿಂದ ಪಡೆಯಬಹುದು, ಮಾರ್ವಾಡಿಯ ಹತ್ತಿರ ಹೋಗಬಹುದು, ಟಾಟಾ ಹತ್ತಿರ ಬೇಕಾದರೂ ಹೋಗಬಹುದು. ಯಾಕೆ ಎಟ್ಸೆಟ್ರಾ ಎಂದು ಸೇರಿಸಿದ್ದೀರಿ? ನೀವು ಸರಿಯಾಗಿ ಹೇಳಿ. ಬ್ಯಾಂಕ್ ರೇಟಾದರೆ ನಮಗೆ ಗೊತ್ತಿದೆ. ಆದರೆ ಎಟ್ಸೆಟ್ರಾ ಎಂದು ಸೇರಿಸಿದ್ದರಿಂದ ನೀವು ಏನು ಬೇಕಾದರೂ ಮಾಡಬಹುದು. It is after all a piece of legislation. I cannot agree if you use a word which may give any interpretation; because you cannot use it in whatever manner you like. Cases have gone to the Supreme Court as you very well know. ಹೀಗಿರಬೇಕಾದರೆ, ಈ ರೀತಿ ಅನೀತಿಯುತವಾಗಿ ನಡೆಯುವುದರಿಂದ ಇದು ಸರಿಯಾದುದಲ್ಲ ಮತ್ತು ಆ ಒಂದು ದೃಷ್ಟಿಯಿಂದ ಈ ಮಸೂದೆಯನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

9-00 A.M.

ಶ್ರೀ ಎ. ನಂಜಪ್ಪ (ಶಾಂತಿನಗರ).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು ಹಣವನ್ನು ಸಾಲವಾಗಿ ತೆಗೆದುಕೊಳ್ಳುವುದಕ್ಕೆ ಈ ಒಂದು ಮಸೂದೆಯನ್ನು ತಂದಿರುವುದನ್ನು ನಾನು ಸ್ವಾಗತಮಾಡಿ ಎರಡು ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ. ಈಗ ಇರತಕ್ಕ ಟ್ರಸ್ಟ್ ಬೋರ್ಡ್ ಅನೇಕ ವರ್ಷಗಳಿಂದಲೂ ಕೆಲಸಮಾಡುತ್ತಿದೆ. ಸರ್ಕಾರದವರು ಬಹಳ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಆದರೆ ಬಡವರು ಮುಂದೆ ಬರಬೇಕೆಂದು ಹೇಳುತ್ತಿರುವಾಗ, ಬಡವರಿಗೇ ಸರಿಯಾಗಿ ಪ್ಲಾಟ್ಸ್ ಸಿಗುತ್ತಾ ಇಲ್ಲ. ಅಲ್ಲಿ ಜನಗಳ ಪ್ರತಿನಿಧಿಗಳು ಯಾರೂ ಇಲ್ಲ. ಅವರಿಗೆ ಯಾರ್ಯಾರು ಬೇಕಾಗಿದ್ದಾರೋ ಅಂತಹವರನ್ನು ಅಲ್ಲಿಗೆ ನಾಮಿನೇಟ್ ಮಾಡಿ ಹಾಕಿದ್ದಾರೆ. ಅವರಿಗೆ ಬಡವರ ಕಷ್ಟಸುಖಗಳೇನೆಂದು ಗೊತ್ತಾಗುವುದಿಲ್ಲ. ಇವತ್ತಿನ ದಿವಸ ಹಣವಂತರಿಗೇ ಬೇಕಾದಷ್ಟು ಪ್ಲಾಟುಗಳು ಲೇಔಟ್‌ಗಳಲ್ಲಿ ಸಿಕ್ಕಿವೆ. ಅಲ್ಲಿ ಅವರು ಬೇಕಾದಷ್ಟು ಮನೆಗಳನ್ನು ಕಟ್ಟಿ ಬಾಡಿಗೆಗೆ ಕೊಟ್ಟು ಹೆಚ್ಚಿಗೆ ದುಡ್ಡನ್ನು ಸಂಪಾದನೆಮಾಡುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಹಿಂದೆ ಅಲ್ಲಿ ಒಬ್ಬ ಚೇರ್‌ಮನ್ ಇದ್ದಾಗ, ಅವರೇ ಇಂತಹ ಕೆಲಸಗಳನ್ನು ಮಾಡಿದ್ದರಿಂದ ಅವರನ್ನು ಕೆಳಗೆ ಇಳಿಸಿದರು. ಅಂದಿನಿಂದ ಬಡವರಿಗೆ ಪ್ಲಾಟುಗಳು ಸಿಗುತ್ತಿದ್ದುವು. ಇವತ್ತಿನದಿವಸ ಆ ರೀತಿ ಇಲ್ಲ ಏಕೆಂದರೆ ಅಲ್ಲಿ ಇವತ್ತು ಜನಗಳ ಪ್ರತಿನಿಧಿಗಳು ಯಾರೂ ಇಲ್ಲ. ಬೇಕಾದರೆ ಸರ್ಕಾರದವರು ವೆರಿಫೈ ಮಾಡಲಿ. ಪ್ಲಾಟುಗಳನ್ನು ಈಗ ಹೆಚ್ಚಿಗೆ ಬಡವರಿಗೆ ಕೊಟ್ಟಿದ್ದಾರೋ ಅಥವಾ ಹಣವಂತರಿಗೆ ಕೊಟ್ಟಿದ್ದಾರೋ ಎಂಬುದನ್ನು ಸರ್ಕಾರದವರು ತಿಳಿದುಕೊಳ್ಳಲಿ. ನಾನು ಕಾರ್ಪೋರೇಟರ್ ಆಗಿ ಅನೇಕ ವರ್ಷಗಳ ಕಾಲ ಕಾರ್ಪೋರೇಷನ್ನಿನಲ್ಲಿದ್ದುದರಿಂದ ನನಗೆ ಲೇಔಟ್ ಮಾಡುವ ಅನುಭವವಿದೆ. ಕಾರ್ಪೋರೇಷನ್ನಿನಿಂದ ರಸ್ತೆಗಳಿಗಾಗಿ ಮತ್ತು ಡ್ರೈನ್‌ಗಳಿಗಾಗಿ ಎಷ್ಟೋ ಹಣವನ್ನು ಖರ್ಚುಮಾಡಿದ್ದಾರೆ. ಲೇಔಟ್‌ಗಳನ್ನು ಮಾಡುವುದಕ್ಕೆ ಹೆಚ್ಚು ದುಡ್ಡನ್ನು ಕಾರ್ಪೋರೇಷನ್ ಸುರಿದಿದೆ. ಡ್ರೈನುಗಳಲ್ಲಿ ಸರಿಯಾಗಿ ನೀರು ಹೋಗುವುದಿಲ್ಲ. ಅನೇಕ ಕಡೆಗಳಲ್ಲಿ 2 ಇಂಚು, 1 ಇಂಚು ಚಪ್ಪಡಿಗಳನ್ನು ರಸ್ತೆಗಳಲ್ಲಿ ಹಾಕಿದ್ದಾರೆ. ಅದೂ ಅಲ್ಲದೆ ರಸ್ತೆಗಳಲ್ಲಿ ಮಣ್ಣು, ಜಲ್ಲಿ ಅನೇಕ ಕಡೆಗಳಲ್ಲಿ ಹಾಕಿದ್ದಾರೆ. ಏತಕ್ಕೆ ಈ ರೀತಿ ಸರ್ಕಾರದಿಂದ ಹಣವನ್ನು ತೆಗೆದುಕೊಂಡು ಹೋಗಿ ಅನ್ಯಾಯ ಮಾಡುತ್ತಾರೋ ಗೊತ್ತಿಲ್ಲ. ಅಲ್ಲಿ ನ್ಯಾಯವಾಗಿ ಕೆಲಸಮಾಡುವುದಿಲ್ಲ. ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಇದೇ ಟ್ರಸ್ಟ್ ಬೋರ್ಡಿನಲ್ಲಿ ಹಿಂದೆ ಒಬ್ಬ ಇಂಜನಿಯರ್ ಲಂಚ ತೆಗೆದುಕೊಂಡು ಐದಾರು ಸಾವಿರ ರೂಪಾಯಿಗಳನ್ನು ದುರುಪಯೋಗ ಮಾಡಿದ್ದಕ್ಕೆ ಸಸ್ಪೆಂಡ್ ಮಾಡಿದ್ದಾರೆ. ಹೀಗೆ ಈಗಲೂ ನಾಗರೀಕರ ದುಡ್ಡನ್ನು ಅಲ್ಲಿ ಬಹಳವಾಗಿ ಅನ್ಯಾಯಮಾಡುತ್ತಿದ್ದಾರೆ.

(ಶ್ರೀ ಎ. ನಂಜಪ್ಪ)

ಒಟ್ಟಿನಲ್ಲಿ ಅಲ್ಲಿ ಬಡವರಿಗೆ, ಅನುಕೂಲವಾಗುವ ಹಾಗೆ ಮಾಡುತ್ತಾ ಇಲ್ಲ. ನಾನು ಬೆಂಗಳೂರು ಕಾರ್ಪೊರೇಷನ್ನಿನಲ್ಲಿ ಮೂರು ಟರ್ಮ್‌ಗಳು ಇದ್ದೆ. ಒಂದುಸಾರಿ 13 ಲೇಔಟುಗಳನ್ನು ಮಾಡಿದರು. ಅಲಸೂರಿನಲ್ಲಿ ನನ್ನ ಕ್ಷೇತ್ರದಲ್ಲಿ ಒಂದು ಲೇಔಟ್ ಮಾಡಿದಾಗ್ಗೆ ರಸ್ತೆಗಳು, ಡ್ರೈನ್ಸ್, ಸ್ಯುಯೇಜ್ ವಾಟರ್ ಡ್ರೈನ್ಸ್ ಎಲ್ಲಾ ಮಾಡಿದರು. ಅಲ್ಲಿ ಈಗ ಸೊಳ್ಳೆ ಕಾಟ ಜಾಸ್ತಿಯಾಗಿದೆ. ಟ್ರಸ್ಟ್‌ಬೋರ್ಡಿನಲ್ಲಿ ಈಗ ಆ ಸ್ಥಳವನ್ನು ಪಬ್ಲಿಕ್ ಪರ್ಪಸ್ಸಿಗೆ ಎಂದು ಲೀಜಿಗೆ ಕೊಟ್ಟಿದ್ದಾರೆ. ಅಲ್ಲಿ ಈಗಾಗಲೇ ಕೆಲಸಗಳು ನಡೆಯುತ್ತಿವೆ. ಅಲ್ಲಿ ಅಂಗಡಿಗಳನ್ನು ಕಟ್ಟಿದ್ದಾರೆ. ಇದರ ಬಗ್ಗೆ ನಾನು ಕಾಗದ ಬರೆದು, ತಕ್ಷಣ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದರೂ. ಸುಮಾರು ಎರಡು ವರ್ಷಗಳಿಂದ ಏನೊಂದು ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಲಿಲ್ಲ. ಅಂಗಡಿಗಳನ್ನು ಅನ್‌ಆತರೈಜ್ಡಾಗಿ ಕಟ್ಟಿಕೊಂಡು ಅಲ್ಲಿ ರಾಗಿ ಮಿಷನ್ ಹಾಕಿಕೊಂಡಿದ್ದಾರೆ, ಇಂಥಾದ್ದನ್ನು ಪಬ್ಲಿಕ್ ಪರ್ಪಸ್ಸಿಗಾಗಿ ಅದನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಬೇಕಾದರೆ ಸಂಬಂಧಪಟ್ಟ ಕಾಗದಪತ್ರಗಳನ್ನು ಮಾನ್ಯ ಮಂತ್ರಿಗಳಿಗೆ ತರಿಸಿಕೊಡುತ್ತೇನೆ. ಅಲ್ಲಿ ಇಂತಹ ಅನ್ಯಾಯಗಳು ನಡೆಯುತ್ತಿವೆ. ಇನ್ನೊಂದು ಕಾಗದವನ್ನು ಅಲ್ಲಿನ ನಡೆವಳಿಕೆಗಳ ಬಗ್ಗೆ ಚೇರ್‌ಮನ್‌ರಿಗೆ ಕೊಡಬೇಕೆಂದಿದ್ದೇನೆ. ಈ ದೇಶದ ದುಡ್ಡನ್ನು ಸಾಲದ ರೂಪದಲ್ಲಿ ತೆಗೆದುಕೊಂಡು ಅವರವರಿಗೆ ಬೇಕಾದವರಿಗೆ ಅನುಕೂಲ ಮಾಡಿಕೊಡುವುದು ಬಹಳ ಅನ್ಯಾಯ. ಅಲ್ಲಿ ಈಗ ಏನಾಗುತ್ತಿದೆಯೆಂದರೆ ಅನೇಕ ಕೆಟ್ಟ ಕೆಲಸಗಳು ನಡೆಯುತ್ತಿವೆ. ಅದರ ಬಗ್ಗೆ ಪೋಲೀಸ್ ವರದಿಯೂ ಸಹ ಇದೆ. ಆದರೂ ಅಲ್ಲಿ ಇನ್ನೂ ಕಂಟ್ರೋಲಿಗೆ ಬಂದಿಲ್ಲ. ಇನ್ನೂ ಈಗಲೂ ಟ್ರಸ್ಟ್ ಬೋರ್ಡಿನವರು ತಮಗೆ ಯಾರು ಬೇಕೋ ಅಂತಹವರಿಗೆ ಅದನ್ನು ಲೀಜ್ ಮೇಲೆ ಕೊಟ್ಟು ಇವತ್ತಿನ ದಿವಸ ಸರ್ಕಾರಕ್ಕೆ ಕೆಟ್ಟ ಹೆಸರು ಬರುವ ಹಾಗೆ ಮಾಡುತ್ತಿದ್ದಾರೆ. ಅಲ್ಲಿ ಟ್ರಸ್ಟ್‌ಬೋರ್ಡಿನವರು ಕಾನೂನು ಪ್ರಕಾರ ನಾವು ಮಾಡುತ್ತಿದ್ದೇವೆಂದು ಹೇಳುತ್ತಾರೆ. ನಾವು ಇಲ್ಲಿ ದುಡ್ಡನ್ನು ಮಂಜೂರು ಮಾಡಿ ಅವರು ಮಾಡುವ ಕೆಟ್ಟ ಕೆಲಸಗಳನ್ನು ಸರ್ಕಾರದವರು ಒಪ್ಪಿಕೊಳ್ಳಬೇಕಾಗಿದೆ. ಇವತ್ತಿನ ದಿವಸ ಅನೇಕ ವರ್ಷಗಳಿಂದ ವಾಟರ್‌ಬೋರ್ಡ್ ಮೀಟಿಂಗ್ ನಡೆದಿಲ್ಲ. ಆದ್ದರಿಂದ ನೀರಿನ ತೊಂದರೆ ಈಗ ಬಹಳ ಇದೆ. ಹೊಸದಾಗಿ ಲೇಔಟುಗಳನ್ನು ಮಾಡಬೇಡಿ. ಈಗಿರುವ ಲೇಔಟುಗಳನ್ನು ಬಡವರಿಗೆ ಹಂಚಿ. ಆಗ ನಾಗರೀಕರಿಗೆ ಸರಿಯಾಗಿ ನೀರು ಸಿಗುವುದಕ್ಕೆ ಅನುಕೂಲವಾಗುತ್ತದೆ. ಈಗ ಲೇಔಟ್ ಮಾಡಿ ಹೆಚ್ಚು ಹಣ ಅದಕ್ಕಾಗಿ ತೆಗೆದುಕೊಂಡು ಹೋಗಿ ಸುರಿಯುವುದರಿಂದ ಏನೂ ಪ್ರಯೋಜನವಿಲ್ಲ. ಆ ಲೇಔಟ್‌ಗಳಲ್ಲಿ ಪ್ಲಾಟ್ಸ್ ಕೊಟ್ಟು ನೀರು ಇಲ್ಲವೆಂದು ಈಗಾಗಲೇ ಅನೇಕ ಕಡೆಗಳಲ್ಲಿ ಜನರು ಟೀಕೆ ಮಾಡುತ್ತಿದ್ದಾರೆ. ಕುಡಿಯುವ ನೀರಿನ ವಿಷಯವಾಗಿ ಅನೇಕ ಸದಸ್ಯರು ಬೇಕಾದಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಬಹಳ ಕಷ್ಟ ಪಟ್ಟಿದ್ದಾರೆ. ಅದಕ್ಕಾಗಿ ಕಾವೇರಿಯಿಂದ ನೀರು ಬಂದಮೇಲೆ ಲೇಔಟ್ ಮಾಡಿ ಪ್ಲಾಟುಗಳನ್ನು ಬಡವರಿಗೆ ಹಂಚಬೇಕು. ನಮಗೆ ನೀರು ಇಲ್ಲದೇ ಇರುವಾಗ ಲೇಔಟ್ ಮಾಡಿ ಅದಕ್ಕಾಗಿ ವೃಥಾ ಹಣವನ್ನು ಖರ್ಚುಮಾಡಿದರೆ ಏನು ಪ್ರಯೋಜನ ? ನಾವು ಮಾಡುವ ಕೆಲಸ ನ್ಯಾಯವಾಗಿರಬೇಕು. ನಾಗರೀಕರು ಕುಡಿಯುವುದಕ್ಕೆ ಸಾಕಷ್ಟು ನೀರಿಲ್ಲ ಅಂದರೆ ಬಹು ಕಷ್ಟ. ಏಕೆಂದರೆ ಈಗಾಗಲೇ ಬೆಳೆಯುತ್ತಿದೆ, ಸುತ್ತ ಊರು. ಈಗ ವಾಟರ್ ಮೆಯಿನ್‌ಗಳನ್ನು ಹಾಕಬೇಕೆಂದರೆ ಹೆಚ್ಚು ದುಡ್ಡು ಬೇಕಾಗುತ್ತದೆ. ಬಹಳ ಕಷ್ಟ. ಇಂದಿರಾ ನಗರದಲ್ಲಿ ಈಗ ಕುಡಿಯುವುದಕ್ಕೆ ನೀರೇ ಇಲ್ಲ. ಜನರಿಗೆ ಮುಖ್ಯವಾಗಿ ಬೇಕಾಗಿರುವುದು ನೀರು. ನೀರಿಲ್ಲದ ಮೇಲೆ ಏಕೆ ಲೇಔಟ್ ಮಾಡಬೇಕು ? ಇದರಿಂದ ಬಡವರಿಗೆ ಅನುಕೂಲವಾಗಿಲ್ಲ. ಹಣವಂತರಿಗೇ ಅನುಕೂಲವಾಗುತ್ತಿದೆ. ಈ ವಿಚಾರವಾಗಿ ಸರ್ಕಾರದವರು ಆಲೋಚನೆಮಾಡಿ ಒಂದು ನಿರ್ಣಯವನ್ನು ಕೂಡಲೇ ತೆಗೆದುಕೊಳ್ಳಬೇಕು. ದೊಮ್ಮಲೂರಿಗೆ ಮಂತ್ರಿಗಳನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಅಲ್ಲಿ ಸರ್ಕಾರದ ಎರಡು ಎಕರೆ ಜಮೀನನ್ನು ಯಾರಿಗೋ ಕೊಟ್ಟಿದ್ದಾರೆ. ಅಲ್ಲಿ ಎಲ್ಲಾ ಹರಿಜನರು ಇದ್ದಾರೆ. ಅಂತಹವರಿಗೆ ಅಲ್ಲಿ ನ್ಯಾಯವಾಗಿ ಜಮೀನು ಹಂಚಿಕೆ ಮಾಡಬೇಕು. ಅವರ ಮನೆಯಲ್ಲಿ ಮಕ್ಕಳು ಮರಿಗಳು ಹೇಗೆ ಇರುತ್ತಾರೆಂಬುದನ್ನು ರೆವಿನ್ಯೂ ಮಿನಿಸ್ಟರ್ ಮತ್ತು ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ತಿಳಿದುಕೊಳ್ಳಬೇಕು. ಒಬ್ಬ ಗಂಡ, ಹೆಂಡತಿ ಮಲಗಿಕೊಳ್ಳುವುದಕ್ಕೆ ಅಲ್ಲಿ ಸ್ಥಳ ಇರುತ್ತದೆ. ಅಂತಹವರಿಗೆ ಎರಡು ಮಕ್ಕಳಾದರೆ, ಆಗ ಅವರು ಆಚೆ ಮಲಗಿಕೊಂಡು ಮಕ್ಕಳಿಗೆ ಆ ಜಾಗವನ್ನು ಬಿಟ್ಟುಕೊಡಬೇಕಾಗುತ್ತದೆ. ಟ್ರಸ್ಟ್ ಬೋರ್ಡಿನವರು ಅವರಿಗೆ ಏನೂ ಅನುಕೂಲಗಳನ್ನು ಮಾಡಿಕೊಟ್ಟಿಲ್ಲ. ಅವರಿಗೆ ಒಂದು ಮನೆಯನ್ನು ಕಟ್ಟಿಕೊಳ್ಳುವುದಕ್ಕೂ ಸ್ಥಳವಿಲ್ಲ. ಮಂತ್ರಿಗಳು ಹೇಳಿದರು 2500 ರೂಪಾಯಿಗಳನ್ನು ಅವರ ಮನೆಗಳಿಗಾಗಿ ಒಬ್ಬೊಬ್ಬರಿಗೂ ಕೊಡುತ್ತೇವೆಂದು. ಅದು ಸುಮಾರು 30 ವರ್ಷಗಳಿಗೆ 5 ಸಾವಿರ ರೂಪಾಯಿಗಳ ಲೆಕ್ಕ ಆಗು

ತ್ತದೆ. ಅದಕ್ಕಾಗಿ ಒಂದು ಸೊಸೈಟಿಯನ್ನು ಸ್ಥಾಪನೆಮಾಡಿ ಎಂದು ಹೇಳಿದರು. ಆಮೇಲೆ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಹತ್ತಿರ ತಿರುಗಿ ಹೋದರೆ, ಸರ್ಕಾರ ಆ ಬಾಬಿಗೆ ದುಡ್ಡು ಕೊಟ್ಟಿದ್ದಾರೆಂದು ಹೇಳಿದರು. ಇವತ್ತಿನ ದಿವಸ ಆ ಇಲಾಖೆಯುಲ್ಲಿ ಇನ್‌ಎಫಿಷಿಯನ್ಸಿ ಬಹಳ ಇದೆಯೆಂದು ಅನೇಕ ಜನರು ಹೇಳಿದ್ದಾರೆ. ನಾನು ಇದೇ ಬೆಂಗಳೂರಿನಲ್ಲಿದ್ದುಕೊಂಡು ಅನೇಕ ವರ್ಷಗಳ ಕಾಲ ಬೆಂಗಳೂರು ಕಾರ್ಪೊರೇಷನ್ ಮಾಡಿದಂಥ ಅನೇಕ ಲೇಔಟ್‌ಗಳನ್ನು ನೋಡಿದ್ದೇನೆ. ಕಾರ್ಪೊರೇಷನ್ನಿನಿಂದ ನಿಜವಾಗಿ ದುಡ್ಡು ಬೆಂಗಳೂರಿನ ನಾಗರೀಕರ ಅನುಕೂಲಕ್ಕಾಗಿ ಕೊಡುತ್ತಿಲ್ಲ. ಟ್ಯಾಕ್ಸ್ ದುಡ್ಡೂ ಸಹ ಲೇಔಟ್ ಮ್ಯಾಪ್‌ಗಳಿಗೆ, ಡ್ರೈನೇಜ್‌ಗಳಿಗೆ ವಿಶೇಷವಾಗಿ ಕೊಟ್ಟಿದ್ದಾರೆ. ಅಷ್ಟು ಮಟ್ಟಿಗಿದೆ ಕಾನೂನು. ಅರ್ಥಮಾಡಿಕೊಳ್ಳಿ. ಹೊಸದಾಗಿ ಅಧಿಕಾರಿಗಳಾದವರು ಏನು ಮಾಡಿದರೂ ಇಂತಹ ಸಂದರ್ಭಗಳಲ್ಲಿ ನಿಜವಾಗಿ ಒಳ್ಳೆಯ ಮನುಷ್ಯರಿಗೆ ಕೆಟ್ಟ ಹೆಸರು ಬರುತ್ತದೆ. ಮುಖ್ಯವಾಗಿ ಜನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ಒಂದು ವರ್ಷ ಮಳೆ ಹೋದರೆ ನಮ್ಮ ಬೆಂಗಳೂರು ಲಾಟರಿ ಹೊಡೆಯುತ್ತದೆ. ಆದ್ದರಿಂದ ಹೊಸದಾಗಿ ಲೇಔಟ್ ಮಾಡುವುದಕ್ಕೆ ಅನುಮತಿ ಕೊಡಬೇಡಿ. ಸರ್ಕಾರದವರು ಪ್ಲಾಟುಗಳನ್ನು ಕೊಡುವಾಗ ಬಡವರಿಗೆ ಕೊಡುವುದು ಸುಗಮವಾಗಿದೆ. ಏಕೆಂದರೆ ಈಗ ಬಡವರಿಗೆ ಖಂಡಿತವಾಗಿ ಅವು ಹೋಗುತ್ತಾ ಇಲ್ಲ. ಹಣವಂತರಿಗೇ ಹೋಗುತ್ತಿದೆ. ಎಲ್ಲಾ ಪ್ಲಾಟುಗಳಲ್ಲಿಯೂ ಹಣವಂತರೇ ಸೇರಿಕೊಂಡಿದ್ದಾರೆ. ಅದು ಮಾನ್ಯ ಮಂತ್ರಿಗಳಿಗೂ ಚೆನ್ನಾಗಿ ಗೊತ್ತಿದೆ. ಇದು ಇನ್ನು ಮುಂದೆ ಆಗಕೂಡದು. ಬೆಂಗಳೂರು ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಜನಗಳ ಪ್ರತಿನಿಧಿಗಳನ್ನು ಇನ್ನು ಮುಂದೆ ಹಾಕಿ ಬಡವರಿಗೆ ಹೆಚ್ಚಿನಮಟ್ಟಿಗೆ ಅಲ್ಲಿ ಅನುಕೂಲವಾಗುವುದಕ್ಕೆ ಸರ್ಕಾರದವರು ಪ್ರಯತ್ನಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ಇದರಲ್ಲಿ ಟ್ರಸ್ಟ್ ಬೋರ್ಡಿನವರು ಸರಕಾರದ ಕಂಟ್ರೋಲಿಗೆ ಒಳಪಟ್ಟು ಎಷ್ಟು ಸಾಲ ಬೇಕೋ ಅಷ್ಟು ಮಾಡಿಕೊಳ್ಳಬಹುದು ಎಂದು ಬಿಲ್ಲು ತಂದಿದ್ದಾರೆ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಎಲ್ಲೇ ಇರಲಿ, ಬೆಂಗಳೂರಿನಲ್ಲಿ ಇರಲಿ, ಮೈಸೂರಿನಲ್ಲಿ ಇರಲಿ, ಅದರ ಉದ್ದೇಶ, ನನಗೆ ತಿಳಿದಿರುವ ಪ್ರಕಾರ, ಸ್ಲಂ ಕ್ಲಿಯರೆನ್ಸ್ ಮಾಡಿ ಮನೆ ಇಲ್ಲದವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುವುದು, ಮತ್ತು ನೋ ಲಾಸ್ ನೋ ಪ್ರಾಫಿಟ್ ಬೇಸಿಸ್‌ನಲ್ಲಿ ಲೇ ಔಟ್ ಮಾಡಿ ಸಾರ್ವಜನಿಕರಿಗೆ ನಿವೇಶನಗಳನ್ನು ಒದಗಿಸುವುದು. ಈಗ ಈ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡುಗಳು ಪ್ರಜಾಸತ್ತಾತ್ಮಕ ರೀತಿಯಲ್ಲಿ ನಡೆಯುತ್ತಾ ಇಲ್ಲ. ಆ ಬೋರ್ಡಿಗೆ ನಾಮಿನೇಷನ್ ಮಾಡಬೇಕಾದರೆ, ಶ್ರೀಮಂತರಿಗೆ ಅವಕಾಶ ಸಿಕ್ಕುತ್ತದೆಯೇ ವಿನಾ ನನ್ನಂತಹವರಿಗೆ ಅವಕಾಶವಿಲ್ಲ. ಕಾಂಗ್ರೆಸ್ ಜನರಿಗೆ ಮತ್ತು ಕಾಂಗ್ರೆಸ್ಸಿಗೆ ನಮಸ್ಕಾರ ಮಾಡುವವರಿಗೆ ಅಲ್ಲಿ ಸ್ಥಾನ ಇದೆಯೇ ವಿನಾ ವಿರೋಧಪಕ್ಷದವರು ಆ ಬೋರ್ಡಿನಲ್ಲಿ ಸದಸ್ಯರು ಆಗುವುದಕ್ಕೆ ಅವಕಾಶವಿಲ್ಲ. ಎಲ್ಲೆಲ್ಲಿ ಓಪನ್ ಸ್ಪೇಸ್ ಇರಬೇಕು, ಎಲ್ಲೆಲ್ಲಿ ಆಸ್ಪತ್ರೆ ಇರಬೇಕು, ಚರ್ಚ್, ದೇವಸ್ಥಾನ ಇರಬೇಕು, ಮಸೀದಿ ಇರಬೇಕು ಅವೊಂದಕ್ಕೂ ಲೇಔಟಿನಲ್ಲಿ ಅವಕಾಶಮಾಡಿಕೊಟ್ಟಿರುವುದಿಲ್ಲ. ಎಲ್ಲಾ ಜಾಗವನ್ನೂ ಮಾರಾಟ ಮಾಡಿಬಿಡುತ್ತಿದ್ದಾರೆ. ಈಗ ನಿವೇಶನದ ಬೆಲೆ ಯಾತಕ್ಕೆ ಜಾಸ್ತಿ ಆಗಿದೆ ಎಂದರೆ ಎಷ್ಟು ಜನರು ಚುನಾಯಿತರಾಗಿ ಬಂದು ಮಂತ್ರಿಗಳಾಗಿ ರಿಟೈರ್ ಆಗಿದ್ದಾರೋ, ಅವರೆಲ್ಲರಿಗೂ ಒಂದೊಂದು ಮನೆ ಇದೆ.

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ಬೆಂಗಳೂರು ಟ್ರಸ್ಟ್ ಬೋರ್ಡು ಸಲುವಾಗಿ ಮಾತನಾಡುತ್ತಿದ್ದಾರೆಯೋ, ಮೈಸೂರು ಟ್ರಸ್ಟ್ ಬೋರ್ಡ್ ಸಲುವಾಗಿ ಮಾತನಾಡುತ್ತಿದ್ದಾರೋ ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಅಜೀಜ್ ಸೇಟ್.—ಮಂತ್ರಿಗಳ ಲೇ ಔಟ್ ಎಂದರೆ ಮಂತ್ರಿಗಳು ಸ್ವರ್ಗದಲ್ಲಿ ಇದ್ದಹಾಗೆ ಇರುತ್ತಾರೆ. ಹೊಸದಾಗಿ ಮಂತ್ರಿಗಳಾದರೆ, ಅವರಿಗೆಲ್ಲಾ ಒಂದೊಂದು ಹೊಸ ಸೈಟ್ ಕೊಡುತ್ತಾರೆ. ಯಾವುದೇ ಮಂತ್ರಿಗಳಿಗೆ ಇರುವ ಸೌಕರ್ಯ ನಮ್ಮ ದೇಶದಲ್ಲಿ ಬೇರೆ ಯಾವ ಜನರಿಗೂ ಇಲ್ಲ. ಇವೊತ್ತು ಬೆಂಗಳೂರಿನಲ್ಲಿ ಜನರಿಗೆ ಸರಿಯಾದ ರಕ್ಷಣೆ ಸಿಗುತ್ತಾ ಇಲ್ಲ. ಬೆಂಗಳೂರು ಉತ್ತರದಿಂದ ದಕ್ಷಿಣಕ್ಕೆ ಮತ್ತು ಪೂರ್ವದಿಂದ ಪಶ್ಚಿಮಕ್ಕೆ ಬೆಳೆಯುತ್ತಾ ಇದೆ. It is high time that this sort of growth is checked. ಬೆಂಗಳೂರು ಮೇಲಕ್ಕೆ ಬೆಳೆಯಬೇಕೇ ವಿನಾ ಹೊಸದಾಗಿ ನಿವೇಶನಗಳನ್ನು ಮಾಡುವುದನ್ನು ಕಡಿಮೆ ಮಾಡಬೇಕು. ಬೆಂಗಳೂರು ಲೆಂಗ್ತ್‌ವೈಸ್ ಮತ್ತು ಬ್ರೆಡ್ತ್‌ವೈಸ್ ಬೆಳೆಯುವುದು ಕಡಿಮೆಯಾಗಬೇಕು. ಈ ಬೋರ್ಡಿನವರು ಮಾಡಿರುವ ಬಡಾ

(ಶ್ರೀ ಅಜೀಜ್ ಸೇಟ್)

ವಣಿಗಳಿಗೆ, ಟಾರ್ ರಸ್ತೆಗಳಿರುವುದಿಲ್ಲ, ಬೀದಿ ದೀಪಗಳಿರುವುದಿಲ್ಲ. ನೀರು ಕೊಳಾಯಿಗಳನ್ನು ಹಾಕಿರುವುದಿಲ್ಲ. ಇವರು ಮಾಡುವ ಅನ್ಯಾಯಕ್ಕೆಲ್ಲಾ ಕಾರ್ಪೊರೇಷನ್ನಿನವರು ಹೊಣೆಗಾರರಾಗಬೇಕು. ಮತ್ತು ಅದಕ್ಕೆ ಬೇಕಾದ ಹಣ ಜನರು ಕೊಡಬೇಕಾಗಿದೆ. ಎಷ್ಟೋ ಮನೆಗಳಿಗೆ ನಂಬರ್ ಕೊಟ್ಟಿಲ್ಲ, ಕಂದಾಯ ಹಾಕಿಲ್ಲ. ಈವೊತ್ತು ಬೆಂಗಳೂರಿನಲ್ಲಿ ಬಡವರು ಮತ್ತು ಸರಕಾರಿ ಬಡ ನೌಕರರು ವಾಸಮಾಡುವಹಾಗಿಲ್ಲ. ಕೂಲಿಗಾರರು ಮತ್ತು ಬಡವರು ಸಿಟಿಯಿಂದ ದೂರ ಹೋಗಿ ಗುಡಿಸಲು ಹಾಕಿಕೊಂಡು ಇರಬೇಕಾಗಿದೆ. 30 ರೂಪಾಯಿ ಕೊಟ್ಟು ಮನೆ ಬಾಡಿಗೆಗೆ ತೆಗೆದುಕೊಳ್ಳುವ ಶಕ್ತಿಯೂ ಇಲ್ಲ, ಮತ್ತು ಅಷ್ಟು ಕಡಿಮೆ ಬಾಡಿಗೆಯ ಮನೆಗಳೂ ಸಿಕ್ಕುವುದಿಲ್ಲ. ನಾಲ್ಕನೇ ದರ್ಜೆಯ ನೌಕರರು ಆರು ಮೈಲಿ ದೂರದಿಂದ ನಡೆದುಕೊಂಡು ಬರಬೇಕು. ಈ ರೀತಿ ಬೆಂಗಳೂರಿನಲ್ಲಿ ಪರಿಸ್ಥಿತಿ ಹದಗೆಡುತ್ತಾ ಇದೆ. ಈ ಟ್ರಸ್ಟ್ ಬೋರ್ಡುಗಳಲ್ಲಿ ಸದಸ್ಯರಾಗಲು ಎಲ್ಲರಿಗೂ ಅವಕಾಶ ಇರಬೇಕು. ಲೇಔಟ್ ಮಾಡುವಾಗ ಎಲ್ಲಾ ವಿಧವಾದ ಸೌಕರ್ಯಗಳನ್ನೂ ಒದಗಿಸಿ ಆ ಮೇಲೆ ಕಾರ್ಪೊರೇಷನ್ನಿಗೆ ಹ್ಯಾಂಡ್ ಓವರ್ ಮಾಡಬೇಕು. ಬೆಂಗಳೂರನ್ನು ಸ್ಕ್ವೈವೈಸ್ ಬೆಳೆಯಲು ಅವಕಾಶಕೊಡಬೇಕೇ ವಿನಾ ಈ ಲೆಂಗ್ತ್‌ವೈಸ್ ಅಥವಾ ಬ್ರೆಡ್ತ್‌ವೈಸ್ ಬೆಳೆಯಲು ಅವಕಾಶ ಕೊಡಬಾರದು. ಪೋಲೀಸ್ ಔಟ್‌ಪೋಸ್ಟುಗಳನ್ನು ಹೆಚ್ಚು ಮಾಡಿ ಜನರಿಗೆ ರಕ್ಷಣೆ ಕೊಡಬೇಕು. ಮೊನ್ನೆ ಮಿಲ್ ಕಾಲೋನಿಯಲ್ಲಿ ಗುಡಿಸಲುಗಳನ್ನು ಸುಟ್ಟುಹಾಕಿದ್ದಾರೆ, ಮಾವಳ್ಳಿಯಲ್ಲಿ ಒಬ್ಬ ಕಾಕಾ ಅಂಗಡಿಯ ಬೋರ್ಡ್ ಎತ್ತಿದ್ದಾರೆ. ಕಲ್ಲು ಹೊಡೆದಿದ್ದಾರೆ, ಇದು ಚಳುವಳಿ ಮಾಡುವ ರೀತಿಯೇ ? ಜನರಿಗೆ ಸೆಕ್ಯೂರ್ಟಿ ಇಲ್ಲ. ಸೇಫ್ಟಿ ಇಲ್ಲ ತಮ್ಮ ಮನೆಗಳಿಗೆ ಆದರೆ ರಿಸರ್ವ್ ಪೋಲೀಸು ಎಲ್ಲಾ ಬರುತ್ತದೆ, ನನ್ನಂಥ ಬಡವನು ಇರುವ ಕಡೆಗೆ ಯಾರೂ ಬರುವುದಿಲ್ಲ. ತಾವು ಪ್ರಜಾಪ್ರಭುತ್ವದಲ್ಲಿ ನಂಬಿಕೆಯುಳ್ಳವರಾದ್ದರಿಂದ ಇದನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಕೋಟೆ).—ಮಾನ್ಯ ಸಭಾಪತಿಗಳೇ, ತಾವು ನನಗೆ ಅವಕಾಶ ಕೊಟ್ಟದ್ದಕ್ಕಾಗಿ ನನ್ನ ವಂದನೆ. ಈಗ ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಅಮೆಂಡ್‌ಮೆಂಟ್ ಬಿಲ್ಲನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ರೀತಿ ಪ್ರತಿವರ್ಷವೂ ಕೂಡ ಒಂದೊಂದು ಅಮೆಂಡ್‌ಮೆಂಟ್ ಬಿಲ್ಲುಗಳು ಬರುತ್ತಲೇ ಇರುತ್ತವೆ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡು ಮತ್ತು ಕಾರ್ಪೊರೇಷನ್‌ಗೆ ಒಂದು ಸಮಗ್ರವಾದಂತಹ ಬಿಲ್ಲನ್ನು ತರಬೇಕೆಂದು ಹೇಳಿ ಅನೇಕ ತಿಂಗಳುಗಳಾದರೂ ಕೂಡ ಅದು ಹಾಗೆಯೇ ಇದ್ದು ಈ ರೀತಿ ಚಿಲ್ಲರೆ ಚಿಲ್ಲರೆಯಾಗಿ ತಿದ್ದುಪಡಿ ಬಿಲ್ಲುಗಳನ್ನು ತರುತ್ತಾ ಇರುವುದು ಅಷ್ಟು ಸೂಕ್ತವಾದುದಲ್ಲ. ಜಯನಗರ, ರಾಜಾಜಿನಗರ, ಸದಾಶಿವನಗರ ಇವುಗಳನ್ನು ಬಿಟ್ಟರೆ ಈ ಟ್ರಸ್ಟ್‌ಬೋರ್ಡ್ ಯಾವ ವಿಧವಾದ ಒಂದು ಉತ್ತಮವಾದ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನಪಟ್ಟಿಲ್ಲ. ಊರೆಲ್ಲಾ ಸೂರೆ ಆದ ಮೇಲೆ ಊರು ಬಾಗಿಲು ಹಾಕಿದರು ಅಂತ ಅನ್ನುವ ಹಾಗೆ ಬೆಂಗಳೂರು ನಗರ ಅಕ್ರಮವಾಗಿ ಬೆಳೆಯುವುದಕ್ಕೆ ಅವಕಾಶ ಕೊಟ್ಟು ಈಗ ಅನೇಕ ತರಹದ ಮಾರ್ಪಾಡುಗಳನ್ನು ಮಾಡಬೇಕೆಂದು ಪ್ರಯತ್ನ ಪಡುತ್ತಾ ಇದ್ದೀರಿ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಪ್ರಾರಂಭವಾದಾಗಲೇ ಇಂತಹ ಲೋನ್ ರೈಸ್ ಮಾಡಿ ಬೆಂಗಳೂರು ಸುತ್ತಮುತ್ತಲಿನ ೫ ಮೈಲಿ ಭಾಗವನ್ನು ತೆಗೆದುಕೊಂಡು ಸೈಟುಗಳನ್ನು ಮಾಡಿ ಬಡವರಿಗೆ ಕೊಟ್ಟಿದ್ದ ಪಕ್ಷದಲ್ಲಿ ಈ ರೀತಿ ಅಕ್ರಮವಾದ ನೂರಾರು ರೆವಿನ್ಯೂ ಪಾಕೆಟ್ಸ್ ಆಗುತ್ತಾ ಇರಲಿಲ್ಲ. ಟ್ರಸ್ಟ್‌ಬೋರ್ಡಿನವರು ಸೃಷ್ಟಿಮಾಡಿರತಕ್ಕ ಮನೆಗಳು ಮತ್ತು ಸೈಟುಗಳಿಗಿಂತ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅನಧಿಕೃತವಾಗಿರತಕ್ಕ ಲೇಔಟುಗಳು ನಿರ್ಮಾಣವಾಗಿ ಅಲ್ಲಿರತಕ್ಕ ಮನೆಗಳು ಜೂಜಿನ ಕಟ್ಟೆಗಳು, ಕಳ್ಳಭಟ್ಟಿ ತಯಾರು ಮಾಡತಕ್ಕ ಕೇಂದ್ರಗಳು ಹಾಗೂ ಸೂಳೆಗಾರಿಕೆ ನಡೆಸತಕ್ಕ ಜಾಗಗಳಾಗಿವೆ. ಟ್ರಸ್ಟ್‌ಬೋರ್ಡಿನವರು ಬೆಂಗಳೂರು ನಗರದಲ್ಲಿರತಕ್ಕ 110 ಸ್ಲಂಗಳನ್ನು ಕ್ಲಿಯರ್ ಮಾಡಲಿಕ್ಕೆ ನಿಜವಾಗಿಯೂ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ಅದರ ಜೊತೆಗೆ ನೂರಾರು ಇಂತಹ ರೆವಿನ್ಯೂ ಲೇಔಟ್ಸ್ ನಿರ್ಮಾಣವಾಗಿವೆ. ಅಲ್ಲಿ ನೀರಿನ ಸೌಕರ್ಯ ಇಲ್ಲ. ಇದರ ಜೊತೆಗೆ ಅನ್‌ಆಥರೈಸ್ಡ್ ರೆವಿನ್ಯೂ ಲ್ಯಾಂಡ್‌ನಲ್ಲಿ ಕಟ್ಟಿರತಕ್ಕ ಮನೆಗಳಲ್ಲಿ ವಾಸಮಾಡತಕ್ಕವರನ್ನು ಓಟರುಗಳ ಲಿಸ್ಟ್‌ನಲ್ಲಿ ಸೇರಿಸಿದ್ದಾರೆ. ನಮಗೆ ಬಂದಿರತಕ್ಕ ಕಷ್ಟ ಅವರಿಂದ ಓಟು ಪಡೆದುಕೊಂಡು ಬಂದು ಅವರಿಗೆ ಏನೂ ಕೂಡ ಅನುಕೂಲ ಮಾಡಿಕೊಡುವುದಕ್ಕೆ ಶಕ್ತಿ ಇಲ್ಲದಂತಾಗಿದೆ. ಟ್ರಸ್ಟ್‌ಬೋರ್ಡಿನವರು ತಾವು ತೆಗೆದುಕೊಂಡ ಜಾಗವನ್ನು ತಕ್ಷಣ ಕಾರ್ಪೊರೇಷನ್‌ಗೆ ವಹಿಸಿಕೊಟ್ಟಿದ್ದರೆ ಬಹಳ ಅನುಕೂಲವಾಗುತ್ತಿತ್ತು. ಈಗ ರಾಜಾಜಿನಗರ ಮತ್ತು ಜಯನಗರಕ್ಕಾಗಿ 15 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ ಕಾರ್ಪೊರೇಷನ್ನಿನ ವಹಿಸಿಕೊಟ್ಟರು ಕಾರ್ಪೊರೇಷನ್‌ನವರು ಸುಮಾರು ಒಂದೂವರೆಕೋಟಿ ರೂಪಾಯಿಗಳನ್ನು ವೆಚ್ಚ

ಮಾಡಿದ್ದಾರೆ ಆದರೂ ಕೂಡ ಅವು ಸರಿಯಾದ ಸ್ಥಿತಿಗೆ ಬಂದಿಲ್ಲ. ಮೊನ್ನೆ ಎ ಐ ಸಿ ಸಿ ಮೀಟಿಂಗ್ ಆದಾಗ ಡೆಲಿಗೇಟ್ಸ್‌ಗೆ ಜಾಗ ಪ್ರೊವೈಡ್ ಮಾಡಿಕೊಡಬೇಕಾಯಿತು, ಜಯನಗರದ ಅನೇಕ ರಸ್ತೆಗಳನ್ನು ಬೇಕಾದ ಹಾಗೆ ದುಡ್ಡು ಖರ್ಚು ಮಾಡಿ ಟಾರ್ ಮಾಡಿದರು. ಅದೇ ರೀತಿ ಬಡವರು ಇರುವ ಕಡೆ ಅನುಕೂಲ ಮಾಡಿಕೊಡಿ ಎಂದರೆ ಹೆಚ್ಚು ಗಮನ ಕೊಡುವುದಿಲ್ಲ. ಅದೇ ರೀತಿ ಸೈಟುಗಳನ್ನು ಕೊಡುವಾಗಲೂ ಕೂಡ ದುಡ್ಡು ಇರಬೇಕು ಇಲ್ಲದೇ ಇದ್ದರೆ ಇನ್‌ಫ್ಲೂಯನ್ಸ್ ಇರಬೇಕು ಅಂಥವನಿಗೆ ಕೊಡತಕ್ಕ ಕ್ರಮ ಹಿಂದಿನಿಂದ ನಡೆದುಕೊಂಡು ಬಂದಿದೆ. ಲೇ ಔಟ್ ಚಾರ್ಜಸ್ ನಿಗದಿ ಮಾಡುವಾಗ ನಗರದ ಬೆಳವಣಿಗೆಗೆ ಬೇಕಾದ ನೀರು ಮತ್ತು ಒಳಚರಂಡಿ ವ್ಯವಸ್ಥೆಗೆ ಬೇಕಾದ ದುಡ್ಡನ್ನೂ ಸೇರಿಸಿ ನಿಗದಿ ಮಾಡಿದ್ದ ಪಕ್ಷದಲ್ಲಿ ವಾಟರ್ ಸಪ್ಲೈಗಾಗಲಿ, ಡ್ರೈನೇಜ್‌ಗಾಗಲಿ ಕಷ್ಟವಾಗುತ್ತಾ ಇರಲಿಲ್ಲ. ಮೊದಲೇ ಸರಿಯಾದಂತಹ ಒಂದು ಮಾಸ್ಟರ್ ಪ್ಲಾನ್ ಹಾಕಿಕೊಳ್ಳದೆ, ಕ್ರಮವಾದ ಒಂದು ಶಿಸ್ತಿನ ತೀರ್ಮಾನವನ್ನು ತೆಗೆದುಕೊಳ್ಳದೆ ಇಂತಹ ಬಿಲ್ಲುಗಳನ್ನು ಆಗಿಂದಾಗ್ಗೆ ತರುತ್ತಾ ಇರುವುದು ಬಹಳ ಶೋಚನೀಯವಾದ ವಿಚಾರ. ಇನ್ನುಮುಂದಾದರೂ ಸಹ ಇದು ಸರಿಯಾದ ಒಂದು ಇಂಪ್ರೂವ್‌ಮೆಂಟ್ ಮಾಡತಕ್ಕ ಸಂಸ್ಥೆಯಾಗಲಿ ಎಂದು ಹಾರೈಸುತ್ತೇನೆ. ನಾನು ಈ ಮಸೂದೆಗೆ ಒಂದು ತಿದ್ದುಪಡಿಯನ್ನು ಕೊಟ್ಟಿದ್ದೇನೆ. ಅದು ಈ ರೀತಿ ಇದೆ.—

To the clause 2, add a new clause as 29B (1).—

> "While utilising the borrowed funds for the projects undertaken by the Board, out of the borrowed funds, in the estimate to be prepared the quantum of interest payable to the loan borrowed in respect of that project should be added."
>
> "(2) The amount of the borrowed loan should be utilised for productive and development projects only."

ಈ ಎರಡು ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತಾರೆ ಎಂದು ಹೇಳಿ ತಿಳಿದುಕೊಂಡಿದ್ದೇನೆ. ಈಗ ನಮ್ಮ ದೇಶದಲ್ಲಿ ಬಂದಿರತಕ್ಕ ದೊಡ್ಡ ಅಡಚಣೆ ಏನೆಂದರೆ ಯಾರಿಗೆ ಸೌಕರ್ಯಬೇಕೊ ಅದನ್ನು ಒದಗಿಸಿಕೊಡುವುದಿಲ್ಲ. ಕೆಲವು ದಿನಗಳ ಹಿಂದೆ ಕಾನ್‌ಪುರಕ್ಕೆ ಹೋಗಿದ್ದೆ ಅಲ್ಲಿ ಯಾವುದಾದರೂ ಒಂದು ಸ್ಕೀಂ ತೆಗೆದುಕೊಂಡರೆ ಅದನ್ನು ನಿಗದಿಯಾದಂತಹ ಕಾಲದಲ್ಲಿ ಕ್ರಮಪಡಿಸುವುದಕ್ಕೆ ಪ್ರಯತ್ನಪಡುತ್ತಾರೆ. ಈಗ ನಮ್ಮ ಏರಿಯಾದಲ್ಲಿ ಅಶೋಕ ನಗರ ಮತ್ತು ಹನುಮಂತನಗರ ಇದೆ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಸುಮಾರು ಆಗಲೇ ಹತ್ತು ವರ್ಷವಾಯಿತು, ಇದುವರೆಗೂ ಕೂಡ ಯಾವ ಇಂಪ್ರೂವ್‌ಮೆಂಟೂ ಮಾಡುತ್ತಿಲ್ಲ. ಕಾರ್ಪೊರೇಷನ್‌ನವರು ನಮಗೆ ಸಂಬಂಧವಿಲ್ಲ ಎಂದು ಹೇಳುತ್ತಾರೆ. ರಸ್ತೆ, ಚರಂಡಿ ಎಲ್ಲಾ ಕೆಟ್ಟುಹೋಗುತ್ತಾ ಇವೆ. ನಾಳೆ ಅದನ್ನು ಕಾರ್ಪೊರೇಷನ್‌ನವರು ತೆಗೆದುಕೊಂಡರೆ ಒಂದಕ್ಕೆ ನಾಲ್ಕರಷ್ಟು ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ಟ್ರಸ್ಟ್‌ಬೋರ್ಡಿನವರು ಒಂದು ಪ್ರಾಜೆಕ್ಟನ್ನು ಕಂಪ್ಲೀಟ್ ಮಾಡಿದ ತಕ್ಷಣ ಕಾರ್ಪೊರೇಷನಿಗೆ ವಹಿಸಿಕೊಡತಕ್ಕ ಕ್ರಮ ಇಟ್ಟುಕೊಳ್ಳಬೇಕಾಗುತ್ತದೆ, ಅದರ ಜೊತೆಗೆ ಸೈಟುಗಳನ್ನು ಅಲಾಟ್ ಮಾಡುವ ಸಂಧರ್ಭದಲ್ಲಿ ಅನೇಕ ಮನೆಗಳು ಇದ್ದಂಥವರಿಗೆ ಕೊಡತಕ್ಕ ಒಂದು ಪದ್ಧತಿಯನ್ನು ಆದಷ್ಟು ಕಡಿಮೆ ಮಾಡಿ ಜನಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್, ಕಾರ್ಪೊರೇಷನ್ ಮತ್ತು ಟೌನ್ ಪ್ಲಾನಿಂಗ್ ಅಥಾರಿಟಿ ಇವುಗಳು ಕೋ ಆರ್ಡಿನೇಷನ್ ಇಟ್ಟುಕೊಂಡು ಕೆಲಸ ಮಾಡಬೇಕೆಂದು ಇದ್ದರೂ ಕೂಡ ಅದು ಸರಿಯಾಗಿ ಆಗುತ್ತಿಲ್ಲ. ಈ ಕಡೆ ಕಾರ್ಪೊರೇಷನ್ ರಸ್ತೆ ರಿಪೇರಿ ಮಾಡುತ್ತ ಬಂದರೆ, ಆ ಕಡೆ ವಾಟರ್ ಸಪ್ಲೈ ಬೋರ್ಡಿನವರು ರಸ್ತೆಗಳನ್ನು ಡ್ಯಾಮೇಜ್ ಮಾಡುತ್ತಾರೆ. ಇವರಲ್ಲಿ ಕೋ ಆರ್ಡಿನೇಷನ್ ಸರಿಯಾಗಿಲ್ಲ ಎಂದು ವಿಷಾದದಿಂದ ತಿಳಿಸುತ್ತೇನೆ. ಈಗ ಅಧ್ಯಕ್ಷರು ಅವಸರವಾಗಿದ್ದಾರೆ. ತಿದ್ದುಪಡಿಗಳು ಬಂದಾಗ ಸ್ವಲ್ಪ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

Sri M. A. AMALORPAVAM

the City of Bangalore Improve

(SRI M. A. AMALORPAYAM)

All of us realise that unless the City Improvement Trust Board has adequate funds at its disposal, it will not be possible to meet the growing demands of the City. But I am afraid whether the loans that are proposed to be raised would be utilised properly for ameliorating the conditions of the people who are not rich. Some times I feel like being an Alice in Wonderland when I find our Officers are extraordinarily strict in adhering to rules and regulations when it is a question of doing something to a poor man and a man who has no influnce or position. But persons in affluent circumstance get things done in a jiffy as if thorugh the assistance of a magic wand. Those who are not in affluent circumstances will have to go to the Trust Board hundred times and work up to get an ordinary thing done. If he is a person without influence or position, even to get the possession certificate, he has to spend nothing less than Rs. 50 or Rs. 100 or even Rs. 200. Even irregular things are so quickly regularised if that person happens to be a wealthy person or a person who is a favourite of those who are occupying high positions. I really cannot understand how these officers who are scrupulously following rules and regulations when the requests are made by the common man and the poor, are able to see that even irregular things are regularised, when it is a rich and influential man.

We also cannot understand how the Government could be complacent when so many representations are made to them regarding the irregularities that are committed under the very nose of the officers. Contractors with the connivance of the officers are doing very bad work and are actually swallowing the funds of the public by very, very bad performance. Even if it is brought to the notice of the Government, Government has not bothered to take notice of it. On the other hand, they seem to think that we have no better business than keep complaining about these things. We say we are socialising the country and we want to practice democratic socialism. Unfortunately it is nothing but aristocratic socialism which we are practising. We are not at all insterested in wiping the tears of the poor man.

As my esteemed friend Mr. Nanjappa already pointed out, the City Improvement Trust Board is meant only for those who are rich and who can afford to buy lands and build houses. It has become a very thriving thing to swear by the common man and the poor man. We say we want to ameliorate the conditions of the poor but actually we are doing everything to make the rich man happier and more comfortable. We are actually throwing into the gutters the poor man for whom we are swearing from the houseteps. Therefore, it is quite all right to raise funds; let us raise
loans. But unless we try to see that the Harijans [illegible] ...ourers Improvement Trust
and the landless people are [illegible] ...ging this Amendment Bill L. I. C. and debentures. Let us see
Board [illegible]

whether we have tried to improve the lot of Harijans and the Scheduled Castes. Where do we allot sites for these poor people ? Palace Orchard and such other nice places are all reserved for men who are born with a silver spoon in their mouth and those who have acquired wealth in so many other ways. But we acquire land in the outskirts of Bangalore and we allot sites to Harijans and poor people there. Even after allotting sites to them, we never provide them with the basic amenities like water or light or roads. But if it is a rich locality like Jayanagar, you provide them in no time. I am not against rich men ; I am not averse to rich men living comfortably. But I am against those who talk much about the poor man and socialism in a patronising manner. Our Government is unfortunately not trying to translate into action what they are professing. Let us not talk about the poor man. But actually what is it that we are doing to improve his lot ? We are trying to raise the standard of the rich man who is already enjoying all the comforts of life. We are not at all earnestly making any effort for improving the poor man. It is advantageous to always speak of the poor man because it helps to get a good name in the public. When we are talking about the poor man, we are never sincere to make efforts to improve the lot of the common man. I would like to impress upon our Hon. Minister of State for Municipal Administration this point : let us try to make people believe that we are really socialistic. Unless we try to ameliorate the conditions of the teeming millions by providing house sites and other basic amenities like water, light, road etc; to the common man, there is no point in trying to bring a Bill seeking the approval of the House in order to a se loans. To whom are you going to utilise these borrowed loans ? The Government should utilise the loans for execution of schemes beneficial to the poor and the common man and set right the present state of affairs. Though we give our support to this Amending Bill, we are a little afraid whether the loans that are going to be raised will be utilised properly. The Ministers and the officers have a duty by this community. I hope that the Hon. Minister for Municipal Administration and the Government would certainly spend the money that is proposed to be raised through loans in order to see that the common man's interest is looked after and the most vital necessity like water is provided. Here is the rich man who has taps for his gardens, and all that. But for hundreds of huts not a single tap is provided. There is no meaning in the Administrator and the Minister giving the stock replies ; "We will look into the matter, we will think about it, we sympathise with them." We do not bother about their symathy. We want brass tacks. Let them provide taps to the common man and roads to the common man. Let them not talk about socialism and their solicitude for the poor man, ultimately ignoring the interests of the Harijans and the poor people.

With these few words, I earnestly appeal to the Government and the Hon. Minister to see that the funds raised are utilised properly in the interest of the people.

Sri M. S. KRISHNAN.—He spoke against everything in the Bill, How can we say he has supported the Bill ?

†ಶ್ರೀ ಬಿ. ಎಂ. ಪಾಟೀಲ್.—ಸನ್‌ಮಾನ್ಯ ಸಭಾಪತಿಗಳೇ, ಮಾನ್ಯ ಮಿತ್ರರನೇಕರು ಈ ತಿದ್ದುಪಡಿ ಮಸೂದೆಯ ಮೇಲೆ ಮಾತನಾಡುತ್ತಾ ಅನೇಕ ಸಲಹೆಗಳನ್ನು ಸೂಚನೆಗಳನ್ನು ಮಾಡಿದ್ದಾರೆ, ಅನೇಕ ವಾದಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಸನ್‌ಮಾನ್ಯಮಿತ್ರರಾದ ಶ್ರೀಮಾನ್ ನಾಗಪ್ಪನವರು ಈ ತಿದ್ದುಪಡಿಮಸೂದೆಯಲ್ಲಿ ಸರ್ಕಾರದ ಒಪ್ಪಿಗೆಯಾದ ಮೇಲೆ ಟ್ರಸ್ಟ್ ಬೋರ್ಡಿನವರು ಸಾಲ ಎತ್ತಬೇಕೆಂಬ ಅಂಶ ಏನಿದೆ ಅದು ಬದಲಾವಣೆಯಾಗಬೇಕು, ಲೆಜಿಸ್‌ಲೇಚರ್ ಮುಂದೆ ಬಂದು ಆಮೇಲೆ ಅದಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳಿದರು. ನಾನು ಈಗಾಗಲೇ ಹೇಳಿದ್ದೇನೆ. ಯಾವುದಾದರೂ ಒಂದು ಟ್ರಸ್ಟ್‌ಬೋರ್ಡ ಯಾವ ಉದ್ದೇಶಕ್ಕೆ ಮಾಡಿದ್ದೇವೆಯೋ ಅದು ನೆರವೇರಬೇಕಾದರೆ ಆ ಟ್ರಸ್ಟ್‌ಬೋರ್ಡಿಗೆ ಸಾಕಾದಷ್ಟು ಹಣ ಬೇಕಾಗುತ್ತದೆ. ಈಗ ಹಣದ ಅಭಾವ, ಸಂಪನ್ಮೂಲಗಳು ವಿರಳ. ಆದ್ದರಿಂದ ಸಾಕಾದಷ್ಟು ತೀವ್ರಗತಿಯಿಂದ ಟ್ರಸ್ಟ್‌ಬೋರ್ಡಿನವರು ಕೈಗೆ ತೆಗೆದುಕೊಂಡ ಯೋಜನೆಗಳನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ಹಣ ಒದಗಬೇಕಾದರೆ ಟ್ರಸ್ಟ್‌ಬೋರ್ಡಿನವರಿಗೇ ಅಧಿಕಾರ ಕೊಡುತ್ತಿಲ್ಲ, ಸರ್ಕಾರದ ಒಂದು ಅನುಮತಿಯನ್ನು ಪಡೆದು ಅವರು ಬೇರೆ ಬೇರೆ ಆರ್ಥಿಕ ಸಂಸ್ಥೆಗಳಿಂದ ಹಣ ಎತ್ತಬೇಕಾಗುತ್ತದೆ. ಮಾನ್ಯ ಮಿತ್ರರು ಮಾತನಾಡುತ್ತಾ ಟ್ರಸ್ಟ್‌ಬೋರ್ಡಿನಲ್ಲಿ ಏನು ನಿವೇಶನಗಳನ್ನು ಕೊಡುತ್ತಾ ಇದೆ ಅದು ಕೇವಲ ಸಿರಿವಂತರಿಗೆ ಸಿಕ್ಕುತ್ತದೆ, ಮಧ್ಯಮ ವರ್ಗದವರಿಗೆ, ಬಡವರಿಗೆ ಸಿಕ್ಕುತ್ತಿಲ್ಲ ಎಂದು ಹೇಳಿದರು. ನಿವೇಶನಗಳನ್ನು ಕೊಡುವಾಗ ಟ್ರಸ್ಟ್‌ಬೋರ್ಡು ಒಂದು ತರಹದ ನಿಯಮಗಳನ್ನು ಹಾಕಿಕೊಂಡಿದೆ, ಅದರಲ್ಲಿ ಕೇವಲ ಸಿರಿವಂತರಿಗೆ ಕೊಡಬೇಕು ಅಥವಾ ಬಡವರಿಗೆ ಕೊಡಬೇಕು, ಈ ಯಾವ ರೀತಿಯಿಂದ ತಾರತಮ್ಯ ಮಾಡಲಿಕ್ಕೆ ಆಗುವುದಿಲ್ಲ. ಯಾರ್‍ಯಾರು ಅರ್ಜಿ ಹಾಕಿಕೊಂಡಿದ್ದಾರೆ, ಯಾರಿಗೆ ಬೆಂಗಳೂರು ನಗರದಲ್ಲಿ ನಿವೇಶನ ಇಲ್ಲ ಅವರಿಗೆ ಕೊಡಬೇಕಾಗುತ್ತದೆ. ಮಾನ್ಯ ಮಿತ್ರರು ಇನ್ನು ಕೆಲವರು ಮಾತನಾಡುತ್ತಾ ಹರಿಜನರಿಗೆ ಸಾಕಷ್ಟು ನಿವೇಶನ ಸಿಕ್ಕುತ್ತಿಲ್ಲ ಎಂದು ಹೇಳಿದರು. ಈ ಟ್ರಸ್ಟ್‌ಬೋರ್ಡು ರೂಲ್ಸ್ ಪ್ರಕಾರ ಯಾವುದೇ ಒಂದು ಲೇ ಔಟ್ ಇದ್ದರೂ ಕೂಡ ಅದರಲ್ಲಿ 5 ಪರ್ಸೆಂಟ್ ಷೆಡ್ಯೂಲ್ಡ್ ಕ್ಯಾಸ್ಟ್ ಸಲುವಾಗಿ ಮೀಸಲಾಗಿಟ್ಟಿದ್ದೇವೆ. ಅದೂ ಅಲ್ಲದೇ ಅನೇಕ ಮಾನ್ಯ ಸದಸ್ಯರು ಸರ್ಕಾರದಲ್ಲಿ ಮನವಿ ಮಾಡಿಕೊಂಡ ಮೇಲೆ 5 ಪರ್ಸೆಂಟ್ ಇದ್ದುದನ್ನು ಹೆಚ್ಚು ಮಾಡಿ ಯಾವುದೇ ಬಡಾವಣೆ ಇರಲಿ 10 ಪರ್ಸೆಂಟ್ ಸ್ಕೈಟ್ ಷೆಡ್ಯೂಲ್ಡ್ ಕಾಸ್ಟ್‌ನವರಿಗೆ ಹರಿಜನರಿಗೆ ಕೊಡಬೇಕೆಂದು ಸರ್ಕಾರ ಈಗಾಗಲೇ ನಿರ್ಧಾರ ಮಾಡಿದೆ ಎಂದು ಹೇಳಲಿಚ್ಛಿಸುತ್ತೇನೆ.

ಮಾನ್ಯ ಸದಸ್ಯರು ಒಬ್ಬೊಬ್ಬರು ಮಾತನಾಡುತ್ತಾ ಲೇ ಔಟ್ಸ್ ಮಾಡುವ ಕಾಲಕ್ಕೆ ನೀರು ಕೊಡಬೇಕು, ರಸ್ತೆಗಳನ್ನು ಆಸ್‌ಫಾಲ್ಟ್ ಮಾಡಬೇಕು, ಎಲೆಕ್ಟ್ರಿಸಿಟಿ ಕೊಡಬೇಕು, ಅಂಡರ್‌ಗ್ರೌಂಡ್ ಡ್ರೈನೇಜ್ ಮಾಡಬೇಕು ಎಂದು ಹೇಳಿದರು. ಲೇ ಔಟ್ ಮಾಡುವಾಗ ಬೆಲೆ ನಿಗದಿ ಮಾಡುವುದು ಬಹಳ ಜಾಸ್ತಿ ಅಂತ ಹೇಳುತ್ತಾರೆ. ಅದೇ ಸಮಯಕ್ಕೆ ಈ ಎಲ್ಲಾ ಸೌಲಭ್ಯಗಳನ್ನೂ ಕೊಡಬೇಕೆಂದು ಹೇಳುತ್ತಾರೆ. ಈ ಎರಡೂ ಒಂದಕ್ಕೊಂದಕ್ಕೆ ವಿರೋಧವಾಗುತ್ತದೆ ಎಂದು ಹೇಳುತ್ತೇನೆ. ಎಲ್ಲಾ ಸೌಕರ್ಯಕೊಡಬೇಕೆಂದರೆ ನಿವೇಶನದ ಬೆಲೆ ಜಾಸ್ತಿಯಾಗುತ್ತದೆ. ಇನ್ನೊಂದು ಮಾತು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಏನೆಂದರೆ ಲಾಭ ಮಾಡಿಕೊಳ್ಳಲಿಕ್ಕೆ ಟ್ರಸ್ಟ್‌ಬೋರ್ಡು ಸಂಸ್ಥೆಯನ್ನು ಕಟ್ಟಿಲ್ಲ. ಸ್ಪೆಕ್ಯುಲೇಷನ್ ಮಾಡುತ್ತಾರೆ, ಭೂಮಿ ಬೆಲೆ ಜಾಸ್ತಿಯಾಗಬಾರದು, ಯೋಗ್ಯ ಬೆಲೆಗೆ ಸಿಕ್ಕಬೇಕೆಂಬ ಉದ್ದೇಶದಿಂದ ಅದನ್ನು ಮಾಡಿದೆ. ಟ್ರಸ್ಟ್‌ಬೋರ್ಡಿಗೆ ಹಾನಿಯೂ ಆಗಬಾರದು, ಲಾಭವೂ ಆಗಬಾರದು, ಈ ರೀತಿಯಿಂದ ಕಾರ್ಯ ಮಾಡುತ್ತಾ ಬಂದಿದ್ದೇವೆ. ಬೆಂಗಳೂರು ನಗರಕ್ಕೆ ಹೆಚ್ಚು ಹೆಚ್ಚಾಗಿ ಇಂತಹ ಬಡಾವಣೆಗಳು ತೀವ್ರ ಗತಿಯಿಂದ ಬರಬೇಕಾಗಿದೆ. ಬೆಂಗಳೂರು ನಗರ ಮೇಲಕ್ಕೆ ಹೋಗಬೇಕು ಏನು ಬಡಾವಣೆ ಮಾಡಬೇಕಾದರೂ ಮಲ್ಟಿ ಸ್ಟೋರೀಡ್ ಬಿಲ್ಡಿಂಗ್ಸ್ ಹಾಕಬೇಕು ಎಂದು ಹೇಳುತ್ತಾರೆ. ಇದು ಏನೇ ಮಾಡಬೇಕಾದರೂ ಸಹ ಹಣ ಇಲ್ಲದೆ ಟ್ರಸ್ಟ್ ಬೋರ್ಡು ಯಾವ ಕೆಲಸ ಮಾಡಲಿಕ್ಕೂ ಆಗುವುದಿಲ್ಲ. ಅದಕ್ಕೆ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಲೈಫ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್, ಷೆಡ್ಯೂಲ್ಡ್ ಬ್ಯಾಂಕುಗಳು ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳಿಂದ ಹಣ ತೆಗೆದುಕೊಳ್ಳಲಿಕ್ಕೆ ಒಂದು ಅವಕಾಶ ಒದಗಿಸಿದರೆ ಈ ಎಲ್ಲ ಕಾರ್ಯಕ್ರಮಗಳನ್ನು ತೀವ್ರಗತಿಯಿಂದ ಮಾಡಬಹುದು. ಇದೇ ರೀತಿ ಸಿಂಧಿ ಮಾರವಾಡಿಗಳ ಕಡೆಯಿಂದ ಏಕೆ ಹಣ ತೆಗೆದುಕೊಳ್ಳಬಾರದು ಎಂದು ಮಾನ್ಯ ಸದಸ್ಯರು ಕೇಳಿದರು. ಆ ರೀತಿ ಯಾವ ಸಿಂಧಿ ಮಾರವಾಡಿಯಿಂದ ಹಣ ತೆಗೆದುಕೊಂಡದ್ದು ನಿದರ್ಶನ ಇದೆಯೋ ಅದು ನನಗೆ ಗೊತ್ತಿಲ್ಲ. ಏನಾದರೂ ಒಂದು ವಾದ ಮಾಡಿದರೆ ಅದು ಅರ್ಥಪೂರ್ಣವಾಗಿರಬೇಕು,

ಅರ್ಥರಹಿತವಾದ ವಾದ ಒಪ್ಪಿಕೊಳ್ಳಲಿಕ್ಕೆ ಆಗುವುದಿಲ್ಲ. ಇನ್ನು ಅಲ್ಲಿ ಆಡಳಿತ ಬಿಗಿ ಮಾಡಬೇಕೆಂದು ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ, ಅದನ್ನು ಒಪ್ಪುತ್ತೇನೆ. ಯಾವುದೇ ಆದರೂ ಒಳ್ಳೆಯದು ಕೆಟ್ಟದ್ದು ಇದ್ದೇ ಇದೆ. ಅದೇ ಪ್ರಮಾಣದಲ್ಲಿ ಆಫಿಷಿಯಲ್ಸ್ ಆಗಲಿ, ನಾನ್ ಅಫಿಷಿಯಲ್ಸ್ ಆಗಲಿ ಎಲ್ಲರೂ ಒಳ್ಳೆಯವರು, ಎಲ್ಲರೂ ಕೆಟ್ಟವರು ಇರುವುದಿಲ್ಲ. ಆಡಳಿತ ಬಿಗಿಯಾಗಬೇಕು, ಸುಧಾರಣೆಯಾಗಬೇಕು ಎಂಬ ತತ್ವ ಒಪ್ಪಿಕೊಳ್ಳುತ್ತೇನೆ. ಇಷ್ಟು ಹೇಳಿ ಈ ಮಸೂದೆಗೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡುತ್ತಾರೆ ಎಂದು ಭಾವಿಸುತ್ತೇನೆ.

ಶ್ರೀ ಎ. ನಂಜಪ್ಪ.—ಅನ್ಯಾಯ ನಡೆಯುತ್ತಿಲ್ಲ ಎಂದು ಹೇಳಿದರು. ಅನ್ಯಾಯ ನಡೆಯುತ್ತಿರುವುದು ತೋರಿಸಿದರೆ ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಅಂತ ಹೇಳಲಿ. ಇಲ್ಲ ಅಂತ ಆದರೆ ನಾನು ರಾಜೀನಾಮೆ ಕೊಡುತ್ತೇನೆ, ಇಲ್ಲದೇ ಹೋದಗೆ ಅವರು ಕೊಡಲಿ.

ಶ್ರೀ ಬಿ. ಎಂ. ಪಾಟೀಲ್.—ರಾಜೀನಾಮೆ ಕೊಡುವ ಪ್ರಶ್ನೆ ಇಲ್ಲಿ ಇಲ್ಲ. ಮಾನ್ಯ ಸದಸ್ಯರು ಅನ್ಯಾಯ, ಅಕ್ರಮ ನಡೆದಿದೆ ಎಂದು ಹೇಳಿ ನಿರ್ದಿಷ್ಟವಾದ ಸಂದರ್ಭಗಳನ್ನು ಸರ್ಕಾರದವರ ಗಮನಕ್ಕೆ ತಂದರೆ ಸೂಕ್ತವಾದ ಕ್ರಮ ತೆಗೆದುಕೊಳ್ಳಲಿಕ್ಕೆ ನಾನು ಯಾವಾಗಲೂ ಸಿದ್ಧನಾಗಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾರವಾಡಿಯಿಂದ ಲೋನ್ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು, ನಿಜ. ಪ್ರೈವೇಟ್ ಕ್ರೆಡಿಟ್ ಕಾರ್ಪೊರೇಷನ್‌ನಿಂದ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೇ ? ಹಾಗೆ ತೆಗೆದುಕೊಳ್ಳುವುದಾದರೆ ಅದು ಸರಿಯೇ ? ನ್ಯಾಯವೇ ? ಅದರ ಬಗ್ಗೆ ಹೇಳುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಸಾಲ ಎತ್ತುವಾಗ ಯಾವಾಗಲೂ ಸಂಸ್ಥೆಯು ಸಾರ್ವಜನಿಕ ಹಿತವನ್ನು ಗಮನದಲ್ಲಿಟ್ಟುಕೊಂಡು ನಿರ್ಧರಮಾಡಲಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಇದುವರೆಗೂ ನಾವೇನಾದರೂ ಹೇಳಿದರೆ ಅದು ಸರಿಯಲ್ಲ ಎಂದು ಹೇಳುತ್ತಾ ಇದ್ದರು, ಯಾರೂ ಚಾಲೆಂಜ್ ಕೊಟ್ಟಿರಲಿಲ್ಲ. ಈಗ ಶ್ರೀಮಾನ್ ನಂಜಪ್ಪನವರು ಚಾಲೆಂಜ್ ಕೊಟ್ಟಿದ್ದಾರೆ ಆದನ್ನು ಒಪ್ಪಿಕೊಳ್ಳುವುದು ಒಳ್ಳೆಯದು.

ಶ್ರೀ ಬಿ. ಎಂ. ಪಾಟೀಲ್—ಈಗಾಗಲೇ ಹೇಳಿದ್ದೇನೆ, ಎಲ್ಲಾದರೂ ಅಕ್ರಮ ನಡೆದಿದೆ, ಅನ್ಯಾಯ ನಡೆದಿದೆ, ನಿಯಮಗಳನ್ನು ಬಿಟ್ಟು ಅನ್ಯಾಯವಾಗಿ ವರ್ತಿಸಿದ್ದಾರೆ ಅಂತ ಅನ್ನುವುದನ್ನು ಅವರು ಸರ್ಕಾರದ ಗಮನಕ್ಕೆ ತಂದರೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಸದಾ ಸಿದ್ಧವಾಗಿದೆ.

Mr. SPEAKER.—The question is :

"That this Assembly disapproves the Ordinance No. 5 of 1969 namely, The City of Bangalore Improvement (Amendment) Ordinance, 1969, promulgated on 14th day of October 1969 by the Governor."

The resolution was negatived.

Mr. SPEAKER.—The question is :

"That the City of Bangalore Improvement (Amendment) Bill, 1970, be taken into consideration."

The motion was adopted.

CLAUES 2.

Mr. SPEAKER.—We will take the Bill clause by clause,
The question is :

"That clause 2 do stand part of the Bill"
There is an amendment

Sri M. NAGAPPA.—I move :

" That at page 2 in sub-section (1) of the proposed section 29A, line 3, for the word 'Government' the word 'Legislature' shall be substituted. "

And

" That at page 2, the following proviso shall be added to sub-section (1) of the proposed section 29A ;

provided the Board shall not borrow any sum exceeding fifty crores in aggregate. "

Mr. SPEAKER.—Amendment moved :

" That at page 2 in sub-section (1) of the proposed section 29A, line 3, for the word 'Government' the word 'Legislature' shall be substituted. "

And

" That at page 2, the following proviso shall be added to sub-section (1) of proposed section 29A ;

Provided the Board shall not borrow any sum exceeding fifty crores in aggregeate. "

†ಶ್ರೀ ಎಂ. ನಾಗಪ್ಪ.— ಈಗ ಅನೇಕ ಮಾನ್ಯ ಸದಸ್ಯರು ಈ ಬೋರ್ಡಿಗೆ ಸಾಲ ತೆಗೆದುಕೊಳ್ಳುವ ಹಣದ ಉಪಯೋಗದ ಬಗ್ಗೆ ಸಾಕಷ್ಟು ಹೇಳಿದ್ದಾರೆ. ನಾನು ಅದರ ಬಗ್ಗೆ ಹೇಳದೆ ಈಗ ಏನು ಒಂದು ತಿದ್ದುಪಡಿ ತಂದಿದ್ದಾರೋ ಅದರಲ್ಲಿ 'ಗೌರ್ನಮೆಂಟ್' ಎನ್ನುವುದನ್ನು ತೆಗೆದು, 'ಲೆಜಿಸ್ಲೇಚರ್' ಎಂದು ಹಾಕಬೇಕು ಎಂದು ಹೇಳುತ್ತೇನೆ. ಇದರ ಅವಶ್ಯಕತೆ ಬಗ್ಗೆ ಮೊದಲೇ ಹೇಳಿದ್ದೇನೆ. ಆದರೆ ಈ ಪ್ರಾವಿಸೋ ಬಗ್ಗೆ ನಾನು ಒತ್ತಾಯ ಪೂರ್ವಕವಾಗಿ ಸರ್ಕಾರವನ್ನು ಕೇಳುವುದು ನೀವು ಇದಕ್ಕೆ ಅನ್‌ಲಿಮಿಟೆಡ್ ಪವರ್ ಹಾಕತಕ್ಕದ್ದು ಸರಿಯಲ್ಲ. ಇದರಿಂದ 200–300 ಕೋಟಿ ರೂಪಾಯಿ ಆದಾಯ ಇದ್ದರೆ 500 ಕೋಟಿ ರೂಪಾಯಿ ಸಾಲ ಮಾಡಬೇಕಾಗಿ ಬರಬಹುದು. ಅದಕ್ಕಾಗಿ ಇಂತಹ ಒಂದು ಅನ್ ಲಿಮಿಟೆಡ್ ಪವರ್ ಇಟ್ಟುಕೊಳ್ಳದೆ ತಾವು ಈಗ ಒಂದು ಪ್ರಾವಿಸೋ ತಂದಿದ್ದೀರಿ. ಎಷ್ಟು ಅಗತ್ಯತೆ ಇದೆಯೋ ಅಷ್ಟೇ ಮಾಡಬೇಕಾಗಿತ್ತು. ಅಂತಹ ಒಂದು ಪ್ರಾವಿಷೋ ತರಬೇಕಾಗಿತ್ತು. ಈಗ ತಂದಿರುವುದನ್ನು ಈ ಮಾನ್ಯ ಸಭೆ ಒಪ್ಪುತ್ತದೆಯೋ ಎಂದು ಗಮನಿಸಬೇಕು. ಏತಕ್ಕೆಂದರೆ ಇದರಲ್ಲಿ ಮುಖ್ಯವಾಗಿ ಸರ್ಕಾರ ಇದಕ್ಕೆ ಷೂರಿಟಿ ಕೊಡಬೇಕಾದ ಪ್ರಶ್ನೆಯನ್ನು ಗಮನಿಬೇಕು. ನಾವು ಮಾಡುವ ಸಾಲ, ಇವೆಲ್ಲಾ ವಿಷಯಗಳನ್ನು ಪರಿಗಣಿಸಬೇಕು. ಈ ದೃಷ್ಟಿಯಿಂದ ನೀವು ಅನ್ ಲಿಮಿಟೆಟ್ ಪವರ್ಸ್ ಕೊಟ್ಟಿರುವುದರಿಂದ ಬೋರ್ಡ್‌ನವರು ಬೇಕಾದಷ್ಟು ಸಾಲ ಮಾಡಬಹುದು. ಈ ಲಜಿಸ್ಲೇಚರ್‌ಗೆ ಇದ್ದಂಥ ಅಧಿಕಾರವನ್ನು ಸರ್ಕಾರದವರೇ ಇಟ್ಟುಕೊಳ್ಳುವುದು ಸರಿಯಲ್ಲ. ರೂಲು ಪ್ರಕಾರ ಏನು ಇದೆ ಎನ್ನುವುದನ್ನು ಕೃಷ್ಣನ್‌ರವರು ಹೇಳಿದರು. ಆರೀತಿ ಪ್ರೈವೇಟ್ ಬ್ಯಾಂಕುಗಳಲ್ಲೂ ಕೂಡ ಸಾಲ ಮಾಡುತ್ತಾರೆಯೋ ಎಂದು ನಾನು ಕೇಳುತ್ತೇನೆ.

ಸೆಕ್ಷನ್ 29 ಎ ಸಬ್‌ಕ್ಲಾಶ್ (2)ನ್ನು ನೋಡಿದರೆ ಅದರಲ್ಲಿ ಈರೀತಿ ಈದೆ. The rules made by the Government for the purpose of this section may empower the Board to borrow by the issue of debentures and make arrangements with bankers. ಈ ಬ್ಯಾಂಕಿನ ಡೆಫೆನೆಷನ್ ತೆಗೆದುಕೊಂಡರೆ ಇಂತಹ ಬ್ಯಾಂಕ್‌ನಲ್ಲಿ ವ್ಯವಹಾರ ಮಾಡಬೇಕು ಎಂದು ಸ್ಪಷ್ಟಪಡಿಸಿಲ್ಲ. ಈ ಸಭೆಗೆ ಇರುವ ಅಧಿಕಾರವನ್ನು ಸಂಪೂರ್ಣವಾಗಿ ಸರ್ಕಾರದವರೇ ವಹಿಸಿಕೊಂಡಿದ್ದಾರೆ. ಆದುದರಿಂದ ಈ ಅಧಿಕಾರವನ್ನು ಸಂಪೂರ್ಣವಾಗಿ ಈ ಸಭೆಗೆ ವಹಿಸಿಕೊಡಬೇಕು. ಆ ತರಹ ಮಾಡದೇ ಇದ್ದರೆ ಕಾನೂನಿಗೆ ವಿರೋಧವಾಗುತ್ತದೆ. ಆದುದರಿಂದ ಮಾನ್ಯ ಸಚಿವರು ಈಗ ಏನು ಒಂದು ಬಿಲ್ಲು ತಂದಿದ್ದಾರೊ ಅದು ಕನಿಷ್ಟಪಕ್ಷ 50 ಕೋಟಿಗಿಂತ ಹೆಚ್ಚಾಗಿರಬಾರದೆಂದು ಹೇಳಿ ಅದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

Sri T. R. SHAMANNA.—I beg to move the following amendment:

"That in clause 2, add a new section 29B:

"29B(1). While utilizing borrowed funds for the projects undertaken by the Board out of the borrowed funds, in the estimate to be prepared the quantum of interest payable to the loan borrowed in respect of that project should be added.

(2) The amount of the borrowed loan should be utilized for productive and development projects only.".

Mr. SPEAKER.—Amendment moved:

"That in clause 2, add a new section 29B:—

"29B(1). While utilizing borrowed funds for the projects undertaken by the Board out of the borrowed funds, in the estimate to be prepared the quantum of interest payable to the loan borrowed in respect of that project should be added.

(2) The amount of the borrowed loan should be utilized for productive and development projects only."

† ಶ್ರೀ ಟಿ. ಆರ್. ಶಾಮಣ್ಣ.—ಅಧ್ಯಕ್ಷರೇ, ಕ್ಲಾಸ್ 2 ರಲ್ಲಿ ಈ ರೀತಿ ಸೂಚಿಸಿದ್ದೀರಿ.

"The rules made by the Government for the purpose of this section may empower the Board to borrow by the issue of debentures and make arrangements with bankers."

ಈಗ ಮಾನ್ಯ ಕೃಷ್ಣನ್‌ರವರು ಮಾರ್ವಾಡಿಗಳ ಹತ್ತಿರ ಮತ್ತು ಕಾರ್ಪೋರೇಷನಿಂದ ಸಾಲ ತೆಗೆದುಕೊಳ್ಳಬಹುದು ಎನ್ನುವ ಸಲಹೆ ಕೊಟ್ಟರು. ಆದರೆ ಫೈನಾನ್ಸ್ ಕಾರ್ಪೋರೇಷನ್ನಿನವರು ಮಾರ್ವಾಡಿಗಳಂತೆ 13 ರಿಂದ 18 ಪರ್ಸೆಂಟಿಗಿಂತ ಕಡಿಮೆ ಬಡ್ಡಿಗೆ ಕೊಡುವುದಿಲ್ಲ. ಆರೀತಿ 18 ಪರ್ಸೆಂಟ್‌ನಂತೆ ಸಾಲ ತೆಗೆದುಕೊಂಡು ಮಾರ್ವಾಡಿ ಬಡ್ಡಿಯಂತೆ ಬಡ್ಡಿ ಕೊಟ್ಟರೆ ಯಾವ ಪ್ರಾಜೆಕ್ಟ್ ಕೂಡ ನಡೆಸುವುದಕ್ಕಾಗುವುದಿಲ್ಲ.

Sri K. PUTTASWAMY (Minister for Law, Labour and Parliamentary Affairs).—I want to tell the House how loans are permitted to be raised. Without the permission of the Reserve Bank we cannot permit any of our institutions to go to the open market for raising loan. The House knows very well that the Reserve Bank always takes care to see to the conditions which can be agreed to by an institution of the kind of Government. They have never permitted us to offer any interest higher than 6%. Therefore the hon. Member need not have any apprehensions about those things.

Sri C. K. RAJAIAH SHETTY.—But you have gone against the directions of the Reserve Bank many times.

ಶ್ರೀ ಕೆ. ಪುಟ್ಟಸ್ವಾಮಿ.—ಸಾಲ ತೆಗೆದುಕೊಳ್ಳಬೇಕಾದರೆ ರಿಸರ್ವ್ ಬ್ಯಾಂಕ್‌ನವರು ಇಷ್ಟೇ ಬಡ್ಡಿ ಕೊಡಬೇಕು ಎಂದು ಹೇಳುತ್ತಾರೆ.

[illegible]ಣ್ಣ.—ಎರಡನೆಯದಾಗಿ ಮಾನ್ಯ ಮಂತ್ರಿಗಳು ಸೈಟುಗಳು ಮಾಡತ [illegible]ಗೆ ಬೇರೆ ಇರುವುದಕ್ಕೆ ಅವಕಾಶವಿಲ್ಲದ ಹಾಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಆದರೆ ಟ್ರಸ್ಟ್ ಬೋರ್ಡ್‌ನವರೇ ಈ ಭೂಮಿ ಬೇರೆ ಇರುವುದಕ್ಕೆ ಮುಖ್ಯ ಕಾರಣರು ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಬೆಂಗಳೂರಿನ ಸುತ್ತಮುತ್ತಲೂ

(ಶ್ರೀ ಟಿ. ಆರ್. ಶಾಮಣ್ಣ)

ಇರತಕ್ಕಂಥ ಜಾಗವನ್ನು ಮೊದಲೇ ಟ್ರಸ್ಟ್ ಬೋರ್ಡ್ ಪ್ರೋಗ್ರಾಂ ಪ್ರಕಾರ ಬಲ್ಕ್ ಅಕ್ವಿಸಿಷನ್ ಮಾಡಿ ಯಾರಿಗೂ ಕೊಡುವುದಕ್ಕೆ ಅವಕಾಶ ಕೊಡದಿದ್ದರೆ ಸೈಟುಗಳ ಬೆಲೆ ಏರುತ್ತಾ ಇರಲಿಲ್ಲ. ಮೊದಲು ಈ ಮಧ್ಯಸ್ತಿಕೆಗಾರರು ಏನು ಮಾಡಿದರು ಎಂದರೆ ಬಹಳ ಹೊಲಗಳನ್ನು ತೆಗೆದುಕೊಂಡು 4 ಕಲ್ಲುಗಳನ್ನು ನೆಟ್ಟುಬಿಟ್ಟು ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಿದರು. ಹೀಗೆ ಮಾಡಿದ್ದರಿಂದ ಭೂಮಿ ಬೆಲೆ ಹೆಚ್ಚುವುದಕ್ಕೆ ಅವಕಾಶವಾಯಿತು.

ಮೊದಲೇ ಇವರು ಸರಿಯಾದ ಕ್ರಮ ತೆಗೆದುಕೊಂಡಿದ್ದರೆ ಇಂತಹ ಪರಿಸ್ಥಿತಿಗೆ ಒಳಗಾಗುತ್ತಿರಲಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಇದನ್ನು ಮೊದಲೇ ಹೇಳಲಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಮೊದಲು ತಾವು ಇದ್ದಿರಿ. ನಾನು ಇದ್ದಿರಲಿಲ್ಲ. ಆದುದರಿಂದ ಆರೀತಿ ಮಾಡಿದ್ದರೆ ಚೆನ್ನಾಗಿತ್ತು ಎಂದು ಹೇಳಿದೆ. ಈಗ ಸ್ವಲ್ಪಮಟ್ಟಿಗೆ ಸ್ಟರ್ನ್ ಅಗಿ ಕ್ರಮ ತೆಗೆದುಕೊಂಡ ಮೇಲೆ ರೆವಿನ್ಯೂ ಸೈಟುಗಳ ಬೆಲೆ ಕಡಿಮೆಯಾಗಿದೆ. ಮೊದಲೇನೇ ಇದನ್ನು ಸಮಗ್ರವಾಗಿ ಮಾಡಬೇಕಾಗಿತ್ತು.

ಇನ್ನು ವಾಟರ್ ಬೋರ್ಡ್ ಡೈವರ್ಷನ್ ವಿಷಯ ಹೇಳುತ್ತೇನೆ. ಅವರನ್ನು ಕೇಳಿದರೆ ಟ್ರಸ್ಟ್ ಬೋರ್ಡಿನವರು ತಮ್ಮ ಕೆಲಸಗಳನ್ನು ಪೂರೈಸಿಕೊಟ್ಟರೆ ನಾವು ಮಾಡಿಕೊಡುತ್ತೇವೆ ಎಂದು ಹೇಳುತ್ತಾರೆ. ಈಗ ಹೊಸದಾಗಿ ಟ್ರಸ್ಟ್ ಬೋರ್ಡಿನವರು ಸಾಲ ಮಾಡುತ್ತೇವೆ ಎಂದು ಹೇಳುತ್ತಾರೆ. ಆದುದರಿಂದ ನಾನು ಹೇಳುವುದು ಈಗ ಹೊಸದಾಗಿ ಮಾಡತಕ್ಕಂಥ ಸಾಲವನ್ನು ಈಗ ಇರತಕ್ಕಂಥ ಡೆವಲಪ್‌ಮೆಂಟ್ ವರ್ಕ್ಸ್‌ಗೆ ಉಪಯೋಗಿಸಬೇಡಿ. ಸದಾಶಿವನಗರ, ಶಾಂತಿನಗರ ಇನ್ನು ಇತರ ಕಡೆಗಳಲ್ಲಿ ಮತ್ತು ಹೌಸಿಂಗ್ ಬೋರ್ಡ್ ಲೇಔಟ್ಸ್ ಇರತಕ್ಕಂಥ ಕಡೆಗಳಲ್ಲಿ ಈ ನೆರವನ್ನು ಉಪಯೋಗಿಸಬೇಡಿ. ಏತಕ್ಕೆಂದರೆ ಹೊಸ ಲೇಔಟ್ಸ್ ಮಾಡುವುದಕ್ಕೆ ಕಷ್ಟವಾಗುತ್ತದೆ. ಈಗ ಸಾಲ ತೆಗೆದುಕೊಂಡ ದುಡ್ಡನ್ನು ಯಾವರೀತಿ ಖರ್ಚು ಮಾಡಬೇಕೆಂಬ ಬಗ್ಗೆ ಸಾಕಾದಷ್ಟು ಸಲಹೆ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಸಾಲ ಮಾಡತಕ್ಕಂತ ಹಣ ಯಾವ ಉದ್ದೇಶಕ್ಕಾಗಿ ತೆಗೆದುಕೊಳ್ಳುತ್ತಾರೋ ಅಂಥಾದ್ದಕ್ಕೇ ಉಪಯೋಗಿಸಬೇಕು. ಈ ದುಡ್ಡನ್ನು ಅಕ್ರಮವಾಗಿ ಖರ್ಚು ಮಾಡದೆ ಪ್ರಾಜೆಕ್ಟ್ ಮತ್ತು ಡೆವಲಪ್‌ಮೆಂಟ್ ಕೆಲಸಗಳಿಗೆ ಮಾತ್ರ ಉಪಯೋಗಿಸಿ ನಾನು ಏನು ಎರಡು ಅಮೆಂಡ್‌ಮೆಂಟ್‌ಗಳನ್ನು ತಂದಿದ್ದೇನೋ ಅದಕ್ಕೆ ಯಾವ ವಿಧವಾದಂಥ ವಿರೋಧ ಇಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಂ. ಪಾಟೀಲ್.—ಸನ್ಮಾನ್ಯ ಸಭಾಪತಿಗಳೇ, Mysore Ordinance No. 5 of 1969 ಪ್ರಕಾರ ಏನು ಒಂದು ಆರ್ಡಿನೆನ್ಸ್‌ನ್ನು ಸರ್ಕಾರದವರು ಹೊರಡಿಸಿದ್ದಾರೋ ಅದು ಈಗ ಸಭೆಯ ಮುಂದೆ ಒಪ್ಪಿಗೆ ಪಡೆಯುವುದಕ್ಕಾಗಿ ಬಂದಿದೆ. ಕೆಲವು ಸಂದರ್ಭದಲ್ಲಿ ಈ ಆರ್ಡಿನೆನ್ಸ್‌ನ್ನು ಪೂರ್ವಭಾವಿಯಾಗಿ ಮಾಡುವ ಸಂದರ್ಭ ಬರುತ್ತದೆ. ಆದುದರಿಂದ ಮಾನ್ಯ ಸದಸ್ಯರು ಹೇಳಿದಂಥ ವಾದವನ್ನು ನಾನು ಒಪ್ಪಿಕೊಳ್ಳಲು ಅಸಮರ್ಥನಾಗಿದ್ದೇನೆ.

ಇನ್ನು ಈ ಸಾಲ 50 ಕೋಟಿ ರೂಪಾಯಿಗಿಂತ ಹೆಚ್ಚು ಇರಬಾರದು ಎನ್ನುವ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ಈಗಾಗಲೇ ಶ್ರೀಮಾನ್ ಪುಟ್ಟಸ್ವಾಮಿಯವರು ಮಾತನಾಡಿದ್ದಾರೆ. ಸರ್ಕಾರ ಯಾವುದಾದರೂ ಒಂದು ಸಂಸ್ಥೆಯಿಂದ ಸಾಲವನ್ನು ಎತ್ತಬೇಕಾದರೆ, ಡಿಬೆಂಚರ್ ರೇಜ್ ಮಾಡಬೇಕಾದರೆ ರಿಸರ್ವ್ ಬ್ಯಾಂಕ್ ಅನುಮತಿ ಪಡೆಯಬೇಕು. ಅವರು 50 ಕೋಟಿ 100 ಕೋಟಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ ಅವರು ಒಪ್ಪಿಕೊಳ್ಳುವುದಿಲ್ಲ. ಅವರು ಯಾವ ಕೆಲಸಕ್ಕಾಗಿ ತೆಗೆದುಕೊಳ್ಳುತ್ತಾರೆ, ಏನು ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ತೆಗೆದುಕೊಳ್ಳುತ್ತಾರೆ, ಸಾಲ ತೀರಿಸಲು ಇವರ ಏರ್ಪಾಡುಗಳೇನು, ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ರಿಸರ್ವ್ ಬ್ಯಾಂಕ್‌ನವರು ಒಪ್ಪಿಗೆ ಕೊಡುತ್ತಾರೆ ಎಂದು ನಾನು ಹೇಳುತ್ತೇನೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದಷ್ಟು ಬದಲಾವಣೆ ಅವಶ್ಯ ಇದೆ ಎಂದು ನಾನು ಭಾವಿಸಿಲ್ಲ.

10-00 A.M.

ಇದೇ ರೀತಿ ಮಾನ್ಯ ಸದಸ್ಯರಾದ ಶ್ರೀಮಾನ್ ಟಿ. ಆರ್. ಶಾಮಣ್ಣನವರೂ ಒಂದೆರಡು ತಿದ್ದುಪಡಿಗಳನ್ನು ತಂದು ಕೆಲವು ಸೂಚನೆಗಳನ್ನು ಕೊಟ್ಟರು. ಹಣವನ್ನು ಸಾಲವಾಗಿ ತೆಗೆದು

ಕೊಳ್ಳುವಾಗ ಇದರ ಮೇಲೆ ಬಡ್ಡಿ ಕೂಡ ಬರುತ್ತದೆ. ಇದನ್ನು ಯಾರ ಮೇಲೆ ಹಾಕಬೇಕು ಮತ್ತು ಯಾವ ಬಾಬಿಗಾಗಿ ಸಾಲ ಎಂದು ತೆಗೆದುಕೊಳ್ಳುತ್ತೇವೋ ಅದೇ ಬಾಬಿಗೇ ಆ ಹಣ ಉಪಯೋಗ ಮಾಡಬೇಕು ಎಂದು ಹೇಳಿದರು. ಇದರ ಬಗ್ಗೆ ಟ್ರಸ್ಟ್ ಬೋರ್ಡಿನಲ್ಲಿರುವ ಆಕ್ಟನಲ್ಲೇ ಯಾವ ರೀತಿ ನಿರ್ಧಾರ ಮಾಡುತ್ತಾರೆ ಎಂದು ಇದೆ ಮತ್ತು ಅವರು ಹೇಳಿದ ಸೂಚನೆಗಳೆಲ್ಲಾ ಈಗಾಗಲೇ ಕಾರ್ಯಗತವಾಗುತ್ತಿದೆ ಎಂದು ಅವರ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಇದೇ ರೀತಿ ಸಾಲವಾಗಿ ವಸೂಲು ಮಾಡುವ ಹಣವನ್ನು ಪ್ರೊಡಕ್ಟೀವ್ ಅಂಡ್ ಡೆವಲಪ್‌ಮೆಂಟ್ ಪರ್ಪಸಸ್‌ಗಾಗಿಯೇ ಉಪಯೋಗ ಮಾಡಬೇಕೆಂದು ಒಂದು ಸೂಚನೆ ಕೊಟ್ಟರು. ಸಾಲ ಯಾವ ರೀತಿ ತೆಗೆದುಕೊಳ್ಳಬೇಕು ಮತ್ತು ಅದನ್ನು ಹೇಗೆ ಉಪಯೋಗ ಮಾಡಬೇಕು ಎನ್ನುವುದು ಈಗಿರುವ ಟ್ರಸ್ಟು ಬೋರ್ಡ್ ಆಕ್ಟನಲ್ಲೇ ಇದೆ. ಯಾವ ಉದ್ದೇಶಕ್ಕಾಗಿ ಸಾಲವನ್ನು ಬೋರ್ಡ್ ತೆಗೆದುಕೊಳ್ಳುತ್ತದೋ ಅದೇ ಉದ್ದೇಶಕ್ಕೇ ಅದನ್ನು ವೆಚ್ಚ ಮಾಡಬೇಕೆಂದು ಇದರಲ್ಲಿ ಸುಸ್ಪಷ್ಟವಾಗಿ ಇವೆ. ಈ ಉದ್ದೇಶಬಿಟ್ಟು ಬೇರೆ ಯಾವ ಉದ್ದೇಶಕ್ಕೂ ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಇಲ್ಲಿ ತಂದಿರುವ ತಿದ್ದುಪಡಿ ಅಷ್ಟು ಸಮರ್ಥನೀಯವಾಗಿಲ್ಲ ಮತ್ತು ಇದನ್ನು ಒಪ್ಪಿಕೊಳ್ಳುವುದಕ್ಕೂ ಅಗುವುದಿಲ್ಲ.

Mr. SPEAKER.—I put the amendments to Clause 2. The question is :

"That at page 2 in the sub-Section (1) of the proposed section 29A, line 3, for the word 'Government' the word 'Legislature' shall be substituted.

"That at page 2, the following proviso shall be added to sub-section (1) of the proposed Section 29A; 'provided the Board shall not borrow any sum exceeding Fifty crores in aggregate".

The amendments were negatived.

Mr. SPEAKER.—The question is :

That in clause 2, add a new section 29B.

"29B(1). While utilising the borrowed funds for the projects undertaken by the Board, out of the borrowed funds, in the estimate to be prepared the quantum of interest payable to the loan borrowed in respect of that project, should be added."

"(2) The amount of the borrowed loan should be utilised for productive and development projects only."

The amendments were negatived.

Mr. SPEAKER.—The question is :

"That clause 2 do stand part of the Bill."

The motion was adopted.

Clause 2 was added to the Bill.

CLAUSE 3.

Mr. SPEAKER.—There are no amendments to the clause 3 to 5. I will put them to vote of the House. The question is:

> "That clauses 3 to 5 both inclusive do stand part of the Bill."

The motion was adopted.

Clauses 3 to 5 both inclusive were added to the Bill.

CLAUSE 1, etc.

Mr. SPEAKER.—The question is:

> That Clause 1 the long Title and the Enacting formula do stand part of the Bill."

The motion was adopted.

Clause 1, the long Title and the Enacting Formula were added to the Bill.

Motion to pass

Sri B. M. PATIL.—I beg to move:

> "That the City of Bangalore Improvement (Amendment) Bill, 1970, be passed."

Mr. SPEAKER.—The Question is:

> "That the City of Bangalore Improvement (Amendment) Bill, 1970, be passed."

The motion was adopted.

MYSORE LAND REVENUE (AMENDMENT) BILL, 1970.

(i) Statutory Resolution to disapprove the Resolution of 1969

(ii) Motion to consider the Bill.

Sri M. NAGAPPA.—I beg to move:

> "That this Assembly disapproves the Ordinance No. 8 of 1969 namely 'The Mysore Land Revenue (Second Amendment) Ordinance, 1969', promulgated on 23rd day of October 1969 by the Governor of Mysore."

Mr. SPEAKER.—Resolution moved :

"That this Assembly dispproves the Ordinance No. 8 of 1969 namely 'The Mysore Land Revenue (Second Amendment) Ordinance, 1969' promulgated on 23rd day of October 1969 by the Governor of Mysore."

Sri H. V. KOUJALGI (Minister for Revenue).—I beg to move :

"That the Mysore Land Revenue (Amendment) Bill, 1970 be taken into consideration."

Mr. SPEAKER.—Motion moved :

"That the Mysore Land Revenue (Amendment) Bill, 1970 be taken into consideration."

†**Sri K. H. RANGANATH.**—I would like to know the total extent of land that has been unauthorisedly occupied by the landless persons. You may let us know whether any account as to the unauthorised occupation has been maintained by the Government ? There is time limit fixed for this. I am sure you must be having a record to show as to the extent of acreage that has been unauthorisedly occupied and the various types of lands available according to the classification. This information will enable us to understand the problem. Therefore please inform us the exact position.

Sri D. B. KALMANKAR.—I want to know how many people are landless and how many persons had encroached upon these lands. This also may be explained so that we may know what type of encroachment is there.

Sri H. V. KOUJALGI.—Before I answer the various questions that have been put by the Hon. Members, I may say that this amending Bill seeks to amend clauses 49, 50, 56, 69 and 94 of the Mysore Land Revenue Act. The Ordinance was issued during October 1969. The present Bill seeks to replace that Ordinance. An amendment in respect of Section 94 has also been included in this Bill.

As you all know the Government owns nearly 11 lakh acres of land out of which some are fit to be allotted for distribution for cultivation to the public. According to the present Act these lands were distributed according to the rules framed in 1968. The Government have no appellate powers and also the original powers. All these powers vest in the Tribunals which are the judicial authorities. From experience it has been found, that the Government cannot interefere in the land grants made by the Revenue Officers and it is also found that it cannot even call for the records and measure whether a particular grant has been properly made or whether the authority has misused the powers vested. It was also decided in many cases in the High Court that the Divisional Commissioner has no revisional or appellate authority. In order to see that these appeals are expeditiously disposed of and also to see that the litigation becomes less expensive these powers have been

(SRI H. V. KOUJALGI)

withdrawn by this amending Bill. So far as other powers under the Land Revenue Act are concerned, they still vest with the Tribunal. Clause 2 is a formal one. While distributing the land the question of determining the value of natural products like roads, roadside trees, etc., when unauthorisedly removed, will have to be made. Till now such valuations are made by the Deputy Commissioner only. This being a very small matter, it is found expedient that this power should be exercised by the Tahsildar. In future, according to the present amendment, the valuation of such trees, etc., will be made by the Tahsildar. This is just to ensure speedy disposal of the cases.

At present, appeals and revisions in land grant cases, lie with the Tribunal. Having regard to the nature of these cases, it is proposed now to confer these powers on the Revenue officers as per clauses 3 to 5.

